[illegible] ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಎನ್. ಅಮರೇಶ

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಭಾಷಾ ನಿಕಾಯ

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೧೯೯೮

73

ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಎನ್. ಅಮರೇಶ

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಭಾಷಾ ನಿಕಾಯ

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೨೧

೧೯೯೮

ಪ್ರಮಾಣ ಪತ್ರ

'ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ' ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು ಡಾ. ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾ ಪ್ರಬಂಧದ ವಿಷಯವನ್ನು ಅಥವ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ತಿಳಿಯಪಡಿಸುತ್ತೇನೆ.

(ಎನ್. ಅಮರೇಶ)
ಅಧ್ಯಾಪಕ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: ೦೭-೧೦-೯೮
ವಿದ್ಯಾರಣ್ಯ

ದೃಢೀಕರಣ ಪತ್ರ

ಶ್ರೀ ಎನ್. ಅಮರೇಶ ಅವರು **'ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ'** ಎಂಬ ತಲೆಬರೆಹವುಳ್ಳ ಈ ಸಂಶೋಧನ ಮಹಾ ಪ್ರಬಂಧವನ್ನು ನನ್ನ ಜತೆ ಸಮಾಲೋಚನೆ ನಡೆಸಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಅಥವ ಮಹಾಪ್ರಬಂಧದ ಯಾವುದೇ ಭಾಗವನ್ನು ಶ್ರೀಯುತರು ಈ ಮೊದಲು ಯಾವುದೇ ಪದವಿಗಾಗಿ ಅಥವ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ.

ದಿನಾಂಕ: 6.10.98
ವಿದ್ಯಾರಣ್ಯ

(ರಹಮತ್ ತರೀಕೆರೆ)

ಕೃತಜ್ಞತೆಗಳು

ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಚರಿತ್ರೆಯು ನನ್ನನ್ನು ಯಾವಾಗಲೂ ಕಾಡುತ್ತದೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ಅದು ಹೆಚ್ಚಾಯಿತು. ನನ್ನಲ್ಲಿದ್ದ ಆಸಕ್ತಿಯನ್ನು ಹೆಚ್ಚಿಸಿ ಅದಕ್ಕೊಂದು ರೂಪಕೊಡಲು ಡಾ. ರಹಮತ್ ತರೀಕೆರೆ ಸಾಕಷ್ಟು ಪ್ರಯತ್ನಿಸಿದ್ದಾರೆ. ಅದರ ಫಲವೇ ಈ ಅಧ್ಯಯನ. ಈ ಅಧ್ಯಯನಕ್ಕೆ ಅವರು ಪ್ರೀತಿಯಿಂದ ಮಾರ್ಗದರ್ಶನ ಮಾಡಿದ್ದಾರೆ.

೧೯೯೩-೯೪ನೆಯ ಸಾಲಿನಲ್ಲಿ ಪಿಎಚ್.ಡಿ. ಪದವಿಗಾಗಿ ಅಧ್ಯಯನ ಮಾಡಲು ಕನ್ನಡ ವಿಶ್ವವಿದ್ಯಾಲಯದಲ್ಲಿ ಹೆಸರು ನೋಂದಾಯಿಸಿದೆ. 'ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ' ಎಂಬ ವಿಷಯದ ಮೇಲೆ ಅಧ್ಯಯನ ಮಾಡಲು ಪ್ರಥಮ ಕುಲಪತಿ ಡಾ. ಚಂದ್ರಶೇಖರ ಕಂಬಾರ, ಕುಲಸಚಿವ ಡಾ. ಕೆ.ವಿ. ನಾರಾಯಣ ಹಾಗೂ ಅಧ್ಯಯನಾಂಗದ ನಿರ್ದೇಶಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಅವಕಾಶ ಮಾಡಿಕೊಟ್ಟಿದ್ದಾರೆ.

ಪಿಎಚ್.ಡಿ. ಅಧ್ಯಯನವನ್ನು ಮುಗಿಸಿ ಪದವಿಗಾಗಿ ಸಲ್ಲಿಸುತ್ತಿರುವ ಈ ಹೊತ್ತಿನಲ್ಲಿ ಕುಲಪತಿ ಡಾ. ಎಂ.ಎಂ. ಕಲಬುರ್ಗಿ, ಕುಲಸಚಿವ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಹಾಗೂ ಅಧ್ಯಯನಾಂಗದ ನಿರ್ದೇಶಕ ಶ್ರೀ ಬಾಲಸುಬ್ರಹ್ಮಣ್ಯ ಅವರು ಸಹಕಾರ ನೀಡಿದ್ದಾರೆ.

ಈ ಅಧ್ಯಯನಕ್ಕಾಗಿ ಶ್ರೀ ಅಲ್ಲಮಪ್ರಭು ಬೆಟ್ಟದೂರು, ಶ್ರೀ ಎಚ್.ಎಸ್. ಪಾಟೀಲ್, ನುಗಡೋಣಿ ಶರಣಬಸವ, ಶ್ರೀ ರಾಜಶೇಖರ ಹತಗುಂದಿ, ಶ್ರೀ ಚಿತ್ರಶೇಖರ ಕಂಠಿ, ಶ್ರೀ ಮುನಿಯಪ್ಪ ಹುಬ್ಬಳ್ಳಿ, ಶ್ರೀ ಗುರುಲಿಂಗಯ್ಯ ಹಿರೇಮಠ ಅವರು ತಮ್ಮಲ್ಲಿದ್ದ ಪುಸ್ತಕಗಳನ್ನು ನೀಡಿ ನೆರವಾಗಿದ್ದಾರೆ. ಗ್ರಂಥಾಲಯದಲ್ಲಿ ಶ್ರೀಮತಿ ಎಚ್. ನಾಗವೇಣಿ, ಶ್ರೀ ಎಸ್. ಸುಹಾಸ್, ಶ್ರೀ ಯು. ಮಲ್ಲಿಕಾರ್ಜುನ, ಶ್ರೀ ವೆಂಕಟೇಶ ಮೂರ್ತಿ, ಶ್ರೀ ಗುಡಿಮನಿ, ಶ್ರೀ ನಬಿ ಅವರು ಸಹಾಯ ಮಾಡಿದ್ದಾರೆ.

ಶ್ರೀ ರಾಜಶೇಖರ ರೆಡ್ಡಿ, ಶ್ರೀ ಸೋಮನಾಥ ರೆಡ್ಡಿ, ಶ್ರೀ ರಾಜಶೇಖರ ಹಳೆಮನೆ, ಶ್ರೀಮತಿ ಸವಿತಾ ಮುಂತಾದವರು ತಾಂತ್ರಿಕ ನೆರವು ನೀಡಿದ್ದಾರೆ.

ಈ ಎಲ್ಲ ಮಹನೀಯರಿಗೆ ನನ್ನ ಕೃತಜ್ಞತೆಗಳು.

ಅಮರೇಶ ನುಗಡೋಣಿ

ಪರಿವಿಡಿ

ಅಧ್ಯಾಯ ಒಂದು: ಅಧ್ಯಯನದ ಹಾದಿ

ಹೈದರಾಬಾದ್ ಕರ್ನಾಟಕದ ಒಡಲಲ್ಲಿ

ನಿರ್ದಿಷ್ಟ ಪ್ರಾಂತ್ಯದ ಅಧ್ಯಯನವೇ ಯಾಕೆ?

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು: ಅಧ್ಯಯನದ ಹಾದಿ

ಹೈದರಾಬಾದ್ ಕರ್ನಾಟಕದ ಒಡಲಲ್ಲಿ

ಔರಂಗಜೇಬನು ದಕ್ಷಿಣ ಭಾರತದಲ್ಲಿ ತನ್ನ ದಂಡಯಾತ್ರೆಯನ್ನು ಸಾಕು ಮಾಡಿಕೊಂಡು ಮರಳುವಾಗ, ತನ್ನ ಅಧೀನದಲ್ಲಿದ್ದ ದಕ್ಷಿಣದ ಅನೇಕ ಭಾಗಗಳನ್ನು ನೋಡಿಕೊಳ್ಳಲು ಸುಬೇದಾರರನ್ನು ನೇಮಿಸಿದ್ದ. ಈ ಸುಬೇದಾರರು ಕೆಲ ಸಮಯದ ನಂತರ ತಮ್ಮ ತಮ್ಮ ಅಧೀನದ ಭಾಗಗಳಲ್ಲಿ ಸ್ವತಂತ್ರರಾಗಲು ಪ್ರಯತ್ನಿಸಿದರು. ೧೭೨೪ರಲ್ಲಿ ಕಮರುದ್ದೀನ್ ಎಂಬ ಸುಬೇದಾರನು ಔರಂಗಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸ್ವತಂತ್ರ ಅರಸನಾದನು. ಇವನು ನಿಜಾಂ ವಂಶಕ್ಕೆ ಸೇರಿದವನಾಗಿದ್ದ. ಈ ನಿಜಾಂ ವಂಶಸ್ಥರ ಆಳ್ವಿಕೆಯಿಂದ ರೂಪಗೊಂಡ 'ಹೈದರಾಬಾದ್ ಸಂಸ್ಥಾನ'ದಲ್ಲಿ ಕರ್ನಾಟಕದ ಬೀದರ, ಕಲ್ಬುರ್ಗಿ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳೂ ಸೇರಿಕೊಂಡಿದ್ದವು. ಈ ಮೂರು ಜಿಲ್ಲೆಗಳ ಪ್ರದೇಶವನ್ನು 'ನೈಜಾಂ ಪ್ರಾಂತ್ಯ'ವೆಂದೂ ಕರೆಯಲಾಗುತ್ತದೆ. ಈ ಹೊತ್ತಿನಲ್ಲಿ ಯಾವುದನ್ನೂ 'ಹೈದರಾಬಾದ್ ಕರ್ನಾಟಕ' ಪ್ರಾಂತ್ಯವೆಂದು ಗುರುತಿಸಲಾಗುತ್ತಿದೆಯೋ ಅದು ರಾಜಕೀಯ ಕಾರಣಗಳಿಂದ ರೂಪಗೊಂಡದ್ದು.

ಹೀಗೆ ರೂಪಗೊಳ್ಳುವ ಪೂರ್ವದಲ್ಲಿಯೂ ಈ ಪ್ರಾಂತ್ಯವು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಲವು ವಿಶಿಷ್ಟ ಸಂದರ್ಭಗಳಿಗಾಗಿ ಬೇರೆ ಬೇರೆ ಕಾಲಾವಧಿಯಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡಿದೆ. ಚಕ್ರವರ್ತಿ ಅಶೋಕನ ಕಾಲದಲ್ಲಿ ಬೌದ್ಧಧರ್ಮದ ಪ್ರಸಾರ ಕೇಂದ್ರಗಳಾಗಿದ್ದ ಮಸ್ಕಿ, ಕೊಪ್ಪಳ ನಾಡುಗಳು ಈ ಪ್ರಾಂತ್ಯದಲ್ಲಿದ್ದು, ಇವು ಕ್ರಿಸ್ತಪೂರ್ವದಲ್ಲೇ ಬಹು ಪ್ರಾಮುಖ್ಯತೆಯನ್ನು ಪಡೆದಿದ್ದವು. ಕ್ರಿಸ್ತಶಕದ ನಂತರ ಪಶ್ಚಿಮ ಚಾಲುಕ್ಯರ ಕೈಗೆ ಈ ಪ್ರಾಂತ್ಯ ಬಂದ ಮೇಲೆ ಕನ್ನಡಿಗರಿಗೆ ತಮ್ಮ ಸಂಸ್ಕೃತಿಯ ಸ್ವರೂಪವನ್ನು ರೂಪಿಸಿಕೊಳ್ಳಲು ಅನುಕೂಲವಾಯಿತು. ಮುಂದೆ ರಾಷ್ಟ್ರಕೂಟರ ಆಳ್ವಿಕೆ ಪ್ರಾರಂಭವಾಗುವ ಹೊತ್ತಿಗೆ ಈ ಪ್ರಾಂತ್ಯವು ಸಾಂಸ್ಕೃತಿಕವಾಗಿ ಮಹತ್ವವನ್ನು ಗಳಿಸಿತ್ತು. ಈ ಕಾಲದಲ್ಲಿ ಸೃಷ್ಟಿಯಾದ 'ಕವಿರಾಜ ಮಾರ್ಗ' ಕೃತಿಯಿಂದ ಕನ್ನಡ ನಾಡಿನ ಗಡಿಗೆರೆಗಳು, ಕನ್ನಡಿಗರ ಪ್ರತಿಭೆ ಮತ್ತು ಅಂದಿನ ನಾಡು-ನುಡಿ-ಸಂಸ್ಕೃತಿಯ ಸತ್ವವನ್ನು ಅರಿತುಕೊಳ್ಳಲು ಸಹಾಯಕವಾಗಿದೆ. ಈ ಪ್ರಾಂತ್ಯದ ಮಾನ್ಯಖೇಟ ನಗರವು ರಾಜಕೀಯ, ವಾಣಿಜ್ಯ ಚಟುವಟಿಕೆಗಳೂ ಸೇರಿದಂತೆ ಸಾಹಿತ್ಯ-ಕಲೆಗೆ ನೆಲೆಯಾಗಿ, ಅಂದಿನ ಕಾಲದಲ್ಲಿ ಬಹು ಪ್ರಸಿದ್ಧಿಯನ್ನು ಪಡೆದ ಹೆಮ್ಮೆಯ ಕೇಂದ್ರವಾಗಿ ಪರಿಣಮಿಸಿದ್ದುದು ಚರಿತ್ರೆಯಲ್ಲಿದೆ. ಕಲ್ಹಣ, ಬಿಲ್ಹಣ ಕವಿಗಳೂ ಸೇರಿದಂತೆ ಪಂಪ, ಪೊನ್ನ, ರನ್ನ, ನಯಸೇನ, ಹರಿಹರ, ಕುಮಾರವ್ಯಾಸ ಮುಂತಾದ ಪ್ರಸಿದ್ಧ ಕವಿಗಳಿಗೆ ಈ ಪ್ರಾಂತ್ಯವೇ ನೆಲೆಯಾಗಿದೆ. 'ಕವಿರಾಜ ಮಾರ್ಗ'ಕಾರ ಹೇಳುವ 'ತಿರುಳ್ಗನ್ನಡ'ದ ನಾಡಿನವರಾಗಿದ್ದಾರೆ. ಈಗಿನ ಪಟ್ಟದಕಲ್ಲು (ಕಿಸುವೊಳಲು), ಕೊಪ್ಪಳ (ಕೊಪಣನಗರ), ಪುಲಿಗೆರೆ (ಲಕ್ಷ್ಮೇಶ್ವರ) ಮತ್ತು ಒಕುಂದ (ಒಕ್ಕುಂದ) ನಾಡುಗಳು 'ತಿರುಳ್ಗನ್ನಡ' ಸೀಮೆಯಾಗಿ ಪ್ರಾಚೀನ ಕಾಲದಿಂದಲೇ ಹಿರಿಮೆಗೆ ಕಾರಣವಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ವಚನಕಾರರ ಸಾಂಸ್ಕೃತಿಕ ಆಂದೋಲನಕ್ಕೆ ನೆಲೆಯಾದ ಕಲ್ಯಾಣ ನಗರ ಈ ಪ್ರಾಂತ್ಯದಲ್ಲಿದೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಾರಯ್ಯ, ನುಲಿಯ ಚಂದಯ್ಯ, ಘಟ್ಟಿವಾಳಯ್ಯ ಮುಂತಾದ ಅನೇಕ ಮಹತ್ವದ ವಚನಕಾರರು ರೂಪಗೊಂಡದ್ದು ಇಲ್ಲಿಯೇ. ವಚನಕಾರರ ಬೌದ್ಧಿಕ, ತಾತ್ವಿಕ, ವೈಚಾರಿಕ ಸಂಘರ್ಷಗಳಿಗೆ, ಅನೇಕ ಪ್ರಯೋಗಗಳಿಗೆ ಕಲ್ಯಾಣ ನಗರವೇ ನೆಲೆಯಾಗಿತ್ತು. ಈ ಹೊತ್ತಿನಲ್ಲೂ ಪ್ರಜ್ಞಾವಂತರನ್ನು ಬೆರಗುಗೊಳಿಸಿ ಕಾಡುವಂಥ ಸಾಂಸ್ಕೃತಿಕ ಚಳುವಳಿ ನಡೆದದ್ದು ಈ ಪ್ರಾಂತ್ಯದಲ್ಲಿಯೇ.

ಹನ್ನೆರಡನೆಯ ಶತಮಾನದ ನಂತರ ಈ ಪ್ರಾಂತ್ಯವು ಉತ್ತರ ಭಾರತದ ಅರಸರ ದಾಳಿಗೆ ಸಿಕ್ಕು, ಕೊನೆಗೆ ಅವರ ವಶವಾಗಿ ಬಹಮನಿ ರಾಜ್ಯ ಹುಟ್ಟಿಕೊಳ್ಳುವುದಕ್ಕೆ ನೆಲೆಯಾಯಿತು. ಮುಂದೆ ಆದಿಲ್‌ಶಾಹಿಗಳು ಆಳ್ವಿಕೆಗೆ ಬಂದರು. ಕನ್ನಡಿಗರ ಈ ಪ್ರಾಂತ್ಯವು ಉತ್ತರದ ಅರಸರ ಅಧೀನದಲ್ಲಿ ಶತಮಾನಗಳ ಕಾಲ ಉಳಿಯಿತು. ವಿಜಯನಗರ ಸಾಮ್ರಾಜ್ಯ ಉದಯವಾದರೂ ಈ ಪ್ರಾಂತ್ಯ ಮಾತ್ರ ಉತ್ತರದ ಅರಸರ ವಶದಲ್ಲೇ ಉಳಿದಿತ್ತು. ಬಹಮನಿ-ಆದಿಲ್‌ಶಾಹಿ ಮತ್ತು ವಿಜಯನಗರ ಅರಸರ ನಡುವಿನ ಸಂಘರ್ಷಕ್ಕೆ, ಯುದ್ಧಗಳಿಗೆ ಈ ಪ್ರಾಂತ್ಯವೇ ಯುದ್ಧ ಭೂಮಿಯಾಗಿ ಪರಿಣಮಿಸಿತ್ತು. ಈ ಎರಡು ಸಾಮ್ರಾಜ್ಯಗಳ ನಡುವೆ ನೂರಾರು ಯುದ್ಧಗಳು ನಡೆದದ್ದರಿಂದ ಇಲ್ಲಿಯ ಜನ ಸಮುದಾಯಗಳು ತಲ್ಲಣಿಸಿದವು. ಇಂಥ ಸಂಘರ್ಷಗಳ ಮಧ್ಯವೇ ನೂರಾರು ಜನ ಸೂಫಿಗಳು, ದಾಸರು, ಅನುಭಾವಿಗಳು ಹುಟ್ಟಿ ಬಂದದ್ದು ಈ ಪ್ರಾಂತ್ಯದಿಂದಲೇ.

ಪುನಃ ಉತ್ತರದ ಔರಂಗಜೇಬನ ದಾಳಿಗೆ ಈ ಪ್ರಾಂತ್ಯದ ಸುಲ್ತಾನರು ಕಣ್ಮರೆಯಾದರೂ ಈ ಪ್ರಾಂತ್ಯವು ಪುನಃ ಕನ್ನಡ ಅರಸರಿಗೆ ನೆಲೆಯಾಗಲು ಸಾಧ್ಯವಾಗಲಿಲ್ಲ. ಮರಾಠರು, ಮೊಗಲರು, ಬ್ರಿಟಿಷರು ಇಲ್ಲಿ ಪ್ರಭುತ್ವ ಸ್ಥಾಪಿಸಲು ನಿರಂತರ ಹೋರಾಟ ನಡೆಸಿದರು. ಈ ಪ್ರಾಂತ್ಯದ ಒಳಗೇ ಇರುವ ಕೆಲವು ಮಹತ್ವದ ಪ್ರದೇಶಗಳಿಗಾಗಿ ಕದನಗಳು ನಡೆದವು. ಕೃಷ್ಣ ಮತ್ತು ತುಂಗಭದ್ರ ನದಿಗಳ ನಡುವಿನ ಪ್ರದೇಶವು ಫಲವತ್ತಾದ ನಾಡಾಗಿತ್ತು. ಅದು 'ಎಡದೊರೆ ನಾಡು' (ದೋ ಅಬ್) ಎಂದೇ ಪ್ರಸಿದ್ಧವಾಗಿತ್ತು. ಹತ್ತಿ, ಜೋಳ, ಎಣ್ಣೆಕಾಳು ಮುಂತಾದ ಬೆಳೆಗಳಿಂದ ವಾಣಿಜ್ಯ ನಾಡಾಗಿ ಪ್ರತಿಷ್ಠೆಯನ್ನು ಗಳಿಸಿತ್ತು. ಆರ್ಥಿಕವಾಗಿ ಬಹಳ ಮಹತ್ವ ಹೊಂದಿದ್ದರಿಂದ ಈ ನಾಡಿಗಾಗಿ ಆಳರಸರ ನಡುವೆ ಪೈಪೋಟಿ ನಡೆದು ನಿರಂತರ ಸಂಘರ್ಷಕ್ಕೆ ಗುರಿಯಾಗಿತ್ತು. ಇದರಂತೆ ಕೃಷ್ಣ ಮತ್ತು ಭೀಮಾ ನದಿಗಳ ನಡುವಿನ ಪ್ರದೇಶವು 'ಸಗರ ನಾಡು' ಎಂದೇ ಪ್ರಸಿದ್ಧವಾಗಿತ್ತು. ಈ ನಾಡಿನ ಜನರು ಶೂರರು, ಸಾಹಸಿಗಳು ಆಗಿದ್ದರು. ಸಾಂಸ್ಕೃತಿಕವಾಗಿಯೂ ಮುಖ್ಯವಾಗಿದ್ದರಿಂದ ಈ ನಾಡಿನ ಮೇಲೆಯೂ ಆಳರಸರ ಕಣ್ಣುಗಳಿದ್ದವು. ಇದರಿಂದಾಗಿ ಈ ನಾಡುಗಳ ಜನ ಸಮುದಾಯಗಳು ಅನೇಕ ಸಂಕಷ್ಟಗಳಿಗೆ ಗುರಿಯಾಗಬೇಕಾಯಿತು.

ಹದಿನೆಂಟನೆಯ ಶತಮಾನದಿಂದ ನಿಜಾಮರ ಆಳ್ವಿಕೆಗೆ ಈ ಪ್ರಾಂತ್ಯ ಒಳಪಟ್ಟಿತು. ೧೯೪೭, ಆಗಸ್ಟ್ ೧೫ರಂದು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದರೂ ಈ ಪ್ರಾಂತ್ಯವು ನಿಜಾಂ ಆಳ್ವಿಕೆಯಿಂದ ಮುಕ್ತವಾಗಲಿಲ್ಲ. ನಿಜಾಮನು 'ಹೈದರಾಬಾದ್ ಸಂಸ್ಥಾನ'ವನ್ನು ಸ್ವತಂತ್ರ ರಾಜ್ಯವನ್ನಾಗಿ ಮಾಡಿಕೊಂಡು ಆಳಲು ನಿರ್ಧರಿಸಿದ್ದರಿಂದ, ಸ್ವತಂತ್ರ ಭಾರತದಲ್ಲಿ ಈ ಪ್ರಾಂತ್ಯ ಸೇರಿಕೊಳ್ಳಲು ಸಾಧ್ಯವಾಗಲಿಲ್ಲ. ನಿಜಾಮನ ನಿರ್ಧಾರವನ್ನು ಬೆಂಬಲಿಸಿದ ಮತೀಯ ಮನಸ್ಸಿನ 'ರಜಾಕಾರರು' ಈ ಪ್ರಾಂತ್ಯದಲ್ಲಿ ಸ್ವೇಚ್ಛಾಚಾರದಿಂದ ವರ್ತಿಸಿದರು. ನಿಜಾಮನ ಬೆಂಬಲವೂ ಇವರಿಗೆ ಸಿಕ್ಕಿತು. ಈ ರಜಾಕಾರರ ದೌರ್ಜನ್ಯದಿಂದ ಈ ಪ್ರಾಂತ್ಯವು ತತ್ತರಿಸಿತು. ಅತ್ಯಾಚಾರ, ದರೋಡೆ, ನೋವು-ಸಾವುಗಳು ದಿನನಿತ್ಯ ಸಹಜವೆಂಬಂತೆ ನಡೆದವು. ಇದರಿಂದ ಬೇಸತ್ತ ಜನರು ನಿಜಾಂ ರಾಜ್ಯವನ್ನು ತೊರೆದು ಹೋಗಬೇಕಾಯಿತು. ಈ ಕರಾಳ ಸ್ಥಿತಿಯಿಂದ ಈ ಪ್ರಾಂತ್ಯದಲ್ಲಿ ಬದುಕಿದ್ದ ಎಲ್ಲ ಕೋಮಿನ ಜನ ಸಮುದಾಯಗಳು ತಲ್ಲಣಿಸಿ ದೌರ್ಜನ್ಯವನ್ನು ಅನುಭವಿಸಿದವು. ಕೊನೆಗೆ ಸ್ವತಂತ್ರ ಭಾರತದ 'ಪೊಲೀಸ್ ಕಾರ್ಯಾಚರಣೆ'ಯಿಂದ ಈ ಪ್ರಾಂತ್ಯವು ಯಥಾಸ್ಥಿತಿಗೆ ಬರುವಂತಾಯಿತು. ೧೯೪೮, ಸೆಪ್ಟೆಂಬರ್ ೧೭ಕ್ಕೆ ಈ ಪ್ರಾಂತ್ಯಕ್ಕೆ ಸ್ವಾತಂತ್ರ್ಯ ದೊರೆಯುವಂತಾಯಿತು. ಈ ಪ್ರಾಂತ್ಯದಲ್ಲಿ ನಡೆದ ಎರಡು ದುರಂತಗಳಲ್ಲಿ 'ರಜಾಕಾರರ ದಾಳಿ'ಯಿಂದ ನಡೆದದ್ದು ಒಂದು. ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ನಡೆಸಿದ ವೈಚಾರಿಕ ಪ್ರಯೋಗವೆಂದೆ ಕಾಣುವ 'ಅಂತರ ಜಾತಿ ವಿವಾಹ'ದಿಂದ ಭುಗಿಲೆದ್ದು ನಡೆದ ರಕ್ತಪಾತ, ಎರಡನೆಯದು.

ಹನ್ನೆರಡನೆಯ ಶತಮಾನದ ನಂತರ ಕನ್ನಡದ ಈ ಪ್ರಾಂತ್ಯವು ಉತ್ತರದ ಅರಸರ ಅಧೀನಕ್ಕೆ ಸೇರಿಹೋಯಿತು. ೧೯೪೮ರ ವರೆಗೆ ಅಂದರೆ ಆರುನೂರು ವರ್ಷಗಳಿಗೂ ಮೇಲ್ಪಟ್ಟು, ಈ ಪ್ರಾಂತ್ಯವು ಬಹಮನಿ/ಆದಿಲ್‌ಶಾಹಿ ಭಿನ್ನ ಸಂಸ್ಕೃತಿಯ ಅರಸರ

ಕೈಯಲ್ಲಿತ್ತು. ಇದರಿಂದ ಈ ಪ್ರಾಂತ್ಯವು ತನ್ನ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ರಾಜ್ಯ ಭಾಷೆಯಾಗಿ ಫಾರಸಿ, ಉರ್ದು ಮುನ್ನೆಲೆಗೆ ಬಂದವು. ಮರಾಠಿ ವ್ಯವಹಾರದಲ್ಲಿ ತುಂಬಿಕೊಂಡಿತು. ಕನ್ನಡ ಭಾಷೆ ಆಡಳಿತದಿಂದಲೂ, ವ್ಯವಹಾರದಿಂದಲೂ ಹಿನ್ನೆಲೆಗೆ ಸರಿಯಿತು. ಜನ ಸಾಮಾನ್ಯರಲ್ಲಿ ಕೇವಲ ಆಡು ಭಾಷೆಯಾಗಿ ಉಳಿಯಿತು. ಇದರಿಂದ ಕನ್ನಡ ಲಿಪಿಯ ಬಳಿಕೆ ದಿನದಿಂದ ದಿನಕ್ಕೆ ಕಮ್ಮಿಯಾಗಿ ಜನರಿಂದ ಕಣ್ಮರೆಯಾಗುವ ಸ್ಥಿತಿ ತಲುಪಿತು. ಮರಾಠಿ ಮೂಲದ ಮೋಡಿ ಲಿಪಿ ಬಳಕೆಗೆ ಬಂದು ಜನಪ್ರಿಯವಾಯಿತು. ಕನ್ನಡ ಭಾಷೆ ಮೋಡಿ ಲಿಪಿಯಲ್ಲಿ ಅಡಗಿತು. ದಖನಿ ಭಾಷೆಯೂ ಈ ಪ್ರಾಂತ್ಯದಲ್ಲಿ ರೂಪಗೊಂಡಿತು. ಕೊಡೇಕಲ್ ಬಸವಣ್ಣನ ಕಾಲದಲ್ಲಿ ಅಮರಗನ್ನಡ ಲಿಪಿಗಳು ಬಳಕೆಗೆ ಬಂದವು. ಕನ್ನಡ ಲಿಪಿಗೆ ಬದಲು ಈ ಪ್ರಾಂತ್ಯದಲ್ಲಿ ಅನೇಕ ಲಿಪಿಗಳು ಸೃಷ್ಟಿಯಾದವು. ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಬಿಟ್ಟರೆ ಬಹುಭಾಷೆಗಳ ಪ್ರಾಂತ್ಯವೊಂದಿದ್ದರೆ ಅದು 'ಹೈದರಾಬಾದ್ ಕರ್ನಾಟಕ'ವೆಂದೇ ಹೇಳಬೇಕಾಗುತ್ತದೆ. ಫಾರಸಿ, ಉರ್ದು, ಮರಾಠಿ, ಕನ್ನಡ, ತೆಲುಗು ಭಾಷೆಗಳು ಚಲನೆಯಲ್ಲಿದ್ದವು. ಬಹಮನಿ/ಆದಿಲ್‌ಶಾಹಿ ಅರಸರ ಆಳ್ವಿಕೆಯಿಂದ ಈ ಪ್ರಾಂತ್ಯದ ಜನ ಸಮುದಾಯಗಳು ಭಿನ್ನ ಭಾಷೆ-ಸಂಸ್ಕೃತಿಯ ಪ್ರಭಾವಕ್ಕೆ ಅನಿವಾರ್ಯವಾಗಿ ನಂತರ ಸಹಜವಾಗಿ ಪ್ರಭಾವಕ್ಕೆ ಒಳಗಾದವು. ಇದರಿಂದ ಈ ಪ್ರಾಂತ್ಯದ 'ಹಿಂದೂ' 'ಮುಸ್ಲಿಮ್' ಸಮುದಾಯಗಳ ಒಡಲೊಳಗೆ ವಿಚಿತ್ರವಾದ ಸಾಂಸ್ಕೃತಿಕ ರೂಪಾಂತರ ಏರ್ಪಟ್ಟಿತು. ಎರಡು ಭಿನ್ನ ಸಂಸ್ಕೃತಿಗಳು ಕೂಡಿಕೊಂಡವು. 'ಹಿಂದೂ' ಸಮುದಾಯಗಳಿಗೆ ಸೂಫಿ ಸಂತರು 'ದೈವ'ವಾಗಿ ಪರಣಮಿಸಿದರು. ಮುಸ್ಲಿಂ ಸಮುದಾಯಗಳಿಗೆ 'ಹಿಂದೂ' ಮೂಲದ 'ದೈವಗಳು' ಪೂಜ್ಯವಾದವು. ಈ ಬಗೆಯ ಕೂಡಿವಿಕೆ ಈ ಪ್ರಾಂತ್ಯದಲ್ಲಿ ಪವಾಡವೆಂಬಂತೆ ಏರ್ಪಟ್ಟಿದೆ. ಈ ಪ್ರಾಂತ್ಯದಲ್ಲಿ ನಡೆದ ಎರಡು 'ಕ್ರಾಂತಿ'ಗಳಲ್ಲಿ ಈ ಪ್ರಕ್ರಿಯೆಯೂ ಒಂದು. ಇನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಶರಣರು ಮಾಡಿ ಸಾಂಸ್ಕೃತಿಕ ಆಂದೋಲನ.

ಭಿನ್ನ ಭಾಷೆ-ಸಂಸ್ಕೃತಿಯ ಅರಸರು ಈ ಪ್ರಾಂತ್ಯವನ್ನು ಆರು ಶತಮಾನಗಳಿಗೂ ಹೆಚ್ಚು ಕಾಲ ನಿರಂತರವಾಗಿ ಆಳಿದ್ದರಿಂದ ಈ ಪ್ರಾಂತ್ಯದಲ್ಲಿ ಕನ್ನಡ ಭಾಷೆ ಹಿನ್ನೆಲೆಗೆ ಸರಿಯಷ್ಟೇ. ಅದರ ಪರಿಣಾಮವಾಗಿ ಮಧ್ಯಕಾಲದ ನಂತರ ಲಿಖಿತ ಸಾಹಿತ್ಯ ಪರಂಪರೆ ಸೊರಗ ತೊಡಗಿತು. ಒಡೆದು ಕಾಣುವಂತೆ ಲಿಖಿತ ಸಾಹಿತ್ಯ ಸೃಷ್ಟಿಯಾಗಲಿಲ್ಲ. ಬದಲಾಗಿ ಜನ ಸಾಮಾನ್ಯರಲ್ಲಿ ಉಳಿದಿದ್ದ ಕನ್ನಡ ಭಾಷೆಯಿಂದಲೇ ಮೌಖಿಕ ಸಾಹಿತ್ಯ ಹೆಚ್ಚು ಸೃಷ್ಟಿಯಾಗ ತೊಡಗಿತು. ತತ್ವಪದಕಾರರು ಮೌಖಿಕ ಪರಂಪರೆಗೆ ಸೇರಿದವರಾಗಿದ್ದಾರೆ. ಅಸಂಖ್ಯಾತ ತತ್ವಪದಗಳು, ಮೊಹರಂ ಪದಗಳು, ಬುಲಾಯಿ ಹಾಡುಗಳು, ಸವಾಲ್ ಜವಾಬ್ ಹಾಡುಗಳು ಈ ಪ್ರಾಂತ್ಯದ ಜನ ಸಮುದಾಯಗಳ ನಾಲಿಗೆ ಮೇಲಿವೆ. ಬಹುಜನ ತತ್ವಪದಕಾರರು ಈ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಪ್ರಾಂತ್ಯಕ್ಕೆ ಸ್ವಾತಂತ್ರ್ಯ ಬರುವ ತನಕ ಕನ್ನಡ ಭಾಷೆ ಮಠ-ಮಾನ್ಯಗಳಲ್ಲಿ ಮತ್ತು ಜನ ಸಾಮಾನ್ಯರ ಆಡು ಮಾತಿನಲ್ಲಿ ಮಾತ್ರ ಉಳಿದುಕೊಂಡಿತ್ತು. ಶಿಕ್ಷಣ ಮತ್ತು ಆಡಳಿತದಲ್ಲಿ ಅಧಿಕೃತವಾಗಿ ಉರ್ದು ಭಾಷೆ ಚಾಲ್ತಿಯಲ್ಲಿತ್ತು. ಈ ಶತಮಾನದ ಪ್ರಾರಂಭದಲ್ಲಿ ವಿದ್ಯೆ ಕಲಿಯಲು ಅವಕಾಶವಿದ್ದವರೆಲ್ಲ ಉರ್ದು ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದು ಅನಿವಾರ್ಯವಾಗಿತ್ತು. ಉನ್ನತಮಟ್ಟದ ಶಿಕ್ಷಣವೂ ಉರ್ದು ಭಾಷೆಯಲ್ಲೇ ಕಲಿಯಬೇಕಾಗಿತ್ತು. ನಿಜಾಂ ಆಡಳಿತದಿಂದ ಇಂಥ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಿತ್ತು. ಬೇರೆ ಪ್ರಾಂತ್ಯಗಳಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತವಿದ್ದರಿಂದ ಅನೇಕ ಅನುಕೂಲಗಳಿದ್ದವು. ಇಂಗ್ಲೀಷ್ ಭಾಷೆಯಿಂದ ಪಶ್ಚಿಮದ ಜ್ಞಾನವನ್ನು ಸಂಪಾದಿಸಲು ಅವಕಾಶವಿತ್ತು. ಇದರಿಂದಲೇ ನವೋದಯ ಸಾಹಿತ್ಯ ಉತ್ಸಾಹದಿಂದ ಬೆಳೆಯಲು ಸಾಧ್ಯವಾಯಿತು. ಈ ಅನುಕೂಲ ಈ ಪ್ರಾಂತ್ಯದವರಿಗೆ ಸಾಧ್ಯವಾಗಲಿಲ್ಲ. ಕನ್ನಡ ಭಾಷೆ-ಸಾಹಿತ್ಯಾಭಿಮಾನಿಗಳು ನಿಜಾಂ ಆಡಳಿತದಿಂದ ಅನೇಕ ತೊಂದರೆಗಳನ್ನು ಎದುರಿಸಬೇಕಾಯಿತು. ಆದ್ದರಿಂದ ಈ ಪ್ರಾಂತ್ಯದಲ್ಲಿ ಆಧುನಿಕ ಸಾಹಿತ್ಯ ಒಡೆದು ಕಾಣುವಂತೆ ಬೆಳೆಯಲಿಲ್ಲ. ಇಂಥ ಅನೇಕ ಸಂಗತಿಗಳು 'ಹೈದರಬಾದ ಕರ್ನಾಟಕ'ದ ಒಡಲಲ್ಲಿ ಸಂಭವಿಸಿವೆ.

'ಕವಿರಾಜ ಮಾರ್ಗ'ದಲ್ಲಿರುವ ಕನ್ನಡ ನಾಡಿನಲ್ಲಿ, ಅದರಲ್ಲೂ ಈ ಪ್ರಾಂತ್ಯದಲ್ಲಿ ಒಂಬತ್ತನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೆ ಈ ನಾಡಿನ ನದಿಗಳಲ್ಲಿ ಎಷ್ಟೋ ನೀರು ಹರಿದು ಹೋಗಿವೆ.

ನಿರ್ದಿಷ್ಟ ಪ್ರಾಂತ್ಯದ ಅಧ್ಯಯನವೇ ಯಾಕೆ?

ಹೈದರಾಬಾದ್ ಕರ್ನಾಟಕವೆಂಬ ಬೀದರ, ಕಲ್ಬುರ್ಗಿ, ರಾಯಚೂರು ಜಿಲ್ಲಾ ಪ್ರದೇಶಗಳನ್ನು ಹೊರತುಪಡಿಸಿ ಕರ್ನಾಟಕದ ಜಿಲ್ಲೆಗಳಿಗೆ (ಭಾರತವೂ ಸೇರಿದಂತೆ) ೧೯೪೭, ಆಗಸ್ಟ್ ೧೫ರಂದು ಸ್ವಾತಂತ್ರ್ಯ ದೊರೆಯಿತು. ೧೯೪೮, ಸೆಪ್ಟೆಂಬರ್ ೧೭ರಂದು ಈ ಪ್ರಾಂತ್ಯಕ್ಕೆ ಸ್ವಾತಂತ್ರ್ಯ ದೊರೆಯಿತು ಎಂಬುದೇ ಆಶ್ಚರ್ಯದ ಸಂಗತಿಯಾಗುತ್ತದೆ ಮತ್ತು ಈ ಪ್ರಾಂತ್ಯದ ಚರಿತ್ರೆಯ ಬಗ್ಗೆ ಕುತೂಹಲ ಮೂಡಿಸುತ್ತದೆ. ಈ ಪ್ರಾಂತ್ಯದ ಜನ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಜತೆ ಹೋರಾಡುವುದಕ್ಕೆ ಬದಲು ನಿಜಾಮನ ಜತೆ, ರಜಾಕಾರರ ಜೊತೆ ಹೋರಾಡಬೇಕಾಗಿ ಬಂದುದು, ಕನ್ನಡ ಭಾಷೆಯ ಬದಲು ಫಾರಸಿ, ಉರ್ದು, ಮರಾಠಿ ಕಲಿಯಬೇಕಾಗಿ ಬಂದುದು, ಅನ್ಯ ಲಿಪಿಯಲ್ಲಿ ಕನ್ನಡ ಭಾಷೆಯನ್ನು ಓದಬೇಕಾದ-ವ್ಯವಹಾರ ನಡೆಸಬೇಕಾದುದು, ಲಿಖಿತ ಸಾಹಿತ್ಯ ಪರಂಪರೆಯು ಸೊರಗಿ ಮೌಖಿಕ ಸಾಹಿತ್ಯ ಪ್ರಧಾನ ಧಾರೆಯಾಗಿ ಹುಟ್ಟಿ ಬೆಳೆದುದು, 'ಹಿಂದೂ' ಜನ ಸಮುದಾಯಗಳಿಗೆ ಮುಸ್ಲಿಮ್ ಸಂತರ ಗೋರಿಗಳೇ ದೈವಗಳಾಗಿ ಪರಿಣಮಿಸಿದುದು, ಇನ್ನೂ ಊಳಿಗಮಾನ್ಯ ಪದ್ಧತಿ ಜೀವಂತವಾಗಿರುವುದು, ಸಾವಿರ ಎಕರೆಯ ಜಮೀನ್ದಾರರು ಇನ್ನೂ ಇರುವದು ಇವೆಲ್ಲವು ಸಂಭವಿಸಿರುವುದು ಕುತೂಹಲವೆನಿಸುತ್ತದೆ. ಈ ಪ್ರಾಂತ್ಯದ ಚರಿತ್ರೆ ರೋಚಕವಾಗಿರುವಂತೆ, ಸಾಂಸ್ಕೃತಿಕ ಚರಿತ್ರೆಯೂ ವಿಶಿಷ್ಟವಾಗಿದೆ. ಇಂಥ ಕಾರಣಗಳಿಂದಾಗಿ ಈ ಪ್ರಾಂತ್ಯದ ಅಧ್ಯಯನ ಮುಖ್ಯವಾಗುತ್ತದೆ.

ಯಾವುದೇ ಪ್ರಾಂತ್ಯಕ್ಕೆ ಅದರದೇ ಆದ ಭೌಗೋಳಿಕವಾದ, ಪ್ರಾಕೃತಿಕವಾದ, ಭಾಷಿಕವಾದ, ಸಾಂಸ್ಕೃತಿಕವಾದ ಅನನ್ಯತೆಗಳಿರುತ್ತವೆ. ಕರ್ನಾಟಕದಲ್ಲಿಯೇ ಕೊಡಗು, ಮೈಸೂರು, ಮಂಗಳೂರು, ಧಾರವಾಡ, ಹೈದರಾಬಾದ್ ಕರ್ನಾಟಕ ಮುಂತಾದ ಪ್ರಾಂತ್ಯಗಳಿಗೆ ಭಿನ್ನ ಭಿನ್ನ ಸಾಂಸ್ಕೃತಿಕ ಚಹರೆಗಳಿವೆ. ಅಷ್ಟೇ ಅಲ್ಲ ಈ ಪ್ರಾಂತ್ಯದ ಒಳಗೇ ಅನೇಕ ಒಳ ಪ್ರಾಂತ್ಯಗಳಿದ್ದು ಅವು ಬೇರೆ ಬೇರೆ ಕಾರಣಗಳಿಂದ ವಿಶಿಷ್ಟತೆಗಳನ್ನು ಗಳಿಸಿಕೊಂಡಿವೆ. ಹೈದರಾಬಾದ್ ಕರ್ನಾಟಕವನ್ನೇ ತೆಗೆದುಕೊಂಡರೆ ಈ ಪ್ರಾಂತ್ಯದ ಮೂರು ಜಿಲ್ಲೆಗಳಿಗೆ ಭಿನ್ನವಾದ ಸಾಂಸ್ಕೃತಿಕ ನೆಲೆಗಳಿವೆ. ಮೂರು ಜಿಲ್ಲೆಗಳ ಭಾಷೆಯ ಸ್ವರೂಪವೂ ಬೇರೆ ಬೇರೆಯಾಗಿದೆ. 'ಎಡೆದೊರೆ ನಾಡು', 'ಸಗರ ನಾಡು' ಎಂಬ ಪ್ರದೇಶಗಳಿಗೆ ವಿಶೇಷವಾದ ಮಹತ್ವವಿದ್ದುದು ಚರಿತ್ರೆಯಿಂದ ತಿಳಿದು ಬರುತ್ತದೆ. ಇಂಥ ಪ್ರಾಂತ್ಯಗಳ ಅಧ್ಯಯನದಿಂದ ಹೊಸ ಚರಿತ್ರೆಯನ್ನು ಕಟ್ಟಬಹುದು. ಸ್ಥಳೀಯ ಚರಿತ್ರೆಯ ಹುಡುಕಾಟವೆಂದರೆ ದೇಶಿಯ ಹುಡುಕಾಟವೇ ಸರಿ. ಜಾಗತೀಕರಣದ ಪ್ರಕ್ರಿಯೆಯ ಈ ಸಂದರ್ಭದಲ್ಲಿ 'ದೇಶಿಯತೆ'ಯೆಂಬುದು ಕಳೆದು ಹೋಗುತ್ತಿದೆ ಎಂಬ ಆತಂಕ ಕಾಡುತ್ತಿರುವಾಗ ಇಂಥ ಪ್ರಾಂತ್ಯಗಳ ಅಧ್ಯಯನದಿಂದ ಹೊಸ ಸಾಂಸ್ಕೃತಿಕ ತಿಳುವಳಿಕೆಯನ್ನು ಅರಿಯಲು ಸಾಧ್ಯವಾಗಬಹುದು.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇಂಥ ರೋಚಕವೂ ವಿಶಿಷ್ಟವೂ ಆದ ಚರಿತ್ರೆಯನ್ನು ಹೊಂದಿರುವ 'ಹೈದರಾಬಾದ್ ಕರ್ನಾಟಕ' ಪ್ರಾಂತ್ಯದ ಅಧ್ಯಯನಕ್ಕೆ ಈ ಪ್ರಾಂತ್ಯದಲ್ಲಿ ಸೃಷ್ಟಿಯಾದ ಸೃಜನಶೀಲ ಸಾಹಿತ್ಯವನ್ನು ಮಾತ್ರ ಪರಿಗಣಿಸಲಾಗಿದೆ. ಯಾವುದೇ ಸಾಹಿತ್ಯ ಕೃತಿಗೂ ಮತ್ತು ಅದು ಸೃಷ್ಟಿಯಾದ ಕಾಲದ ಸಮಾಜಕ್ಕೂ ಸಂಬಂಧವಿರುತ್ತದೆ. ಸಂಬಂಧ ಇರುವುದರಿಂದಲೇ ಸಮಾಜದಲ್ಲಿ ಕಾಣುವ ಜನ ಸಮುದಾಯಗಳ ಬದುಕು, ಅವುಗಳ ತುಡಿತ-ತಲ್ಲಣಗಳು ಮತ್ತು ಸಾಂಸ್ಕೃತಿಕ ಸಂಬಂಧಗಳು ಸಾಹಿತ್ಯ ಕೃತಿಯಲ್ಲಿ ಒಡ ಮೂಡಿರುತ್ತವೆ. ಈ ಕಾರಣದಿಂದಲೇ ಒಂದು ಸಾಹಿತ್ಯ ಕೃತಿಯನ್ನು ಓದುವುದೆಂದರೆ, ಸಮಾಜದ ಜನ ಸಮುದಾಯಗಳ ಬದುಕಿನ ಚರಿತ್ರೆಯನ್ನು

ಓದಿದಂತೆ. ಆದ್ದರಿಂದಲೇ ಸೃಜನಶೀಲ ಸಾಹಿತ್ಯ ಕೃತಿಗಳು ಸಮುದಾಯಗಳ ಅಧ್ಯಯನಕ್ಕೆ ಆಕರವಾಗುವ ಶಕ್ತಿಯನ್ನು ಪಡೆದಿರುತ್ತವೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಈ ಪ್ರಾಂತ್ಯದ ಸಾಹಿತ್ಯದಲ್ಲಿ 'ಸಾಮಾಜಿಕ ವಾಸ್ತವ'ದ ಹುಡುಕಾಟವನ್ನು ಈ ಅಧ್ಯಯನದಲ್ಲಿ ಮಾಡಲು ಪ್ರಯತ್ನಿಸಲಾಗಿದೆ.

'ಸಾಮಾಜಿಕ ವಾಸ್ತವ' ಎಂದರೆ ಸಾಮಾನ್ಯವಾಗಿ ಸಮಾಜದ ವಸ್ತುಸ್ಥಿತಿ, ಯಥಾವತ್ತಾದ, ನೈಜವಾದ ಚಿತ್ರಣ ಎಂದು ಭಾವಿಸಬಹುದು. ಆದರೆ 'ಸಮಾಜ' ಎಂದಾಗ ಅದರ ಅರ್ಥವ್ಯಾಪ್ತಿ ವಿಸ್ತಾರವಾಗುತ್ತದೆ. ಸಮಾಜಕ್ಕೂ ಮತ್ತು ಮನುಷ್ಯನಿಗೂ ನಿಕಟ ಸಂಬಂಧ ಬೆಳೆದಿರುವುದರಿಂದ ಮನುಷ್ಯನ ಎಲ್ಲ ಬಗೆಯ ಚಟುವಟಿಕೆಗಳು ಪರಿಗಣಿತವಾಗುತ್ತವೆ. ಆಗ 'ಸಾಮಾಜಿಕ' ಎಂಬುದು ಒಂದು ಪರಿಕಲ್ಪನೆಯಾಗಿ ಅದರ ಒಡಲಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳೂ ಸೇರಿಕೊಳ್ಳುತ್ತವೆ. ಸಾಹಿತ್ಯಿಕ ಸಂದರ್ಭದಲ್ಲಂತೂ ಹೀಗೆ ಗ್ರಹಿಸುವುದು ಅನಿವಾರ್ಯವಾಗುತ್ತದೆ. ಹೀಗಾಗಿ 'ಸಾಮಾಜಿಕ ವಾಸ್ತವ' ಎಂದರೆ ಸಮಾಜದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಆಯಾಮಗಳ ವಸ್ತುಸ್ಥಿತಿ ಎಂದೇ ಈ ಅಧ್ಯಯನದಲ್ಲಿ ಪರಿಭಾವಿಸಲಾಗಿದೆ. ಇದು ಇನ್ನೊಂದು ಬಗೆಯಲ್ಲಿ ಸಾಂಸ್ಕೃತಿಕವಾದ ಅಧ್ಯಯನವೂ ಆಗುತ್ತದೆ.

'ಹೈದರಾಬಾದ್ ಕರ್ನಾಟಕ' ಎಂಬ ಈ ಪ್ರಾಂತ್ಯವು ಯಾವ ಹೊತ್ತಿನಿಂದ ರೂಪಗೊಂಡಿತೋ ಅಂದಿನಿಂದ ಇಂದಿನವರೆಗೆ ಈ ಪ್ರಾಂತ್ಯದ ಒಡಲಲ್ಲಿ ಸಂಭವಿಸಿದ, ಸಂಭವಿಸುತ್ತಿರುವ ಎಲ್ಲ ಬಗೆಯ ತಲ್ಲಣಗಳು ಸಾಹಿತ್ಯ ಕೃತಿಗಳಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದನ್ನು ಅಧ್ಯಯನ ಮಾಡುವುದೇ ಇಲ್ಲಿನ ಉದ್ದೇಶವಾಗಿದೆ. ಸಮಾಜದ ಸಾಮಾಜಿಕ ವಿದ್ಯಮಾನಗಳ ವಾಸ್ತವವನ್ನು ಸಾಹಿತ್ಯ ಕೃತಿಗಳು ಹೇಗೆ ಗ್ರಹಿಸಿ ಪುನರ್ ಮಂಡಿಸಿವೆ ಎಂಬುದು ಮತ್ತು ಹಾಗೆ ಗ್ರಹಿಸಲು ಈ ಪ್ರಾಂತ್ಯದ ಚರಿತ್ರೆಯೂ ಯಾವ ಬಗೆಯಲ್ಲಿ ಒತ್ತಾಯಿಸಿದೆ ಎಂಬುದರ ಹುಡುಕಾಟವನ್ನು ಇಲ್ಲಿ ಮಾಡಲು ಯತ್ನಿಸಲಾಗಿದೆ. ಹೀಗಾಗಿ ಈ ಪ್ರಾಂತ್ಯದಲ್ಲಿ ಹುಟ್ಟಿಕೊಂಡ ಮತ್ತು ಈ ಪ್ರಾಂತ್ಯಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಯನ್ನು ಈ ದೃಷ್ಟಿಯಿಂದ ಮಾತ್ರ ನೋಡಲಾಗಿದೆಯೇ ಹೊರತು ಸಾಹಿತ್ಯ ಕೃತಿಯ ಅನನ್ಯತೆಯನ್ನು ಗುರುತಿಸುವುದಲ್ಲ. ಅಂದರೆ ಒಂದು ಕೃತಿಯ ಬಂಧ, ಭಾಷೆ, ನಿರೂಪಣೆ ಮತ್ತು ಕಲಾತ್ಮಕತೆ ಮುಂತಾದ ಕೇವಲ ಕೃತಿ ಕೇಂದ್ರಿತ ಅಧ್ಯಯನವನ್ನು ಇಲ್ಲಿ ಮಾಡಲು ಹೋಗಿಲ್ಲ. ಕೃತಿಗಳ 'ಶ್ರೇಷ್ಠತೆ'ಯನ್ನು ಹೀಗೆ ಗುರುತಿಸುವುದು ಈ ಅಧ್ಯಯನದ ಉದ್ದೇಶವಲ್ಲ. ಸಾಹಿತ್ಯ ಕೃತಿ ಮತ್ತು ಸಮಾಜದ ಸಂಬಂಧವನ್ನು ಚರಿತ್ರೆಯ ದೃಷ್ಟಿಯಿಂದ ಮಾತ್ರ ಗ್ರಹಿಸಲಾಗಿದೆ. ಸಾಹಿತ್ಯ ಕೃತಿಗಳ ಆಶಯವೇ ಇಲ್ಲಿ ಮುಖ್ಯವಾಗಿದೆ. ಸರಳವಾಗಿ ಹೇಳುವುದಾದರೆ ಸಮಾಜವನ್ನು ಸಾಹಿತ್ಯವೆಂಬ ಕನ್ನಡಿಯ ಮೂಲಕ ನೋಡುವುದು. ಇದರಿಂದ ಈ ಪ್ರಾಂತ್ಯದ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕವಾದ ಸ್ಥಿತಿಗಳನ್ನು ಗ್ರಹಿಸುತ್ತ ಒಂದು ಬಗೆಯ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಲು ಈ ಅಧ್ಯಯನದಿಂದ ಸಾಧ್ಯವಾಗಬಹುದೆಂದು ಭಾವಿಸಲಾಗಿದೆ.

೧೭೨೪ರ ಸುಮಾರು ನಿಜಾಂ ವಂಶಸ್ಥರ ಆಳ್ವಿಕೆಯಿಂದ ರೂಪಗೊಂಡ 'ಹೈದರಾಬಾದ್ ಸಂಸ್ಥಾನ'ದಲ್ಲಿ ಕರ್ನಾಟಕದ ಬೀದರ, ಕಲ್ಬುರ್ಗಿ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳು ಸೇರಿಕೊಂಡಿವೆಯಷ್ಟೆ. ಈ ಸಂಸ್ಥಾನದಲ್ಲಿದ್ದ ಈ ಮೂರು ಜಿಲ್ಲೆಗಳನ್ನು ಒಟ್ಟಿಗೆ 'ಹೈದರಾಬಾದ್ ಕರ್ನಾಟಕ' ಎಂದು ಕರೆಯಲಾಗುತ್ತದೆ. ಪ್ರದೇಶ ಮತ್ತು ಕಾಲದ ದೃಷ್ಟಿಯಿಂದ ಈ ಪ್ರಾಂತ್ಯದ ಯಾವುದೇ ಬಗೆಯ ಅಧ್ಯಯನ ಕೈಗೊಂಡರೆ ಅದು ನಿಜಾಮರ ಆಳ್ವಿಕೆಯ ಹೊತ್ತಿನಿಂದ ಅಂದರೆ ಹದಿನೆಂಟನೆಯ ಶತಮಾನದಿಂದ ಪ್ರಾರಂಭಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಅಧ್ಯಯನದಲ್ಲಿ ಹದಿನೆಂಟನೆಯ ಶತಮಾನದಿಂದ ಈ ಹೊತ್ತಿನವರೆಗೆ ಈ ಪ್ರಾಂತ್ಯದಲ್ಲಿ ಹುಟ್ಟಿದ, ಈ ಪ್ರಾಂತ್ಯಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು, ಅದರಲ್ಲೂ ಮುಖ್ಯವಾಗಿ ಸೃಜನಶೀಲ ಸಾಹಿತ್ಯವನ್ನು ಮಾತ್ರ ಪರಿಗಣಿಸಲಾಗಿದೆ.

ಈ ಪ್ರಾಂತ್ಯದಲ್ಲಿ ಹದಿನೆಂಟು-ಹತ್ತೊಂಬತ್ತನೆಯ ಶತಮಾನದ ಕಾಲಾವಧಿಯಲ್ಲಿ ಅನುಭಾವಿಗಳು ಹಾಡಿದ ತತ್ವಪದಗಳು ಪ್ರಧಾನ ಧಾರೆಯಾಗಿ ಕಾಣಿಸಿಕೊಂಡಿವೆ. ಈ ಕಾಲಾವಧಿಯೂ ಸೇರಿದಂತೆ ಹಿಂದಿನ ಕೆಲ ಶತಮಾನಗಳಿಂದಲೇ ಕನ್ನಡದ ಈ ಪ್ರಾಂತ್ಯದಲ್ಲಿ ಫಾರಸಿ, ಉರ್ದು ಮತ್ತು ಮರಾಠಿ ಭಾಷೆಗಳು ರಾಜಕೀಯ ಬೆಂಬಲದಿಂದ ಮುನ್ನೆಲೆಗೆ ಬಂದವು. ರಾಜಕೀಯ ಬೆಂಬಲವಿಲ್ಲದ ಕನ್ನಡ ಭಾಷೆ ಹಿನ್ನೆಲೆಗೆ ಸರಿದುಹೋಗಿತು. ಈ ಸ್ಥಿತಿ ಬಹುದೀರ್ಘಕಾಲ ಒದಗಿದ್ದರಿಂದ ಜನ ಸಮುದಾಯಗಳು ಕನ್ನಡ ಭಾಷೆಯನ್ನು ಮರೆಯುವಂಥ ವಾತಾವರಣ ಏರ್ಪಟ್ಟಿತು. ಇದರಿಂದ ಲಿಖಿತ ಸಾಹಿತ್ಯ ಬೆಳೆಯಲು ಕಷ್ಟವಾಯಿತು. ಆದರೆ ಮೌಖಿಕ ಸಾಹಿತ್ಯವು ಒಡೆದು ಕಾಣುವಂತೆ ಬೆಳೆಸಲು ಸಾಧ್ಯವಾಯಿತು. ಶರಣರ ಪರಂಪರೆಗೆ ಸೇರಿದ ಅನುಭಾವಿಗಳು ಈ ಪ್ರಾಂತ್ಯದಲ್ಲಿ ಹೆಚ್ಚಾಗಿ ಕಾಣಿಸಿಕೊಂಡರು. ತಮ್ಮ ಅನುಭಾವವನ್ನು ತತ್ವಪದಗಳ ರೂಪದಲ್ಲಿ ಹಾಡಿದರು. ತತ್ವಪದ ಎಂಬ ಮೌಖಿಕ ಕಾವ್ಯ ರೂಪಕ್ಕೆ ಒಂದು ಪರಂಪರೆ ಇದ್ದರೂ ಈ ಕಾಲಾವಧಿಯಲ್ಲಿ 'ತತ್ವಪದ ಸಾಹಿತ್ಯ'ಕ್ಕೆ ಹೊಸ ಆಯಾಮವನ್ನು ಒದಗಿಸಿದರೆಂದು ಹೇಳಬಹುದು. ಜನ ಸಾಮಾನ್ಯರ ಜತೆಗೆ ಬೆರೆತು ಬೆಳೆದ ಈ ತತ್ವಪದಕಾರರು ಹಾಡಿದ ಸಾಹಿತ್ಯವನ್ನು ಈಚಿನ ದಶಕಗಳಲ್ಲಿ ಸಂಗ್ರಹಿಸಿ ಪ್ರಕಟಿಸಲಾಗುತ್ತಿದೆ. ಈ ಅಧ್ಯಯನದ ಅವಧಿಯಲ್ಲಿ ಲಭ್ಯವಿದ್ದ ತತ್ವಪದ ಸಾಹಿತ್ಯ ಕೃತಿಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ.

ಈ ಪ್ರಾಂತ್ಯವನ್ನು ಹೊರತುಪಡಿಸಿ ಕರ್ನಾಟಕದ ಇತರ ಪ್ರಾಂತ್ಯಗಳಲ್ಲಿ ಬ್ರಿಟಿಷರ ವಸಾಹತು ಆಡಳಿತದಿಂದ ಪಶ್ಚಿಮದ ಹೊಸ ಜ್ಞಾನ ದೊರೆಯತೊಡಗಿತು. ಈ ಜ್ಞಾನ ಹೊಸ ಸಾಹಿತ್ಯ ಸೃಷ್ಟಿಗೆ ನೆಲೆಯನ್ನು ಒದಗಿಸಿತು. ಮೈಸೂರು, ಮಂಗಳೂರು, ಧಾರವಾಡ ಭಾಗಗಳಿಂದ ಆಧುನಿಕ ಸಾಹಿತ್ಯವು ಉತ್ಸಾಹದಿಂದ ಸೃಷ್ಟಿಯಾಗತೊಡಗಿತು. ಈ ಹೊತ್ತಿನಲ್ಲಿ ಈ ಪ್ರಾಂತ್ಯದಲ್ಲಿ ನಿಜಾಂ ಆಳುವಿಕೆಯಿಂದ ಆಧುನಿಕ ಕನ್ನಡ ಸಾಹಿತ್ಯ ಸೃಷ್ಟಿಯಾಗುವುದಿರಲಿ, ಕನ್ನಡದಲ್ಲಿ ಅಕ್ಷರಭ್ಯಾಸ ಮಾಡಲು ಮುಕ್ತ ಅವಕಾಶಗಳೇ ಇರಲಿಲ್ಲ. ಶಿಕ್ಷಣ ಮತ್ತು ಆಡಳಿತ ಎರಡರಲ್ಲಿ ಉರ್ದು ಅಧಿಕೃತ ಭಾಷೆಯಾಗಿತ್ತು. ಕನ್ನಡ ಭಾಷೆ ಮತ್ತು ಸಾಹಿತ್ಯಾಭಿಮಾನವಿದ್ದ ಕನ್ನಡಿಗರಿಗೆ, ತಮ್ಮ ಭಾಷೆ-ಸಾಹಿತ್ಯದ ಬೆಳವಣಿಗೆಗೆ ಮುಕ್ತವಾದ ವಾತಾವರಣವನ್ನು ಸೃಷ್ಟಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ಪ್ರಾಂತ್ಯವು ನಿಜಾಂ ವಶದಿಂದ ಬಿಡುಗಡೆಯಾದ ಮೇಲೆಯೂ ಅನೇಕ ಸಾಂಸ್ಕೃತಿಕ ಬಿಕ್ಕಟ್ಟುಗಳಿಂದ ಆಧುನಿಕ ಕನ್ನಡ ಸಾಹಿತ್ಯ ಬೆಳೆಯಲು ಅವಕಾಶವಾಗಲಿಲ್ಲ. ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಈ ಪ್ರಾಂತ್ಯದಲ್ಲಿ ಕನ್ನಡದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ದೊರೆಯುವಂತಾಯಿತು. ಆದರೂ ಈ ಪ್ರಾಂತ್ಯದಲ್ಲಿ ಅನೇಕ ಬಗೆಯ ಸಾಂಸ್ಕೃತಿಕ ಬಿಕ್ಕಟ್ಟುಗಳಿದ್ದಾಗಲೂ ಸಾಹಿತ್ಯಾಭಿಮಾನಿಗಳಿಂದ ಆಧುನಿಕ ಕನ್ನಡ ಸಾಹಿತ್ಯ ಮಂದಗತಿಯಲ್ಲ ಚಿಗುರಿ ಬೆಳೆದಿದೆ. ಮುಖ್ಯವಾಗಿ ಈ ಶತಮಾನದಲ್ಲಿ ಕಾವ್ಯ, ಕಥೆ ಮತ್ತು ಕಾದಂಬರಿ ಸಾಹಿತ್ಯ ಹೆಚ್ಚಿನ ಪ್ರಮಾಣದಲ್ಲಿ ಸೃಷ್ಟಿಯಾಗಿದೆ. ನಾಟಕ, ಲಲಿತ ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳು ಬೆಳೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಅಧ್ಯಯನದಲ್ಲಿ ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಥೆ, ಕಾದಂಬರಿ ಸಾಹಿತ್ಯವನ್ನು ಮಾತ್ರ ಪರಿಗಣಿಸಲಾಗಿದೆ. ಈ ಹೊತ್ತಿನಿಂದ ಹಿಡಿದು 'ಹೈದರಾಬಾದ್ ಕರ್ನಾಟಕ' ರೂಪಗೊಂಡ ಕಾಲಾವಧಿ ಮೂರು ಶತಮಾನಗಳದ್ದು. ಈ ಮೂರು ಶತಮಾನಗಳ ಕಾಲಾವಧಿಯಲ್ಲಿ ಸೃಷ್ಟಿಯಾದ ಸಾಹಿತ್ಯದಲ್ಲಿ ಮುಖ್ಯವಾಗಿ 'ತತ್ವಪದ ಸಾಹಿತ್ಯ', 'ಕಥಾಸಾಹಿತ್ಯ', 'ಕಾದಂಬರಿ ಸಾಹಿತ್ಯ' ಮತ್ತು 'ಕಾವ್ಯ ಸಾಹಿತ್ಯ'ವನ್ನು ಮಾತ್ರ ಈ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ.

ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ 'ಹೈದರಾಬಾದ್ ಕರ್ನಾಟಕ' ಪ್ರಾಂತ್ಯದ ಸಾಹಿತ್ಯವು ಚರ್ಚೆಗೆ, ವಿಮರ್ಶೆಗೆ ಒಳಗಾಗಿಲ್ಲ. ತತ್ವಪದ ಸಾಹಿತ್ಯವು ಈಚಿನ ದಶಕಗಳಲ್ಲಿ ಕೇವಲ ಸಂಗ್ರಹ ಕಾರ್ಯ ನಡೆದಿದೆಯೇ ಹೊರತು ಅಧ್ಯಯನ ಅಷ್ಟೂ

ನಡೆದಿಲ್ಲ. ಆಧುನಿಕ ಕನ್ನಡ ಸಾಹಿತ್ಯವು ಈ ಪ್ರಾಂತ್ಯದಲ್ಲಿ ನಿಧಾನವಾಗಿ ಬೆಳೆದಿದ್ದರಿಂದಲೋ ಅಥವಾ ಇತರ ಪ್ರಾಂತ್ಯಗಳ ಮಟ್ಟದಲ್ಲಿ ಸಾಹಿತ್ಯ ಹುಟ್ಟಿ ಬರಲಿಲ್ಲವೆಂದೋ ಏನೋ ಅವಗಣನೆಗೆ ಗುರಿಯಾಯಿತು. ಅಲ್ಲದೆ ಮುಖ್ಯವಾಗಿ ಈ ಪ್ರಾಂತ್ಯದಲ್ಲಿ ವಿಮರ್ಶಕರು ಹುಟ್ಟಿಕೊಳ್ಳದ ಕಾರಣದಿಂದಲೂ ಈ ಪ್ರಾಂತ್ಯದ ಸಾಹಿತ್ಯವು ಚರ್ಚೆಗೆ ಒಳಗಾಗಲಿಲ್ಲ. ಹೆಚ್ಚೆಂದರೆ ಈ ಪ್ರಾಂತ್ಯದಲ್ಲಿ ಹುಟ್ಟಿದ ಸಾಹಿತ್ಯ ಕೃತಿಗಳಿಗೆ ಬರೆದ ಮುನ್ನುಡಿ-ಹಿನ್ನುಡಿಗಳೇ ವಿಮರ್ಶಾ ಬರಹಗಳಾಗಿವೆ. ಅವು ಪ್ರೋತ್ಸಾಹದ, ಪ್ರಸಂಶೆಯ ಮಾತುಗಳಾಗಿವೆ ಅಷ್ಟೆ. ಇದರಿಂದಾಗಿ ಸಾಹಿತ್ಯ ಕೃತಿಗಳ ಅಧ್ಯಯನದ ಸಂದರ್ಭದಲ್ಲಿ ವಿಮರ್ಶೆಯ-ಸಂಶೋಧನಾ ಬರಹಗಳನ್ನು ಬಳಸಿಕೊಳ್ಳಲು ಸಹಜವಾಗಿ ಸಾಧ್ಯವಾಗಿಲ್ಲ. ಈ ಅಧ್ಯಯನದಲ್ಲಿ ವಿಷಯ-ವಸ್ತುವಿಗೆ ಸಂಬಂಧಿಸಿದಂತೆ ಬರಹಗಾರರ ಸಾಹಿತ್ಯವನ್ನೇ ಮುನ್ನೆಲೆಗೆ ತಂದು ಚರ್ಚಿಸಲಾಗಿದೆಯೇ ಹೊರತು ಸಾಹಿತ್ಯ ಕೃತಿಗಳ ಕರ್ತೃಗಳನ್ನಲ್ಲ. ಸಂದರ್ಭಾನುಸಾರ ಮಾತ್ರ ಬಹರಗಾರರು ಚರ್ಚೆಗೆ ಒಳಗಾಗಿದ್ದಾರಷ್ಟೆ.

ಅಧ್ಯಾಯ ಎರಡು: ಚರಿತ್ರೆ

ಚರಿತ್ರೆಯ ಪುಟಗಳಲ್ಲಿ 'ಹೈದರಾಬಾದ್ ಕರ್ನಾಟಕ'

ನಿಜಾಮರು ಮತ್ತು ಹೈದರಾಬಾದ್ ಸಂಸ್ಥಾನ

ಹೈದರಾಬಾದ್ ಕರ್ನಾಟಕ

ರಜಾಕಾರರು ಮತ್ತು ಹೈದರಾಬಾದ್ ಕರ್ನಾಟಕ ವಿಮೋಚನೆ

ಅಧ್ಯಾಯ ಎರಡು: ಚರಿತ್ರೆ

ಚರಿತ್ರೆಯ ಪುಟಗಳಲ್ಲಿ 'ಹೈದರಾಬಾದ್ ಕರ್ನಾಟಕ'

ದೆಹಲಿಯ ಚಕ್ರವರ್ತಿ ಔರಂಗಜೇಬನು ದಕ್ಷಿಣ ಭಾರತದಲ್ಲಿ ದಂಡಯಾತ್ರೆಯನ್ನು ಕೈಗೊಂಡ ಮೇಲೆ, ಅವನ ಸಾಮ್ರಾಜ್ಯಕ್ಕೆ ಮುಂಬಯಿ, ಮದರಾಸು, ಕರ್ನಾಟಕ ಹಾಗೂ ಮೈಸೂರಿನ ಕೆಲವು ಭಾಗಗಳು ಸೇರಿಕೊಂಡವು. ಈ ಭಾಗಗಳಲ್ಲಿ ಮರಾಠಿ, ತೆಲುಗು ಹಾಗೂ ಕನ್ನಡ ಮಾತನಾಡುವ ಪ್ರಜೆಗಳಿದ್ದರು. ಈ ದಕ್ಷಿಣ ಪ್ರಾಂತ್ಯವನ್ನು ನೋಡಿಕೊಳ್ಳುವುದಕ್ಕೆ ಔರಂಗಜೇಬನು ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸುತ್ತಿದ್ದ. ದಂಡಯಾತ್ರೆಯನ್ನು ಮುಗಿಸಿ ತನ್ನ ಮೂಲಸ್ಥಾನವಾದ ಉತ್ತರದ ಕಡೆ ಔರಂಗಜೇಬನು ಮರಳಿದ ತರುವಾಯ ಈ ಪ್ರಾಂತ್ಯದ ಆಡಳಿತಾಧಿಕಾರಿಯಾಗಿದ್ದ ಮೀರ್ ಕಮರುದ್ದೀನ್ ೧೭೨೪ರಲ್ಲಿ ತನ್ನ ಅಧೀನದಲ್ಲಿದ್ದ ಪ್ರದೇಶವನ್ನು ಸ್ವತಂತ್ರವಾಗಿ ಆಳತೊಡಗಿದ. ಇವನಿಗೆ ಆಸಫ್ ಜಾಹಾ ಎಂಬ ಬಿರುದು ಇತ್ತು. ಇವನ ವಂಶಜರೇ ಮುಂದೆ ೧೯೪೮ರ ವರೆಗೆ ಏಳು ಜನರು ಅಧಿಕಾರಕ್ಕೆ ಬಂದು ರಾಜ್ಯಭಾರ ಮಾಡಿದರು. ಇವರಿಗೆ ಹೈದರಾಬಾದ್ ನಿಜಾಮರೆಂದು, ಇವರು ಆಳುತ್ತಿದ್ದ ಪ್ರದೇಶವನ್ನು 'ಹೈದರಾಬಾದ್ ಸಂಸ್ಥಾನ'ವೆಂದು ಕರೆಯಲಾಗುತ್ತಿತ್ತು. ಈ ಸಂಸ್ಥಾನದಲ್ಲಿ ಕರ್ನಾಟಕದ ಬೀದರು, ಕಲ್ಬುರ್ಗಿ ಹಾಗೂ ರಾಯಚೂರು ಜಿಲ್ಲಾ ಪ್ರದೇಶಗಳು ಸೇರಿಕೊಂಡಿದ್ದವು. ಈ ಮೂರು ಜಿಲ್ಲೆಗಳ ಪ್ರದೇಶವನ್ನು 'ನಿಜಾಂ ಪ್ರಾಂತ್ಯ'ವೆಂತಲೂ 'ನೈಜಾಂ ಕರ್ನಾಟಕ'ವೆಂತಲೂ, 'ಹೈದರಾಬಾದ್ ಕರ್ನಾಟಕ'ವೆಂತಲೂ ಕರೆಯಲಾಗುತ್ತದೆ. ಈ ಪ್ರದೇಶವು ಪೂರ್ವದಿಂದಲೂ ತನ್ನದೇ ಆದ ಚರಿತ್ರೆಯನ್ನು ಹೊಂದಿದೆ.

ಅಶೋಕ ಚಕ್ರವರ್ತಿಯ ಶಿಲಾಶಾಸನಗಳು ನಿಜಾಂ ಪ್ರಾಂತ್ಯವಾದ ಮಸ್ಕಿ, ಕೊಪ್ಪಳ ಸ್ಥಳಗಳಲ್ಲಿ ದೊರೆತಿವೆ. ಆ ಕಾಲದಲ್ಲಿ ಅಶೋಕನಿಗೆ ಈ ಎರಡು ಸ್ಥಳಗಳು ದಕ್ಷಿಣ ಪ್ರಾಂತ್ಯದ ಮುಖ್ಯ ಕೇಂದ್ರಗಳಾಗಿದ್ದವು. ಬೌದ್ಧ ಸಂಘಗಳನ್ನು ರಚಿಸಿ ತನ್ನ ಬೌದ್ಧಮತವನ್ನು ಪ್ರಚಾರಮಾಡಲು ಆರಂಭಿಸಿದ್ದುದು ಇಲ್ಲಿಂದಲೇ ಇರಬೇಕು. ಮಸ್ಕಿಯ ಹಿಂದಿನ ರೂಪವು 'ಮಾಸಂಗಿ' ಎಂದಿತ್ತು. ಮೂಲ 'ಮಹಾಸಂಘ' ಎಂಬುದು 'ಮಾಸಂಗಿ'ಯಾಗಿರಬೇಕು. ಇದರಿಂದ ಮಸ್ಕಿಯ ಮೊದಲ ಹೆಸರು ಆ ಕಾಲದಲ್ಲಿ 'ಮಹಾಸಂಘ' ಎಂದಿರಬೇಕು. ಈ ಸ್ಥಳವು ಅಶೋಕನ ಕಾಲದಲ್ಲಿ ಬೌದ್ಧ ಭಿಕ್ಷುಗಳ ನೆಲೆಯಾಗಿ, ಬೌದ್ಧಮತದ ಪ್ರಚಾರದ ಮುಖ್ಯ ಕೇಂದ್ರವೂ ಆಗಿತ್ತು. ಕೊಪ್ಪಳವೂ ಪ್ರಾಚೀನ ಕಾಲದಿಂದ ಬಹುಮುಖ್ಯ ಘಟನೆಗಳಿಗೆ ಕೇಂದ್ರವಾಗಿದೆ. ಆರಂಭದಲ್ಲಿ ಬೌದ್ಧಮತಕ್ಕೂ ನಂತರ ಜೈನಮತಕ್ಕೂ ಅದು ನೆಲೆಯಾಗಿತ್ತು. ಈ ಕೊಪ್ಪಳವನ್ನು ಶ್ರೀವಿಜಯ, ರನ್ನರು ತಮ್ಮ ಕಾವ್ಯಗಳಲ್ಲಿ ಹೆಸರಿಸಿದ್ದಾರೆ. ರನ್ನನು ಇದನ್ನು ಜೈನಕ್ಷೇತ್ರವೆಂದು ಉಲ್ಲೇಖಿಸಿದ್ದಾನೆ. ಇದರಿಂದ 'ನಿಜಾಂ ಪ್ರಾಂತ್ಯ'ದ ಈ ಕನ್ನಡ ಭಾಗವು ಪುರಾತನ ಕಾಲದಿಂದ ಚಕ್ರವರ್ತಿಗಳ ಆಡಳಿತಗಳಿಗೂ, ಮತ ಪ್ರಚಾರಗಳಿಗೂ ಮುಖ್ಯ ನೆಲೆಯಾಗಿತ್ತೆಂದು ಹೇಳಬಹುದು.

ಅಶೋಕ ಚಕ್ರವರ್ತಿಯ ನಂತರ ದಕ್ಷಿಣ ಪ್ರಾಂತ್ಯದಲ್ಲಿ ಕ್ರಿ.ಶ.ಆರಂಭದಿಂದ ಮೂರು ಶತಮಾನಗಳವರೆಗೆ ಶಾತವಾಹನರು ರಾಜ್ಯಭಾರ ಮಾಡಿದರು. ಈ ಮನೆತನಕ್ಕೆ 'ಆಂಧ್ರಭೃತ್ಯ' ಎಂಬ ಹೆಸರೂ ಇದೆ. ಇವರು ಆಳಿದ ಪ್ರದೇಶದಲ್ಲಿ ನಿಜಾಂ ಪ್ರಾಂತ್ಯವೆಲ್ಲವೂ ಸೇರಿತ್ತು. ಅದರಲ್ಲೂ ಕನ್ನಡದ ಬಹುಭಾಗ ಸೇರಿಕೊಂಡಿತ್ತು. ಶಾತವಾಹನರ ಕಾಲದ ನಂತರ ಕರ್ನಾಟಕವು ಒಬ್ಬ ರಾಜನ ಅಧಿಪತ್ಯಕ್ಕೆ ಒಳಪಡದೆ ಹಲವಾರು ರಾಜ್ಯ ಮನೆತನಗಳ ಪಾಲಾಗಿ ಬಿಡಿಬಿಡಿಯಾಗಿ ಹಂಚಿಹೋಯಿತು. ಬನವಾಸಿಯ ಕದಂಬರು, ತಲಕಾಡಿನ ಗಂಗರು, ನೊಳಂಬರು ಮುಂತಾದವರು ಕನ್ನಡ ರಾಜ್ಯವನ್ನು ಆಳತೊಡಗಿದರು. ಆರನೆಯ ಶತಮಾನದ ಆರಂಭದ ಹೊತ್ತಿಗೆ ಬಾದಾಮಿಯಲ್ಲಿ ಚಾಲುಕ್ಯ ರಾಜರು ರಾಜ್ಯವನ್ನು ಕಟ್ಟಿಕೊಂಡು ಅದನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡರು.

ಏಳನೆಯ ಶತಮಾನದ ಆರಂಭದಲ್ಲಿ ಎರಡನೆಯ ಪುಲಕೇಶಿಯು ಸಂಪೂರ್ಣ ಸ್ವತಂತ್ರನಾಗಿ ನರ್ಮದೆಯಿಂದ ಪಲ್ಲವ ರಾಜ್ಯದವರೆಗೆ ಸಾಮ್ರಾಜ್ಯವನ್ನು ವಿಸ್ತರಿಸಿದನು. ಕರ್ನಾಟಕ ಸಾಮ್ರಾಜ್ಯದ ಪ್ರಥಮ ಸಾರ್ವಭೌಮ ಎಂದು ಪುಲಕೇಶಿಗೆ ಕರೆಯಬಹುದು. ಇವನು ಉತ್ತರದ ಹರ್ಷವರ್ಧನನನ್ನು ನರ್ಮದಾ ನದಿಯ ದಂಡೆಯಲ್ಲಿ ತಡೆದು ಸೋಲಿಸಿ ಹಿಮ್ಮೆಟ್ಟಿಸಿದನು. ಇದೊಂದು ಅಪೂರ್ವ ಘಟನೆ. ಉತ್ತರದ ಅರಸನನ್ನು ದಕ್ಷಿಣದ ಅರಸು ಸೋಲಿಸಿದುದರ ಪರಿಣಾಮವಾಗಿ ಉತ್ತರದ ಅರಸರು ದಕ್ಷಿಣದ ಅರಸರ ಬಗ್ಗೆ ಭಯವನ್ನು ತಾಳಿದರು. ಕನ್ನಡಿಗರ ಶಕ್ತಿಯ ಅರಿವು ಉತ್ತರದವರಿಗೆ ಆದದ್ದು ವಿಶೇಷ ಎಂಬ ಅಂಶವನ್ನು ಚೀನಾದೇಶದ ಬೌದ್ಧ ಯಾತ್ರಿಕ ಹ್ಯೂಯನ್ ತ್ಸಾಂಗ್‌ನ ಗ್ರಂಥದಿಂದ ತಿಳಿಯಬಹುದು. ಪಶ್ಚಿಮ ಚಾಳುಕ್ಯರ ಕಾಲದ ಆಡಳಿತವೆಂದರೆ ಕನ್ನಡಿಗರ ಏಳಿಗೆಯ ಕಾಲವೆಂದೇ ಹೇಳಬೇಕು. ಸ್ವತಂತ್ರ ರಾಜ್ಯ ಸಿಕ್ಕದ್ದು ಕನ್ನಡಿಗರಿಗೆ ತಮ್ಮ ಸಂಸ್ಕೃತಿಯ ಸ್ವರೂಪವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಯಿತು. ಭಾಷೆ, ಸಾಹಿತ್ಯ, ಧರ್ಮ, ಶಿಲ್ಪ, ವಾಸ್ತು ಮುಂತಾದ ಸಾಂಸ್ಕೃತಿಕ ಅರಿವು ಹೆಚ್ಚಿಸಿಕೊಳ್ಳಲು ಅಣಿಯಾದದ್ದು ಈ ಕಾಲದಲ್ಲಿಯೇ.

ರಾಷ್ಟ್ರಕೂಟರ ರಾಜ್ಯಾಡಳಿತ ಆರಂಭವಾದ ಕಾಲದಿಂದ ನಿಜಾಂ ಪ್ರಾಂತ್ಯದ ಕನ್ನಡ ಭಾಗವು ಎಲ್ಲ ಚಳುವಳಿಗೆ ಮುಖ್ಯ ನೆಲೆಯಾಯಿತು. ರಾಷ್ಟ್ರಕೂಟರ ರಾಜಧಾನಿ ಮಳಖೇಡವಾಯಿತು. ನೃಪತುಂಗನು ಮಳಖೇಡವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿ ಇಡೀ ಹಿಂದೂಸ್ಥಾನದಲ್ಲಿ ಎದ್ದುಕಾಣುವಂತೆ ಶ್ರಮಿಸಿದನು. ಅನ್ಯದೇಶದ ವ್ಯಾಪಾರಿಗಳೂ ಕೂಡ ಮಳಖೇಡದ ಮಹತ್ವವನ್ನು ಪ್ರಸ್ತಾಪಿಸುವಂತಾಯಿತು. ನೃಪತುಂಗನ ಪೂರ್ವಿಕನಾದ ಮೊದಲನೆಯ ಕೃಷ್ಣನು ಎಲ್ಲೋರದ ಕೈಲಾಸ ದೇವಾಲಯವನ್ನು ಕಟ್ಟಿಸಿ ಕನ್ನಡಿಗರ ಶಿಲ್ಪಕಲೆಯ ಕುಶಲತೆಯನ್ನೂ ಲಲಿತಕಲೆಯ ಅಭಿರುಚಿಯನ್ನೂ ಎತ್ತಿ ಹಿಡಿದನು. ಮುಂದೆ ಮೂರನೆಯ ಕೃಷ್ಣನ ಕಾಲದ ಹೊತ್ತಿಗೆ, ಅಂದರೆ ಹತ್ತನೆಯ ಶತಮಾನದಲ್ಲಿ, ಕನ್ನಡ ಸಾಹಿತ್ಯವು ಕವಿ ಚಕ್ರವರ್ತಿಗಳನ್ನೂ ಪಡೆಯುವ ಕಾಲವಾಯಿತು. ಈ ಶತಮಾನವು ರಾಜಕೀಯ ಚರಿತ್ರೆಯಲ್ಲಿಯೂ ಸಾಹಿತ್ಯ ಚರಿತ್ರೆಯಲ್ಲಿಯೂ ಮಹತ್ವವನ್ನು ಪಡೆಯಿತು. ಹತ್ತನೆಯ ಶತಮಾನದ ಕೊನೆಗೆ ಚಾಳುಕ್ಯರ ಎರಡನೆಯ ತೈಲಪನು ಅಂತ್ಯವಾಗುತ್ತಿದ್ದ ಚಾಳುಕ್ಯ ವಂಶದ ಕುಡಿಯನ್ನು ಚಿಗುರಿಸಿದನು. ಆದರೆ ಮಾನ್ಯಖೇಟವನ್ನು ಯುದ್ಧದಲ್ಲಿ ಅಗ್ನಿಗೆ ಆಹುತಿ ಮಾಡಿದನೆಂದು ಹೇಳಲಾಗುತ್ತದೆ. ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡದಲ್ಲಿ ಅನೇಕ ಗ್ರಂಥಗಳು ನಾಶವಾದವು. 'ಕವಿರಾಜಮಾರ್ಗ'ಕಾರ ಉಲ್ಲೇಖಿಸುವ ಅನೇಕ ಕವಿಗಳ ಕಾವ್ಯ ಗ್ರಂಥಗಳು ಇಲ್ಲಿ ಅಗ್ನಿಗೆ ನಾಶವಾದವೆಂದು ಕಾಣುತ್ತದೆ.[೧] ಆದರೂ ಈ ಎರಡನೆಯ ತೈಲಪನು ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿದನು. ಮಳಖೇಡದ ಸಾಂಸ್ಕೃತಿಕ ಪರಿಸರವು ಕಲ್ಯಾಣಕ್ಕೆ ವರ್ಗವಾಯಿತು. ರನ್ನ ಕವಿ ಕನ್ನಡ ರಾಜ್ಯದ ಮುಖ್ಯ ಸ್ಥಳಕ್ಕೆ ಬಂದದ್ದು, ಕವಿಚಕ್ರವರ್ತಿ ಎಂಬ ಬಿರುದು ಪಡೆದದ್ದು, ಸಾಹಿತ್ಯ ಮತ್ತೆ ಏಳಿಗೆ ಹೊಂದಿದ್ದು ಈ ಕಾಲದಲ್ಲಿಯೇ.

ಹನ್ನೊಂದನೆಯ ಶತಮಾನದಲ್ಲಿ ಕರ್ನಾಟಕ ಸಾಮ್ರಾಜ್ಯವು ಪುನಃ ಒಡೆದು ಹೋಗುವ ಸ್ಥಿತಿಯಲ್ಲಿದ್ದಾಗ ಆರನೆಯ ವಿಕ್ರಮಾದಿತ್ಯನು, ತನ್ನ ಸಾಮರ್ಥ್ಯದಿಂದ ರಾಜ್ಯಭಾರಕ್ಕೆ ಬಂದನು. ಇವನಿಗೆ ಶಕ ಪುರುಷನೆಂಬ ಖ್ಯಾತಿಯೂ ಇದೆ. ಸಾಮ್ರಾಜ್ಯದ ವಿಸ್ತರಣೆಯಂತೆ ಕನ್ನಡಿಗರ ಸಂಸ್ಕೃತಿಯನ್ನು ಎತ್ತಿಹಿಡಿದನು. ಇವನಿಂದ ಕನ್ನಡಿಗರಿಗೆ ಒಬ್ಬ ಶಕ ಪುರುಷನು ದೊರೆತು ಅವನ ಹೆಸರಲ್ಲಿ ಶಕ ಗಣನೆ ಆರಂಭವಾಯಿತು. ಈ ಕಾಲದಲ್ಲಿ ಸಾಹಿತ್ಯಕ್ಕಿಂತ ಶಾಸನಗಳು ಹೆಚ್ಚು ರಚನೆಯಾದವು. ಶಾಸನ ಸಾಹಿತ್ಯ ಪ್ರವರ್ಧಮಾನಕ್ಕೆ ಬಂತು. ಕಲಬುರ್ಗಿ, ಬೀದರ, ರಾಯಚೂರು, ಹೈದರಾಬಾದ್ ಸರಹದ್ದಿನಲ್ಲಿ ಹಾಗೂ ತೆಲಂಗಾಣದಲ್ಲಿಯೂ ಈ ವಿಕ್ರಮಾದಿತ್ಯನ ಶಾಸನಗಳು ದೊರೆಯುವಂತಾದವು. ಇವನ ಕೀರ್ತಿ ಉತ್ತರ ಹಿಂದೂಸ್ಥಾನದಲ್ಲಿಯೂ ಹರಡಿತು. ಬಿಲ್ಹಣ, ವಿಜ್ಞಾನೇಶ್ವರ ಮುಂತಾದ ಪ್ರತಿಭಾವಂತರು ಇವನ ಆಸ್ಥಾನದಲ್ಲಿದ್ದರು. 'ವಿಕ್ರಮಾಂಕದೇವ ಚರಿತ್ರೆ' ಹುಟ್ಟಿತು. ಕನ್ನಡಿಗರ ಜೀವನ ಕುರಿತ ಈ ಕೃತಿ ಸಂಸ್ಕೃತದಲ್ಲಿದ್ದರೂ ಕರ್ನಾಟಕತ್ವವನ್ನೂ ಬಿಂಬಿಸುತ್ತದೆ. ಬಿಲ್ಹಣನು ಈ 'ವಿಕ್ರಮಾಂಕದೇವ ಚರಿತ್ರೆ'ಯನ್ನು

ಕನ್ನಡದಲ್ಲಿ ಬರೆದಿದ್ದರೆ, ಅವನೂ ಪಂಪ, ರನ್ನರ ಸಾಲಿನಲ್ಲಿರುತ್ತಿದ್ದನೋ ಇಲ್ಲವೋ ಊಹೆಯ ಮಾತು. ವಿಕ್ರಮಾದಿತ್ಯನ ಕಾಲದಲ್ಲಿ, ಅಸಂಖ್ಯಾತ ಶಾಸನಗಳು ಹುಟ್ಟಿದವು. ಈ ಶಾಸನಗಳ ಭಾಷೆಯೇ ಒಂದು ಭಂಡಾರವಾಯಿತು. ಕನ್ನಡ ಭಾಷೆ ಹಳೆಗನ್ನಡ ರೂಪದಿಂದ ನಡುಗನ್ನಡ ರೂಪಕ್ಕೆ ಹೊರಳುವ ಲಕ್ಷಣಗಳು ಇದರಿಂದ ತಿಳಿಯುವಂತಾಯಿತು. ವಿಕ್ರಮಾದಿತ್ಯನ ಅಧೀನ ಮಾಂಡಲಿಕರೂ ಜೊತೆಗೆ ದೇವಾಲಯಗಳನ್ನೂ ಕಟ್ಟಿದರು. ಈ ಕಾಲದ ವಾಸ್ತುಶಿಲ್ಪದ ಶೈಲಿಯ ದೇವಾಲಯಗಳು ಈಗಲೂ ನೈಜಾಂ ಪ್ರಾಂತ್ಯದಲ್ಲಿವೆ.

ಕಲ್ಯಾಣ ಚಾಲುಕ್ಯ ವಂಶದ ರಾಜರು ಕಾಲಾಂತರದಲ್ಲಿ ಶಕ್ತಿಗುಂದಿದವರಾಗಲು ಇವರ ಮಾಂಡಲಿಕರೆಲ್ಲರು ಸ್ವತಂತ್ರರಾಗಲು ಪ್ರಯತ್ನಿಸಿದರು. ಇವರಲ್ಲಿ ಯಶಸ್ವಿಯಾದವನೆಂದರೆ ಕಲಚೂರಿ ವಂಶದ ಬಿಜ್ಜಳನು. ಈತ ಕ್ರಿ.ಶ. ೧೧೬೦ರ ಸುಮಾರಿನಲ್ಲಿ ಕಲ್ಯಾಣವನ್ನು ಆಳತೊಡಗಿದ. ಇವನ ಮಂತ್ರಿಯಾದ ಬಸವಣ್ಣನು ರಾಜಕೀಯ ವಲಯದಲ್ಲಿದ್ದುಕೊಂಡು, ತನ್ನ ಕಾಲದ ಹೊತ್ತಿಗೆ ಇದ್ದ ಎಲ್ಲ ಕ್ಷೇತ್ರಗಳ ವ್ಯವಸ್ಥೆಯನ್ನೂ ಬದಲಿಸಲು ಸಂಘಟನೆಯನ್ನು ಕಟ್ಟಿದ. ಧರ್ಮ, ರಾಜಕೀಯ, ಸಮಾಜ, ಆರ್ಥಿಕ, ಹೀಗೆ ಎಲ್ಲ ಕ್ಷೇತ್ರಗಳಲ್ಲಿ ತುಂಬಿದ್ದ ಮೌಢ್ಯವನ್ನು, ಶೋಷಣೆಯನ್ನು, ಜಾತೀಯತೆಯನ್ನು ತಡೆಗಟ್ಟಿ ಹೊಸ ವ್ಯವಸ್ಥೆಯನ್ನು ತರಲು ಶ್ರಮಿಸಿದ. ಕೇವಲ ಸಾಮಾನ್ಯ ಜನರನ್ನು ನಂಬಿಕೊಂಡು ಆಂದೋಲನವನ್ನು ಪ್ರಾರಂಭಿಸಿ ಧರ್ಮ, ರಾಜಕೀಯವನ್ನೂ ಎದುರು ಹಾಕಿಕೊಂಡು, ಸಮಾಜದ ಬದಲಾವಣೆಗೆ ಹೆಣಗಿದ. ಅಸಂಖ್ಯಾತ ಜನರನ್ನು ಒಂದೆಡೆಯಲ್ಲಿ ಸೇರಿಸಿ 'ಶರಣ' ವ್ಯವಸ್ಥೆಯನ್ನು ಹುಟ್ಟುಹಾಕಿದ. ಜಾತಿ ನಿರ್ಮೂಲನೆ, ಕಡ್ಡಾಯ ದುಡಿಮೆ, ಸಮಾನ ಬಾಳು ಇವು ಸಮಾಜದಲ್ಲಿ ನೆಲೆಗೊಳ್ಳುವಂತೆ ಹೋರಾಡಿದ. ಇದರ ಪರಿಣಾಮವಾಗಿ ಸಮಾಜದಲ್ಲಿ ಹೊಸ ನೀರು ಹರಿಯುವಂತಾಯಿತು. ಜೈನ, ಬ್ರಾಹ್ಮಣ ಮತಾವಲಂಬಿಗಳಿಗೆ ನೆಲೆಯಾದ ನಾಡನ್ನು 'ಜಂಗಮ' ನಾಡನ್ನಾಗಿ ಪರಿವರ್ತಿಸಲು ಜನಸಾಮಾನ್ಯರೂ ಶ್ರಮಿಸಿದರು. ನೂರಾರು ಶರಣರು ಸೃಷ್ಟಿಸಿದ 'ವಚನ'ಗಳು ಇಂದಿಗೂ ಸಮಾಜ ಪರಿವರ್ತನೆಗೆ ಪ್ರೇರಕವಾಗಿವೆ. ಬೌದ್ಧಿಕ ಸಂಘರ್ಷಕ್ಕೆ ನೆಲೆಯಾಗಿವೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ ಮುಂತಾದ ಜಾತಿಮತವನ್ನು ಮೀರಿದ ಪ್ರತಿಭೆಗಳು ಸೃಷ್ಟಿಯಾದದ್ದು ಈ ಕಾಲದಲ್ಲಿ. ವೈಚಾರಿಕ ಸಂಘರ್ಷಕ್ಕೆ ನೆಲೆಯಾದ ಬಸವಕಲ್ಯಾಣವು ನೈಜಾಂ ಪ್ರಾಂತ್ಯದಲ್ಲಿರುವುದು ವಿಶೇಷವಾಗಿದೆ.

ಬಿಜ್ಜಳನ ತರುವಾಯ ಅವನ ಮಕ್ಕಳು ಹೆಚ್ಚು ಕಾಲ ರಾಜ್ಯಭಾರ ಮಾಡಲಾಗಲಿಲ್ಲ. ಒಂದು ಕಡೆಯಿಂದ ಕಾಕತೀಯ ರುದ್ರನು, ಮತ್ತೊಂದು ಕಡೆಯಿಂದ ಸೇವುಣ ಭಿಲ್ಲಮನು, ಇನ್ನೊಂದು ಕಡೆಯಿಂದ ಹೊಯ್ಸಳ ವೀರಬಲ್ಲಾಳನು ಚಾಲುಕ್ಯ ಸಾಮ್ರಾಜ್ಯವನ್ನು ಆಕ್ರಮಿಸಲು ಪ್ರಯತ್ನಿಸಿ ಸಫಲರಾದರು. ರುದ್ರದೇವನು ಕಾಕತೀಯ ಸಿಂಹಾಸನವನ್ನು ಏರಿದನು. ಮುಂದೆ ಈ ರಾಜ್ಯವೇ ತೆಲುಗು ರಾಜ್ಯವಾಯಿತು. ಸೇವುಣ ಭಿಲ್ಲಮನು ಯಾದವ ರಾಜ್ಯಕ್ಕೆ ಅಧಿಪತಿಯಾದ. ಮುಂದೆ ಇದು ಮಹಾರಾಷ್ಟ್ರವಾಯಿತು. ಇನ್ನುಳಿದ ಭಾಗವೆಲ್ಲವೂ ವೀರಬಲ್ಲಾಳನಿಗೆ ಸೇರಿತು. ತುಂಗಭದ್ರೆಯ ದಕ್ಷಿಣ ಪ್ರಾಂತ್ಯವೆಲ್ಲವೂ ಬರಿಯ ಕರ್ನಾಟಕವಾಗಿ ಉಳಿಯಿತು. ೧೨ನೇ ಶತಮಾನದ ಕೊನೆಯ ಹೊತ್ತಿಗೆ ಮಹಾರಾಷ್ಟ್ರ, ಆಂಧ್ರ ಹಾಗೂ ಕರ್ನಾಟಕಗಳೆಂಬ ಪ್ರತ್ಯೇಕವಾದ ಪ್ರಾಂತ್ಯಗಳ ವಿಭಜನೆಗೆ ಈಡಾಯಿತು. ಈ ಮೂರು ರಾಜ್ಯಗಳ ಅರಸರ ನಡುವೆ ನಡೆದ ಹೋರಾಟವು ನಿರಂತರವಾಗಿ ಮುಂದುವರಿಯುತ್ತಲೇ ಹೋಯಿತು. ಒಬ್ಬ ರಾಜನ ತರುವಾಯದಲ್ಲಿ ಪಟ್ಟಕ್ಕೆ ಬಂದ ರಾಜನು ಕೂಡಲೇ ತನ್ನ ನೆರೆಯ ರಾಜನೊಡನೆ ಯುದ್ಧ ಹೂಡುವುದು ಒಂದು ಸಂಪ್ರದಾಯವಾಗಿ ಹೋಯಿತು. ಆದರೂ ಈ ರಾಜ ಮನೆತನದವರು ಅವಕಾಶ ಸಿಕ್ಕಂತೆಲ್ಲ ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹ ನೀಡಿ ಬೆಳೆಸಿದರು. ಸೇವುಣ ಯಾದವರ ಕಾಲದಲ್ಲಿ 'ಹೇಮಾಡ ಪಂತ' ಎಂಬ ಹೊಸ ವಾಸ್ತುಶೈಲಿಯು ಪ್ರಚಾರದಲ್ಲಿ ಬಂತು. ಈ ಶೈಲಿಯ ಕಟ್ಟಡಗಳು ನಿಜಾಂ ಪ್ರಾಂತ್ಯದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ಇವೆ. ಹೊಯ್ಸಳರು ಹಿಂದಿನ 'ಚಾಳುಕ್ಯ ಶೈಲಿ'ಯಲ್ಲಿಯೇ ಮಾರ್ಪಾಡು ಮಾಡಿಕೊಂಡು ಹೊಯ್ಸಳರ ರೀತಿಯ ಕಟ್ಟಡಗಳ ನಿರ್ಮಾಣಕ್ಕೆ ತೊಡಗಿದರು.

ಹದಿಮೂರನೆಯ ಶತಮಾನದಲ್ಲಿ ಈ ಮೂರು ಮನೆತನಗಳ ನಡುವೆ ನಡೆದ ನಿರಂತರ ಕದನದಿಂದಾಗಿ ಉತ್ತರದವರು ಇಲ್ಲಿಗೆ ಬರಲು ಕಾರಣವಾಯಿತು. ಈ ಶತಮಾನದ ಕೊನೆಯಲ್ಲಿ ಅಲ್ಲಾವುದ್ದೀನ ಖಿಲ್ಜಿ ಅಪಾರ ಸೈನ್ಯದೊಂದಿಗೆ ಬಂದು, ದೇವಗಿರಿಯನ್ನು ಮುತ್ತಿಗೆ ಹಾಕಿ, ರಾಮಚಂದ್ರನನ್ನು ಸೋಲಿಸಿ ಅಪಾರ ಸಂಪತ್ತಿನೊಡನೆ ದೆಹಲಿಗೆ ಮರಳಿದ. ಇವನ ಹಾದಿಯಲ್ಲಿಯೇ ಮಲಿಕಾಫರ್ ಬಂದು ಕಾಕತೀಯರನ್ನು ಸೋಲಿಸಿ ಸಂಪತ್ತಿನೊಂದಿಗೆ ಹಿಂದಿರುಗಿದ. ಹೀಗೆ ಉತ್ತರದವರ ದಾಳಿಗೆ ದಕ್ಷಿಣ ಪ್ರಾಂತ್ಯದ ಸಣ್ಣಪುಟ್ಟ ರಾಜರೆಲ್ಲ ಸೋತುಹೋದರು ಹಾಗೂ ೧೪ನೇ ಶತಮಾನದ ಹೊತ್ತಿಗೆ ಕಣ್ಮರೆಯಾದರು. ಇದರಿಂದ ಉತ್ತರದವರ ದಾಳಿಗೆ ಸಿಕ್ಕ ದಕ್ಷಿಣ ಪ್ರಾಂತ್ಯದ ಜನಸಮುದಾಯಗಳು ಹಿಂಸೆಗೆ ಗುರಿಯಾದವು. ಅರಾಜಕತೆ ಹೆಚ್ಚಾಯಿತು. ಮೇಲಿಂದ ಮೇಲೆ ನಡೆದ ಸೈನಿಕ ದಾಳಿಗಳಿಗೆ ಪ್ರಜೆಗಳು ಬೇಸತ್ತರು. ಹೊಸ ರಾಜ್ಯದ ಕನಸು ಕಂಡರು. ಇದರ ಪರಿಣಾಮವಾಗಿ ವಿಜಯನಗರ ಸಾಮ್ರಾಜ್ಯ ಉದಯವಾಯಿತು. ಈ ರಾಜ್ಯ ಸ್ಥಾಪನೆಯ ಉದ್ದೇಶವು ಅನ್ಯರ ಆಕ್ರಮಣವನ್ನು ತಡೆಯುವುದು, ಸ್ವಕೀಯತೆಯನ್ನು ಕಾಪಾಡಿಕೊಳ್ಳುವುದಾಗಿತ್ತು ಎಂದು ಹೇಳಲಾಗುತ್ತದೆ. ಮುಂದೆ ವಿಜಯನಗರ ರಾಜ್ಯ ಸ್ಥಾಪನೆಯಾದ ಬೆನ್ನಲ್ಲಿಯೇ ಬಹಮನಿ ರಾಜ್ಯ ಹುಟ್ಟಿಕೊಂಡಿತು. ಇದರ ಮುಖ್ಯ ಸ್ಥಳವೇ ನಿಜಾಂ ಪ್ರಾಂತ್ಯದ ಕಲಬುರ್ಗಿಯಾಯಿತು. ಈ ಎರಡು ರಾಜ್ಯಗಳು ಬಹಳ ಕಾಲ ನಿರ್ಲಿಪ್ತದಿಂದಿರಲು ಸಾಧ್ಯವಾಗಲಿಲ್ಲ. ವಿಜಯನಗರದ ರಾಜರು ತುಂಗಭದ್ರಾನದಿಯನ್ನು ದಾಟಿ ಬಹಮನಿ ರಾಜ್ಯವನ್ನು ನುಗ್ಗುವುದು, ಬಹಮನಿ ರಾಜರು ಇವರನ್ನು ತಡೆಯಲು ಸೈನ್ಯದೊಂದಿಗೆ ತುಂಗಭದ್ರೆಯತ್ತ ಸಾಗುತ್ತ ಬರುವುದು ಆಯಿತು. ಹೀಗೆ ಈ ಎರಡು ರಾಜಪ್ರಭುತ್ವಗಳು ತಾವು ಆಕ್ರಮಿಸಿದ ಪ್ರದೇಶಗಳನ್ನೆಲ್ಲ ಅಪಾರ ನೋವಿಗೀಡು ಮಾಡಿದವು. ಒಂದು ಕಡೆ ರಾಯಚೂರು, ಇನ್ನೊಂದು ಕಡೆ ಮುದಗಲ್ಲು ಗಡಿಗಲ್ಲುಗಳಾಗಿ ನಿಂತವು. ಇದರಿಂದ ಸಾವು ನೋವಿಗೀಡಾದ ಪ್ರಾಂತ್ಯವೇ ನಿಜಾಂ ಕರ್ನಾಟಕ ಪ್ರಾಂತ್ಯವಾಗಿತ್ತು. ಸುಮಾರು ೨೫೦ವರ್ಷಗಳ ಕಾಲ ಈ ಭಾಗದ ಜನ ಸಮುದಾಯಗಳು ಯುದ್ಧದ ನೆರಳಿನಲ್ಲಿಯೇ ಬದುಕಿದರು.

ಬಹಮನಿ ರಾಜರು ದುರ್ಬಲರಾಗಲು ಅವರ ಅಧೀನದಲ್ಲಿದ್ದ ಮಾಂಡಲೀಕರು ಸ್ವತಂತ್ರರಾಗಿ ತಮ್ಮತಮ್ಮಲ್ಲಿ ಒಳ ಜಗಳಕ್ಕೆ ತೊಡಗಿದರು. ವಿಸ್ತಾರವಾದ ಬಹಮನಿ ಸಾಮ್ರಾಜ್ಯ ಒಡೆದುಹೋಗಿ ಐದು ಭಾಗಗಳಾದವು. ಆಗಲೂ ನೈಜಾಂ ಪ್ರಾಂತ್ಯದ ವಿಜಾಪುರ, ಬೀದರು ಹೊಸ ರಾಜ್ಯಗಳ ರಾಜಧಾನಿಗಳಾದವು. ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ಸೋತು ತನ್ನೆಲ್ಲ ಶಕ್ತಿಯನ್ನೂ ಕಳೆದುಕೊಂಡಿತು. ಉಳಿದವುಗಳೆಲ್ಲ ಉತ್ತರದ ಔರಂಗಜೇಬನ ದಾಳಿಗೆ ನಾಶವಾದವು. ಇದ್ದಕ್ಕಿದ್ದಂತೆ ಉಂಟಾದ ಈ ರಾಜಕೀಯ ಶೂನ್ಯದಿಂದ ಆಸಫ್ ಜಾಹಿ ಮನೆತನದವರು ಹೈದರಾಬಾದ್ ಸಂಸ್ಥಾನವನ್ನು ಆಳಲು ಪ್ರಾರಂಭಿಸಿದರು.

ನಿಜಾಮರು ಮತ್ತು ಹೈದರಾಬಾದ್ ಸಂಸ್ಥಾನ

ಔರಂಗಜೇಬನು ದಕ್ಷಿಣದಲ್ಲಿ ತನ್ನ ದಂಡಯಾತ್ರೆಯನ್ನು ಮುಗಿಸಿ ಮರಳುವಾಗ, ತನ್ನ ವಶವಾಗಿದ್ದ ಮುಂಬಯಿ, ಮದರಾಸು, ಕರ್ನಾಟಕ ಹಾಗೂ ಮೈಸೂರು ಈ ಭಾಗಗಳ ದಕ್ಷಿಣ ಪ್ರಾಂತ್ಯವನ್ನು ನೋಡಿಕೊಳ್ಳಲು ಸುಬೇದಾರರನ್ನು ನೇಮಿಸಿದ್ದ. ಕೆಲ ಸಮಯದ ನಂತರ ಸುಬೇದಾರನಾಗಿದ್ದ ಕಮರುದ್ದೀನ್ (೧೭೨೪-೪೮) (ಇವನು ಆಸಫ್ ಜಾಹಿ ಎಂಬ ಬಿರುದನ್ನು ಹೊಂದಿದ್ದ) ಸ್ವತಂತ್ರನಾಗಿ ಔರಂಗಾಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡ. ಇವನ ತರುವಾಯ ಇವನ ಮಗ ನವಾಬ್ ನಿಜಾಮ್ ಅಲಿಖಾನ್ (೧೭೬೧-೧೮೦೩) ಪಟ್ಟಕ್ಕೆ ಬಂದನು. ಈ ಹೊತ್ತಿಗಾಗಲೇ ಬ್ರಿಟಿಷರು ಭಾರತವನ್ನು ಮುತ್ತಿಬಿಟ್ಟಿದ್ದರು. ಇವನು ಮರಾಠರನ್ನು ಹತ್ತಿಕ್ಕಿದನು. ಇಂಗ್ಲಿಷರೊಡನೆ ಮೈಸೂರು ಯುದ್ಧದಲ್ಲಿ ಭಾಗಿಯಾಗಿ ಹೋರಾಡಿದನು. ಈ ಯುದ್ಧದ ನಂತರ ಮೈಸೂರಿನ ಕೆಲವು ಭಾಗಗಳು ನಿಜಾಮ್ ಅಲಿಖಾನ್‌ಗೆ ದೊರೆತವು. ಆದರೆ ಮುಂದೆ ಈಸ್ಟ್ ಇಂಡಿಯಾ ಕಂಪನಿಯು ಈ ಭಾಗಗಳನ್ನು ಮರಳಿ ಪಡೆಯಿತು. ಇವನ ತರುವಾಯ ನಿಜಾಂ-ಸಿಕಂದರ್ ಬಹದೂರ(೧೮೦೩-೧೮೨೯)ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ ಪೆಂಡಾರಿಗಳ ಹಾವಳಿ ಹೆಚ್ಚಾಗಿತ್ತು. ಇದನ್ನು ಇವನು ತಡೆದನು. ಇವನ ಕಾಲದಲ್ಲಿಯೇ ಔರಂಗಾಬಾದಿನ ಬದಲಾಗಿ ಹೈದರಾಬಾದ್ ರಾಜಧಾನಿಯಾಯಿತು.

ಇವನ ತರುವಾಯ ಹಿರಿಯ ಮಗ ನಾಜಿರುದ್-ದೌಲ್-ಬಹದ್ದೂರು(೧೮೨೯-೧೮೫೭)ರಾಜ್ಯಭಾರಕ್ಕೆ ಬಂದನು. ಇವನ ತರುವಾಯ ಬಂದ ಅಫ್ ಜಾಲುನ್-ದೌಲ್-ಬಹದ್ದೂರ್ (೧೮೫೭-೧೮೬೯) ಚೌಮೊಹಲ್ಲ ಕಟ್ಟಡಗಳನ್ನು ಕಟ್ಟಿಸಿದನು. ಇವನ ಕಾಲದಲ್ಲಿ ಸೂಬೆ ಜಿಲ್ಲೆಗಳು ರಚನೆಯಾದವು. ಸೂಬೇದಾರನನ್ನು ತಾಲೂಕುದಾರನನ್ನು ನೇಮಿಸಲಾಯಿತು. ಈ ವ್ಯವಸ್ಥೆಗಿಂತ ಹಿಂದೆ ಮೊಗಲರು ರೂಪಿಸಿದ್ದ ವ್ಯವಸ್ಥೆಯ ದೇಶಮುಖ, ದೇಶಪಾಂಡೆ, ಸರ್ ದೇಶಪಾಂಡೆ, ಪರಗಣೆದಾರ, ಕಿಲ್ಲೆದಾರ ಎಂಬ ವತನದಾರರನ್ನು ಬದಲಾಯಿಸಲಾಯಿತು. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲು ಹೊಸ ಶಿಕ್ಷಣವನ್ನು ಪಡೆದವರಿಗೆ ಅವಕಾಶಗಳು ದೊರೆತವು. ಜಾಗೀರುಗಳು ಮನ್ಸಬುಗಳು ಮಾಯವಾದವು. ಈ ನವಾಬನ ಕಾಲದಲ್ಲಿಯೇ ಆಂಗ್ಲ ಪದ್ಧತಿಯ ಶಾಲೆಗಳು ಪ್ರಾರಂಭವಾದವು. ಸಾಲಾರ್‌ಜಂಗ್ ಬಹದ್ದೂರ್ ಮದಾರುಲ್ ಮಹಾಮ್ (ದಿವಾನ) ಆದರು. ಇಂಗ್ಲಿಷ್ ಅಮಲ್ದಾರಿಯ ಪರಿಣಾಮವಾಗಿ ಸಂಸ್ಥಾನದಲ್ಲಿ ಇಂಗ್ಲಿಷ್ ಪದ್ಧತಿಗಳು ಆರಂಭವಾದವು. ಕೊತ್ವಾಲಿ, ನ್ಯಾಯ(ಅದಾಲತ್), ಬಂದೋಬಸ್ತ್ (ಭೂಮಿ ಅಳತೆ) ಮತ್ತಿತರ ಹಲವು ಖಾತೆ ಇಂಗ್ಲಿಷ್ ಮಾದರಿಯಲ್ಲಿ ಸಾಗಿದವು. ಇವನ ತರುವಾಯ ಮಗ ಮೀರ್ ಮಹಬೂಬ್ ಅಲಿಖಾನ್ (೧೮೬೯-೧೯೧೧) ರಾಜ್ಯಭಾರಕ್ಕೆ ಬಂದು ಹಿಂದಿನ ವ್ಯವಸ್ಥೆಗೆ (ಅಂದರೆ ಇಂಗ್ಲಿಷ್ ಪದ್ಧತಿಯಂತೆ) ಅನುಗುಣವಾಗಿ ಆಡಳಿತ ನಡೆಸಿದ. ಈ ಕಾಲದಲ್ಲಿ ಹೈದರಾಬಾದಿನಿಂದ ಕಲಬುರ್ಗಿಗೆ ಉಗಿಬಂಡಿ ವ್ಯವಸ್ಥೆಯಾಯಿತು. ಕ್ಯಾಬಿನೆಟ್ ಕೌನ್ಸಿಲ್ ಸ್ಥಾಪನೆಯಾಯಿತು. ೧೮೮೫ರಲ್ಲಿ 'ಸತಿಪದ್ಧತಿ'ಯು ನಿಂತಿತು. ೧೮೭೪ರಲ್ಲಿ ಸರಕಾರಿ ಭಾಷೆ ಫಾರಸಿಯ ಸ್ಥಾನದಲ್ಲಿ ಉರ್ದು ಭಾಷೆ ಬಂದಿತು. ಹೈಕೋರ್ಟು ಸ್ಥಾಪಿತವಾಯಿತು. ಇವನ ಆಳ್ವಿಕೆಯಲ್ಲಿ ಹೈದರಾಬಾದಿನ ನಾಣ್ಯವು 'ಮಹಬೂಬಿಯಾ' ಎಂಬ ಹೆಸರಿನಿಂದ ಪ್ರಚಾರಕ್ಕೆ ಬಂತು. ಇವನ ತರುವಾಯ ನವಾಬ್ ಮೀರ್ ಉಸ್ಮಾನ್ ಅಲಿಖಾನ್ ಬಹಾದ್ದೂರ್ (೧೯೧೧-೧೯೪೮) ಸಂಸ್ಥಾನದ ಅಧಿಕಾರ ಹಿಡಿದನು. ಈ ನವಾಬನಿಗೆ ಕಟ್ಟಡಗಳ ಮೇಲೆ ವಿಶೇಷ ಆಸಕ್ತಿಯಿತ್ತು. ಹೈದರಾಬಾದಿನ ಹೈಕೋರ್ಟು, ಉಸ್ಮಾನಿಯಾ ಆಸ್ಪತ್ರೆ, ಸಿಟಿಕಾಲೇಜ್, ಆಸಫಿಯಾ ಗ್ರಂಥಾಲಯ, ಯುನಾನೀ ಆಸ್ಪತ್ರೆ, ಉಸ್ಮಾನಿಯಾ ವಿಶ್ವವಿದ್ಯಾಲಯ ಮುಂತಾದ ಕಟ್ಟಡಗಳನ್ನು ಈತ ಕಟ್ಟಿಸಿದನು. ಹಿಯಾಮತ್ ಸಾಗರ, ನಿಜಾಮ ಸಾಗರಗಳು ಇವನ ಕಾಲದಲ್ಲಿ ಆದವು. ಬ್ರಿಟಿಷರು ಅನೇಕ ಸವಲತ್ತುಗಳನ್ನು ನೀಡಿದ್ದರು. ಮೊದಲಿನಿಂದಲೂ ನಿಜಾಮರು ಪ್ರತ್ಯೇಕವಾದ ಸೈನ್ಯ, ನಾಣ್ಯ, ಸಾರಿಗೆ, ರೈಲ್ವೇ, ಅಂಚೆ, ಆಕಾಶವಾಣಿ, ಶಿಕ್ಷಣ ಮುಂತಾದ ಸೌಲಭ್ಯಗಳನ್ನು ಹೊಂದಿದ್ದರು. ಒಂದು ಪೈಸೆಯಿಂದ ನೂರು ರೂಪಾಯಿವರೆಗಿನ ನಾಣ್ಯಗಳ ಮೇಲೆ ನಿಜಾಮನ ಮುದ್ರೆಯಿತ್ತು. ಈ ನಾಣ್ಯಗಳಿಗೆ ಪ್ರಪಂಚದ ಮಾರುಕಟ್ಟೆಯಲ್ಲಿ ವಿನಿಮಯದ ದರವು ಗೊತ್ತಾಗಿ ಅಂತರರಾಷ್ಟ್ರೀಯ ಮಾನ್ಯತೆಯೂ ಇತ್ತು. ಮೀರ್ ಉಸ್ಮಾನ್ ಅಲಿಖಾನನು ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾ, ತುರ್ಕಸ್ಥಾನ, ಕೆನಡಾ ಮುಂತಾದ ದೇಶಗಳ ಜತೆ ಸಂಪರ್ಕ ಹೊಂದಿದ್ದ. ೧೯೪೭ಕ್ಕೆ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಈ ನವಾಬನು ಅಧಿಕಾರವನ್ನು ಬಿಟ್ಟುಕೊಡಲಿಲ್ಲ. 'ಹೈದರಾಬಾದ್ ಸಂಸ್ಥಾನ'ವನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಲು ಒಪ್ಪದೆ ಸ್ವತಂತ್ರವಾಗಿ ಉಳಿಯಲು ಇಚ್ಛಿಸಿದನು.

ಭಾರತದಲ್ಲಿ ಸುಮಾರು ೫೫೭ ಸಂಸ್ಥಾನಗಳಿದ್ದವು. ಇವುಗಳಲ್ಲಿ 'ಹೈದರಾಬಾದ್ ಸಂಸ್ಥಾನ'ವೂ ಒಂದು. ಭೌಗೋಳಿಕವಾಗಿ ಮತ್ತು ಜನಸಂಖ್ಯೆ ದೃಷ್ಟಿಯಿಂದ ಬಹುದೊಡ್ಡ ಸಂಸ್ಥಾನವಾಗಿತ್ತು. ತೆಲಂಗಾಣದ ಎಂಟು ಜಿಲ್ಲೆಗಳು, ಮರಾಠವಾಡದ ಐದು ಜಿಲ್ಲೆಗಳು, ಕರ್ನಾಟಕದ ಮೂರು ಜಿಲ್ಲೆಗಳು -ಹೀಗೆ ಹದಿನಾರು ಜಿಲ್ಲೆಗಳ ಪ್ರದೇಶವನ್ನು ಹೊಂದಿತ್ತು. ತೆಲಂಗಾಣದ ಎಂಬತ್ತು ಲಕ್ಷ, ಮರಾಠವಾಡದ ನಲವತ್ತು ಲಕ್ಷ, ಕರ್ನಾಟಕದ ಇಪ್ಪತ್ತು ಲಕ್ಷ -ಹೀಗೆ ಒಂದೂವರೆ ಕೋಟಿ ಜನಸಂಖ್ಯೆಯನ್ನು ಹೊಂದಿತ್ತು. ಸಂಸ್ಥಾನದಲ್ಲಿ ಐದು ಕೋಟಿ ಎಕರೆ ಜಮೀನು ಸಾಗುವಳಿಯಲ್ಲಿತ್ತು. ಇದರಲ್ಲಿ ಎರಡು ಕೋಟಿ ಎಕರೆ ಜಮೀನು ಜಹಗೀರುದಾರರ, ಒಂದು ಕೋಟಿ ಎಕರೆ ಜಾಮೀನು ದೇಶಮುಖ ಹಾಗೂ ದೇಸಾಯಿಗಳ ಒಡೆತನದಲ್ಲಿತ್ತು. ಸ್ವತಃ ನಿಜಾಮನಿಗೆ ಐವತ್ತು ಲಕ್ಷ ಎಕರೆಗಿಂತಲೂ ಹೆಚ್ಚು ಜಮೀನಿತ್ತು. ಇಡೀ ಸಂಸ್ಥಾನದಲ್ಲಿ ಬಹುಸಂಖ್ಯಾತರು ಹಿಂದುಗಳು. ಮುಸ್ಲಿಮರು ಅಲ್ಪಸಂಖ್ಯಾತರಾಗಿದ್ದರು.

'ಹೈದರಾಬಾದ್ ಕರ್ನಾಟಕ'

'ಹೈದರಾಬಾದ್ ಸಂಸ್ಥಾನ'ದಲ್ಲಿ ಕರ್ನಾಟಕದ ಮೂರು ಜಿಲ್ಲೆಗಳಿದ್ದವು. ಬೀದರ, ಕಲ್ಬುರ್ಗಿ, ರಾಯಚೂರು ಜಿಲ್ಲೆಗಳ ಈ ಪ್ರದೇಶವನ್ನು ಸಾಮಾನ್ಯವಾಗಿ 'ಹೈದರಾಬಾದ್ ಕರ್ನಾಟಕ'ವೆಂದು ಕರೆಯಲಾಗುತ್ತದೆ. 'ನಿಜಾಂ ಪ್ರಾಂತ್ಯ', 'ನೈಜಾಂ ಕರ್ನಾಟಕ'ವೆಂತಲೂ ಕರೆಯಲಾಗುತ್ತದೆ. ಇದು ಸುಮಾರು ಇಪ್ಪತ್ತು ಲಕ್ಷಕ್ಕಿಂತಲೂ ಅಧಿಕ ಜನಸಂಖ್ಯೆಯನ್ನು ಹೊಂದಿತ್ತು. ಈ ಭಾಗದ ಸಾಮಾನ್ಯ ಜನತೆ ರಾಜಕೀಯ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ, ನಿಜಾಮರ ವಿರುದ್ಧ, ಜಹಗೀರುದಾರರ ವಿರುದ್ಧ ಹೀಗೆ ಮೂರು ಪ್ರಭುತ್ವಗಳ ವಿರುದ್ಧ ಹೋರಾಟ ನಡೆಸಬೇಕಾಗಿ ಬಂತು. ಬ್ರಿಟಿಷರ ಅಧೀನದಲ್ಲಿ ನಿಜಾಮರಿದ್ದರು. ನಿಜಾಮರ ಅಧೀನದಲ್ಲಿ ಜಹಗೀರದಾರರಿದ್ದರು. ಇವರ ಅಧೀನದಲ್ಲಿ ದೇಶಮುಖ, ದೇಸಾಯಿ, ಪಟೇಲರಿದ್ದರು. ಸಾಮಾನ್ಯ ಜನರು ಇವರ ಅಧೀನದಲ್ಲಿದ್ದರು. ಹೀಗಾಗಿ ಹಲವು ಪ್ರಭುತ್ವಗಳ ಕಪಿಮುಷ್ಠಿಯಲ್ಲಿದ್ದ ಸಾಮಾನ್ಯ ಜನರು ಈ ಎಲ್ಲ ಪ್ರಭುತ್ವಗಳ ವಿರುದ್ಧ ಹೋರಾಡಬೇಕಾಗಿ ಬಂತು.

ನಿಜಾಮರು ಬ್ರಿಟಿಷರ ಅಧೀನದಲ್ಲಿದ್ದರೂ ಆಡಳಿತಾತ್ಮಕವಾಗಿ ಅನೇಕ ವಿಷಯಗಳಲ್ಲಿ ಸ್ವತಂತ್ರರಾಗಿದ್ದರು. ಉರ್ದು ರಾಜ್ಯದ ಆಡಳಿತ ಭಾಷೆಯಾಗಿಯೂ, ಶಿಕ್ಷಣದ ಭಾಷೆಯಾಗಿಯೂ ಪ್ರಭುತ್ವ ಪಡೆದಿತ್ತು. ಎಲ್ಲ ಮಾಧ್ಯಮಗಳು ನಿಜಾಮರ ವಶದಲ್ಲಿದ್ದವು. ಭಾರತದ ಜನತೆ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ಬ್ರಿಟಿಷರ ಜತೆ ಹೋರಾಟಕ್ಕಿಳಿದಾಗ, ನಿಜಾಮನ ವಿರುದ್ಧವಾಗಿ 'ಹೈದರಾಬಾದ್ ಕರ್ನಾಟಕ'ದ ಜನತೆ ಹೋರಾಡಬೇಕಾಗಿ ಬಂತು. ಕೊನೆಯ ನಿಜಾಮ ಮೀರ್ ಉಸ್ಮಾನ್ ಅಲಿಖಾನ್ ಬಹಾದ್ದೂರ್ (೧೯೧೧-೧೯೪೮) ಕಾಲದಲ್ಲಿ ಇಲ್ಲಿಯ ಪ್ರಜೆಗಳಲ್ಲಿ ಸ್ವಾತಂತ್ರ್ಯದ ಹಂಬಲ ಹೆಚ್ಚಾಯಿತು. ಇದಕ್ಕೆ ಸಂಸ್ಥಾನದ ಹೊರಗೆ ಅನೇಕ ರಾಷ್ಟ್ರೀಯ ನಾಯಕರ ನೇತೃತ್ವದಲ್ಲಿ ನಡೆಯುವ ಚಳುವಳಿಗಳು ಸತ್ಯಾಗ್ರಹಗಳು ಕಾರಣವಾಗಿ, ಇಲ್ಲಿಯ ಪ್ರಜೆಗಳಿಗೆ ಸ್ಫೂರ್ತಿಯನ್ನು ನೀಡಿದವು. ೧೯೦೦ರ ನಂತರ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ತೀವ್ರ ಸ್ವರೂಪದ ಹೋರಾಟ ಕಂಡು ಬಂದಾಗ, ಆಡಳಿತದಲ್ಲಿ ಸುಧಾರಣೆಗಳು ಮೂಡಿದವು. ೧೯೧೯ರಲ್ಲಿ 'ಮಾಂಟೆಗೋ ಚೇಮ್ಸ ಫೋರ್ಡ್' ಸುಧಾರಣೆಗಳು ಜಾರಿಗೆ ಬಂದವು. ಆದರೆ ಇವು ಹೈದರಾಬಾದ್ ಸಂಸ್ಥಾನದಲ್ಲಿ ಯಾವ ಪರಿಣಾಮವನ್ನುಂಟು ಮಾಡಲಿಲ್ಲ. ಇದರಿಂದ ಪ್ರಜೆಗಳಲ್ಲಿ ಅಸಮಾಧಾನ ಹೆಚ್ಚಾಯಿತು. ಇದನ್ನು ಕಂಡ ನಿಜಾಮ ಒಂದು ಫರಮಾನ ಹೊರಡಿಸಿ, ಶಾಸನ ಸಭೆಗೆ ಬೇಕಾದ ಮಾಹಿತಿಯನ್ನು ಒದಗಿಸಲು ಸರ್ ಅಲೀ ಇಮಾಮರನ್ನು ನೇಮಿಸಿದ. ಇವರಿಗೆ ಸಹಾಯ ಮಾಡಲೆಂದು ರಾಯಬಾಲ್ ಮುಕ್ಕುಂದ ಅವರನ್ನೂ ಸೇರಿಸಿಕೊಂಡರು. ಇವರು ಕಾರ್ಯನಿರ್ವಹಿಸಿ ೧೯೨೧ರಲ್ಲಿ ತಮ್ಮ ವರದಿಯನ್ನು ಶಾಸನಸಭೆಗೆ ಒಪ್ಪಿಸಿದರು. ಆದರೆ ಈ ವರದಿಯನ್ನು ನಿಜಾಮ ಜಾರಿಗೆ ತರಲಿಲ್ಲ. ಪ್ರಜೆಗಳಲ್ಲಿ ತೀವ್ರ ಸ್ವರೂಪದ ಅಸಮಾಧಾನ ಕಾಣಿಸಿತು. ಈ ಅಸಮಾಧಾನವನ್ನು ಅಡಗಿಸಲು ನಿಜಾಮ ಬ್ರಿಟಿಷರ ಅಧಿಕಾರಿಗಳನ್ನು ನೇಮಿಸಿಕೊಂಡು ಜನತೆಯ ಮೇಲೆ ಅಧಿಕಾರವನ್ನು ಚಲಾಯಿಸಿದ. ಸಂಸ್ಥಾನದ ಪ್ರಜೆಗಳು 'ಸುಧಾರಣಾ ಸಮಿತಿ'ಯನ್ನು ರಚಿಸಿಕೊಂಡು ಸಾಮೂಹಿಕವಾಗಿ ಸಂಘಟನೆಗೊಂಡು ನಿಜಾಮನ ಮೇಲೆ ಒತ್ತಡ ಹೇರಲು ನಿಂತರು. ಇದನ್ನು ತಡೆಯಲು ನಿಜಾಮನು 'ಗಸ್ತಿ ನಂಬರ್ ೫೩' ಜಾರಿಗೆ ತಂದನು. ಇದರ ಪ್ರಕಾರ ಪ್ರಜೆಗಳು ಯಾವುದೇ ಗುಂಪು ಚಟುವಟಿಕೆಗಳನ್ನೂ ಸರಕಾರದ ಅನುಮತಿಯಿಲ್ಲದೆ ಮಾಡುವಂತಿಲ್ಲ. ಇದನ್ನೂ ಎದುರಿಸಲು ಪ್ರಜೆಗಳು ನಿಜಾಮ ಸರಕಾರಕ್ಕೆ ನಾಗರಿಕ ಹಕ್ಕುಗಳ ಬಗೆಗೆ ತಿಳುವಳಿಕೆಯನ್ನು ನೀಡಲು ಪ್ರಯತ್ನಿಸಿದರು. ಹೈದರಾಬಾದ್ ಕರ್ನಾಟಕದಲ್ಲಿ ಅನೇಕ ಮುಖಂಡರು ನಿಜಾಮನ ವಿರುದ್ಧ ಹೋರಾಡಲು ಸಂಘಟನಾತ್ಮಕ ಚಟುವಟಿಕೆಗಳನ್ನು ರೂಪಿಸಿಕೊಂಡರು. ಪಂಡಿತ ತಾರಾನಾಥರು ನಿಜಾಮನ ವಿರುದ್ಧ "ಇಂಡಿಯನ್ ಡಯ್ಯಾರ್" ಎಂಬ ಉಗ್ರ ಲೇಖನವನ್ನು ಬರೆದು ಪ್ರಕಟಿಸಿದರು. 'ಇಂರೋಚ್' ಎಂಬ ಉರ್ದು ಪತ್ರಿಕೆಯ ಸಂಪಾದಕ ಷೋಯಬುಲ್ಲಾ ಖಾನರು

'ಸ್ವಾತಂತ್ರ್ಯದ ಪರಿಕಲ್ಪನೆ', 'ಜಮೀನ್ದಾರಿ ಪದ್ಧತಿಯ ದೋಷಗಳು', 'ತೆಲಂಗಾಣದ ಸಮತಾವಾದಿಗಳ ಸಿದ್ಧಾಂತ' ಮುಂತಾದ ಲೇಖನಗಳನ್ನು ಬರೆದರು. ಈ ಸಂಸ್ಥಾನದಲ್ಲಿ ನಡೆಯುವ ವಿದ್ಯಮಾನಗಳನ್ನು ರಾಷ್ಟ್ರದ ನಾಯಕರೂ ಗಮನಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಬೆಂಬಲ ನೀಡತೊಡಗಿದರು. ೧೯೨೦ರಲ್ಲಿ ವಿದೇಶಿ ಬಟ್ಟೆಗಳ ಬಹಿಷ್ಕಾರ ಆಂದೋಲನ ಶುರುವಾಯಿತು. ಗಾಂಧೀಜಿಯವರು ಮದ್ರಾಸಿನಿಂದ ಬೊಂಬಾಯಿಗೆ ಹೋಗುವಾಗ ರಾಯಚೂರು ಮಾರ್ಗವಾಗಿ ಹೋದರು. ರಾಷ್ಟ್ರೀಯ ನಾಯಕನನ್ನು ರೈಲ್ವೇ ನಿಲ್ದಾಣದಲ್ಲಿ ನೋಡಿದ ಜನರು, ಅವರ ಕರೆಯ ಮೇರೆಗೆ ಸ್ವದೇಶಿ ಬಟ್ಟೆಗಳ ಬಳಕೆಗೆ ಬದ್ಧರಾದರು. ಜೊತೆಗೆ ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿ ಪಡೆದುಕೊಂಡರು.

ಜನತೆಯ ಸಂಘಟನೆಯಾದ 'ಹೈದರಾಬಾದ್ ರಾಜಕೀಯ ಪರಿಷತ್ತು' ಅಧಿವೇಶನವು ೧೯೨೩ರಲ್ಲಿ ಕಾಕಿನಾಡದಲ್ಲಿ ನಡೆಯಿತು. ಸರೋಜಿನಿ ನಾಯ್ಡು, ಸಿ.ಆರ್.ದಾಸ್. ಹಾಗೂ ಸರದಾರ ವಲ್ಲಭಬಾಯಿ ಪಟೇಲರು ಬಂದು, ಪ್ರಜೆಗಳಿಗೆ ಜವಾಬ್ದಾರಿಯ ಸರಕಾರವನ್ನು ಸ್ಥಾಪಿಸುವ ಬಗ್ಗೆ ಕರೆ ನೀಡಿದರು. ಈ ಪರಿಷತ್ತು ರಾಜಕೀಯ ಚಟುವಟಿಕೆಗಳನ್ನು ನಿಜಾಮನ ವಿರುದ್ಧ ಹಮ್ಮಿಕೊಂಡಿತು. ೧೯೨೬ರಲ್ಲಿ ಮುಂಬೈಯಲ್ಲಿ ೧೯೨೮ರಲ್ಲಿ ಪುಣೆಯಲ್ಲಿ ಸಭೆ ನಡೆಸಿತು. ಮೂರನೆಯ ಸಭೆಗೆ ನೇತಾಜಿ ಸುಭಾಷ್ ಚಂದ್ರಬೋಸ್ ಬಂದು ಭಾಷಣ ಮಾಡಿದರು. ಹೈದರಾಬಾದ್ ಸಂಸ್ಥಾನದ ನಿಜಾಮನ ರಾಜಕೀಯ ಹಾಗೂ ಸಾಮಾಜಿಕ ನಿಲುವುಗಳನ್ನು ಖಂಡಿಸಲಾಯಿತು. ರಾಷ್ಟ್ರದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆಯುವ ಚಟುವಟಿಕೆ ಸತ್ಯಾಗ್ರಹಗಳೆಲ್ಲ 'ಹೈದರಾಬಾದ್ ಕರ್ನಾಟಕ'ದ ಜನತೆಗೆ ಸ್ಫೂರ್ತಿ ನೀಡಿದವು. ಇದರಿಂದ 'ಹೈದರಾಬಾದ್ ಸ್ವದೇಶಿ ಲೀಗ್' 'ನಿಜಾಮ ಪ್ರಜಾ ಪರಿಷತ್ '(೧೯೩೫) 'ಹೈದರಾಬಾದ್ ಪೀಪಲ್ಸ್ ಕನ್‌ವೆನ್‌ಷನ್' ಮುಂತಾದ ಜನ ಸಂಘಟನೆಯ ಸಂಸ್ಥೆಗಳು ಹುಟ್ಟಿಕೊಂಡು ನಿಜಾಮನ ವಿರುದ್ಧ ಹೋರಾಟಕ್ಕೆ ನಿಂತವು.

೧೯೩೪ರಲ್ಲಿ 'ಕನ್ನಡ ಸಾಹಿತ್ಯ ಸಮ್ಮೇಳನ'ವು ರಾಯಚೂರಿನಲ್ಲಿ ನಡೆಯಿತು. ಈ ಸಮ್ಮೇಳನದ ಅಧ್ಯಕ್ಷರು ಪಂಜೆ ಮಂಗೇಶರಾಯರು. ನಾಡಿನ ಪ್ರತಿಭಾವಂತ ಸಾಹಿತಿಗಳು, ರಾಜಕೀಯ ಮುಖಂಡರು, ಹೋರಾಟಗಾರರು ಸಮ್ಮೇಳನಕ್ಕೆ ಬಂದಿದ್ದರು. ಸಂಸ್ಥಾನದ ಹಾಗೂ ದೇಶದ ರಾಜಕೀಯ ಪರಿಸ್ಥಿತಿಗಳನ್ನು ಕುರಿತು ಇವರು ಚರ್ಚಿಸಿದರು. ಇದೇ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕದ ಪ್ರಜ್ಞಾವಂತ ಸಾಹಿತಿಗಳು ಕೂಡಿಕೊಂಡು, "ನಿಜಾಮ ಕರ್ನಾಟಕ ಪರಿಷತ್ತ'ನ್ನು ಸ್ಥಾಪಿಸಿದರು. ಉರ್ದು ಭಾಷಾ ಹೇರಿಕೆಯನ್ನು ಖಂಡಿಸುವ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡುವ ರಾಜಕೀಯ ನಿಲುವುಗಳನ್ನು ತೆಗೆದುಕೊಂಡರು. ನಂತರ ಈ ಪರಿಷತ್ತಿನ ಸಭೆಗಳು ಬೀದರ, ಕಲ್ಬುರ್ಗಿ, ರಾಯಚೂರಿನ ಅನೇಕ ಕಡೆಗಳಲ್ಲಿ ನಡೆದವು. ಕನ್ನಡದ ಮುಖಂಡರು ಭಾಷೆ, ಸಾಹಿತ್ಯ, ಸಂಸ್ಕೃತಿ ಮುಂತಾದವುಗಳ ಬಗ್ಗೆ ಅಭಿಮಾನ ಬೆಳೆಯುವಂತೆ ಪ್ರೇರೇಪಿಸಿದರು. ರಾಜಕೀಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಜ್ಜಾದರು. ಇಂಥ ಅನೇಕ ಘಟನೆಗಳು ನಡೆದು ೧೯೩೮ರಲ್ಲಿ 'ಹೈದರಾಬಾದ್ ಸಂಸ್ಥಾನ ಕಾಂಗ್ರೆಸ್' ಸ್ಥಾಪನೆಯಾಯಿತು. ಮೊದಲೇ ಕಾಂಗ್ರೆಸ್ ಎಂದರೆ ಉರಿಯುತ್ತಿದ್ದ ನಿಜಾಮನಿಗೆ ಈ ಸಂಸ್ಥಾನ ಕಾಂಗ್ರೆಸ್ ಸ್ಥಾಪನೆ, ಅದರ ಚಟುವಟಿಕೆಗಳನ್ನು ತಡೆಯಲಾಗಲಿಲ್ಲ. ಸ್ವಾಮಿ ರಮಾನಂದ ತೀರ್ಥರು ಈ ಸಂಸ್ಥೆಯ ಮುಖಂಡರಾಗಿ ಹೈದರಾಬಾದ್ ಕರ್ನಾಟಕ ಭಾಗಗಳಲ್ಲಿ ಸಂಚರಿಸಿ ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ತೀವ್ರ ಸ್ವರೂಪದ ಹಂಬಲವನ್ನು ಹುಟ್ಟಿಸಿದರು. ಸ್ಥಳೀಯವಾಗಿ ಅನೇಕ ಮುಖಂಡರು ನಿಜಾಮನ ವಿರುದ್ಧ ಹೋರಾಡಲು ನಿಂತರು. ಇದೇ ಸಂದರ್ಭದಲ್ಲಿ ರಾಘವೇಂದ್ರ ದೇಸಾಯಿಯವರು ನಿಜಾಮನ ಕಾಲೇಜಿನಿಂದ ಹೊರಬಂದು, ಕುಕನೂರಿನಲ್ಲಿ ವಿದ್ಯಾನಂದ ಗುರುಕುಲ ಸ್ಥಾಪಿಸಿ, ದೊಡ್ಡ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಾಗಿ ಬೆಳೆಯಲು ಶ್ರಮಿಸಿದರು. ಈ ಸಂಸ್ಥೆ ಸಂಸ್ಥಾನದಲ್ಲಿ ರಾಷ್ಟ್ರೀಯ ಪ್ರಜ್ಞೆಗೆ ಸ್ಫೂರ್ತಿಯಾಯಿತು. ಹಲವು ಕಡೆ ಶಿಕ್ಷಣ ಸಂಸ್ಥೆಗಳು ಹಾಗೂ ಗ್ರಂಥಾಲಯಗಳು ಆರಂಭವಾದವು. ವಾಚನಾಲಯಗಳಂತೂ ಬಿರುಸಿನಿಂದಲೇ ಹುಟ್ಟಿಕೊಂಡವು. ವಿಠ್ಠಲರಾವ್ ದೇವಾಲ್ಗಾಂವಕರ್ ಕಲ್ಬುರ್ಗಿಯಲ್ಲಿ ರಾಷ್ಟ್ರೀಯ ಗ್ರಂಥಾಲಯ

ಸಂಘವನ್ನೂ, ಶರಣಬಸವೇಶ್ವರ ದಾಸೋಹ ಪೀಠವು ವಾಚನಾಲಯವನ್ನು ಸ್ಥಾಪಿಸಿದವು. ಉಸ್ಮಾನಿಯಾ ಮಾಧ್ಯಮಿಕ ಶಾಲೆಯ ಉಪಾಧ್ಯಾಯ ಬಳಗವು ಚಿಂಚೋಳಿಯಲ್ಲಿ ಭಾರತ ವಾಚನಾಲಯವನ್ನು ತೆರೆಯಿತು. ರಾಯಚೂರು, ಗಂಗಾವತಿ, ಬಸವಕಲ್ಯಾಣ, ಆಡೂರು, ಇಟಗಿ, ಚಿತಾಪುರ ಮುಂತಾದ ಹೈದರಾಬಾದ್ ಕರ್ನಾಟಕದ ಹಲವೆಡೆಯಲ್ಲಿ ಗ್ರಂಥಾಲಯ ಹಾಗೂ ವಾಚನಾಲಯಗಳು ಶುರುವಾಗಿ ೧೯೩೦ರ ನಂತರ ಚಳುವಳಿಯ ರೂಪದಲ್ಲಿ ಕಾರ್ಯನಿರ್ವಹಿಸಿದವು.

'ವಂದೇ ಮಾತರಂ' ಚಳುವಳಿ ದೇಶದಾದ್ಯಂತ ಹಬ್ಬಿತು. ಉಸ್ಮಾನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ 'ವಂದೇ ಮಾತರಂ' ಹಾಡಲು ನಿರ್ಬಂಧಿಸಲಾಯಿತು. ಇದರಿಂದ ಚಳುವಳಿಗೆ ಮತ್ತಷ್ಟು ಶಕ್ತಿ ಬಂದಂತಾಯಿತು. ೧೯೪೨ರ 'ಚಲೇ ಜಾವ್' ಚಳುವಳಿಯಲ್ಲಿ ಹೈದರಾಬಾದ್ ಕರ್ನಾಟಕದ ಜನತೆ ಪಾಲ್ಗೊಂಡು ಸೆರೆವಾಸ ಕಂಡಿತು. ಹೀಗೆ ರಾಷ್ಟ್ರೀಯ ಚಳುವಳಿಗಳು, ಸತ್ಯಾಗ್ರಹಗಳು ಇಲ್ಲಿಯ ಜನರಿಗೆ ಪ್ರೇರಣೆ ನೀಡುತ್ತಲೇ ನಿಜಾಮನಿಂದ ಮುಕ್ತರಾಗಲು ಪ್ರೇರೇಪಿಸಿದವು. ಇದರಿಂದ ಹುಟ್ಟಿಕೊಂಡ ಅನೇಕ ಸಂಘಟನೆಗಳು, ಸಂಘ-ಸಂಸ್ಥೆಗಳು ನಿಜಾಮನಿಗೆ ಒತ್ತಡ ಹೇರಿದವು. ಇವೆಲ್ಲ 'ಜಾತೀಯ' ಸಂಘಟನೆಗಳೆಂದು, ಆದ್ದರಿಂದ ಇವು ಯಾವುವೂ ಸಭೆ ಸೇರುವಂತಿಲ್ಲವೆಂದು ನಿಜಾಮ ನಿಷೇಧಿಸಿಬಿಟ್ಟನು. ಆದರೆ ೧೯೪೦ರ ಹೊತ್ತಿಗೆ ಮುನ್ನವೆ ಹುಟ್ಟಿಕೊಂಡಿದ್ದ 'ಇತ್ತೇಹಾದುಲ್ ಮುಸಲ್ಮೀನ್' ಎಂಬ ಮತೀಯ ಸಂಘಟನೆ ಮತ್ತು ಅದರ ಚಟುವಟಿಕೆಗಳಿಗೆ ತಾನೇ ಬೆಂಬಲವಿತ್ತನು. ಹೈದರಾಬಾದ್ ಸಂಸ್ಥಾನದಲ್ಲಿ ಅಲ್ಪಸಂಖ್ಯಾತರಾಗಿದ್ದ ಮುಸ್ಲಿಮರನ್ನು 'ಇಸ್ಲಾಮ್ ಖತರೇಮೇಹೈ' ಎಂಬ ವಾದವನ್ನು ಮುಂದುಮಾಡಿ ಕೆರಳಿಸಲಾಯಿತು. ಇದಕ್ಕೆ ಬೆಂಬಲವಾಗಿ 'ಇತ್ತೇಹಾದುಲ್ ಮುಸಲ್ಮೀನ್' ಸಂಸ್ಥೆ ನಿಂತಿತು. ಇದೇ ಸಮಯದಲ್ಲಿ ನಿಜಾಮನು ಒಂದು ಫರ್ಮಾನನ್ನು ಹೊರಡಿಸಿದ. 'ಮುಸಲ್ಮಾನರು ಬೇರೆ ಜಾತಿಯವರಿಂದ ಜಮೀನು ಖರೀದಿಸಬಹುದು. ಆದರೆ ಬೇರೆ ಜಾತಿಯವರು ಮುಸಲ್ಮಾನರ ಜಮೀನನ್ನು ಖರೀದಿಸಬಾರದು. ಜಮೀನು ಒತ್ತೆ ಹಾಕಿ ಸಾಲ ಪಡೆದವರು(ದಲಿತರು) ಮುಸಲ್ಮಾನರಾದರೆ ಅಂಥವರು ಸಾಲದಿಂದ ಮುಕ್ತರು.' ದಲಿತರು ಭೂಮಾಲಿಕರಲ್ಲಿ ಮಾಡಿದ್ದ ಸಾಲದ ಹೊರೆಯಿಂದ ಹೊರಬರಲು ಇದರಿಂದ ಅವಕಾಶ ದೊರೆಯಿತು. ಮತಾಂತರದ ಕೆಲಸ ಭರದಿಂದ ನಡೆಯಿತು. ಇದನ್ನು ತಡೆಯಲು 'ಆರ್ಯ ಸಮಾಜ' 'ಹಿಂದೂ ಸಿವಿಲ್ ಲಿಬರ್ಟೀಸ್ ಲೀಗ್' ಚುರುಕಾದವು.

ಆಗಸ್ಟ್ ೧೫, ೧೯೪೭ರಂದು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಲಭಿಸಿತು. ಆದರೆ 'ಹೈದರಾಬಾದ್ ಸಂಸ್ಥಾನ'ಕ್ಕೆ ಅದು ದೊರೆಯಲಿಲ್ಲ. ಬ್ರಿಟಿಷರು ಭಾರತವನ್ನೂ ಬಿಟ್ಟು ಹೊರಡುವ ಮುನ್ನ ಸಂಸ್ಥಾನಿಕರಿಗೆ, 'ಸ್ವತಂತ್ರ ಭಾರತದಲ್ಲಿ ವಿಲೀನವಾಗಹುದು ಇಲ್ಲ ಸ್ವತಂತ್ರವಾಗಿಯೇ ಮುಂದುವರಿಯಬಹುದು' ಎಂಬ ಆಯ್ಕೆಯ ಪ್ರಶ್ನೆಯನ್ನು ಮುಂದಿಟ್ಟರು. ಇದರ ಪರಿಣಾಮವಾಗಿಯೇ ನಿಜಾಮನು ಜೂನ್ ೨೬, ೧೯೪೭ರಂದು 'ಹೈದರಾಬಾದ್ ಸಂಸ್ಥಾನ'ವು ಸ್ವತಂತ್ರವಾಗಿಯೇ ಮುಂದುವರಿಯುವುದು. ಪ್ರಜೆಗಳು ಸಂಸ್ಥಾನಕ್ಕೆ ನಿಷ್ಠೆಯಿಂದಿರಬೇಕು'ಎಂದು ಒಂದು ಫರ್ಮಾನು ಹೊರಡಿಸಿದ. ಆಗಸ್ಟ್ -೧೫, ೧೯೪೭ರಂದು ಭಾರತಕ್ಕೆ ಸಂಭ್ರಮದ ದಿನವಾದರೆ, ಭಾರತದ ಒಳಗಿರುವ ಈ ಸಂಸ್ಥಾನದ ಜನರಿಗೆ ಆತಂಕದ ದಿನವಾಯಿತು. ಭಾರತ ರಾಷ್ಟ್ರದ ಧ್ವಜವನ್ನು ಎಲ್ಲೂ ಹಾರಿಸಬಾರದೆಂದು ನಿಜಾಂ ಸರಕಾರ ಕಠೋರ ನಿರ್ಬಂಧ ವಿಧಿಸಿತು. ಸ್ವಾಭಿಮಾನಿ ಜನ ರಾಷ್ಟ್ರಧ್ವಜ ಹಾರಿಸಿ ಬಂಧನಕ್ಕೊಳಗಾದರು, ಹಿಂಸೆಗೆ ಗುರಿಯಾದರು.

ರಜಾಕಾರರು ಮತ್ತು ಹೈದರಾಬಾದ್ ಕರ್ನಾಟಕ ವಿಮೋಚನೆ

ನಿಜಾಂ ಸರಕಾರದ ನಿಲುವುಗಳನ್ನು ಬೆಂಬಲಿಸಲು 'ಇತ್ತೇಹಾದುಲ್ ಮುಸಲ್ಮೀನ್' ಎಂಬ ಸಂಘಟನೆ ಕಟಿಬದ್ಧವಾಯಿತು. ಈ ಸಂಘಟನೆಯ ಸದಸ್ಯರ ಸಂಖ್ಯೆ ಪ್ರಾರಂಭದಲ್ಲಿ ಕಡಿಮೆ ಪ್ರಮಾಣದಲ್ಲಿತ್ತು. ನಂತರ ಬೆಳೆಯುತ್ತ ಅರೆಮಿಲಿಟರಿಯ ರೂಪದಲ್ಲಿ

ಬದಲಾಗುತ್ತ 'ರಜಾಕಾರರು' (ಸ್ವಯಂಸೇವಕ ದಳ) ಎಂಬ ಹೆಸರಿನಲ್ಲಿ ಇವರು ಕಾಣಿಸಿಕೊಂಡರು. ಇವರ ಮುಖಂಡ ಕಾಶಿಂ ರಜ್ವಿ ಮತೀಯವಾದಿಯಾಗಿದ್ದ. ನಿಜಾಂ ಆಳ್ವಿಕೆಯನ್ನು ಬೆಂಬಲಿಸುತ್ತ, ನಿಜಾಂ ಸರಕಾರದ ಸವಲತ್ತುಗಳನ್ನು ಸ್ವೇಚ್ಛೆಯಿಂದ ಬಳಸುತ್ತ ಮತಾಂಧನಾಗಿ ರೂಪುಗೊಂಡವನಾಗಿದ್ದ. ತನ್ನ ಅಧೀನದಲ್ಲಿದ್ದ ರಜಾಕಾರರಿಗೆ ಸಂಸ್ಥಾನದಲ್ಲೆಲ್ಲ ನಿಜಾಂ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಜನರನ್ನು ಒತ್ತಾಯಿಸಲು ಹೇಳಿದ. ಈ ರಜಾಕಾರರು ಸಂಸ್ಥಾನದ ತುಂಬ ಜನರ ಮೇಲೆ ಕ್ರೌರ್ಯದಿಂದ ದಬ್ಬಾಳಿಕೆ ನಡೆಸತೊಡಗಿದರು. ೧೯೪೮ರ ಹೊತ್ತಿಗೆ ರಜಾಕಾರರ ಸಂಖ್ಯೆ ಒಂದು ಲಕ್ಷಕ್ಕೆ ಬೆಳೆಯಿತು. ತಮ್ಮ ಪಡೆಗೆ ಜನರನ್ನು ಬಲವಂತದಿಂದ ಸೇರಿಸಿಕೊಳ್ಳಲಾಯಿತು. ಇದರ ಜತೆ ಪಠಾಣರು, ನಿಜಾಂ ಪೋಲೀಸರು ಸೇರಿಕೊಂಡು ಹಳ್ಳಿ ಹಳ್ಳಿಗಳಲ್ಲಿ ದಾಳಿ ಮಾಡಿದರು. ಅತ್ಯಾಚಾರ, ದರೋಡೆ, ಸಾವು ನೋವುಗಳಿಂದ ಇಡೀ ಸಂಸ್ಥಾನವೇ ತಲ್ಲಣಗೊಂಡಿತು. ಬೀದರ್, ರಾಯಚೂರು, ಕಲ್ಬುರ್ಗಿ ಜಿಲ್ಲಾ ಪ್ರದೇಶದ ಜನರು ರಜಾಕಾರರ ಕ್ರೌರ್ಯಕ್ಕೆ ಅಂಜಿ ಗಡಿಗಳನ್ನು ದಾಟಿ ವಲಸೆ ಹೋದರು. 'ರಜಾಕಾರರ ದಬ್ಬಾಳಿಕೆ' ಎಂದು ಬರೆದ 'ಇಂರೋಜ್ ' ಪತ್ರಿಕೆಯ ಉರ್ದು ಸಂಪಾದಕ ಷೋಯಬುಲ್ಲಾ ಖಾನನನ್ನು ರಜಾಕಾರರು ಗುಂಡಿಟ್ಟುಕೊಂದರು. ಹಳ್ಳಿ ಹಳ್ಳಿಗಳಲ್ಲಿ ದರೋಡೆಗಳು, ಮಾನಭಂಗಗಳು, ಸಾವುಗಳು ಸಹಜ ಎಂಬಂತೆ ನಡೆಯತೊಡಗಿದವು. ಈ ಪರಿಸ್ಥಿತಿಯನ್ನು ಅರಿತ ಭಾರತ ಸರಕಾರವು, ನಿಜಾಮನಿಗೆ ಮೊದಲು ಹಿಂಸೆ, ದಬ್ಬಾಳಿಕೆ, ಸಾವುಗಳನ್ನು ನಿಲ್ಲಿಸಲು ಸೂಚಿಸಿತು. ಆದರೆ ಇದು ನಿಜಾಮನಿಂದ ಸಾಧ್ಯವಾಗಲಿಲ್ಲ. ಯಾಕೆಂದರೆ ರಜಾಕಾರರ ಕೈಗೊಂಬೆಯಾಗಿ ಆತ ಅಸಹಾಯಕನಾಗಿದ್ದ. ರಜಾಕಾರರು ಸಾರಿಗೆ ವ್ಯವಸ್ಥೆ, ಸೈನ್ಯ, ಮದ್ದು-ಗುಂಡುಗಳನ್ನು ಮತ್ತು ಆಕಾಶವಾಣಿಯನ್ನೂ ಸ್ವತಂತ್ರವಾಗಿ ಬಳಸುವಷ್ಟು ಶಕ್ತಿ ಪಡೆದುಕೊಂಡಿದ್ದರು.

'ಹೈದರಾಬಾದ್ ಕರ್ನಾಟಕ'ದ ಅನೇಕ ರಾಜಕೀಯ ಮುಖಂಡರು ಜನರನ್ನು ಸಂಘಟಿಸಿ ನಿಜಾಮನ ವಿರುದ್ಧ ಹೋರಾಡುವ ಬದಲು ರಜಾಕಾರರ ವಿರುದ್ಧ ಹೋರಾಡುವ ಬಗ್ಗೆ ಗಂಭೀರವಾಗಿ ಆಲೋಚಿಸಿದರು. ರಾಷ್ಟ್ರೀಯ ಕಾಂಗ್ರೆಸ್ ನಾಯಕರ ಜತೆ ಸಮಾಲೋಚಿಸಿದರು. ಹಿಂಸಾತ್ಮಕ ಹೋರಾಟಕ್ಕೆ ಹಿರಿಯ ನಾಯಕರ ಒಪ್ಪಿಗೆ ದೊರೆಯಲಿಲ್ಲ. ಆದರೆ ಪರಿಸ್ಥಿತಿಯ ಒತ್ತಡಕ್ಕೆ ಚಳುವಳಿಗೆ ಆದೇಶ ನೀಡಿದರು. ರಜಾಕಾರರ ದಾಳಿಗೆ ತಲ್ಲಣಗೊಂಡು ಪರಪ್ರಾಂತ್ಯಗಳಿಗೆ ವಲಸೆ ಹೋಗಲು ಪ್ರಾರಂಭಿಸಿದ್ದ ಜನರಿಗೆ ಧೈರ್ಯ ತುಂಬುವುದಕ್ಕೆ ಹಾಗೂ ಜನರನ್ನು ಸಂಘಟಿಸಿ ಜನಾಂದೋಲನ ನಡೆಸುವುದಕ್ಕೆ, ಹೈದರಾಬಾದ್ ಕರ್ನಾಟಕದ ಕಾಂಗ್ರೆಸ್ ನಾಯಕರು ತೀವ್ರವಾಗಿ ಶ್ರಮಿಸಿದರು. ಹೋರಾಟಕ್ಕಾಗಿ 'ಕ್ರಿಯಾಸಮಿತಿ' ರಚನೆಯಾಯಿತು. ಪ್ರಮುಖ ರಾಜಕೀಯ ಹೋರಾಟಗಾರರ ನೇತೃತ್ವದಲ್ಲಿ 'ಶಿಬಿರ'ಗಳನ್ನು ಸ್ಥಾಪಿಸಲಾಯಿತು. ಈ ಶಿಬಿರಗಳಲ್ಲಿ ಒಬ್ಬ ಶಿಬಿರಾಧಿಪತಿ, ದಳನಾಯಕ, ಕೋಶಾಧಿಪತಿ ಹಾಗೂ ಆಹಾರ ವ್ಯವಸ್ಥೆ ಮಾಡುವವರು ಇದ್ದು, ಒಂದೊಂದು ಶಿಬಿರದಲ್ಲಿ ಈ ಮುಖ್ಯಸ್ಥರ ಜೊತೆಗೆ ನೂರಾರು ಜನರು ಹೋರಾಟಕ್ಕೆ ಸಿದ್ಧರಾಗಿರುತ್ತಿದ್ದರು. ರಜಾಕಾರರ ವಿರುದ್ಧ ಸಂಸ್ಥಾನದಲ್ಲಿ (ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ) ಸಶಸ್ತ್ರ ಹೋರಾಟ ಮಾಡುವುದೇ ಈ ಶಿಬಿರಗಳ ಉದ್ದೇಶವಾಯಿತು. ಈ ಶಿಬಿರಗಳಲ್ಲಿ ಸೇರುವವರಿಗೆ ಸೈನಿಕ ತರಬೇತಿಯನ್ನು ವ್ಯವಸ್ಥಿತವಾಗಿ ನೀಡಲಾಯಿತು. ಈ ತರಬೇತಿ ನೀಡಲು 'ಆಜಾದ್ ಹಿಂದ್' ಸೈನ್ಯದಲ್ಲಿದ್ದವರು ಬಂದರು. ತೆಲಂಗಾಣ, ಮದ್ರಾಸ್, ಮಹಾರಾಷ್ಟ್ರ ಗಡಿಗಳಲ್ಲಿ ಶಿಬಿರಗಳು ಹೆಚ್ಚು ಕ್ರಿಯಾಶೀಲವಾಗಿ ಹೋರಾಡಿ ರಜಾಕಾರರಿಗೆ ಭಯಹುಟ್ಟಿಸಿದವು. ಇದರಿಂದ ಹಳ್ಳಿ ಹಳ್ಳಿಗಳಲ್ಲಿ ಜನರಿಗೆ ಧೈರ್ಯ ಬಂದಿತು. ಶಿಬಿರಗಳಿಗೆ ಹೆಚ್ಚಿನ ನೆರವು ದೊರೆಯಿತು. ಹೈದರಾಬಾದ್ ಕರ್ನಾಟಕದ ತುಂಬ ನೂರಾರು ಶಿಬಿರಗಳು ಹುಟ್ಟಿಕೊಂಡು ರಜಾಕಾರರ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದವು. ಮಹಿಳೆಯರು ಈ ಶಿಬಿರಾರ್ಥಿಗಳಿಗೆ ತಮ್ಮ ತಮ್ಮ ನೆಲೆಗಳಲ್ಲಿ ಸಹಾಯ ಮಾಡಿದರು. ಮುಂಡರಗಿ, ಗಜೇಂದ್ರಗಡ, ಸಿಂಧಗಿ, ದುದನಿ, ತಾಳಿಕೋಟೆ, ಮೈಂದರಗಿ, ತುಂಗಭದ್ರ, ಕಂಪ್ಲಿ, ಮಂತ್ರಾಲಯ ಮುಂತಾದ ಕಡೆಗಳಲ್ಲಿ ಮುಖ್ಯ ಶಿಬಿರಗಳಿದ್ದವು. ಈ ಶಿಬಿರದ ಹೋರಾಟಗಾರರ ಹಾಗೂ ರಜಾಕಾರರ ನಡುವೆ ಕೆಲವು ಕಡೆ ಯುದ್ಧದ ರೀತಿಯಲ್ಲಿ ಕದನಗಳಾಗಿ ಸಾವಿರಾರು ಜನ ಪ್ರಾಣ ಕಳೆದುಕೊಂಡರು. ಈ ಶಿಬಿರಗಳ ಮೂಲಕ

ಹೋರಾಡಿದ ಪರಿಣಾಮವಾಗಿ ರಜಾಕಾರರು ಧೈರ್ಯಗುಂದಿದರು. ಕೊಪ್ಪಳದ ಸರಹದ್ದಿನ ಎಷ್ಟೋ ಹಳ್ಳಿಗಳು ಸ್ವತಃ 'ಸ್ವಾತಂತ್ರ್ಯ'ವನ್ನು ಘೋಷಿಸಿಕೊಂಡು, ಸ್ಥಳೀಯ ಸರಕಾರವನ್ನು ಪಂಚಾಯತಿ ರಾಜ್ಯ ಮಾದರಿಯಲ್ಲಿ ರಚಿಸಿಕೊಂಡವು. ಆದರೂ ಸಂಸ್ಥಾನದಲ್ಲಿ ಕದನಗಳು ನಡೆದು, ಸಾವು-ನೋವಿನಿಂದ ಅರಾಜಕತೆ ಉಂಟಾಗಿದ್ದನ್ನು ಕಂಡ ಭಾರತ ಸರಕಾರವು, ನಿಜಾಂ ಸರಕಾರದ ವಿರುದ್ಧ 'ಪೊಲೀಸ್ ಕಾರ್ಯಾಚರಣೆ'ಯನ್ನು ನಡೆಸಲು ನಿರ್ಧರಿಸಿತು. ಉಪಪ್ರಧಾನಿಗಳಾಗಿದ್ದ ಸರದಾರ ವಲ್ಲಭಭಾಯಿ ಪಟೇಲರು ಜನರಲ್ ಚೌಧರಿಯವರ ನೇತೃತ್ವದಲ್ಲಿ ಭಾರತೀಯ ಸೇನೆಯನ್ನು ಸೆಪ್ಟೆಂಬರ್ ೧೩, ೧೯೪೮ರಂದು ಕಳಿಸಿದರು. ಭಾರತೀಯ ಸೇನೆ ಹೈದರಾಬಾದ್ ಸಂಸ್ಥಾನವನ್ನು ಪ್ರವೇಶಿಸಿ ರಜಾಕಾರರಿಂದ ಉಂಟಾದ ಅರಾಜಕತೆಯನ್ನು ಶಾಂತಗೊಳಿಸಿತು. ಹಳ್ಳಿ ಹಳ್ಳಿಗಳಲ್ಲಿ ನಡೆದ ಕದನಗಳು ತಣ್ಣಗಾದವು. ಸೆಪ್ಟೆಂಬರ್ ೧೭, ೧೯೪೮ರಂದು ನಿಜಾಮ ಶರಣಾಗತನಾದನು. ಹೈದರಾಬಾದ್ ಸಂಸ್ಥಾನ ನಿಜಾಮನ ಆಳ್ವಿಕೆಯಿಂದ ಸ್ವತಂತ್ರವಾಯಿತು. ಹೈದರಾಬಾದ್ ಕರ್ನಾಟಕ ರಾಜಕೀಯವಾಗಿ ವಿಮೋಚನವಾಯಿತು.

೧೯೪೭ರ ಆಗಸ್ಟ್ ೧೫ರ ನಂತರ ಹೈದರಾಬಾದ್ ಸಂಸ್ಥಾನದ ಭಾಗವಾದ ಬೀದರ್, ಕಲ್ಬುರ್ಗಿ, ರಾಯಚೂರು ಜಿಲ್ಲಾ ಪ್ರದೇಶಗಳಲ್ಲಿ, ಗಡಿಗಳಲ್ಲಿ ಜನಸಮುದಾಯಗಳು ಅಪಾರ ನೋವನ್ನನುಭವಿಸಿದವು. 'ಹೈದರಾಬಾದ್ ಕರ್ನಾಟಕ'ವು ೧೯೪೮, ಸೆಪ್ಟೆಂಬರ್ ೧೭ರಂದು ಸ್ವತಂತ್ರ ಭಾರತದಲ್ಲಿ ವಿಲೀನವಾದ ಮೇಲೆಯೂ ಅನೇಕ ಸಮಸ್ಯೆಗಳು ತಲೆದೋರಿದವು. ಹೊಸದಾಗಿ ರೂಪಗೊಂಡ ಹೈದರಾಬಾದ್ ರಾಜ್ಯದಲ್ಲಿ ವಿವಿಧ ಕೋಮುಗಳ ನಡುವೆ ಒಡೆದ ಮನಸ್ಸುಗಳು ಸೌಹಾರ್ದತೆಯಿಂದಿರಲು ಸಾಧ್ಯವಾಗಲಿಲ್ಲ. ತೆಲುಗು ಭಾಷೆಯನ್ನಾಡುವ ಜನ ಭಾಷಾವಾರು ಪ್ರಾಂತ್ಯ ರಚನೆಗಾಗಿ ಪ್ರತ್ಯೇಕ ಆಂಧ್ರಕ್ಕಾಗಿ ಚಳುವಳಿಯನ್ನು ಆರಂಭಿಸಿದರು. ಕನ್ನಡ ಭಾಷೆಯನ್ನಾಡುವ ಜನರೂ ಈ ದಿಸೆಯಲ್ಲಿ ಹೋರಾಟಕ್ಕೆ ಸಜ್ಜಾದರು. ಭಾಷಾವಾರು ಪ್ರಾಂತ್ಯ ರಚನೆಗಾಗಿ ಈ ಹಿಂದಿನಿಂದಲೇ ಚಳುವಳಿಗಳು ಸುರುವಾಗಿದ್ದವು. ಅದರಲ್ಲೂ ಉರ್ದುಭಾಷೆ ಆಡಳಿತ ಭಾಷೆಯಾಗಿದ್ದರಿಂದ ಜನರಲ್ಲಿ ಅಸಮಾಧಾನವಿತ್ತು. ಕನ್ನಡ ಭಾಷೆಯನ್ನಾಡುವ ಜನರ ಚಳುವಳಿ ತೀವ್ರವಾದ ಪರಿಣಾಮವಾಗಿ ಹೈದರಾಬಾದ್ ರಾಜ್ಯದಲ್ಲಿದ್ದ ಬೀದರ್, ಕಲ್ಬುರ್ಗಿ, ರಾಯಚೂರು ಜಿಲ್ಲೆಗಳು ಹೊಸದಾಗಿ ರಚನೆಯಾಗಿದ್ದ ಮೈಸೂರು ರಾಜ್ಯದಲ್ಲಿ ೧೯೫೬ರಲ್ಲಿ ಸೇರಿಕೊಂಡವು. ಮುಂದೆ ೧೯೭೩ರಲ್ಲಿ 'ಕರ್ನಾಟಕ ರಾಜ್ಯ'ವಾಯಿತು. ಈಚೆಗೆ ಆಡಳಿತದ ಅನುಕೂಲಕ್ಕಾಗಿ ಕಲ್ಬುರ್ಗಿಯನ್ನು ವಿಭಾಗವನ್ನಾಗಿ ಮಾಡಿ ಈ ಮೂರು ಜಿಲ್ಲೆಗಳ ಜೊತೆಗೆ ಬಳ್ಳಾರಿಯನ್ನು ಸೇರಿಸಲಾಯಿತು. ಈಗ ಕೊಪ್ಪಳವೂ ಜಿಲ್ಲೆಯಾಯಿತು. ಹೀಗಾಗಿ ಮೊದಲು 'ಹೈದರಾಬಾದ್ ಕರ್ನಾಟಕ' ಎಂದರೆ ಮೂರು ಜಿಲ್ಲೆಗಳಿಗೆ ಬದಲಾಗಿ ಈಗ ಐದು ಜಿಲ್ಲೆಗಳಾಗಿವೆ.

ಅಧ್ಯಾಯ ಮೂರು: ವಾಸ್ತವವಾದ

ವಾಸ್ತವವಾದ ಪರಿಕಲ್ಪನೆ ಮತ್ತು ಸಮಸ್ಯೆಗಳು

ವಾಸ್ತವವಾದದ ಕವಲುಗಳು

ಸಾಮಾಜಿಕ ವಾಸ್ತವ

ಅಧ್ಯಾಯ ಮೂರು: ವಾಸ್ತವವಾದ

ವಾಸ್ತವವಾದ ಪರಿಕಲ್ಪನೆ ಮತ್ತು ಸಮಸ್ಯೆಗಳು

ವಾಸ್ತವವಾದ(ರಿಯಾಲಿಸಂ) ಎನ್ನುವ ಪದ ಮೂಲತಃ ತತ್ವಜ್ಞಾನಕ್ಕೆ ಸಂಬಂಧಿಸಿದ್ದು. ತತ್ವಶಾಸ್ತ್ರದಲ್ಲಿ ಈ ಪದ ಮೊದಲಿನಿಂದಲೂ ರೂಢಿಯಲ್ಲಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಇದು ಸಾಹಿತ್ಯ ವಿಮರ್ಶೆಯಲ್ಲಿ ಪ್ರವೇಶ ಪಡೆಯಿತು. ಸಾಹಿತಿಗಳಲ್ಲಿ ಅನೇಕರು ತತ್ವಜ್ಞಾನಿಗಳು ಆಗಿದ್ದರಿಂದ, ಈ ಪದಕ್ಕೆ ತತ್ವಜ್ಞಾನಿಗಳು ಬಳಸುತ್ತಿದ್ದ ಅರ್ಥವನ್ನೇ ಇಟ್ಟುಕೊಂಡರು. ಅಂದರೆ ಸತ್ಯವನ್ನು ನಿರೂಪಿಸುವ, ಪ್ರತಿಪಾದಿಸುವ ಅರ್ಥವನ್ನೇ ಸಾಮಾನ್ಯವಾಗಿ ಸಾಹಿತಿಗಳೂ ಒಪ್ಪಿಕೊಂಡರು. ನಂತರ ಇದೊಂದು ಧೋರಣೆ ಅಥವಾ ದೃಷ್ಟಿಕೋನವಾಗಿ ಪರಿಣಮಿಸಿತು. ಸಾಹಿತ್ಯದ ಜೊತೆಗೆ ಬೇರೆ ಕಲಾರಂಗಗಳಲ್ಲಿಯೂ ಈ ದೃಷ್ಟಿಕೋನ ಕಾಣಿಸಿತು. ಈ ವಾಸ್ತವವಾದ ಹುಟ್ಟಿದ ನಂತರ ಒಂದು ಚಳುವಳಿಯ ಸ್ವರೂಪವನ್ನೇ ಪಡೆದು ಅನೇಕ ದೇಶಗಳಿಗೆ ಕಾಲಿಟ್ಟಿತು. ತನ್ನ ಚಲನೆಯಲ್ಲಿ ಹೊಸ ಆಯಾಮಗಳನ್ನು ಪಡೆಯುತ್ತ, ಅನೇಕ ತಿರುವುಗಳನ್ನು ಕಾಣುತ್ತ, ಏರಿಳಿತಗಳನ್ನೂ ಅನುಭವಿಸಿತು.ವ್ಯಾಖ್ಯಾನಗಳಿಗೆ, ಮರುವ್ಯಾಖ್ಯಾನಗಳಿಗೆ ಗುರಿಯಾಗುತ್ತ ನಿತ್ಯ ಪರಿವರ್ತನೆಗೊಳ್ಳುವ ಸಮಾಜದೊಂದಿಗೆ ಇದು ರೂಪಾಂತರ ಹೊಂದುತ್ತಲೇ ನಡೆದು ಬಂದಿದೆ.

ವಾಸ್ತವವಾದವು ತನ್ನ ಮುಂದಿದ್ದ 'ಅಭಿಜಾತವಾದ', 'ರಮ್ಯವಾದ' ಹಾಗೂ 'ಆದರ್ಶವಾದ'ಗಳ ವಿರುದ್ಧವಾಗಿ ರೂಪಗೊಂಡಿತು. ಅಭಿಜಾತವಾದವು ನಿಯಮ ಬದ್ಧವಾದುದ್ದು. ಪುರಾಣಗಳ ಮಹಾವಸ್ತು, ಮಹಾವ್ಯಕ್ತಿಗಳನ್ನೇ ಹೊಂದಿರಬೇಕೆಂಬ ನಿಯಮಗಳನ್ನು ಅನುಸರಿಸುವ ಈ ವಾದವನ್ನು ವಾಸ್ತವವಾದ ನಿರಾಕರಿಸಿತು. ಕಲ್ಪನಾಶಕ್ತಿ, ಸ್ಫೂರ್ತಿತತ್ವ, ಅಮೂರ್ತತೆ ಹಾಗೂ ಅತೀತವಾದ ನಂಬಿಕೆಗಳನ್ನೂ ಹೊಂದಿದ ರಮ್ಯವಾದದ ನಿಲುವನ್ನು ವಾಸ್ತವವಾದ ಕಡೆಗಣಿಸಿತು. ಸಾರ್ವತ್ರಿಕ ರೂಪಗಳನ್ನು, ಉದಾತ್ತೀಕರಿಸಿದ ಮಾದರಿಗಳನ್ನು ಒಂದು ಆದರ್ಶವನ್ನಾಗಿ ಹೊಂದಿರುವ ಆದರ್ಶವಾದವನ್ನೂ ವಾಸ್ತವವಾದ ವಿರೋಧಿಸಿತು. ಹಾಗೆ ನೋಡಿದರೆ ಈ ಮೂರು ವಾದಗಳು ಕೂಡ ಒಂದನ್ನೊಂದು ವಿರೋಧಿಸಿ ಹುಟ್ಟಿಕೊಂಡವುಗಳೇ ಆಗಿವೆ.

ಸಮಾಜ, ಅದರ ಸಂಗತಿಗಳು, ವ್ಯಕ್ತಿಗಳು 'ಅವು ಇರುವ ಹಾಗೆಯೇ' ಇಂದ್ರಿಯಗಳಿಗೆ ಕಾಣಿಸುವ ರೀತಿಯಲ್ಲಿಯೇ ಯಾವುದಕ್ಕೂ ಮಹತ್ವ ಕೊಡದೆ, ಯಾವುದನ್ನೂ ಕಡೆಗಣಿಸದೆ ಮತ್ತು ಯಾವುದನ್ನು ಸುಂದರಗೊಳಿಸದೆ, ಆದರ್ಶವಾಗಿ ನೋಡದೆ, ಯಾವ ಕಟ್ಟುಪಾಡುಗಳಿಗೂ ಬದ್ಧವಾಗದೆ ಚಿತ್ರಿಸುವದೇ ವಾಸ್ತವವಾದದ ಉದ್ದೇಶವಾಯಿತು. ಸಾಮಾನ್ಯ ವ್ಯಕ್ತಿ, ಸಾಮಾನ್ಯ ಘಟನೆ, ಸಾಮಾನ್ಯ ವಸ್ತು ಮುಂತಾದ ಅಂಶಗಳನ್ನು ಅವುಗಳ 'ಯಥಾಸ್ಥಿತಿಯಲ್ಲಿ' ಬಿಂಬಿಸುವುದೇ ವಾಸ್ತವವಾದದ ಮೂಲ ಗುರಿಯಾಯಿತು. ಒಂದು ಸಾಹಿತ್ಯ ಕೃತಿ ನಿರ್ಮಾಣದ ಹೊತ್ತಿನಲ್ಲಿ ಸಾಹಿತಿಯ ವೈಯಕ್ತಿಕ ಅನಿಸಿಕೆಗಳಿಗೆ ಅವಕಾಶವಾಗದಂತೆ, ಯಾವುದರಿಂದಲೂ ಪ್ರಭಾವಿತವಾಗದಂತೆ ಎಚ್ಚರವಹಿಸುವುದೂ ಮುಖ್ಯವಾಯಿತು. ಸಾಮಾನ್ಯವಾಗಿ ಈ ಆಶಯವನ್ನಿಟ್ಟುಕೊಂಡೇ ವಾಸ್ತವವಾದವು ಸಾಹಿತ್ಯವೂ ಸೇರಿದಂತೆ ಇತರ ಕಲಾಸಂಬಂಧಿ ಕ್ಷೇತ್ರಗಳಲ್ಲಿಯೂ ಬೆಳೆಯತೊಡಗಿತು.

ವಾಸ್ತವವಾದವು ಬೆಳೆಯಲು ಅನೇಕ ಅಂಶಗಳು ಕಾರಣವಾದವು: ವಿಜ್ಞಾನದ ಬೆಳವಣಿಗೆಯಿಂದ ಹುಟ್ಟಿಕೊಂಡ ವೈಜ್ಞಾನಿಕ ದೃಷ್ಟಿಕೋನವು ರಹಸ್ಯ, ಅತಿಮಾನುಷವಾದ, ನಿತ್ಯ ಬದುಕಿಗೆ ಮೀರಿದ, ಕಣ್ಣಿಗೆ ನಿಲುಕದ ಸಂಗತಿಗಳನ್ನೂ ನಿರಾಕರಿಸತೊಡಗಿತು. ಇಂದ್ರಿಯಗಳಿಗೆ ನಿಲುಕುವ ಬದುಕೇ ನಿಜವಾದ ಸತ್ಯ ಅಥವಾ ವಾಸ್ತವವೆಂದು ಒಪ್ಪಿಕೊಂಡಿತು. ಜಗತ್ತಿನಲ್ಲಿ, ಬದುಕಿನಲ್ಲಿ ಅಗಮ್ಯವಾದದ್ದು ಯಾವುದೂ ಇಲ್ಲ. ಎಲ್ಲವನ್ನೂ ವಿಜ್ಞಾನದ ಸಹಾಯದಿಂದ ಅರಿಯಬಹುದು, ನೋಡಬಹುದು ಎಂಬ ನಂಬಿಕೆ

ಸಮಾಜದಲ್ಲಿ ಬೇರೂರಿತು.

ಪಶ್ಚಿಮದ ಮನಸ್ಸು ಅಮೂರ್ತವಾದ ಆಧ್ಯಾತ್ಮಿಕ ಯೋಚನೆಗಳಿಂದ, ಮೂರ್ತವಾದ ವ್ಯವಹಾರಿಕ ಬದುಕಿನ ಕಡೆಗೆ ಪರಿವರ್ತನಗೊಳ್ಳತೊಡಗಿತ್ತು. ತತ್ವಶಾಸ್ತ್ರದಲ್ಲಿದ್ದ ಭೌತಿಕವಾದ, ಬುದ್ಧಿಪ್ರಮಾಣವಾದಗಳ ಪ್ರಭಾವವೂ ಇದಕ್ಕೆ ಪ್ರೇರಣೆಯಾಯಿತು. ಇಂದ್ರಿಯಗಳ ಸಂವೇದನೆಯೊಂದೇ ಮೂಲವೆಂದು ತೋರಿಸಿದ ಲಾಕ್‌ನ 'ಸಂವೇದನ ಜ್ಞಾನವಾದ'; ಕಣ್ಣಿಗೆ ಕಾಣುವುದು ಸತ್ಯವೆಂದು ನಂಬಿದ ಆಗಸ್ಟ್ ಕಾಮ್ಟ್‌ನ 'ದೃಷ್ಟಿಪ್ರಮಾಣವಾದವು', ಅಮೂರ್ತ, ಅಜ್ಞಾತ ಇವುಗಳನ್ನೆಲ್ಲ ಸಂದೇಹಿಸುವ ಹ್ಯಾಮನ 'ಸಂದೇಹವಾದ' ಮುಂತಾದ ತತ್ವಶಾಸ್ತ್ರೀಯ ಸಿದ್ಧಾಂತಗಳು, ಜಗತ್ತಿನ ಭೌತಿಕ ಸ್ವರೂಪವನ್ನು ಅರಿಯಲು ಯತ್ನಿಸಿ ಸಫಲವಾದ ಪರಿಣಾಮಗಳು, ಸಹಜವಾಗಿಯೇ ಬದುಕನ್ನು ನೋಡುವ ದೃಷ್ಟಿಯನ್ನು ಬದಲಾಯಿಸಿದವು. ವಿಜ್ಞಾನಗಳಲ್ಲಿ ಸಮಾಜ ವಿಜ್ಞಾನವು ಪ್ರಮುಖವಾದದೆಂದು ಕಾಮ್ಟ್ ಹೇಳಿದ ವಾದವು ವಾಸ್ತವವಾದ ಮೇಲೆ ಪ್ರಭಾವ ಬೀರಿತು.

ವೈಜ್ಞಾನಿಕ ಪ್ರಗತಿ ಮತ್ತು ಮಹಾತ್ವಾಕಾಂಕ್ಷಿ ಪ್ರವೃತ್ತಿಗಳು ಸಾಮಾಜಿಕ ಜೀವನದಲ್ಲಿ ಬದಲಾವಣೆಗಳನ್ನು ತಂದವು. ಕೈಗಾರಿಕೆಯಿಂದ ದೇಶದ ಪ್ರಗತಿಯ ಜೊತೆಗೆ ಸಾಮಾನ್ಯ ಜನರ ಬದುಕು ಬೌದ್ಧಿಕವಾಗತೊಡಗಿತು. ಇದರಿಂದ ಮಧ್ಯಮ ವರ್ಗದ ಹೊಸ ಬೆಳವಣಿಗೆಯು ವಾಸ್ತವವಾದಕ್ಕೆ ಪೂರಕವಾಯಿತು. ತಕ್ಕಮಟ್ಟಿನ ವಿದ್ಯೆ, ಹಣದಿಂದಾಗಿ ಹೊಸದಾಗಿ ರೂಪಗೊಂಡ ಮಧ್ಯಮ ವರ್ಗದ ಜನರಿಗೆ, ಸಾಹಿತ್ಯ-ಕಲೆಗಳ ಪ್ರಾಚೀನ ಪರಂಪರೆಯ ಅರಿವು ಅಷ್ಟಾಗಿ ಇರಲಿಲ್ಲ. ಸುಲಭ ತಿಳುವಳಿಕೆಗೆ ಕಾರಣವಾಗುವ, ಸರಳವಾಗಿ ಅರಿಯಲು ಸಹಾಯವಾಗುವ 'ವಾಸ್ತವವಾದ'ದ ಕಡೆ ಅವರು ಒಲಿಯತೊಡಗಿದರು. ಇದರಿಂದಾಗಿ ಜನಸಾಮಾನ್ಯರ ಬೇಕು-ಬೇಡಗಳನ್ನು, ಅಭಿರುಚಿಗಳನ್ನು ಈಡೇರಿಸುವತ್ತ 'ವಾಸ್ತವವಾದ' ಹರಿಯತೊಡಗಿತು.

ಈ ಹೊತ್ತಿಗೆ ಸರಿಯಾಗಿ ಶೋಧವಾದ 'ಛಾಯಾಚಿತ್ರ'ವು ವಾಸ್ತವವಾದಕ್ಕೆ ಒಂದು ಖಚಿತ ನೆಲೆಯನ್ನು ಒದಗಿಸಿತು. ವಾಸ್ತವನ್ನು ಹೇಗೆ ಅರಿಯಬೇಕು, ಆಯ್ಕೆಗಳಿಗೆ ಅವಕಾಶವಿರದ ಜಗತ್ತನ್ನು ನೋಡುವದಕ್ಕೆ ಹಾಗೂ ಅರ್ಥ ಮಾಡಿಕೊಳ್ಳುವುದಕ್ಕೆ ಸರಿಯಾದ ನಿದರ್ಶನವಾಯಿತು.

'ವಾಸ್ತವವಾದ'ವು ಒಂದು ಧೋರಣೆಯಾಗಿ ಅಥವಾ ದೃಷ್ಟಿಕೋನವಾಗಿ ಕಾದಂಬರಿ ಸಾಹಿತ್ಯದಲ್ಲಿ ಬೆಳೆಯತೊಡಗಿತು. ಹದಿನೆಂಟನೆಯ ಶತಮಾನದಲ್ಲಿ ಈ ವಾದವು ಮೊಳಕೆಯೊಡೆಯಲಾರಂಭಿಸಿತು. ಇದರ ಲಕ್ಷಣಗಳನ್ನು ಬಿಂಬಿಸುವ ಪ್ರಯೋಗಗಳು ಮೊದಲಿಗೆ ಇಂಗ್ಲೆಂಡಿನಲ್ಲಿ ಕಾಣಿಸಿದವು. ಸ್ಯಾಮ್ಯುಯೆಲ್ ರಿಚರ್ಡ್‌ಸನ್, ಹೆನ್ರಿ ಫೀಲ್ಡಿಂಗ್ ಮತ್ತು ವಾಲ್ಟರ್ ಸ್ಕಾಟ್ ಮುಂತಾದ ಕಾದಂಬರಿಕಾರರಲ್ಲಿ ವ್ಯಕ್ತವಾಯಿತು. 'ರಾಬಿನ್ ಸನ್ ಕ್ರೂಸೋ' ಎಂಬ ಕಾದಂಬರಿಯನ್ನು ಬರೆದ ಇಂಗ್ಲೆಂಡಿನ ಡೇನಿಯಲ್ ಡೀಫೋನಲ್ಲಿ ಕೂಡ ಈ ದೃಷ್ಟಿಕೋನ ಕಾಣಿಸಿತು. ರಿಚರ್ಡ್‌ಸನ್‌ನ ಕಾದಂಬರಿಗಳಾದ 'ಕ್ಲಾರಿಸ್ಸಾ' ಮತ್ತು 'ಪಮೇಲಾ'ಗಳಲ್ಲಿ ಕೆಳವರ್ಗದವರ ಚಿತ್ರಣವಿದೆ. ಸಾಮಾನ್ಯ ಮಹಿಳೆಯರಿಬ್ಬರು ತಮ್ಮ ಚಾರಿತ್ರ್ಯವನ್ನು ಕಾಪಾಡಿಕೊಳ್ಳುತ್ತಲೇ ಅನೈತಿಕತೆಯಿಂದ ಆಗಬಹುದಾದ ಸ್ಥಿತಿಗತಿಯನ್ನು ತಿಳಿಯಲು ಯತ್ನಿಸುವ ಚಿತ್ರಣವದು. ಇದು ಆ ಕಾಲದ ಸಾಮಾಜಿಕ ಬದುಕಿನ ಚಿತ್ರವನ್ನು ನೀಡುತ್ತದೆ. ಹೆನ್ರಿ ಫೀಲ್ಡಿಂಗ್‌ನ 'ಜೋಸೆಫ್ ಆಂಡ್ರೂಸ್' ಮತ್ತು 'ಟಾಮ್ ಜೋನ್ಸ್' ಎಂಬ ಕಾದಂಬರಿಗಳು ವಾಸ್ತವವಾದದ ಉತ್ತಮ ಕೃತಿಗಳಾಗಿ ಮೂಡಿಬಂದವು. ಮಾನವೀಯ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳು, ವ್ಯಕ್ತಿಯ ವೈಯಕ್ತಿಕ ಜೀವನದ ಪರಿಮಿತಗಳ ವಾಸ್ತವ ಚಿತ್ರಣ, ಈ ಕಾದಂಬರಿಗಳ ವಸ್ತುವಿನೊಂದಿಗೆ ಬೆರೆತಿದೆ. ವಾಸ್ತವವಾದ ನೆಲೆಗಳು ಗಟ್ಟಿಯಾಗುವಂತಹ ಕೃತಿಗಳನ್ನು ವಾಲ್ಟರ್ ಸ್ಕಾಟನು ಬರೆದನು. 'ಕೆನಿಲ್ ವರ್ತ್', 'ವೇವರ್ಲೀ' ಮತ್ತು 'ಐವಾನ್ ಹೋ' ಮುಂತಾದ ಕಾದಂಬರಿಗಳು ಫ್ರಾನ್ಸ್ ಕಾದಂಬರಿಕಾರರ ಮೇಲೆ ಪ್ರಭಾವ ಬೀರಿದವು.

ಫ್ರಾನ್ಸ್‌ನ ಕಾದಂಬರಿಕಾರರಾದ ಸ್ಟೆಂಡಾಲ್ ಮತ್ತು ಬಾಲ್ಜಾಕರ ಕಾದಂಬರಿಗಳು ವಾಸ್ತವವಾದವನ್ನು ವಿಸ್ತರಿಸತೊಡಗಿದವು. ಸ್ಟೆಂಡಾಲ್ ತನ್ನ ಕೃತಿಗಳಲ್ಲಿ ಬಾಹ್ಯ ವಿವರಗಳಿಗಿಂತ ಅಂತರಂಗದ ತುಮುಲಗಳಿಗೆ ಮಹತ್ವ ನೀಡಿದನು. ಬಾಲ್ಜಾಕನು ತನ್ನೆಲ್ಲ ಕಾದಂಬರಿಗಳ ಕೃತಿಗೆ 'ದಿ ಹ್ಯೂಮ್ಯಾನ್ ಕಾಮುಡಿ' ಎಂದು ಕರೆದಿದ್ದಾನೆ. ಬಾಲ್ಜಾಕನು ಮೇಲುವರ್ಗಕ್ಕೆ ಸೇರಿದವನು. ಆದರೆ ತನ್ನ ವರ್ಗದ ಜೀವನ ಮೌಲ್ಯಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸಿದನು. ತನಗಿಂತ ಕೆಳವರ್ಗದ ಬಡಕುಟುಂಬಗಳ ಬದುಕಿನ ವಿವರಗಳನ್ನು ಪ್ರಾಮಾಣಿಕವಾಗಿ ಚಿತ್ರಿಸಿದನು. ಸಾಮಾಜಿಕ ಪರಿವರ್ತನೆಯಲ್ಲಿ ಕ್ರಿಯಾಶೀಲನಾಗಿದ್ದನು. ಸ್ಟೆಂಡಾಲ್ ಮತ್ತು ಬಾಲ್ಜಾಕರಲ್ಲಿ ವ್ಯಕ್ತವಾದ ವಾಸ್ತವವಾದವು ಮತ್ತಷ್ಟು ಪಕ್ವಗೊಂಡು ವ್ಯಕ್ತವಾದದ್ದು ಪ್ಲಾಬೇನ ಕಾದಂಬರಿಗಳಲ್ಲಿ. ಕಥಾ ವಸ್ತುವನ್ನು ಯಥಾರ್ಥವಾಗಿ ಚಿತ್ರಿಸುವ ವಿಧಾನದಲ್ಲಿ ಮತ್ತು ಕಲಾತ್ಮಕಗೊಳಿಸುವಲ್ಲಿ ಅವನ ಪ್ರತಿಭೆ ಕಾಣಿಸಿತು. ಯಥಾವತ್ತಾದ ಚಿತ್ರಣದ ಜೊತೆಗೆ ಶಾಶ್ವತ ಸತ್ಯವನ್ನು ಹುಡುಕುವುದೂ ಅವನ ಧ್ಯೇಯವಾಗಿತ್ತು. ಅವನ 'ಮೇಡಮ್ ಬವರಿ' ವಾಸ್ತವವಾದದ ಉತ್ತಮ ಕೃತಿಯಾಗಿದೆ.

ಫ್ರಾನ್ಸ್‌ನ ವಾಸ್ತವವಾದಿ ಲೇಖಕರು ರಷ್ಯಾದ ಲೇಖಕರ ಮೇಲೆ ಪ್ರಭಾವ ಬೀರಿದರು. ಪುಶ್ಕಿನ್‌ನ 'ಯುಜೆನ್ ಒನ್‌ಜಿನ್' ಎಂಬ ಕೃತಿ ಮೊದಲು ವಾಸ್ತವವಾದದ ನೆಲೆಯಲ್ಲಿ ಮೂಡಿ ನಿಂತಿತು. ಇವನಲ್ಲಿ ರಮ್ಯ ಮನೋಭಾವವು ಕಂಡರೂ, ಸಂಪ್ರದಾಯ ಮತ್ತು ಆಧುನಿಕ ಬದುಕುಗಳ ಮುಖಾಮುಖಿಯ ಕಥಾವಸ್ತುವಿನ ಬರವಣಿಗೆಯಲ್ಲಿ ವಾಸ್ತವದ ಧೋರಣೆಯಿದೆ. ಇದು ನಿಕೋಲಾಯ್ ಗೋಗೋಲ್ ನಲ್ಲಿ ಸ್ಪಷ್ಟವಾಗಿ ಬೆಳೆಯಿತು. ಕಥೆ-ಕಾದಂಬರಿಗಳನ್ನು ಬರೆದ ಗೋಗೋಲ್‌ನು ಅಧಿಕಾರಶಾಹಿಯ ದೌರ್ಬಲ್ಯ ಹಾಗೂ ಅನೈತಿಕತೆಯನ್ನು, ಜೀತದಾಳುಗಳ ದಾರುಣ ಸ್ಥಿತಿಯನ್ನು ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ತೀವ್ರವಾಗಿ ವಿಡಂಬನೆಗೆ ಗುರಿಮಾಡಿದ. 'ದಿ ಓವರ್‌ಕೋಟ್' ಎಂಬ ಈತನ ನೀಳ್ಗತೆಯು ಮುಗ್ಧರ, ಶೋಷಿತರ, ಬಡವ್ಯಕ್ತಿಗಳ ಮೂಕ ವೇದನೆಗಳನ್ನು ಬಿಂಬಿಸುತ್ತದೆ. ವಾಸ್ತವವಾದಿ ನೆಲೆಯಲ್ಲಿ ಕೃತಿರಚನೆ ಮಾಡಿದ ದಸ್ತೋವಸ್ಕಿ ಮತ್ತು ಟಾಲ್‌ಸ್ಟಾಯ್ ಈ ವಾದಕ್ಕೆ ಹೊಸ ಸ್ವರೂಪ ನೀಡಿ ವಿಸ್ತರಿಸಿದರು. ಈ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಾದ ಬದಲಾವಣೆಗಳ ಮತ್ತು ಸಮಾಜ ಪರಿವರ್ತನೆಗೆ ಇದ್ದ ಒತ್ತಡಗಳ ಚಾರಿತ್ರಿಕ ಹಿನ್ನೆಲೆಯಲ್ಲಿ ಟಾಲ್‌ಸ್ಟಾಯ್ ಅನೇಕ ಕಾದಂಬರಿಗಳನ್ನು ಬರೆದ. 'ವಾರ್ ಅಂಡ್ ಪೀಸ್ ', 'ಅನ್ನಾಕರೇನಿನಾ' ಜಗತ್ಪ್ರಸಿದ್ಧಿಯನ್ನು ಪಡೆದವು. ಜನ ಸಮುದಾಯಗಳ ಮತ್ತು ವ್ಯಕ್ತಿಗಳ ಅಂತರಂಗ ಬಹಿರಂಗಗಳ ತುಮುಲಗಳನ್ನು ಏಕಕಾಲಕ್ಕೆ ಸಮರ್ಥವಾಗಿ ಚಿತ್ರಿಸಿದ ಧೀಮಂತನೀತ. ದಸ್ತೋವಸ್ಕಿಯ 'ಕ್ರೈಮ್ ಆ್ಯಂಡ್ ಪನಿಶ್‌ಮೆಂಟ್' ಕಾದಂಬರಿ ವ್ಯಕ್ತಿಯ ಅಂತರಂಗದ ತುಡಿತವನ್ನು ವಾಸ್ತವವಾಗಿ ಹಿಡಿದಿಟ್ಟಿದೆ. ಗಾರ್ಕಿಯ 'ಮದರ್' ಕೂಡ ಈ ಗುಂಪಿಗೆ ಸೇರುವ ಶ್ರೇಷ್ಠ ಕೃತಿ. ಈ ಕಾಲದ ಮಾರ್ಕ್ಸ್ ತತ್ವಗಳ ಕಲಾತ್ಮಕ ಅಭಿವ್ಯಕ್ತಿಯು 'ಸಮಾಜವಾದಿ ವಾಸ್ತವಿಕತೆ'ಯಾಗಿ ಬೆಳೆಯಿತು. ಅಮೆರಿಕಾದಲ್ಲಿ ವಾಸ್ತವವಾದಿ ನೆಲೆಯಲ್ಲಿ ಹೆನ್ರಿಜೇಮ್ಸ್, ಪ್ರಾಂಕ್ ನೋರಿಸ್ ಮುಂತಾದವರು ಬರೆದರಾದರೂ, ಆ ದೇಶದ ಆ ಕಾಲದ ಸಾಮಾಜಿಕ ಬದುಕಿನ ಪ್ರಮುಖ ತುಡಿತಗಳಾಗಿ ನಿಲ್ಲಲಿಲ್ಲ. ಬೂರ್ಶ್ವಾ ವಾಸ್ತವವಾದ ಮೆಲ್ಲಗೆ ಕಣ್ಮರೆಯಾಯಿತು.

ಹೀಗೆ ಇಂಗ್ಲೆಂಡ್, ರಷ್ಯಾ ಮತ್ತು ಅಮೆರಿಕಾ ದೇಶಗಳಲ್ಲಿ ವಾಸ್ತವವಾದಿ ಸಾಹಿತ್ಯ ಬೆಳೆಯಿತು. ಇಂದಿಗೂ 'ಉತ್ಕೃಷ್ಟ' ಎನಿಸಿಕೊಂಡಿರುವ ಅನೇಕ ಕಾದಂಬರಿಗಳು ವಾಸ್ತವವಾದಿ ಪರಂಪರೆಯಲ್ಲಿ ಸೃಷ್ಟಿಯಾಗಿವೆ. ಪ್ರಾರಂಭದಲ್ಲಿ ವಾಸ್ತವವಾದವು ಸಮಾಜ, ಅದರ ಸಂಗತಿಗಳು, ವ್ಯಕ್ತಿಗಳು ಅವು ಇರುವ ಹಾಗೆಯೇ ಯಥಾವತ್ತಾಗಿ ಚಿತ್ರಿಸುವುದನ್ನೇ ಗುರಿಯಾಗಿಸಿಕೊಂಡಿತ್ತು. ಆದರೆ ಅದು ಬೆಳೆಯುತ್ತ ಅದರ ಅರ್ಥವ್ಯಾಪ್ತಿ ವಿಸ್ತಾರಗೊಂಡಿತು. ಹಲವಾರು ರೂಪಗಳನ್ನು ಪಡೆಯುತ್ತಲೇ ವೈವಿಧ್ಯಮಯವಾಗಿ ಬೆಳೆದು ನಿಂತಿತು. ಇದಕ್ಕೆ ಜಗತ್ತಿನ ಶ್ರೇಷ್ಠ ಸಾಹಿತಿಗಳ ಕೊಡುಗೆಯೇ ಕಾರಣವಾಗಿದೆ. 'ವಾಸ್ತವವಾದಿ ಸಾಹಿತ್ಯ' ಎಂದು ಕರೆಯುವ ವಾದವು ಹೆಚ್ಚಾಗಿ ಕಾದಂಬರಿಗಳಲ್ಲಿ ಬೆಳೆದು ಬಂದಿತು. ಈ ಕಾದಂಬರಿಗಳನ್ನು ಕುರಿತ ಚರ್ಚೆಯಲ್ಲಿ ವಿಮರ್ಶೆಯು

‘ವಾಸ್ತವಿಕತೆ’ಯೆಂಬುದನ್ನು ಒಂದು ಪರಿಭಾಷೆಯನ್ನಾಗಿ ಇಟ್ಟುಕೊಂಡಿತು. ಕಾದಂಬರಿ ಪ್ರಕಾರದ ಮುಖ್ಯ ಲಕ್ಷಣವೇ ವಾಸ್ತವಿಕತೆ. ಇತರ ಪ್ರಕಾರಕ್ಕಿಂತ ಕಾದಂಬರಿ ಪ್ರಕಾರವು ಜಗತ್ತಿನ, ಮನುಷ್ಯನ, ಪ್ರಕೃತಿಯ ಭೌತಿಕ ಸ್ವರೂಪವನ್ನು ಸ್ಪಷ್ಟವಾಗಿ ಚಿತ್ರಿಸುವ ಗುಣವನ್ನು ಪಡೆದಿದೆ. ವಾಸ್ತವವಾದವನ್ನು ಕುರಿತ ಸಿದ್ಧಾಂತಗಳೆಲ್ಲವನ್ನು ಕಾದಂಬರಿ ಅನುಸರಿಸುತ್ತದೆ ನಿಜ. ಆದರೆ ಕಾದಂಬರಿಯು ವಾಸ್ತವದ ಸಂಬಂಧವನ್ನು ಕಾಲ್ಪನಿಕವಾದ ಪುನರ್‌ಸೃಷ್ಟಿ ಎಂದು ಗುರುತಿಸಲು ಸಾಧ್ಯವಿದೆ. ಅಲ್ಲದೆ ಈಚೆಗೆ ಕಾದಂಬರಿಯು ವಾಸ್ತವದ ಕಾಲ್ಪನಿಕವಾದ ಮರುಸೃಷ್ಟಿ ಎಂಬ ವಾದವು ಒಪ್ಪಿತವಾಗಿದೆ.

ವಾಸ್ತವವಾದದ ನೆಲೆಯಲ್ಲಿಯೇ ಕೃತಿರಚನೆ ಮಾಡಲು ತೊಡಗಿದ ಅನೇಕ ಪ್ರತಿಭಾವಂತರು, ತಮ್ಮ ತಮ್ಮ ಅನನ್ಯ ದೃಷ್ಟಿಕೋನಗಳಿಂದ ವಾಸ್ತವವನ್ನೇ ಹಲವು ಬಗೆಯಲ್ಲಿ ಗ್ರಹಿಸಿದರು. ಈ ಗ್ರಹಿಕೆಗಳಿಗೆ ಅನುಗುಣವಾಗಿ ಕೃತಿಗಳನ್ನು ಸೃಷ್ಟಿಸಿದರು. ಇದರಿಂದಾಗಿ ಈ ಕೃತಿಗಳನ್ನು ಕುರಿತ ಚರ್ಚೆಯಲ್ಲಿ ಬಳಸಲಾದ ‘ವಾಸ್ತವಿಕತೆ’ ಯು ಬೇರೆ ಬೇರೆ ಅರ್ಥಗಳನ್ನು ಪಡೆಯುತ್ತ, ಪ್ರಾರಂಭದಲ್ಲಿದ್ದ ಅರ್ಥವನ್ನು ಮೀರಿ ನಿಂತಿತು. ಅಲ್ಲದೆ ಪ್ರಾರಂಭದಲ್ಲಿದ್ದ ಅರ್ಥಕ್ಕೆ ವಿರುದ್ಧವಾಗಿಯೂ ವ್ಯಾಖ್ಯಾನ ಹುಟ್ಟಿಕೊಂಡವು. ಅಂದರೆ ವಾಸ್ತವವಾದವು, ಸಮಾಜ, ಅದರ ಸಂಗತಿಗಳು, ವ್ಯಕ್ತಿಗಳು ಅವು ಇರುವ ಹಾಗೆಯೇ ಯಥಾವತ್ತಾಗಿ ಚಿತ್ರಿಸುತ್ತದೆ ಎಂಬ ಅರ್ಥದ ಬದಲಾಗಿ, ವಾಸ್ತವವು ಕಣ್ಣಿಗೆ ಕಾಣುವ ಕೈಗೆ ಸಿಗುವ ವಸ್ತುಗಳಿಗೆ ಸೀಮಿತವಾಗಿರದೆ ಅದು ಮನಸ್ಸು ಮತ್ತು ಆತ್ಮಗಳನ್ನು ಮೀರಿ ನಿಲ್ಲುತ್ತದೆ ಎಂಬ ವ್ಯಾಖ್ಯಾನಗಳಿಗೆ ಬಂದು ನಿಂತಿತು.

ವಾಸ್ತವವಾದದ ಇತಿಹಾಸವನ್ನು ಗಮನಿಸಿದರೆ, ವಾಸ್ತವವಾದದ ಪ್ರತಿಪಾದಕರು ಇದರ ಅರ್ಥವನ್ನು ಸರಳವಾಗಿ ಗ್ರಹಿಸಿದಾಗಲೆಲ್ಲ ದುರ್ಬಲ ಕೃತಿಗಳ ಹುಟ್ಟಿಗೆ ಅಥವಾ ಸಮರ್ಥನೆಗೆ ಕಾರಣವಾಗಿದೆ. ಇದರ ಅರ್ಥದ ಜೊತೆಗೆ ಗಂಭೀರವಾಗಿ ವಾಗ್ವಾದಕ್ಕೆ ತೊಡಗಿದಾಗಲೆಲ್ಲ ಉತ್ಕೃಷ್ಟ ಕೃತಿಗಳು ಸೃಷ್ಟಿಯಾಗಿವೆ. ಇದರಿಂದಾಗಿಯೇ ವಾಸ್ತವವಾದದಲ್ಲಿಯೇ ಅನೇಕ ಕವಲುಗಳನ್ನು ಗುರುತಿಸಲಾಗಿದೆ.[೨]

ವಾಸ್ತವವಾದದ ಕವಲುಗಳು

ವಸ್ತುನಿಷ್ಠವಾದ: ಲೇಖಕನು ಕಣ್ಣಿಗೆ ಕಾಣುವ ಭೌತಿಕ ವಿವರಗಳನ್ನು ಮಾತ್ರ ಚಿತ್ರಿಸುತ್ತಾನೆ. ಕೃತಿರಚನೆಯಲ್ಲಿ ಕೃತಿಕಾರ ವೀಕ್ಷಕನಾಗಿರುತ್ತಾನೆ. ತನ್ನ ವ್ಯಕ್ತಿತ್ವವನ್ನು ಕೃತಿಯ ಯಾವುದೇ ಸಂದರ್ಭದಲ್ಲಿ ಕಾಣಿಸುವುದಿಲ್ಲ. ಕಲ್ಪನೆಗೂ ಅವಕಾಶವಿರುವುದಿಲ್ಲ. ಪರಿವರ್ತನೆಗೊಳ್ಳುವ ಸಮಾಜದ ಭೌತಿಕ ವಿವರಗಳನ್ನು ಅವು ಕಣ್ಮರೆಯಾಗುವ ಮೊದಲು ದಾಖಲೆಮಾಡುವುದು ಮಾತ್ರ ಇದರ ಉದ್ದೇಶವಾಗಿದೆ. ಛಾಯಾಚಿತ್ರಗಾರನ, ಹೆಚ್ಚೆಂದರೆ ವರದಿಗಾರನ ಕೆಲಸವನ್ನು ಕೃತಿಕಾರ ಮಾಡುತ್ತಾನೆ ಎಂದು ಈ ವಾದ ನಂಬುತ್ತದೆ.

ವ್ಯಕ್ತಿನಿಷ್ಠವಾದ: ಕೃತಿಕಾರ ತಾನು ಕಂಡದ್ದನ್ನು ಕಂಡ ಹಾಗೆ ಮತ್ತು ತನಗೆ ಇಷ್ಟವಾಗುವುದನ್ನು ವಿವರಿಸಲು ಪ್ರಯತ್ನಿಸುತ್ತಾನೆ. ಕೃತಿಕಾರ ಕೇವಲ ವಸ್ತುಸ್ಥಿತಿಯನ್ನು ಮಾತ್ರ ಚಿತ್ರಿಸದೆ, ಅದನ್ನು ಚಿತ್ರಿಸುವ ವಸ್ತು ಅವನ ವ್ಯಕ್ತಿತ್ವದ ಮೂಲಕ ಹಾದು ಬಂದಿರುತ್ತದೆ. ಹೀಗಾಗಿ ಕೃತಿಕಾರ ವ್ಯಕ್ತಿಗಳ ವ್ಯಕ್ತಿತ್ವ, ಚರಿತ್ರೆ ಮತ್ತು ತುಡಿತಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ಪಡೆದಿರುತ್ತಾನೆ ಎಂದು ಹೇಳಲಾಗುತ್ತದೆ.

ವಿಶ್ಲೇಷಣಾತ್ಮಕ ವಾಸ್ತವವಾದ: ಕೃತಿಕಾರನು ತಾನು ಚಿತ್ರಿಸುವ ಯಾವುದೇ ವಿಷಯವಿರಲಿ ಅದು ಅಂತರಂಗ ಬಹಿರಂಗಗಳ ವಿವರಗಳನ್ನು, ಸಮಸ್ಯೆಯ ಹಲವು ಮುಖಗಳನ್ನು, ಸಮಾಜದ ಚಲನಶೀಲತೆಯನ್ನು ಅದರ ಚಾರಿತ್ರಿಕ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ವಿಶ್ಲೇಷಣೆಗೆ ಒಳಪಡಿಸುವ ಕಡೆಗೆ ಗಮನಕೊಡುತ್ತಾನೆ. ಸಮಸ್ಯೆಯ ಕಾರಣ ಹಾಗೂ ಅದರ ಪರಿಣಾಮಗಳನ್ನು ಪ್ರಾಮಾಣಿಕವಾಗಿ

ನಿರೂಪಿಸುವ ಗುಣವನ್ನು ಹೊಂದಿರುತ್ತಾನೆ. ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಕಡೆ ಗಮನಹರಿಸುವುದಿಲ್ಲ ಎಂದು ವಿಶ್ಲೇಷಣಾತ್ಮಕ ವಾಸ್ತವವಾದ ಹೇಳುತ್ತದೆ.

ಸಮಾಜವಾದಿ ವಾಸ್ತವವಾದ: ರಷ್ಯದಲ್ಲಿ ಕ್ರಾಂತಿಯ ನಂತರದ ಸಮಾಜದ ವಾಸ್ತವವನ್ನು ಇದು ಚಿತ್ರಿಸುತ್ತದೆ. ಸಮಾಜ ಪರಿವರ್ತನೆಗೆ ಕಾರಣವಾಗುವ ಶಕ್ತಿಗಳ ಪರವಾಗಿ ನಿಲ್ಲುತ್ತದೆ ಅಥವಾ ಇಂಥ ಶಕ್ತಿಗಳ ನಿಲುವನ್ನು ಒಪ್ಪಿಕೊಂಡು ಪ್ರತಿಪಾದಿಸುತ್ತಲೇ ತಾನು ಸೃಷ್ಟಿಸುವ ಕಲಾಕೃತಿಗಳು ಜನಸಾಮಾನ್ಯರಿಗೆ ಸೂಕ್ತದಾರಿಯನ್ನು ತೋರಿಸುವ ಜವಾಬ್ದಾರಿಯನ್ನು ಹೊರುತ್ತದೆ.

ಲೇಖಕ ಜಗತ್ತನ್ನು ನೋಡುವ ಮತ್ತು ಅದನ್ನು ಗ್ರಹಿಸುವ ಕ್ರಮದಲ್ಲಿಯೇ ಅವನ ದೃಷ್ಟಿಕೋನವೊಂದು ರೂಪತಳೆಯುತ್ತದೆ. ಇದು ಲೇಖಕನಿಂದ ಲೇಖಕನಿಗೆ ಭಿನ್ನವಾಗಿರುತ್ತದೆ ಮತ್ತು ಪ್ರತಿಭೆಯನ್ನು ಅವಲಂಬಿಸಿರುತ್ತದೆ. ಹೀಗಾಗಿ 'ವಾಸ್ತವ'ವನ್ನು ಹಲವಾರು ಲೇಖಕರು ಭಿನ್ನಭಿನ್ನ ನೆಲೆಯಲ್ಲಿ ಗ್ರಹಿಸಿ ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳನ್ನು ಕುರಿತ ಚರ್ಚೆಯಲ್ಲಿ ವಿಮರ್ಶೆಯು ಹಲವಾರು ಕವಲುಗಳನ್ನು ಗುರುತಿಸಿದೆ. ಮೇಲೆ ಹೇಳಿದ ಕವಲುಗಳನ್ನು ಹೊರತುಪಡಿಸಿಯೂ ಬೂರ್ಜ್ವಾ ವಾಸ್ತವವಾದ, ಮನೋವೈಜ್ಞಾನಿಕ ವಾಸ್ತವವಾದ, ಮಾಂತ್ರಿಕ ವಾಸ್ತವವಾದ, ಪ್ರವಾದಿ ವಾಸ್ತವವಾದ, ಅತಿ ವಾಸ್ತವವಾದ, ನೈಜವಾಸ್ತವವಾದ ಇನ್ನೂ ಅನೇಕವಿವೆ.[೩] ಎಷ್ಟೋ ಸಲ ವಾಸ್ತವವಲ್ಲದ ಮಾರ್ಗದಲ್ಲಿ ಚಿತ್ರಿಸಿದ ಕೃತಿಗಳು ವಾಸ್ತವ ಮಾರ್ಗದ ಉತ್ತಮ ಕೃತಿಗಳಾಗಿಬಿಟ್ಟಿವೆ. ಅನ್ಯಮಾರ್ಗಗಳ ಮೂಲಕ ಅಥವಾ ತಂತ್ರಗಳ ಮೂಲಕ, ಫ್ಯಾಂಟಸಿಗಳನ್ನೂ ಬಳಸಿ ಚಿತ್ರಿಸಿದ ಕೃತಿಗಳನ್ನು ಕೂಡ ಅರ್ಥೈಸುವುದು ವಾಸ್ತವವಾದದ ಮೂಲಕವೇ. ಅಂದರೆ ಇಂಥ ಕೃತಿಗಳು ವಾಸ್ತವವನ್ನು ಬೇರೆ ಕ್ರಮದಿಂದ ಗ್ರಹಿಸಿರುತ್ತವೆ.

ಈ ಬಗೆಯ ಎಲ್ಲ ಗ್ರಹಿಕೆಗಳನ್ನು ಹೊಂದಿದ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ೨೦ನೆಯ ಶತಮಾನದಲ್ಲಿ ಸೃಷ್ಟಿಯಾದವು. ಈ ಕೃತಿಗಳ ಮೂಲಕ ಕನ್ನಡದ ಲೇಖಕರ ಮನೋಧರ್ಮವನ್ನು ಗುರುತಿಸಲು ವಿಮರ್ಶೆಯೂ ದುಡಿದಿದೆ. ಕಾದಂಬರಿ-ಕಥೆ ಪ್ರಕಾರವನ್ನು ಹೊರತುಪಡಿಸಿ ಕಾವ್ಯದಲ್ಲಿಯೂ ವಾಸ್ತವವಾದ ಅಂಶಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಪ್ರಾಚೀನ ಸಾಹಿತ್ಯದಲ್ಲಿಯೂ ಕೂಡ. ಬೇಂದ್ರೆಯವರ ಹಲವಾರು ಕವಿತೆಗಳನ್ನು ವಾಸ್ತವವಾದದ ಉತ್ತಮ ಕವಿತೆಗಳೆಂದು ಗುರುತಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಕೆಲವು ಸಾಹಿತ್ಯಕ ಚಳುವಳಿಗಳು ನಡೆದಿವೆ. ಅವುಗಳ ಹಿನ್ನೆಲೆಯಲ್ಲಿಯೂ ಕೃತಿರಚನೆಯಾಗಿವೆ. ಪಾಶ್ಚಾತ್ಯ ವಾದಗಳ ಪ್ರಭಾವವೂ ಇದಕ್ಕೆ ಕಾರಣವಾಗಿವೆ. ನಮ್ಮ ಸಮಾಜದ ಚಲನೆಗಳಿಗೆ ಇಲ್ಲಿಯ ಲೇಖಕರು ಜವಾಬ್ದಾರಿಯಿಂದಲೂ ಸ್ಪಂದಿಸಿದ್ದಾರೆ. ಅನೇಕ ಅಂಶಗಳು ಲೇಖಕನ ಮೇಲೆ ಪ್ರಭಾವ ಬೀರಿವೆ. ಜಗತ್ತಿನ ಹಲವು ಶ್ರೇಷ್ಠ ಕೃತಿಗಳು ವಾಸ್ತವ ಮಾರ್ಗ ಪರಂಪರೆಯಲ್ಲಿ ಸೃಷ್ಟಿಯಾದಂತೆ ಕನ್ನಡದ ಹಲವಾರು ಶ್ರೇಷ್ಠ ಕೃತಿಗಳು ವಾಸ್ತವಮಾರ್ಗ ಪರಂಪರೆಯಲ್ಲೇ ಹುಟ್ಟಿಕೊಂಡಿವೆ. ಮಾಸ್ತಿ, ಕಾರಂತ, ಕುವೆಂಪು, ಗೊರೂರು, ರಾವ್ ಬಹಾದ್ದೂರ್, ಚದುರಂಗ, ನಿರಂಜನ, ಕಟ್ಟಿಮನಿ, ತೇಜಸ್ವಿ, ಲಂಕೇಶ್, ಅನಂತಮೂರ್ತಿ, ಆಲನಹಳ್ಳಿ ಮತ್ತು ದೇವನೂರು ಮುಂತಾದವರ ಕಥೆ-ಕಾದಂಬರಿಗಳನ್ನು ವಾಸ್ತವವಾದದ ನೆಲೆಯಲ್ಲಿ ಗುರುತಿಸುವ ಪ್ರಯತ್ನಗಳನ್ನು ಕನ್ನಡ ವಿಮರ್ಶೆ ಮಾಡಿದೆ.

'ಮಲೆಗಳಲ್ಲಿ ಮದುಮಗಳು', 'ಮರಳಿ ಮಣ್ಣಿಗೆ', 'ನಿಸರ್ಗ', 'ವೈಶಾಖ', 'ಗಂಗವ್ವ ಗಂಗಾಮಾಯಿ', 'ಜ್ವಾಲಾಮುಖಿಯ ಮೇಲೆ', 'ಚಿರಸ್ಮರಣೆ', 'ಒಡಲಾಳ' ಇವುಗಳಲ್ಲದೆ 'ಸಂಸ್ಕಾರ', 'ಕಾಡು', 'ಗತಿಸ್ಥಿತಿ', ಶಿಕಾರಿ' 'ಮುಕ್ತಿ' ಮುಂತಾದ ಕಾದಂಬರಿಗಳನ್ನೂ ಸೇರಿಸಿ ಹೇಳಬಹುದು. ಇವುಗಳಲ್ಲಿ ವಾಸ್ತವವನ್ನು ಭಿನ್ನ ಭಿನ್ನವಾಗಿಯೇ ಗ್ರಹಿಸಿರುವುದನ್ನು ಕಾಣಬಹುದು. ಜಡಭರತ, ಶ್ರೀರಂಗರ ನಾಟಕಗಳನ್ನು ಈ ಸಾಲಿನಲ್ಲಿ ನೆನೆಯಬಹುದು. ಈ ಎಲ್ಲ ಕೃತಿಗಳಲ್ಲಿ ಈ ಶತಮಾನದ ಸಾಮಾಜಿಕ ಬದುಕಿನ ಚಲನೆಗಳನ್ನು ಸ್ಪಷ್ಟವಾಗಿಯೇ ಕಾಣುತ್ತೇವೆ.

ಸಾಮಾಜಿಕ ವಾಸ್ತವ

'ವಾಸ್ತವವಾದ' ಎನ್ನುವುದು ಒಂದು 'ವಾದ'ವಾಗಿ, ದೃಷ್ಟಿಕೋನವಾಗಿ, ಧೋರಣೆಯಾಗಿ ಪರಿಣಮಿಸಿರುವುದನ್ನು, ಅದು ಒಂದು ಪರಿಕಲ್ಪನೆಯಾಗಿ ಹಲವಾರು ಏರಿಳಿತಗಳನ್ನು ಕಂಡು ಬೆಳೆಯುತ್ತಲೇ ಕೆಲ ಕವಲುಗಳಾಗಿ ಚಿಗುರಿರುವುದನ್ನು ಗಮನಿಸಲಾಯಿತು. 'ಸಾಮಾಜಿಕ ವಾಸ್ತವ'ದ ಬಗ್ಗೆ ಪ್ರತ್ಯೇಕ ಅಧ್ಯಯನಗಳು ನಡೆದಿಲ್ಲವಾದರೂ, ಅದರ ಬಗ್ಗೆ ಚರ್ಚೆಗಳು ವಿಮರ್ಶೆಯಲ್ಲಿ ಸಂದರ್ಭಾನುಸಾರ ನಡೆಯುತ್ತಲೇ ಇವೆ. 'ವಾಸ್ತವ' ಎಂದರೆ ಸಾಮಾನ್ಯವಾಗಿ ವಸ್ತುಸ್ಥಿತಿ, ಯಥಾವತ್ತಾದ, ನೈಜವಾದ ಸ್ಥಿತಿ ಎಂದೇ ಹೇಳಬಹುದು. ಈ 'ವಾಸ್ತವ'ದ ಹಿಂದೆ 'ಸಾಮಾಜಿಕ' ಸೇರಿಕೊಂಡಿರುವುದರಿಂದ ಸಮಾಜದ ವಸ್ತುಸ್ಥಿತಿ, ಯಥಾವತ್ತಾದ, ನೈಜವಾದ 'ಪ್ರತಿಬಿಂಬ' ಎಂದು ಕರೆಯಬಹುದು. 'ಸಮಾಜ'ಎನ್ನುವುದಕ್ಕೆ ಸಮಾಜಶಾಸ್ತ್ರದಲ್ಲಿ ಅನೇಕ ವ್ಯಾಖ್ಯಾನಗಳು, ವಿವರಣೆಗಳು ಬೆಳೆದು ವಿಶಾಲ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ. ಸಮಾಜ ಮತ್ತು ಮನುಷ್ಯನ ಸಂಬಂಧ ನಿಕಟವಾಗಿ ಬೆಳೆದಿರುವುದರಿಂದ ಮನುಷ್ಯನ ಚಟುವಟಿಕೆಗಳಿಗೆ ಹೊಸ ಹೊಸ ಆಯಾಮಗಳು ಸೇರಿಕೊಂಡು 'ಸಮಾಜ'ದ ಅರ್ಥವ್ಯಾಪ್ತಿ ವಿಸ್ತರಿಸಿಕೊಂಡು ಹೋಗುತ್ತದೆ. ಇದರಿಂದ 'ಸಾಮಾಜಿಕ'ಎಂದರೆ ಕೇವಲ ಸಾಮಾಜಿಕವಾಗಿ ಉಳಿದಿರುವುದಿಲ್ಲ. ಅದು ಒಂದು ಪರಿಕಲ್ಪನೆಯಾಗಿ ಅದರ ಒಳಗೆ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಪರಿಭಾವಿಸಬಹುದು. ಸಾಹಿತ್ಯಕ ಸಂದರ್ಭದಲ್ಲಂತೂ ಹೀಗೆ ಪರಿಭಾವಿಸುವುದು ಅನಿವಾರ್ಯವಾಗುತ್ತದೆ. ಒಂದು ಕೃತಿಯನ್ನು 'ಸಾಮಾಜಿಕ ಕೃತಿ' ಎಂದು ಗುರುತಿಸಿದರೆ, ಅದರಲ್ಲಿ ಬರೀ ಸಾಮಾಜಿಕ ಅಂಶಗಳು ಮಾತ್ರ ಇರುವುದಿಲ್ಲ. ಪ್ರಧಾನವಾಗಿ ಸಾಮಾಜಿಕ ಅಂಶಗಳು ಕಂಡರೂ ಅದರಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳು ಸೇರಿಕೊಂಡಿರುತ್ತವೆ. ಹೀಗಾಗಿ 'ಸಾಮಾಜಿಕ ವಾಸ್ತವ' ಎಂದರೆ ಸಮಾಜದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಚಟುವಟಿಕೆಗಳೆಲ್ಲದರ 'ವಸ್ತುಸ್ಥಿತಿ'ಎಂದೇ ಗ್ರಹಿಸಬೇಕಾಗುತ್ತದೆ.

'ವಾಸ್ತವ'ವನ್ನು ಗ್ರಹಿಸುವುದು ಹೇಗೆ? ನಿತ್ಯ ಪರಿವರ್ತನ ಶೀಲ ಸಮಾಜವನ್ನು ಸಾಹಿತ್ಯ ಕೃತಿಗಳು ಹೇಗೆ ಹಿಡಿಯುತ್ತವೆ? ಎಂಬ ಪ್ರಶ್ನೆಗಳು ಹುಟ್ಟುತ್ತವೆ. 'ವಾಸ್ತವ'ದ ಸ್ವರೂಪ ಒಂದೇ ಬಗೆಯಲ್ಲಿ ಇರುವುದಿಲ್ಲ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ವ್ಯಕ್ತವಾಗುತ್ತದೆ. ಸಮಾಜದಲ್ಲಿ ಘಟಿಸಿದ ಯಾವುದೇ ಘಟನೆ ಇರಬಹುದು, ಪ್ರಚಲಿತ ಸಮಸ್ಯೆಗಳಿರಬಹುದು. ರಾಜಕೀಯ, ಆರ್ಥಿಕ ಚಟುವಟಿಕೆಗಳಿರಬಹುದು. ಅದನ್ನು ನೋಡಿದ ವ್ಯಕ್ತಿಯ ವ್ಯಕ್ತಿತ್ವದ ಮೂಲಕವಾಗಿ ಹಾದು ಬಂದಿರುತ್ತದೆ. ಈ ವ್ಯಕ್ತಿ ಅದನ್ನು ತನ್ನ ಹಿನ್ನೆಲೆಯಲ್ಲೇ ಗ್ರಹಿಸಿ 'ಇದು ವಾಸ್ತವ'ಎಂದು ಮಂಡಿಸುತ್ತಾನೆ. ಇದರಂತೆಯೇ ಇನ್ನೊಬ್ಬ, ಮಗದೊಬ್ಬ. ಈ ಗ್ರಹಿಕೆ ಮುಖ್ಯವಾಗಿ ವ್ಯಕ್ತಿಯ ಹುಟ್ಟಿದ ಜಾತಿ, ವರ್ಗ, ಪರಿಸರ ಮತ್ತು ಪ್ರಭಾವಗಳಿಂದಲೇ ರೂಪುಗೊಂಡಿರುತ್ತದೆ. ಹೀಗೆ ರೂಪಗೊಂಡ ಪ್ರಜ್ಞೆಯ ನೆಲೆಯಿಂದಲೇ ಸಮಾಜದ ಅನೇಕ ಚಟುವಟಿಕೆಗಳನ್ನು ಗ್ರಹಿಸಲು ಪ್ರಯತ್ನಿಸಿರುತ್ತಾನೆ. ಇದರಿಂದಾಗಿಯೇ ಸಹಜವಾಗಿ ನಿರ್ದಿಷ್ಟ, 'ಆಯ್ಕೆ'ಯೂ ನಡೆಯುತ್ತದೆ. ಇಂಥ ಆಯ್ಕೆಯ ಹಿಂದೆ ಚಾರಿತ್ರಿಕ, ಸಾಂಸ್ಕೃತಿಕ ಒತ್ತಡಗಳು ದುಡಿದಿರುತ್ತವೆ. ಅಂತಿಮವಾಗಿ ಈ ಅವಸ್ಥೆಯೇ ವ್ಯಕ್ತಿಯ ದೃಷ್ಟಿಕೋನವಾಗಿ ಪರಿಣಮಿಸುತ್ತದೆ ಮತ್ತು ಈ ದೃಷ್ಟಿಕೋನವು ಲೇಖಕನನ್ನು ನಿಯಂತ್ರಿಸುತ್ತದೆ.

ಯಾವುದೇ ಸಾಹಿತ್ಯ ಕೃತಿಗೂ ಮತ್ತು ಅದು ಸೃಷ್ಟಿಯಾದ ಕಾಲದ ಸಮಾಜಕ್ಕೂ ಸಂಬಂಧವಿರುತ್ತದೆ. ಈ ಸಂಬಂಧದಿಂದಾಗಿ ಸಮಾಜದಲ್ಲಿ ಕಾಣುವ ಮನುಷ್ಯನ ಬದುಕು, ಅವನ ತಲ್ಲಣಗಳು, ಸಾಂಸ್ಕೃತಿಕ ಸಂಬಂಧಗಳು ಸಾಹಿತ್ಯ ಕೃತಿಯಲ್ಲಿ ಮೂಡಿರುತ್ತವೆ. ಇದರಿಂದಾಗಿ ಒಂದು ಸಾಹಿತ್ಯ ಕೃತಿಯನ್ನು ಓದುವುದೆಂದರೆ, ಸಮಾಜದ ಸಾಮಾಜಿಕ ಬದುಕಿನ ಸಂಘರ್ಷಗಳನ್ನು ಓದಿದಂತೆ. ಸಾಹಿತ್ಯ ಕೃತಿ ತನ್ನ ಕಾಲದ ತುಡಿತಗಳನ್ನು, ಸಾಂಸ್ಕೃತಿಕ ಒತ್ತಡಗಳನ್ನು ಒಡಲೊಳಗೆ ಇಟ್ಟುಕೊಂಡಿರುವುದರಿಂದಲೇ, ಸಮಾಜದ

ಸಾಮಾಜಿಕ ಸಂದರ್ಭಗಳನ್ನು ಗ್ರಹಿಸಲು ಸಾಧ್ಯವಾಗುವುದು. ಇದರಿಂದಲೇ ಸೃಜನಶೀಲ ಸಾಹಿತ್ಯ ಕೃತಿಗಳು ಇತಿಹಾಸ, ಸಮಾಜಶಾಸ್ತ್ರ ಅರ್ಥಶಾಸ್ತ್ರದಂತಹ ಇತರ ಅನೇಕ ಶಾಸ್ತ್ರಗಳ ಅಧ್ಯಯನಕ್ಕೆ ಆಕರಗಳಾಗಿ ನಿಂತಿವೆ. ಕಾರಂತ, ಕುವೆಂಪು, ರಾವ್ ಬಹದ್ದೂರ್ ಅವರ ಕಾದಂಬರಿಗಳು, ಮಾಸ್ತಿಕಥೆಗಳು, ಗೊರೂರ, ಮೂರ್ತಿರಾಯರ ಪ್ರಬಂಧಗಳು, ಶ್ರೀರಂಗರ ನಾಟಕಗಳು ಇದಕ್ಕೆ ನಿದರ್ಶನಗಳಾಗಿವೆ. 'ಮಲೆಗಳಲ್ಲಿ ಮದುಮಗಳು', 'ಮರಳಿ ಮಣ್ಣಿಗೆ', 'ಗ್ರಾಮಾಯಣ' ಮುಂತಾದ ಇಂಥ ಬಹುತೇಕ ಸೃಜಶೀಲ ಸಾಹಿತ್ಯ ಕೃತಿಗಳಲ್ಲಿ ಸಮಾಜದಲ್ಲಿ ನಡೆಯುವ ಅನೇಕ ವಿದ್ಯಮಾನಗಳ ವಾಸ್ತವ ಚಿತ್ರಣವಿರುತ್ತದೆ. ಭಿನ್ನ ಸಾಮಾಜಿಕ ಸ್ತರಗಳಲ್ಲಿ ಬದುಕುವ ಜನಸಮುದಾಯಗಳು, ಅವುಗಳ ಜೀವನ ಕ್ರಮಗಳಿಂದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳು ವ್ಯಕ್ತವಾಗುತ್ತವೆ. ಈ ಸಾಹಿತ್ಯ ಕೃತಿಗಳು ನಾಡಿನ ಯಾವುದೋ ಮೂಲೆಯ ಬದುಕನ್ನು ಹಿಡಿದು ಚಿತ್ರಿಸುವುದರಿಂದ, ಅಜ್ಞಾತವಾಗಿರುವ ಜನರ ಬದುಕು ಮತ್ತು ಸ್ಥಳಗಳ ಅನೇಕ ಸೂಕ್ಷ್ಮಗಳನ್ನು ಅರಿಯಲು ಸಾಧ್ಯವಾಗುತ್ತದೆ. ಚರಿತ್ರೆಯನ್ನು ಬೇರೊಂದು ದೃಷ್ಟಿಯಿಂದ ಕಟ್ಟಲು ಇದರಿಂದಲೇ ಸಾಧ್ಯವಾಗುತ್ತದೆ. ಸಾಹಿತ್ಯ ಕೃತಿಗಳಲ್ಲಿ 'ಸಾಮಾಜಿಕ ವಾಸ್ತವ'ವನ್ನು ಹುಡುಕುವುದರ ಅಧ್ಯಯನದಿಂದ ಸಮಾಜದ ಒಡಲಲ್ಲಿ ಹುದುಗಿರುವ ಸಾಂಸ್ಕೃತಿಕ ತಲ್ಲಣಗಳನ್ನು ಅರಿಯಬಹುದು. ಇದನ್ನು ನಂಬಿ ಹೈದ್ರಾಬಾದ್ ಕರ್ನಾಟಕದಲ್ಲಿ ಸೃಷ್ಟಿಯಾಗಿರುವ ಸಾಹಿತ್ಯದ ಅಧ್ಯಯನವನ್ನು ಮಾಡಲು ಯತ್ನಿಸಲಾಗಿದೆ. ಈ ಅಧ್ಯಯನದಲ್ಲಿ ಸಾಹಿತ್ಯವನ್ನು ಅನನ್ಯವಾದ ಕಲೆ ಎಂದು ಭಾವಿಸದೆ, ಬರವಣಿಗೆಯ ಮೂಲಕ ಪ್ರಕಟವಾಗುತ್ತಿರುವ ಅನೇಕ ಬಗೆಯ ರೂಪಗಳಲ್ಲಿ ಒಂದು ಎಂದು ನಂಬಲಾಗಿದೆ. ಹೀಗಾಗಿ ಇಲ್ಲಿ ಸಾಹಿತ್ಯವನ್ನು ಆಶಯ ಪ್ರಧಾನವಾದ (ಥಿಮ್ಯಾಟಿಕ್) ರೀತಿಯಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಅಧ್ಯಯ ನಾಲ್ಕು: ರಾಜಕೀಯ ಸ್ಥಿತ್ಯಂತರಗಳು ಮತ್ತು ಸಾಂಸ್ಕೃತಿಕ ಪರಿಸರ

ರಾಜ್ಯ ವಿಸ್ತರಣಾವಾದಿ ಯುದ್ಧಗಳ ನಡುವೆ

ಸಂತರು ಮತ್ತು ಸಮುದಾಯ

ವಿರಕ್ತಿ ಯಾಕೆ ಹುಟ್ಟುತ್ತದೆ

ಸೂಫಿಗಳು, ಹರಿದಾಸರು ಹಾಗೂ ತತ್ವಪದಕಾರರು

ತತ್ವಪದಕಾರರು ಮತ್ತು ಸಮಾಜ

ಹಿಂದೂ-ಮುಸ್ಲಿಂ ಸಂಬಂಧಗಳು

ಅಧ್ಯಾಯ ನಾಲ್ಕು: ರಾಜಕೀಯ ಸ್ಥಿತ್ಯಂತರಗಳು ಮತ್ತು ಸಾಂಸ್ಕೃತಿಕ ಪರಿಸರ

ರಾಜ್ಯವಿಸ್ತರಣಾವಾದಿ ಯುದ್ಧಗಳ ನಡುವೆ

ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಕಳೆದ ಮೂರು ಶತಮಾನಗಳು ತೀವ್ರವಾದ ಸಂಘರ್ಷವನ್ನು ಕಂಡ ಕಾಲವೆಂದೇ ಹೇಳಬೇಕು. ಪ್ರಮುಖವಾಗಿ ಮೊಗಲರು, ಮರಾಠರು ಮತ್ತು ಬ್ರಿಟಿಷರು ತಮ್ಮ ರಾಜಕೀಯ ಶಕ್ತಿಯಿಂದ ಇಲ್ಲಿ ಪ್ರಭುತ್ವ ಸ್ಥಾಪಿಸಲು ಯತ್ನಿಸಿದರು. ಇದಕ್ಕೂ ಮೊದಲು ವಿಜಯನಗರ ಮತ್ತು ಬಹಮನಿ ಅರಸರು ತಮ್ಮ ಸಾಮ್ರಾಜ್ಯಗಳನ್ನು ಕರ್ನಾಟಕದ ಉತ್ತರ ಭಾಗದಲ್ಲಿ ಸ್ಥಾಪಿಸಿಕೊಂಡು, ತಮ್ಮೆಲ್ಲ ಶಕ್ತಿಗಳ ಬಲದಿಂದ ಮುಖಾಮುಖಿಯಾಗಿ ಸಂಘರ್ಷ, ಯುದ್ಧಗಳನ್ನು ನಡೆಸುತ್ತಲೇ ಸಾಮ್ರಾಜ್ಯಗಳನ್ನು ಕಟ್ಟಿದರು, ಬದುಕಿ ಬಾಳಿ ಅವನತಿಯನ್ನೂ ಕಂಡರು. ವಿಜಯನಗರ ಪತನಾನಂತರವೂ ಈ ರಾಜ್ಯದಲ್ಲಿ ಪ್ರಭುತ್ವಕ್ಕೆ ಬರಲು ಒಳ ಯುದ್ಧಗಳು ಜರುಗಿದವು. ಹಾಗೇ ಬಹಮನಿ ರಾಜ್ಯದಲ್ಲಿಯೂ ಕೂಡ. ಉತ್ತರ ಭಾಗದ ಈ ಅರಸರು ದಕ್ಷಿಣ ಭಾಗದವರೆಗೆ ಆಗಾಗ ಸೈನ್ಯದೊಡನೆ ಹೋಗಿ ಯುದ್ಧ ಮಾಡುತ್ತಿದ್ದರು. ಆದಿಲಶಾಹಿ ರಾಜ್ಯವು ಉತ್ತರ ಭಾರತದ ಮೊಗಲ ಚಕ್ರವರ್ತಿ ಔರಂಗಜೇಬನ ದಾಳಿಗೆ ಸಿಕ್ಕು ನಾಶವಾಗಿ ಹೋಯಿತು. ಆದಿಲಶಾಹಿ ರಾಜ್ಯ ದುರ್ಬಲವಾಗುತ್ತಿದ್ದಂತೆ ಕಂಡು ಬಂದ ಹೊತ್ತಿನಿಂದಲೇ ಮರಾಠರು ದಾಳಿ ನಡೆಸಲು ಪ್ರಾರಂಭಿಸಿದರು. ಇದರಿಂದಾಗಿ ಆದಿಲಶಾಹಿ ಅರಸರನ್ನು ನಾಶಮಾಡಿದ ಮೇಲೆಯೂ ಔರಂಗಜೇಬನು ತನ್ನ ಜೀವಿತದ ಬಹುಭಾಗವನ್ನು ದಖನ್ನಿನಲ್ಲಿ ಕಳೆಯಬೇಕಾಗಿ ಬಂತು. ಶಿವಾಜಿಯು ವಿಜಾಪುರದ ಸುಲ್ತಾನರೊಡನೆ ಹಾಗೂ ಔರಂಗಜೇಬನೊಡನೆ ನಿರಂತರವಾಗಿ ಯುದ್ಧ ಮಾಡಿದ. ದಕ್ಷಿಣ ಪ್ರಾಂತ್ಯದಲ್ಲಿ ಔರಂಗಜೇಬನು ತನ್ನ ಪ್ರಭುತ್ವವನ್ನು ಸ್ಥಾಪಿಸಲು ಹಲವಾರು ವರ್ಷಗಳ ಕಾಲ ಇಲ್ಲೇ ಉಳಿದ ಕಾರಣ, ಉತ್ತರದಲ್ಲಿ ಅವನ ಆಡಳಿತ ಕುಸಿಯತೊಡಗಿತ್ತು. ಅನಿವಾರ್ಯವಾಗಿ ಅವನು ಮರಳಿ ಹೋದ. ದಖನ್ನಿನಲ್ಲಿ ಯುದ್ಧ, ಸಂಘರ್ಷಗಳ ಗೊಂದಲದ ವಾತಾವರಣ ಏರ್ಪಟ್ಟಾಗಲೇ ವ್ಯಾಪಾರ ಸಂಬಂಧಿಗಳಾಗಿ ಡಚ್ಚರು, ಪೋರ್ಚುಗೀಸರು ಭಾರತವನ್ನು ತೂರಿಬಂದಿದ್ದರು. ಇವರ ಬೆನ್ನಿಗೆ ಫ್ರೆಂಚರು, ಬ್ರಿಟಿಷರು ಬಂದರು. ಸಹಜವಾಗಿಯೇ ಸ್ಪರ್ಧೆ, ಪೈಪೋಟಿಗಳು ಶುರುವಾದವು. ಈ ಅನ್ಯ ದೇಶಗಳ ವ್ಯಾಪಾರಿಗಳು ತಮ್ಮ ವ್ಯಾಪಾರವನ್ನೂ ಕುದುರಿಸಿಕೊಳ್ಳಲು ದೇಶಿಯ ರಾಜರ ಸಖ್ಯ ಬೆಳೆಸಲು ತೀವ್ರ ಸೆಣಸಾಟ ನಡೆಸಿದರು. ಭಾರತದ ಸಂಪತ್ತನ್ನು ಹಂಚಿಕೊಳ್ಳಲು ಈ ಅನ್ಯದೇಶಿಯರ ನಡುವೆ ಸಂಘರ್ಷ ಏರ್ಪಟ್ಟಾಗಲೆಲ್ಲ ಸ್ಥಳೀಯ ಅರಸರು ತಮ್ಮ ಶಕ್ತಿಯನ್ನು ತಮಗರಿವಿಲ್ಲದಂತೆ ಕಳೆದುಕೊಂಡರು. ವ್ಯಾಪಾರ ಪೈಪೋಟಿಯಲ್ಲಿ ನಡೆದ ತೀವ್ರ ಯುದ್ಧಗಳಲ್ಲಿ ಕೊನೆಗೆ ಬ್ರಿಟಿಷರಿಗೆ ಜಯ ಸಿಕ್ಕಿತು. ಆಳದಲ್ಲಿ ಮನೆಮಾಡಿಕೊಂಡಿದ್ದ ಅವರ ರಾಜಕೀಯ ಶಕ್ತಿಗೆ ಬಲ ಬಂದಿತು. ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯತೊಡಗಿ ಸಾಮ್ರಾಜ್ಯ ಕಟ್ಟುವ ನಿಟ್ಟಿನತ್ತ ದೇಶಾದ್ಯಂತ ತಮ್ಮ ತಂತ್ರಗಳಿಂದ ಪ್ರಭುತ್ವ ಸ್ಥಾಪಿಸಿದರು. ದಾಳಿ ಮಾಡುತ್ತಿದ್ದ ಮರಾಠರೊಡನೆ ಹಾಗೂ ಹೈದರಾಬಾದಿನ ನಿಜಾಮರೊಡನೆ ಒಪ್ಪಂದ ಮಾಡಿಕೊಂಡ ಬ್ರಿಟಿಷರು, ಇವರ ನೆರವಿನಿಂದಲೇ ದಕ್ಷಿಣ ಪ್ರಾಂತ್ಯದ ಮೇಲೆ ಯುದ್ಧ ಹೂಡಿ ಮೊದಲು ಹೈದರಾಲಿ, ನಂತರ ಟಿಪ್ಪುಸುಲ್ತಾನನನ್ನು ಬಗ್ಗುಬಡಿದರು. ಮೈಸೂರಿನ ಅರಸರನ್ನು ತಮ್ಮ ಅಧೀನಕ್ಕೆ ತಂದುಕೊಂಡರು. ಹೀಗೆ ರಾಜಕೀಯ ಸ್ಥಿತ್ಯಂತರಗಳಲ್ಲಿ ಜನಸಮುದಾಯಗಳು ಅನೇಕ ಬಗೆಯಲ್ಲಿ ಕಷ್ಟನಷ್ಟಗಳನ್ನು ಅನಿವಾರ್ಯವಾಗಿ ಅನುಭವಿಸುವಂತಾಯಿತು. ಹೊರಗಿನ ಆಕ್ರಮಣಗಳಿಂದ ಬೇರೆ ಬೇರೆ ಧರ್ಮ, ಭಾಷೆಗಳ ಒತ್ತಡಗಳು ಹೆಚ್ಚಾಗಿ, ಸಂಘರ್ಷಗಳು ಏರ್ಪಟ್ಟು ಸಾಂಸ್ಕೃತಿಕ ಏರುಪೇರುಗಳು ಉಂಟಾದವು. ಈ ಪ್ರಾಂತ್ಯದ ಬದುಕು ಒಂದು ಬಗೆಯ ಸಂಕರ ಸಂಸ್ಕೃತಿಗೆ ನೆಲೆಯಾಯಿತು.

ಸಂತರು ಮತ್ತು ಸಮುದಾಯ

ಮುಖ್ಯವಾಗಿ 'ಹಿಂದೂ' ಮತ್ತು 'ಮುಸ್ಲಿಂ' ಸಾಮ್ರಾಜ್ಯಗಳು ನಡುವೆ ಇಷ್ಟೆಲ್ಲ ಯುದ್ಧ ಕೋಲಾಹಗಳ ನಡುವೆಯೇ ವಿಶಿಷ್ಟ ಹಾಗೂ ವಿಚಿತ್ರ ರೀತಿಯಲ್ಲಿ 'ಸೌಹಾರ್ದತೆ' ಏರ್ಪಟ್ಟಿತ್ತು. ಈ ಸೌಹಾರ್ದತೆಗೆ ಅನೇಕ ಕಾರಣಗಳಿವೆ. ಹಾಗೆ ನೋಡಿದರೆ ಈ ಎರಡು ಸಮುದಾಯಗಳ ನಡುವೆ ನಂಬಿಕೆಗಳಲ್ಲಿ, ಸಂಪ್ರದಾಯಗಳ ಆಚರಣೆಯಲ್ಲಿ, ಸಾಂಸ್ಕೃತಿಕ ರೀತಿ ನೀತಿಗಳಲ್ಲಿ ಸಾಮ್ಯಗಳು ಕಡಿಮೆ. ಈ ಸಮುದಾಯಗಳು ಮತಸಂಬಂಧಿ ವಿಷಯಗಳಲ್ಲಿ ಮಡಿವಂತಿಕೆಗೆ ಬದ್ಧವಾಗಿ ಹಲವು ಕಟ್ಟುಪಾಡುಗಳನ್ನು ಬಿಗಿಯಾಗಿ ಹೊಂದಿದ್ದವು. ರಾಜಪ್ರಭುತ್ವ ಮತ್ತು ಸಮಾಜವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವಷ್ಟು ಶಕ್ತವಾಗಿದ್ದವು. ಆದರೆ ಶತಮಾನಗಳ ಕಾಲ ಒಂದೇ ಅಂಗಳದಲ್ಲಿ ಬದುಕು ಸವೆಸುವುದು ಅನಿವಾರ್ಯವಾಯಿತು. ಈ ಎರಡು ಸಮುದಾಯಗಳ ಒಳಗೇ 'ಮುಕ್ತ' ಮನಸ್ಸುಗಳು ಕುಡಿಯೊಡೆಯತೊಡಗಿದವು. ಈ ಮುಕ್ತ ಮನಸ್ಸುಗಳನ್ನು ಹಿಂದೂಗಳಲ್ಲಿ 'ಭಕ್ತರು', 'ಶರಣರು' ಎಂದು, ಮುಸ್ಲಿಮರಲ್ಲಿ 'ಪೀರರು', 'ಸೂಫಿ'ಗಳೆಂದು ಕರೆಯಲಾಗಿದೆ. ಈ ಮನಸ್ಸುಗಳು ತಮ್ಮ ತಮ್ಮ ಸಮುದಾಯಗಳಲ್ಲಿದ್ದ ಗೋಡೆಗಳನ್ನು ಕೆಡವಲು ಸನ್ನದ್ಧವಾದವು. ಈ ಮುಕ್ತ ಮನಸ್ಸುಗಳು ಚರಿತ್ರೆಯುದ್ದಕ್ಕೂ ಸಂಸ್ಕೃತಿಯಲ್ಲಿ ಗುಪ್ತಗಾಮಿನಿಯಾಗಿ ಹರಿದು ಸಮಾಜದ ಚಲನೆಗೆ ಕಾರಣವಾದವು. ಆಳರಸರು ರಾಜಕೀಯ ಕಾರಣದಿಂದಲೂ ಇಂಥ ಮನಸ್ಸುಗಳನ್ನು ಗೌರವಿಸಿದರು ಮತ್ತು ಆಳರಸರಲ್ಲಿಯೇ ಇಂಥ ಮನಸ್ಸುಗಳು ಹುಟ್ಟಿಕೊಂಡವು. ಇಸ್ಲಾಂ ಧರ್ಮದಲ್ಲಿಯೇ ಇದ್ದು, ಅದರ ಮತೀಯತೆಯನ್ನು ಮೀರುವ ಸರಳವಾಗಿ ಬದುಕುವ ರೀತಿಯನ್ನು ಸೂಫಿಗಳು ಕಂಡುಕೊಂಡಿದ್ದರು.

ಚರಿತ್ರೆಯಲ್ಲಿ ಗುರುತಿಸುವಂತೆ, ಮೊಗಲ ವಂಶದ ದಾರಾ ಸೂಫಿ ಪಂಥಕ್ಕೆ ಸೇರಿದವನು. ಮುಸ್ಲಿಮ್ ಮತದ ಒಡಲಲ್ಲಿಯೇ ಹುಟ್ಟಿದ ಸೂಫಿ ಪಂಥದಲ್ಲಿ ದಾರಾನು ಸೇರಿದ್ದರಿಂದ ಇದರ ಉದಾರವಾದಿ ನೆಲೆಯಿಂದಾಗಿ ಉಳಿದ ಮತಗಳನ್ನು ಮುಕ್ತವಾಗಿ ನೋಡಲು ದಾರಾನಿಗೆ ಸಾಧ್ಯವಾಯಿತು. ಕಬೀರ್ ಎಂಬ ಸಂತನೂ ಅಕ್ಬರ್ ಎಂಬ ಉದಾರಿಯೂ ಸಮಾಜದಲ್ಲಿದ್ದ ಕಾರಣ ಅನೇಕ ಮತ-ಧರ್ಮಗಳ ನಡುವಿನ ಕಂದರಗಳು ಕಡಿಮೆಯಾಗಲು ಸಾಧ್ಯವಾಯಿತು. ಅಬ್ದುಲ್ಲಾ ಖಾನ್ ಎನ್ನುವ ಮೊಗಲ್ ಮಂತ್ರಿಯು, ಸಿರಾಜುದೌಲ್ ಮತ್ತು ಮೀರ್ ಜಾಫರ್ ಇವರು ಬಸಂತ ಮತ್ತು ಹೋಳಿ ಹಬ್ಬಗಳಲ್ಲಿ ಸ್ವತಃ ಪಾಲ್ಗೊಳ್ಳುತ್ತಿದ್ದರು. ಮೀರ್ ಜಾಫರ್ ಸಾಯುವ ಸಮಯದಲ್ಲಿ ಕಿರೀಟೇಶ್ವರಿಯ ತೀರ್ಥ ಸ್ವೀಕರಿಸಿದನು. ದೌಲತ್ ರಾವ್ ಶಿಂಧೆ ಹಸುರಂಗಿಗಳನ್ನೂ ತೊಟ್ಟು ಮೊಹರಂಗಳಲ್ಲಿ ಭಾಗಿಯಾಗುತ್ತಿದ್ದ. ಮೊಗಲರ ಅರಮನೆಗಳಲ್ಲಿ ಸಂಭ್ರಮದಿಂದ ದುರ್ಗಾ ಪೂಜೆಗಳು ನಡಯುತ್ತಿದ್ದವು. ವಿಜಯನಗರದ ಅರಸರು ಕುರ್‌ಆನ್ ಗ್ರಂಥವನ್ನು ಗೌರವಿಸುತ್ತಿದ್ದರು. ಬಹಮನಿ-ಆದಿಲಶಾಹಿ ಅರಸರ ಕಾಲದಲ್ಲಿ ಹಿಂದೂ, ಮುಸ್ಲಿಂ ಸಂಸ್ಕೃತಿಯ ವಿನಿಮಯ ಅನಿವಾರ್ಯವಾಗಿ ಹೆಚ್ಚಾಯಿತು. ಎರಡನೇ ಇಬ್ರಾಹಿಂ ಆದಿಲಶಾಹಿ ಕಾಲದಲ್ಲಿ ಇದು ಗರಿಷ್ಠ ಮಿತಿಯನ್ನು ಮುಟ್ಟಿತು. ಇಂಥ ವಿನಿಮಯ ಕೇವಲ ರಾಜಕೀಯ ಕಾರಣಗಳಿಂದ ಮಾತ್ರ ನಡೆದಿಲ್ಲವೆಂಬುದೂ ನಿಜ. ಬಹಮನಿ ಅರಸರ ಕಾಲದಲ್ಲಿ ಉತ್ತರ ಭಾರತದ ಮುಸ್ಲಿಮರು, ಹಿಂದೂಗಳು, ಪರ್ಶಿಯನ್ನರು, ಆಫ್ರಿಕನ್ನರು ಈ ಭಾಗಕ್ಕೆ ಬಂದು ನೆಲೆ ನಿಲ್ಲಲು ಯತ್ನಿಸಿದರು. ಹಿಂದೂ ಭಾಷೆಯೇ ಮೂಲವಾಗಿ, ಗುಜರಾತಿ, ಮರಾಠಿ, ಕನ್ನಡ, ಫಾರ್ಸಿ ಮತ್ತು ಅರಾಬಿಕ್ ಭಾಷೆಗಳ ಸಮ್ಮಿಶ್ರವಾಗಿ ದಖನಿ ಭಾಷೆ ರೂಪಗೊಂಡಿತು. ಈ ಭಾಷೆಯ ಅನೇಕ ಕವಿ, ಪಂಡಿತ, ಕಲಾವಿದರನ್ನು ಬಹಮನಿ-ಆದಿಲಶಾಹಿ ಅರಸರು ಗೌರವಿಸಿ ರಾಜಾಶ್ರಯ ನೀಡಿದರು. ಮಹಮ್ಮದ್ ಬಿನ್ ತುಘಲಕ್‌ನ ರಾಜಧಾನಿ ವರ್ಗಾವಣೆ ಪ್ರಕರಣದಿಂದ ದೆಹಲಿಯಿಂದ ಹೊರಬಿದ್ದ ಸೂಫಿ ಸಂತರು ಬಹಮನಿ ಅರಸರಲ್ಲಿ ಸ್ಥಾನಪಡೆದು ಗೌರವಕ್ಕೆ ಪಾತ್ರರಾದರು. ಸೂಫಿಗಳನ್ನು, ಸೂಫಿಮನೋಭಾವದ ಹಿಂದೂಗಳನ್ನು ಹಾಗೂ ಸ್ಥಳೀಯ ಮುಸ್ಲಿಮ್ ಜನತೆಯನ್ನು ಆಡಳಿತದಲ್ಲೂ ಸೇರಿಸಿಕೊಳ್ಳಲಾಯಿತು. ಆದಿಲ್‌ಶಾಹಿ, ಕುತುಬ್‌ಶಾಹಿ

ಅರಸರು 'ಹಿಂದೂ- ಮುಸ್ಲಿಂ' ಸಖ್ಯ ಬೆಳೆಯಲು ಕಾರಣರಾದರು. ಎರಡನೆಯ ಇಬ್ರಾಹಿಮ್ ನಂತೂ ಸ್ವತಃ ಕವಿ ಹಾಗೂ ಸಂಗೀತಗಾರನಾಗಿದ್ದ. ಸೂಫಿ ಸಂತರ ಮುಕ್ತ ಧಾರ್ಮಿಕ ಚಳುವಳಿ ನಡೆದದ್ದು ಇದೇ ಕಾಲದಲ್ಲಿ. ಇದಕ್ಕೆ ಸಮೀಪವಾದ ಶರಣರ ವಚನ ಚಳುವಳಿ ಆಗಲೇ ಮುಗಿದುಹೋಗಿತ್ತು. ಮರಾಠಿ ಭಕ್ತಿ ಚಳುವಳಿ, ಹರಿದಾಸರ ಚಳುವಳಿಗಳೆಲ್ಲ ಒಂದಕ್ಕೊಂದು ಪೂರಕವಾಗಿ, ಸ್ಫೂರ್ತಿ ಪಡೆದು ತಮ್ಮ ತಮ್ಮ ಧರ್ಮಗಳ ಒಡಲಿನಿಂದಲೇ ಹುಟ್ಟಿ ಬೇರೊಂದು ರೂಪದಲ್ಲಿ ಬೆಳೆದವು. ಆದರೆ ಚರಿತ್ರೆಯಲ್ಲಿ ಮತಾಂಧನೆಂದೆ ಗುರುತಿಸಿಕೊಂಡಿರುವ ಔರಂಗಜೇಬನ ದಾಳಿಯಿಂದ ಆದಿಲಶಾಹಿ ಅರಸರು ಮೂಲೆಗುಂಪಾದರು. ಅವರು ಕಟ್ಟಬಯಸಿದ್ದ ಹಿಂದೂ- ಮುಸ್ಲಿಂ ಸಖ್ಯ ಕೂಡ ಒಡೆದುಹೋಯಿತು. ಇಲ್ಲಿದ್ದ ದಖ್ಖನಿ ಭಾಷೆಯ ಕವಿ, ಕಲಾವಿದರು, ಪಂಡಿತರು ನೆಲೆಕಳೆದುಕೊಂಡರು. ಎರಡು ಸಮುದಾಯಗಳ 'ಸೌಹಾರ್ದತೆ'ಯ ಪ್ರಕ್ರಿಯೆ ರಾಜಕೀಯ ಮಟ್ಟದಲ್ಲಿ ನಿಂತುಹೋಯಿತು. ಬ್ರಿಟಿಷರ ಆಗಮನದಿಂದ, ಅದರ ರಾಜಕೀಯ ತಂತ್ರಗಳಿಂದ ಈ ಬಿರುಕು ದೊಡ್ಡದಾಗುತ್ತ ಹೋಯಿತು. ಪರ್ಶಿಯನ್ ಭಾಷೆಯ ಬದಲು ಇಂಗ್ಲಿಷ್ ಆಡಳಿತದಲ್ಲಿ ತೂರಿಕೊಂಡಿತು. ಸ್ಥಳೀಯ ಮುಸ್ಲಿಮರಿಗಿದ್ದ ಅನೇಕ ಅವಕಾಶಗಳು ಕೈತಪ್ಪಿಹೋದವು.

ಪರ್ಶಿಯನ್ ಸಂಸ್ಕೃತಿಯ ಪ್ರಭಾವವು ದಖನಿ ಸಂಸ್ಕೃತಿಯ ಮೇಲೆ ಅಗಾಧ ಪ್ರಮಾಣದಲ್ಲಿ ಆಯಿತು. ಇದು ಬಹಮನಿ ಅರಸರಿಂದ ವಿಜಯನಗರದ ಅರಸರ ಮೇಲೆಯೂ ಆಯಿತು.(ಪರ್ಶಿಯನ್ ಸಂಸ್ಕೃತಿಯ ಪ್ರಭಾವ ವಾಸ್ತುಶಿಲ್ಪದ ಮೇಲೆ ಹಾಗೂ ಕರಕುಶಲತೆಗಳ ಮೇಲಾಯಿತು. ಬಿದ್ರಿಕಲೆ(ಬೀದರ) ಶ್ರೀಗಂಧ, ರೋಸ್ ಮರಗಳೊಳಗೆ ದಂತವನ್ನು ಬೆರೆಸಿ ಅಲಂಕರಿಸುವ ವಿಧಾನಗಳು(ಮೈಸೂರು) ಪರ್ಶಿಯನ್ನರವೇ. ಕನ್ನಡ ಮತ್ತಿತರ ಭಾಷೆಗಳ ಮೇಲೆ ಪರ್ಶಿಯನ್ ಭಾಷೆ ಬೀರಿದ ಪ್ರಭಾವ ಅಚ್ಚಳಿಯದ್ದು. ಬ್ರಿಟಿಷರ ಆಗಮನದಿಂದ ಈ ಪ್ರಕ್ರಿಯೆ ನಿಂತುಹೋಗಿ ಬೇರೊಂದು ಪ್ರಕ್ರಿಯೆ ಶುರುವಾಯಿತು. ರೋಮನ್ ಕಥೋಲಿಕ್ ಪಾದ್ರಿ ಇಟಾಲಿಯನ್ ರಾಬರ್ಟ್‌ಡಿ ನೊಬಿಲಿ ಭಾರತಕ್ಕೆ ಬಂದು ದ್ರಾವಿಡ ಭಾಷೆಗಳನ್ನು ಕಲಿತು, ಇಲ್ಲಿಯ ಧಾರ್ಮಿಕ ಗ್ರಂಥಗಳನ್ನು ಅಭ್ಯಸಿಸಿ, 'ಹಿಂದೂ'ಗಳಂತೆ ಬದುಕಲು ನೋಡಿದನು. ಇವನ ಪ್ರಭಾವದಿಂದ ಉತ್ತರ ಕರ್ನಾಟಕದಲ್ಲಿ ಅನೇಕ ಕೆಳವರ್ಗದ ಜನರು ಮತಾಂತರ ಹೊಂದಿದರು. ಇದರ ಕುರುಹಾಗಿ ಅನೇಕ ಹಳ್ಳಿಗಳಲ್ಲಿ ಸಂತ ಮೇರಿಯ ಬದುಕಿನ ಕಥೆಗಳು ತಾಳೆಗರಿಯಲ್ಲಿ ಸಿಗುತ್ತವೆ. ಈ ಭಾಗಕ್ಕೆ ಬಂದ ಇನ್ನೊಬ್ಬ ಪ್ರಾಟಸ್ಟೆಂಟ್ ಪಾದ್ರಿ ಜರ್ಮನ್ ಮಿಷನರಿಯ ಷ್ವಾರ್ಜ ಮೈಸೂರಿನ ಭಾಗದಲ್ಲಿಯೂ ಪ್ರಭಾವ ಬೀರಿದನು. ಸ್ವತಃ ಹೈದರಲಿ ಇವನನ್ನು ದೇವಮಾನವನೆಂದು ಗೌರವಿಸಿ ಮುಕ್ತವಾಗಿರಲು ನೋಡಿಕೊಂಡನು. ಅನೇಕ ಪಾಶ್ಚಾತ್ಯ ವಿದ್ವಾಂಸರು ಈ ಕಾಲಾವಧಿಯಲ್ಲಿ ಬಂದು ಇಲ್ಲಿಯ ಚರಿತ್ರೆ, ಧರ್ಮ, ಸಾಹಿತ್ಯ ಕ್ಷೇತ್ರಗಳಲ್ಲಿ ಅಂದಿಗೆ ಕಣ್ಮರೆಯಾಗಿದ್ದ ಅನೇಕ ವಿಷಯಗಳನ್ನು ಶೋಧಿಸಿದರು. ಸಾಮಾಜಿಕ ಬದುಕಿನಲ್ಲಿ ಜನರ ಆರೋಗ್ಯವನ್ನು ಸುಧಾರಿಸುವಲ್ಲಿ ಶ್ರಮಿಸಿದರು. ಮೆಕೆಂಜಿ, ಫ್ಲೀಟ್, ವಿಲ್ಕ್ಸ್, ಸೀಗ್ಲರ್, ಕ್ರಿಸ್ ಮುಂತಾದ ವಿದ್ವಾಂಸರ ಕಾರ್ಯಸಾಧನಗಳು ಮರೆಯದ ಕೊಡುಗೆಗಳಾಗಿವೆ. ಈ ಕಾಲದಲ್ಲಿ ಕೆಳವರ್ಗದ ಜನರು ಹಲವು ಕಾರಣಗಳಿಗಾಗಿ ಕ್ರೈಸ್ತಮತಕ್ಕೆ ಮತಾಂತರ ಹೊಂದಿದರು.

ವಿರಕ್ತಿ ಯಾಕೆ ಹುಟ್ಟುತ್ತದೆ?

ಕಳೆದ ಮೂರು ಶತಮಾನಗಳಲ್ಲಿ ರಾಜಕೀಯ ಮಹತ್ವಾಕಾಂಕ್ಷೆಯಿಂದ ಈ ಭಾಗದಲ್ಲಿ ನೆಲೆಯೂರಲು ಹವಣಿಸಿದವರಲ್ಲಿ ಮುಖ್ಯವಾಗಿ ಮೊಗಲರು, ಮರಾಠರು ಮತ್ತು ಬ್ರಿಟಿಷರು, ರಜಪೂತರು, ಜಾಟರು, ಸಿಖ್ಖರು ಕೂಡ ತಮ್ಮ ಶಕ್ತಿಗನುಗುಣವಾಗಿ ದಾಳಿನಡೆಸಿದರು. ಬಹಮನಿ, ಆದಿಲಶಾಹಿ, ವಿಜಯನಗರ ಸಾಮ್ರಾಜ್ಯಗಳು ಈ ಭಾಗದಲ್ಲಿ ತಮ್ಮ ಪ್ರಾಬಲ್ಯಕ್ಕಾಗಿ ನಿರಂತರವಾಗಿ ಯುದ್ಧಗಳನ್ನು ನಡೆಸಿದ್ದರು. ಮೊಗಲ್ ಚಕ್ರವರ್ತಿ ಔರಂಗಜೇಬನು ಸುಮಾರು ಇಪ್ಪತ್ತೈದು ವರ್ಷಗಳ ಕಾಲ ದಖ್ಖನ್ನಿನಲ್ಲಿಯೇ ನೆಲೆಯೂರಿ ಯುದ್ಧಗಳನ್ನು ಹೂಡಿದ್ದನು. ಈ ಕಾಲದಲ್ಲಿ ತೀವ್ರಗತಿಯಲ್ಲಿ ರಾಜಕೀಯ ಸ್ಥಿತ್ಯಂತರಗಳು ನಡೆದವು. ಸಮಾಜದಲ್ಲಿ

ಗುರುತರವಾದ ನಾಯಕತ್ವವೇ ಇಲ್ಲದಂತಾಯಿತು. ಅರಾಜಕತೆ ಭುಗಿಲೆದ್ದಿತು. ಅಲ್ಲಲ್ಲಿ ಉಳಿದ ರಾಜಮನೆತನಗಳ ವಂಶಸ್ಥರು ಸ್ಥಳೀಯ ಮಟ್ಟಗಳಲ್ಲಿ ಮಾಂಡಲಿಕರ, ಸಾಮಂತರ, ಅಧಿಕಾರಿಗಳ ಜತೆ ಆಂತರಿಕ ಯುದ್ಧಗಳಲ್ಲಿ ಮುಳುಗಿ ಹೋಗಿದ್ದರು. ಈ ಹೊತ್ತಿಗಾಗಲೇ ಹುಟ್ಟಿ ಬೆಳೆದಿದ್ದ ಅನೇಕ ಧರ್ಮಗಳು ಸಾಂಸ್ಥಿಕ ರೂಪ ಪಡೆದು ಮಠ-ಮಾನ್ಯಗಳಾಗಿದ್ದವು. ಆಸ್ತಿ ಅಂತಸ್ತುಗಳಿಗಾಗಿ ಮಠಾಧಿಪತಿಗಳು ಮೂಲ ಉದ್ದೇಶಗಳನ್ನು ಬದಿಗಿರಿಸಿ ಒಳ ಜಗಳಗಳಲ್ಲಿ ನಿರತರಾಗಿದ್ದರು. ಜನರಲ್ಲಿ ಸ್ಥಿರತೆ, ತಮ್ಮತನಗಳೇ ನಾಶವಾಗಿ ಬದುಕು ಪ್ರಕ್ಷುಬ್ಧವಾಯಿತು. ಇದರಿಂದ ಸಮಾಜದಲ್ಲಿ ನೆಮ್ಮದಿಯೆಂಬುದೇ ಇರಲಿಲ್ಲ. ಜನಸಮುದಾಯಗಳು ರೋಗಗ್ರಸ್ಥವಾಗಿ ನರಳುತ್ತಿದ್ದವು. ವಿಧ್ವಂಸಕ ಕೃತ್ಯಗಳು ನಿರಂತರವಾಗಿ ನಡೆಯುತ್ತಿದ್ದವು. ಜೊತೆಗೆ ಬರಗಾಲ, ಸಾಂಕ್ರಾಮಿಕ ರೋಗಗಳು ಹೀಗೆ ಸಾಮಾಜಿಕ ಸ್ವಾಸ್ಥ್ಯ ಎಂಬುದೇ ಕನಸಿನ ಮಾತಾಗಿ ಹೋಗಿತ್ತು. ದೈಹಿಕವಾಗಿ, ಮಾನಸಿಕವಾಗಿ ಜನಸಮುದಾಯಗಳು ಯುದ್ಧದ ನೆರಳಿನಲ್ಲಿ ದಣಿದು ಕುಸಿದಿದ್ದವು. ಸಹಜವಾಗಿಯೋ ಅನಿವಾರ್ಯವಾಗಿಯೋ ಇಂಥ ಸಮಯದಲ್ಲಿ 'ವಿರಕ್ತಿ' ಹುಟ್ಟಿ ತೊಡಗುತ್ತದೆ. ಅದೇ ಅಸ್ತ್ರವಾಗಿ ಪರಿಣಮಿಸುತ್ತದೆ. 'ಯುದ್ಧ' ಮತ್ತು 'ವಿರಕ್ತಿ'ಗಳು ಮುಖಾಮುಖಿಯಾಗುತ್ತವೆ. ರಾಜಕೀಯ ಪ್ರಭುತ್ವವಾದಿಗಳು ಜನಸಮುದಾಯಗಳನ್ನು ಯುದ್ಧಕ್ಕೆ ಗುರಿಮಾಡಿದರೆ, ಸಾಧು, ಸಂತರು ಜನಸಮುದಾಯಗಳನ್ನು ವಿರಕ್ತಿಗೆ ಅಣಿಮಾಡಲು ಪ್ರಯತ್ನಿಸಿದರು. ಸೂಫಿಗಳು, ಹರಿದಾಸರು ಮತ್ತು ತತ್ವಪದಕಾರರು ಯುದ್ಧಗಳ ಒಡಲಲ್ಲಿ ವಿರಕ್ತಿಯನ್ನು ಚಿಗುರಿಸಿದ ಶಕ್ತಿಗಳಾಗಿದ್ದಾರೆ. ಈ ವಿರಕ್ತಿಯೊಳಗೆ ಪ್ರಭುತ್ವವನ್ನು ಧಿಕ್ಕರಿಸುವ ಶಕ್ತಿಯೂ ಇರುತ್ತಿತ್ತು. 'ವಿರಕ್ತಿ' ಎಂದರೆ ವೈರಾಗ್ಯ, ಸನ್ಯಾಸ ಎಂದು ಅರ್ಥವಲ್ಲ. ಪ್ರಾಪಂಚಿಕ ಸುಖಗಳ ಮೇಲೆ ಅತಿ ಮೋಹವನ್ನು ಇಟ್ಟುಕೊಳ್ಳದಿರುವುದು. ಇರುವ ಮಿತಿಯಲ್ಲಿ ಸುಖವಾಗಿ ಬದುಕುವ ದಾರಿಯನ್ನು ಕಂಡುಕೊಳ್ಳುವುದು. ಈ ಕಾಲದ ರಾಜಕೀಯ, ಸಾಮಾಜಿಕ ಬವಣೆಗಳನ್ನು ಗಮನದಲ್ಲಿರಿಸಿಕೊಂಡರೆ ವಿರಕ್ತಿ ಎಂದರೆ ಅದು ಧಾರಣ ಶಕ್ತಿ ಎಂದೇ ಅರ್ಥ. ಈ ಧಾರಣ ಶಕ್ತಿಯೇ ಲೌಕಿಕವನ್ನು ಮೀರುವ ಅನುಭಾವದ ಕಡೆ ನಡೆಯುವ ದಾರಿಯಾಗುತ್ತದೆ. ಪ್ರಭುತ್ವಗಳ 'ದಾಹ'ದ ಮುಂದೆ ಈ ದಾರಿ ಪ್ರತಿಕ್ರಿಯೆಯಾಗಿ ಪರಿಣಮಿಸುತ್ತದೆ. 'ನಿನ್ನನ್ನು ಕತ್ತರಿಸಿ ಹಾಕುತ್ತೇನೆ' ಎಂದರೆ 'ಕತ್ತರಿಸಿ ಹಾಕು ಈ ದೇಹ ನನ್ನದಲ್ಲ' ಎಂದು ಅಂದರೆ ಏನಾಗಬಹುದು? ಇದು ಇರುವೆ ಆನೆಯನ್ನು ನುಂಗಿದಂತೆ. ಲೌಕಿಕವಾಗಿ ಇದನ್ನು ಗ್ರಹಿಸುವುದಾದರೆ; ಇಂಥ ವಿರಕ್ತಿ ಮಾನಸಿಕವಾಗಿ ಗೆಲ್ಲುವುದಕ್ಕಾಗಿಯಾದರೂ ಸಹಾಯಕವಾಗಬಲ್ಲದು. ಜನಸಾಮಾನ್ಯರನ್ನು ಈ ಸ್ಥಿತಿಗೆ ಪರಿವರ್ತಿಸುವುದು ಅಗತ್ಯವಾಗಿತ್ತು. ಬಹಮನಿ-ಆದಿಲಶಾಹಿಗಳ ಕಾಲದಲ್ಲಿ ಸೂಫಿಗಳು, ವಿಜಯನಗರ ಕಾಲದಲ್ಲಿ ಹರಿದಾಸರು, ನಂತರದ ಅರಾಜಕತೆಯ ಕಾಲದಲ್ಲಿ ತತ್ವಪದಕಾರರು ತಮ್ಮ ಸರಳತೆ ಮತ್ತು ಮುಕ್ತತೆಯಿಂದ ಬದುಕನ್ನು ಕಟ್ಟಿಕೊಳ್ಳುವ ನೆಲೆಯನ್ನು ತೋರಿಸಿದರು.

ಸೂಫಿಗಳು, ಹರಿದಾಸರು ಹಾಗೂ ತತ್ವಪದಕಾರರು

ಭಾರತದ ಚರಿತ್ರೆಯಲ್ಲಿ 'ಮಧ್ಯಕಾಲ' ಎಂದು ಗುರುತಿಸುವ ಅವಧಿಯು ಕುತೂಹಲಕಾರಿಯಾದ ಅನೇಕ ಬೆಳವಣಿಗೆಗಳನ್ನು ಮತ್ತು ಬದಲಾವಣೆಗಳನ್ನು ಕಂಡಿದೆ. ಅದರಲ್ಲೂ ದಕ್ಷಿಣ ಪ್ರಾಂತ್ಯದಲ್ಲಿ ಅನೇಕ ಚಳುವಳಿಗಳು ನಡೆದವು. ಅಸ್ಥಿರ ರಾಜಕೀಯ, ಧಾರ್ಮಿಕ ಆಕ್ರಮಣಗಳನ್ನು ಕಂಡಿತು. 'ಹಿಂದೂ'ಗಳಲ್ಲಿ ಬ್ರಾಹ್ಮಣರು ಮತ್ತು ಶೈವರು ಪ್ರತ್ಯೇಕವಾಗಿಯೂ ಮತ್ತು ಮುಖಾಮುಖಿಯಾಗಿಯೂ ಅನೇಕ ಬಗೆಯಲ್ಲಿ ಸಂಘರ್ಷ ನಡೆಸಿಕೊಂಡೇ ಬಂದರು. ವಿಷ್ಣುಪಾರಮ್ಯವನ್ನು ಹೊಂದಿ ಬ್ರಾಹ್ಮಣರು, ರುದ್ರ ಪಾರಮ್ಯವನ್ನು ಹೊಂದಿ ಶೈವರು ಬೆಳೆದರು. ಈ ಎರಡು ಪಾರಮ್ಯಗಳ ಮುಖಾಮುಖಿ ಬೆಳವಣಿಗೆ ಒಂದು ಕಡೆಯಾದರೆ, ಇವುಗಳ ಒಳಗೆ ನಡೆದ ಸಂಘರ್ಷಗಳು ಇನ್ನೊಂದು ಕಡೆ ಹೊಸ ಬೆಳವಣಿಗೆಗೆ ಕಾರಣವಾಗಿವೆ. ಬ್ರಾಹ್ಮಣರಲ್ಲಿ ವಿಷ್ಣುವಿನಿಂದ ಹರಿ ಪಾರಮ್ಯದ ಕಡೆ, ಶೈವರಿಗೆ ರುದ್ರನಿಂದ ಶಿವನ ಕಡೆ ನಡೆದ ಚಲನೆಗಳು ಧಾರ್ಮಿಕವಾಗಿ ಬಹುಮುಖ್ಯ ಬೆಳವಣಿಗೆಗಳು. ಈ

ಬೆಳವಣಿಗೆಯನ್ನು 'ಭಕ್ತಿ ಚಳುವಳಿ' ಎಂದು ಚರಿತ್ರೆಯಲ್ಲಿ ಗುರುತಿಸಲಾಗಿದೆ. ಶಿವನ ಶರಣರು ನಂತರ ಹರಿಯ ದಾಸರು, ತಮ್ಮ ತಮ್ಮ ನಿಯಮಬದ್ಧವಾದ, ಹಲವು ಕಟ್ಟುಪಾಡುಗಳನ್ನು ಹೊಂದಿದ್ದ ಮತಗಳ ಒಡಲಿನಿಂದಲೇ, ಇದಕ್ಕೆ ವಿರುದ್ಧವಾದ ಮಾರ್ಗವನ್ನು ಕಂಡುಕೊಂಡವರು. ಸರಳವಾದ, ಹೆಚ್ಚು ಆಸೆಗಳಿಲ್ಲದ, ಮುಕ್ತಜೀವನ ಕ್ರಮದಿಂದ ಆತ್ಮೋನ್ನತಿಯನ್ನು ಸಾಧಿಸುವುದೇ ಈ ಮಾರ್ಗದ ಗುರಿ. ಶರಣರ ತತ್ವಗಳು ಕಾಲಾಂತರದಲ್ಲಿ ಸಾಂಸ್ಥಿಕ ರೂಪ ಪಡೆದು ಆಸ್ತಿ, ಅಂತಸ್ತುಗಳನ್ನು ಹೊಂದಿ ಜಡವಾದಾಗ ಪುನಃ ಇದರ ಒಡಲಲ್ಲಿ ತತ್ವಪದಕಾರರು ಹುಟ್ಟಿಬಂದರು. ಇದನ್ನು ಇಸ್ಲಾಂ ಧರ್ಮದಲ್ಲಿಯೂ ಗುರುತಿಸಬಹುದು. ಇಸ್ಲಾಂ ಒಡಲಲ್ಲಿ ಸೂಫಿಗಳು, ಸೂಫಿಗಳ ಒಡಲಲ್ಲಿ ದರ್ವೇಶಿಗಳು ಹುಟ್ಟಿದರು. ಈ ಬೆಳವಣಿಗೆಗೆ ಅನೇಕ ಆಯಾಮಗಳಿವೆ. ಒಟ್ಟಿನಲ್ಲಿ ಸಮಾಜ ಎಂದಿಗೂ ಚಲನಶೀಲವಾಗಿರುತ್ತದೆ ಎಂಬುದಕ್ಕೆ ಮೇಲಿನ ಬೆಳವಣಿಗೆಗಳು ಸಾಕ್ಷಿಗಳಾಗಿವೆ.

ಬಹಮನಿ-ಆದಿಲ್‌ಶಾಹಿಗಳ ಕಾಲದಲ್ಲಿ ಸೂಫಿಗಳು ಉತ್ತರದಿಂದ ಬಂದು ನೆಲೆಸಿದರು. ಸುಲ್ತಾನರು ಇವರಿಗೆ ಆಶ್ರಯ ನೀಡಿದರು. ಇದಕ್ಕೆ ರಾಜಕೀಯ ಒತ್ತಡವೂ ಇತ್ತು. ಆದರೆ ಸೂಫಿಗಳು ರಾಜನ ಆಶ್ರಯ ಪಡೆದು ಸಂಪತ್ತಿಗೆ ಒಡೆಯರಾಗತೊಡಗಿದರು. ಅವರ ನಂತರ ಆ ಸಂಪತ್ತಿಗೆ ಅವರ ವಂಶಸ್ಥರೇ ಉತ್ತರಾಧಿಕಾರಿಗಳಾಗತೊಡಗಿದರು. ಈ ಉತ್ತರಾಧಿಕಾರಿಗಳಿಂದ ಮೂಲ ಪುರುಷರ ಬಗ್ಗೆ ನಂಬಿಕೆಗಳನ್ನು, ಆಚರಣೆಗಳನ್ನು ಸುರುಮಾಡಿ ಸಾಂಸ್ಥಿಕ ರೂಪ ನೀಡಿದರು. ಈ ವ್ಯವಸ್ಥೆ ಜಡವಾಗಿ ಮುಂದುವರಿದದ್ದು ಚರಿತ್ರೆಯಲ್ಲಿದೆ. ಶರಣರ, ದಾಸರ ಚರಿತ್ರೆ ಕೂಡ ಭಿನ್ನವಾಗಿಲ್ಲ. ಆದರೆ ಹೊಸ ಚೈತನ್ಯಗಳು ಹುಟ್ಟಿ, ಅವು ಜಡವಾಗುವುದಕ್ಕೆ ಜನ ಸಮುದಾಯಗಳೂ ಕಾರಣವಾಗಿರುತ್ತವೆ. ಆದರೂ ಈ ಹೊಸ ಚೈತನ್ಯಗಳು ತಮ್ಮ ತಮ್ಮ ಜೀವಿತ ಕಾಲದಲ್ಲಿ ಕಟ್ಟಿಲೆತ್ತಿಸಿದ ಬದುಕು ಅನನ್ಯ ಮಾದರಿಯದಾಗಿರುತ್ತದೆ ಎಂಬುದು ನಿಜ. ಬಹಮನಿ-ಆದಿಲ್‌ಶಾಹಿಗಳ ಕಾಲದ ಸೂಫಿಗಳು, ವಿಜಯನಗರ ಕಾಲದ ಹರಿದಾಸರು ಜನ ಸಮುದಾಯಗಳ ಮೇಲೆ ಮಾಡಿದ ಪರಿಣಾಮ ಮುಖ್ಯವಾದದ್ದು. ಯುದ್ಧದ ನೆರಳಿನಲ್ಲಿ ಬದುಕುತ್ತಿದ್ದ ಭಯಗ್ರಸ್ಥ ಜನಸಮುದಾಯಗಳ ಮನೆಮನೆಯ ಬಾಗಿಲು ತಟ್ಟಿ, ಮನ ಮನದ ದುಃಖವನ್ನು ತಮ್ಮ ಹಾಡುಗಳ ಮೂಲಕ ಕಳೆದ ಹರಿದಾಸರು, ಮಾನವ ಕಲ್ಯಾಣಕ್ಕಾಗಿ, ಲೋಕಕಲ್ಯಾಣಕ್ಕಾಗಿ ಮಿಡಿದರು. ಈ ಹೊಸ ಲೋಕ, ಲೋಕದ ಸಂಪತ್ತು ಕ್ಷಣಿಕವಾದದ್ದು. ಇದರ ವ್ಯಾಮೋಹಕ್ಕೆ, ದಾಹಕ್ಕೆ ಮನುಷ್ಯ ಬಲಿಯಾಗುವುದು ವ್ಯರ್ಥವೆಂದು ದೇಹದ ಅನಿತ್ಯತೆಯನ್ನು ಅರಿವಿಗೆ ತಂದರು. ಆ ಸಂದರ್ಭದಲ್ಲಿ ಈ ಬದಲಾವಣೆ ಸಮಾಜದ ಚಲನೆಗೆ, ಸ್ವಾಸ್ಥ್ಯಕ್ಕೆ ದಾರಿಯಾದದ್ದು ಚಾರಿತ್ರಿಕವಾಗಿಯೂ ಮಹತ್ವದ್ದು. ಇದು ಯುದ್ಧ ಮತ್ತು ವಿರಕ್ತಿಗಳ ಮುಖಾಮುಖಿಯ ಪರಿಣಾಮವೆಂದೇ ಹೇಳಬೇಕು. ಆದಿಲ್‌ಶಾಹಿ ಅರಸರ ಕಾಲದಲ್ಲಿದ್ದ ಷಹನುಂಗ ಎಂಬ ಸೂಫಿ ಯಾವಾಗಲೂ 'ಹೆಣದ ವಾಸನೆ' ಎಂದು ಸಿಡಿಯುತ್ತಿದ್ದನಂತೆ. ರಾಜ್ಯ ಮತ್ತು ಪ್ರಭುತ್ವಕ್ಕಾಗಿ ನಡೆಯುವ ಯುದ್ಧಗಳು, ಅಲ್ಲಿ ಸಾಯುವ ಮನುಷ್ಯನ 'ಹೆಣ'ವನ್ನು ಕಂಡೇ ರೊಚ್ಚಿಗೇರುತ್ತಿದ್ದಿರಬಹುದು. ರಾಜ್ಯ, ರಾಜ, ಪ್ರಭುತ್ವ, ಸಂಪತ್ತು ಎಲ್ಲವೂ 'ಹೆಣ'ಕ್ಕೆ ಮತ್ತು ಇದನ್ನು ಹೊಂದಿದ ವ್ಯವಸ್ಥೆಯನ್ನು ಹೆಣದ ವಾಸನೆಗೆ ಹೋಲಿಸಿ ಆ ಸೂಫಿ ಎಚ್ಚರಿಸುತ್ತಿರಬಹುದೇ? ಸೂಫಿಗಳ ದರ್ಗಾಗಳು, ಹರಿದಾಸರ ಮಠಗಳು, ತತ್ವಪದಕಾರರ ಗುಡಿಗಳು ಸಾಂಸ್ಥಿಕ ರೂಪ ತಳೆದು ನಿಂತಿರುವುದು ಈ ಪ್ರಾಂತ್ಯದಲ್ಲಿ ತುಂಬ ಕಾಣಬಹುದು. ಆದರೆ ಈ ಸಂತರು ಇದನ್ನು ಖಂಡಿತ ಬಯಸಿದವರಲ್ಲ. ಇವರ ಬೆನ್ನ ಹಿಂದಿರುವ ಹಿತಾಸಕ್ತಿಗಳು ಈ ಜಡತೆಗೆ ಕಾರಣವಾಗಿರುತ್ತವೆ. ಜನಸಮುದಾಯಗಳು ಇದನ್ನು ನಿರ್ಲಿಪ್ತವಾಗಿ ಅನುಸರಿಸುತ್ತವೆ. ಆದರೆ ಮಠ ಘಟದೊಳಗಿರಬೇಕೇ ಹೊರತು ಮಠದೊಳಗೆ ಘಟವಿರಬಾರದೆಂಬುದೇ ಈ ಸಂತರ ಅಭಿಮತವಾಗಿತ್ತು.

ತತ್ವಪದಕಾರರು ಮತ್ತು ಸಮಾಜ

ಹನ್ನೆರಡನೆಯ ಶತಮಾನದಲ್ಲಿ ಸೃಷ್ಟಿಯಾದ ಶರಣರ ವಚನಗಳು ಅಥವಾ ವೀರಶೈವ ಸಾಹಿತ್ಯವು ತಮ್ಮ ಚಲನೆಯಲ್ಲಿ

ಮುಖ್ಯವಾಗಿ ಎರಡು ಕವಲುಗಳಾಗಿ ನಡೆದಿರುವುದನ್ನು ಕಾಣಬಹುದು. ಮೌಖಿಕ ಪರಂಪರೆಯ ವಚನ ಸಾಹಿತ್ಯವೇ ಮೂಲವಾಗಿ ಅದರ ಮಾರ್ಗದಲ್ಲಿ, ಮುಂದೆ ಧರ್ಮವನ್ನು ಕುರಿತ, ಮಹಾಪುರುಷರನ್ನು ಕುರಿತ ಪುರಾಣ ಸಾಹಿತ್ಯ ಕೆಲವು ಕಟ್ಟುಪಾಡುಗಳಿಗೆ ಒಳಪಟ್ಟಿತ್ತು. ಅದರಲ್ಲೂ ಬರಹಕ್ಕೆ ಬದ್ಧವಾಗಿತ್ತು. ವಚನ ಸಾಹಿತ್ಯದ ಇನ್ನೊಂದು ಕವಲು ತತ್ವಪದ ಸಾಹಿತ್ಯ. ಇದು ಯಾವ ನಿಯಮಗಳಿಗೆ ಬದ್ಧವಾಗಿರಲಿಲ್ಲ. ವ್ಯಾಕರಣ, ಛಂದಸ್ಸುಗಳಿಂದ ಮುಕ್ತವಾಗಿತ್ತು. ಈ ಕಾಲಾವಧಿಯಲ್ಲಿ ಈ ಪುರಾಣ ಸಾಹಿತ್ಯ ಮತ್ತು ತತ್ವಪದ ಸಾಹಿತ್ಯವು ಸಮಾಜದಲ್ಲಿ ಪ್ರತ್ಯೇಕವಾಗಿಯೇ ಬಳಸಲ್ಪಟ್ಟವು. ಆದರೆ ಉದ್ದೇಶ ಮತ್ತು ಗುರಿ ಒಂದೇ ಆದರೂ ಅವು ಕಾರ್ಯಗತವಾಗುವ ಸ್ವರೂಪ ಬೇರೆ ಬೇರೆಯಾಗಿತ್ತು. ಸಾಮಾನ್ಯವಾಗಿ ಪುರಾಣಗಳು ನಿರ್ದಿಷ್ಟ ವರ್ಗದವರಿಗೆ, ನಿರ್ದಿಷ್ಟ ಸ್ಥಳಗಳಲ್ಲಿ ಹಲವು ಕಟ್ಟುಪಾಡುಗಳಲ್ಲಿ ಬಳಕೆಯಾಗುತ್ತಿದ್ದವು. ಪುರಾಣಗಳನ್ನು ಓದುವವರು ಮತ್ತು ಕೇಳುವವರು ಹಾಗೂ ಏರ್ಪಡಿಸುವವರು ಮೇಲುವರ್ಗದವರಾಗಿರುತ್ತಿದ್ದರು. ಪುರಾಣಗಳನ್ನು ಓದುವ, ಅರ್ಥೈಸಿ ಹೇಳುವ ಪ್ರವಚನಗಳು ದೇವಸ್ಥಾನ, ಮಠ ಮತ್ತು ಶ್ರೀಮಂತರ ಸಮ್ಮುಖದಲ್ಲಿ ನಡೆಯುತ್ತಿದ್ದವು. ಶಿವನ ಮತ್ತು ಶಿವಶರಣರ ಮಹಾತ್ಮೆಯನ್ನು ಸಾರಿ ಹೇಳುವಂತಹ ವಸ್ತುವನ್ನೊಳಗೊಂಡಿರುತ್ತಿದ್ದವು. ಲೌಕಿಕ ಬದುಕಿನೊಳಗಿದ್ದೂ ಅಲೌಕಿಕದ ಕಡೆ ಮನಸ್ಸನ್ನು ಹರಿಸುವ ನೀತಿಯನ್ನು ಹೇಳುತ್ತಿದ್ದವು. ಕೀರ್ತನೆಗಳು ಕೂಡ ಇದೇ ಸ್ವರೂಪದಲ್ಲಿದ್ದವು.

ತತ್ವಪದ ಸಾಹಿತ್ಯ ಗ್ರಂಥಸ್ಥವಲ್ಲದ್ದು, ಧರ್ಮವೆಂಬುದು ನಿಗೂಢವಲ್ಲದ್ದು. ಸರಳವಾಗಿ ಯಾವ ನಿರ್ಬಂಧಗಳಿಲ್ಲದೆ ಬದುಕಿನ ತಿಳುವಳಿಕೆಯನ್ನು ಅರಿಯಲು ಸಾಧ್ಯವಿದೆ ಎಂಬುದನ್ನು ಪ್ರತಿಪಾದಿಸುವಂಥದ್ದು. ತತ್ವಪದಕಾರರು ಹೆಚ್ಚಾಗಿ ಗುಡಿ ಗುಂಡಾರಗಳಿಂದ, ಮಠಮಾನ್ಯಗಳಿಂದ ದೂರವಿದ್ದು, ಅಗಸೆಕಟ್ಟೆ, ಬೇವಿನ ಮರ, ದ್ಯಾವಮ್ಮನ ಬಯಲು, ಕಸಬುದಾರರ ಜಗಲಿಯ ಮೇಲೆ ಕುಳಿತು ಸಮಾನ ಮನಸ್ಕರೊಡನೆ ಲೌಕಿಕ ವ್ಯವಹಾರಗಳ ಜತೆಯಲ್ಲೆ ಭಿನ್ನವಾದ ಆತ್ಮೋನ್ನತಿಯನ್ನು ಕುರಿತು ಚರ್ಚಿಸುತ್ತಿದ್ದರು. ಸಂಸಾರ ತಾಪತ್ರಯಗಳನ್ನು ಮೀರಿ ಬೆಳೆಯುವ, ಮನುಷ್ಯನ ಕಲ್ಯಾಣಕ್ಕಾಗಿ ಮಿಡಿಯುವತ್ತ ಅವರ ಚರ್ಚೆ ಇರುತ್ತಿತ್ತು. ಕುಂಬಾರ ಹುಳವು ಕೆಸರಿನಲ್ಲಿ ಮುಳುಗೆದ್ದರೂ ಅದರ ಮೈಗೆ ಕಿಂಚಿತ್ ಕೆಸರು ಅಂಟಿರುವುದಿಲ್ಲ. ಹಾಗೆ ಲೌಕಿಕನಾಗಿದ್ದರೂ ಅವನು ಲೋಕದ ಆಸೆಗಳಿಂದ ದೂರವಿರಬೇಕೆಂಬುದೇ ಇವರ ಗುರಿಯ ಮಾರ್ಗವಾಗಿತ್ತು. ಇದನ್ನೇ ಸರಳವಾಗಿ ಹಾಡಿನಲ್ಲಿ ನಿರೂಪಿಸಿ, ಏಕತಾರಿ ಚಿಟಿಕೆ ತಾಳಗಳೊಂದಿಗೆ ನಾದದ ಲಹರಿಯಲ್ಲಿ ಹರಿಸುತ್ತಿದ್ದರು. ಜನಸಾಮಾನ್ಯರೆಲ್ಲ ಭೇದವೆಣಿಸದೆ ತತ್ವಪದಕಾರರ ಜತೆ ಸೇರುತ್ತಿದ್ದರು. ಭಜನೆಯಲ್ಲಿ ಈ ತತ್ವಪದಗಳನ್ನೇ ಹಾಡುತ್ತಿದ್ದರು. 'ವಿಚಾರಕ್ಕೆ ಹಾಕುವ'[೪] ಮೂಲಕವೂ ತತ್ವಪದ ಸಾಹಿತ್ಯ ಚರ್ಚೆಗೆ ಒಳಗಾಗುತ್ತಿತ್ತು. ಭಜನೆ ಹಾಗೂ ವಿಚಾರಕ್ಕೆ ಹಾಕುವ ಎರಡು ಕ್ರಿಯೆಗಳು ಸಾಮೂಹಿಕವಾಗಿಯೇ ನಡೆಯುತ್ತಿದ್ದವು ಮತ್ತು ಮುಕ್ತವಾಗಿರುತ್ತಿದ್ದವು. ಜನಸಾಮಾನ್ಯರು ಅದರಲ್ಲೂ ಕೆಳವರ್ಗದವರು ಹೆಚ್ಚಾಗಿ ಸೇರಿರುತ್ತಿದ್ದರು. ಹುಟ್ಟುತ್ತಲೇ ಒಂದು ಜಾತಿಯ ಹೆಸರನ್ನು ಹೊಂದಿರುತ್ತಿದ್ದ ತತ್ವಪದಕಾರರು, ತಮ್ಮ ಸಾಧನೆಯ ಮೂಲಕ ಜಾತಿಯನ್ನು ಮೀರುತ್ತಿದ್ದರು. ತಮ್ಮ ಮಾರ್ಗದಲ್ಲಿ ಬರುವವರನ್ನು ಭೇದವೆಣಿಸದೆ ಕಾಣುತ್ತಿದ್ದರು. ಸಾಮಾಜಿಕವಾದ ಜಾತಿ ನಿರ್ಮೂಲನ ಮಾಡುವ ವ್ಯರ್ಥ ಪ್ರಯತ್ನಕ್ಕೆ ನೇರವಾಗಿ ಹೋಗುತ್ತಿರಲಿಲ್ಲ. ತಮ್ಮ ಅನುಯಾಯಿಗಳು ಸಮಾನ ಮನಸ್ಕರಾಗಿರುವವರೇ ಆಗಿರುತ್ತಾರೆಂದು ನಂಬಿ ನಡೆದರು. ಅಂದಂದಿನ ಹೊಟ್ಟೆ ಹೊರೆಯಲು ದುಡಿಯ ಬೇಕಾದವನಿಗೆ ಜಾತಿ ಇರುವುದಿಲ್ಲ. ಇಂಥವರೇ ತತ್ವಪದಕಾರರ ಅನುಯಾಯಿಗಳಾಗಿರುತ್ತಿದ್ದರು. ತತ್ವಪದಕಾರರದು ಗುರು-ಶಿಷ್ಯ ಪರಂಪರೆ. ಗುರುವಿನ ಮೂಲಕ ಬಂದದ್ದೇ ನಿತ್ಯಸತ್ಯವೆಂದು ಅವರು ನಂಬಿ ನಡೆದವರು. ಹೀಗಾಗಿ ಜಾತಿಯ ಪ್ರಶ್ನೆ ಅಷ್ಟಾಗಿ ಹುಟ್ಟುವುದಿಲ್ಲ. ಗುರುವಿನ ಮಗನಾಗುವ ಮುನ್ನ ವ್ಯಕ್ತಿಗೆ ಒಂದು ಜಾತಿ ಇರಬಹುದು. ಗುರುವಿನ ಮಗನಾದ ಮೇಲೆ ಜಾತಿ ಉಳಿಯುವುದಿಲ್ಲ. ಗುರುವಿನ ಸಂಸ್ಕಾರಗಳು ಶಿಷ್ಯನಲ್ಲಿ ಮೂಡುತ್ತವೆ. ಈ ಕ್ರಿಯೆಯನ್ನು 'ಸಂಸ್ಕೃತೀಕರಣ' ಎಂದು ಕರೆಯಬಹುದು. ತತ್ವಪದಕಾರರ ಪರಂಪರೆಯಲ್ಲಿ ಇದು ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆ. 'ಗುರು' ಮತ್ತು 'ಗುರುಮಗ'ನ ಈ ವ್ಯವಸ್ಥೆ ಈ

ಭಾಗದ ಗ್ರಾಮಾಂತರಗಳಲ್ಲಿ ಈಗಲೂ ಜೀವಂತವಾಗಿದೆ. ಒಬ್ಬ 'ಗುರು' ಬೋಧಿಸಿದಂತೆ ನಡೆಯಲು ಆಜ್ಞೆ ಪಡೆದುಕೊಂಡವನೇ ಗುರುಮಗ. ಗುರುಮಗನಾದ ಬಗ್ಗೆ ಒಂದು ಕುರುಹು ಅವನಲ್ಲಿರುತ್ತದೆ. ಕೆಳವರ್ಗದವರಲ್ಲಿ ಇದು ಸಾಮಾನ್ಯವಾಗಿದೆ. ಸಮಾಜದಲ್ಲಿ ಆಳುವ ವರ್ಗವೊಂದು ಈ 'ಗುರು'ವನ್ನು ದೂರದಿಂದಲಾದರೂ ಗೌರವಿಸುತ್ತದೆ. ಸಾಮಾನ್ಯನಿಗೆ ಆಳುವವರ್ಗದಿಂದ ಕಿರಿಕಿರಿ ಬಂದರೆ 'ಗುರುಮಗ'ನಾಗುವ ಮೂಲಕ ರಕ್ಷಣೆ ಪಡೆಯುತ್ತಾನೆ. ಅಂದರೆ ಈ 'ಗುರು-ಶಿಷ್ಯ' ವ್ಯವಸ್ಥೆಯು ತನ್ನ ಧಾರ್ಮಿಕತೆಯಿಂದ ಆಳುವ ವರ್ಗದಲ್ಲಿ ಒಂದು ರೀತಿಯ ಭಯವನ್ನು ಸೃಷ್ಟಿ ಮಾಡಿದೆ ಎಂದು ಕಾಣುತ್ತದೆ. ಕೆಳವರ್ಗದ ಜನಸಾಮಾನ್ಯರು ಈ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಮೂಲಕ ತಕ್ಕ ಮಟ್ಟಿಗಾದರೂ ಆಳುವವರ್ಗದ ದಬ್ಬಾಳಿಕೆಯಿಂದ ರಕ್ಷಣೆಗೆ ಒಳಗಾಗುತ್ತಾರೆ. ಮೂಲ ಉದ್ದೇಶವಾದ ಲೌಕಿಕವನ್ನು ಮೀರುವ, ಆತ್ಮೋನ್ನತಿಯನ್ನು ಸಾಧಿಸುವ ಕ್ರಿಯೆ ಕಾಲಾಂತರದಲ್ಲಿ ಈ ಅವಸ್ಥೆಗೆ ಬಂದಿರುವುದನ್ನು ಕಾಣಬಹುದು.

ಹಿಂದೂ ಮುಸ್ಲಿಂ ಸಂಬಂಧಗಳು

ಈ ಕಾಲಾವಧಿಯಲ್ಲಿ ಸಾಮ್ರಾಜ್ಯಗಳ ಪತನ, ಅಂತರ್ ಯುದ್ಧಗಳು, ಅನಾಯಕತ್ವದಿಂದ ಅರಾಜಕತೆ, ದರೋಡೆಗಳು ಮತ್ತು ಕ್ಷಾಮ, ಸಾಂಕ್ರಾಮಿಕ ರೋಗಗಳಿಂದ ಸಮಾಜದಲ್ಲಿ ನೆಮ್ಮದಿಯೆಂಬುದೇ ಇರಲಿಲ್ಲ. ಇಂಥ ಹೊತ್ತಿನಲ್ಲಿ ಹರಿದಾಸರು, ಸೂಫಿಗಳು, ತತ್ವಪದಕಾರರು ಜನಸಾಮಾನ್ಯರಾಗಿ, ಜನಸಾಮಾನ್ಯರ ಮನೆ ಬಾಗಿಲಿಗೆ ಹೋಗಿ ಕಾಯದ ಅನಿತ್ಯತೆಯನ್ನು ಬೋಧಿಸಿ ಮನಸ್ಸನ್ನು ಅಲೌಕಿಕದ ಕಡೆಗೆ ತಿರುಗಿಸಲು ಯತ್ನಿಸಿದರು. ನೀತಿಪರವಾದ, ಭಕ್ತಿಪರವಾದ ಹಾಡುಗಳಿಂದ, ಆತಂಕಗೊಂಡಿದ್ದ ಮನಸ್ಸುಗಳಿಗೆ ನೆಮ್ಮದಿಯನ್ನು ನೀಡಿದರು. ಹರಿದಾಸರು ಸರಳವಾಗಿ ಕನ್ನಡದಲ್ಲಿ ಹಾಡುರಚಿಸಿ, ಹಾಡುತ್ತ ಬೀದಿ ಬೀದಿಯಲ್ಲಿ ಸಂಗೀತವನ್ನು ಹರಿಸಿದರು. ತತ್ವಪದಕಾರರು ಕೂಡ ವ್ಯಕ್ತಿಗತವಾಗಿಯೂ ಸಾಮೂಹಿಕವಾಗಿಯೂ ಹಾಡಿ ಸಮಾಜದ ದುಗುಡವನ್ನು ಕಡಿಮೆ ಮಾಡಲು ಪ್ರಯತ್ನಿಸಿದರು. ಈ ಶತಮಾನದ ಪ್ರಾರಂಭದಲ್ಲಿಯೂ ಹರಿದಾಸರ, ತತ್ವಪದಕಾರರ ಏಕತಾರಿಯ ನಾದ ಬತ್ತದಂತೆ ಹಳ್ಳಿಹಳ್ಳಿಗಳ ಬೀದಿಯಲ್ಲಿ ತುಂಬಿರುತ್ತಿತ್ತು. ಕೆಲ ಶತಮಾನಗಳ ಕಾಲ ಒಂದೇ ಅಂಗಳದಲ್ಲಿ 'ಹಿಂದೂ' ಮತ್ತು 'ಮುಸ್ಲಿಮ್' ಜನ ಸಮುದಾಯಗಳು ಕೂಡಿ ಬಾಳುವ ಅನಿವಾರ್ಯತೆ ಏರ್ಪಟ್ಟಿತು. ಈ ಸೌಹಾರ್ದತೆಗೆ ಕಾರಣರಾದವರು ಸೂಫಿಗಳು ಮತ್ತು ತತ್ವಪದಕಾರರು. ಕೆಳವರ್ಗದ ಜನಸಮುದಾಯಗಳಲ್ಲಿ ತಮ್ಮ ಮುಕ್ತ ಧಾರ್ಮಿಕತೆಯಿಂದ ಬೆರೆತು ಜಾತಿಮತವನ್ನು ಮೀರಿ ನಿಲ್ಲುವ ಶಕ್ತಿಯನ್ನು ಸೃಷ್ಟಿಸಿದರು. ಆದರೂ ರಾಜಕೀಯ ಒತ್ತಡಗಳಿಗೆ ಒಳಗಾಗಿ ಇಲ್ಲಿಯ ಕೆಳವರ್ಗದ ಜನರು 'ಮುಸ್ಲಿಮ'ರಾಗಿ ಮತಾಂತರ ಹೊಂದಿದ್ದರೂ, ಅವರನ್ನು ಅನ್ಯ ಹೊಸ ಧಾರ್ಮಿಕತೆ ತೀವ್ರವಾಗಿ ಪ್ರಭಾವಿಸಲಿಲ್ಲ. ಮತಾಂತರಗೊಂಡ ಕೆಳವರ್ಗದವರ, ದಲಿತರ ಮನಸ್ಸು ಮೂಲತಃ ಮುಕ್ತವಾದದ್ದೇ. ಇದರಿಂದಾಗಿ 'ಇಸ್ಲಾಮ್' ಧರ್ಮಕ್ಕೆ ಮತಾಂತರವಾಗಿ ಮುಸ್ಲಿಮರಾದರೂ ಅವರಲ್ಲಿದ್ದ 'ಹಿಂದೂ' ಗುಣಗಳು ಕಾಲಾಂತರದಲ್ಲಿಯೂ ಹಾಗೇ ಉಳಿದುಕೊಂಡು ಬಂದಿದ್ದರಿಂದ ಇವರು ಇತರ 'ಹಿಂದೂ' ಕೆಳವರ್ಗದವರ, ದಲಿತರ ಜೊತೆ ಬೆರೆಯುವುದು ಸಹಜವಾಗಿತ್ತು. ಒಬ್ಬರ ಸಂಪ್ರದಾಯ, ಆಚರಣೆ, ವ್ಯವಹಾರ, ಮುಂತಾದವುಗಳ ಪ್ರಭಾವ-ಪರಿಣಾಮಗಳು ಮತ್ತೊಬ್ಬರ ಮೇಲೆ ಆದದ್ದು ಸ್ವಾಭಾವಿಕವಾಯಿತು. ಮುಸ್ಲಿಮರ ಮೊಹರಂ, ಉರುಸು ಮುಂತಾದ ಮತ ಸಂಬಂಧಿ ಕ್ರಿಯೆಗಳಾದರೂ, ಅವುಗಳ ಆಚರಣೆಯಲ್ಲಿ ಸಂಭ್ರಮ-ಮನರಂಜನೆಗಳಿರುವುದರಿಂದ ಮುಸ್ಲಿಮೇತರರೂ ಸಹಜವಾಗಿಯೇ ಭಾಗಿಯಾದರು. ಹಾಗೆಯೇ ಮುಸ್ಲಿಮೇತರರ ಜಾತ್ರೆ, ಮದುವೆ ಹಬ್ಬಗಳಲ್ಲಿ ಮುಸ್ಲಿಮರು ಭಾಗಿಯಾದರು. ಭಾಗಿಯಾಗುವುದು ತೋರಿಕೆಗಾಗಿಯೂ ಆಗಿರಲಿಲ್ಲ, ತಾತ್ಕಾಲಿಕವಾಗಿಯೂ ಆಗಿರಲಿಲ್ಲ. ಅದು ತಮ್ಮ ಬದುಕಿನ ಅಂಗವಾಗಿ ಬೆರತದ್ದಾಗಿತ್ತು. ಈ ಎರಡು ಸಮುದಾಯಗಳಲ್ಲಿ ತಮ್ಮ ತಮ್ಮ ಮಹಾಪುರುಷರ ಬಗ್ಗೆ ಪೂಜ್ಯ ಭಾವನೆ ಹೊಂದಿದ್ದು, ಇಂಥ

ಮಹಾ ಪುರುಷರ ಉತ್ಸವಗಳಲ್ಲಿ ಸಮಾನ ಮನಸ್ಕರಾಗಿ ಭಕ್ತಿ ಸಲ್ಲಿಸುವುದನ್ನು ಕಾಣುತ್ತೇವೆ. ಇದರಿಂದಾಗಿ ಅನೇಕ ಹಳ್ಳಿಗಳಲ್ಲಿ ಕೆಳವರ್ಗದವರಲ್ಲಿ 'ಹೆಸರು'ಗಳು ಕೂಡ ಬೆರೆತು ಹೋಗಿರುವುದನ್ನು ಕಾಣುತ್ತೇವೆ. ಈ ಪ್ರಾಂತ್ಯದಲ್ಲಿ ಈ ಹೊತ್ತಿನವರೆಗೂ ಇಂಥ 'ಐಕ್ಯತೆ' ಹಾಸುಹೊಕ್ಕಾಗಿರುವುದು ಕೇವಲ ಕೆಳವರ್ಗದವರಿಂದ ಮಾತ್ರ ಎಂಬುದು ಅಷ್ಟೇ ಸತ್ಯ. ಈ 'ಸೌಹಾರ್ದತೆ' ತುಂಬಾ ಸಂಕೀರ್ಣವಾದದ್ದು. ಖ್ವಾಜಾ ಬಂದೇ ನವಾಜ್, ಶಿಶುನಾಳ ಶರೀಫ್, ತಿಂಥಿಣಿ ಮೌನೇಶ್ವರ, ಶಿರಹಟ್ಟಿ ಫಕೀರೇಶ್ವರ, ಸಾವಳಗಿ ಶಿವಲಿಂಗ, ರಾಮನಗರ ದರ್ಗಾ, ಇಂಚಗೇರಿ ಈ ಸ್ಥಳಗಳೇ ಜೀವಂತ ಸಾಕ್ಷಿಯಾಗಿವೆ. ಮುಸ್ಲಿಮರು ಕನ್ನಡ ಸಾಹಿತ್ಯವನ್ನು, ಮುಸ್ಲಿಮೇತರರು ಉರ್ದು ಸಾಹಿತ್ಯ ರಚಿಸಿರುವುದು ಕೇವಲ ರಾಜಕೀಯ ಕಾರಣಗಳಿಗಲ್ಲ ಎಂಬುದೂ ಸತ್ಯ. ಮೊಹರಂ ಪದಗಳು, ಲಾವಣಿಗಳು, ಕಥನಗೀತೆಗಳು, ಒಗಟು, ಗಾದೆಗಳು ಮುಂತಾದ ಮೌಖಿಕ ಸಾಹಿತ್ಯ ಸೃಷ್ಟಿಗೆ ಕಾರಣವಾದದ್ದು ಈ ಎರಡು ಜನಸಮುದಾಯಗಳ ಜನಸಾಮಾನ್ಯರಿಂದ ಮತ್ತು ಇವುಗಳ ಆಚರಣೆಗಳು ಕೂಡ ಕೆಳವರ್ಗದವರಲ್ಲಿ ಭೇದವಿಲ್ಲದೆ ಜರುಗುತ್ತವೆ. 'ಹಿಂದೂ' ಮತ್ತು 'ಮುಸ್ಲಿಂ' ಎಂಬ ಎರಡು ಚಕ್ರಗಳ ಬಂಡಿಯಲ್ಲಿ ಒಂದೇ ಬದುಕು ಬಾಳಿದವರು ಇವರು. 'ಹಿಂದೂ' 'ಮುಸ್ಲಿಂ' ಆಳ್ವಿಕೆಗಳಿಗೂ ಕೂಡ ಈ ಬದುಕನ್ನು ಪೂರ್ತಿಯಾಗಿ ಒಡೆಯುವುದಕ್ಕೆ ಸಾಧ್ಯವಾಗಿಲ್ಲ.

ಆದರೆ ರಾಜಕೀಯ ಒತ್ತಡಗಳಿಗೆ ಒಳಗಾಗಿ ಕೆಳವರ್ಗದವರು ಕ್ರೈಸ್ತಮತಕ್ಕೆ ಮತಾಂತರ ಹೊಂದಿದಾಗ ಈ ಬಗೆಯ 'ಸೌಹಾರ್ದತೆ' ಏರ್ಪಟ್ಟಿಲ್ಲವೆಂದು ಕಾಣುತ್ತದೆ. ಹಿಂದೂ-ಮುಸ್ಲಿಮ್ ಮತಾವಲಂಬಿಗಳು ಬೆರೆತಂತೆ, ಈ ಬೆರೆಕೆಗೆ ಮತಾಂತರ ಹೊಂದಿದ ಅಥವಾ ಮೂಲ ಕ್ರೈಸ್ತರು ಇತರರೊಡನೆ ಕೂಡಿಕೊಂಡು 'ಸಂಸ್ಕೃತೀಕರಣ'ವಾದದ್ದು ತೀರ ಕಡಿಮೆ ಎಂದು ತೋರುತ್ತದೆ. ನೀರಲಕೇರಿ ಬಸವಲಿಂಗ ಶರಣ(೧೮೧೨-೧೮೭೨)ರಿಗೆ ಸಂಬಂಧಿಸಿದ ಕಥೆಯೊಂದಿದೆ. ಪಾದ್ರಿಯೊಬ್ಬ ಕ್ರೈಸ್ತ ಧರ್ಮದ ಬಗ್ಗೆ, ಯೇಸುವಿನ ಬಗ್ಗೆ ದೊಡ್ಡದನಿಯಲ್ಲಿ ಮಾತನಾಡುತ್ತ ಇತರ ಧರ್ಮ-ದೇವರ ಬಗ್ಗೆ ತೆಗಳುತ್ತಿದ್ದನಂತೆ. ಅದನ್ನು ಕೇಳಿದ ಬಸವಲಿಂಗ ಶರಣರು ಆ ಪಾದ್ರಿಯನ್ನು ಧಾರ್ಮಿಕ ವಿಷಯದ ಚರ್ಚೆಯಲ್ಲಿ ಸೋಲಿಸಿ ಕಳಿಸಿದರಂತೆ." ಇದನ್ನು ಗಮನಿಸಿದರೆ ಪಾದ್ರಿಗಳಿಗೆ ಮತ್ತು 'ಹಿಂದೂ'ಗಳ ನಡುವೆ ಸಾಮರಸ್ಯ ಇದ್ದಂತೆ ಕಾಣುವುದಿಲ್ಲ. ಮತಾಂತರಗೊಂಡ ಮುಸ್ಲಿಮ್ ಜನರ ಮೇಲೆ, ಮುಸ್ಲಿಮ್ ಧರ್ಮಾಧಿಕಾರಿಗಳು ಹಳ್ಳಿಗಳಲ್ಲಿ ನಿಯಂತ್ರಣವನ್ನು ಇಟ್ಟುಕೊಂಡಿರಲಿಲ್ಲ. ಆದರೆ ಪಾದ್ರಿಗಳು ಕ್ರೈಸ್ತ ಮತಕ್ಕೆ ಮತಾಂತರಗೊಂಡವರ ಮೇಲೆ ಹಳ್ಳಿಗಳಲ್ಲಿ ನಿಯಂತ್ರಣವನ್ನು ಇಟ್ಟುಕೊಂಡಿದ್ದರು. ಕೆಳವರ್ಗದವರೂ ದಲಿತರೂ ರಾಜಕೀಯ, ಸಾಮಾಜಿಕ, ಆರ್ಥಿಕ ಒತ್ತಡಗಳಿಗೆ ಕ್ರೈಸ್ತ ಮತಕ್ಕೆ ಮತಾಂತರಗೊಂಡವರನ್ನು ನಿಯಂತ್ರಿಸುತ್ತ ಬಂದಿರುವುದರಿಂದ ಇವರು ತಮ್ಮ ಮೂಲ ದೇವರಾದ ಎಲ್ಲಮ್ಮ, ದ್ಯಾವಮ್ಮ, ಈರಣ್ಣ ಮುಂತಾದ ದೈವಗಳಿಗೆ ನಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ 'ಸಾಮರಸ್ಯ', 'ಐಕ್ಯತೆ' ಬೆಳೆಯಲು ಅವಕಾಶವಾಗಲಿಲ್ಲ. ಯಾವ ನಿಯಂತ್ರಣವಿಲ್ಲದ ಕಾರಣ ಇಸ್ಲಾಮ್ ಧರ್ಮಕ್ಕೆ ಸೇರಿದರೂ ಜನರಿಗೆ ದರ್ಗಾ, ಎಲ್ಲಮ್ಮನ ಗುಡಿ ಒಂದೇ ಆದವು. ದುರ್ದೈವದ ಸಂಗತಿ ಎಂದರೆ ೨೦ನೆಯ ಶತಮಾನದ ಹೊತ್ತಿನಲ್ಲಿ ಇಂಗ್ಲಿಷರ ಆಳ್ವಿಕೆಯಿಂದಾಗಿ, ಇಂಗ್ಲಿಷ್ ಶಿಕ್ಷಣದಿಂದಾಗಿ, ಹೆಚ್ಚಿದ ಬೌದ್ಧಿಕತೆಯಿಂದಾಗಿ ಮತ್ತು ಸ್ವತಂತ್ರ ಭಾರತದ ರಾಜಕೀಯದಿಂದಾಗಿ 'ಹಿಂದೂ-ಮುಸ್ಲಿಮರ' 'ಬಾಂಧವ್ಯ' ಎನ್ನುವುದು ಕೇವಲ 'ಆದರ್ಶ'ವಾಗಿ ಪರಿಣಮಿಸಿರುವುದು ಮಾತ್ರ ವ್ಯಥೆಯ ಸಂಗತಿಯಾಗಿದೆ.

ಅಧ್ಯಾಯ ಐದು: ತತ್ವಪದ ಸಾಹಿತ್ಯ

ತತ್ವಪದಕಾರರು

ಪರಂಪರೆ

ತತ್ವಪದ ಸಾಹಿತ್ಯ

ಗುರು

ಸತಿಪತಿ

ಹಾದರ ಮಾಡುವ ಪರಿ

ಗಾಂಜಾ ಸೇದುವ ಪರಿ

ಅಲಾವಿ ಆಡುವ ಪರಿ

ಜಾತಿ ಮೀರುವ ಗುಣ

ಗುರು-ಶಿಷ್ಯ ಅತಿರೇಕ ಸಂಬಂಧಗಳು

ಅನುಭಾವ

ಸಾಮಾಜಿಕ, ರಾಜಕೀಯ, ಧಾರ್ಮಿಕ ವಿದ್ಯಮಾನಗಳ ಜತೆ ಮುಖಾಮುಖಿ

ಆಧುನಿಕತೆ ಮತ್ತು ತತ್ವಪದಕಾರರು

ಮುಸ್ಲಿಮ್ ತತ್ವಪದಕಾರರು

ಮುಕ್ತಪದ ಪ್ರಯೋಗಗಳು

ಅನ್ಯ ದೈವಗಳು ಮತ್ತು ತತ್ವಪದಕಾರರು

ಅಧ್ಯಾಯ ಐದು: ತತ್ವಪದ ಸಾಹಿತ್ಯ

ತತ್ವಪದಕಾರರು

'ವಚನ' ಬರೆದವರನ್ನು ಶರಣರೆಂದು, 'ಕೀರ್ತನೆ' ಬರೆದವರನ್ನು ದಾಸರೆಂದು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಲಾಗಿದೆ. ತಾವು ನಂಬಿದ 'ಶಕ್ತಿ'ಗೆ ಶರಣಾಗಿರುವುದು, ದಾಸನಾಗಿರುವುದು ಎಂಬ ಅರ್ಥದಲ್ಲಿ ಹಾಗೂ ಅವರ ತಾತ್ವಿಕ ನಿಲುವುಗಳಿಂದ ಅವರನ್ನು 'ಭಕ್ತರು' ಎನ್ನಲಾಗಿದೆ. ಹಾಗೆಯೇ 'ತತ್ವಪದ' ಬರೆದವರನ್ನು ತತ್ವಪದಕಾರರು ಎಂದು ಸಾಮಾನ್ಯವಾಗಿ ಕರೆಯಲಾಗುತ್ತಿದೆ. ಇವರೆಲ್ಲರನ್ನೂ ಸಾಧಕರು, ಅನುಭಾವಿಗಳು, ಸಂತರು, ಆರೂಢರು, ಯೋಗಿಗಳು ಎಂದು ಕೂಡ ಭಾವಿಸಲಾಗುತ್ತದೆ. ಲೋಕದ ಹಿತಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು. ಎಲ್ಲ ಜೀವಿಗಳಿಗೆ ಲೇಸನು ಬಯಸುವ ಉದಾತ್ತ ನಿಲುವಿನವರು. ಲೌಕಿಕರಿಗೆ ಭವದ ದುಃಖವನ್ನು ಮೀರಲು ಸರಳತನ, ಪ್ರಾಮಾಣಿಕತೆ, ಹೆಚ್ಚು ಆಮಿಷಗಳಿಗೆ ಬಲಿಯಾಗದಂತೆ ಮಿತವ್ಯಯದಿಂದ ಬದುಕನ್ನು ಹಸನಾಗಿರಿಸಿಕೊಂಡು ಬಾಳುವ ಹಾದಿನ್ನು ಹಿಡಿಯಲು ಬೋಧಿಸಿದವರು. ಇಂಥ ಬದುಕನ್ನೇ ಬಾಳಿ ನಿದರ್ಶನವಾಗಿ ನಿಂತವರು.

ತತ್ವಪದಕಾರರು ವ್ಯಕ್ತಿಗತವಾಗಿ 'ದೇವರ'ನ್ನು ಸಾಕ್ಷಾತ್ಕರಿಸಿಕೊಳ್ಳಬಹುದೆಂದು ನಂಬಿದವರು. ಇಂಥ ಅನುಭವಕ್ಕಾಗಿ ಬೇಕಾಗುವ ತನ್ಮಯತೆಯನ್ನು ಹೊಂದಲು, ಲೌಕಿಕದ ಕಟ್ಟುಪಾಡುಗಳನ್ನು ಬದಿಗಿರಿಸಿ ತಮ್ಮ ಒಳದನಿಗೆ ಮಾತ್ರ ಓಗೊಡುವ ಸ್ಥಿತಿಗೆ ಬದ್ಧರಾದವರು. ತಾವು ನಂಬಿದ ಶಕ್ತಿಗೆ ಶರಣಾಗಿ, ಹಿಡಿದ ಹಾದಿಯಲ್ಲಿ ಮೌನಸಂಧಾನ ನಡೆಸಿ ಲೌಕಿಕವನ್ನು ಮೀರನಿಲ್ಲಲು ಯತ್ನಿಸಿದವರು. ಲೌಕಿಕಕ್ಕಿಂತ ಭಿನ್ನವಾದ ಮತ್ತು ಲೌಕಿಕವನ್ನು ಮೀರುವ ಪರಿಯನ್ನು ತೋರಿಸುವ 'ಗುರು'ವಿಗಾಗಿ ಹಂಬಲಿಸಿ, ತಮ್ಮ ಒಳದನಿಯ ಪ್ರವೇಶಕ್ಕೆ ಗುರುವಿನ ನೆರವನ್ನು ಉತ್ಕಟವಾಗಿ ಬಯಸುತ್ತಾ ಗುರುವನ್ನು ಹುಡುಕಿಕೊಂಡೋ, ಪಡೆದುಕೊಂಡೋ ತಮ್ಮ ಮಸ್ತಕಕ್ಕೆ ಗುರುವಿನ ಹಸ್ತಕದ ಸ್ಪರ್ಶದೊಂದಿಗೆ ಸಾಧನೆಯ ಹಾದಿಯನ್ನು ಹಿಡಿದವರು. ಇದು 'ಗುರು-ಶಿಷ್ಯ' ವ್ಯವಸ್ಥೆಯಲ್ಲಿ ನಡೆಯುವ ಒಂದು ಸಂಪ್ರದಾಯ. ವ್ಯಕ್ತಿಗತವಾಗಿ ತಮ್ಮ ಆತ್ಮೋನ್ನತಿಗಾಗಿ ಧ್ಯಾನ, ಯೋಗದಲ್ಲಿ ನಿರತರಾಗಿ ಲೌಕಿಕವಾದ ವ್ಯಾಮೋಹವನ್ನು ಕಳೆದುಕೊಂಡು ಯೋಗಿಗಳು, ಸಂತರು ಆದರು. ತಮ್ಮ ಹಾದಿಯಲ್ಲಿ ಸಾಗಲು ಲೌಕಿಕರನ್ನು ಪ್ರೇರೇಪಿಸುತ್ತಾ ಲೋಕಕಲ್ಯಾಣವನ್ನು ಹಂಬಲಿಸಿ ಹಾಡಿದರು. ಆ ಹಾಡೇ ತತ್ವಪದವಾಗಿ ಬೆಳೆದುನಿಂತಿದೆ.

'ತತ್ವ' ಎಂದರೆ ನುಡಿದವನ ಸಿದ್ಧಾಂತ ಅಥವಾ ನಿಜಸ್ಥಿತಿ ಎಂದರ್ಥ. ಈ ನುಡಿ ಪಕ್ವಗೊಂಡದ್ದಾಗಿರುತ್ತದೆ. ಇದಕ್ಕೆ ಮನುಷ್ಯನ ಬದುಕನ್ನು ಹಸನುಗೊಳಿಸುವ ಸಾಮರ್ಥ್ಯವಿರುತ್ತದೆ. ಅದಕ್ಕಾಗಿಯೇ ಈ ಸಂತರ, ಯೋಗಿಗಳ, ಅನುಭಾವಿಗಳ ತತ್ವಪದಗಳನ್ನು ಲೌಕಿಕರು ನಿರ್ಮಲ ಮನಸ್ಸಿಗಾಗಿ ವ್ಯಕ್ತಿಗತವಾಗಿಯೂ, ಸಾಮೂಹಿಕವಾಗಿಯೂ ಹಾಡುತ್ತಾರೆ. ತತ್ವಪದಕಾರರು ತತ್ವವನ್ನು ಪದವಾಗಿ ವ್ಯಕ್ತಪಡಿಸಲು ನಾದ, ಲಯವನ್ನು ಅವಲಂಬಿಸಿ, ಈ ನಾದ ಲಯಕ್ಕಾಗಿ ಏಕತಾರಿಯನ್ನು, ಚಿಟಿಕೆಯನ್ನು ಉಪಯೋಗಿಸಿಕೊಂಡು ಹಾಡುತ್ತಾರೆ. ಜನಸಮುದಾಯಗಳು ಭಜನೆಗಳಲ್ಲಿ ಹಾಡುವ ಮೂಲಕ ಈ ತತ್ವಪದ ಸಾಹಿತ್ಯವನ್ನು ಮೌಖಿಕವಾಗಿ ಉಳಿಸಿಕೊಂಡು ಬಂದಿದೆ. ಮೌಖಿಕ ಪರಂಪರೆಯ ಈ ಸಾಹಿತ್ಯವನ್ನು ಈಚೆಗೆ ಅಕ್ಷರ ಸಂಸ್ಕೃತಿಯ ಪರಿಣಾಮವಾಗಿ ಲಿಖಿತಕ್ಕೆ ಪರಿವರ್ತಿಸಿ ಕೃತಿ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ಪರಂಪರೆ

ಹನ್ನೆರಡನೆಯ ಶತಮಾನವು ಹಲವು ಕಾರಣಗಳಿಗಾಗಿ ವಿಶಿಷ್ಟತೆಯನ್ನು ಪಡೆದಿದೆ. ಸಮಾಜದ ಅನೇಕ ವಲಯಗಳಲ್ಲಿ ಹಲವಾರು ನೆಲೆಗಳಲ್ಲಿ ಅಸಮಾನತೆ ತುಂಬಿತ್ತು. 'ಸಮಾನತೆ'ಯನ್ನು ತರಲು ವಚನಕಾರರು ಸಾಮೂಹಿಕ ಹೋರಾಟವನ್ನು ಸಂಘಟಿಸಿದರು. ಪ್ರಭುತ್ವ, ಮಠ, ಜಾತಿ, ಮುಂತಾದವುಗಳನ್ನು ಪ್ರಶ್ನಿಸಿ 'ಎಲ್ಲರೂ ಸಮಾನರು' ಎಂಬ ತತ್ವದ ನೆಲೆಯಲ್ಲಿ ರಚನಾತ್ಮಕವಾದ ಹೋರಾಟವನ್ನು ನಡೆಸಿದರು. ಈ ಹೋರಾಟದಿಂದ ಸಮಾಜದಲ್ಲಿ ಸಂಘರ್ಷಗಳುಂಟಾದವು. ಜನರ ಮನಸ್ಸುಗಳು ಕದಡಿದವು. ಹೊಸ ಸಮಾಜದ ಕನಸುಗಳು ಮೂಡಿದವು. ವಚನಕಾರರು ಮೂಲತಃ ಸಾಧಕರು, ಅನುಭಾವಿಗಳು, ಸಮಾಜ ಸುಧಾರಕರು. ಸಮಾಜದ ಹಲವು ಅನಿಷ್ಟಗಳ ಜತೆ ಸಂಘರ್ಷಕ್ಕೆ ಇಳಿದಂತೆ ತಮ್ಮ ವ್ಯಕ್ತಿಗತ ನೆಲೆಯಲ್ಲಿ ತಮ್ಮ ಅಂತರಂಗದ ದನಿಯ ಜತೆ ಸಂವಾದ-ಸಂಘರ್ಷಕ್ಕೆ ಇಳಿದು ತಮ್ಮೊಳಗಿದ್ದ ಲೌಕಿಕ ಆಸೆ-ಆಮಿಷಗಳನ್ನು ಮೀರಿ 'ಮನುಷ್ಯ'ನಾಗುವ ಪರಿಯನ್ನು ಕಂಡುಕೊಂಡವರು. ಈ ವಚನಕಾರರು ತಮ್ಮ ಅನೇಕ ಬಗೆಯ ತುಡಿತಗಳನ್ನು, ಆತಂಕಗಳನ್ನು ವ್ಯಕ್ತಪಡಿಸಲು 'ವಚನ' ಎಂಬ ರೂಪವನ್ನು ರೂಪಿಸಿಕೊಂಡರು. ತಮ್ಮ ತಾತ್ವಿಕತೆಯನ್ನು ವಚನಗಳಲ್ಲಿ ನಿರೂಪಿಸಿದರು. ವಚನಗಳು ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಕವಾಗಿ ಮಹತ್ವವನ್ನು ಪಡೆದಿವೆ.

ಶರಣರು ವಚನಗಳನ್ನು ಬರೆದು ಒಂದು ಮಾರ್ಗವನ್ನು ನಿರ್ಮಿಸಿದರು. ಈ ಮಾರ್ಗದಲ್ಲಿ ನಡೆದವರ ಪರಂಪರೆಯೇ ಇದೆ. ತತ್ವಪದಕಾರರು ಈ ಪರಂಪರೆಗೆ ಸೇರಿದವರು. ಸ್ವರೂಪದಲ್ಲಿ ಬೇರೆ ಕಂಡರೂ ಹಲವು ನೆಲೆಗಳಲ್ಲಿ ವಚನಕಾರರನ್ನು ಅನುಸರಿಸಿದವರು. ವಚನ ರೂಪವು ಗದ್ಯ-ಪದ್ಯ ಕೂಡಿದ ರೂಪವಾಗಿದೆ. ಆದರೂ ವಚನ ಹಾಡಲು ಬರುತ್ತಿತ್ತು. ಸ್ವರ ಸೇರಿಸಿ ಹಾಡುವ 'ಸ್ವರ ವಚನ'ಗಳನ್ನು ವಚನಕಾರರು ಬರೆದಿರುವುದನ್ನು ಈಗ ಕನ್ನಡ ಸಾಹಿತ್ಯದಲ್ಲಿ ಗುರುತಿಸಲಾಗಿದೆ. ಸ್ವರದ ಜೊತೆಗೆ ತಾಳ, ಲಯ, ರಾಗ ಮುಂತಾದ ನಿಯಮಗಳನ್ನು ಕಟ್ಟಿಕೊಂಡು ಹಾಡಲು ಬರುವಂಥ ಸ್ವರವಚನಗಳನ್ನು ರಚಿಸುತ್ತ ಬಂದವರ ಒಂದು ಪರಂಪರೆಯೇ ಇದೆ. ಸಕಲೇಶ ಮಾದರಸ ಮೊದಲುಗೊಂಡು ಅನೇಕ ವಚನಕಾರರು ಸ್ವರವಚನಗಳನ್ನು ರಚಿಸಿರುವುದು ಮೊದಲ ಹಂತವಾಗಿ; ನಂತರ ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಘನಮಠದ ಶಿವಯೋಗಿ ಮುಂತಾದವರು ಎರಡನೆಯ ಹಂತವಾಗಿ; ಹದಿನೆಂಟು-ಹತ್ತೊಂಬತ್ತನೆಯ ಶತಮಾನ ಮತ್ತು ನಂತರವೂ ಸೇರಿದಂತೆ ರಾಮಪುರ ಬಕ್ಕಪ್ಪಯ್ಯ, ಕಡಕೋಳ ಮಡಿವಾಳಪ್ಪ, ಕೂಡಲೂರು ಬಸಲಿಂಗಪ್ಪ, ಶಿಶುನಾಳ ಷರೀಫ ಸಾಹೇಬ, ಕೈವಾರ ನಾರಾಯಣಪ್ಪ, ಮೋಟ್ನಹಳ್ಳಿ ಹಸನಸಾಹೇಬ, ಬಿದನೂರ ಗಂಗಮ್ಮ, ನಿಡವಂಚಿ ಭದ್ರೇಶ್ವರ ಮುಂತಾದವರು ಮೂರನೆಯ ಹಂತದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಮೂರನೆಯ ಹಂತದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಅನೇಕರು ಈ ತತ್ವಪದ ಸಾಹಿತ್ಯವನ್ನು ರಚಿಸಿದ್ದಾರೆ. 'ಕೈವಲ್ಯ ಸಾಹಿತ್ಯ', 'ಅನುಭಾವ ಸಾಹಿತ್ಯ', 'ಸ್ವರವಚನ ಸಾಹಿತ್ಯ' ಮತ್ತು 'ತತ್ವಪದ' ಎಂದು ಇದನ್ನು ಕರೆಯಲಾಗುತ್ತದೆ. ಈ ಅಧ್ಯಾಯದಲ್ಲಿ 'ತತ್ವಪದಸಾಹಿತ್ಯ'ವೆಂದು ಮತ್ತು ಈ ಸಾಹಿತ್ಯ ರಚನೆಗೆ ಕಾರಣರಾದವರನ್ನು ತತ್ವಪದಕಾರರೆಂದು ಕರೆದು ಚರ್ಚಿಸಲಾಗುವುದು.

ತತ್ವಪದ ಸಾಹಿತ್ಯ

ತತ್ವಪದ ಸಾಹಿತ್ಯದಲ್ಲಿ ಮುಖ್ಯವಾಗಿ ಗುರುಸ್ಮರಣೆ, ಸತಿಪತಿಭಾವ, ಅನುಭಾವ, ಬೆಡಗು ಕುರಿತ ಪದಗಳು ಎಲ್ಲ ತತ್ವಪದಕಾರರಲ್ಲಿ ಕಾಣಸುತ್ತವೆ. ಕೆಲವರಲ್ಲಿ ಕೇವಲ ನೀತಿಯನ್ನು ಬೋಧಿಸುವ ಪದಗಳು ಹೆಚ್ಚಾಗಿವೆ. ಸಾಮಾಜಿಕ, ರಾಜಕೀಯ,

ಧಾರ್ಮಿಕ ವಿಡಂಬನೆ ಕುರಿತ ಪದಗಳೇ ಕೆಲವರಲ್ಲಿವೆ. ಹಾದರ, ಗಾಂಜಾ, ಅಲಾಯಿ, ಗೂಳಿ, ಮೂಗುತಿ, ದೆವ್ವ, ಚೇಳು ಮುಂತಾದ ಸಮಾಜದಲ್ಲಿ ಕಾಣುವ ವಸ್ತು-ವಿಷಯಗಳನ್ನು ಎತ್ತಿಕೊಂಡು ರೂಪಕಗಳನ್ನಾಗಿ ಬಳಸಿಕೊಂಡು ಬರೆದ ಲೋಕನೀತಿಯ ಪದಗಳು ಕೆಲವರಲ್ಲಿ ವಿಶೇಷವಾಗಿವೆ. ಮಡಿ-ಮೈಲಿಗೆ, ಜಾತಿಯತೆ, ಸಾಮಾಜಿಕ ಅಸಮಾನತೆಯನ್ನು ವಿರೋಧಿಸಿ ಬರೆದ ತತ್ವಪದಗಳು ಎಲ್ಲರಲ್ಲಿ ಕಾಣುತ್ತವೆ. ವಸಾಹತುಶಾಹಿ ಪರಿಣಾಮದಿಂದ ಭಾರತೀಯ ಸಮಾಜದಲ್ಲಿ ಕಾಣಿಸಿಕೊಂಡ ಹೊಸ ವ್ಯವಸ್ಥೆ, ಅದರಿಂದ ಉದ್ಭವಿಸಿದ ಸಮಸ್ಯೆ ಹಾಗೂ ಪರಿಣಾಮಗಳನ್ನು ಕುತೂಹಲದಿಂದ, ಆತಂಕದಿಂದ ಕಂಡು ಪ್ರತಿಕ್ರಿಯಿಸಿ ಕೆಲವರು ಬರೆದಿದ್ದಾರೆ. ಆಧುನಿಕ ಕಾಲದ ಬಿಕ್ಕಟ್ಟುಗಳು ಕೂಡ ತತ್ವಪದದಲ್ಲಿ ವ್ಯಕ್ತವಾಗಿವೆ. ಲೋಕದ ವಿದ್ಯಮಾನಗಳೆಲ್ಲ ಲೌಕಿಕದ ಮೂಲಕ ಹುಟ್ಟಿಬೆಳೆದು ಅನುಭಾವದ ನೆಲೆಯಲ್ಲಿ ತತ್ವಪದಗಳಾಗಿ ರೂಪುಗೊಂಡಿವೆ. ಅಂತಿಮವಾಗಿ ತತ್ವಪದ ಸಾಹಿತ್ಯ ವ್ಯಕ್ತಿ-ಸಮಾಜದ ಒಳತಿಗೆ ಮಿಡಿದಿದೆ.

ಗುರು

ತತ್ವಪದ ಸಾಹಿತ್ಯದಲ್ಲಿ ತತ್ವಪದಕಾರರು ಗುರುವಿಗೆ ಬಹುಮುಖ್ಯ ಸ್ಥಾನವನ್ನು ಕೊಟ್ಟಿದ್ದಾರೆ. ತತ್ವಪದಕಾರರು ಮೂಲತಃ ಸಾಧಕರು, ಯೋಗಿಗಳು ಸಾಧನೆಯ ಮಾರ್ಗವನ್ನು ಅರಿಯಲು ಗುರು ಬೇಕು. ಗುರುವಿಲ್ಲದೆ ಸಾಧನೆಯಲ್ಲಿ ಸಾಗುವುದೆಂದರೆ ಕತ್ತಲೆಯ ಹಾದಿ ಹಿಡಿದಂತೆ, ನಿಜಸುಖದ ಹಾದಿ ದಕ್ಕುವುದಿಲ್ಲ. ಗುರುವನ್ನು ಪಡೆಯುವುದು ಒಂದು ಮುಖ್ಯವಾದ ಸಂಪ್ರದಾಯ. ಪ್ರತಿಯೊಬ್ಬ ತತ್ವಪದಕಾರನಿಗೆ ಒಬ್ಬ ಗುರು ಇರುತ್ತಾನೆ. ಈ ಗುರುವಿನ ಉಪದೇಶದಿಂದಲೇ ಆತ ಮುಕ್ತಿಯ ಮಾರ್ಗವನ್ನು ಕಂಡುಕೊಳ್ಳುತ್ತಾನೆ. ರಾಮಪುರ ಬಕ್ಕಪ್ಪಯ್ಯನಿಗೆ ಸಂಬಂಧಿಸಿದ ಒಂದು ಕಥೆಯನ್ನು ಗಮನಿಸಿದರೆ ಇದರ ಮಹತ್ವ ಅರ್ಥವಾಗುತ್ತದೆ: ಗುಲಬರ್ಗಾ ಜಿಲ್ಲೆಯವನಾದ ಬಕ್ಕಪ್ಪಯ್ಯ ಲೌಕಿಕರಿಗೆ ವಿಚಿತ್ರ ವ್ಯಕ್ತಿಯಾಗಿದ್ದ. ಬಕ್ಕಪ್ಪಯ್ಯ ಯೋಗಿಯೂ ಅನುಭಾವಿಯೂ ಆಗಿದ್ದ. ಅವನ ಜೊತೆ ಯಾರೂ ಮಾತನಾಡುತ್ತಿರಲಿಲ್ಲ. ಅದರಲ್ಲೂ ವೇದಾಂತದ ವಿಷಯವನ್ನು ಬಲ್ಲವರೂ ಚರ್ಚಿಸಲು ಹಿಂಜರಿಯುತ್ತಿದ್ದರು. ಬಕ್ಕಪ್ಪಯ್ಯನಿಗೆ ಗುರು ಸಿಕ್ಕಿರಲಿಲ್ಲ. ಗುರುವಿಗಾಗಿ ಹಂಬಲಿಸುತ್ತ ಹುಡುಕುತ್ತ ರಾಮಪುರಕ್ಕೆ ಬಂದ. ಅಲ್ಲಿ ಭೀಮಾನದಿ ತೀರದಲ್ಲಿ ಕುಳಿತು ಧ್ಯಾನಸ್ಥನಾದ. ಏನೋ ಕಳೆದುಕೊಂಡವರಂತೆ ಪರಿತಪಿಸುತ್ತ 'ಎಲ್ಲರೂ ಬೇಡುವವರೆ, ಕೊಡುವವರು ಯಾರೂ ಇಲ್ಲ' ಎಂದು ಕೂಗುತ್ತಿದ್ದ. ತನಗೆ ಬೋಧೆ ಕೊಡುವ ಯೋಗ್ಯ ಗುರುವಿಗಾಗಿ ಹುಡುಕುತ್ತ ಹುಚ್ಚನಾಗಿದ್ದ. ಇದು ಲೌಕಿಕರಿಗೆ ವಿಚಿತ್ರವಾಗಿ ಕಂಡಿರಬೇಕು. ಬಕ್ಕಪ್ಪಯ್ಯನ ದಿನನಿತ್ಯದ ಈ ಕೂಗು ಕೇಳಿ ನದಿ ತೀರದಲ್ಲಿ ಎಮ್ಮೆ ಕಾಯುವವನೊಬ್ಬ ಪ್ರತಿಯಾಗಿ ಒಂದು ದಿನ, 'ಕೊಡುವವರು ಬೇಕಾದಷ್ಟು ಜನರಿದ್ದಾರೆ. ಪಡೆಯುವವರು ಯಾರೂ ಇಲ್ಲ' ಎಂದು ಕೂಗಿದ. ಆ ಕೂಗು ಕೇಳಿ ಹರ್ಷಚಿತ್ತನಾಗಿ 'ಬಾರೋ ಕೊಡುಬಾರೋ' ಎಂದು ಓಡಿಹೋಗಿ ಮುಂದೆ ನಿಂತ. ಎಮ್ಮೆ ಕಾಯುವವನು ಅದನ್ನು ಕಂಡು ಹೆದರಿ ಮೂಕನಾದ. ಆಗ ಬಕ್ಕಪ್ಪಯ್ಯನೇ ತನ್ನ ಯೌಗಿಕ ಮತ್ತು ಅರಿವಿನ ಶಕ್ತಿಯನ್ನು ಆತನಿಗೆ ನೀಡಿ, ನಂತರ ಅದನ್ನು ಮರಳಿ ಪಡೆಯುವ ಮೂಲಕ ಗುರುವನ್ನು ಪಡೆದುಕೊಂಡ.[೬] ಹೀಗೆ ಪ್ರತಿಯೊಬ್ಬ ಸಾಧಕ ಕಡ್ಡಾಯವಾಗಿ ಗುರುವನ್ನು ಪಡೆದುಕೊಳ್ಳಬೇಕು. 'ಹಸ್ತಕ-ಮಸ್ತಕ'ವಾಗಬೇಕು. ಅಂದರೆ ಸಾಧಕನ ಮಸ್ತಕದ ಮೇಲೆ ಗುರುವು ಹಸ್ತವನ್ನಿಡುವುದು. ಅಲ್ಲಿಗೆ ಸಾಧಕನಿಗೆ ಗುರು ನಿಮಿತ್ತನಾಗುತ್ತಾನೆ. ಗುರುವಿನ ಸ್ಮರಣೆಯಿಂದಲೇ ತನ್ನ ಸಾಧನೆಯ ಹಾದಿಯನ್ನು ಸುಗಮಗೊಳಿಸಿಕೊಳ್ಳುತ್ತಾನೆ. ತತ್ವಪದ ಸಾಹಿತ್ಯ ರಚನೆಗೆ ಮೊದಲಿಗನಾದ ನಿಜಗುಣಶಿವಯೋಗಿಯು 'ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ' ಎಂದಿದ್ದಾನೆ. ಗುರುವಿನ ಉಪದೇಶವನ್ನು ಆಲಿಸಿದ ಕ್ಷಣದಿಂದಲೇ ನರರಿಗೆ ಮುಕ್ತಿಯ ಮಾರ್ಗ ತೆರೆಯುತ್ತದೆ ಎಂಬ ಮಾತಿನಿಂದ ಗುರುವಿನ ಸ್ಥಾನ ಎಂಥದ್ದೆಂದು ತಿಳಿಯುತ್ತದೆ. 'ನರನ ಕೆಡಿಸಿ ಹರನ ಮಾಡಿದ ಸದ್ಗುರು ರಾಯ' (ಕೂಡಲೂರು ಬಸಲಿಂಗಪ್ಪ), 'ಭವಗೆಲಿಸುವ ಗುರುವಿನ ಕೂಡೋ' (ಕಡಕೋಳ ಮಡಿವಾಳಪ್ಪ), 'ಹರ ಮುನಿದರೆ ಗುರು ಕಾಯ್ವನು ಶಾಶ್ವತ'

(ಸೀರಲಕೇರಿ ಬಸವಲಿಂಗ ಶರಣ) ಎಂಬ ತತ್ವಪದಕಾರರ ಈ ಮಾತುಗಳನ್ನು ಗಮನಿಸಬೇಕು. ಆಶೆ-ಆಮಿಷಗಳಿಂದ ಭವದ ಮೇಲೆ ಮೋಹ ಇರಿಸಿಕೊಂಡವನೇ ನರ. ಈ ಮೋಹವನ್ನು ಹರಿದು ಬೀಸಿದರೆ ಮನುಷ್ಯನೇ ಹರನಾಗುತ್ತಾನೆ. ನರನನ್ನು ಹರನನ್ನಾಗಿ ಮಾಡುವ ಶಕ್ತಿ ಗುರುವಿಗಿದೆ. ಹರನಾಗುವುದು ಎಂದರೆ ಲೌಕಿಕದ ವ್ಯಾಮೋಹವನ್ನು ಮೀರಿ ನಿಲ್ಲುವುದು. ಭೋಗಿಯಾಗುವದಕ್ಕಿಂತ ಯೋಗಿಯಾಗುವುದು ಎಂದರ್ಥ. ಯೋಗಿಯಾಗುವುದು, ಸಂತನಾಗುವುದು ಎಂದರೆ ಸಂಸಾರದ ಜವಾಬ್ದಾರಿಯಿಂದ ವಿಮುಕ್ತನಾಗುವುದು ಎಂದರ್ಥವಲ್ಲ. ಸಂಸಾರದಲ್ಲಿದ್ದೂ ಇಲ್ಲದಂತಿರುವುದು. ಸಂಸಾರ ಅಥವಾ ಭವದ ಮೇಲೆ ಅತಿ ಆಶೆ ಇರಬಾರದು. ಪ್ರೀತಿಯಿರಬೇಕು ಎಂಬುದೇ ಈ ತತ್ವಪದಕಾರರ ಮುಖ್ಯ ನಿಲುವು.

ತತ್ವಪದಕಾರರು ವೇದ, ಶಾಸ್ತ್ರ, ಪುರಾಣಗಳ ವೇದಾಂತವನ್ನು ಓದಿ ಅದನ್ನು ಅನುಸರಿಸಿದವರಲ್ಲ. ವಚನಕಾರರು ಅವುಗಳನ್ನು ಓದಿ ಪ್ರಶ್ನಿಸಿದರು. ಆದರೆ ತತ್ವಪದಕಾರರು ಹೆಚ್ಚಾಗಿ ಓದಿನಿಂದ ಜ್ಞಾನವನ್ನು ಪಡೆದವರಲ್ಲ. ಅನುಭವದಿಂದ ಕಲಿತವರು. ಅದಕ್ಕಾಗಿಯೇ, 'ದಾರಗೊಡವಿ ನಮಗೇನಾದರಿ ಗುರು ತೋರಿದ ಹಾದಿಯೊಳಗಿರಬೇಕರಿ' (ಕಡಕೋಳ ಮಡಿವಾಳಪ್ಪ). ಬೌದ್ಧಿಕ ಚಿಂತನೆಗಿಂತ ತಮ್ಮ ಅಂತರಂಗದ ದನಿಗೆ ಮಿಡಿದವರು. ಲೌಕಿಕರಿಗೆ ಭವದ ಕಷ್ಟಗಳು ಸಮಾಜದ 'ವ್ಯವಸ್ಥೆ'ಯಿಂದಲೇ ಬಂದಿವೆ. ಸಮಾಜದ 'ಅಸಮಾನತೆ'ಗೆ ಯಾರು ಕಾರಣರೆಂದು ಚಿಂತಿಸುವುದಿಲ್ಲ. ಬಂದ ಕಷ್ಟಗಳನ್ನು ನೀಗಿಸಿಕೊಳ್ಳಲು ಗುರುವಿನ ಮೊರೆ ಹೋಗುತ್ತಾರೆ.

ಯಾತಕ್ಕೆ ಚಿಂತೆ ಮನವೆ
ಗುರುನಾಥನಿರಲ್ಯಾತಕ್ಕೆ ಚಿಂತೆ ಮನವೆ
ಯಾತಕ್ಕೆ ಚಿಂತೆ ಗುರುನಾಥನ ಕರುಣದಿ ಪಾತಕ ಹಿಂಗಿ
ಪರಮಾತ್ಮನಾದ ಬಳಿಕ್ಯಾತಕ್ಕೆ......... (ಗಬ್ಬೂರು ಹಂಪಣ್ಣ)

ದೇವರಿರುವ ಸ್ಥಳ ಕಾಶಿ, ಕೈಲಾಸ ಎಂಬ ನಂಬಿಕೆಗಳನ್ನು ಕೈಬಿಟ್ಟು ಗುರುವಿನ ಅಂಗಳವನ್ನು ಕಾಶಿಯೆಂದು, ಗುರುವಿನ ಮನೆಯನ್ನು ಕೈಲಾಸವೆಂದು ತಿಳಿಯಲಾಗಿದೆ. ಗುರುವನ್ನು ನಂಬಿದವರಿಗೆ 'ನಿಜ ಮುಕ್ತಿ ಸ್ಥಿರ' ಎಂಬ ನಿಲುವು ಈ ತತ್ವಪದಕಾರರದು.

ಎಂಟು ಮಂದಿಯ ಕಡದನ
ಆರು ಮಂದಿನ ಬಗದನ
ಮೂರು ಮಂದಿನ ಬಿಡಿಸಿ ಪಾರು ಮಾಡಿದ ನನಗ
ಪರದೇಶಕ ಕರದೊಯ್ದನೆ........... (ರಾಮಪುರ ಬಕ್ಕಪ್ಪಯ್ಯ)

ತತ್ವಪದಗಳ ವೈಶಿಷ್ಟ್ಯವೆಂದರೆ, ಅವುಗಳ ಹೊರ ಅರ್ಥವು ಸರಳವಾಗಿಯೂ ಲೌಕಿಕವಾಗಿಯೂ ಕಾಣುತ್ತವೆ. ಆದರೆ ಅವುಗಳ ಒಳ ಅರ್ಥವು ಗಂಭೀರ, ಅರ್ಥವತ್ತಾಗಿ, ಉನ್ನತವಾದ ಗೂಢಾರ್ಥವನ್ನು ಹೊಂದಿರುತ್ತವೆ. ಬಕ್ಕಪ್ಪಯ್ಯನ ಈ ತತ್ವಪದ ಸರಳವಾಗಿದೆ. ಆದರೆ ಅರ್ಥವನ್ನು ಬಿಡಿಸಿದರೆ ಇದರ ಮಹತ್ವ ತಿಳಿಯುತ್ತದೆ. ಜನ ಸಾಮಾನ್ಯರ ನಡುವೆ ಬೆಳೆದ, ಅವರಿಗಾಗಿಯೇ ಹಾಡಿದ ಈ ತತ್ವ ಪದದಲ್ಲಿ, 'ಎಂಟು ಮಂದಿ' ಎಂದರೆ ಅಷ್ಟಮದಗಳೆಂದು(ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ರಾಜ, ತಪೋ) 'ಆರು ಮಂದಿ' ಎಂದರೆ ಅರಿಷಡ್ವರ್ಗವೆಂದು (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ) 'ಮೂರು ಮಂದಿ' ಎಂದರೆ (ಹೆಣ್ಣು, ಹೊನ್ನು, ಮಣ್ಣು) ಮಾಯೆಗಳು. ಮನುಷ್ಯನನ್ನು ಸುತ್ತುವರಿದು ಅಜ್ಞಾನಕ್ಕೆ ದಾರಿಮಾಡುವ ಇವುಗಳನ್ನು ಬಿಡಿಸಿ ಮುಕ್ತಿಯ ಕಡೆ ಕರೆದೊಯ್ಯುವವನೆ ಗುರುವಾಗಿದ್ದಾನೆ.

'ಗುರು' ಅರಿವಿನ ಸಂಕೇತವಾಗಿದ್ದಾನೆ. ಅರಿವು ಎಂದರೆ ತನ್ನ ತಾನು ತಿಳಿಯುವುದು. ತನ್ನನ್ನು ತಾನು ತಿಳಿಯುವುದು ಎಂದರೆ, ಮನುಷ್ಯನಾಗಿ ಹುಟ್ಟಿದ ಮೇಲೆ ಅವನ ಕರ್ತವ್ಯಗಳೇನು, ಅವನ ಜವಾಬ್ದಾರಿ ಎಂಥದ್ದು ಎಂಬ ಬಗ್ಗೆ ಅರಿವನ್ನು ಮೂಡಿಸಿಕೊಂಡು ಒಳ್ಳೆಯ ವ್ಯಕ್ತಿತ್ವವನ್ನು ಪಡೆಯುವುದೇ ಆಗಿದೆ. ತತ್ವಪದಕಾರರು ವ್ಯಕ್ತಿವಾದಿಗಳಿರಬಹುದು. ಸಂಘಟನಾತ್ಮಕ ಹೋರಾಟವನ್ನು ಸಮಾಜ ಸುಧಾರಣೆಗೆ ಕೈಕೊಳ್ಳಲಿಲ್ಲವೆಂಬುದು ನಿಜವಿರಬಹುದು. ಆದರೆ ಸಮಾಜದ ಒಳಿತಿಗಾಗಿ ಮೂಲತಃ ಬೇಕಾದದ್ದನ್ನೇ ಅವರು ಹೇಳಿದ್ದಾರೆ. ತನ್ನ ತಾನು ಸಂತೈಸಿಕೊಳ್ಳುವ ತತ್ವವೇ ಮೂಲ ತತ್ವ. ಪ್ರತಿಯೊಬ್ಬ ಮನುಷ್ಯ ತಮ್ಮ ತಮ್ಮ ನೆಲೆಯಲ್ಲಿ ತಮ್ಮನ್ನು ತಾನು ಸಂತೈಸಿಕೊಂಡರೆ ತಮ್ಮನ್ನು ತಾವೇ ಅರಿತುಕೊಂಡರೆ ಅದಕ್ಕಿಂತ ಪರಮ ಸುಖ ಯಾವುದಿಲ್ಲ. ತತ್ವಪದಕಾರರಲ್ಲಿ 'ಗುರು' ಅರಿವಿನ ಸಂಕೇತವಾಗಿ ನಿಂತಿದ್ದಾನೆ. ನರನ ಕೆಡಿಸಿದ, ಭವಗೆಲಿಸಿದ ಗುರು ಎಂದರೆ ಅದು ಸನ್ಮಾರ್ಗದ ಅರಿವು ಪಡೆದಂತೆ. ಅರಿವು ಪಡೆದು ಪುನಃ ಮರವಿಗೆ ಬೀಳಬಾರದು. ಲೋಕದ ಜನರು ಅರಿತೂ ದಾರಿಗೆಡುವ ಕೆಲಸದಲ್ಲಿ ನಿರತರಾಗಿರುತ್ತಾರೆ. ಇದು ಅಪಾಯಕಾರಿಯಾದ ನಿಲುವು. ಇಂಥವರನ್ನು ದಾರಿಗೆ ತರುವುದೇ ಕಷ್ಟ. ಇಂಥ ವಸ್ತುಸ್ಥಿತಿಯನ್ನು ತನ್ನದೇ ಆದ ನಿಲುವಿನಲ್ಲಿ ಸಿರಗಾಪುರ ಬಂಡೆಪ್ಪ ಹಾಡಿದ್ದಾನೆ:

ಏಕತಾರಿ ಕಾಯಿ ಹಿಡಿಬಾರದಣ್ಣ
ಹಿಡಿದರೆ ಹಿಡಿರಣ್ಣ
ಗುರುವಿನ ಮುಟ್ಟಿ ಗುರುವಾಗಿ ಹಿಡಿರಣ್ಣ
ಏಕ್ತಾರಿ ಎಂಬೋ ಮಾತ
ಏಕಾಂತ ಏಕೋ ಚಿತ್ರ

ಏಕತಾರಿ ನಾದದಿಂದ ಸಾಧ್ಯವಾಗುವ ಧ್ಯಾನ ಪರವಶದ ಸಂಕೇತವಾಗಿದೆ. ಗುರುವಿನಿಂದ ಪಡೆದ ಅರಿವನ್ನು ಹದಗೊಳಿಸಿಕೊಳ್ಳಬೇಕು. ಇದಕ್ಕೆ ತನ್ಮಯದ ಅಗತ್ಯವಿದೆ. ಈ ತನ್ಮಯತೆಯನ್ನು ಏಕತಾರಿಯ ನಾದದಿಂದ ಪಡೆಯಬೇಕು. ಅರಿವು ಮರವಾಗದಂತೆ ಉಳಿಯಲು ತನ್ಮಯತೆಯನ್ನು ತಂದುಕೊಡುವ ಶಕ್ತಿ ಏಕತಾರಿಗೆ ಇದೆ. 'ಗುರು ಪುತ್ರರಾದವರು ಗುರುಮುಟ್ಟಿ ಗುರುವಾಗಬೇಕು' ಎಂದು ಮೋಟ್ನಹಳ್ಳಿ ಹಸನಸಾಹೇಬ ಹೇಳಿರುವುದನ್ನು ಗಮನಿಸಬೇಕು. 'ಗುರು'ವನ್ನು ಪಡೆದು, 'ಏಕತಾರಿ'ಯನ್ನು ಹಿಡಿದು ಕೂಡ 'ನಿಜಸುಖ'ದ ಹಾದಿ ಹಿಡಿಯದೆ ಲೌಕಿಕ ವ್ಯಾಮೋಹದಲ್ಲಿರುವವರನ್ನು ಕಂಡು ಎಚ್ಚರಿಕೆಗಾಗಿ 'ಗುರು ಮುಟ್ಟಿ ಗುರು'ವಾಗಬೇಕು ಎಂದಿದ್ದಾನೆ. ಈ ಅನುಭಾವಿ ಪಂಥದವರು ದೇವರ ಅಸ್ತಿತ್ವವನ್ನು ಕುರಿತು ಚಿಂತಿಸಲು ಹೋಗಿಲ್ಲ. ಕಣ್ಣಿಗೆ ಕಾಣದ 'ದೇವರ' ಸ್ಥಾನದಲ್ಲಿ, ಕಣ್ಣಿಗೆ ಕಾಣುವ, ಕೈಗೆ ಸಿಗುವ 'ಗುರು'ವನ್ನು ಕೂಡಿಸಿದ್ದಾರೆ. ದೇವರಿಗೆ ಮೋಸ ಮಾಡಬಹುದು. ಆದರೆ ಕಣ್ಣ ಮುಂದಿರುವ ಗುರುವಿಗೆ ಮೋಸ ಮಾಡುವುದು ಸುಲಭವಲ್ಲ. ಈ ಕಾರಣದಿಂದ ಗುರುವನ್ನೇ ಸರ್ವಸ್ವವನ್ನಾಗಿ ಮಾಡಿರಬೇಕು. ಗುರುವಿನ ಭಯದಿಂದ ಗುರುಮಗನಾದವನು ಸಾಧನೆಯಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುತ್ತಿತ್ತು. ಆದರೂ ಗುರುಮಗನಾಗಿಯೂ ನಡೆಯಬೇಕಾದ ದಾರಿಯಲ್ಲಿ ಸಾಗದೇ ತಪ್ಪಿ ನಡೆಯುವ ಪ್ರಸಂಗಗಳು ನಡೆದಿರಬೇಕು. ಅದ್ದರಿಂದಲೇ 'ಗುರು ಮುಟ್ಟಿ ಗುರುವಾಗಬೇಕು' ಎಂದು ತತ್ವಪದಕಾರರು ಒತ್ತಿ ಹೇಳಿದ್ದಾರೆ.

'ಗುರು-ಶಿಷ್ಯ' ವ್ಯವಸ್ಥೆಯು ಈಗಲೂ ಹೈದರಾಬಾದ್ ಕರ್ನಾಟಕ ಪ್ರದೇಶದ ಅನೇಕ ಕಡೆಗಳಲ್ಲಿದೆ. 'ಗುರುವಿನ ಮಗ'ನಾಗುವುದು, ಗುರುಮಗನಾಗಿ ಗುರುವಿನ ಉಪದೇಶದಂತೆ ನಡೆಯುವುದು ಇಲ್ಲಿನ ಸಮಾಜದಲ್ಲಿ ರೂಢಿಯಲ್ಲಿದೆ. ಸಾಮಾನ್ಯವಾಗಿ ಕೆಳವರ್ಗದವರಲ್ಲಿ ಜನ ಈ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. 'ಅನುಭಾವ'ದ ಈ ಪಂಥದಲ್ಲಿ ಕಾಣುವ 'ಗುರು-ಶಿಷ್ಯ' ಸಂಬಂಧಗಳು ಹೆಚ್ಚಾಗಿ ಈ ಪ್ರದೇಶದಲ್ಲಿ ಏರ್ಪಡಲು ಕಾರಣಗಳೇನು? ಜನ ಸಾಮಾನ್ಯರ ಆರ್ಥಿಕ ಸ್ಥಿತಿಗಳಿಗೂ ಮತ್ತು

ಭೂಮಾಲೀಕರ ಆಳ್ವಿಕೆಗಳ ನಡುವಿನ ಸಂಬಂಧಗಳೇನಾದರೂ ಕಾರಣವಾಗಿರಬಹುದೇ? ಯಾಕೆಂದರೆ ವಿಜಯನಗರ ಪತನಾನಂತರವೂ ಈ ಪ್ರದೇಶದಲ್ಲಿ ನೂರಾರು ಯುದ್ಧಗಳು ನಡೆದಿವೆ. ಹದಿನೇಳನೆಯ ಶತಮಾನದಿಂದ ಈ ಪ್ರದೇಶದಲ್ಲಿ ಜನ ಸಾಮಾನ್ಯರು ಯುದ್ಧದ ನೆರಳಿನಲ್ಲಿ ಬದುಕಿದ್ದಾರೆ. ಪರಕೀಯರ ದಾಳಿಗಳು, ದರೋಡೆಗಳು, ಕ್ಷಾಮ ಬರಗಾಲದಿಂದ ಸಾಮಾಜಿಕ ಬದುಕು ಅಸ್ತವ್ಯಸ್ತಗೊಂಡಿತ್ತು. ನಾಯಕತ್ವವಿಲ್ಲದೇ ಸಾಮಾನ್ಯರು ಅತಂತ್ರ ಸ್ಥಿತಿಯಲ್ಲಿದ್ದರು. ನೆಲೆಯೆಂಬುದು ಕನಸಿನ ಮಾತಾಗಿತ್ತು. ದಾಳಿಗೆ ಸಿಕ್ಕ ಊರಿನಂತೆ ಈ ಪ್ರದೇಶದ ಸ್ಥಿತಿಯಾಗಿತ್ತು. ಸಾಮಾಜಿಕ ಬದುಕು ಆಹಾಕಾರದಿಂದ ತುಂಬಿತ್ತು ಎಂಬುದು ಇತಿಹಾಸ ಹೇಳುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸಂತರು, ಯೋಗಿಗಳು, ಅನುಭಾವಿಗಳು ಸಮಾಜದ ನೆಮ್ಮದಿಗೆ ಶ್ರಮಿಸಿದರು ಎಂಬುದು ನಿಜ. ಇವರ ಜೀವನ ಕ್ರಮ ಮತ್ತು ತತ್ವಪದಗಳು ಸಾಮಾನ್ಯರ ಬದುಕಿಗೆ ನೆಲೆ ಒದಗಿಸಿರುವುದೂ ನಿಜ. ಜೊತೆಗೆ ಸಂತರ ಅನುಯಾಯಿಗಳಾಗುವುದರ ಮೂಲಕ ಅನೇಕರು ತಮ್ಮ ಜವಾಬ್ದಾರಿಯನ್ನು ಮರೆತರು. ಧಾರ್ಮಿಕ ವೇಷದಿಂದ ಮಾಡಬೇಕಾದ ಕರ್ತವ್ಯಗಳನ್ನು ಮಾಡದೆ ಸಮಾಜಕ್ಕೆ ಭಾರವಾಗತೊಡಗಿದರು. ಬೌದ್ಧ ಭಿಕ್ಷುಕರು ಕಾಲಾಂತರದಲ್ಲಿ ಸಮಾಜಕ್ಕೆ ಹೊರೆಯಾದಂತೆ ಈ ಕಾಲದಲ್ಲಿಯೂ 'ಗುರು-ಶಿಷ್ಯ'ರ ಸ್ಥಿತಿಯಾಯಿತು. ಇದಕ್ಕೆ ಕೇವಲ ವ್ಯಕ್ತಿಗಳ ಸ್ವಭಾವ ಕಾರಣವಲ್ಲ. ಅಂದಿನ ಕಾಲದ ಪರಿಸ್ಥಿತಿಯೂ ಕಾರಣವಾಗಿರುತ್ತದೆ. ರಾಜಕೀಯ ಸ್ಥಿತ್ಯಂತರಗಳಿಂದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳೂ ಅಸ್ತವ್ಯಸ್ತಗೊಳ್ಳುತ್ತವೆ. ದುಡಿಯುವ ವರ್ಗಗಳಿಗೆ ದುಡಿಮೆಯ ಅವಕಾಶಗಳೂ ಕಮ್ಮಿಯಾಗಿರಬಹುದು. ದುಡಿಸಿಕೊಳ್ಳುವ ವರ್ಗಗಳ ದಬ್ಬಾಳಿಕೆಯೂ ಹೆಚ್ಚಾಗಿರುತ್ತದೆ. ಇಂಥ ಅನೇಕ ಕಾರಣಗಳು ಜನ ಸಾಮಾನ್ಯರನ್ನು ಅನುಭಾವಿ ಪಂಥಗಳತ್ತ ಆಕರ್ಷಿಸಿರಬೇಕು. ಇಲ್ಲಿ ಆಶ್ರಯ ಪಡೆಯುವ ಮೂಲಕ ಒಂದು ಬಗೆಯಲ್ಲಿ ರಕ್ಷಣೆಯನ್ನು ಪಡೆದಂತಾಗುತ್ತದೆ ಎಂದು ಜನ ಭಾವಿಸಿರಬೇಕು. ಈ ಪ್ರದೇಶದಲ್ಲಿ ಭೂಮಾಲೀಕರ ಆಧೀನದಲ್ಲಿ ಜನ ಸಾಮಾನ್ಯರು ದುಡಿದು ಬದುಕುತ್ತಾ ಬಂದಿದ್ದಾರೆ. ಇವರ ದಬ್ಬಾಳಿಕೆ, ಶೋಷಣೆಯನ್ನು ಅನುಭವಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ಇದನ್ನು ತಾಳಿಕೊಳ್ಳದೆ ಗುರುವಿನ ಮಗನಾಗಿ ಸಂತನ ವೇಷ ಪಡೆಯುವ ಮೂಲಕ ರಕ್ಷಣೆ ಮತ್ತು ಪ್ರತಿಭಟಿಸಲು ಒಂದು ಬಗೆಯ 'ಆಧ್ಯಾತ್ಮಿಕ' ಅಥವಾ 'ಅನುಭಾವ'ದ ಶಕ್ತಿಯನ್ನು ಆಶ್ರಯಿಸಿರಬಹುದು. ಶೋಷಕರನ್ನು ಎದುರಿಸಲು ಅಥವಾ ಅವರಿಂದ ತಪ್ಪಿಸಿಕೊಳ್ಳಲು ಈ 'ಅನುಭಾವ'ದ ದಾರಿ ತಾತ್ಕಾಲಿಕವಾಗಿಯಾದರೂ ಸಹಾಯಕವಾಗಬಹುದು. ಅದರೆ ಈ ದಾರಿಯಲ್ಲಿ ಸಾಗಲು ಯಾವ ತಾತ್ವಿಕ ಸಿದ್ಧತೆಗಳಿಲ್ಲದ ಕಾರಣ ಇಂಥವರು ಕಪಟಿಗಳಾಗಿ ಹೊಟ್ಟೆ ಹೊರೆಯಲು ನಾನಾ ಮಾರ್ಗ ಹಿಡಿದಿದ್ದಾರೆ. ಇಂಥವರ ಬಳಗವೇ ದೊಡ್ಡದಾಗಿ ಬೆಳೆದು ಈ ಪ್ರದೇಶದಲ್ಲಿ ಅನೇಕ ಸಮಸ್ಯೆಗಳಿಗೆ ಕಾರಣವಾಗಿವೆ. ಇದಕ್ಕೆ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳೇ ಕಾರಣವಾಗಿವೆ ಎಂಬುದನ್ನು ಮರೆಯುವಂತಿಲ್ಲ.

ಸತಿಪತಿ

ವಚನಕಾರರಲ್ಲಿ 'ಗುರು'ವಿಗೆ ಸ್ಥಾನವಿದೆ. ಆದರೆ ತತ್ವಪದಕಾರರು ನೀಡಿದ ಸ್ಥಾನವೇ ಬೇರೆ ಮತ್ತು ವಿಶಿಷ್ಟ ರೀತಿಯದ್ದು. ವಚನಕಾರರಲ್ಲಿ ಇಷ್ಟದೈವವೇ ಗಂಡನಾಗಿ, ಭಕ್ತನೇ ಹೆಂಡತಿಯಾಗುವ 'ಸತಿ-ಪತಿ' ಭಾವದ ಪರಿಕಲ್ಪನೆಯಿದೆ. ತತ್ವಪದದಲ್ಲಿ ಗುರುವೇ ಗಂಡ. ಈ ಗುರುವೆಂಬ ಗಂಡನೊಂದಿಗೆ ಅನೇಕ ಬಗೆಯಲ್ಲಿ ಮೌನಸಂಧಾನ ನಡೆಸಿದ್ದಾರೆ.

ಏನು ಥಾಸಿಯ ಮಾಡಿದನೆ ತಂಗೆಮ್ಮ
ಏನು ಮರಳು ಮಾಡಿದನೆ
ಕಿವಿಯೊಳು ಗಿಡಹಿಂಡಿ ಮದವಿ ಗಂಡನ ಬಿಡಿಸಿ
ತನ್ನಂತೆ ಮಾಡಿಕೊಂಡನ (ರಾಮಪುರ ಬಕ್ಕಪ್ಪಯ್ಯ)

ಗುರುವನ್ನು ಪಡೆದು, ಗುರು ಉಪದೇಶದಂತೆ ಸಾಗಿದ ಮೇಲೆ ಲೌಕಿಕ ಗಂಡನ ಜೊತೆ ಸಾಗುವುದು ಕಷ್ಟವಾಗುತ್ತದೆ. ಗುರುವನ್ನು ಗಂಡನನ್ನಾಗಿ ಭಾವಿಸಿದ ಮೇಲೆ.

ಬ್ಯಾರ‍್ಯಾದೆನವ್ವ ತಂಗಿ ಬ್ಯಾರ‍್ಯಾದೆನವ್ವ
ಈ ಮನಿ ಒಳಗಿನ ಗದ್ದಲ ನೀಗಿ ಕಡಿಗಾದೆನವ್ವ
ನನ್ನ ಒಳಗ ನಾ ತಿಳಕೊಂಡೆ
ನನಗ ಬೇಕಾದ ಗಂಡನ ಮಾಡಿಕೊಂಡೆ **(ಕಡಕೋಳ ಮಡಿವಾಳಪ್ಪ)**

ಲೌಕಿಕವಾಗಿ ಕಾಣುವ ವ್ಯವಹಾರಗಳನ್ನು ನೆಲೆಯಾಗಿಟ್ಟುಕೊಂಡೇ ಅಲೌಕಿಕ ನೆಲೆಗೆ ತಲುಪುವ ಪರಿ ವಿಶೇಷವಾದದ್ದು. ಸಂಸಾರದ ಗದ್ದಲ ಈ ಸಂಸಾರದ ಗಂಡನಿಂದ ಬಿಡುಗಡೆ ಹೊಂದುವ, ನಿಜವಾದ ಗಂಡನನ್ನು ಪಡೆಯುವ ಈ ಮಾತುಗಳು ಸರಳವಾಗಿ ಸಹಜವಾಗಿ ಕಂಡರೂ ಈ ಮಾತುಗಳ ಅರ್ಥ ಪಾರಮಾರ್ಥದಲ್ಲಿ ಬೇರೆಯಾಗಿ ನಿಲ್ಲುತ್ತವೆ. ಸಂಸಾರದ ಗಂಡನನ್ನು ಮೀರಿ ಅಲೌಕಿಕ ಗಂಡನನ್ನು ಪಡೆಯುವುದೂ ಸುಲಭವಲ್ಲ. ಪಡೆಯುವ ಸ್ಥಿತಿಯಲ್ಲಿ ನಡೆಯುವ ಮನಸ್ಸಿನ ತಳಮಳವನ್ನು,

ಮನಸಿಜರೂಪ ಮುನಿದಾನ ಗೆಳತಿ
ನೆನೆಸಿದರ ಎದಿ ಭುಗಿಲಂತದ
ಕನಸಿನೊಳಗ ಅತ ಕಂಡ್ಹಾಂಗಾಗತದ
ಮನಸಿಗೆ ಜರಮರಿ ಆಗೇದವ್ವ **(ರಾಮಪುರ ಬಕ್ಕಪ್ಪಯ್ಯ)**

ಸಾಧಕ ತಾನು ನಂಬಿದ 'ಶಕ್ತಿ'ಯನ್ನು ಸಾಕ್ಷಾತ್ಕರಿಸಿಕೊಳ್ಳುವ ಹಾದಿಯಲ್ಲಿ ಇದು ಸಹಜ. ಇಂದ್ರಿಯಗಳನ್ನು ನಿಗ್ರಹಿಸುವ ಸ್ಥಿತಿಯಿದು. ಸೇರಬೇಕಾದ ನೆಲೆಗೆ ತಲುಪುವಾಗ ಆಗುವ ಮನಸ್ಸಿನ ಅನುಭವವನ್ನು ಬಕ್ಕಪ್ಪಯ್ಯ ಹೇಳಿದ್ದಾನೆ.

ಹೆತ್ತ ತಾಯಿ ತಂದೆಯ ಜರಿದೆ
ಅತ್ತೆ ಮಾವನ ಭಾವನ ತೊರೆದೆ
ಹತ್ತು ಎಂಟು ಬಳಗವ ಮರೆದೆ
ಮತ್ತೆ ಹೋಗಿ ಅವನೊಳು ಬೆರೆದೆ **(ಕೂಡಲೂರು ಬಸಲಿಂಗಪ್ಪ)**

ಅಂತರಂಗದ ಕೀಲು ತಿಳಿಸಿ ಭ್ರಾಂತಿಗೊಳಿಸಿದಾಯನ್ನ ಕಾಂತ
ಚಿತ್ತಚಾರಿ ಬಾರೆಯೆಂದು ಇತ್ತಕರದ ಕೇಳವ್ವ
ನನಗೆ ನಿನಗೆ ಭೇದವೆಷ್ಟೂ ಇಲ್ಲವೆಂದ ಕೇಳವ್ವ
ನಾನೇ ನೀನು ನೀನೇ ನಾನು ನಿಜವು ತಿಳಿಯೆಂದಾಯನ್ನ ಕಾಂತ **(ವೆಂಕಟಾಪುರ ಬೀಮಣ್ಣ)**

ಲೋಕದ ಸಂಸಾರದ ಸುಖ ಸ್ಥಿರವಾದುದಲ್ಲ; ಕ್ಷಣಿಕವಾದದ್ದು. ಬಂಧನ, ವ್ಯಾಮೋಹಗಳಿಂದ ಅತೃಪ್ತಿಯೇ ಹೆಚ್ಚು. ಈ ಲೋಕದ ಸುಖಕ್ಕಿಂತ ತಾವು ಬಯಸುವ ಲೋಕದ ಸುಖವೇ ನಿಜವಾದ ಮತ್ತು ಮುಪ್ಪಾಗದ ಸುಖವದು. ಆ ಲೋಕದ ಅನುಭವಕ್ಕೆ ಹೋಗುವುದು ಸುಲಭವಲ್ಲ. ಅದರ ಹಾದಿ ಹಿಡಿದರೆ ಲೋಕದ ವ್ಯಾಮೋಹವೂ ಹಿಡಿದು ತಡೆಯುತ್ತದೆ. ಇದನ್ನು ಬಿಡಿಸಿಕೊಳ್ಳುವ ಪರಿಯನ್ನು ತತ್ವಪದಕಾರರು ಭವದ ನೆಲೆಯಲ್ಲೇ ನಿಂತು ಹಾಡಿದ್ದಾರೆ. ಅನೇಕ ತತ್ವಪದಕಾರರು ಈ 'ಸತಿ-ಪತಿ' ಭಾವದ ಕಲ್ಪನೆಯನ್ನು ನೆಲಮೂಲದ ಚಿತ್ರಗಳಿಂದಲೇ ವ್ಯಕ್ತಪಡಿಸಿದ್ದಾರೆ. ವಚನಕಾರರಲ್ಲಿಯೂ ಈ ಭಾವದ ವಚನಗಳು ರಮ್ಯವಾಗಿವೆ. ಅದರಲ್ಲೂ ಅಕ್ಕಮಹಾದೇವಿಯ ವಚನಗಳ ಸೊಗಸು ಅನನ್ಯವಾದದ್ದು. ಹೆಣ್ಣಾಗಿ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನೆ ಗಂಡನೆಂದು ಬಗೆದು ಬರೆದ ವಚನಗಳು ವಿಶೇಷ ಅರ್ಥವನ್ನು ಪಡೆದಿವೆ. ಇದಕ್ಕೆ ಅವಳ ಆತ್ಮಕಥನವೂ ಸೇರಿಕೊಂಡು ಅರ್ಥವಲಯವನ್ನು

ಹಿಗ್ಗಿಸಿವೆ. ಅಕ್ಕನ ವಚನಗಳನ್ನು ನೆನಪಿಗೆ ತರುವಂಥ ಈ ಭಾವದ ಅನೇಕ ತತ್ವಪದಗಳನ್ನು ಕೂಡಲೂರು ಬಸಲಿಂಗಪ್ಪ ರಚಿಸಿದ್ದಾನೆ

ಅರಳಗಂಗಳೆ ಎಂದು ಕರೆದವನ! ಚೈತಲೆ
ಬೆರಳಿನಿಂದ ತಿದ್ದಿ ನೋಡುವವನ
ಹರಳ ಕುಂದಣ ಮೂಗುತಿಡುವವನ
ಪರಮಾನಂದ ಪಡುವ ಚದುರನ
ಹತ್ತಿರ ಬಂದು ಸೆರಗು ಎಳೆವವನ
ಒತ್ತಿ ಸ್ತನಗಳ ಪಿಡಿಯುವವನ
ಎತ್ತಿ ಚುಂಬನ ಕೊಟ್ಟು ನಗುವವನ
ಮತ್ತೆ ಎಂಬತ್ತು ನಾಲ್ಕು ಕಲೆ ಬಲ್ಲವನ

ಇಂಥ ರಚನೆಗಳಿಂದ ತಿಳಿಯುವುದೇನೆಂದರೆ ಪತಿಯಲ್ಲಿ ಸತಿ ಇಡುವ ಪ್ರೀತಿ ನಿಷ್ಠೆಯಂತೆ, ಭಕ್ತ ಪರಮಾತ್ಮನಲ್ಲಿ ಇಡಬೇಕು. ಸತಿ-ಪತಿಯ ಮಧ್ಯ ಅನ್ಯೋನ್ಯತೆ ಏರ್ಪಡಬೇಕು. ಎರಡಳಿದು ಒಂದಾಗುವ ಸ್ಥಿತಿ ತಲುಪಬೇಕು. ಸತಿ-ಪತಿ ಬೇರೆಯಲ್ಲ. ಎರಡು ದೇಹ ಒಂದೇ ಜೀವ ಎಂಬಂತಾಗಬೇಕು. ಭಕ್ತ-ಪರಮಾತ್ಮ ಬೇರೆ ಬೇರೆಯಲ್ಲ. ನರ ಹರನಾಗುವ ತತ್ವವಿದು. ಮೂಲತಃ ಇದನ್ನು ಶರಣರಲ್ಲಿ ಕಾಣುತ್ತೇವೆ. ತತ್ವಪದಕಾರರಲ್ಲಿಯೂ ಇಂಥ ರಚನೆಗಳಿವೆ. ಈ ಬಗೆಯ ತತ್ವ ಪದಗಳಲ್ಲಿ ಸಾಮಾಜಿಕ ವಾಸ್ತವವನ್ನು ಹುಡುಕುವುದು ಹೇಗೆ? ಭಕ್ತ ಪರಮಾತ್ಮನಲ್ಲಿ ಸತಿನಿಷ್ಠೆಯನ್ನಿಟ್ಟು ಕೊನೆಗೆ ಎರಡಳಿದು ಒಂದಾಗಿ ಹೋಗುವಂಥ ಸ್ಥಿತಿಯ ನಿದರ್ಶನವು, ಲೌಕಿಕರಿಗೆ ಸಂಸಾರದಲ್ಲಿ ದಾರಿಯಾಗಲೆಂದು ಹೇಳಿರಬಹುದೇ? ಸತಿ-ಪತಿಯ ನಡುವೆ ಸಂಸಾರಿಕ ಕಷ್ಟನಷ್ಟಗಳು, ಸರಸವಿರಸಗಳು ಏನಿದ್ದರೂ ಕೂಡಿ ಬಾಳುವ ಛಲ ಹುಟ್ಟಿಸಲು ಈ ತತ್ವ ಪದಕಾರರು ಶ್ರಮಿಸಿರಬಹುದು ಎನಿಸುತ್ತದೆ.

ಹಾದರ ಮಾಡುವ ಪರಿ

'ಸತಿ-ಪತಿ' ಭಾವದ ಈ ಪರಿಕಲ್ಪನೆಯನ್ನು ತತ್ವಪದಕಾರರು ಲೌಕಿಕ ನೆಲೆಯಲ್ಲಿ 'ಹಾದರ' ಎಂದು ಭಾವಿಸಿದ್ದಾರೆ. ಅಲೌಕಿಕ ಗಂಡನ ಜೊತೆ ನಡೆಸಿದ ಮೌನ ಸಂವಾದವನ್ನು ಅನುಭಾವದ ನೆಲೆಯಲ್ಲಿ ಹೇಳಲು ಅನೇಕ ತತ್ವಪದಕಾರರು ಪ್ರಯತ್ನಿಸಿದ್ದಾರೆ. ಆದರೆ 'ಅನುಭಾವ' ಅಭಿವ್ಯಕ್ತಿಗೆ ದಕ್ಕುವಂಥದ್ದಲ್ಲ ಎಂದು ವಚನಕಾರರೇ ಹೇಳಿದ್ದಾರೆ. ಇನ್ನು ಜನತೆಯ ಕವಿಗಳಾದ ತತ್ವಪದಕಾರರು ಒಗಟಿಗೆ, ನಿಗೂಢತೆಗೆ ಮೊರೆ ಹೋಗುವವರಲ್ಲ. ಆ ಪ್ರಯತ್ನಗಳನ್ನೂ ಮಾಡಿದ್ದಾರೆ. ಆದರೆ ಲೌಕಿಕ ವಿದ್ಯಮಾನಗಳಲ್ಲಿಯೇ ರೂಪಕಗಳನ್ನು ಸೃಷ್ಟಿಸಿದ್ದಾರೆ.

ಹಾದರ ಕಲಿತೇನ ಎಂಥಾಹದೋ
ನಲ್ಲನೆಬ್ಬಿಸಿಕೊಂಡು ಹೋಗಂಥಾಹದೋ!

ನಾನು ಪಡೆದೇನ ಇಂಥಾಹದೋ
ತಿರುಗಿ ಈ ಊರಿಗೆ ಬಾರದಂಥಹದು
ಅತ್ತಿ ಮಾವನ ಮನಿ ಬಿಟ್ಟೇನ
ತಲಬಾಗಿಲ ಬಿಟ್ಟು ಹೊರಗ ಹೊಂಟೇನ

ಆರು ಮಕ್ಕಳ ಮಲಿ ಬಿಡಿಸಿದನ
ಮದಿವಿ ಗಂಡನ ಕರಿಮಣಿ ಕೆಡಿಸಿದನ

ಹಾದರ ಮಾಡದು ಕಲ್ತೇನ
ಈ ಊರನ ಮಂದಿದು ಸುದ್ದೇನ?

ಬಹದ್ದೂರ ಮಡಿವಾಳನ ಬುದ್ದೇನ
ಈ ಹಾದರದೊಳಗ ಮುಳಮುಳಗಿ ಎದ್ದೇನ (ಖೈನೂರು ಕೃಷ್ಣಪ್ಪ)

ಈ ತತ್ವಪದದ ಅರ್ಥ ಹೊರ ರೂಪದಲ್ಲಿ ಲೌಕಿಕವಾದದ್ದು ಮತ್ತು ಆಡು ನುಡಿಯಲ್ಲಿದೆ. ಲೋಕದಲ್ಲಿ ಗಂಡನನ್ನು ತೊರೆದು ಪರಪುರುಷನ ಜೊತೆ ಸಂಬಂಧ ಬೆಳೆಸಿದ ಸತಿಗೆ 'ಹಾದರಗಿತ್ತಿ' ಎಂದು ಜರೆಯಲಾಗುತ್ತದೆ. ಆದರೆ ಸಾಧಕ ತನ್ನ ಸಾಧನೆಯ ಹಾದಿಯಲ್ಲಿ ಗುರುವಿನೊಂದಿಗೆ ನಡೆಸಿದ ಮೌನಸಂಧಾನವನ್ನೂ 'ಹಾದರ' ಎಂದು ಭಾವಿಸಲಾಗಿದೆ. ಲೌಕಿಕದ ಹಾದರ ಅಪಮಾನಕಾರಿಯಾದದ್ದು. ಅಲೌಕಿಕದ ಈ 'ಹಾದರ' ತತ್ವಪದಕಾರರ ದೃಷ್ಟಿಯಲ್ಲಿ ಮುಕ್ತಿಯ ಹಾದಿ ತೋರಿಸುವಂಥದ್ದು. ಖೈನೂರು ಕೃಷ್ಣಪ್ಪನ ಈ ತತ್ವಪದದಲ್ಲಿ ಈ 'ಹಾದರ' ಪವಿತ್ರವಾದದ್ದು. ಆದ್ದರಿಂದಲೇ 'ಈ ಹಾದರದೊಳಗ ಮುಳಮುಳಗಿ ಎದ್ದೇನ' ಎಂಬಲ್ಲಿ ಇದು ನಿಜದ ಹಾದಿ, ನಿಜಸುಖದ ಸ್ಥಿತಿ ಎಂಬುದನ್ನು ವ್ಯಕ್ತಪಡಿಸಿದ್ದಾನೆ.

ಕಲಿಸಿದ ಹಾದರವೆಂಥದ್ದು
ವಲ್ಲೆನೆಂದರೆ ಮರುಳು ಮಾಡಿದಂಥದ್ದು
ನೆಲೆಯರಿಯದಿದ್ದೆನಿವನಿಂಥಾದ್ದು
ಬಲಿಹಾಕಿದ ಬಾಯಿ ಬಾರದಂಥದ್ದು (ನೀರಲಕೇರಿ ಬಸವಲಿಂಗ ಶರಣ)

ಈ ತತ್ವಪದದಲ್ಲಿ, ಇದು ಗುರು ಕಲಿಸಿದ ಹಾದರ. ಅದಕ್ಕಾಗಿಯೇ ಸಮ್ಮತವಿದೆ. ಈ ಹಾದರ ಕಲಿಯದಿದ್ದರೆ ಗುರುಗಂಡನ ಸುಖ ಸಿಗುವುದಿಲ್ಲ. ಅನಿವಾರ್ಯವಾಗಿ ಬೀಸಿದ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳಬೇಕಾಗಿದೆ. ಲೌಕಿಕರಿಗೆ ಇದರ ಮರ್ಮ ತಿಳಿದಿರಲಿಕ್ಕಿಲ್ಲ. ಅದಕ್ಕಾಗಿ,

ಗಂಡ ಕಲಿಸಿದ ಹಾದರ ನಾನೇನು ಬಲ್ಲನೆ! ನೆರೆಮನೆ
ತುಂಡ ಮುಂಡೆಯರಾಡಿಕೊಂಡರೆ ಅಂಜಿಕೇನಗೇನ (ಕೂಡಲೂರು ಬಸಲಿಂಗಪ್ಪ)

ಕಡಕೋಳ ಮಡಿವಾಳಪ್ಪನ ತಾಯಿಯೆಂದು ಹೇಳಲಾಗುವ ಬಿದನೂರ ಗಂಗಮ್ಮನ ತತ್ವಪದವೊಂದು ಈ ವಿಷಯಕ್ಕೆ ಸಂಬಂಧಪಟ್ಟಿದ್ದಿದೆ:

ಪೂರ್ವದ ಹಾದಿ ಕಡೀದನ
ಪುನರಪಿ ಬೋಧಾ ಹೇಳಿದನ
ಮನಸ್ಸಿನ ಮೈಲಿಗಿ ಬಿಡಿಸಿದನ
ಕನಸಿನ ಎಚ್ಚರ ಮರಸಿದನ
ಮೆಚ್ಚುಮಾಡಿ ಹುಚ್ಚು ಹಿಡಿಸಿದನ

ಸತ್ಯ ಸದ್ಗುರು ವಿರೂಪಾಕ್ಷನ' -ಈ ತತ್ವಪದವು ಬಿದನೂರು ಗಂಗಮ್ಮನ ಬದುಕಿಗೆ ಸಂಬಂಧಿಸಿದ್ದು ಎಂದು ಹೇಳಲಾಗುತ್ತದೆ. ಅಂದರೆ ಗಂಗಮ್ಮನ ಬದುಕಿಗೆ ಹೊಂದಿಕೊಂಡ ಕಥೆಯೊಂದಿದೆ. ಆಕೆ ಬಾಲವಿಧವೆ. ವಿರೂಪಾಕ್ಷ ಎಂಬ ಜಂಗಮನೊಡಗೂಡಿ ಮಡಿವಾಳಪ್ಪನಿಗೆ ಜನ್ಮನೀಡಿದಳು ಎಂಬುದು ಆ ಕತೆ.[5] ಆಕೆಯ ಲೌಕಿಕ ಬದುಕಿನಲ್ಲಿ ಘಟಿಸಿದ ಸಂಗತಿಯಿದು. ಅಲೌಕಿಕ ಗಂಡನ ಜೊತೆಗೆ ನಡೆಯುವ ಸ್ವಪ್ನ ಸಂಧಾನವು ಗಂಗಮ್ಮನ ಬದುಕಿನಲ್ಲಿ ವಿರೂಪಾಕ್ಷನೆಂಬ ಜಂಗಮನೊಂದಿಗೆ ಲೌಕಿಕದಲ್ಲೂ ನಡೆದಿದೆ.

ಗಂಗಮ್ಮನ ತತ್ವಪದವನ್ನು ಗಮನಿಸಿದರೆ ಇದರ ಅರ್ಥ ತಿಳಿದೀತು. ಸ್ವಪ್ನ ಸಂಧಾನ ಎನ್ನುವ 'ಕನಸಿನ ಎಚ್ಚರ ಮರಸಿದನ' ಎಂಬುದು ಇಲ್ಲಿ ವಿಶೇಷವಾಗಿದೆ. ಅಲೌಕಿಕ ನೆಲೆಯಲ್ಲಿ ನಡೆಯಬೇಕಾದದ್ದು ಲೌಕಿಕದಲ್ಲಿಯೇ ನಡೆದಿರುವುದು ಗಂಗಮ್ಮನ ವಿಷಯದಲ್ಲಿ ವಾಸ್ತವ ಸಂಗತಿಯಾಗಿದೆ.

ಈ ತತ್ವಪದಕಾರರು 'ಗುರು' ಎಂಬ ಗಂಡನ ಜತೆ ಮಾಡಿದ 'ಹಾದರ'ವನ್ನು ಪರಿಪರಿಯಾಗಿ ಸಂತೋಷದಿಂದ ಹೇಳುತ್ತ, ಅದರಿಂದಾಗುವ ಪರಿಣಾಮಗಳನ್ನು ವಿವರಿಸಿದ್ದಾರೆ. ಈ ಅನುಭಾವಿಗಳು ಹಾದರದ ರೂಪಕವನ್ನೇ ಯಾಕೆ ಬಳಸಿಕೊಂಡರು? ಇದಕ್ಕೆ ಸಮಾಜದಲ್ಲಿ ನಡೆಯುವ ಅನೈತಿಕ ಚಟುವಟಿಕೆಗಳಿಗೆ ಸಂಬಂಧವಿದೆಯೇ? ಹಾದರ ಎಂದರೆ ಅನೈತಿಕ ಸಂಬಂಧ ಎಂದು ಅರ್ಥ. ಅದು ಕೇವಲ ಮಹಿಳೆಗೆ ಮಾತ್ರ ಅನ್ವಯಿಸುವಂಥದ್ದಲ್ಲ. ಹೆಣ್ಣು ಮಾಡಿರಲಿ, ಗಂಡೇ ಮಾಡಿರಲಿ ಅದು ಅಪರಾಧವೇ. ಸಮಾಜದಲ್ಲಿ ಹೆಣ್ಣು ಗಂಡುಗಳ ನಡುವೆ ನಡೆಯುವ ಅನೈತಿಕ ಲೈಂಗಿಕ ಸಂಬಂಧಗಳನ್ನು ಕಂಡು ಬೇಸತ್ತಿರಬೇಕು. ಈ ಪ್ರದೇಶದಲ್ಲಿ ಹೆಣ್ಣು ಲೈಂಗಿಕವಾಗಿ ಹೆಚ್ಚು ಶೋಷಿತಳು ಎಂಬುದನ್ನು ಆಧುನಿಕ ಕಥೆ ಕಾದಂಬರಿಗಳು ಚಿತ್ರಿಸಿವೆ. ಇದಕ್ಕೆ ಫ್ಯೂಡಲ್ ಶಕ್ತಿಗಳು ಸೇರಿದಂತೆ ಅನೇಕ ಶಕ್ತಿಗಳು ಕಾರಣವಾಗಿವೆ. ಹೆಚ್ಚು ಅನೈತಿಕ ಸಂಬಂಧಗಳು ಸಮಾಜದಲ್ಲಿ ಕಂಡಿರುವುದಂತು ನಿಜ. ಇದನ್ನು ಅರಿತ ಅನುಭಾವಿಗಳು ಈ ರೂಪಕವನ್ನು ಬಳಸಿಕೊಂಡಿದ್ದಾರೆ. ಲೌಕಿಕರು ಮಾಡುವ ಹಾದರಕ್ಕೂ, ಅನುಭಾವಿಗಳು ಮಾಡುವ ಹಾದರಕ್ಕೂ ವ್ಯತ್ಯಾಸವಿದೆ. ಲೌಕಿಕರು ಮಾಡುವ 'ಹಾದರ'ಗಳಿಂದ ವ್ಯಕ್ತಿಗಳಿಗೂ ಸಮಾಜಕ್ಕೂ ಕಳಂಕ ಬರುತ್ತದೆ. ಅನುಭಾವಿಗಳು ಮಾಡಿದ 'ಹಾದರ'ದಿಂದ ನಿಜಸುಖದ ಹಾದಿ ತೆರೆಯುತ್ತದೆ. ಇದನ್ನು ಪರಿಶೀಲಿಸಿದರೆ ತತ್ವಪದಕಾರರು ಸಮಾಜದ ಒಳಿತಿಗೆ ದುಡಿದಿರುವ ಉದ್ದೇಶ ಸ್ಪಷ್ಟವಾಗುತ್ತದೆ. ದೇಶಿ ನುಡಿಗಟ್ಟಿನಲ್ಲಿ 'ಹಾದರ' ಎಂಬುದನ್ನು ಬಳಸುವ ಮೂಲಕ ಈ ಅನುಭಾವಿಗಳು ಜನರನ್ನು ಸುಸಂಸ್ಕೃತರನ್ನಾಗಿ ಮಾಡಲು ಶ್ರಮಿಸಿರುವುದು ಕಂಡುಬರುತ್ತದೆ.

ಗಾಂಜಾ ಸೇದುವ ಪರಿ

ಲೌಕಿಕದ 'ಹಾದರ'ವು ತತ್ವಪದಕಾರರ ಪರಮಾರ್ಥದ ನೆಲೆಯಲ್ಲಿ ಹೇಗೆ ವಿಶೇಷಾರ್ಥವನ್ನು ಪಡೆದಿದೆಯೇ ಹಾಗೆ ಸಾಮಾಜಿಕವಾಗಿ ಕೆಟ್ಟ ಚಟವೆಂದು ಪರಿಗಣಿತವಾದ 'ಗಾಂಜಾ ಸೇವನೆ'ಯು ಕೂಡ, ತತ್ವಪದಕಾರರ ಅಧ್ಯಾತ್ಮದ ದೃಷ್ಟಿಯಲ್ಲಿ ವಿಶೇಷ ಅರ್ಥವನ್ನು ಪಡೆದಿದೆ. 'ಗುರು-ಶಿಷ್ಯ'ರ ವ್ಯವಸ್ಥೆಯಲ್ಲಿ ಗಾಂಜಾ ಸೇವನೆಗೆ ಮೊದಮೊದಲ ಹಂತದಲ್ಲಿ ಅವಕಾಶವಿದೆ. ಲೌಕಿಕದ ವ್ಯಾಮೋಹವನ್ನು ಮರೆಯಲು ಸ್ವತಃ ಗುರುವೇ ಶಿಷ್ಯನಿಗೆ ಗಾಂಜಾವನ್ನು ಕೊಡುತ್ತಾನೆ. ಸಾಧನೆಯ ಹಾದಿ ಹಿಡಿಯಲು ಬೇಕಾಗುವ 'ಪರವಶ'ಕ್ಕಾಗಿ ಇದು ಆರಂಭದಲ್ಲಿ ಅಗತ್ಯ ಎಂಬುದು ನಿಜ. ಆದರೆ ನಿಜವಾದ ಸಾಧಕರು ತಮಗೆ ಬೇಕಾಗುವ 'ಪರವಶತೆ'ಯನ್ನು ಧ್ಯಾನ, ಯೋಗದಿಂದ ದಕ್ಕಿಸಿಕೊಳ್ಳುತ್ತಾರೆ. ಅರೆ ಸಾಧಕರಿಗೆ ಮತ್ತು ಸಾಧಕರೆಂದು ಹೇಳಿಕೊಳ್ಳುವ ಕಪಟಿಗಳಿಗೆ ಇದು ದಕ್ಕದೇ ಹೋಗಿ ಗಾಂಜಾ ಸೇವನೆಯಿಂದಲೇ ಮೈ ಮರೆಯುವ ಸ್ಥಿತಿಯಲ್ಲೇ ಉಳಿದು, ಕೊನೆಗೆ ಗಾಂಜಾದ ವ್ಯಸನಿಗಳಾಗಿ, ಗಾಂಜಾಬುಕ್ಕರಾಗಿ ಅಡ್ಡ ಹಾದಿ ಹಿಡಿಯುವವರೇ ಹೆಚ್ಚು. ಸಮಾಜದಲ್ಲಿ ಇಂಥವರ ಬಳಗವೇ ತುಂಬಿ ಹೋಗಿರಬೇಕು. ಇಂಥ ಸಂದರ್ಭದಲ್ಲಿ ತತ್ವಪದಕಾರರು ಲೌಕಿಕರು ಸೇದುವ ಗಾಂಜಾದಿಂದ ಯಾವ ಪ್ರಯೋಜನವೂ ಇಲ್ಲ. ಗಾಂಜಾ ಸೇದುವ ಬಗೆ ಬೇರೆಯಿದೆ. 'ಗಾಂಜಾ ಸೇದಬೇಕು' ಆದರೆ ಯಾವ ಬಗೆಯ ಗಾಂಜಾವನ್ನು ಹೇಗೆ ಸೇದಬೇಕು ಎಂಬುದನ್ನು ತಿಳಿಸಿದ್ದಾರೆ.

ಗಾಂಜಾ ಸೇದಬೇಕೋ ಮನವು ನಿರಂಜನದಿರಬೇಕೋ
ಗಾಂಜಾ ಸೇದಬೇಕು ಅಂಜನಗವಿಯೊಳು
ಮಂಜಿನ ಮನೆಯಲ್ಲಿ ರಂಜನೆಯಿಂದಲಿ

ಬೀಜ ಆಯಬೇಕೋ ಬೀಜದ ನಿಜವನರಿಯಬೇಕೋ
ಬೀಜ ಆಯಬೇಕು ಸುಜನ ಸಂಗದಿ
ಮೂಜಗದೊಡೆಯನ ಮೂಲ ತಿಳಿದು ಘನ

ಅದಾ ಮಾಡಬೇಕೋ ಅದರಾ ಸ್ವಾದವು ಸವಿಬೇಕೋ
ಅದಾ ಮಾಡಬೇಕು ಅದು ಅರಿಯದಂತೆ
ಸದಾಚಾರದಿಂದ ಮದಾಕ್ರೋಧ ಬಟ್ಟು

ಕಡ್ಡಿ ಅರಸಬೇಕೋ ಕಾಯದ ಕರ್ಮವು ಕಳೀಬೇಕೋ
ಕಡ್ಡಿ ಅರಸಬೇಕು ಕಣ್ಣಲಿನೋಡುತ
ಅಡ್ಡಿಯಿಲ್ಲದೆ ಆತ್ಮದೆ ನಿಂತೂ

ಸೊಂಗೆ ತುಂಬಬೇಕೋ ಸೊಂಗೆದ ಸೊಡಕುನರಿಯಬೇಕೋ
ಸೊಂಗೆ ತುಂಬಬೇಕು ಸೊಬಗಿನಿಂದಲಿ
ಅಂಗದೊಳಗೆ ಮಹಲಿಂಗನ ನೆನವುತಾ

ಬೆಂಕಿಯೇರಬೇಕೋ ಬಿಂಕದ ಬಿರುನುಡಿ ಬಿಡಬೇಕೋ
ಬೆಂಕಿಯೇರಬೇಕು ಶಂಕರಧ್ಯಾನದಿ
ಓಂಕಾರ ಬಂಡೆಗುರುವಾಂಕಿತದಿಂದಲೀ **(ವೆಂಕಟಾಪುರ ಭೀಮಣ್ಣ)**

ಈ ತತ್ವಪದದಲ್ಲಿ ಗಾಂಜಾ ಸೇದುವ ಚಿತ್ರಣವಿದೆ. ಇದು ಲೌಕಿಕದಲ್ಲಿ ಕಾಣುವ ವಸ್ತುಸ್ಥಿತಿಯ ಚಿತ್ರಣ. ಈ ಲೌಕಿಕ ನೆಲೆಯಲ್ಲಿ ಗಾಂಜಾ ಸೇದುವ ಕ್ರಿಯೆಯನ್ನು ಅನುಭಾವಿಯಾದ ಭೀಮಣ್ಣ ಗ್ರಹಿಸಿದ ಪರಿ ವಿಶೇಷವಾದದ್ದು. ಲೌಕಿಕರು ಗಾಂಜಾ ತಂದು, ಅದರಲ್ಲಿರುವ ಬೀಜ, ಕಸಕಡ್ಡಿ ತೆಗೆದು ನಾದಿನಾದಿ ಹದ ಮಾಡಿ, ಸೇದುವ ಕೊಳವೆಗೆ ತುಂಬಿ, ಅದಕ್ಕೆ ಬೆಂಕಿ ಇಟ್ಟುಕೊಂಡು ಎಳೆದೆಳೆದು ಸೇದುತ್ತಾರೆ. ನಿಶ ಏರಿ ಪರವಶರಾಗುತ್ತಾರೆ. ಇದು ಸಾಮಾನ್ಯರ ಸ್ಥಿತಿ. ಅನುಭಾವಿಯಾದವನ ಪರಿ ಬೇರೆ. ಅವನಿಗೆ ಲೌಕಿಕದ ವಸ್ತು ಬೇಕಿಲ್ಲ. ಅದರ ಹಂಗು ಮೀರಿದವನು. 'ನಿರಂಜನ' ಎಂಬ ಗಾಂಜಾದಿಂದ 'ಅಂಜನಗವಿ'ಯೊಳಗೆ 'ಮಂಜಿನ ಮನೆಯಲ್ಲಿ ಕುಳಿತು 'ಬೀಜ' ಆಯಬೇಕು ಎಂದಿದ್ದಾನೆ. ಮನುಷ್ಯನಲ್ಲಿರುವ 'ಲೌಕಿಕ' ಎಂಬ ಬೀಜವನ್ನು ಆಯ್ದು ಹೊರ ಚೆಲ್ಲಬೇಕು. ಆಸೆ ಆಮಿಷವೆಂಬ ಕಸಕಡ್ಡಿಯನ್ನು ತೆಗೆದುಹಾಕಬೇಕು. ನಂತರ ಮನಸ್ಸು ಪಕ್ವವಾಗಲು ನಾದಬೇಕು, ಹದಮಾಡಬೇಕು, ದೇಹ ಕರ್ಪೂರದಂತಾಗಬೇಕು, ಶಿವನ ಬೆಂಕಿ ತಗುಲಿಸಿಕೊಳ್ಳಬೇಕು, ಉರಿದರೂ ಕುರುಹು ಉಳಿಯಬಾರದು. ಇಂಥ ಸ್ಥಿತಿಗೆ ಏರುವ ಗಾಂಜಾ ಸೇದಬೇಕು ಎಂದು ಹೇಳಿದ್ದಾನೆ. 'ಸೇದೋ ಸೇದೋ ಗಾಂಜಿ. ಆದಿ ಅಂತ್ಯ ಭಾಗಿಸಿ, ಸಂಗಾ ಸುಸ್ಸಂಗಾ ನಿಸ್ಸಂಗಾ ಜುಂಜುರಿಸಿತ್ತೋ' ಎಂದು ವಡಕಿ ತಾತಪ್ಪಯ್ಯ ಹೇಳಿದ್ದಾನೆ. ಈ ಅನುಭಾವಿಗಳು ಲೌಕಿಕ ಬದುಕಿನ ಚಿತ್ರಗಳನ್ನು ಬಳಸಿ, ತಮ್ಮ ಮೂಲ ಉದ್ದೇಶದ ಕಡೆಗೆ ಸಮಾಜವನ್ನು ಒಯ್ಯಲು ಪ್ರಯತ್ನಿಸಿದ್ದಾರೆ.

ದುಡಿಯುವ ಕೆಳವರ್ಗದವರು ಹೆಚ್ಚಾಗಿ ಗಾಂಜಾ, ಕುಡಿತದ ವ್ಯಸನಿಗಳಾಗಿರಲು ಏನು ಕಾರಣವಿರಬಹುದು? ಅವರ ಬಡತನ ಮತ್ತು ಮೇಲ್ವರ್ಗದವರ ಅಧೀನದಲ್ಲಿ ಇರುವುದಕ್ಕೂ ಕಾರಣವಿರಬಹುದೆ? ಆರ್ಥಿಕವಾಗಿ ತುಂಬಾ ದುರ್ಬಲರಾಗಿರುವ ಮತ್ತು ಈ ಕಾರಣಕ್ಕಾಗಿಯೇ ಉಳ್ಳವರ ಅಧೀನಕ್ಕೆ ಒಳಗಾಗಿ ಶೋಷಣೆಗೆ ಗುರಿಯಾಗುವ ವ್ಯಕ್ತಿಗಳು-ಸಮುದಾಯಗಳು ಅಸಹಾಯಕವಾಗಿರುತ್ತವೆ. ಬಡತನ ಶೋಷಣೆಯಿಂದ ಆಳುವವರ ಮೇಲಿನ ಆಕ್ರೋಶವನ್ನು ವ್ಯಕ್ತಪಡಿಸಲು ಗಾಂಜಾ, ಕುಡಿತ

ಸಹಾಯಕವಾಗಬಹುದೇ? ಈ ಸ್ಥಿತಿಯಲ್ಲಿ ವ್ಯಕ್ತಿಯ ಅಪರಾಧವನ್ನು ಗಣನೆಗೆ ತೆಗೆದುಕೊಳ್ಳುವುದು ಉಚಿತವಲ್ಲ ಎಂತಲೂ ರಿಯಾಯಿತಿ ಇರುತ್ತದೆ. ತನ್ನೊಳಗಿನ ಅಸಹಾಯಕತೆ, ಸಿಟ್ಟು, ಆಕ್ರೋಶವನ್ನು ಗಾಂಜಾ ಸೇದಿ, ಕುಡಿದು ಪ್ರಜ್ಞಾಹೀನ ಸ್ಥಿತಿಯಲ್ಲಿ ಹೊರಹಾಕುವ ಮೂಲಕ ರಿಲೀಫ್ ಆಗಬಹುದೇ? ದೇವನೂರರ 'ಅಮಾಸ' ಕಥೆಯ ಸಿದ್ದಪ್ಪನ ಸ್ಥಿತಿ ಇದಕ್ಕೆ ನಿದರ್ಶನವಾಗಬಹುದು.

ಅಲಾವಿ ಆಡುವ ಪರಿ

ಹೈದರಾಬಾದ್ ಕರ್ನಾಟಕ ಪ್ರದೇಶದ ಅನೇಕ ಭಾಗಗಳಲ್ಲಿ ಬಹು ಸಂಭ್ರಮದಿಂದ ಮೊಹರಂ ಹಬ್ಬವನ್ನು ಆಚರಿಸಲಾಗುತ್ತದೆ. ಇದು ಮುಸ್ಲಿಮರ ಹಬ್ಬ. ಆದರೆ ಅನೇಕ ಹಳ್ಳಿಗಳಲ್ಲಿ ಮುಸ್ಲಿಮೇತರರು ಬಹು ಸಂಖ್ಯೆಯಲ್ಲಿ ಈ ಆಚರಣೆಯಲ್ಲಿ ಭಾಗಿಗಳಾಗುತ್ತಾರೆ. ಸುಮಾರು ಹದಿನಾಲ್ಕನೆಯ ಶತಮಾನದಿಂದ ಇದು ಭಾರತದಲ್ಲಿ ಆಚರಣೆಗೊಳ್ಳುತ್ತಿದೆ. 'ಮೊಹರಂ ಹಿಂದೂ-ಮುಸ್ಲಿಂ ಭಾವೈಕ್ಯದ ಪ್ರತೀಕ' ಎಂದು ಗುರುತಿಸಲಾಗಿದೆ. 'ಅಲಾವಿ' ಹಬ್ಬವೆಂತಲೂ ಇದನ್ನು ಹಳ್ಳಿಗಳಲ್ಲಿ ಕರೆಯುತ್ತಾರೆ. ಈ ಹಬ್ಬಕ್ಕೆ ಇಸ್ಲಾಂ ಧರ್ಮದಲ್ಲಿ ಐತಿಹಾಸಿಕ ಹಿನ್ನೆಲೆಯಿದೆ: ಹಜರತ್ ಮಹಮ್ಮದ್ ಪೈಗಂಬರರು ಮಾನವ ಕಲ್ಯಾಣಕ್ಕಾಗಿ ಶ್ರಮಿಸಿ ಇಸ್ಲಾಂ ರೀತಿಯ 'ಪ್ರಜಾಪ್ರಭುತ್ವ' ವನ್ನು ಸ್ಥಾಪಿಸಿದರು. ಅವರ ನಂತರ ಖಲೀಫರಾಗಿ ಹಲವರು ಈ ಇಸ್ಲಾಂ ಪ್ರಜಾಪ್ರಭುತ್ವವನ್ನು ನ್ಯಾಯಯುತವಾಗಿ ಮುನ್ನಡೆಸಿದರು. ಮುಂದೆ ಖಲೀಫರಾಗಲು ಪೈಪೋಟಿ ನಡೆದು ಹಜರತ್ ಇಮಾಮ ಹುಸೇನರಿಗೂ ಮತ್ತು ಯಜೀದನಿಗೂ ಯುದ್ಧವೇ ನಡೆಯಿತು. ಯಜೀದನ ಗುಂಪು ಇಮಾಮ ಹುಸೇನರನ್ನು ಮೋಸದಿಂದ ಕೊಲೆಗೈಯಿತು. ಮೋಸಕ್ಕೆ ಜಯವಾಯಿತು. ಧರ್ಮಕ್ಕೆ ಸೋಲಾಯಿತು. ಹಜರತ್ ಇಮಾಮ ಹುಸೇನರು ವೀರ ಮರಣವನ್ನು ಹೊಂದಿದರು. ಇದಕ್ಕೆ 'ಕರ್ಬಲಾ ದುರಂತ" ಎಂದು ಕರೆಯಲಾಗುತ್ತದೆ. ಹಜರತ್ ಇಮಾಮ್ ಹುಸೇನರ ಆತ್ಮಕ್ಕೆ ಶಾಂತಿ ಸಿಗಲೆಂದು ಮೊಹರಂ ತಿಂಗಳಲ್ಲಿ ಮುಸ್ಲಿಮರು ಉಪವಾಸ, ವ್ರತ, ಕುರಾನ್ ಪಠಣ, ದಾನ-ಧರ್ಮ ಕಾರ್ಯಗಳಲ್ಲಿ ತೊಡಗಿ 'ಆ ದುಃಖದ ದಿನ'ವನ್ನು ನೆನೆಸಿಕೊಂಡು ಹೀಗೆ ಆಚರಿಸುತ್ತಾರೆ. ಇದು ಕಾಲಕ್ರಮೇಣ ಪರ್ಶಿಯನ್ ಮೂಲದ ರಾಜರ ಪ್ರಭಾವದಿಂದ ಭಾರತಕ್ಕೆ ಕಾಲಿರಿಸಿತು. ತನ್ನ ಮೂಲ ಆಶಯದೊಂದಿಗೆ ಮೊಹರಂ ಭಾರತದಲ್ಲಿ ನಡೆಯಲಾರಂಭಿಸಿತು. ಹಿಂದೂಗಳು ಸೇರಿಕೊಂಡರು. ಮೊಗಲ್ ಚಕ್ರವರ್ತಿಗಳು ಈ ಹಬ್ಬಕ್ಕೆ ಪ್ರೋತ್ಸಾಹ ನೀಡಿದರು. ಬಹಮನಿ-ಆದಿಲಶಾಹಿ ಸುಲ್ತಾನರಂತು ಅದರ ಭಾಗವಾಗಿಯೇ ನಡೆಸಿದರು. ಕಾಲಾಂತರದಲ್ಲಿ ಈ ಮೊಹರಂ ಹಬ್ಬದ ಸ್ವರೂಪವೇ ಬದಲಾಗುತ್ತ ಬಂದಿತು. ಇದರಲ್ಲಿ ರಾಜಕೀಯವೂ ಸೇರಿ ಮೂಲದ ಸ್ವರೂಪ ಮಸುಕಾಯಿತು. "ಸಾಮ್ರಾಟ ಅಕ್ಬರ್ (೧೫೪೨-೧೬೦೫) ದೀನ್-ಎ-ಇಲಾಹಿ ಸ್ಥಾಪಿಸಿದ ನಂತರ ಮೊಹರಂ ಹಬ್ಬ ರಾಷ್ಟ್ರೀಯ ಹಬ್ಬವಾಗಿ ಮಾರ್ಪಾಡಾಯಿತು. ಇಂದಿಗೂ ಕೆಲ ಹಳ್ಳಿಗಳಲ್ಲಿ ಸರಕಾರಿ ಕಾಮಣ್ಣನಿಡುವಂತೆ, ಸರಕಾರಿ ಡೋಲಿ, ಸರಕಾರಿ ಆಲಂ ಇಡುವುದನ್ನು ನಾವು ಕಾಣುತ್ತೇವೆ. ಶೋಕ ಮೂಲ ಮೊಹರಂ ಆಚರಣೆ ಮರೆಯಾಗಿ ಸಂತೋಷ ಮತ್ತು ಸಂಭ್ರಮದ ಹಬ್ಬವಾಗಿ ಕರ್ನಾಟಕದಲ್ಲಿ ಮಾರ್ಪಾಡಾಯಿತು.[೬] ಹೈದರಾಬಾದ್ ಕರ್ನಾಟಕದ ಹಳ್ಳಿಗಳಲ್ಲಿ ಮೊಹರಂ ಬಂದರೆ ಸಾಕು, ಮಸೀದಿಯೊಳಗೆ ಪೀರಲ ದೇವರನ್ನು ಕೂಡಿಸುತ್ತಾರೆ. ಮಸೀದಿಯ ಮುಂದೆ ಅಲಾಯಿ ಕುಣಿ ತೋಡಿ ಅದರಲ್ಲಿ ಬೆಂಕಿ ಉರಿಸಲಾಗುತ್ತದೆ. ಕುಣಿಯಸುತ್ತ, ತಿರುಗುತ್ತ, ಕುಣಿಯುತ್ತ ಹಾಡುಗಳನ್ನು ಹಾಡುತ್ತಾರೆ. ಪೀರಲು ದೇವರುಗಳು ದಫನ್ ಆಗುವಾಗ ಅವುಗಳನ್ನು ಹಿಡಿದು ಊರಲ್ಲಿ ಸುತ್ತುತ್ತ ಜೈಕಾರ ಹಾಕುವುದು ವಾಸ್ತವ ಸಂಗತಿ. ಕುಣಿಯ ಸುತ್ತ ಅಲಾಯಿ ಕುಣಿಯಲು ಜಾತಿಬೇಧವಿಲ್ಲದೆ ಸಂಭ್ರಮದಿಂದ ಜನ ಸೇರುತ್ತಾರೆ. ಅಲಾಯಿ ಕುಣಿಯುವುದೇ ಉತ್ಸಾಹದ ಸಡಗರದ ಹಬ್ಬವಾಗಿದೆ. ಹೀಗಾಗಿ ಮೂಲದ ದುಃಖಮಯವಾದ ಸಂಗತಿಯನ್ನು ಮರೆತು ಸಂತಸದಿಂದ ಅಲಾಯಿ ಕುಣಿಯುವುದನ್ನು ಕಂಡ ತತ್ವಪದಕಾರರು ವಿಷಾದಗೊಂಡು 'ಅಲಾಯಿ ಆಡೋಣ ಬನ್ನಿರಿ" ಎಂದು ಮೂಲ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಡಿದ್ದಾರೆ.

ಅಲಾಯಿ ಎಂಬುದು ಏನಿದು
ಯಾರ್ಯಾರಿಗೆ ಇದು ತಿಳಿದಿಲ್ಲಾ
ತಿಳಿದ ಮ್ಯಾಲ ಅವರುಳಿದಿಲ್ಲಾ
ಉಳಿದ ಮ್ಯಾಲ ಅವರಳಿದಿಲ್ಲಾ
ಪೀರ್ ಪೈಗಂಬರ ಉಳಿದವರು
ಹಿಂದೂ-ಮುಸಲ್ಮಾನ ಆಗಿದರು
ರಾಮ ರಹೀಮ ಅವರಿಬ್ಬರು
ದಿನ ದಯಾಳ ಶರಣರು
ಶರಣರು ಕಲಮಾ ಓದಿದರು
ಮಾಯಿಗೆ ಉತ್ಪನ್ನ ಮಾಡಿದರು
ಮಾಯಿ ಹೊಟ್ಟೆಲೆ ಹುಟ್ಟಿದ ಮಾವಯ್ಯ
ಹೇಜಿತನಂತ ಹೆಸರಿಟ್ಟಿದರು
ಮಾಯಿಗೆ ಮದವಿ ಆಯಿತಲ್ಲಾ
ಚಿಕ್ಕ ಪ್ರಾಯ ವಯ ಬಂತಲ್ಲಾ
ಸದ್ಗುಣ ದುರ್ಗುಣ ಹುಟ್ಟಿದರಲ್ಲಾ
ಜನ್ಮ ಮರಣ ಅವರ ಹಿಂಬಲ
ಸದ್ಗುಣ ಸತ್ಯ ಶರಣರು
ದುರ್ಗುಣ ಏದ್ಯ ಹೇಜಿತರು
ಸದ್ಗುಣದವರಿಗೆ ದುರ್ಗುಣದವರು
ಹೊಡಿದು ಯಾಲಿ ಧೂಲ ಆಡಿದರು
ಯಾಲಿ ಧೂಲಾ ಅನ್ನುತ ಕುಣಿದವರು
ಕುಣಿಯ ಸುತ್ತ ಕುಣಿದಾಡುವರು
ಸತ್ತವರ್ಯಾರು ಹೆತ್ತವರ್‍ಯಾರು
ಅತ್ತವರ್ಯಾರು ಹೇಳುವರ್‍ಯಾರು
ಈ ಮಾತಿನ ಗುರುತಾ
ವೈರಿಗೆ ಕೇಳುತೀನಿ ಮಜಬೂತಾ
ಯಾರ ಅಲಾಯಿ ಯಾರ ಮಾಡತಾರ
ಜಲ್ದಿ ಕೇಳಿ ಹೇಳಿರಿ ಗುರ್ತಾ
ಭಲೇ ಸಿಕ್ಕಿ ನಮ ಕೈಯಾಗ
ಕೌಡಿ ಪೇಣಸ್ತಿನಿ ಮೂಗಿನಾಗ
ಹುಡುಕಿನೋಡೋ ನಿನ್ನ ಕಿತಾಬದಾಗ
ಕರಕೊಂಡು ಬಾ ನಿನ್ನ ವಸ್ತಾದಗ
ಕಿತಾಬದೊಳಗಿನ ಮಾತಲ್ಲಾ
ಹುಡುಕಿ ನೋಡಿದರೆ ಸಿಗೋದಿಲ್ಲಾ
ಕಣ್ಣಿನ ಕೊನಿಮ್ಯಾಲಿ ಕುಣಿದಾಡುವದಲ್ಲಾ

ಯಾರ್‍ಯಾರಿಗೆ ಇದು ತಿಳಿದಿಲ್ಲ
ಫಕೀರ ಬೇ ಫಿಕರೀ
ಅವನಿಗೆ ಅಂತಾರ ಪಯಂಬರಿ
ಎಲ್ಲರಿಗೆ ಅಂವ ಸಾಕ್ಷಾತ್ ಹಾನೋ
ಮೂಲಕ ಇದ್ದಾನೊ ಪರಭಾರಿ
ಮೂಲಕ ಗುರು ಶಂಕರ ಭವಲಾ
ಅವರ ಹಸ್ತ ನಮ ತಲಿಮ್ಯಾಲ
ಮೂರು ಲೋಕ ಬೆಳಕ ಬಿದ್ದಿತಲ್ಲಾ
ಚಿನ್ಮಯ ಜ್ಯೋತಿ ಜಗಮೇಲಾ

-ನಿಡುವಂಚಿ ಭದ್ರೇಶ್ವರ ತತ್ವಪದವಿದು. ಜನಸಾಮಾನ್ಯರ ನಡುವೆ ಬದುಕಿದ ಈ ತತ್ವಪದಕಾರನ ಗ್ರಹಿಕೆಯಲ್ಲಿ ಮುಗ್ಧತೆಯಿದೆ. ಬೌದ್ಧಿಕತೆಯಿಲ್ಲ. ಆದರೆ ಹಿಂದೂ-ಮುಸ್ಲಿಂ ಅನ್ನುವ ಭಾವೈಕ್ಯದ ಹುಸಿ ಕಲ್ಪನೆಯಿಲ್ಲ. ತನ್ನ ನೆಲೆಯಲ್ಲಿ ಈ ಸಂಬಂಧದ ತಾತ್ವಿಕ ಸಂಘರ್ಷವನ್ನು ಪ್ರಶ್ನಿಸಿದ್ದಾನೆ. ಈ ಆಚರಣೆಯ ಒಳಗಿನ ವೈರುಧ್ಯಗಳನ್ನೂ ವ್ಯಕ್ತಪಡಿಸಿದ್ದಾನೆ. ಇದರ ಸ್ವರೂಪ ಏಕಮುಖವಾಗಿಲ್ಲ, ಸಂಕೀರ್ಣವಾಗಿದೆ. ಈ ಸಂಕೀರ್ಣತೆಯ ತಲ್ಲಣಗಳನ್ನು ಈ ಕವಿ ವ್ಯಕ್ತಪಡಿಸಿದ್ದಾನೆ. ಇಲ್ಲಿ ಗಮನಾರ್ಹವಾದುದು ಒಂದು ಧಾರ್ಮಿಕ ಸಮುದಾಯ ನಂಬಿ ಆಚರಿಸುತ್ತಿರುವ ಆಚರಣೆಯನ್ನು ವಿಮರ್ಶಿಸುವ ದಿಟ್ಟತನ; ಇದು ಕೋಮುವಾದಿ ಪ್ರತಿಕ್ರಿಯೆಯಲ್ಲ. ಒಬ್ಬ ಸಂತ ಎಲ್ಲ ಬಗೆಯ ಸಮುದಾಯಗಳೊಳಗೆ ಆಳವಾಗಿ ಬೇರೂರದೆ ಇದ್ದಲ್ಲಿ ಹೀಗೆ 'ಬೇರೆ' ಮತದವರ ಆಚರಣೆಗಳನ್ನು ವಿಮರ್ಶಿಸಲು ಸಾಧ್ಯವಾಗುವುದಿಲ್ಲ.

ಮೊಹರಂ ಹಬ್ಬದಲ್ಲಿ ಕುಣಿಯುವ 'ಅಲಾಯಿ'ಯನ್ನೆ ದೃಷ್ಟಿಯಲ್ಲಿಟ್ಟುಕೊಂಡು ಬೇರೆ ಬೇರೆ ಅರ್ಥಕ್ಕೆ ಅದನ್ನು ಎಳೆದುಕೊಂಡು ಅನೇಕ ತತ್ವಪದಕಾರರು ಹಾಡಿದ್ದಾರೆ. 'ಮುಸ್ಲಿಂ' ತತ್ವಪದಕಾರನಾದ ಚನ್ನೂರ ಜಲಾಲ ಸಾಹೇಬನು,

ಅಲಾಯಿ ಆಡಿದೇನು ಮೊಹಮ್ಮದ ಚಾಂಸ್ಯೆ ಆಡಿದೇನ
ಮೊಹರಮ್ಮದ ಅರಿವಿನ ಅಲೈ ಭಾವದ ಚಾಂಸ್ಯೆ
ಮೂರು ಕೂಡಿದಲ್ಲಿ ಮೊಹರಮ್ಮ ಮಾಡಿದೇನು ಅಲೈ ಆಡಿದೇನು -ಎನ್ನುವ ಈ ತತ್ವಪದಕಾರ

ತನುವೆಂಬ ಮಸೂತಿ ಒಳಗೆ ಪಂಚ ತತ್ವದ
ಪಂಜು ಉರಿಸಿ ಜೀತ ಪೀರನ ವಲಿಸಿಕೊಂಡೆನು -ಎಂದಿದ್ದಾನೆ.

ನೀರಲಕೇರಿ ಬಸವಲಿಂಗ ಶರಣ, ವೆಂಕಟಾಪುರ ಖೇಮಣ್ಣ ಮುಂತಾದವರು 'ಅಲಾಯಿ' ಯನ್ನು ರೂಪಕವಾಗಿ ಉಳಿಸಿಕೊಂಡು ವ್ಯಕ್ತಪಡಿಸಿದ್ದಾರೆ. ಈ ಆಚರಣೆಯನ್ನು ಹೊರಗಿನಿಂದ ನೋಡಿ ಪ್ರತಿಕ್ರಿಯಿಸಿದ ನೀರಲಕೇರಿ ಬಸವಲಿಂಗ ಶರಣನು ಕೂಡಿ ಕುಣಿಯುತ ಪುನಃ 'ಮುಟ್ಟರಿ ತಟ್ಟರಿ' ಎಂಬ ಭೇದವನ್ನು ಯಾಕೆ ಉಳಿಸಿಕೊಂಡಿರುವಿರಿ ಎಂದಿದ್ದಾನೆ. ಕೂಡಿ ಕುಣಿಯುತ್ತ 'ಮನಸಪಾಲು ಮಾಡೋನು' ಎನ್ನುವ ಖೇಮಣ್ಣ ಸಾಮರಸ್ಯದ ಅರ್ಥದಲ್ಲಿಯೂ ಮತ್ತು ಮನಸ್ಸಿನ ವ್ಯಸನಗಳನ್ನು ಕಳೆದುಕೊಳ್ಳುತ್ತ ಭವದ ದುಃಖವನ್ನು ದೂರಮಾಡಿಕೊಳ್ಳಬೇಕು ಎಂದಿದ್ದಾನೆ.

ಜಾತಿ ಮೀರುವ ಗುಣ

ತತ್ವಪದಕಾರ ವಡಕಿ ತಾತಪ್ಪಯ್ಯನ ಒಂದು ತತ್ವಪದ ಹೀಗಿದೆ:

ತನ್ನ ನಿಜವು ತಾ ತಿಳಿದಂತ
ಪುರುಷನಿಗೆ ಇನ್ನೇನಿನ್ನೇನೋ
ತಮ್ಮಾ ಇನ್ನೇನಿನ್ನೇನೋ
ಧೀರತನದಿ ಪರತತ್ವ ತಿಳಿದ ಮೇಲೆ
ಊರೇನೋ ಕೇರೇನೋ
ತಮ್ಮಾ ಊರೇನೋ ಕೇರೇನೋ -ತಮ್ಮಾ
ಗುಪ್ತದಿಂದಲೆ ಗುರುವಿನ ಗುಟ್ಟು
ತಿಳಿದ ಮೇಲೆ ಗುಡ್ಡೇನೋ ಗುಡಿಯೇನೋ
ತಮ್ಮ ಗುಡಿಯೇನೋ ಗುಡ್ಡೇನೋ -ತಮ್ಮಾ
ಅಂಬಾನ ಹಾಲ್ಕುಡಿದು ಆಡುವ ಕೂಸಿಗೆ
ಅಂಗಳೇನೋ ಅಡಿವೇನೋ ತಮ್ಮ
ಅಡವೇನೋ ಅಂಗಳವೇನೋ ತಮ್ಮ
ಈಶ ಭೀಮೇಶನದೊಳಿದ್ದ ಮೇಲೆ
ದೇಶೇನೋ ಕೋಶೇನೋ ತಮ್ಮಾ
ಕೋಶೇನೋ ದೇಶೇನೋ ತಮ್ಮಾ

ಇದು ತತ್ವಪದಕಾರರ ನಿಲುವು. ಕುಲ, ಜಾತಿ, ಮೀರಿ ನಿಲ್ಲುವ ತತ್ವವನ್ನು ಹೇಳದ ಸಂತರಿಲ್ಲ. ಅದರಲ್ಲೂ ತತ್ವಪದಕಾರರು, ಸೂಫಿಗಳು, ಜಾತಿ, ಕುಲದ ಕಿಂಚಿತ್ ವಾಸನೆ ಉಳಿಸಿಕೊಂಡವರಲ್ಲ. ಬುದ್ಧ, ಬಸವ, ಕನಕದಾಸ, ಕಬೀರ, ಶರೀಫ್ ಮುಂತಾದ ಸಂತರು ಜಾತಿಯನ್ನು ಅಳಿಸಿ ಹಾಕಲು ತಮ್ಮನ್ನು ಅರ್ಪಿಸಿಕೊಂಡವರು. ಇವರೆಲ್ಲ ಶತಶತಮಾನಗಳಿಂದಲೂ ನಿರಂತರವಾಗಿ ಶ್ರಮಿಸಿದರೂ ಜಾತಿಯ ಬೇರುಗಳು ಬಲಗೊಳ್ಳುತ್ತಲೇ ಇವೆ. 'ಆಧುನಿಕ ಭಾರತ' ಎಂದು ಕರೆಸಿಕೊಳ್ಳುವ ಈ ಹೊತ್ತಿನ ಸ್ಥಿತಿಯನ್ನು ನೋಡಿದರೆ ಜಾತಿಯ ಬೇರುಗಳು ದಿನದಿನೇ ಆಳಕ್ಕಿಳಿಯುತ್ತಲಿವೆ. ಇದಕ್ಕೆ ರಾಜಕೀಯವೂ ಕಾರಣವಾಗಿದೆ. ಆದರೂ ಕಾಲಕಾಲಕ್ಕೆ ಹುಟ್ಟಿಬಂದ ಸಂತರಿಂದಾಗಿ, ಅವರ ಉದಾತ್ತ ನಿಲುವಿನಿಂದಾಗಿ, ಅವರ ಅಲೌಕಿಕ ಶಕ್ತಿಯಿಂದಾಗಿ, ಅವರ ಶ್ರಮದಿಂದಾಗಿ ಜನತೆಯಲ್ಲಿ 'ಚಿಂತನೆ' 'ಅರಿವು' ಮೂಡಿದೆ. ಸಾಮರಸ್ಯಕ್ಕೆ ದಾರಿಯಾಗಿದೆ. ಕಳೆದ ನಾಲ್ಕೈದು ಶತಮಾನಗಳಿಂದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹುಟ್ಟಿದ ಸೂಫಿಗಳಿಂದಾಗಿ, ಅನುಭಾವಿಗಳಿಂದಾಗಿ, ಯೋಗಿಗಳಿಂದಾಗಿ 'ಹಿಂದೂ-ಮುಸ್ಲಿಂ' ಸಾಮರಸ್ಯವೇರ್ಪಟ್ಟಿರುವುದು ವಾಸ್ತವ ಸಂಗತಿ. ಎರಡು ದೊಡ್ಡ ಸಂಸ್ಕೃತಿಗಳು ಕೂಡಿ ಬಾಳಿದ ನಿದರ್ಶನಗಳು ಈ ಪ್ರದೇಶದಲ್ಲಿ ಜೀವಂತವಾಗಿವೆ. ಈ ನಿದರ್ಶನಗಳು ಕೇವಲ ಆದರ್ಶಗಳಾಗಿಲ್ಲ. ಶಿಲ್ಲಪ್ಪ ಕವಿ ಒಂದು ಪದದಲ್ಲಿ 'ಆರೂಢ ನಮಕುಲ' ಎಂದಿದ್ದಾನೆ. ಆರೂಢ ಎಂದರೆ ಜೀವನ್ಮುಕ್ತರು ಎಂದರ್ಥ. ಮುಕ್ತವಾಗಿರುವ ಸೂಫೀ, ತತ್ವಪದಕಾರರಿಂದಾಗಿ ಜಾತಿ, ಮತವನ್ನು ಮೀರುವ ಜನರು ಇಲ್ಲಿರುವುದರಿಂದ ಸಮಾಜದಲ್ಲಿ ಭಾವೈಕ್ಯತೆಗೆ ಸ್ಥಾನವಿದೆ. ಆದರೂ ಜಾತಿ, ಮತಗಳ ಕಾರಣದಿಂದಾಗಿ ಸಂಘರ್ಷಗಳು ನಡೆದಿವೆ. ಇಂಥ ಸಂದರ್ಭದಲ್ಲಿ ತತ್ವಪದಕಾರರು ಜಾತಿವಾದಿಗಳನ್ನು ಕಟುವಾಗಿ ಟೀಕಿಸಿ, ತಿಳುವಳಿಕೆಯನ್ನು ನೀಡಲು ಪ್ರಯತ್ನಿಸಿದ್ದಾರೆ.

ಕುಲ ಕುಲ ಕುಲ ಕುಲ ಅಂತೀರಿ
ನಿಮದ್ಯಾವ ಕುಲ ನಮಗ ಹೇಳೀರಿ
ಮರ್ಮಾ ತಿಳಿಯಲಾರದೆ ಕುಂತೀರಿ
ಮರ್ಮವಗೆಟ್ಟು ಮರಣಾದಿರಿ

ತಾಯಿ ಉದರದಲ್ಲಿ ಜನಿಸಿದಿರಿ
ಅಲ್ಲಿ ಯಾವ ಕುಲ ಇತ್ತು ಹೇಳೀರಿ
ಹೊರಗೆ ಬಂದು ನೀವು ವೇಷ ಧರಿಸೀರಿ
ಕುಲಛಲಕ ಹೊಡದಾಡುತೀರಿ
ಎಲವಿನ ಪಂಜರ ಮಾಡ್ಯಾನರಿ
ಹೊಲಸು ಮಾಂಸ ಒಳಗೆ ತುಂಬ್ಯಾನರಿ
ಚರ್ಮದ ಮುಚ್ಚಕಿ ಮಾಡ್ಯಾನರಿ
ಇದಕ ಯಾವ ಕುಲ ಅನಬೇಕರಿ

ಎಂದು ನಿಡುವಂಚಿ ಭದ್ರೇಶ್ವರ ಪ್ರಶ್ನಿಸಿದ್ದಾನೆ. ದೇಹ, ಆತ್ಮಗಳಿಗೆ ಕುಲದ ಗುರುತಿಲ್ಲ. ಉಡುತೊಡುವ ವೇಷಗಳ ಮೇಲೆ ಕುಲವನ್ನು ಗುರುತಿಸುವ ಬಗ್ಗೆ ವಿಷಾದಿಸಿದ್ದಾನೆ. ಕುಲವಿದ್ದಲ್ಲಿ ದೇವರು, ದೇವರಿದ್ದಲ್ಲಿ ಕುಲ ಮಾಡಿಕೊಂಡ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಎಲ್ಲವನ್ನೂ ಬಳಸಿಕೊಂಡಿದ್ದಾನೆ. ದೇವರು ಬೇರೆ ಇಲ್ಲ. ನಿನ್ನ ನೀನು ತಿಳಿದುಕೊಂಡರೆ ನೀನೇ ದೇವರು ಎಂದು ಮೋಟ್ನಹಳ್ಳಿ ಹಸನಸಾಹೇಬ ದೇವರು ಮತ್ತು ಕುಲದ ನೆಲೆಯನ್ನು ಕಿತ್ತಿ ಒಗೆಯಲು ಪ್ರಯತ್ನಿಸಿದ್ದಾನೆ.

ನಮ್ಮ ದೇವರೆಂಬುದು ಏನೋ
ನಿಮ್ಮ ದೇವರು ಎಲ್ಲೋ ನೀವಿಲ್ಲೋ
ನಮ್ಮ ದೇವರು ನಿಮ್ಮ ದೇವರು ಎಲ್ಲಾ ಒಂದಿಲ್ಲೇನೋ
ತಮ್ಮಾ ನಿನ್ನ ತಿಳಿದರೆ ನೀನೇ ದೇವರು
ನಿನ್ನ ಬಿಟ್ಟು ದೇವರಿಲ್ಲ

-ಎಂದಿದ್ದಾನೆ. ಕಡಕೋಳು ಮಡಿವಾಳಪ್ಪ 'ಫಕೀರನಾಗಬೇಕು' ಎಂದಿದ್ದಾನೆ. ಎಲ್ಲ ತೊರೆಯುವುದು ಎಂದರೆ ವಿಮುಕ್ತನಾಗುವುದು ಎಂದಲ್ಲ. ಸೂಫಿ, ಅನುಭಾವಿ, ಸಂತರ ಮುಖ್ಯ ತತ್ವವೆಂದರೆ ಇದ್ದೂ ಇಲ್ಲದಂತಿರುವುದು. ಭವದ ಮೋಹಕ್ಕೆ ಬೀಳುವುದಕ್ಕೂ ಭವದ ಮೇಲಿನ ಪ್ರೀತಿಗೂ ವ್ಯತ್ಯಾಸವಿದೆ. ಕೆಸರಿನಲ್ಲಿರುವ ಕುಂಬಾರ ಹುಳ ತನ್ನ ಮೈಯಿಗೆ ಕೆಸರು ಅಂಟಿಸಿಕೊಂಡಿರುವುದಿಲ್ಲ. ಹಾಗೆ ತತ್ವಪದಕಾರರು ಸಂಸಾರದಲ್ಲಿದ್ದರೂ ಇರದಂತಿರುತ್ತಾರೆ. ಮೋಹವಿದ್ದಲ್ಲಿ ಮಾತ್ರ ಬಂಧನವಿರುತ್ತದೆ. ಮೋಹ ತೊರೆಯಬೇಕೆಂಬುದು ಸಂತರ ತತ್ವವಾಗಿದೆ. ತನ್ನ ತಾ ತಿಳಿಯುವುದೇ ಈ ಸಂತರ ದಾರಿ. ದೇವರ ಮರ್ಮ ಯಾರಿಗೂ ಅರ್ಥವಾಗಿಲ್ಲವೆಂದು ಚೆನ್ನೂರ ಜಲಾಲ್ ಸಾಹೇಬ,

ಸಬ್ ಕಹತೆ ಈಶ್ವರ್ ಅಲ್ಲಾ
ಇದರ ಚೀಜ್ ಯಾರಿಗೆ ತಿಳಿಯಲಿಲ್ಲ

ಎಂದಿದ್ದಾನೆ. ಹಿಂದೂ, ಮುಸಲ್ಮಾನರು ಶಾಸ್ತ್ರಗಳನ್ನು ಓದಿದರೂ ದೇವರ ಅರ್ಥ ತಿಳಿದುಕೊಂಡಿಲ್ಲ. ಯಾಕೆಂದರೆ ಒಳಗಿನ 'ಮೈಲಾ ತೊಳೆಯದೆ ಮ್ಯಾಲಿನ ಶೀಲ' ಪ್ರದರ್ಶಿಸಿದರೆ ಅದೇ ಮನುಷ್ಯನ ಅಧೋಗತಿ. ಮಡಿವಾಳಪ್ಪನು ಮಡಿ, ಮೈಲಿಗೆ, ಕುಲ ಎಂದು ಪ್ರತ್ಯೇಕತೆಯನ್ನು ಮಾಡಿಕೊಂಡ ಜಾತಿವಾದಿಗಳ ಬಗ್ಗೆ ನಿಷ್ಠುರವಾಗಿ ಪ್ರತಿಕ್ರಿಯಿಸಿದ್ದಾನೆ.

ಉಚ್ಚ ನೀಚ ಅನ್ನತೀದಿ ಹುಚ್ಚನಾಯಿ
ಉಚ್ಚಿಯೊಳು ಬಂದೀದಿ ಹುಚ್ಚು ನಾಯಿ
ಮುಟ್ಟ ತುಟ್ಟ ಅನ್ನತೀದಿ ಮುಂಡ ಮೋಡಿ

ಮುದಚಿಟ್ಟನೊಳಗೆ ಬೆಳದಿ ಮುರವಗೇಡಿ ನೀ
ಕುಲಕುಲ ಅನ್ನತೀದಿ ಕುಲಗೇಡಿ
ಕುಲದ ಖೂನ ಹೇಳು ನಿಜ ನೋಡಿ
ಕೆಳಗೆಂದು ಮೇಲೆ ತಿಂದು ಹಾರಾಡತೀದಿ
ನಾವೆಲ್ಲರೂ ಒಂದರಿ ತಿಳಗೇಡಿ ನೀ

'ನಾವೆಲ್ಲರೂ ಒಂದರಿ' ಎಂಬ ಮಾತನ್ನು ತಿಳಿದವರು ನಿರಂತರವಾಗಿ ಹೇಳುತ್ತಲೇ ಬಂದಿದ್ದಾರೆ. ಮಡಿವಾಳಪ್ಪನ ಈ ಹದಗೊಂಡ ಮಾತು ನಿಷ್ಠುರವಾಗಿಯೂ ಇದೆ. ಬುದ್ಧಿಗೇಡಿಗಳಿಗೆ ತಣ್ಣಗೆ ಹೇಳಿದಂತಲೂ ಇದೆ. ಕೆಳವರ್ಗದವರಲ್ಲಿ ಅಂದರೆ ದುಡಿದುಣ್ಣುವ ಸಾಮಾನ್ಯ ಜನರಲ್ಲಿ ಕುಲದ ಬೇರುಗಳು ಬಲಗೊಳ್ಳುವುದಿಲ್ಲ. ಮೇಲ್ವರ್ಗದವರಲ್ಲಿ, ಬೌದ್ಧಿಕರಲ್ಲಿ, ಬೌದ್ಧಿಕತೆಯನ್ನೇ ಬಂಡವಾಳ ಮಾಡಿಕೊಂಡಿರುವವರಿಂದ ಕುಲದ ನೆಲೆಗಳು ಬಲಗೊಂಡಿರುವುದನ್ನು ಕೂಡಲೂರು ಬಸವಲಿಂಗಪ್ಪ, 'ಕುಲಚಲಕ್ಕೆಲ್ಲ ಹೋರಾಡಿ ನೆಲಗತ್ತಲಾಗುವ ಛಲಮಾರಿಗಳೆಲ್ಲ ಪಂಡಿತರೇ' ಎಂದಿದ್ದಾನೆ. ತತ್ವಪದಕಾರರು ಮಾನವರಾಗಿ ಮನುಷ್ಯರ ಜೊತೆಗಿದ್ದು ಕುಲಛಲಗಳನ್ನು ಮೀರಿ ನಿಂತು ಸಮಾಜದ ಹಿತಕ್ಕಾಗಿ ಯತ್ನಿಸಿದವರು.

'ಗುರು-ಶಿಷ್ಯ' ಅತಿರೇಕ ಸಂಬಂಧಗಳು

ಈ ಶತಮಾನದ ಪ್ರಾರಂಭದಲ್ಲೂ 'ಗುರು-ಶಿಷ್ಯ' ವ್ಯವಸ್ಥೆಯ ಹೆಸರಿನಲ್ಲಿ ಅನೇಕರು ವಾಮಮಾರ್ಗದಲ್ಲಿ ತೊಡಗಿರುವುದು ಕಂಡು ಬಂದಿದೆ. ಯಾವುದೇ ವ್ಯವಸ್ಥೆಯಲ್ಲಿ ಒಳ್ಳೆಯ ಉದ್ದೇಶಗಳು ಚಲನೆಯಲ್ಲಿರುವಂತೆ, ಅದರ ದುರುಪಯೋಗದ ಕ್ರಿಯೆಗಳು ಬೆನ್ನಲ್ಲೇ ನಡೆದಿರುತ್ತವೆ. 'ಗುರುವಿನ ಮಗನಾಗುವ' ಅನೇಕರು ಗುರುವಿನ ಗುಪ್ತ ಉಪದೇಶದ ತಿರುಳನ್ನು ಅರಿಯದೆ ಮನಬಂದಂತೆ ನಡೆದಿರುವುದು. ಇದಕ್ಕೆ ಪೂರಕವಾಗುವಂತೆ 'ಗುರು ವ್ಯಕ್ತಿತ್ವ'ವಿಲ್ಲದ ಕಪಟ ಗುರುಗಳೂ ಹುಟ್ಟಿಕೊಂಡು, ಇಂಥ 'ಗುರು-ಶಿಷ್ಯ'ರು 'ಅನುಭಾವ ಪಂಥ'ದ ಹೆಸರಿನಲ್ಲಿ ಅತಿರೇಕದ ಕ್ರಿಯೆಗಳಲ್ಲಿ ತೊಡಗಿ ಸಮಾಜದ ಸಂಸ್ಕೃತಿಗೆ ಕಳಂಕ ತಂದಿರುವ ಪ್ರಸಂಗಗಳು ನಡೆದಿವೆ. ತತ್ವಪದಕಾರರು ಹೇಳಿರುವ ಗಾಂಜಾ, ಹಾದರ, ಅಲಾಯಿ, ಗೂಳಿ, ದೆವ್ವ, ಮೂಗತಿ, ಜಾತಿ ಮೀರುವ ಬಗೆ ಮುಂತಾದ ರೂಪಕಗಳನ್ನು ಸರಿಯಾಗಿ ಅರ್ಥೈಸದೆ, ಅವುಗಳನ್ನು ವಾಚ್ಯಾರ್ಥದಲ್ಲೇ ಗ್ರಹಿಸಿ, ಈ ವಾಚ್ಯಾರ್ಥವನ್ನೇ ತತ್ವಪದಕಾರರು ಹೇಳಿರುವರೆಂದು ನಂಬಿಸಿ ಮುಗ್ಧ ಜನ ಸಾಮಾನ್ಯರನ್ನು ಸಮಾಜಬಾಹಿರ ಕ್ರಿಯೆಗಳಿಗೆ ಆಧ್ಯಾತ್ಮದ ಹೆಸರಿನಲ್ಲಿ ತೊಡಗಿಸಿದರು. ಕೆಳವರ್ಗದಲ್ಲಿ ಮದ್ಯ, ಮಾಂಸ, ಗಾಂಜಾ ಸೇವನೆ ಅವರ ಸಂಸ್ಕೃತಿಯ ಭಾಗವಾಗಿದ್ದರೂ ಅದನ್ನು 'ಗುರು-ಶಿಷ್ಯ' ಸಂಪ್ರದಾಯದ ಹೆಸರಿನಲ್ಲಿ ಭೋಗಿಸತೊಡಗಿದರು. ತಮ್ಮನ್ನು ತಾವೇ 'ಆರೂಢರು' ಎಂದು ಕರೆದುಕೊಂಡರು. ಹೆಂಡತಿ, ಮಕ್ಕಳು, ಬಂಧು ಎಂಬ ಸಂಬಂಧಗಳೆಲ್ಲ ನಶ್ವರ. ಈ ದೇಹವೇ ಅಶಾಶ್ವತ. ಇನ್ನು ಹೆಣ್ಣು, ಮಣ್ಣು, ಹೊನ್ನು ಎಲ್ಲವೂ ಮಾಯೆ ಎಂದರು. ತತ್ವಪದಕಾರರ ತತ್ವಪದಗಳ ಒಳ ಅರ್ಥವನ್ನು ಅರಿಯಲು ಹೋಗದೆ, ಹೊರ ಅರ್ಥವನ್ನು ಮಾತ್ರ ಇಟ್ಟುಕೊಂಡ ಕಪಟಿಗಳು ಇವೆಲ್ಲವನ್ನೂ ಸ್ವಾರ್ಥಕ್ಕಾಗಿ ಬಳಸಿಕೊಂಡರು. ಜನಸಾಮಾನ್ಯರ ಮುಗ್ಧತೆಯನ್ನು ದುರುಪಯೋಗಿಸಿಕೊಂಡು ಭೋಗದಲ್ಲಿ ಮುಳುಗಿದರು. ಇದರಿಂದ ಅನೈತಿಕ ಸಂಬಂಧಗಳು ಹೆಚ್ಚಾಗಿ ಸಮಾಜದ ಸ್ವಾಸ್ಥ್ಯವನ್ನು ಕದಡಿದರು.

ನೀರು ಇಲ್ಲದೆ ಜಳಕ ಮಾಡಿರಬೇಕು
ಮಡಿಯನಿಲ್ಲದೆ ಬಟ್ಟೆ ಉಟ್ಟಿರಬೇಕು
ಊಟಾ ಮಾಡದೆ ಹೊಟ್ಟೆ ತುಂಬಿರಬೇಕು
ಎಚ್ಚರದೊಳು ನಿದ್ದೆ ಹತ್ತಿರಬೇಕು

ತಂಬಾಕಿಲ್ಲದೆ ಬತ್ತಿ ಸೇದಿರಬೇಕು
ಕೆರೆಯ ಕುಡಿಯದೆ ಸಿಶಾ ಆಗಿರಬೇಕು
ಝೋಲಿ ಹೋಗಿ ಮಹಾಂತನ ಮುಟ್ಟಿರಬೇಕು (ಕಡಕೊಳ ಮಡಿವಾಳಪ್ಪ)

ಇದು ಅನುಭಾವಿಗಳ ನಿಜಸ್ಥಿತಿ. ಇಂಥ ಸಾಧನೆಯಲ್ಲಿ ತೊಡಗಿಕೊಳ್ಳದೆ ಈ ಕಪಟಿಗಳು 'ಹಾದರ ಮಾಡಿದೆ ನಾ ಗುರುವಿನೊಡನೆ' (ಒಡಕಿ ತಾತಪ್ಪಯ್ಯ), 'ಗಾಂಜಾ ಸೇದನು ಬಾರೋ ಮನುಜ' (ವೆಂಕಟಾಪುರ ಖೇಮಣ್ಣ), 'ಭಾರೆ ಹೋಗೋಣ ಎದ್ದು ಇಬ್ಬರೊಂದಾಗಿ'(ಕೂಡಲೂರು ಬಸಲಿಂಗಪ್ಪ), 'ಓಡಿ ಹೋಗನು ಬಾರೆ ಸುಂದರಿ'(ಗಬ್ಬೂರು ಮಾರ್ತಾಂಡಪ್ಪ), 'ಕಿವಿಯೊಳು ಗಿಡಹಿಂಡಿ ಮದವಿ ಗಂಡನ ಬಿಡಿಸಿ'(ರಾಮಪುರ ಬಕ್ಕಪ್ಪಯ್ಯ) ಎಂಬುದನ್ನು ತತ್ವಪದಕಾರರೇ ಹೇಳಿರುವರೆಂದು ವಾಚ್ಯಾರ್ಥದ ನೆಲೆಯಲ್ಲಿ ನಂಬಿಸಿದರು.

ಚಿತ್ತ ಚಾರಿ ಬಾರೆಯೆಂದು ಇತ್ತಕರದ ಕೇಳವ್ವ
ನನಗೆ ನಿನಗೆ ಭೇದವೆಷ್ಟೂ ಇಲ್ಲವೆಂದ ಕೇಳವ್ವ (ನೀರಲಕೇರಿ ಬಸವಲಿಂಗ ಶರಣ)

ಇಂಥ 'ಸತಿ-ಪತಿ' ಭಾವದ ತತ್ವಪದಗಳನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅನೇಕ ಕಡೆ ಈ ಗುರುಶಿಷ್ಯರ ಅನೈತಿಕತೆ, ಸಮಾಜ ಬಾಹಿರವಾದ ಕ್ರಿಯೆಗಳು ಮುಕ್ತವಾಗಿ ನಡೆದವು. ಅದರಲ್ಲೂ ರಾಯಚೂರು ಜಿಲ್ಲೆಯಲ್ಲಿ ಈ ಶತಮಾನದ ಪ್ರಾರಂಭದಲ್ಲಿ ಇಂಥವರ ಹಾವಳಿ ಹೆಚ್ಚಾಗಿತ್ತು. ಅನೇಕ ತತ್ವಪದಕಾರರು ಇಂಥವರನ್ನು ಕಂಡು ಕಟುವಾಗಿ ನಿಂದಿಸಿದ್ದಾರೆ. ಘನಮಠದ ಶಿವಯೋಗಿಯಂಥ ಸಾತ್ವಿಕ ತತ್ವಪದಕಾರನು ಇಂಥವರನ್ನುದ್ದೇಶಿಸಿ ಸಿಟ್ಟು ತಡೆಯದೆ, 'ಎಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೋ ಈ ಸೂಳೆ ಮಕ್ಕಳಿ ಗೆಲ್ಲ ಭಕ್ತಿಯದೆಲ್ಲ ಮುಕ್ತಿಯದೊ' ಎಂದು ಆಕ್ರೋಶಗೊಂಡಿದ್ದಾನೆ.

ಅಮ್ಮಾ ಎಂದು ಗುಮ್ಮಾಡುವರು
ಅಕ್ಕಾ ಎಂದು ಹೊಕ್ಕಾಡುವರು
ತಂಗಿಯೆಂದು ದೆಂಗ್ಯಾಡುವರಮ್ಮ ಏನು ಹೇಳಲಮ್ಮ
ಇಂಥಾ ಅಧಮರು ಇವರಮ್ಮ ಇಚ್ಛಾ ಕೆಟ್ಟದಮ್ಮ
ತಂದಿ ಮಗನಿಗೆ ಒಬ್ಯಾಕಿ ಹೆಣತಿ
ತಾಯಿ ಮಗಳಿಗೆ ಒಬ್ಯಾನೆ ಪತಿ

ಹೆಣತಿ ಮಗಳ ಸಂಗತಿ ಹೊಲೆಯಾರು ಮಾಡುವರಮ್ಮ(ನಿಡವಂಚಿ ಭದ್ರೇಶ್ವರ) ಈ ಪದ ಇಂಥ ಅನೈತಿಕರನ್ನು ಕಂಡೇ ಹೇಳಿರುವುದು. ದೇವದುರ್ಗದ ಆದಿ ಅಮಾತ್ಯಪ್ಪನು, 'ಎಲ್ಲಿ ಭಕ್ತಿ ಮುಕ್ತ್ಯಾಣ ಈ ಮೂಢ ಜನರಿಗೆ ಎಲ್ಲಿ ಭಕ್ತಿ ಎಲ್ಲಿ ಮುಕ್ತ್ಯಾಣ' — ಎಂದು ಪ್ರಾರಂಭವಾಗುವ ಒಂದು ತತ್ವಪದದಲ್ಲಿ ಇಂಥ ವಾಮಮಾರ್ಗದ ಜನರ ನೀತಿಯನ್ನು ಕಟುವಾಗಿ ನಿಂದಿಸಿದ್ದಾನೆ. ಹೆಣ್ಣು ಗಂಡು ಮುಕ್ತವಾಗಿ ಬೆರೆಯುವುದು ನಮ್ಮ ಸಂಪ್ರದಾಯವೆಂದು, ಭಂಗಿ, ಹೆಂಡ, ಮಾಂಸವನ್ನು ಕಂಡಕಂಡಲ್ಲಿ ಬೇಡಿ ತಿಂದು ಇದೇ 'ಆರೂಢಾಚಾರ' ಎಂದು 'ದಾರಿಗೆಟ್ಟು' ನಿಂತವರನ್ನು ಖಂಡಿಸಿದ್ದಾನೆ. ಮುಗ್ಧ ಕೆಳವರ್ಗದ ಜನರು ಇವರ ಜತೆ ಸೇರಿ ಇಂಥ ನೀತಿಯಿಂದ ಅಧೋಗತಿಗೆ ಹೋದುದನ್ನು ಕುರಿತು ಶಾಂತರಸ ಅವರು ಹೀಗೆ ವ್ಯಕ್ತಪಡಿಸಿದ್ದಾರೆ: "ನಾಡಿನಲ್ಲಿ ಈ ಕವಿಗಳು(ತತ್ವಪದಕಾರರು) ಧರ್ಮ, ದೇವರು,ಆಧ್ಯಾತ್ಮ ಸಮಾಜ -ಎಲ್ಲ ಬಗೆಯ ಒಂದು ವೈಚಾರಿಕ ಕ್ರಾಂತಿ ನಡೆಸಿರುವಾಗ ಸಮಾಜದಲ್ಲಿ ಒಂದು ವಾಮಪಂಥವೂ ಹುಟ್ಟಿ ಬೆಳೆದಿತ್ತು. ಅನುಭಾವ ಆಧ್ಯಾತ್ಮಗಳ ಹೆಸರಿನಲ್ಲಿ ಮಾಂಸ ತಿಂದು ಮದ್ಯ ಸೇವಿಸಿ ಹಾದರವನ್ನು ಮೇಲುಗಟ್ಟುವ ದುರುಳ ವೇದಾಂತಿಗಳು ಅಲ್ಲಲ್ಲಿ ಜನರನ್ನು ಕೆಟ್ಟ ಮಾರ್ಗಕ್ಕೆ ಎಳೆಯುತ್ತಿದ್ದರು. ಕಾಯಕ ದಾಸೋಹ

ಪುಣ್ಯ ಪಾಪ ಇವರಿಂದ ಬಹುದೂರ. ಹೆಣ್ಣು ಗುರುವಿಗೆ ತನುವರ್ಪಿಸಬೇಕೆಂದು ಬೋಧಿಸಿ ಅನೇಕ ಸದ್ಗೃಹಿಣಿಯರನ್ನು ಇವರು ಹಾಳು ಮಾಡಿದರು. 'ಎಲ್ಲವೂ ಮಾಯೆ, ನಶ್ವರ, ಈ ದೇಹದ, ಹೆಂಡಿರ, ಬಂಧು-ಬಳಗದ ಮೋಹ ಬಿಡಬೇಕು ಸಂಸಾರಕ್ಕೆ ಅಂಟಿಕೊಂಡಿರಬಾರದು, ಸಾಧುವಾಗಬೇಕು ಸನ್ಯಾಸಿಯಾಗಬೇಕು' ಎಂದು ಬೋಧಿಸಿ ಈ ದುರುಳರು ಜನರನ್ನು ಜೀವನದಿಂದ ವಿಮುಖರನ್ನಾಗಿ ಮಾಡಿದ್ದಲ್ಲದೆ ಅವರ ವಿಚಾರ ಶಕ್ತಿಯನ್ನೆ ಕಳೆದುಬಿಡುತ್ತಿದ್ದರು. ದೊಡ್ಡ ದೊಡ್ಡ 'ಕಾಂಡ(ಸಮಾರಾಧನೆ)ಗಳನ್ನು ಮಾಡಿ, ಅನೇಕ ಹೊಸ ಹೆಣ್ಣು ಗಂಡುಗಳಿಗೆ ದೀಕ್ಷೆ ಕೊಟ್ಟು, ಮದ್ಯ ಮಾಂಸ ಸೇವಿಸಿ 'ಕುಂಭಕಂಚುಕನ್ಯಾಯ'ದಂತೆ ಸಾಮೂಹಿಕವಾಗಿ ಹೆಂಗಸರ ಶೀಲಭಂಗ ಮಾಡುತ್ತಿದ್ದರು. ಇವರ ಈ ದುಷ್ಟ ವ್ಯವಹಾರಗಳನ್ನು ಅನುಭಾವಿ ಕವಿಗಳು ಬಲವಾಗಿ ಖಂಡಿಸಿದ್ದಾರೆ. ತಮ್ಮ ಹಾಡುಗಳಿಂದ ಬೋಧೆಗಳಿಂದ ದುರ್ಮಾರ್ಗದಿಂದ ಜನರನ್ನು ಉಳಿಸಿದ್ದಾರೆ......ಈ ಶತಮಾನದ ಪ್ರಾರಂಭಕ್ಕೆ 'ಅದ್ವೈತ ಆರೂಢ' ಎಂಬ ಕಲ್ಪನೆಗಳು ಬಲವಾಗಿ ಜನರು ಇದನ್ನು ಬೋಧೆ ಮಾಡುವವರಿಗೆ ಮರುಳಾಗಿ ಧರ್ಮವನ್ನೂ ಮರೆತರು. ಸಂಸಾರ ಹಾಳು ಮಾಡಿಕೊಂಡರು. ಸಾಮಾಜಿಕ ರೀತಿ-ನೀತಿಗಳನ್ನು ಮೀರಿ ನಡೆದು ಅನಾರೋಗ್ಯ ವಾತಾವರಣ ಸೃಷ್ಟಿಸಿದರು. ಇದರ ಉಪಟಳ ಎಷ್ಟಾಯಿತೆಂದರೆ ಊರೂರಿಗೆ ಮನೆಮನೆಗೆ 'ಗಾಂಜಿಬುಕ್ಕು'ರಾದರು. 'ವೇದಾಂತದ ವಿಚಾರಕ್ಕೆ ಹಾಕೋಣ' ಎಂದು ಕಂಡ ಕಂಡಲ್ಲಿ ಕುಳಿತು ಎದ್ವಾತದ್ವಾ ಚರ್ಚೆಯಲ್ಲಿ ಮೈಮರೆತು ಜೀವನ ಹಾಳುಮಾಡಿಕೊಂಡರು".[೮]

ಗುರು ಮುಟ್ಟಿ ಗುರುವಾಗದೆ ಅಡ್ಡ ದಾರಿ ಹಿಡಿದ ಪ್ರಸಂಗಗಳು ಮೊದಲಿನಿಂದಲೂ ನಡೆದಿವೆ. 'ಗುರುವು ಹೇಳಿದ ಮಾತು ಗುರುತಿಲ್ಲದೆ ಗುರುಪುತ್ರನಾದರೇನೋ'(ಮೋಟ್ನಹಳ್ಳಿ ಹಸನಸಾಹೇಬ) 'ಏಕತಾರಿ ಕಾಯಿ ಹಿಡಿಬಾರದಣ್ಣ ಹಿಡಿದರ ಹಿಡಿರೆಣ್ಣ ಗುರುಮುಟ್ಟಿ ಗುರುವಾಗಿ ಹಿಡಿರೆಣ್ಣ(ಸಿರಗಾಪುರ ಬಂಡೆಪ್ಪ) ಎಂಬ ಮಾತುಗಳು ಇದಕ್ಕೆ ಸಾಕ್ಷಿಯಾಗಿವೆ.

ಅನುಭಾವ

ತತ್ವಪದಕಾರರು ಮೂಲತಃ ಅನುಭಾವಿಗಳೂ, ಯೋಗಿಗಳೂ ಆಗಿದ್ದಾರೆ. ಲೋಕದ ಹಿತವನ್ನು ಹಂಬಲಿಸುವದರಿಂದ ಅಭಿವ್ಯಕ್ತಿಯ ಹಂಗನ್ನು ಅವಲಂಬಿಸಿದ್ದಾರೆ. ಸಮಾಜದ ಮಧ್ಯೆ ಬೆಳೆದ ತತ್ವಪದಕಾರರು ಲೌಕಿಕ ನೆಲೆಯಲ್ಲಿ ಇದ್ದೂ ಇಲ್ಲದಂತಿದ್ದವರು. ಅವರ ತತ್ವಪದಗಳನ್ನು ಗಮನಿಸಿದರೆ ಅವುಗಳ ಸರಳರೂಪ, ಪರಿಚಿತ ನುಡಿಗಟ್ಟುಗಳು, ಚಿತ್ರಗಳೆಲ್ಲ ಲೌಕಿಕವಾಗಿ ಕಾಣುತ್ತವೆ. ಅರ್ಥೈಸುತ್ತ ಹೋದರೆ ಅವುಗಳ ಒಳಾರ್ಥವು ಉನ್ನತವಾದ ಆತ್ಮೋನ್ನತಿಯನ್ನು ತಿಳಿಸುವಂಥ ಶಕ್ತಿಯನ್ನು ತುಂಬಿಕೊಂಡಿರುತ್ತವೆ. ಇಷ್ಟಾದರೂ ತತ್ವಪದಕಾರರಿಗೆ ಸಮಾಧಾನವಿದ್ದಂತೆ ಕಾಣುವುದಿಲ್ಲ. ಲೌಕಿಕದ ಅನುಭವವನ್ನು ಪಾರಮಾರ್ಥದ ನೆಲೆಗೆ ಒಯ್ದು ನಿಲ್ಲಿಸುವ ಶಕ್ತಿ ಪಡೆದಿದ್ದರೂ, ಲೌಕಿಕವನ್ನು ಮೀರಿದ ತಮ್ಮ ಅನುಭಾವದ ಅನುಭವವನ್ನು ಹೇಳುವ ತವಕದಲ್ಲಿದ್ದಂತೆ ಕಾಣುತ್ತದೆ. ಅನುಭಾವ ಹೇಳಲು ಬರುವುದಿಲ್ಲ. ಅದು ಶಿಶು ಕಂಡ ಕನಸು, ಮೂಕ ಮೆದ್ದ ಬೆಲ್ಲ ಎಂದು ವಚನಕಾರರೂ ಹೇಳಿದ್ದಾರೆ. ಆದರೂ ಅದನ್ನು ಅಭಿವ್ಯಕ್ತಪಡಿಸಲು ಪ್ರಯತ್ನಿಸಿದರು. ಲೌಕಿಕದಲ್ಲಿ ನೋಡಲು ಯಾವುದು ಸಾಧ್ಯವಿಲ್ಲವೋ, ಲೌಕಿಕದಲ್ಲಿ ಯಾವುದು ಘಟಿಸಲು ಅಸಾಧ್ಯವೋ ಅಂಥದ್ದು ಅನುಭಾವಿಗಳ ಲೋಕದಲ್ಲಿ ಸಾಧ್ಯವಾಗುತ್ತದೆ ಎಂಬಂತೆ ತತ್ವಪದಕಾರರು ತಮ್ಮ ಅನುಭಾವದ ಸ್ಥಿತಿಯನ್ನು ಹೇಳಲು ಯತ್ನಿಸಿದ್ದಾರೆ. ಇದನ್ನು ಗೂಢಾರ್ಥವೆಂತಲೂ ಬೆಡಗು ಎಂತಲೂ ಕರೆಯಲಾಗುತ್ತದೆ.

ನೀರು ಇಲ್ಲದೆ ಜಳಕ ಮಾಡಿರಬೇಕು
ಮಡಿಯನಿಲ್ಲದೆ ಬಟ್ಟೆ ಉಟ್ಟಿರಬೇಕು
ಊಟಾ ಮಾಡದೆ ಹೊಟ್ಟೆ ತುಂಬಿರಬೇಕು
ಎಚ್ಚರದೊಳು ನಿದ್ರಿ ಹತ್ತಿರಬೇಕು

ತಂಬಾಕಿಲ್ಲದೆ ಬತ್ತಿ ಸೇದಿರಬೇಕು
ಸೆರೆಯ ಕುಡಿಯದೆ ನಿಶಾ ಆಗಿರಬೇಕು

ಝೋಲಿ ಹೋಗಿ ಮಹಾಂತನ ಮುಟ್ಟಿರಬೇಕು' ಎಂದು ಕಡಕೋಳ ಮಡಿವಾಳಪ್ಪ ಹೇಳಿದ್ದಾನೆ. ಅನುಭಾವಿಗಳಿಗೆ ಇದೇ ವಾಸ್ತವ ಲೋಕವೆಂಬಂತಿದೆ. ಭಾವದ ಹಂಗು ತೊರೆಯಬೇಕೆಂಬ ನಿಲುವು ಇದರಲ್ಲಿದೆ. ಲೋಕದ ಸುಖ ಕ್ಷಣಿಕವಾದದ್ದು ಮತ್ತು ಅತೃಪ್ತಿಯಿಂದ ಕೂಡಿರುವಂಥದ್ದು. ನಿಜಸುಖ, ಮುಪ್ಪಾಗದ ಸುಖ ಲೌಕಿಕರಿಗೆ ಸಿಗುವುದಿಲ್ಲ. ಅನುಭಾವದ ನೆಲೆಯಲ್ಲಿ ನಡೆದವರಿಗೆ ಇದು ಸಾಧ್ಯವೆಂದು ತತ್ವಪದಕಾರರು ಹೇಳುತ್ತಾರೆ.

ನೀರು ಇಲ್ಲದ ಭಾವಿಯೊಳಗೆ ಬೇರುಯಿಲ್ಲದ ಮರದ ಮ್ಯಾಲೆ
ಮೋರೆಯಿಲ್ಲದ ಪಕ್ಷಿಯೊಂದು ಹಾರಿ ಭರರರ ನೀರು ಕುಡಿವುದೊ
ಚುಕ್ಕಿವರ್ನದ ಎರಡು ತತ್ತಿಯು ಚೊಕ್ಕಟದಿ ನಿಕ್ಕಿಹ್ಯದೋ
ಲೆಕ್ಕವಿಲ್ಲದ ಚಿಕ್ಕ ಮರಿಗಳು ಕಿಕ್ಕಿರಿಸಿ ಸೊಕ್ಕಿ ತತ್ಕೊಳ್ಳಿಹುವೋ (ವೆಂಕಟಾಪುರ ಭೀಮಣ್ಣ)

ಬೊಡ್ಡಿಯಿಲ್ಲದ ಮರವು ಹೂವುಯಿಲ್ಲದ ಕಾಯಿ
ತುಂಬಿಲ್ಲದ ಹಣ್ಣು ನೋಡಿರಣ್ಣಾ
ಬಣ್ಣವಿಲ್ಲದ ಹಣ್ಣು ನೋಡಿರಣ್ಣಾ
ಬಣ್ಣವಿಲ್ಲದ ಗಿಣಿಯ ಕಣ್ಣಿಲ್ಲದೆ ಕಂಡಿತು
ಪಕ್ಕನಿಲ್ಲದೆ ಹಾರಿತಣ್ಣಾ
ಹಲ್ಲಿಲ್ಲದೆ ಹಣ್ಣು ಕಚ್ಚಿ ನೋಡಿತು ಗಿಣಿಯ
ನಾಲಿಗಿಲ್ಲದೆ ರುಚಿಯ ಕಂಡಿತಣ್ಣಾ (ನಿಡವಂಚಿ ಭದ್ರೇಶ್ವರ)

ಯೋಗಿಗಳಿಗೆ ಇದು ಸಹಜವೆನಿಬಹುದು. ಲೌಕಿಕರಿಗೆ ಇದು ಅದ್ಭುತವಾಗಿ, ಪವಾಡ ಸದೃಶವಾಗಿ ಕಾಣುತ್ತದೆ. ಮೂಲತಃ ಯೋಗಿಗಳೂ ಆದ ತತ್ವಪದಕಾರರು ತಮ್ಮ ಅನುಭಾವವನ್ನು ಹೀಗೆ ಬೆಡಗಿನ ಮಾದರಿಯಲ್ಲಿ ಹೇಳುವುದು ಅವರಿಗೆ ಸಹಜ. 'ಫ್ಯಾಂಟಸಿ' ಎಂಬುದು ಕೇವಲ ಆಧುನಿಕ ಸಾಹಿತ್ಯದಲ್ಲಿಮಾತ್ರವಲ್ಲ, ಜನಪದ ಕಥೆಗಳಲ್ಲಿ ಬೇಕಾದಷ್ಟು ಪ್ರಯೋಗವಾಗಿದೆ. ವಚನಕಾರರಲ್ಲಿ ಬೆಡಗಿನ ರೂಪದಲ್ಲಿ ಇದು ಕಾಣಿಸಿಕೊಂಡಿದೆ. ಅನುಭಾವಿಗಳ, ಯೋಗಿಗಳ ಅನುಭಾವದ ಅನುಭವವನ್ನು ಅಭಿವ್ಯಕ್ತಿಯ ಹಂಗು ಉಳಿಸಿಕೊಂಡಿರುವುದರಿಂದ ಅದನ್ನು ಬೆಡಗಿನ ಸ್ವರೂಪದಲ್ಲಿ ಮಾತ್ರ ಹೇಳಲು ಸಾಧ್ಯವಾಗಿದೆ. ಅವಾಸ್ತವ ನೆಲೆಯಲ್ಲಿ ಹೇಳಿದರೂ ಅದನ್ನು ವಾಸ್ತವದ ನೆಲೆಯಿಂದಲೇ ಅರ್ಥೈಸುವ ಸಾಧ್ಯತೆಯಿದೆ. ಬೆಡಗನ್ನು ಅರ್ಥೈಸುವುದರ ಮೂಲಕ ಪುನಃ ವಾಸ್ತವಕ್ಕೆ ತಂದು ಜೋಡಿಸುವುದು ನಡದೇ ನಡೆಯುತ್ತದೆ.

ಹಾಗೆ ನೋಡಿದರೆ ಈ ಅನುಭಾವ ಈ ಅನುಭಾವದ ಅಭಿವ್ಯಕ್ತಿಯು ಬೆಡಗಿನ ಸ್ವರೂಪದಲ್ಲಿರಲು ಕಾರಣಗಳೇನು? ಲೌಕಿಕದ ಆಸೆ-ಆಮಿಷಗಳು, ಸಂಸಾರದ ಮೋಹ, ವ್ಯಸ ಮನುಷ್ಯನನ್ನು ಬಂಧನದಲ್ಲಿಟ್ಟಿವೆ. ಇವುಗಳಿಂದ ಬಿಡುಗಡೆ ಮಾಡಲು ಲೋಕದ ವ್ಯಾಮೋಹಕ್ಕೆ ಕಾರಣವಾದ ಹೆಣ್ಣಿನ ಸುಖ, ಅನ್ನದ ಸುಖ, ಮಣ್ಣಿನ ಸುಖವನ್ನು ಇವು ಇಲ್ಲದೆಲೇ ಪಡೆಯಬಹುದು. ಲೌಕಿಕದ ಈ ಸುಖವು ಕ್ಷಣಿಕವಾದದ್ದು ಮತ್ತು ತೃಪ್ತಿಯಿಲ್ಲದ್ದು. ಇದು ಬರೀ ನಿಜಸುಖವಲ್ಲ ಬೆಡಗಿನ ನಿಜಸುಖವನ್ನು ಯಾವುದರ ಹಂಗಿಲ್ಲದೆ ಪಡೆಯಬಹುದೆಂದು ಈ ತತ್ವಪದಕಾರರು, ಮನುಷ್ಯನನ್ನು ಲೌಕಿಕದಿಂದ ಬಿಡುಗಡೆ ಮಾಡಿ ಅಲೌಕಿಕದ ಕಡೆ ನಡೆಸಲು ಮಾಡಿದ ಪ್ರಯತ್ನದಂತೆ ಇದು ತೋರುತ್ತದೆ. ಈ ನಿಲುವು ಉಳ್ಳವರ ಸುಖವನ್ನು ನಿರಾಕರಿಸುವಂಥದ್ದು ಮತ್ತು ಇಲ್ಲದವರು ಸುಖಕ್ಕಾಗಿ ಪಾಡು ಪಡುವುದನ್ನು ತಪ್ಪಿಸುವುದೂ ಆಗಿದೆ. ಅನುಭಾವಿಗಳ ದೃಷ್ಟಿಯು ಜನಕಲ್ಯಾಣದ ಧ್ಯೇಯವೇ ಇಂಥದು ಎನಿಸುತ್ತದೆ.

ಸಾಮಾಜಿಕ, ರಾಜಕೀಯ, ಧಾರ್ಮಿಕ ವಿದ್ಯಮಾನಗಳಿಗೆ ಮುಖಾಮುಖಿ

ತತ್ವಪದಕಾರರು ಸಮಾಜದ ಅನೇಕ ವಿದ್ಯಮಾನಗಳನ್ನು ಕಂಡು ವಿಡಂಬಿಸುತ್ತಲೇ ಲೋಕ ಹಿತ ಬಯಸುವುದು ಅವರ ವ್ಯಕ್ತಿತ್ವದ ಭಾಗವಾಗಿದೆ. ಈ ವಿಡಂಬನೆ ಮೂಲಕ ತಮ್ಮ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ ವ್ಯವಸ್ಥೆಗಳ ಜೊತೆ ಅವರು ವಿಚಿತ್ರ ರೀತಿಯಲ್ಲಿ ಮುಖಾಮುಖಿಯಾಗಿದ್ದಾರೆ. ಆಳುವ ವ್ಯವಸ್ಥೆಯೇ ಇರಲಿ, ಪ್ರಬಲವಾದ ಧಾರ್ಮಿಕ ಶಕ್ತಿಗಳೇ ಇರಲಿ, ಬಲಿಷ್ಠವಾದ ಸಾಮಾಜಿಕ ಶಕ್ತಿಯೇ ಇರಲಿ, ಸರಿಕಾಣದ್ದನ್ನು ನಿಷ್ಠೂರವಾಗಿ ಖಂಡಿಸುವುದು ಅವರ ಜಾಯಮಾನವಾಗಿದೆ. ಅವರಿಗಿರುವ ಅನುಭಾವದ ಶಕ್ತಿಯೇ ಅವರನ್ನು ಈ ನಿಲುವುಗಳಿಗೆ ಬದ್ಧವಾಗಿಸಿದೆ. ಕಡಕೋಳ ಮಡಿವಾಳಪ್ಪ ತನ್ನ ಕಾಲದ ಅನಿಷ್ಟ ವ್ಯವಸ್ಥೆಗಳು ಅವು ಯಾವುದೇ ಇರಲಿ ಕಟುವಾಗಿ ಟೀಕೆಗೆ ಗುರಿಮಾಡದೆ ಬಿಡುತ್ತಿರಲಿಲ್ಲ. ಜನತೆಯ ಕವಿಯಾದ ಮಡಿವಾಳಪ್ಪ ಸಮಾಜದ ನ್ಯಾಯಕ್ಕಾಗಿ ಪ್ರತಿಭಟಿಸುವಾಗ ಭಾಷಿಕ ನೆಲೆಯೂ ಶಿಷ್ಟತೆಯನ್ನು ಉಳಿಸಿಕೊಳ್ಳುತ್ತಿರಲಿಲ್ಲ. ನೆಲಮೂಲ ಭಾಷೆಯಿಂದಲೇ ಟೀಕಿಸುತ್ತಿದ್ದ. 'ಮರ್ತ್ಯಾಕೆಡಿಸ್ಯಾರೋ' ಎಂಬ ತತ್ವಪದದಲ್ಲಿ,

ಮಾನಗೇಡಿ ಮಂದಿ ಹುಟ್ಟಿ ಮರ್ತ್ಯಾ ಕೆಡಿಸ್ಯಾರೊ
ಉಡಾಳಮಂದಿ ಊರೊಳಗೆ ಹಿಡಿಯಲ್ಹೋದರೋ
ಪತ್ಯ ಮಾಡ ಉತ್ತಮರೆಲ್ಲ ಎತ್ತ ಹೋದರೊ

ಎಪ್ಪಾ, ಗಪ್ಪಾ ಹೊಡಿಯಾ ಅಪ್ಪದೇರು ಹೆಚ್ಚಾಗಾದರೊ' ಮಡಿವಾಳಪ್ಪ ಕರೆದಿರುವ 'ಮಾನಗೇಡಿ ಮಂದಿ' ಸ್ವಾರ್ಥಿಗಳು, ದುಷ್ಟರು, ಸಮಯಸಾಧಕರು ಆಗಿರುವ ಇವರು ಜನಕ್ಕಂಜದೆ, ಮನಕ್ಕಂಜದೆ ಸಮಾಜದ ಎಲ್ಲ ವಲಯದಲ್ಲಿ ಮುಂಚೂಣಿಯಲ್ಲಿದ್ದಾರೆ ಮತ್ತು ಅಧಿಕಾರ ಸ್ಥಾನದಲ್ಲಿದ್ದಾರೆ. 'ಊರೊಳಗ ಹಿಡಿಯಲ್ಹೋದರೋ' ಇಂಥ ಮಂದಿ ಊರು ತುಂಬ ಹೆಚ್ಚಾಗಿದ್ದಾರೆ. 'ಪತ್ಯಾಮಾಡೋ ಉತ್ತಮರೆಲ್ಲ' ಎಂದರೆ 'ಪತ್ಯಾ' ಎಂದರೆ ಕೆಟ್ಟದ್ದನ್ನು ನಿರಾಕರಿಸುವ ನ್ಯಾಯವಂತರು ಎಲ್ಲಿ ಹೋದರು ಎಂದು ಮಡಿವಾಳಪ್ಪ ಚಿಂತೆಗೀಡಾಗಿದ್ದಾನೆ. ಮಾನಗೇಡಿ ಮಂದಿಯಾದ 'ಪುಡಾರಿ'ಗಳು 'ಪುಂಡ'ರು ಊರನ್ನು ಲೂಟಿ ಮಾಡುತ್ತಿದ್ದಾರೆ. ಮೇಲಾಗಿ 'ಬಡವನ ಮ್ಯಾಲೆ ಖಟ್ಲಾ ಹೊರಿಸಿ ಕೋರ್ಟಗೆಳಿಸ್ಯಾರೊ' ಎಂದಿರುವುದನ್ನು ಗಮನಿಸಬೇಕು. ಅಸಹಾಯಕ ಬಡವರನ್ನು ಶೋಷಣೆಗೆ ಗುರಿಮಾಡಿದ್ದೂ ಅಲ್ಲದೆ ಅವರ ಮೇಲೆಯೇ ಅಪವಾದ ಹೊರಿಸಿ ತಪ್ಪಿತಸ್ಥರನ್ನಾಗಿ ಮಾಡಿದ್ದಾರೆ. ಈ ಮಾನಗೇಡಿ ಜನರು,

ಈಗಿನ ಸಾಹುಕಾರರೆಲ್ಲ ಹ್ಯಾಂಗಾದರೊ
ಬಡವನ ಹೇಣ್ತಿ ಚೆಲುವಿ ಇದ್ರ ಬಡ್ಡಿ ಕೊಡುವರೋ
ಲೆಕ್ಕಪಕ್ಕ ಇಲ್ಲದ ಇವರು ಖಾತ್ಯಾ ನಡಿಸ್ಯಾರೋ

-ಇದು ಈ ಪ್ರದೇಶದ ವಾಸ್ತವ ಸಂಗತಿಯಾಗಿದೆ. ಮೇಲಿನ ಮೂರು ಸಾಲಿನಲ್ಲಿ ಹೈದರಾಬಾದ್ ಕರ್ನಾಟಕದ ಸಾಮಾಜಿಕ ಇತಿಹಾಸವಿದೆ. ಉಳ್ಳವರ ಕ್ರೌರ್ಯ, ಬಡವರ ದಾರುಣತೆಯ ಚಿತ್ರವಿದೆ. ರಾಜಕೀಯವಾಗಿ ಮುಸ್ಲಿಮರು ಆಳುತ್ತಿದ್ದರೂ, ಸಾಮಾಜಿಕವಾಗಿ ಸ್ಥಳೀಯ ಶ್ರೀಮಂತರು, ಭೂಮಾಲಿಕರು ಆಳ್ವಿಕೆ ನಡೆಸುತ್ತಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಈ ಪ್ರದೇಶದಲ್ಲಿ ಅನ್ಯರ ಆಕ್ರಮಣವಾಗಿದ್ದರೂ ಸಾಮಾಜಿಕವಾಗಿ ಇಲ್ಲಿಯ ಜನಸಮುದಾಯಗಳ ಮೇಲೆ ಆಕ್ರಮಣವಾಗುತ್ತಿದ್ದುದು ಸ್ಥಳೀಕರೆ ಆಗಿರುವ ಭೂಮಾಲಿಕರಿಂದ ಎಂಬುದು ಸಾಮಾಜಿಕ ವಾಸ್ತವ ಸಂಗತಿ. ಮಡಿವಾಳಪ್ಪನ ಈ ತತ್ವಪದ ಸಾಮಾಜಿಕ ಇತಿಹಾಸಕ್ಕೆ ಹಿಡಿದ ಕನ್ನಡಿಯಾಗಿದೆ.

'ಏನಾಗತಾದ' ಎನ್ನುವ ಇನ್ನೊಂದು ತತ್ವಪದದಲ್ಲಿ ಮಡಿವಾಳಪ್ಪ ಈ ದೇಶದ ಬೆತ್ತಲೆ ಚಿತ್ರಣವನ್ನು ಹಾಡಿದ್ದಾನೆ. ಈ ಪದದ ಹೆಸರೆ ದಿಗಿಲುಟ್ಟಿಸುವಂತಿದೆ. 'ಏನಾಗತದ ಎಂತಾಗತದೊ ಈ ನಾಡ ನೀನೋಡ ತಮ್ಮಾ' ಎಂದಿದ್ದಾನೆ. ಅನುಭಾವಿಯಾದ ಈ ತತ್ವಪದಕಾರ ಕಾಲಜ್ಞಾನದಂತೆ ಮಾಡನಾಡುವುದು ಸಹಜವಾಗಿದೆ. ಹಾಗೆ ನೋಡಿದರೆ 'ಕಾಲಜ್ಞಾನ' ವಾಸ್ತವತೆಗೆ ಹತ್ತಿರವಾದದ್ದೆ. ಮೇಲು ನೋಟಕ್ಕೆ ಭವಿಷ್ಯದಲ್ಲಿ ಆಗುವಂಥ ಸ್ಥಿತಿಯನ್ನು ಹೇಳುವಂತೆ ಕಂಡರೂ, ಅದರ ಗರ್ಭದಲ್ಲೇ ವಾಸ್ತವ ಸ್ಥಿತಿಯನ್ನು 'ಕಾಲಜ್ಞಾನ' ಇರಿಸಿಕೊಂಡಿರುತ್ತದೆ.

> ದುಡಿದುಣ್ಣುವ ರೈತರಿಗೆ ಏನಿಲ್ಲ ರೊಕ್ಕ
> ದುಡಿಯದ ಭಂಟರಿಗೆ ಭಾರಿ ಬಿಂಕ
> ದುಡಿಸಿಕೊಳ್ಳುವ ಜನಕೆ ಭಾರಿ ಸೊಕ್ಕು

ಅಂಥವರೆ ಆಳಾಕ ಬರತಾರ ದೇಶಕ' ಇದು ಕಾಲಜ್ಞಾನದ ಮಾತಿನಂತೆ ಕಾಣುತ್ತದೆ. ಆದರೆ ವಾಸ್ತವವೂ ಹೌದು. ಈ ದೇಶದ ರೈತರ ಸ್ಥಿತಿ ಏನಾಗಿದೆ ಎಂದು ಇನ್ನೂರು ವರ್ಷದ ಹಿಂದಿನ ಮಡಿವಾಳಪ್ಪ ನುಡಿದಿದ್ದಾನೆ. ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುವ ಈ ಹೊತ್ತಿನಲ್ಲಿಯೂ ರೈತರಿಗೆ ಸಿಗಬೇಕಾದ ಸ್ಥಾನ ಸಿಕ್ಕಿಲ್ಲ. ದೇಶದ ಬೆನ್ನೆಲುಬು ಎಂದು ಹೊಗಳುತ್ತಾರೆ. ಅನ್ನ ಕೊಡುವ ದೇವರು ಎನ್ನುತ್ತಾರೆ. ಆದರೆ ಅವನ ಗತಿ ಅಧೋಗತಿಯಾಗಿದೆ ಎಂಬುದು ಮಾತ್ರ ವಾಸ್ತವ.ಮೊದಲೇ ಈ ದೇಶ ದಲ್ಲಾಳಿಗಳ ದೇಶ. ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದು. ಬೆಳೆದ ಬೆಳೆಯನ್ನು ರಕ್ಷಿಸಿಡಲು, ಕಾಯ್ದಿಡಲು ಸರಿಯಾದ ವ್ಯವಸ್ಥೆಗಳಿಲ್ಲ. ರಕ್ಷಿಸಿಡಲು ರೈತರಿಗೆ ಅವಕಾಶವಿಲ್ಲದಿದ್ದ ಮೇಲೆ ದಲ್ಲಾಳಿಗಳೆಂಬ ಮಧ್ಯವರ್ತಿಗಳಿಗೆ ಅವರು ಕೇಳಿದ ಬೆಲೆಯಲ್ಲಿ ಮಾರಬೇಕು. ಒಂದಕ್ಕೆ ಕೊಂಡು ನಾಲ್ಕಕ್ಕೆ ಮಾರುವ ದಲ್ಲಾಳಿಗಳೆಂಬ, ದುಡಿಯದ 'ಭಂಟ'ರಿಗೇ ಲಾಭವಿದೆ. ಬೆಳೆದ ರೈತರಿಗೆ ಲಾಭವಿಲ್ಲ. ಆಧುನಿಕ ಕಾಲದ ಕವಿ ಬೇಂದ್ರೆ ಕೂಡ 'ಭೂಮಿ ತಾಯಿಯ ಚೊಚ್ಚಲಮಗ' ಎಂಬ ಪದ್ಯವನ್ನು ಬರೆದಿರುವುದನ್ನು ಇಲ್ಲಿ ನೆನೆಸಿಕೊಳ್ಳಬಹುದು. ದುಡಿಯದೆ, ದುಡಿವವರ 'ಶಕ್ತಿ'ಗೆ ಪ್ರಭುತ್ವವನ್ನು ಪಡೆಯುವ ದಲ್ಲಾಳಿಗಳಿಗೆ ಈ ದೇಶವನ್ನು ಆಳುವ ಬಲ ಬರುತ್ತದೆ ಎಂದಿರುವ ಮಡಿವಾಳಪ್ಪನ ಮಾತು ವಾಸ್ತವವಾಗಿದೆ. ಇಂದಿನ ಬಹುರಾಷ್ಟ್ರೀಯ ಕಂಪನಿಗಳ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೋಡಿದರೆ ಮಡಿವಾಳಪ್ಪನ ಈ ತತ್ವಪದಕ್ಕೆ ಇನ್ನೂ ಅರ್ಥ ಬಂದೀತು. ದುಡಿಯದ 'ಭಂಟ'ರಾಗಿ ಕಾಣುವ ಬಹುರಾಷ್ಟ್ರೀಯ ಮಾಲೀಕರು ನಮ್ಮ ಸಂಪತ್ತನ್ನೂ ನಮ್ಮ ಕಣ್ಣಮುಂದೆ ದೋಚುತ್ತಿದ್ದಾರೆ.

> ದೇಶವನ್ನು ನಿಯಂತ್ರಿಸಿ, ಆಳಾಕ ಬರತಾರ.
> ನಲಿದು ದುಡಿವರ ಕೈ ಕಡಿಯುವ ಸರತಿ ಬರತಾದೊ
> ಸುಳ್ಳೇಳುವರೆಲ್ಲ ಸತ್ಯವಂತರಾಗಿ ಮೆರಿತಾರೊ

ಕಳ್ಳರೆಲ್ಲ ಕೂಡಿ ನಾಡನಾಳುವ ಸರತಿ ಬರತಾದೊ -ಇದು ರಾಜಕೀಯ ವಾಸ್ತವ. ಅನೇಕ ಅಪವಾದಗಳನ್ನು ಮಾಡಿದ, ಹಲವಾರು ಆರೋಪಗಳನ್ನು ಹೊತ್ತ, ಜೈಲು ಸೇರಿದ ಜನವೇ ಇಂದಿನ ರಾಜಕೀಯ ಮುಖಂಡರಾಗಿ ದೇಶವನ್ನು ಆಳುತ್ತಿದ್ದಾರೆ. ಇದರಿಂದಾಗಿ ಮೌಲ್ಯದ ಬಗ್ಗೆ ತತ್ವದ ಬಗ್ಗೆ ಮಾತನಾಡುವುದು ಈ ದೇಶದಲ್ಲಿ ಹಾಸ್ಯಾಸ್ಪದವಾದ ಸಂಗತಿಯಾಗಿದೆ. ಕೇವಲ ರಾಜಕೀಯ ವಲಯದಲ್ಲಿ ಮಾತ್ರವಲ್ಲ, ಸಮಾಜದ ಎಲ್ಲ ವಲಯಗಳಲ್ಲಿ ನಿಷ್ಠೆಯಿಲ್ಲದ, ಕನಿಷ್ಠ ಪ್ರಾಮಾಣಿಕತೆಯಿಲ್ಲದ ಬರೀ ಸ್ವಾರ್ಥಿಗಳೇ ತುಂಬಿಹೋಗಿದ್ದಾರೆ. ಮಡಿವಾಳಪ್ಪ ಮುಂದುವರೆದು, 'ಯೋಗ ಪೀಠದಲ್ಲಿ ಭೋಗ ಪಾಠ ನಡಿತಾದೊ' ಎಂದಿದ್ದಾನೆ. ಪವಿತ್ರವಾದ ಮಠ, ಗುಡಿಗಳಲ್ಲೂ, ಇದೇ 'ಮಾನಗೇಡಿ' ಮಂದಿ ತುಂಬಿ ಪಾವಿತ್ರ್ಯದ ಸ್ಥಳಗಳು ಮಲಿನವಾಗಿವೆ ಎಂಬುದನ್ನು ಇದು ಸೂಚಿಸುತ್ತದೆ.

ದಡ್ಡರೆಲ್ಲ ದೊಡ್ಡ ತತ್ವ ಹೇಳಲು ಬರುತಾರೊ
ದೊಡ್ಡ ಗುಣದ ಹಿರಿಯರೆಲ್ಲ ಮೂಲಿಡಿದು ಕೂಡತಾರೊ

ದುಡ್ಡುಳ್ಳವರೆಲ್ಲ ದೊಡ್ಡ ಚಾಗ ಬಳಸಿ ಮೆರಿತಾರೋ -ಪ್ರಾಮಾಣಿಕತೆಗೆ ಈ ದೇಶದಲ್ಲಿ ಸ್ಥಾನವಿಲ್ಲ ಎಂಬುದು ಉತ್ಪ್ರೇಕ್ಷೆಯಲ್ಲ. ಇಂದಿನ ಆಧುನಿಕ ಬದುಕಿನ ನಗ್ನ ಚಿತ್ರಣವೂ ಇದ್ದಂತಿದೆ. ಈ ದೇಶದ ಚರಿತ್ರೆಯನ್ನೇ ದಿಟ್ಟವಾಗಿ ಮಡಿವಾಳಪ್ಪ ಹಾಡಿದ್ದಾನೆ. ಈ ತತ್ವಪದಕಾರ ಒಂದು ಕಡೆ ಬೇಸತ್ತು, 'ನಾ ಬರಬಾರದಿತ್ತು ಈ ಊರಿಗೆ' ಎಂದಿದ್ದಾನೆ. ಈ ದೇಶದಲ್ಲಿ ಹುಟ್ಟಬಾರದಿತ್ತು ಎನ್ನುವ ನಿಟ್ಟುಸಿರಿನ, ಹತಾಶೆಯ ಮಾತುಗಳು ಪ್ರಾಮಾಣಿಕರಿಂದ, ಸಾತ್ವಿಕರಿಂದ ಅನೇಕಸಲ ಬಂದಿರುವುದನ್ನು ನಾವು ಕೇಳಿದ್ದೇವೆ.

ಸಮಾಜದಲ್ಲಿ ಧಾರ್ಮಿಕವಾಗಿ ಬಲಿಷ್ಠವಾದ ಧರ್ಮಗಳನ್ನು ಮಡಿವಾಳಪ್ಪ ವಿಡಂಬನೆಗೆ ಗುರಿಮಾಡಿದ್ದಾನೆ. ತನ್ನ ಕಾಲದಲ್ಲಿ ವೈದಿಕ, ಲಿಂಗಾಯತ ಹಾಗೂ ಇಸ್ಲಾಂ ಧರ್ಮಗಳನ್ನು ಆ ಧರ್ಮಗಳಲ್ಲಿರುವ ವ್ಯಕ್ತಿಗಳನ್ನು, ಅವರ ನಂಬಿಕೆ, ಆಚರಣೆಗಳನ್ನು ಟೀಕೆಗೆ ಗುರಿಮಾಡಿದ್ದಾನೆ. ಮುಸ್ಲಿಂ ಆಳ್ವಿಕೆಯಲ್ಲಿಯೂ ಇಸ್ಲಾಂ ಧರ್ಮದ ನಿಯಮಗಳನ್ನು ವಿಡಂಬಿಸಿರುವುದನ್ನು ಗಮನಿಸಿದರೆ ಅದು ಅವನ 'ಅನುಭಾವ'ದ ಶಕ್ತಿಯಿಂದಲೇ ಸಾಧ್ಯವಾದುದು ಅನಿಸುತ್ತದೆ.

ಮುಲ್ಲನುದಯದಿ ಮಸೂತಿಯಲಿ ನಿಂದಲ್ಲಲ್ಲಲ್ಲೆಂದರಲ್ಲಿಲ್ಲ
ಗುಲ್ಲು ಮಾಡಿ ತಾ ಕೂಗಲು ಮಾಳಿಗೆಯಲ್ಲಿರ್ದ ಇಲಿಗಳೋಡಿಬಂದಿರಲಿಲ್ಲ

'ನೆಟ್ಟನೆ ತಿಳಿ' ಎನ್ನುವ ಈ ತತ್ವಪದದಲ್ಲಿ ಬ್ರಾಹ್ಮಣರಿಗೆ, ಕ್ಷತ್ರಿಯರಿಗೆ, ಲಿಂಗಾಯತರಿಗೆ, ಯೋಗಿಗಳಿಗೆ ಟೀಕಿಸಿದ್ದಾನೆ. ಯಾವ ಬಂಧನಗಳಿಗೆ ಸಿಗದ, ಯಾವ ಆಚರಣೆ, ನಂಬಿಕೆ, ವಿಧಿ-ವಿಧಾನಗಳಿಗೆ ಬಲಿಬೀಳದ ಮತ್ತು ಯಾವ ವ್ಯವಸ್ಥೆಯನ್ನು ಒಪ್ಪದ ಅನುಭಾವಿ ಮಾತ್ರ ಹೇಳುವಂತಹ ಮಾತುಗಳಿವು. ಎಲ್ಲ ಧರ್ಮಗಳಲ್ಲಿರುವ ವಿಧಿ-ವಿಧಾನಗಳ ಆಚರಣೆಗಳನ್ನು ಈ ಪದದಲ್ಲಿ ವಿಡಂಬಿಸಿದ್ದಾನೆ. ಶೂದ್ರರಿಗೂ, 'ಬಹುದೈವಂಗಳನಾದರಿಸಿದರಲಿಲ್ಲ' ಎಂದಿದ್ದಾನೆ.

ರಾಜಕೀಯವಾಗಿ ಆಳುವ ವರ್ಗವಾದ ಮುಸ್ಲಿಂ ಆಚರಣೆಗಳನ್ನು ಅಲ್ಲಗಳೆದಿರುವುದು ತುಂಬ ವಿಶಿಷ್ಟವಾಗಿ ಕಾಣುತ್ತದೆ. 'ಆಡುವದೊಂದು ಮಾಡುವದೊಂದು' ಎಂಬ ತತ್ವಪದದಲ್ಲಿ,

'ಮುಸಲ್ಮಾನರಂತೀರಿ ತುರ್ತ ಸುಂತಿ ಮಾಡ್ತೀರಿ
ಉಸಲ ಬಿಟ್ಟು ಫಾತ್ಯಾಕೊಟ್ಟು ಬಿಸಮಿಲ್ಲಾ ಅಂತಿರಿ'

-ಎನ್ನುತ್ತಾನೆ. ಯಾವುದೇ ಧರ್ಮದ ಮೂಲ ತಿರುಳು ಮಾನವೀಯತೆ ಮತ್ತು ಸನ್ಮಾರ್ಗ. ಇದು ಬಿಟ್ಟು ಧರ್ಮದ ಹೆಸರಿನಲ್ಲಿ ಮಡಿ, ಮೈಲಿಗೆ, ಜಾತಿ ಮತ್ತು ಸಂಪ್ರದಾಯಗಳ ಆಚರಣೆಗಳು ಇವುಗಳನ್ನೇ ಮುಂದುಮಾಡಿಕೊಂಡು ಮನುಷ್ಯ ಮನುಷ್ಯನ ನಡುವೆ ಪ್ರತ್ಯೇಕತೆಯ ಗೋಡೆಗಳನ್ನು ಸೃಷ್ಟಿಸುವುದರಿಂದ ಸಮಾಜದಲ್ಲಿ ಅಸಮಾನತೆ ಬೆಳೆಯುತ್ತದೆಯೇ ಹೊರತು ಸಾಮರಸ್ಯವಲ್ಲ.

ಮುಟ್ಟಾದ ಮೂರು ದಿನಕ ಹುಟ್ಟಿ ಬಂದಿರಿ ನೀವು
ಮುಡಿಚಟ್ಟು ಎಲ್ಲಾ ಕದ್ದೇಳಿಗ
ಹಾಟ್ಯಾ ಹಾಟ್ಯಾನುಬ್ಯಾಡ ಹಾಟ ಸಣ್ಣದಲ್ಲ
ಅದು ಬಲು ದೊಡ್ಡದು ತಂಗಿ
ಹಾಟಿನಲಿ ಜಗನಾಟ ಉತ್ಪನ್ನವಾಯಿತು

ಹಾಟು ತೀರಿದ ಮೇಲ ಗೂಟಕ ಬಡಿದಾರು' -ಎಂದು ಮುಚ್ಚುಮರೆಯಿಲ್ಲದೆ ವಾಸ್ತವ ಸಂಗತಿಯನ್ನೇ ಹೇಳಿದ್ದಾನೆ. ಜಂಗಮತತ್ವವನ್ನು

ಕಳೆದುಕೊಂಡು ಸ್ಥಾವರಕ್ಕೆ ಬಂದಿರುವ ಎಲ್ಲ ಸ್ಥಾಪಿತ ವ್ಯವಸ್ಥೆಯನ್ನು ಮಡಿವಾಳಪ್ಪ ನಿಂದನೆಗೆ ಈಡುಮಾಡಿದ್ದಾನೆ. ಕಂಡವರ ಮನೆಯಲ್ಲಿ ಉಂಡು, ಕೈಕಾಲು ಬೆಳೆಸಿಕೊಳ್ಳುವ ಜಂಗಮರನ್ನು, ಸಂತೆಯಲ್ಲಿ ಲಿಂಗಕಟ್ಟಿಸಿಕೊಳ್ಳುವವರನ್ನು ನೋವಿನಿಂದ, ವಿಷಾದದಿಂದ ಕಂಡಿದ್ದಾನೆ.

ತತ್ವಪದಕಾರರು ಮೂಲತಃ ಮೌಖಿಕ ಪರಂಪರೆಗೆ ಸೇರಿದವರು. ಲಿಖಿತ ರೂಪದ ವೇದ, ಶಾಸ್ತ್ರ, ಪುರಾಣಗಳನ್ನು ಮತ್ತು ಇವುಗಳನ್ನು ಓದುವ ಪಂಡಿತರನ್ನು, ಇವುಗಳನ್ನೇ ಬಂಡವಾಳ ಮಾಡಿಕೊಂಡ ಪುರೋಹಿತರನ್ನು ಪ್ರಶ್ನಿಸಿ ಖಂಡಿಸಿದ್ದಾರೆ. ವಚನಕಾರರು ಇವು ಜನವಿರೋಧಿ ತತ್ವವನ್ನು ಹೊಂದಿವೆ ಎಂದು ಪ್ರಶ್ನಿಸಿದರು. ಹಾಗೆ ಪ್ರಶ್ನಿಸುವ ಮುಂಚೆ ಅವನ್ನು ಅಭ್ಯಾಸ ಮಾಡಿದ ಪರಿಣತಿಯಿತ್ತು ಅವರಿಗೆ. ಆದರೆ ತತ್ವಪದಕಾರರು ಅಕ್ಷರ ಸಂಸ್ಕೃತಿಗೆ ಸೇರಿದವರೂ ಅಲ್ಲ. ಧರ್ಮಶಾಸ್ತ್ರಗಳನ್ನು ಓದಿ ತಿಳಿಯಬೇಕೆಂಬ ಹಂಬಲದವರೂ ಅಲ್ಲ. ಕೇವಲ ತನ್ನ ಅನುಭವ, ಯೋಗ ಮತ್ತು ಅಂತರಂಗದ ದನಿಗೆ ಓಗೊಟ್ಟು ಮುಕ್ತವಾಗಿ ಇರಲು ಬಯಸಿದರು. ಜಾತಿ, ಮತ, ಗುಡಿ, ದೇವರು, ಮಡಿ, ಮೈಲಿಗೆ ಇಂಥ ಬಾಹ್ಯ ಆಡಂಬರಗಳಿಗೆ ವಿರೋಧಿಯಾಗಿ ನಿಂತವರು. ಜಡವಾದದ್ದನ್ನು ತಿರಸ್ಕರಿಸಿದವರು. ಜನತೆಯ ನಡುವೆ ಇದ್ದುಕೊಂಡು, ಜನತೆಯ ಕಲ್ಯಾಣವನ್ನು ಬಯಸಿದವರು. ತಮ್ಮ ತಮ್ಮ ಹಿತಗಳಿಗಾಗಿ ಹುಟ್ಟಿಸಿಕೊಂಡ ಬಾಹ್ಯರೂಪದ ಆಚರಣೆಗಳನ್ನು ಅಲ್ಲಗಳೆದು ಬೆಳೆದವರು. ಯಾವುದರ ಮೋಹಕ್ಕೆ, ವಾಸನೆಗೆ ಬಲಿಯಾಗದೆ ಇಂಥವುಗಳನ್ನು ಮೀರಿ ನಿಂತವರು.

ಲಿಖಿತ ರೂಪದ ಶಾಸ್ತ್ರ ಪಾಂಡಿತ್ಯವನ್ನು ಓದಿನಿಂದ ಪಡೆದ ಬೌದ್ಧಿಕತೆಯನ್ನು ತತ್ವಪದಕಾರರು ವಿರೋಧಿಸುತ್ತಾರೆ. ಮೂಲತಃ ತತ್ವಪದಕಾರರು ಬಯಲು ಗಳಿಕೆಯ ಸಾಧಕರು. ಓದಿನಿಂದ ಪಡೆದ ಪಾಂಡಿತ್ಯವು ತರ್ಕಕ್ಕೆ ದಾರಿ ಮಾಡುತ್ತದೆ. ತರ್ಕದಿಂದ ಏನನ್ನಾದರೂ ಹೇಳಬಹುದು. ಹೇಳಿ ವಾದಿಸಬಹುದು. ಆದರೆ ಇದು ಸ್ವಹಿತಸಾಧನೆಗೆ ಬೇಕಾದದ್ದನ್ನು ಮಾಡಿಕೊಳ್ಳುತ್ತಾರೆ. ಇಂಥವರನ್ನು ತತ್ವಪದಕಾರರು ಹಲವು ಬಗೆಯಲ್ಲಿ ಪ್ರಶ್ನಿಸಿದ್ದಾರೆ.

ಕುಲಛಲಕೆ ಹೋರಾಡಿ ನೆಲಗತ್ತಲಾಗುವ
ಛಲಮಾರಿಗಳೆಲ್ಲ ಪಂಡಿತರೆ?
ಹಲವು ದೇಶವ ತಿರುಗಿ ನಾನಾ ಭಾಷೆಯ ಕಲಿತುಬಲು ಶ್ಯಾಣೆರಾದವರು ಪಂಡಿತರೆ?
ಸುಲಭದಿ ಸೂಕ್ಷ್ಮದಿ ನಿಜವಸ್ತು ತಿಳಿಯದ

ಬಲು ಢಾಂಬಿಕರಿವರೆಲ್ಲ ಪಂಡಿತರೆ? -ಎನ್ನುವ ಕೂಡಲೂರು ಬಸಲಿಂಗಪ್ಪನು, ಇಲ್ಲಿ 'ನಾನಾ ಭಾಷೆಯ ಕಲಿತು' ಎಂದರೆ ವೈದಿಕರನ್ನು ಉದ್ದೇಶಿಸಿ, ಸಂಸ್ಕೃತ ಭಾಷೆಯನ್ನು ಗಮನದಲ್ಲಿರಿಸಿಕೊಂಡು ಹೇಳಿದ ಮಾತಾಗಿದೆ. ನೆಲಮೂಲದ ಭಾಷೆಗೆ ಹಂಬಲಿಸಿದ, ಮೇಲಾಗಿ ಲಿಖಿತ ಭಾಷೆಯ ಹಂಗು ತೊರೆದ ತತ್ವಪದಕಾರರು ಸಂಸ್ಕೃತಿ ಭಾಷೆಯ ಓದು ಮತ್ತು ಅದರ ಜ್ಞಾನವನ್ನು ತಿರಸ್ಕರಿಸಿದವರು. ಇಲ್ಲಿ ಜ್ಞಾನ ಎಂದರೆ ಓದಿನ ಜ್ಞಾನ. 'ಬಾಯಿಲೊಂದು ಆಡ್ತೀರಿ ಮನಸಿನೊಳಗೊಂದು ಮಾಡ್ತೀರಿ ಬರದಿಟ್ಟಿದು ಓದಿಕೊಂಡು ಭ್ರಾಂತಿಗೆಟ್ಟು ಹೋಗತೀರಿ' -ಎಂದು ಕಡಕೋಳ ಮಡಿವಾಳಪ್ಪ ಹೇಳಿದ್ದಾನೆ. 'ಬರದಿಟ್ಟಿದು' ಎಂದರೆ ಸ್ವಂತಿಕೆ ಇಲ್ಲದ್ದು, ಎರವಲು ಪಡೆದ ಜ್ಞಾನದಿಂದ 'ನಿಜವಸ್ತು' ಸಿಗುವುದಿಲ್ಲವೆಂದು ದಿಟವಾಗಿ ಹೇಳಿದ್ದಾನೆ. ಅರಿವಿನಿಂದ ಪಡೆದ ತಿಳುವಳಿಕೆಯೇ ಶ್ರೇಷ್ಠವಾದದ್ದು, ಅದೇ ಭವದಿಂದ ದೂರ ಮಾಡುವಂಥದ್ದು ಎಂಬ ಮಡಿವಾಳಪ್ಪ, ಹೀಗೆನ್ನುತ್ತಾನೆ:

ಶಾಸ್ತ್ರಪುರಾಣ ವೇದ ಆಗಮ
ಮಾಡಿ ಇಟ್ಟಾರೋ ಮುಂದೆ ಓದುದಕ
ನಿಲುಕದ ಮಾತಿಗೆ ನಿಗರ್‍ಯಾಡಿ ಸತ್ತಾರೋ

ವೈದಿಕರು 'ಶಾಸ್ತ್ರಪುರಾಣ ವೇದ ಆಗಮ ಮುಂತಾದ ಲಿಖಿತ ರೂಪದ ಜ್ಞಾನವನ್ನು ಪಡೆದು, ಅದನ್ನೇ ಬಂಡವಾಳ ಮಾಡಿಕೊಂಡು, ಸಾಮಾನ್ಯ ಜನರೆದುರಿಗೆ ತಮ್ಮ 'ಬರೆದಿಟ್ಟ ಓದಿ'ನ ಬಲದಿಂದ ವಂಚಿಸಿರುವುದು ಮತ್ತು ಅದರಿಂದಲೇ ತರ್ಕ, ಕುತರ್ಕಗಳಿಂದ ಪೂರ್ವಜನ್ಮದ ಕರ್ಮ, ಪಾಪ, ನರಕ ಮುಂತಾದ್ದನ್ನು ಸೃಷ್ಟಿಸಿ ಶೋಷಣೆ ಮಾಡಿರುವುದನ್ನು ಕಂಡ ತತ್ವಪದಕಾರರು ಇಂಥ ಬರೆದಿಟ್ಟ ಓದನ್ನು, ಅದರ ಪಾಂಡಿತ್ಯವನ್ನು ನಿಷ್ಠೂರವಾಗಿ ಖಂಡಿಸಿದ್ದಾರೆ. ಮೋಟ್ನಹಳ್ಳಿ ಹಸನ ಸಾಹೇಬನ ಪದ ಹೀಗಿದೆ

ಶಾಸ್ತ್ರಿ ಓದುವದೇನೋ ಹೇ ಮನುಜಾ
ಶಾಸ್ತ್ರದೊಳಗ ಏನು ಇಲ್ಲಾ
ಶಾಸ್ತ್ರ ಹೇಳುವುದೆಲ್ಲಾ ಅಪಾತ್ರದೊಳಾಗುವದೆ?
ಸೂತ್ರದಾರ ಒಳಗೆ ಸುಶೀಲವು ತಿಳಯದೇನೋ
ವೇದ ಶಾಸ್ತ್ರಗಳ ಓದಿ ಅದರ
ಭೇದವರಿಯದೆ ಬರೆ ಓದಿದರೇನೋ
ಸಾಧಿಸಿ ತಾ ಸದ್ಗತಿ ಪಡೆಯದೆ ಭವ
ಬಾಧೆಯಲ್ಲಿ ಭವಭವ ತಿರುಗುವ

-ತತ್ವಪದಕಾರರ ಇಂಥ ಮಾತುಗಳನ್ನು ಗಮನಿಸಿದರೆ ಅಕ್ಷರದ ಓದು ಬಲ್ಲವರಾದ ಪಂಡಿತರಿಗೂ ಮತ್ತು ಅಕ್ಷರರಹಿತವಾದ ಕೇವಲ ಅನುಭವ ಮತ್ತು ಅರಿವಿನ ಮೂಲಕ ಪಡೆದವರ ನಡುವೆ ಸಂಘರ್ಷ ಸಣ್ಣ ಪ್ರಮಾಣದ್ದಲ್ಲವೆನಿಸುತ್ತದೆ. ಪಂಡಿತರು ಮತ್ತು ಅನುಭಾವಿಗಳ ನಡುವೆ ನಿರಂತರವಾದ ತಿಕ್ಕಾಟ ನಡದೇ ಇದೆ. ಮೂಲತಃ ಬರೆದಿಟ್ಟ ಓದಿನ ಜ್ಞಾನವು ಶೋಷಣೆಗೆ ದಾರಿಯಾಗಿದೆ. ಅರಿವಿನಿಂದ ಪಡೆದ ಜ್ಞಾನವು ಮಾನವೀಯತೆಗೆ ಕಾರಣವಾಗಿರುವುದೇ ಇಲ್ಲಿಯ ಮುಖಾಮುಖಿಗೆ, ತಿಕ್ಕಾಟಕ್ಕೆ ಎಡೆಯಾಗಿದೆ. ಇದು ಆ ಕಾಲದ ವಾಸ್ತವ ಮಾತ್ರವಲ್ಲ. ಈ ಕಾಲದ ವಾಸ್ತವವೂ ಕೂಡ. ಬದುಕಿನಿಂದ ಅನುಭವಿಸಿ ಪಡೆದ ಜ್ಞಾನ ಅಪಾರವಾಗಿದ್ದರೂ ಕೂಡ ಅದು ಲೆಕ್ಕಕ್ಕೆ ಬರುವುದಿಲ್ಲ. ಓದಿನಿಂದ ಪಡೆದ ಜ್ಞಾನಕ್ಕೆ ಮನ್ನಣೆಯಿರುವುದು ಈಗ ಕಾಣುತ್ತೇವೆ. ಪದವಿ ಇದ್ದರೆ ಜ್ಞಾನವಿದೆ ಎಂದು ತಿಳಿಯುವ ಇಂದಿನ ವಾಸ್ತವಕ್ಕೂ, ಶಾಸ್ತ್ರದ ಓದು ಇದ್ದರೆ ಪಂಡಿತರೆಂದು ತಿಳಿಯುವ ಅಂದಿನ ವಾಸ್ತವಕ್ಕೂ ವ್ಯತ್ಯಾಸವಿಲ್ಲ. ಇದು ಅಂದಿನಿಂದ ನಡೆದುಬಂದಿದೆ. ಓದಿನ ಪಂಡಿತರನ್ನು, ಪಾಂಡಿತ್ಯವನ್ನು, ಬಯಲು ಗಳಿಕೆಯ ಅನುಭಾವಿಗಳು ವಿರೋಧಿಸುತ್ತಾ ಬಂದಿದ್ದಾರೆ. ಅಕ್ಷರಜ್ಞಾನದ ಪಂಡಿತರನ್ನು ಹಸನ ಸಾಹೇಬ 'ಶ್ಯಾಣ್ಯಾ' ಎಂದು ಕರೆದು ಗೇಲಿ ಮಾಡಿದ್ದಾನೆ.

ಶ್ಯಾಣ್ಯಾನಂದರ ಯಾತರ ಶ್ಯಾಣ್ಯಾ?
ಮೂರು ಮಲದ ಕಸಮುಸಿರಿ ಇಟಕೊಂಡು ನಾ
ಧೀರನೆಂದರೆ ಯಾತಕ ಶ್ಯಾಣ್ಯಾ
ಬೇರೆ ಬೇರೆ ಕುಲ ಭಾವಿಸಿ ಭವದ
ವಿಚಾರವಿಲ್ಲದ ಯಾತರ ಶ್ಯಾಣ್ಯಾ
ನಾನಂಬುದು ನರಕ ಹೌದು
'ನಾ' ನಳಿಯದವ ಯಾತರ ಶ್ಯಾಣ್ಯಾ
ಮಾನವ ಜನ್ಮದ ಖೂನ ತಿಳಿಯದೆ
ಸ್ನಾನನಾದರ ಯಾತರ ಶ್ಯಾಣ್ಯಾ?
ಜ್ಞಾನಭರಿತ ನಮ್ಮ ಇಟಪೂರೀಶನೊಳು

ತಾನೇ ತಾನಾದವನೇ ಶ್ಯಾಣ್ಯಾ -'ಜ್ಞಾನಭರಿತ' ಎಂದರೆ ಅನುಭವದ ಜ್ಞಾನ, ಅರಿವಿನ ತಿಳುವಳಿಕೆಯ ಜ್ಞಾನ. ಮನುಷ್ಯತ್ವದ ಜ್ಞಾನವೇ ಹೊರತು ಓದಿನ ಅಹಂಕಾರದ ಜ್ಞಾನವಲ್ಲ ಎಂಬುದು ತತ್ವಪದಕಾರರ ನಿಲುವು. ವಚನಕಾರರ ಪರಂಪರೆಗೆ ಸೇರಿದ ಈ ತತ್ವಪದಕಾರರು ಇಂಥ ವಿಷಯಗಳಲ್ಲಿ ಸಮಾನ ನಿಲುವಿನಲ್ಲಿ ಪ್ರಶ್ನಿಸಿದ್ದಾರೆ.

ಆಧುನಿಕತೆ ಮತ್ತು ತತ್ವಪದಕಾರರು

ಆಂಧ್ರ ಮತ್ತು ಮಹಾರಾಷ್ಟ್ರ ಗಡಿ ಪ್ರದೇಶಕ್ಕೆ ಹೈದರಾಬಾದ್ ಕರ್ನಾಟಕವು ಒತ್ತಿಕೊಂಡಿದೆ. ಚರಿತ್ರೆಯಲ್ಲಿ ಕನ್ನಡ ಪ್ರದೇಶವು ಗೋದಾವರಿ ನದಿಯವರೆಗೆ ಹಬ್ಬಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯಿಂದಾಗಿ ಅನಿವಾರ್ಯವಾಗಿ ಗಡಿರೇಖೆಗಳು ಬಂದವು. ಆದರೆ ಈ ಗಡಿರೇಖೆಗಳು ರಾಜಕೀಯವಾದ ಮತ್ತು ತಾಂತ್ರಿಕವಾದ ಇಬ್ಭಾಗವಾಗಿ ನಿಂತವು. ಕನ್ನಡ ಪ್ರದೇಶಗಳು ಮತ್ತು ಭಾಷೆಯನ್ನಾಡುವ ಜನರು ಆಂಧ್ರಕ್ಕೆ, ಮಹಾರಾಷ್ಟ್ರಕ್ಕೆ ಸೇರಿಕೊಂಡರು. ಇದರಂತೆ ಮರಾಠವಾಡ, ಆಂಧ್ರಪ್ರದೇಶದ ಭಾಗವು ಮತ್ತು ಭಾಷಿಗರು ಕರ್ನಾಟಕದಲ್ಲಿ ಸೇರುವಂತಾಯಿತು. ಇದರಿಂದ ಸಾಂಸ್ಕೃತಿಕವಾಗಿ ಕೊಡುಕೊಳೆ ಮೊದಲಿನಿಂದಲೂ ನಡೆಯುತ್ತ ಬಂದಿದೆ. ಹೀಗಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದ ಗಡಿಭಾಗದವರಿಗೆ ಕನ್ನಡದ ಜೊತೆಗೆ ತೆಲುಗು, ಮರಾಠಿ ಭಾಷೆಗಳು ಸಹಜವಾಗಿ ಗೊತ್ತಿದ್ದವು. ವ್ಯವಹಾರಿಕವಾಗಿ ಈ ಮೂರು ಭಾಷೆಗಳು ಚಲನೆಯಲ್ಲಿದ್ದವು. ಹದಿನೆಂಟನೆಯ ಶತಮಾನದಿಂದ ನಿಜಾಮರ ಆಳ್ವಿಕೆ ಪ್ರಾರಂಭವಾದ ಮೇಲೆ ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದಿಂದ ಉರ್ದುಭಾಷೆ ಆಡಳಿತದಲ್ಲಿ ಮತ್ತು ಶಿಕ್ಷಣದಲ್ಲಿ ಪ್ರಭುತ್ವದ ಬೆಂಬಲದಿಂದ ಪ್ರವೇಶಿಸಿತು. ಇದರಿಂದ ಉರ್ದುಭಾಷೆ ವ್ಯವಹಾರದಲ್ಲಿಯೂ ಪ್ರಬಲವಾಗಿ ಸೇರಿಕೊಂಡಿತು. ಕನ್ನಡ ಭಾಷೆ ವ್ಯವಹಾರದಿಂದಲೂ ಹಿನ್ನೆಲೆಗೆ ಸರಿಯುವಂತಾಯಿತು. ಸಂಪರ್ಕ ಸೌಲಭ್ಯಗಳು ಇಲ್ಲದ ಹಳ್ಳಿಗಳಲ್ಲಿ ಮತ್ತು ಮಠ-ಮಾನ್ಯಗಳಲ್ಲಿ ಕನ್ನಡ ಜೀವ ಉಳಿಸಿಕೊಂಡಿತ್ತು. ಬಹುಭಾಷೆಗಳು ಈ ಪ್ರದೇಶಗಳಲ್ಲಿ ಚಲನೆಯಲ್ಲಿದ್ದರಿಂದ ಮತ್ತು ಉರ್ದು ಭಾಷೆಗೆ ರಾಜಕೀಯ ಬೆಂಬಲ ಮತ್ತು ಮಾನ್ಯತೆ ಇದ್ದುದರಿಂದ ಕನ್ನಡ ಭಾಷೆ ಸಹಜವಾಗಿ ಚೈತನ್ಯ ಕಳೆದುಕೊಂಡಿತು. ಬಹುಭಾಷೆಗಳು ಬೆರೆತು ಹೋದುದರಿಂದ ಕನ್ನಡ ಸಾಹಿತ್ಯ ಸೃಷ್ಟಿಗೆ ತೊಡಕಾಯಿತು. ಅದೂ ಲಿಖಿತ ಸಾಹಿತ್ಯಕ್ಕಂತೂ ತೊಂದರೆಯಾಯಿತು. ಆದರೆ ಮೌಖಿಕ ಪರಂಪರೆಯ ಜನಪದ ಸಾಹಿತ್ಯ ನಿರಂತರವಾಗಿ ಬೆಳೆಯುತ್ತಲೇ ಇತ್ತು. ಇದರಿಂದಾಗಿ ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಲಿಖಿತ ಪರಂಪರೆಯ ಸಾಹಿತ್ಯ ಹೇಳಿಕೊಳ್ಳುವಷ್ಟು ಸೃಷ್ಟಿಯಾಗಲಿಲ್ಲ. ಅದರಿಂದಾಗಿಯೇ ಈ ಪ್ರದೇಶದಲ್ಲಿ ನೂರಾರು ಜನಪದ ಕವಿಗಳು ಅನೇಕ ಪ್ರಕಾರಗಳಲ್ಲಿ ಬರೆದಿದ್ದಾರೆ. ತತ್ವಪದ ಸಾಹಿತ್ಯವು ಸಮೃದ್ಧವಾಗಿ ಬೆಳೆದಿದೆ. ಮೊಹರಂ ಪದಗಳು, ಜನಪದ ಖಂಡಕಾವ್ಯಗಳು, ಕಥೆಗಳು, ದೊಡ್ಡಾಟ, ಸಣ್ಣಾಟ, ಕಾಲಜ್ಞಾನ ಇವೆಲ್ಲ ಮೌಖಿಕ ಪರಂಪರೆಯಲ್ಲೇ ಬೆಳೆದು ನಿಂತಿವೆ. 'ಆಧುನಿಕತೆ' ಭಾರತಕ್ಕೆ ಕಾಲಿಟ್ಟ ನಂತರವೂ, ಇಂಗ್ಲಿಷ್ ಭಾಷೆಯಿಂದ ಪಾಶ್ಚಾತ್ಯ ಜ್ಞಾನವು ಭಾರತಕ್ಕೆ ಬಂದು, ಹೊಸ ಬಗೆಯ ಸಾಹಿತ್ಯ ಮೂಡಲು ತೊಡಗಿ 'ಆಧುನಿಕ ಸಾಹಿತ್ಯ' ಬೆಳೆಯತೊಡಗಿದರೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇನ್ನೂ ಮೌಖಿಕ ಸಾಹಿತ್ಯವೇ ಪ್ರಬಲವಾಗಿತ್ತು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಹುಟ್ಟಿ, ಇಪ್ಪತ್ತನೆಯ ಶತಮಾನದ ಸ್ವಾತಂತ್ರ್ಯನಂತರವೂ ಬಾಳಿ ಬದುಕಿರುವವರು ಕೂಡ ಮೌಖಿಕ ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು. ಇದಕ್ಕೆ ಹಲವು ಕಾರಣಗಳಿವೆ. ೧೯೪೮ರ ತನಕ ಉರ್ದು ರಾಜ್ಯ ಭಾಷೆಯಾಗಿತ್ತು. ಉರ್ದು ಕಲಿತರೆ ಮಾನ್ಯತೆ ಸಿಗುತ್ತಿದ್ದರಿಂದ, ಶಿಕ್ಷಣವೂ ಉರ್ದು ಭಾಷೆಯಲ್ಲಿದ್ದರಿಂದ ವಿದ್ಯೆ ಕಲಿಯಲು ಅವಕಾಶ ಇರುವವರೆಲ್ಲ ಉರ್ದು ಭಾಷೆಯಲ್ಲೇ ಕಲಿತರು. ೧೯೪೮ರ ನಂತರವೂ ಈ ಪೀಳಿಗೆ ಉರ್ದುವಿನಲ್ಲೇ ವ್ಯವಹಾರ ಮಾಡತೊಡಗಿದರು. ಕನ್ನಡ ಭಾಷಾಭಿಮಾಗಳು ಸಾಹಿತ್ಯದಲ್ಲಿ ಆಸಕ್ತಿ ಹೊಂದಿ ಅದನ್ನು ಬೆಳೆಸುವದಕ್ಕೆ ಸಮಯ ಬೇಕಾಯಿತು. ಇದರಿಂದ ಸಾಹಿತ್ಯದ ಬೆಳವಣಿಗೆ ಸಹಜವಾಗಿಯೇ

ಕುಂಠಿತವಾಯಿತು. ಆದರೆ ಕನ್ನಡ ಭಾಷಾಭಿಮಾನಿಗಳೂ ಸಾಹಿತ್ಯಾಭಿಮಾನಿಗಳೂ ಆದ ಜನಪದರು ಕಾಲಿಡುತ್ತಿದ್ದ ಆಧುನಿಕತೆಯನ್ನು ಕುತೂಹಲದಿಂದಲೂ, ಆತಂಕದಿಂದಲೂ ಗಮನಿಸುತ್ತಲೇ ತಮ್ಮ ತಲ್ಲಣಗಳನ್ನು ಹಾಡತೊಡಗಿದರು. ಇದರಿಂದಲೇ ಇಪ್ಪತ್ತನೆಯ ಶತಮಾನದ 'ಸಂವೇದನೆ'ಯೂ ಮೌಖಿಕ ಸಾಹಿತ್ಯದಲ್ಲಿ ಮೂಡಿ ಬಂದಿದೆ. ರಾಷ್ಟ್ರೀಯವಾದ, ನಿರುದ್ಯೋಗ ಸಮಸ್ಯೆ, ವರದಕ್ಷಿಣೆ ಪಿಡುಗು, ಭ್ರಷ್ಟಾಚಾರ, ಹೋಟೆಲ್, ವಕೀಲ, ಕೋರ್ಟ್ ಮುಂತಾದವು ತತ್ವಪದ ಸಾಹಿತ್ಯದಲ್ಲಿ ವ್ಯಕ್ತವಾಗಿವೆ. ಅಷ್ಟೇ ಏಕೆ ನವೋದಯ ಕಾವ್ಯದ ಅನೇಕ ಲಕ್ಷಣಗಳು ಕೂಡಲೂರು ಬಸಲಿಂಗಪ್ಪನ ತತ್ವಪದಗಳಲ್ಲಿವೆ. ಬಂಡಾಯ ಕಾವ್ಯದ ಆಶಯಗಳು ಕಡಕೋಳ ಮಡಿವಾಳಪ್ಪನ ತತ್ವಪದಗಳಲ್ಲಿವೆ. ಆಧುನಿಕತೆ ಉಂಟುಮಾಡಿದ ಬಿಕ್ಕಟ್ಟುಗಳು ವಡಕಿ ತಾತಪ್ಪಯ್ಯನ ತತ್ವಪದಗಳಲ್ಲಿವೆ. ಆಧುನಿಕರಲ್ಲದ ಆದರೆ ಆಧುನಿಕ ಕಾಲಘಟ್ಟದಲ್ಲಿ ಬದುಕಿ ಬಾಳಿದ ವಡಕಿ ತಾತಪ್ಪಯ್ಯ, ನಿಡುವಂಚಿ ಭದ್ರೇಶ್ವರ, ಶಿಲ್ಲಪ್ಪ ಮುಂತಾದ ತತ್ವಪದಕಾರರ ಸಾಹಿತ್ಯದಲ್ಲಿ ತಾಂತ್ರಿಕವಾದ ಆಧುನಿಕ ಸಂವೇದನೆಗಳಿವೆ. ಬ್ರಿಟಿಷರ ಆಳ್ವಿಕೆಯಿಂದಾಗಿ ಸಮಾಜದಲ್ಲಿ ಹೋಟೆಲ್, ಕೋರ್ಟ್, ವಕೀಲ ಮುಂತಾದ ಹೊಸ ವ್ಯವಸ್ಥೆಗಳು ಕಾಣಿಸತೊಡಗಿದವು. ಜೊತೆಗೆ ನಿಜಾಮ್ ಆಳ್ವಿಕೆಯಿಂದ ಮೊಘಲಾಯಿ ವ್ಯವಸ್ಥೆಯಲ್ಲಿ ಮುಲಜುಮ್, ಮುನಸುಫ್, ನಾಜುಮ್ ಇಂಥ ಅಧಿಕಾರ ಸ್ಥಾನಗಳೂ ಚಾಲ್ತಿಯಲ್ಲಿದ್ದವು. ಇವು ಸಾಂಪ್ರದಾಯಿಕ ಸಮಾಜದಲ್ಲಿ ಹುಟ್ಟು ಹಾಕುವ ಅನೇಕ ಸಮಸ್ಯೆಗಳನ್ನು ಅವುಗಳಿಂದಾಗುವ ಪರಿಣಾಮಗಳನ್ನು ಗಮನಿಸುತ್ತಲೇ ತತ್ವಪದಕಾರರು ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರೂ ಇದನ್ನು ಇವರೆಲ್ಲ ತಮ್ಮ ಅನುಭಾವದ ನೆಲೆಯಲ್ಲಿ ಗ್ರಹಿಸಿರುವುದೇ ವಿಶೇಷ. 'ಚಹಾ ಕುಡಿ ಬ್ಯಾಡೋ ಮನುಜಾ' ಎಂಬ ಪದದಲ್ಲಿ

ಚಹಾ ಕಾಫಿ ಕುಡಿಬ್ಯಾಡೋ ಮಂಗ
ಚಾಳಿ ಚಟದ ಮನಸಿನ ಸಂಗ

ಥೇ ಇಂದ್ರಿಯ ನಷ್ಟವೇ ಭಂಗ - ವಡಕಿ ತಾತಪ್ಪ ಎಂದಿದ್ದಾನೆ. ಬ್ರಿಟಿಷರಿಂದ ಚಹಾ, ಕಾಫಿ ಭಾರತಕ್ಕೆ ಕಾಲಿಟ್ಟಿರಬೇಕು. ಪ್ರಾರಂಭದಲ್ಲಿ ಚಹಾ ಕಾಫಿ ನಗರಗಳಲ್ಲಿ 'ಪ್ರತಿಷ್ಠಿತ'ರಲ್ಲಿ ಬಳಕೆಗೆ ಬಂತು. ಅದೊಂದು ಫ್ಯಾಷನ್ ರೀತಿಯಲ್ಲಿಯೇ ಬಳಕೆಯಲ್ಲಿತ್ತು. ನಂತರ ಹಳ್ಳಿಹಳ್ಳಿಗಳಲ್ಲಿ ಹೋಟೆಲ್‌ಗಳ ಮೂಲಕ ಪ್ರವೇಶಿಸಿತು.(ನಮ್ಮ ಹಳ್ಳಿಗಳಲ್ಲಿ ಹಿರಿಯರು ಹೇಳುವಂತೆ ಡಾಂಬರ ರಸ್ತೆಗಳು ಬಂದ ಊರುಗಳಲ್ಲಿ ಅಂಗ್ರೇಜಿ ಜನ ಚಹಾ ಮಾಡಿ ಹಳ್ಳಿಯ ಮುಖಂಡರಿಗೆ ಕರೆಸಿ ಕುಡಿಸುತ್ತಿದ್ದರಂತೆ). ಮಡಿವಂತರು ಅದನ್ನು ಮೈಲಿಗೆ ಎಂಬಂತೆ ನೋಡುತ್ತಿದ್ದರು. ಕ್ರಮೇಣ ಅದೊಂದು ಹವ್ಯಾಸವಾಗಿ ಬೆಳೆದು ಕೊನೆಗೆ ಚಟವಾಗಿ ಪರಿಣಮಿಸಿತು. ಇದನ್ನೇ 'ಇಂದ್ರಿಯ ನಷ್ಟ' ಎಂದು ವಡಕಿ ತಾತಪ್ಪಯ್ಯ ಭಾವಿಸಿದ್ದಾನೆ. ಚಹಾ ತಯಾರಿಸುವುದನ್ನೂ ಕೂಡ ಈ ಪದದಲ್ಲಿ ಹೇಳಿದ್ದಾನೆ:

ಚಕ್ಕೆಪುಡಿ ನೀರು ಬೆಂಕಿ ಪುಟ್ಟಕೊಟೀ
ಸಕ್ರೀಹಾಲು ಅದರೊಳು ಕಲಸಿಟ್ಟಿ
ಕಪ್ಪುಬಸಿ, ಉಪ್ಪಿಟ್ಟು ದೋಸಿ
ಹಚ್ಚೀಡುವುದು ಊರಾಳು ಹೇಸಿ

ನಾಸ್ಟ ಅಥವಾ ಟಿಫಿನ್ ಸಂಸ್ಕೃತಿ ಹಳ್ಳಿಹಳ್ಳಿಗಳಲ್ಲಿಯೂ ಸುರುವಾದುದನ್ನು, ಉಪ್ಪಿಟ್ಟು, ದೋಸೀ, ಜೊತೆಗೆ ಚಹಾ-ಕಾಫಿ ಸೇವನೆಯ ಬ್ರೇಕ್ ಫಾಸ್ಟ್ ಪದ್ಧತಿಯನ್ನು ವರ್ಣಿಸಿರುವ ಈ ತತ್ವಪದಕಾರನಿಗೆ ಈ ಸಂಸ್ಕೃತಿಯ ಬೆಳವಣಿಗೆಯನ್ನು 'ಊರಾಳು ಹೇಸಿ' ಎಂದಿದ್ದಾನೆ.

ಹೋಟಲ್ ಯೆಂದು ಓಡ್ಯಾಡಿ ಹೊಕ್ಕೀ
ಗಳಿಸಿದರೊಕ್ಕದೊಳಗಿಕ್ಕೀ

ಹೆಂಡರು ಮಕ್ಕಳು ಮಣ್ಣು ಮುಕ್ಕೀ
ಹೊಲಮನೆ ಕಳಕೊಂಡಾಡಿಯೋ ಪಿಕ್ಕೀ

'ಹೋಟಲ್' ಆಧುನಿಕತೆಯ ಸಂಕೇತವಾಗಿದೆ. ಹಳ್ಳಿಗಳನ್ನು ಹೋಟಲ್‌ಗಳು ಪ್ರವೇಶಿಸುವುದು ಎಂದರೆ ಆಧುನಿಕತೆ ಪ್ರವೇಶಿಸಿದಂತೆ. ಇದರಿಂದ ಉಂಟಾದ ಬಿಕ್ಕಟ್ಟುಗಳು ಹಳ್ಳಿಯನ್ನು ಕಲಕಿದವು. ಸಂಘರ್ಷಗಳು ಏರ್ಪಟ್ಟವು. ಸಂಪ್ರದಾಯದ ಮನಸ್ಸುಗಳಿಗೆ ವ್ಯಸನವನ್ನು ತಂದಿತು. ಮೇಲ್ವರ್ಗದವರು, ಕೆಳವರ್ಗದವರು ಕೂಡಿ ಹೋಟಲ್‌ಗಳಲ್ಲಿ ತಿನ್ನುವುದು ಕುಡಿಯುವುದು ಎಂದರೆ, ಸ್ಥಾನಮಾನದ ಪ್ರಶ್ನೆಗಳು ಎದುರಾಗಿಯೇ ತೀವ್ರ ಸಂಘರ್ಷಕ್ಕೆ ಎಡೆಯಾದದ್ದು. ಇದೊಂದು ಸಂಕ್ರಮಣ ಸ್ಥಿತಿ. ಮೇಲು-ಕೀಳುಗಳು ಮಸುಕಾಗಿರುವ ಕ್ರಾಂತಿಯನ್ನು ಹೋಟಲ್ ನಿರ್ಮಿಸಿತು ಎನ್ನುವುದು ನಿಜ. ಆದರೆ ದುಡಿದು ತಿನ್ನುವ ಜನಸಾಮಾನ್ಯರು ಹೋಟಲ್ ತಿನಿಸುಗಳ ವ್ಯಾಮೋಹಿಗಳಾಗಿ ದುಡಿದದ್ದನ್ನು ಈ ಹೋಟಲ್ ತಿನಿಸುಗಳಿಗೆ ಇಟ್ಟು ಸಂಸಾರಕ್ಕೆ ಕುತ್ತು ತಂದಿರುವುದು. ಹೆಂಡತಿ ಮಕ್ಕಳಿಗೆ ಅನ್ನವಿಲ್ಲದಂತೆ ಮಾಡಿರುವುದು ಮತ್ತು ಈ ಹೋಟೆಲ್ ಚಟದಿಂದಾಗಿ ಇದ್ದ ಅಲ್ಪಸ್ವಲ್ಪ ಭೂಮಿಯನ್ನು ಕಳೆದುಕೊಂಡಿರುವವರ ಗತಿಯನ್ನು ನೋಡಿದ ಈ ತತ್ವಪದಕಾರನಿಗೆ 'ಹೋಟಲ್' ವಿನಾಶದಂತೆ ಕಂಡಿದೆ.

ಶೀಕ್ರೇಟು ಸೇದಿದರೇಟೂ
ಕೆಮ್ಮು ದಮ್ಮು, ರಕ್ತದ ಪಾಟೂ
ನಿನ್ನ ದೇಹ ನಿನ್ನಗೆ ಚಾಟೂ
ಹಮ್ಮು ಅಹಂಕಾರಳಿದು ದಾಟೂ

ತಿಂಡಿ, ಚಹಾ, ಕಾಫಿ, ಸಿಗರೇಟ್ ಮುಂತಾದ ಚಟಗಳಿಂದ ದೈಹಿಕ, ಮಾನಸಿಕ ಆರೋಗ್ಯ ಹಾಳು, ಇಂದ್ರಿಯಗಳೇ ನಾಶವಾಗುತ್ತವೆ ಎಂದ ಈ ಅನುಭಾವಿ ಇವೆಲ್ಲವುಗಳ ಬದಲಾಗಿ, 'ವಚನಾಮೃತ ಮಾಡೋ ಪಾನ' ಎಂದಿದ್ದಾನೆ. ತತ್ವಪದಕಾರನ ಸಾಮಾಜಿಕ ಕಾಳಜಿಯನ್ನು, ಮನುಷ್ಯನ ಕಲ್ಯಾಣವನ್ನು ಇದು ತೋರಿಸುತ್ತದೆ. ಹೋಟಲ್ ತಂದ ಬಿಕ್ಕಟ್ಟುಗಳನ್ನು ಶ್ರೀಕೃಷ್ಣ ಆಲನಹಳ್ಳಿ ತನ್ನ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಒಂದು ಆಧುನಿಕ ಮನಸ್ಸು, ಇನ್ನೊಂದು ಅನುಭಾವಿ ಮನಸ್ಸು, ಈ ಎರಡು ಮನಸ್ಸುಗಳು ಸಾಮಾಜಿಕ ವಾಸ್ತವವನ್ನೇ ಚಿತ್ರಿಸಿದ್ದಾರೆ. ನ್ಯಾಯವನ್ನು ದೊರಕಿಸಿಕೊಡುವ 'ವಕೀಲ'ನ ಮೇಲೆ ವಡಕಿ ತಾತಪ್ಪಯ್ಯ ರಚಿಸಿರುವ ಪದ ಗಮನಿಸಬೇಕು.

ವಕೀಲ ಬಂದನೆ ನೋಡು
ಪರಬ್ರಹ್ಮವಕೀಲ ಬಂದನೆ ನೋಡು
ಅಖಿಲ ಬ್ರಹ್ಮಾಂಡ ಕಾಯ್ವುವ
ಧೀರೊಕೀಲ ಬಂದನೆ ನೋಡು
ಕಾಮ ಕ್ರೋಧ ಲೋಭ ಮೋಹ
ಮದ ಮತ್ಸರದ ಖಟ್ಲೆ ಬಗೇರಿಸುವ ವಕೀಲ

-ನ್ಯಾಯ ವದಗಿಸಿಕೊಡುವ 'ವಕೀಲ' ಈ ಅನುಭಾವಿಯ ದೃಷ್ಟಿಯಲ್ಲಿ ದೇವರಾಗಿದ್ದಾನೆ. ಅನುಭಾವಿಯ ಈ ಗ್ರಹಿಕೆಯು ಸಹಜವಾಗಿದೆ. ಲೌಕಿಕದ ನೆಲೆಯಿಂದಲೇ ನೋಡಿ ಅನುಭಾವದ ನೆಲೆಯಲ್ಲಿ ಅರ್ಥೈಸಿರುವುದು ಕುತೂಹಲವಾಗಿದೆ. ಮನುಷ್ಯನನ್ನು ಬಂಧನದಲ್ಲಿರಿಸಿರುವ 'ಮೂರು, ಆರು, ಎಂಟು' ಎಂಬ ಗುಣಗಳಿಂದ ಬಿಡಿಸಲು ಈ ವಕೀಲ, 'ಪಂಚತತ್ವ ಹೈಕೋರ್ಟಿನಲ್ಲಿ ನ್ಯಾಯಮೂಡಿ 'ಪಾಸು ಆದನಲ್ಲ' ಎಂದಿದ್ದಾನೆ. ಮನುಷ್ಯನನ್ನು ಭವದ ದುಃಖದಿಂದ ಬಿಡುಗಡೆ ಮಾಡುವ ವಕೀಲನಾಗಿ 'ಭೀಮೇಶ'ನನ್ನು ಕಂಡಿದ್ದಾನೆ. 'ಕಬ್ಬಡಿ ಆಟ'ವನ್ನು ಕೂಡಾ ಈ ಅನುಭಾವಿ ಇದೇ ನೆಲೆಯಲ್ಲಿ ಗ್ರಹಿಸಿದ್ದಾನೆ.

ಜಮಾ ಮಾಡಿ ಇಕ್ಕೇರಿ ರೊಕ್ಕಾ
ನಾಳೆ ಸರಕಾರದವರು ಕೇಳುತ್ತಾರೋ ಲೆಕ್ಕ

-ನಿಡುವಂಚಿ ಭದ್ರೇಶ್ವರ ದೇವರನ್ನು ಸರಕಾರಕ್ಕೆ ಹೋಲಿಸಿದ್ದಾನೆ. ಭವದಲ್ಲಿ ಹುಟ್ಟಿದ ಮನುಷ್ಯ ತನ್ನ ಜೀವಿತ ಕಾಲದಲ್ಲಿ ಮಾಡಿದ ಪಾಪ-ಪುಣ್ಯಗಳ ಲೆಕ್ಕಾಚಾರವನ್ನು ಮಾಡಿಟ್ಟುಕೊಂಡಿರಬೇಕು. ಮಾಡಿದ ಪಾಪ-ಪುಣ್ಯಗಳ ಲೆಕ್ಕಾಚಾರ ನಡೆದು ಪುಣ್ಯ ಹೆಚ್ಚಾಗಿತ್ತೆಂದರ ಅದೇ ಧನಸಂಪತ್ತು, ಅದು ಅಳಿಯಲಾರದ ಸಂಪತ್ತು. ಇಂಥ ಸಂಪತ್ತಿನ ಗಳಿಕೆಯನ್ನು ಸರಕಾರ(ದೇವರು) ಬಂದು ನೋಡಿ ಮೆಚ್ಚುತ್ತದೆ. ನಿಜಮುಕ್ತಿಯ ಪದವಿಯನ್ನು ನೀಡುತ್ತದೆ ಎಂದು ಈ ಅನುಭಾವಿ ವ್ಯಕ್ತಪಡಿಸಿದ್ದಾನೆ. ಇಲ್ಲದಿದ್ದರೆ 'ನೋಟೀಸು' ಬರುತ್ತದೆ. ಅದು ಎಚ್ಚರಿಕೆಯ ನೋಟೀಸಾಗಿರುತ್ತದೆ. ಅದರ ಸೂಚನೆಯ ಮೇಲೆ ಮನುಷ್ಯನ ದಾರಿ (ಯಮಲೋಕಕ್ಕೋ, ದೇವಲೋಕಕ್ಕೋ) ನಿರ್ಧಾರವಾಗುತ್ತದೆ.

'ನೋಟೀಸು ಬರುತಾದೋ ಮಕ್ಕಳಿರಾ ನಿಮ್ಮ ಲುಟಾಸಿ ವೈತಾರೋ ಮಕ್ಕಳಿರಾ' ಎಂದು ಎಚ್ಚರಿಸುತ್ತಾನೆ, ನಿಡವಂಚಿ ಭದ್ರೇಶ್ವರ.

ಬೀದರ್ ಜಿಲ್ಲೆಯ ಅನುಭಾವಿ ಶಿಲ್ಲಪ್ಪ 'ಭವದ ಬಾಜಾರ' ಎಂಬ ತತ್ವಪದದಲ್ಲಿ ಆಧುನಿಕ ಲೋಕದ ಮೋಹವನ್ನು ಕುರಿತು ಹಾಡಿದ್ದಾನೆ.

ಬಟ್ಟೆ ತೊಟ್ಟೆನಿ ಚೆಸ್ಟರ್ ಮಲ್ ಮಲ್
ಕೋಟ ಖಮೀಸ ಮೈ ಒಳಗ
ಸೂಟ್ ಬೂಟ್ ಪಟ್ಲೋನ ನೆಕ್ಟಾಯ್
ಬೆಲ್ಟ ಕಟ್ಟಿದೇನ ಟೊಂಕಿನಾಗ
ಉಟ್ಟುಟ್ಟು ಬ್ಯಾಸರ ಆದೇನಲ್ಲ
ಮನಸಿನ ಆಪೇಕ್ಷ ತೀರೇ ಇಲ್ಲ

ಹಚ್ಚಿದ ನಾನು ಹೀನಾ ಚಮೇಲಿ
ಗುಲಾಬದೆಣ್ಣೆ ಕೂದಲಿಗ
ಕನ್ನಡಿ ನೋಡಿ ಬೇತಲ ತೀಡಿ
ಬರ ಬರಸಿ ತೊಳದೆ ಮಾರಿ ಮೂಗ
ತೊಳ ತೊಳದು ಬ್ಯಾಸರ ಆದೇನಲ್ಲ
ಒಳಗಿನ ವಾಸನೆ ಹೋಗಲೆ ಇಲ್ಲ

ಸಾಲಿ ಬರಿದ ನಾ ಕಾಲೇಜದೊಳಗ
ಮೇಲಾಗಿ ಮ್ಯಾಟ್ರಿಕ್ ಬಿ.ಎ.ದೊಳಗ
ಕನ್ನಡ ಮರಾಠಿ ಹಿಂದಿ ಅರಬ್ಬಿ
ಇಂಗ್ಲಿಷ್ ಮಾರ್ವಾಡಿ ತೆಲಗ
ಕಲಕಲ್ತು ಬ್ಯಾಸರಾದೇನಲ್ಲ
ಕಾಲೇಜ ವಿದ್ಯಾವು ಮುಗಿಯಲಿಲ್ಲ

'ಭವದ ಬಾಜಾರ'ದಲ್ಲಿ 'ಬಿರ್ಯಾನಿ' ಉಂಡರೂ, ಬಗೆ ಬಗೆಯ ಡ್ರೆಸ್ ಹಾಕಿಕೊಂಡರೂ, ಹಲವು ಭಾಷೆಯಲ್ಲಿ ಕಲಿತರೂ

ಮನಸ್ಸಿಗೆ ತೃಪ್ತಿಯಿಲ್ಲ. ಅನೇಕ ಸುಗಂಧ ದ್ರವ್ಯಗಳನ್ನು ಹಚ್ಚಿಕೊಂಡರೂ ಒಳಗಿನ ವಾಸನೆ ಮಾತ್ರ ಹೋಗಲಿಲ್ಲ. 'ಮುಲಜುಮ್, ಮುನಸುಫ್, ನಾಜುಮ್ ಎಂಬ ದೊಡ್ಡ ದೊಡ್ಡ ಅಧಿಕಾರ ಸ್ಥಾನವನ್ನು ಪಡೆದರೂ ದಾಹ ಮುಗಿಯಲಿಲ್ಲ. ಮುಂಬೈನಲ್ಲಿ 'ಬಿಲ್ಡಿಂಗ್ ' ಕಟ್ಟಿಸಿದರೂ, 'ಸ್ತ್ರೀಸಂಗ' ಮಾಡಿದರೂ ಮನಸಿನ ಆಸೆ ತೀರಲಿಲ್ಲ. ಕೊನೆಗೆ ತೀರ್ಥಯಾತ್ರೆ ಮಾಡಿದರೂ 'ಶಿವನು ಸಿಕ್ಕೇ ಇಲ್ಲ' ಎಂದಿದ್ದಾನೆ. ಭೋಗಸುಖ ಭವಲೋಕದಿಂದ ಪಡೆದು ಅನುಭವಿಸಿದರೂ ತೃಪ್ತಿಯಾಗಲಿಲ್ಲ ಎನ್ನುವ ಈ ಅನುಭಾವಿ ಲೌಕಿಕ ಸುಖ ನಿಜವಾದ ಸುಖವಲ್ಲ, ನಿಜ ಸುಖ ಬೇರೆ. ಲೌಕಿಕದ ಭೋಗ ಭೋಗವಲ್ಲ, ಪಾರಮಾರ್ಥದ ಸುಖವೇ ಮೇಲು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾನೆ. ಅಭಿವ್ಯಕ್ತಿಯ ಕ್ರಮದಲ್ಲಿ ಪ್ರಾದೇಶಿಕತೆಯಿದೆ. ತಾಂತ್ರಿಕವಾದ ಆಧುನಿಕ ಸಂವೇದನೆ ಈ ತತ್ವಪದದಲ್ಲಿದೆ. ಮನುಷ್ಯನ ಅಪೇಕ್ಷೆಗಳು, ದಾಹ ಎಷ್ಟು ಬಗೆಯದ್ದು ಎಂಬುದು ವ್ಯಕ್ತವಾಗುತ್ತದೆ. ಇಂಥ ದಾಹದಿಂದಲೇ ಆಧುನಿಕ ಮನುಷ್ಯನಲ್ಲಿ ಅನೈತಿಕತೆ, ಭ್ರಷ್ಟಾಚಾರ, ಅಧಿಕಾರದ ಮೋಹಗಳು ಹೆಚ್ಚಾಗಿ ದೇಶ ಅಧೋಗತಿಯ ಹಾದಿ ಹಿಡಿದಿರುವುದು ಎಂಬ ಸೂಕ್ಷ್ಮ ಭಾವ ಇದರಲ್ಲಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದುಡಿಯುವ ಕೆಳವರ್ಗದ ಮಹಿಳೆಯ ವಸ್ತುಸ್ಥಿತಿಯನ್ನೂ ಶಿಲ್ಲಪ್ಪ ಸರಿಯಾಗಿ ಗ್ರಹಿಸಿದ್ದಾನೆ. ಈ ಪ್ರದೇಶದಲ್ಲಿ ದುಡಿಯುವ ವರ್ಗಗಳಲ್ಲಿ ಪುರುಷನಿಗಿಂತ ಮಹಿಳೆಯೇ ಶಕ್ತಳು. ಮನೆಯಲ್ಲಿ ದುಡಿಯಬೇಕು. ಮನೆಯ ಹೊರಗೆ ದುಡಿಯಬೇಕು. ಸಂಸಾರವನ್ನು ನಡೆಸುವವಳೇ ಹೆಂಗಸು. ಪುರುಷನಿಗಿಂತ ಹೆಚ್ಚು ದುಡಿದು ಸಂಪಾದಿಸಿದರೂ ಅವಳು ಪರಾವಲಂಬಿಯಾಗೇ ಇದ್ದಾಳೆ. ಕೆಳವರ್ಗದಲ್ಲಿ ಮಹಿಳೆ ಮೇಲ್ವರ್ಗದವರ ದಬ್ಬಾಳಿಕೆಗೆ ಒಳಗಾದರೂ ಬದುಕುವ ಛಲ ಹೊಂದಿದವಳು. ಬದುಕು ಕೆಡಿಸುವ ಶಕ್ತಿಗಳ ಮುಂದೆಯೇ ಬದುಕನ್ನು ಕಟ್ಟಿಕೊಂಡು ನಿಲ್ಲುವ ಎದೆಗಾರಿಕೆ ಈ ಪ್ರದೇಶದ ಮಹಿಳೆಯರಿಗಿದೆ. ಬದುಕಿಗಿಂತ ಶೀಲ ದೊಡ್ಡದಲ್ಲ ಎಂದು ನಂಬಿ ನಿಂತವರು. ಇಂಥ ಮಹಿಳೆಯ ಚಿತ್ರಣವನ್ನು, ಈ ಭಾಗದ ಆಧುನಿಕ ಕತೆಗಾರರು ಚಿತ್ರಿಸಿದ್ದಾರೆ. ಶಾಂತರಸ, ನೀರಮಾನ್ವಿ, ರಾಜಪುರೋಹಿತ, ಗೀತಾ ನಾಗಭೂಷಣ ಮುಂತಾದ ಹಿರಿಯರ ಕಥೆಗಳಲ್ಲಿಯೂ ಮೂಡಿ ನಿಂತಿದ್ದಾರೆ. ಈಚೆಗೆ ಬರೆಯುವ ಕಥೆಗಾರರಲ್ಲಿ ಈ ಪ್ರದೇಶದ ದುಡಿಯುವ ಮಹಿಳೆಯ ಕಥೆಯನ್ನು ಮುಂದುವರೆಸಿದ್ದಾರೆ. 'ಗಂಡುಚಾತಿ' ಎನ್ನುವ ಪದದಲ್ಲಿ,

> ಎಷ್ಟು ತಂದು ಹಾಕಲೆವ್ವಾ ಕೂಲಿ ಮಾಡಿ
> ಕಷ್ಟ ಏನು ಮಾಡೆವಲ್ಲ ಮುಗ್ಗಲಗೇಡಿ
> ಇಷ್ಟೇ ಇದ್ದರೆ ಇರಲಿಯೆಂದು ಮನಕ ಚೋಡಿ
> ಉಂಡು ಸುಮನೆ ಕೂಡವಲ್ಲ ಕುಲಗೇಡಿ (ಶಿಲ್ಲಪ್ಪ)

ಹೆಂಡತಿಯೇ ದುಡಿದು ತಂದು ಹಾಕಬೇಕು. ತಂದು ಹಾಕಲು ಹೆಂಡತಿ ಸಿದ್ಧಳಿದ್ದಾಳೆ. ಆದರೆ ಈ ಗಂಡ ತಿಂದು ಸುಮ್ಮನಿರುವುದಿಲ್ಲ. ಅನೇಕ ಕಾರಣಗಳಿಗೆ ಕಿರುಕುಳ ಕೊಡುತ್ತಿರುತ್ತಾನೆ. ಇಷ್ಟಿದ್ದರೂ ಈ ಹೆಣ್ಣಿಗೆ ಬೇಕು 'ಮನಕೆ ಜೋಡಿ'ಯಾಗಿ ಇದೇ ಗಂಡು. ಯಾಕೆಂದರೆ ಹೆಣ್ಣಿಗೆ ಜೊತೆಯಾಗಿ 'ಗಂಡ' ಎಂಬುವವನು ಅನಿವಾರ್ಯವಾಗಿ ಬೇಕು. ಇದು ಮಹಿಳೆಯ ವಾಸ್ತವ ಸ್ಥಿತಿ. ಈ ವಾಸ್ತವವನ್ನು ಶಿಲ್ಲಪ್ಪ ಸರಿಯಾಗಿ ಗ್ರಹಿಸಿದ್ದಾನೆ. ಇಂಥ ಸ್ಥಿತಿಯ ಚಿತ್ರಣವು ಆಧುನಿಕ ಕತೆ-ಕಾದಂಬರಿಗಳಲ್ಲಿ ಮುಂದುವರೆದಿದೆ.

'ಬಂಡಿ ಹೊಡೆಯುವವರೆಲ್ಲ ಹುಂಡ್ಯಾ ಬೇಡುವವರಲ್ಲ' -ಎಂದು ವರದಕ್ಷಿಣೆಯ ಪಿಡುಗಿನ ಬಗ್ಗೆ ಶಿಲ್ಲಪ್ಪ ಹಾಡಿದ್ದಾನೆ.

'ಮನಿಯ ಹೊಲವ ಮಾರಾಟ ಮಾಡಿ ಮಗಳಿಗೆ ಕೊಟ್ಟು ಮದವಿಯ ಮಾಡಿ ಇನ್ನೇನು ಉಳಿಯಲಿಲ್ಲ ಭಿಕ್ಷಾ ಬೇಡೋದೆ ಬಂತು' ಎಂದು ಹೆಣ್ಣು ಹೆತ್ತವರ ಬಗ್ಗೆ ವ್ಯಥೆಪಟ್ಟಿದ್ದಾನೆ. 'ಕೊಡುವುದು ತೊಕೊಳ್ಳದು ಖಂಡಿತ ಬಿಡರಿ ವರವಿದ್ದರೆ ಕುಲ

ಏಣೆಸ್ಮಾಡಬೇಡರಿ' ಎಂದು ಸೂಚಿಸಿದ್ದಾನೆ. ಜನಸಂಖ್ಯೆ, ನಿರುದ್ಯೋಗ, ನಿರುದ್ಯೋಗದಿಂದ ಉಂಟಾಗುವ ಸಾಮಾಜಿಕ ಸಮಸ್ಯೆಗಳು, ಕುಟುಂಬ ಯೋಜನೆ, ಪಟ್ಟಣದ ಮೋಹ ಮುಂತಾದ ಆಧುನಿಕ ಕಾಲದ ಅನೇಕ ಸಮಸ್ಯೆಗಳು ಈ ಅನುಭಾವಿಯನ್ನು ಕಾಡಿವೆ. ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಯ ಕಾಲದಲ್ಲಿ ಭಾರತವನ್ನು ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆಗೊಳಿಸುವ ಉದ್ದೇಶವೇ ಪ್ರಧಾನವಾಗಿತ್ತು. 'ಭಾರತೀಯತೆ', 'ರಾಷ್ಟ್ರೀಯತೆ'ಗಳ ಪ್ರಜ್ಞೆಯನ್ನು ಜನರಲ್ಲಿ ಮೂಡಿಸಲಾಯಿತು. ಇದು ಶಿಲ್ಲಪ್ಪ ತತ್ವಪದಕಾರನ ಮೇಲೆ ಪ್ರಭಾವ ಬೀರಿದೆ. ಭಾರತವನ್ನು ಬ್ರಿಟಿಷರ ವಶದಿಂದ ಬಿಡಿಸುವ ಶಕ್ತಿಯನ್ನು 'ಕಾಂಗ್ರೆಸ್' ಹೊಂದಿದೆ. ಅದಕ್ಕೆ ಗಾಂಧಿ, ನೆಹರೂ ಅಂಥವರಿಂದ ಬಲಬಂದಿದೆ. 'ಖಾದಿ' 'ಚರಕ' ಮುಂತಾದವು ಮೌಲ್ಯಗಳಾಗಿ ನಿಂತಿವೆ. ಮುಂತಾದ ವಿಷಯಗಳು ಶಿಲ್ಲಪ್ಪನನ್ನು ಚಿಂತನೆಗೆ ಗುರಿಮಾಡಿವೆ. 'ಕಾಂಗ್ರೆಸ್ ತಾಯಿ' ಎಂಬ ಕವಿತೆ ಸೂಚಿಸುವಂತೆ ಭಾರತವನ್ನು ದಾಸ್ಯದಿಂದ ಬಿಡುಗಡೆ ಮಾಡಿ ಭಾರತೀಯರನ್ನು ಸಲಹುವ ತಾಯಿಯಾಗಿ ಕಾಂಗ್ರೆಸ್ ಕಂಡಿದೆ. ಅಷ್ಟೇ ಅಲ್ಲ 'ಕಾಂಗ್ರೆಸ್' ಹಳ್ಳಿ ಹಳ್ಳಿಗೆ ರಸ್ತೆ, ಶಾಲೆ, ಗಿರಣಿ, ವಾಹನಗಳನ್ನು ತಂದಿದೆ. 'ನಮ್ಮತನ'ದ ಸಂಕೇತವಾಗಿ ಖಾದಿ ಪರಿಣಮಿಸಿದ್ದರಿಂದ ಶಿಲ್ಲಪ್ಪ 'ಖಾದಿ ಭಂಡಾರಕ ಹೋಗಾನು ಬರ್ರೆ' ಎಂದು ಊರುಕೇರಿಯ ಜನರನ್ನು 'ಖಾದಿ ಭಂಡಾರ'ಕ್ಕೆ ಕರೆಯುತ್ತಾನೆ. ಪರದೇಶಿ ಉಡುಪು ತೊರೆದು 'ನಮ್ಮ' ಖಾದಿ ಉಡಲು ಸೂಚಿಸುತ್ತಾನೆ. 'ಪಂದ್ರ ಆಗಸ್ಟ್' ಎನ್ನುವ ಪದವನ್ನು ಬರೆದಿದ್ದಾನೆ. ಶಿಲ್ಲಪ್ಪನ ನೆಲೆ ನೈಜಾಂ ಆಳ್ವಿಕೆಗೆ ಸೇರಿದ್ದರೂ, ಈ ಕವಿತೆಯನ್ನು ಬರೆದಿರುವುದು ವಿಚಿತ್ರವೆನಿಸುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು ನಿಜ. ಶಿಲ್ಲಪ ಬದುಕುವ ನೆಲಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ. 'ಪಂದ್ರ ಆಗಸ್ಟ್' ದಿನ ಧ್ವಜ ಹಾರಿಸಿದರೆ ನಿಜಾಮನ ಒದೆ ತಿನ್ನಬೇಕಾಗಿತ್ತು. ನಿಜಾಮರ-ರಜಾಕಾರರ ಕ್ರೂರ ದೃಷ್ಟಿ ಎಲ್ಲರ ಮೇಲಿತ್ತು. ಇಂಥ ತಲ್ಲಣಗಳನ್ನು ಗ್ರಹಿಸದೆ ಶಿಲ್ಲಪ್ಪ ಭಾರತದ ಸ್ವತಂತ್ರ್ಯೋತ್ಸವದ ಬಗ್ಗೆ ಬರೆದಿರುವುದು ವೈರುಧ್ಯವೇ ಸರಿ. ರಾಷ್ಟ್ರೀಯ ಪ್ರಜ್ಞೆ ಅಥವಾ ರಾಷ್ಟ್ರೀಯವಾದ ಕಲ್ಪನೆಯು ಸ್ಥಳೀಯ ಬಿಕ್ಕಟ್ಟುಗಳನ್ನು, ಆತಂಕಗಳನ್ನು ಮರೆಯುವಂತೆ ಮಾಡಿತು. ಕರ್ನಾಟಕದ ಮೂರನೆಯ ಜಗತ್ತು ಎಂದೇ ಕರೆಸಿಕೊಳ್ಳುವ ಹೈದರಾಬಾದ್ ಕರ್ನಾಟಕ ಪ್ರದೇಶದ ಅದರಲ್ಲೂ ಬೀದರ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಜೀವಿಸಿದ ಅನುಭಾವಿ ಶಿಲ್ಲಪ್ಪ, ಸ್ಥಳೀಯ ಸಮಸ್ಯೆಗಳನ್ನು ಬದಿಗಿರಿಸಿ ರಾಷ್ಟ್ರರಾಜಕಾರಣದ ವಿದ್ಯಮಾನಗಳಿಗೆ ಸ್ಪಂದಿಸಿರುವುದು ವಿಶೇಷವೇ ಸರಿ. ಯಾಕೆಂದರೆ ಪಕ್ಕದಲ್ಲೇ ಇರಲಿ, ದೂರದಲ್ಲೇ ಇರಲಿ ಸಾಮಾಜಿಕ, ರಾಜಕೀಯ, ಆರ್ಥಿಕ ಬಿಕ್ಕಟ್ಟುಗಳ ಜತೆ ಮುಖಾಮುಖಿಯಾಗಿದ್ದಾನೆ ಎಂಬುದೇ ಮುಖ್ಯವಾಗುತ್ತದೆ.

ಆದರೆ ತಮ್ಮ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಷಯಗಳಿಗೆ ಮುಖಾಮುಖಿಯಾಗದ ಅನೇಕ ತತ್ವಪದಕಾರರಿದ್ದಾರೆ. ವೆಂಕಟಾಪುರ ಖೇಮಣ್ಣ, ಆದಿ ಅಮಾತ್ಯಪ್ಪ, ಗಬ್ಬೂರು ಹಂಪಣ್ಣ, ಘನಮಠದಪ್ಪ, ಹೇರೂರು ವಿರುಪನಗೌಡ, ನೀರಲಕೇರಿ ಬಸವಲಿಂಗ ಶರಣ ಮುಂತಾದವರು ಸಾಮಾಜಿಕ, ರಾಜಕೀಯ, ಧಾರ್ಮಿಕ ವಿದ್ಯಮಾನಗಳ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ. ಈ ಪ್ರಶ್ನೆ ಏಳಲು ಕಾರಣವೆಂದರೆ ಇವರ ಸಮಕಾಲೀನರಾದ ಕಡಕೋಳ ಮಡಿವಾಳಪ್ಪ, ಮೋಟ್ನಹಳ್ಳಿ ಹಸನಸಾಹೇಬ, ಚನ್ನೂರ ಜಲಾಲಸಾಹೇಬ, ರಾಮಪುರ ಬಕ್ಕಪ್ಪಯ್ಯ ಮುಂತಾದವರು ಸಮಾಜದ ಅನೇಕ ಸಂಗತಿಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಇದು ಹೇಗೆ ಸಾಧ್ಯವಾಯಿತು? ಖೇಮಣ್ಣ, ಅಮಾತ್ಯಪ್ಪ, ಹಂಪಣ್ಣ, ಘನಮಠದಪ್ಪ, ವಿರುಪನಗೌಡ, ಬಸಲಿಂಗ ಶರಣ, ಚಿದಾನಂದ ಅವಧೂತ ಮುಂತಾದವರ ತತ್ವಪದಗಳಲ್ಲಿ ಗುರುಸ್ಮರಣೆ, ಸತಿಪತಿಭಾವ, ಬೆಡಗು, ಲೋಕನೀತಿ ಅಲ್ಪಸ್ವಲ್ಪ ವಿಡಂಬನೆ ಬಿಟ್ಟರೆ ಸಮಕಾಲೀನ ಸಂಘರ್ಷಗಳ, ಸಾಂಸ್ಕೃತಿಕ ತಲ್ಲಣಗಳ ಹಾಜರಾತಿ ಇಲ್ಲ. ಇದಕ್ಕೆ ಕಾರಣ ಆಧ್ಯಾತ್ಮ, ಅನುಭಾವ ಬಿಟ್ಟು ಉಳಿದನ್ನು ಉಪೇಕ್ಷಿಸಿದ್ದಾರೆಯೇ? ಅಥವಾ ಅವರವರ ಪರಿಸರ, ವ್ಯಕ್ತಿತ್ವವು ಕಾರಣವಾಗಿರಬಹುದೇ? ಈ ತತ್ವಪದಕಾರರ ಸಾಹಿತ್ಯ ಮೌಖಿಕವಾಗಿರುವುದರಿಂದ ಸಂಗ್ರಹಕಾರರ ಮನೋಭಾವವೂ ಏನಾದರೂ ಕಾರಣವಾಗಿರಬಹುದೆ? ಯಾಕೆಂದರೆ ಸಂಗ್ರಹಕಾರರು ಇವರ ತತ್ವಪದಗಳ ಕೃತಿಗಳಿಗೆ ಕರೆದಿರುವ ಹೆಸರುಗಳನ್ನು ಗಮನಿಸಿದರೆ, ಕೇವಲ ಧಾರ್ಮಿಕ ಭಾವನೆಯಿಂದ ಸಂಗ್ರಹಿಸಿರುವುದು

ಸ್ಪಷ್ಟವಾಗುತ್ತದೆ. 'ಜ್ಞಾನಗೀತೆ' (ನೀರಲಕೇರಿ ಬಸವಲಿಂಗ ಶರಣ), 'ಕೈವಲ್ಯ ತತ್ವಪದಗಳು'(ಹೆರೂರು ವಿರುಪನಗೌಡ), 'ಕೈವಲ್ಯ ನವನೀತ' (ಆದಿ ಅಮಾತ್ಯಪ್ಪ), 'ಭಕ್ತಿ ಸುಧಾಸಾರ'(ಘನಮಠೇಶ್ವರ) 'ಕೈವಲ್ಯ ಕೈದೀವಿಗೆ' (ಗಬ್ಬೂರು ಹಂಪಣ್ಣ), 'ಕೈವಲ್ಯ ಸಾರಾಮೃತವು' (ಖೇಮಣ್ಣ), 'ಅಮೃತ ಶಿಖಾಮಣಿ'(ವಡಕಿ ತಾತಪ್ಪಯ್ಯ) 'ಕೈವಲ್ಯ ಕಲ್ಪದ್ರುಮ'(ರಸ್ತಾಪುರ ಭೀಮಕವಿ) 'ತತ್ವಾನುಬೋಧೆ'(ಗುರುವರೇಣ್ಯ ಶರಣ) 'ಸದ್ಬೋಧಾಮೃತ'(ಸಿದ್ಧರಾಮ ಶಿವಯೋಗಿ) ಮುಂತಾದ ಹೆಸರುಗಳಿಂದ ಇವರ ರಚನೆಗಳನ್ನು ಪ್ರಕಟಿಸಲಾಗಿದೆ. ಕೆಲವರ ಕೃತಿಗಳಿಗೆ ಅವರ ಹೆಸರಿನ ಅನುಭಾವ ಪದಗಳು, ಭಜನೆ ಹಾಡುಗಳು ಮತ್ತು ಮುಕ್ತಿ ಮಂಜರಿ ಇತ್ಯಾದಿಯಾಗಿಯೂ ಕರೆಯಲಾಗಿದೆ. ತತ್ವಪದಗಳು ಈಚೆಗೆ ವಿದ್ವಾಂಸರ ಆಸಕ್ತಿಗೆ ಕಾರಣವಾಗಿ 'ಸ್ವರವಚನಗಳು' ಎಂದು ಸಂಗ್ರಹವಾಗುತ್ತಿವೆ. ಇವನ್ನು ಮುಖ್ಯವಾಗಿ 'ಅನುಭಾವ ಸಾಹಿತ್ಯ', 'ಕೈವಲ್ಯ ಸಾಹಿತ್ಯ' ಎಂದೇ ಗುರುತಿಸಲಾಗಿದೆ. ಮುಕ್ತಿಗೆ ದಾರಿ ಮಾಡಿಕೊಡುವ ಸಾಹಿತ್ಯವಾಗಿ ಈ ತತ್ವಪದಗಳನ್ನು ನೋಡಿರುವುದರಿಂದ ಈ ಉದ್ದೇಶಕ್ಕೆ ಹೊಂದುವ ಪದಗಳನ್ನು ಮಾತ್ರ ಸಂಗ್ರಹಗಳಿಗೆ ಸೇರಿಸಿರುವುದು ಸ್ಪಷ್ಟವಾಗಿದೆ. ಈ ತತ್ವಪದಕಾರರನ್ನು 'ಶಿವಯೋಗಿ'ಗಳೆಂದೇ ಕರೆದಿರುವುದು ಇದಕ್ಕೆ ಪೂರಕವಾಗಿದೆ. ನಿಜಗುಣ ಶಿವಯೋಗಿ, ಘನಮಠದ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ನೀರಲಕೇರಿ ಬಸವಲಿಂಗ ಶರಣ, ಮೈಲಾರ ಬಸವಲಿಂಗ ಶರಣ, ಕೂಡಲೂರು ಬಸವಲಿಂಗ ಶರಣ ಎಂದು ಕರೆದಿರುವುದಕ್ಕೆ ಸಂಗ್ರಹಕಾರರ ಭಕ್ತಿಯೇ ಕಾರಣವಾಗಿದೆ.

ಆದರೆ ತತ್ವಪದಕಾರರ ಧ್ಯೇಯೋದ್ದೇಶಗಳನ್ನು ನೋಡಿದರೆ, ಅವರ ವ್ಯಕ್ತಿತ್ವವನ್ನು ಅರಿತರೆ, ಅವರ ಪರಂಪರೆಯನ್ನು ಗಮನಿಸಿದರೆ ಕೇವಲ ಧಾರ್ಮಿಕ ಮನೋಭಾವದ, ಭಕ್ತಿಯಂಥ ಏಕಮುಖ ವ್ಯಕ್ತಿತ್ವದವರಾಗಿ ಕಾಣುವುದಿಲ್ಲ. ಬಹುಮುಖಿ ವ್ಯಕ್ತಿತ್ವ ಉಳ್ಳವರಾಗಿ ಕಾಣುತ್ತಾರೆ. ಸಮಾಜ ಸುಧಾರಕರಾಗಿ ಈ ತತ್ವಪದಕಾರರು ಮುಖ್ಯರಾಗಿದ್ದಾರೆ. ಮಡಿವಾಳಪ್ಪ, ಬಕ್ಕಪ್ಪಯ್ಯ, ಬಸಲಿಂಗಪ್ಪ, ಕೃಷ್ಣಪ್ಪ, ಹಸನಸಾಹೇಬ ಮುಂತಾದವರು ಮಡಿವಂತಿಕೆಯನ್ನು ಮೀರಿ ಪದಪ್ರಯೋಗಗಳನ್ನು ಮಾಡಿದ್ದಾರೆ. ಡಾ.ಎಂ.ಎಸ್.ಲಠ್ಠೆಯವರು ಮಾತ್ರ ದಿಟ್ಟತನದಿಂದ ಕಡಕೋಳ ಮಡಿವಾಳಪ್ಪನ ಇಂಥ ತತ್ವಪದಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಮಡಿವಾಳಪ್ಪ ಬಳಸದ ಶಬ್ದಗಳಿಲ್ಲ. ಮಡಿವಾಳಪ್ಪನ ಸಾಮಾಜಿಕ ಕಾಳಜಿ ಅಪಾರವಾದದ್ದು. ಈತನ ಶಿಷ್ಯರಾದ ಖೈನೂರು ಕೃಷ್ಣಪ್ಪ, ಕಡ್ಲೆವಾಡದ ಸಿದ್ಧಪ್ಪ, ಗಂವಾರ ಶಾಸ್ತ್ರಿ, ಬಿದನೂರ ಗಂಗಮ್ಮ ಮುಂತಾದವರ ಈಗ ಸಿಕ್ಕಿರುವ ಕೆಲವೇ ಕೆಲವು ತತ್ವಪದಗಳನ್ನು ಗಮನಿಸಿದರೆ ಇವರೆಲ್ಲ ಮಡಿವಾಳಪ್ಪನ ಹಾದಿಯಲ್ಲಿದ್ದಾರೆ ಎನಿಸುತ್ತದೆ. ಇವರ ತತ್ವಪದಗಳ ಸಂಗ್ರಹ ಇನ್ನೂ ನಡೆಯಬೇಕಾಗಿದೆ.

ವಿಶೇಷ ಮತ್ತು ಕುತೂಹಲದ ಸಂಗತಿಯೆಂದರೆ ಈ ಶತಮಾನದಲ್ಲಿಯೂ ಮತ್ತು ಈ ಹೊತ್ತಿನವರೆಗೂ ಬದುಕಿರುವ ತತ್ವಪದಕಾರರಿದ್ದಾರೆ. ಹೆಸರಿಸಬೇಕೆಂದರೆ ಯರಮಾರೆಪ್ಪ(ಜ.೧೯೨೫), ಮಂಜರ್ಲಾ ಖಾದರ್ ಸಾಬ(೧೯೩೦-೧೯೭೫), ಜಹಿರಾಬಾದ ತಿಪ್ಪಣ್ಣತಾತ(ಜ.೧೯೪೦), ಹೊಸೂರು ತಿಪ್ಪಣ್ಣ(ಜ.೧೯೪೩), ಕಲ್ಮಾಲದ ತಾಯಣ್ಣ(೧೯೬೩-೧೯೮೦), ತಳವಾರಗೇರಿ ಬಸವನಗೌಡ(೧೮೬೦-೧೯೪೦), ಧಂಗಾಪುರ ಬಸವಣ್ಣೆಪ್ಪ(೧೮೯೦-೧೯೭೦), ರಸ್ತಾಪುರ ಭೀಮಕವಿ(೧೮೭೭-೧೯೪೭) ದೇವಿಕೇರಿ ರೇವಯ್ಯ(೧೮೮೭-೧೯೬೭) ನಿಂಬೋಳಿ ತಿಪ್ಪಣ್ಣ ಮಾಸ್ತಾರ(೧೯೨೨-೧೯೮೩) ಸಲ್ಗರದ ಲಕ್ಷ್ಮಣ(೧೯೧೩-೧೯೭೩) ಕೋನಾಪುರದ ರಾಮಣ್ಣ(೧೯೧೦-೧೯೭೫) ನರೋಣಾದ ಸಾಯಿಬಣ್ಣ(೧೯೦೫-೧೯೭೦) ದೇಗಾವಿ ಹಜರತ್ ಸಾಹೇಬ(೧೯೦೩-೧೯೬೦) ಮುಂತಾದವರು. ಇವರ ತತ್ವಪದಗಳು ಸಂಗ್ರಹವಾಗಿಲ್ಲ. ಕೆಲವರ ಅಲ್ಪಸ್ವಲ್ಪ ಪದಗಳು ಸಂಗ್ರಹವಾಗಿವೆ. ಆದರೆ ಈ ಭಾಗದಲ್ಲಿ ಇವರ ತತ್ವಪದಗಳು ಸ್ಥಳೀಯ ಭಜನಾ ಮೇಳಗಳಲ್ಲಿ ಹಾಡಲಾಗುತ್ತಿದೆ. ಭಜನಾ ಮೇಳಗಳಲ್ಲಿ ಇವರು ಚಲಸೆಯಲ್ಲಿದ್ದಾರೆ. ರಾಯಚೂರು ನಗರದ ಮಂಗಳವಾರ ಪೇಟೆಯ ಸರಕಾರಿ ಶಾಲೆಯಲ್ಲಿ ಶಿಕ್ಷಕರಾಗಿರುವ ಜಹಿರಾಬಾದ ತಿಪ್ಪಣ್ಣ ತಾತ(ಜನನ ೧೯೪೦)ನ 'ನಾದವು ಸಿಗದಮ್ಮ ತಂಗಿ ನಾದವು ಸಿಗದಮ್ಮ' ಎಂದು ಪ್ರಾರಂಭವಾಗುವ

ಮಂಜಿನ ಚೆಟ್ಟಮ್ಮ ತಂಗಿ
ಹತ್ತಲು ಬಾರದಮ್ಮ ತಂಗಿ
ಹತ್ತುವ ಅನುವು ತಿಳಿದು ಪಾಶ ಭಯವ ಹರಿದು

ಊರಿಗೆ ಹೋಗಿ ಸೇರಿಕೊಳ್ಳಮ್ಮ ತಂಗಿ -ಈ ಪದದಲ್ಲಿ ಅನುಭಾವದ ಲಕ್ಷಣಗಳಿವೆ. ಇಂಥ ತತ್ವಪದಗಳನ್ನು ಬರೆಯುವವರು ಈಗಲೂ ಇದ್ದಾರೆ. ಈ ಭಾಗದಲ್ಲಿ ತತ್ವಪದಕಾರರ ಪ್ರಭಾವ-ಪ್ರೇರಣೆ ಎಷ್ಟಿರಬಹುದೆಂದು ಇದರಿಂದ ಊಹಿಸಬಹುದು. ಇವರನ್ನು ಆಧುನಿಕ ತತ್ವಪದಕಾರರೆಂದು ಕರೆಯಬಹುದೇ?

ಆದರೆ ಈ ಶತಮಾನದ ಮಧ್ಯಭಾಗದಲ್ಲಿ(೧೯೪೭-೧೯೪೮) ಘಟಿಸಿದ ರಜಾಕಾರರ ದಾಳಿಯನ್ನು ಕುರಿತು ಈ ತತ್ವಪದಕಾರರು ಯಾರೂ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ. ಇದು ಸೋಜಿಗದ ಸಂಗತಿ ಎನಿಸುತ್ತದೆ. ರಜಾಕಾರರ ದಾಳಿಗೆ ಜನಸಮುದಾಯಗಳೇ ತಲ್ಲಣಗೊಂಡಿವೆ. ಹಿಂಸೆ, ದರೋಡೆ, ಅತ್ಯಾಚಾರ ಮತ್ತು ಅಸಂಖ್ಯಾತರ ಕೊಲೆಗಳು ನಡೆದಿವೆ. ಹೈದರಾಬಾದ್ ಕರ್ನಾಟಕದಲ್ಲಿ ರಜಾಕಾರರ ದಾಳಿಗೆ ಬೇಸತ್ತು ಲಕ್ಷಾಂತರ ಜನ ಬೇರೆ ಕಡೆಗೆ ವಲಸೆ ಹೋಗಿದ್ದಾರೆ. ರಜಾಕಾರರನ್ನು ಎದುರಿಸಲು ಇಲ್ಲಿಯ ಜನ ಯುದ್ಧವನ್ನೇ ಮಾಡಿದ್ದಾರೆ. ಇಷ್ಟಾದರೂ ಇದರ ಬಗ್ಗೆ ಯಾವ ತತ್ವಪದಕಾರ ಪದಕಟ್ಟಿ ಹಾಡಿಲ್ಲ. ಆಶ್ಚರ್ಯವೆಂದರೆ ನಿಡವಂಚಿ ಭದ್ರೇಶ್ವರ ತನ್ನ ಜೀವಿತ ಕಾಲದಲ್ಲಿ ರಜಾಕಾರರ ದಾಳಿಗೆ ಸಿಕ್ಕು ಕೊಲೆಯಾಗುವ ಒಬ್ಬ ವ್ಯಕ್ತಿಯನ್ನು ಅಡಗಿಸಿಟ್ಟು ರಕ್ಷಿಸಿದ ಘಟನೆ ನಡೆದಿದ್ದರೂ ಹಾಡಿನ ಮೂಲಕ ಪ್ರತಿಕ್ರಿಯಿಸಿಲ್ಲ. ಈ ತತ್ವಪದಕಾರನೂ ಜೆ.ಪಿ.ಚಳುವಳಿ, ತುರ್ತುಪರಿಸ್ಥಿತಿ, ಭೂಸುಧಾರಣೆ ಹಾಗೂ ರಾಜಕೀಯ ಏರುಪೇರುಗಳನ್ನು ಕಂಡವರಿದ್ದಾರೆ. ಆದರೆ ಇವರಾರೂ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿದ್ಯಮಾನಗಳ ಕಡೆ ಗಮನಹರಿಸಿಲ್ಲ. ಕೇವಲ ಆಧ್ಯಾತ್ಮದ ಕಡೆ ಒಲವಿರಿಸಿಕೊಂಡು ಉಳಿದದ್ದನ್ನು ಉಪೇಕ್ಷಿಸಿರಬೇಕು.

ಮುಸ್ಲಿಂ ತತ್ವಪದಕಾರರು

ಹೈದರಾಬಾದ್ ಕರ್ನಾಟಕದಲ್ಲಿ ದೀರ್ಘಾವಧಿ ಕಾಲದಿಂದ 'ಹಿಂದು-ಮುಸ್ಲಿಂ' ಎರಡು ಸಮುದಾಯಗಳು ಕೂಡಿ ಬಾಳುತ್ತ ನಡೆದಿವೆ. ಎರಡು ಸಂಸ್ಕೃತಿಗಳ ನಡುವೆ ಸಂಘರ್ಷಗಳು-ಸಾಮರಸ್ಯಗಳು ಏರ್ಪಟ್ಟಿವೆ. ಸೂಫಿಗಳು, ತತ್ವಪದಕಾರರು ಈ ಭಾಗದ ಜನ ಸಮುದಾಯಗಳಿಗೆ ಬದುಕುವ ದಾರಿಯನ್ನು ತೋರಿಸುತ್ತಲೇ ಬಂದಿದ್ದಾರೆ. ಅನ್ಯರ ಪ್ರಭಾವಗಳಿಂದ, ಅನೇಕ ಭಾಷೆಗಳಿಂದ ಹೈದರಾಬಾದ್ ಕರ್ನಾಟಕದ ಸಂಸ್ಕೃತಿ ಒಂದು ಸಂಕರ ಸಂಸ್ಕೃತಿಯಾಗಿ ರೂಪಗೊಂಡಿದೆ. ಈ ಭಾಗದಲ್ಲಿ ಒಡೆದು ಕಾಣುವಂತೆ 'ಮುಸ್ಲಿಮ್' ತತ್ವಪದಕಾರರು ಅನೇಕರಿದ್ದಾರೆ. ಚನ್ನೂರ ಜಲಾಲಾ ಸಾಹೇಬ(೧೭೮೦-೧೮೫೦), ಮೋಟ್ನಹಳ್ಳಿ ಹಸನಸಾಹೇಬ (೧೮೫೫-೧೯೧೫), ಕೋಹಿನೂರ ಹಸನ(೧೮೭೪-೧೯೬೪), ದೇಗಾವಿ ಹಜರತ್ ಸಾಹೇಬ(೧೮೯೭-೧೯೮೦), ಸಯ್ಯದ ಶಾಹಾ ಲಾಡ್ಲೆ ಹುಸೇನಿ, ಮಹಾಗಾಂವದ ಮೀರಾಸಾಹೇಬ(ಜ:೧೯೧೭), ಮಂಜರ್ಲಾ ಖಾದರಸಾಬ(೧೯೩೦-೧೯೭೫), ಅರವಲಿ ಬಿಜಲಿ ವಸ್ತಾದಿ(೧೯೩೦-೧೯೦೦), ಸಾವಳಗಿ ಮಹಮ್ಮದ ಹುಸೇನರು(೧೯೧೭-೧೯೮೭) ಮುಂತಾದವರಿದ್ದಾರೆ. ಈ ಎಲ್ಲ ತತ್ವಪದಕಾರರ ತತ್ವಪದಗಳನ್ನು ಅವರವರು ನೆಲೆಗೊಂಡ ಊರುಗಳಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಸಕ್ತರು ಮತ್ತು ಭಜನೆಗಳಲ್ಲಿ ಹಾಡುತ್ತಾರೆ. ಮಂಜರ್ಲಾ ಖಾದರ ಸಾಬನಿಗೆ 'ಸಿದ್ಧರಾಮಸ್ವಾಮಿ' ಗುರುವಾಗಿದ್ದ. ಚನ್ನೂರು ಜಲಾಲ ಸಾಹೇಬನಿಗೆ, ಮೋಟ್ನಹಳ್ಳಿ ಹಸನ ಸಾಹೇಬನಿಗೆ, 'ಮಡಿವಾಳಪ್ಪ'ನೇ ಗುರುವಾಗಿದ್ದ. ಇವರು 'ಗುರುಮಡಿವಾಳ', 'ಇಟಪೂರೀಶ' ಅಂಕಿತ ಉಳ್ಳವರು. ಸಾವಳಗಿ ಮಹಮ್ಮದ ಹುಸೇನನಿಗೆ 'ಸಿದ್ಧಲಿಂಗ'. ಮಹಾಗಾಂವ ಮೀರಾಸಾಹೇಬನಿಗೆ 'ಪಂಚಾಕ್ಷರಿ' ಗುರುವಾಗಿದ್ದ. ಇವರಿಗೆ ಅದೇ ಅಂಕಿತವೂ ಆಗಿದೆ. ದೇಗಾವಿ ಹಜರತ್‌ಸಾಹೇಬನಿಗೆ 'ಗುಂಡಪ್ಪ' ಗುರುವಾಗಿದ್ದ. ಇವರೆಲ್ಲರೂ ತತ್ವಪದ ಮತ್ತು ನಾಟಕಗಳನ್ನು ರಚಿಸಿದ್ದಾರೆ.

ಕೆಲವರು ಲಾವಣಿ, ರಿವಾಯತ್ ಹಾಡುಗಳನ್ನು ಬರೆದಿದ್ದಾರೆ. ದೇಗಾವಿ ಹಜರತ್‌ಸಾಹೇಬ ಮಾತ್ರ 'ಹಜರತ್' ಎಂಬ ಅಂಕಿತ ಉಳ್ಳವನು. ಉಳಿದಂತೆ ಎಲ್ಲರೂ ತಮ್ಮದಲ್ಲದ ಅನ್ಯಮತದ ಪ್ರಭಾವಕ್ಕೆ ಒಳಗಾಗಿದ್ದಾರೆ. ಈ ಬೆಳವಣಿಗೆಯನ್ನು 'ಹಿಂದೂ-ಮುಸ್ಲಿಂ ಸಾಮರಸ್ಯ'ವೆಂದೂ, 'ಎರಡು ಸಂಸ್ಕೃತಿಗಳ ಬಾಂಧವ್ಯ'ವೆಂದೂ ಕರೆಯಲಾಗುತ್ತಿದೆ.

'ಮುಸ್ಲಿಮರು' ತಮ್ಮದಲ್ಲದ ಅನ್ಯಮತದ ಪ್ರಭಾವಕ್ಕೆ ಒಳಗಾಗಿ ತತ್ವಪದಗಳನ್ನು ಬರೆದಿರುವಂತೆ, ಮುಸ್ಲಿಮೇತರರು ಮುಸ್ಲಿಂ ಮತದ ಪ್ರಭಾವಕ್ಕೆ ಒಳಗಾಗಿ ತಮ್ಮದಲ್ಲದ ಅನ್ಯಮತ(ಇಸ್ಲಾಂ)ದ ತತ್ವಗಳ ಮೇಲೆ ತತ್ವಪದಗಳನ್ನು ರಚಿಸಿದ್ದಾರೆಯೇ? ಎಂದು ಹುಡುಕಿದರೆ ಸದ್ಯದ ಸಂಶೋಧನೆಯ ಪ್ರಕಾರ ಯಾರೂ ಇಲ್ಲವೆಂದೆ ಕಾಣುತ್ತದೆ. ಸಾವಳಗಿ ಶಿವಲಿಂಗನು (ಲಿಂಗಾಯತ) ಖ್ವಾಜಾ ಬಂದೇನವಾಜ ವಂಶಜರಲ್ಲಿ ಒಬ್ಬನನ್ನು ಗುರುವನ್ನಾಗಿ ಸ್ವೀಕರಿಸಿದ್ದಾನೆ. ಇವರಿಬ್ಬರು ಸಂತರು; ಶಿವಯೋಗಿಗಳು, ಸೂಫಿಗಳೂ ಆಗಿದ್ದಾರೆ. ಇವರಿಬ್ಬರು ಸಾಹಿತ್ಯ ರಚಿಸಿಲ್ಲ. ಸಾಹಿತ್ಯದ ದೃಷ್ಟಿಯಿಂದ ನೋಡಿದರೆ ಮುಸ್ಲಿಮರು ಲಿಂಗಾಯತ ಮತದ ಪ್ರಭಾವಕ್ಕೆ ಒಳಗಾಗಿ, ಲಿಂಗಾಯತ ಗುರುವನ್ನು, ಲಿಂಗಾಯತ ತತ್ವಗಳನ್ನು ಕುರಿತು ತತ್ವಪದ ರಚಿಸಿದ್ದಾರೆ. ಮುಸ್ಲಿಮೇತರರು(ಹೆಚ್ಚಾಗಿ ಲಿಂಗಾಯತರು) ಮುಸ್ಲಿಂ ಪ್ರಭಾವಕ್ಕೆ ಒಳಗಾಗಿ ಇಸ್ಲಾಂಗೆ ಅನುಗುಣವಾಗಿ ತತ್ವಪದಗಳನ್ನು ರಚಿಸಿಲ್ಲ. ಕೊಡುಕೊಳುವಿಕೆ ಏಕಮುಖವಾಗಿದೆಯೇ ಹೊರತು ಬಹುಮುಖಿಯಾಗಿಲ್ಲ. ಕನ್ನಡದ ಅನುಭಾವಿಗಳು(ತತ್ವಪದಕಾರರು) ಈ ಮುಸ್ಲಿಂ ತತ್ವಪದಕಾರರ ಮೇಲೆ ಪ್ರಭಾವ ಬೀರಿದ್ದಾರೆ. ಕುತೂಹಲದ ಸಂಗತಿಯೆಂದರೆ ಈ ಭಾಗದಲ್ಲಿ ಸೂಫಿಗಳೂ ಒಂದು ಪರಂಪರೆಯನ್ನೇ ನಿರ್ಮಿಸಿದ್ದಾರೆ. ಈ ಸೂಫಿಗಳ ಪ್ರಭಾವವು ಕನ್ನಡ ತತ್ವಪದಕಾರರ ಮೇಲೆ ವಿಶೇಷವಾಗಿ ಆಗಿದೆ. ಮಡಿವಾಳಪ್ಪ 'ಫಕೀರನಾಗಬೇಕಾದರೆ' ಎಂಬ ಪದ ಬರೆದಿದ್ದಾನೆ. ಚಿದಾನಂದ ಅವಧೂತ, ವಡಕಿ ತಾತಪ್ಪಯ್ಯ, ಕೂಡಲೂರು ಬಸಲಿಂಗಪ್ಪ, ನಿಡವಂಚಿ ಭದ್ರೇಶ್ವರ,ಶಿಲ್ಲಪ್ಪ ಮುಂತಾದವರ ಮೇಲೆ ಸೂಫಿ ಸಂತರು ಗಾಢ ಪ್ರಭಾವ ಬೀರಿರುವಾಗ, ಈ ಮುಸ್ಲಿಂ ತತ್ವಪದಕಾರರಿಗೆ ಯಾಕೆ ಈ ಸೂಫಿಗಳು 'ಗುರು'ವಾಗಲಿಲ್ಲ, ಪ್ರಭಾವ ಯಾಕೆ ಬೀರಲಿಲ್ಲ? ಅದರಲ್ಲೂ ಮುಸ್ಲಿಂ ಆಳ್ವಿಕೆ ಇತ್ತು. ಉರ್ದು ಆಡಳಿತ ಭಾಷೆಯಾಗಿ ಮಾನ್ಯತೆ ಪಡೆದಿತ್ತು. ಇದು ಯಾಕೆ ಸಹಾಯಕ್ಕೆ ಬರಲಿಲ್ಲ? ಮೋಟ್ನಹಳ್ಳಿ ಹಸನಸಾಹೇಬ ತೆಲುಗಿನಲ್ಲಿ ತತ್ವಪದ ಬರೆದಿರುವುದು ಯಾಕೆ? ಇಂಥ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ. ಈ ಸಮಸ್ಯೆಗಳು ಸರಳವಾಗಿಲ್ಲ ಎನ್ನಿಸುತ್ತದೆ.

ಶರಣರಿಂದ ಲಿಂಗಾಯತ ಧರ್ಮವು ಬೆಳೆದು ಬಹುದೀರ್ಘಕಾಲದಿಂದ ಈ ಭಾಗದಲ್ಲಿ ಬೇರುಬಿಟ್ಟಿದೆ. ಬಸವಣ್ಣನ ಉದಾರ ಮಾನವೀಯತೆಯೇ ಒಂದು ಪರಂಪರೆಯಾಗಿದೆ. ಸಿದ್ಧರಾಮ, ಚೆನ್ನಬಸವಣ್ಣನಂಥವರ ತಾಂತ್ರಿಕವಾದ ಲಿಂಗಾಯತ ಧರ್ಮದ ಪ್ರಣಾಳಿಕೆಯನ್ನೇ ಅನುಸರಿಸುವ ಇನ್ನೊಂದು ಪರಂಪರೆಯೂ ಇದೆ. ಇದರ ಜತೆಗೆ ಸ್ಥಾಪಿತ ವ್ಯವಸ್ಥೆಯನ್ನು ಮೀರುವ ಅಲ್ಲಮಪ್ರಭುವಿನದೇ ಒಂದು ಪರಂಪರೆಯಾಗಿ ಈ ಭಾಗದಲ್ಲಿ ನೆಲೆಗೊಂಡು ಬೆಳೆದಿದೆ. ತತ್ವಪದಕಾರರಲ್ಲಿ ಕೆಲವರು ಅಲ್ಲಮಪ್ರಭುವಿನ ಪರಂಪರೆಯ ಕೊಂಡಿಗಳಾಗಿದ್ದಾರೆ. ಸೂಫಿಗಳೂ ಇದೇ ಮನೋಭಾವದವರು ಆಗಿರುವುದರಿಂದ ಪ್ರಭಾವ ಬೀರಿರುವುದು ಸಹಜವಾಗಿದೆ. ಬಸವಣ್ಣನ ಅನುಯಾಯಿಗಳೂ ಇದ್ದಾರೆ. ಮಠಾಧೀಶರು, ಮಠ-ಮಾನ್ಯಗಳು ಶರಣರ ಹೆಸರಿನಲ್ಲಿ ತಮ್ಮದೇ ಆದ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ಜನಸಾಮಾನ್ಯರನ್ನು ತಮ್ಮ ಸ್ಥಾಪಿತ ವ್ಯವಸ್ಥೆಗೆ ಒಳಗು ಮಾಡಿರುವುದು ಸ್ಪಷ್ಟವಾಗಿದೆ. ಈ ವ್ಯವಸ್ಥೆ ಬಲಿಷ್ಠವಾಗಿಯೂ ಇದೆ. ಈ 'ಲಿಂಗಾಯತ ಧರ್ಮ'ಕ್ಕೆ ಶರಣರ ಬೆಂಬಲವಿರುವುದನ್ನು ಮಠ-ಮಾನ್ಯಗಳು ಸಾರುತ್ತ ಬಂದಿವೆ. ಹೀಗಾಗಿ ಈ ಭಾಗದ ಅನೇಕ ಮುಸ್ಲಿಂ ತತ್ವಪದಕಾರರು ಲಿಂಗಾಯತ ಧರ್ಮದ ಪ್ರಭಾವಕ್ಕೆ ಒಳಗಾಗಿರುವುದು ಸಹಜವಾಗಿದೆ. ಇನ್ನೊಂದು ಆಕರ್ಷಣೆ ಎಂದರೆ ಮಠಗಳಲ್ಲಿ, ಲಿಂಗಾಯತರ ಮನೆಗಳಲ್ಲಿ ಕನ್ನಡ ಭಾಷೆ ಜೀವ ಹಿಡಿದು ಉಳಿದಿತ್ತು. ಈ ಕನ್ನಡ ಭಾಷೆಯ ಮೇಲಿರುವ ಪ್ರೇಮವೂ ಕಾರಣವಾಗಿರಬೇಕು. ಅನ್ಯರ ಆಳ್ವಿಕೆಯ ಕಾಲದಲ್ಲಿ ಒತ್ತಡಕ್ಕೋ, ಆಮಿಷಗಳಿಗೋ

ಬಲಿಯಾಗಿ ಮತಾಂತರಗೊಂಡ ಕೆಳವರ್ಗದವರು ಮುಸ್ಲಿಮರಾದರೂ ಮೂಲ ಇಸ್ಲಾಂ ಸಂಸ್ಕಾರವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಲಿಲ್ಲ. ತಾಂತ್ರಿಕವಾಗಿ 'ಇಸ್ಲಾಂ' ಅನ್ನು ಅನುಸರಿಸಿರಬಹುದು. ಅದರಲ್ಲೂ ಇವರು ಯಾರೂ ಮೂಲ ಇಸ್ಲಾಂ ಧರ್ಮಕ್ಕೆ ಸೇರಲಿಲ್ಲವೆಂದು ಕಾಣುತ್ತದೆ. ಈ ನೆಲದವರು ಇಸ್ಲಾಂಗೆ ಮತಾಂತರಗೊಂಡರೇ ಹೊರತು ಅದರ ಸಂಸ್ಕಾರವನ್ನು ಪಡೆಯಲಿಲ್ಲ. ಇಂಥವರು ಸ್ಥಳೀಯವಾಗಿ ಬಲಿಷ್ಠವಾಗಿದ್ದ ಲಿಂಗಾಯತ ಧರ್ಮದ ಪ್ರಭಾವಕ್ಕೆ ಒಳಗಾದರು ಮತ್ತು ಈ ಧರ್ಮದವರೇ ಆದ ವ್ಯಕ್ತಿಗಳನ್ನು 'ಗುರು'ವಾಗಿ ಸ್ವೀಕರಿಸಿದರು. ಇದು ಚಾರಿತ್ರಿಕವಾಗಿ ವಾಸ್ತವ ಸಂಗತಿಯಾಗಿದೆ. ಇಂಥವರಿಂದಲೇ 'ಕೊಡು-ಕೊಳೆ' ನಡೆದಿದೆ; ಸಾಮರಸ್ಯವೇರ್ಪಟ್ಟಿದೆ. ಇಂಥವರ ಮೂಲ ಸಂಸ್ಕಾರದ ಪರಿಣಾಮವಾಗಿ(ಮತಾಂತರಗೊಂಡಿದ್ದರೂ) ಮುಸ್ಲಿಮೇತರರ ಆಚರಣೆಗಳಲ್ಲಿ ಭಾಗಿಯಾಗಲು ಕಾರಣವಾಗಿದೆ. ಮುಸ್ಲಿಮರಲ್ಲಿ ಸಂಭ್ರಮದ ಹಬ್ಬಗಳು ಇರಲಿಕ್ಕಿಲ್ಲ. 'ರಂಜಾನ್', 'ಬಕ್ರಿದ್'ಗಳು ಉಪವಾಸ, ವ್ರತ, ಬಲಿದಾನ, ಕಡ್ಡಾಯ ಪ್ರಾರ್ಥನೆಗಳಿಂದ ಕೂಡಿದ್ದು ಮೂಲತಃ ಸಂಭ್ರಮ ಇದ್ದರೂ ಅದು ಮುಸ್ಲಿಮೇತರ ಸಮುದಾಯಗಳನ್ನು ಒಳಗೊಳ್ಳುವುದಿಲ್ಲ. ಅದಕ್ಕಾಗಿಯೇ ದುಃಖಮೂಲವಾದ ಮೊಹರಂ ಅನ್ನು ಮತಾಂತರಗೊಂಡ ಮುಸ್ಲಿಮರು ಅದನ್ನು ಕುಣಿಯುವ ಮೂಲಕ ಸಂಭ್ರಮದ ಹಬ್ಬವನ್ನಾಗಿ ಮಾಡಿಕೊಂಡಿರಬೇಕು. ಇವರನ್ನು ಮುಸ್ಲಿಮೇತರರಾದ ಕೆಳವರ್ಗದವರೂ ಅನುಸರಿಸಿರಬೇಕು. ಕೆಳವರ್ಗದವರ ಮೂಲಭೂತ ಗುಣವೆಂದರೆ ಸ್ಥಳೀಯ ದೈವಗಳನ್ನು ಆರಾಧಿಸುವುದು. ಹಳ್ಳಿ ದೇವತೆಗಳ ಜೊತೆಗೆ ಸಂತರ ಸಮಾಧಿಗಳಿಗೂ ನಡೆದುಕೊಳ್ಳುವುದು ಅವರ ಸ್ವಭಾವದಲ್ಲೇ ಇದೆ. ಇದರಿಂದ 'ಹಿಂದೂ-ಮುಸ್ಲಿಂ' ಸಂತರ ಸಮಾಧಿಗಳಿಗೆ, ಅವರ ಜಾತ್ರೆಗಳಿಗೆ ಸಮಾನಭಾವದಿಂದಲೇ ಭಾಗಿಯಾಗುತ್ತಾರೆ.

ರಾಮದಾಸನಾಗಲಿ, ಮೀರಾಸಾಹೇಬನಾಗಲಿ, ಹಸನ ಸಾಹೇಬನಾಗಲಿ ಅರಬ್ಬೀ ಮೂಲದ 'ಇಸ್ಲಾಂ' ಧರ್ಮಕ್ಕೆ ಸೇರಿದವರಲ್ಲ. ಅವರ ವಂಶಜರು ಯಾವುದೋ ಕಾಲದಲ್ಲಿ ಮತಾಂತರಗೊಂಡವರಿರಬೇಕು. ಅದರಿಂದಾಗಿಯೇ ಇವರು 'ಪಿಂಜಾರ' 'ಜಾತಿಗಾರ' ಪಂಗಡಕ್ಕೆ ಸೇರಿದವರಾಗಿದ್ದಾರೆ. ಲಿಂಗಾಯತ ಧರ್ಮದ ಪ್ರಭಾವದಿಂದಲೂ, ಮೂಲ ಸಂಸ್ಕಾರದಿಂದಲೂ ಮತ್ತು ಇದಕ್ಕಿಂತ ಮಿಗಿಲಾದ ತತ್ವಪದಕಾರರ ಮುಕ್ತ ಮನಸ್ಸಿನ ಪ್ರಭಾವದಿಂದಲೂ ಪ್ರೇರಣೆ ಪಡೆದ ಮುಸ್ಲಿಂ ತತ್ವಪದಕಾರರು 'ಲಿಂಗಾಯತ ಧರ್ಮ'ದ ನೆಲೆಯಲ್ಲಿ ತತ್ವಪದ ರಚಿಸಿದ್ದಾರೆ. ಮೋಟ್ನಹಳ್ಳಿ ಹಸನ ಸಾಹೇಬನು ಲಿಂಗಾಯತ ತತ್ವಗಳನ್ನೇ ತನ್ನ ತತ್ವಪದಗಳಲ್ಲಿ ಹಾಡಿದ್ದಾನೆ. ಸಾವಳಗಿ ಮಹಮದ ಸಾಹೇಬ 'ಕಲಿಧರ್ಮ', 'ಬಸವೇಶ್ವರ' ಎಂಬ ನಾಟಕಗಳನ್ನೂ, ದೇಗಾಂವಿಯ ಹಜರತ್ ಸಾಹೇಬನು 'ಜಗಜ್ಯೋತಿ ಬಸವೇಶ್ವರ', 'ಹಾರಕೊಡುಮುತ್ಯಾ' ಮುಂತಾದವರ ಮೇಲೆ ಹಾಡು ಬರೆದಿರುವುದನ್ನು ನೋಡಿದರೆ, ಮೀರಾ ಸಾಹೇಬನ ತತ್ವಪದಗಳ ಸಾರ ಗಮನಿಸಿದರೆ 'ತಮ್ಮದಲ್ಲದ' ಆದರೆ ಪ್ರಭಾವಕ್ಕೊಳಗಾದ 'ಶಕ್ತಿಯ' ಮೇಲೆ ಬರೆದಿರುವುದು ಕಂಡುಬರುತ್ತದೆ. ಇದರಿಂದ ಹೆಸರಿಗೆ ಮುಸ್ಲಿಂ ತತ್ವಪದಕಾರರಾಗಿರುವುದು ಸ್ಪಷ್ಟವಾಗಿದೆ. ಅವರ ತತ್ವಪದ ಸಾಹಿತ್ಯದ 'ತಿರುಳು' ಬೇರೆಯದು. ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಇಂಥ ಪ್ರಕ್ರಿಯೆ ನಡೆಯುವುದು ಸಹಜ ಎನ್ನಿಸುತ್ತದೆ. ಆದರೂ ಇಂಥ ಸಾಂಸ್ಕೃತಿಕ ಒತ್ತಡಗಳ ನಡುವೆಯೂ ಈ ಮುಸ್ಲಿಂ ತತ್ವಪದಕಾರರು ತಮ್ಮ 'ಐಡೆಂಟಿಟಿ'ಯನ್ನು ಉಳಿಸಿಕೊಂಡಿದ್ದಾರೆಯೇ? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟ. ಯಾಕೆಂದರೆ ಈ ಎಲ್ಲ ಮುಸ್ಲಿಂ ತತ್ವಪದಕಾರರ ತತ್ವಪದ ಸಾಹಿತ್ಯ ಸಂಗ್ರಹವಾಗಿಲ್ಲ. ಸಂಗ್ರಹವಾದ ಅಲ್ಪಸ್ವಲ್ಪ ಸಾಹಿತ್ಯದ ಮೇಲೆ ಯಾವುದೇ ನಿರ್ಧಾರ ಉಚಿತವಲ್ಲ. ದೇಗಾವಿ ಹಜರತ್ ಸಾಹೇಬ ಮಾತ್ರ 'ಹಜರತ್ ' ಎಂಬ ಅಂಕಿತವಿಟ್ಟುಕೊಂಡಿದ್ದಾನೆ. ಚನ್ನೂರ ಜಲಾಲ ಸಾಹೇಬನ ಅಭಿವ್ಯಕ್ತಿ ಕ್ರಮದಲ್ಲಿ(ಭಾಷೆಯ ಬಳಕೆಯಲ್ಲಾದರೂ) ಭಿನ್ನತೆಯಿದೆ. ಗಮನಿಸುವುದಾದರೆ,

ಸಬ್ ಕಹತೆ ಈಶ್ವರ ಅಲ್ಲಾ
ಇದರ ಬೇಧ್ ಯಾರಿಗೆ ತಿಳಿದಿಲ್ಲ

ಕಾಳಜಿ ವ್ಯಕ್ತವಾಗಿದೆ.

ಸಂತಿ ಸಂಸಾರ ನೋಡಣ್ಣ ನಿನ
ಸ್ವತ್ತು ಮಾರಿಕೊಂಡ್ಹೋಗಣ್ಣ
ಸಂತಿಗಿ ಬಂದಿದಿ ಚಿಂತ್ಯಾಕೋ

ಶಿವನ್ಯಾಕ ಬೈತಿದಿ ಸೆಂಟರಿಲಾಕೋ -ಲೋಕವೆಂಬ, ಸಂಸಾರವೆಂಬ ಸಂತೆಗೆ ಬಂದ ಮೇಲೆ ಇದ್ದು ಬಂದದ್ದನ್ನು ಸಹಿಸಿ ಗೆಲ್ಲಬೇಕು. ಸಂಸಾರ ಸಾಕಾಗಿ, ಅದನ್ನು ನಿಭಾಯಿಸಿ ನಿಲ್ಲಲಾಗದೆ ಸಂಸಾರಿಗಳು ಶಿವನನ್ನು 'ಯಾಕೆ ಮಾಡಿದೀ ಸಂಸಾರ ಸಾಕಪ್ಪೋ ಈ ಸಂಸಾರ' ಎಂದು ಬಯ್ಯುವ, ಬದುಕಲಾರದ ಜನರನ್ನು ಕಂಡು ಮೋಟ್ನಹಳ್ಳಿ ಹಸನಸಾಹೇಬ ಆಡಿದ ಮಾತುಗಳಿವು. ಕೂಡಲೂರು ಬಸಲಿಂಗಪ್ಪನ ಲೋಕ ನೀತಿ ಹೇಳುವ ಒಂದು ತತ್ವಪದದಲ್ಲಿ 'ಮಿಂಡಲಾಡಿ' ಎಂದು ಸಂಬೋಧಿಸಿದ್ದಾನೆ.

ಕುಲಕುಲ ಅಂತಿದ್ದಿ ಮಿಂಡಲಾಡಿ
ಕುಲದಾದಿ ಹೇಳಬೇಕು ಮಿಂಡಲಾಡಿ
ಕುಲದ ವರ್ತಮಾನ ಮಿಂಡಲಾಡಿ

ಕುಲದೊಳಗೆ ಹೇಳಬೇಕು ಮಿಂಡಲಾಡಿ -ಜಾತಿವಾದಿಗಳಿಗೆ 'ಮಿಂಡಲಾಡಿ' ಎಂದು ಕರೆದಿದ್ದರೂ ಇದರಲ್ಲಿ ನೀಡಿದ ತಿಳುವಳಿಕೆ ದೊಡ್ಡದು. ಹೀನ ಮನುಜಾ, ಬುದ್ಧಿಗೇಡಿ, ಇಂಥ ಪ್ರಯೋಗಗಳು ಸಾಮಾನ್ಯ. ಕಡಕೋಳ ಮಡಿವಾಳಪ್ಪ ಅಪ್ಪಟ ದೇಶಿ ನುಡಿಗಳಲ್ಲಿ ತನ್ನ ತತ್ವಪದಗಳನ್ನು ಕಟ್ಟಿರುವುದು ಕಾಣುತ್ತೇವೆ. ಸಮಾಜ ವಿರೋಧಿಗುಣಗಳುಳ್ಳ ಮನುಜರನ್ನು ಮಡಿವಾಳಪ್ಪ ಶಿಷ್ಟರು ಬಳಸಬಾರದ ಶಬ್ದಗಳನ್ನು ಬಳಸಿ ನಿಂದಿಸಿದ್ದಾನೆ. ಕ್ಷಮೆಗೂ ಅರ್ಹರಲ್ಲದವರನ್ನು ವಿರೋಧಿಸಲು ಹಿಂದು ಮುಂದು ನೋಡದೆ ಶಬ್ದ ಪ್ರಯೋಗಿಸಿಬಿಡುತ್ತಾನೆ.

ಮಂಡಲದೊಳಗೆ ಈ ಮಂದಿ ಮಾಡುದು ಕಂಡು
ಅದಕ್ಕೆ ಬಂದಾವಪ್ಪ ಇಂಥ ದಿನ
ಮಂಡ ಮೂಳರು ಕೂಡಿ ಕುಂಡಿ ಚಿವುಟ್ಯರು ಕೂಡಿ
ಕುಂಡಿ ನೋಡಿ ಮಣೆ ಹಾಕುವರಣ್ಣ

ಡಾಂಭಿಕರನ್ನು ಕರೆದು ಪುರಸ್ಕರಿಸುವುದನ್ನು ಈ ಪದದಲ್ಲಿ ವ್ಯಂಗ್ಯ ಮಾಡಿದ್ದಾನೆ.

ಗಡ್ಡ ಜಡಿಯ ಬಿಟ್ಟು ಒದ್ದಿಲೆ ಬಂದರೆ
ಅಡ್ಡನಿಟ್ಟು ಬೀಳುವರಣ್ಣ
ನಮ್ಮ ಗುಡ್ಡದ ಮಹಾಂತನ ಗುರುತನವ ಅರಿಯರು
ದಡ್ಡ ಸೂಳೆ ಮಕ್ಕಳಿವರಣ್ಣ

ಸಮಾಜಘಾತುಕರನ್ನು ಮಡಿವಾಳಪ್ಪ 'ಕೆರ ಹರಿಯುವತನಕ' ಹೊಡೆಯಬೇಕೆನ್ನುತ್ತಾನೆ. ಕೆಟ್ಟದ್ದನ್ನು ಬೆಂಬಲಿಸುವವರನ್ನು 'ಕುಂಡಿ ಹಡಿಸುವ ಜನರು' ಎಂದಿದ್ದಾನೆ. ತನಗೆ ಸರಿಕಾಣದ, ಅದು ಸಮಾಜಕ್ಕೆ ಕೇಡು ಮಾಡುವ ಗುಣ ಹೊಂದಿದ್ದರೆ ಅಂಥದ್ದನ್ನು ನಿಂದಿಸಲು ಮುಜುಗರಪಡದೆ ಹೀಗಳೆಯುತ್ತಾನೆ. ಮಡಿವಾಳಪ್ಪನ ವ್ಯಕ್ತಿತ್ವವೇ ಅಂಥದ್ದು. ಅಪ್ಪಟ ಹಳ್ಳಿಗನಾದ ಈತನ ಸಿಟ್ಟಿನಲ್ಲಿ ವ್ಯಕ್ತವಾಗುವ ಲೋಕದ ಬಗೆಗಿನ ಕಾಳಜಿ ಅಪಾರವಾದದ್ದು. ತತ್ವಪದಕಾರರು ಜನತೆಯ ನಡುವೆ ಮುಕ್ತವಾಗಿ ಬೆರೆತವರು. ಅವರ ಮಾತು, ನಡೆ-ನುಡಿಗಳೆಲ್ಲವೂ ನೆಲಮೂಲದಿಂದ ಬಂದಿರುವುದರಿಂದ ಅಪ್ಪಟ ದೇಶೀಯವಾಗಿರುತ್ತವೆ. ಹೈದರಾಬಾದ್ ಕರ್ನಾಟಕ

ಪ್ರದೇಶದ ಮೂರು ಜಿಲ್ಲೆಗಳ ಭಾಷೆ ಭಿನ್ನವಾಗಿದೆ. ರಾಯಚೂರು ಜಿಲ್ಲೆಯ ಭಾಷೆ ಬೇರೆ, ಕಲ್ಬುರ್ಗಿ ಜಿಲ್ಲೆಯ ಭಾಷೆ ಬೇರೆ. ಬೀದರ ಜಿಲ್ಲೆಯ ಭಾಷೆಯೇ ಬೇರೆ. ಶಿಲ್ಲಪ್ಪ, ನಿಡವಂಚಿ ಭದ್ರೇಶ್ವರರದು ಬೀದರ್ ಜಿಲ್ಲೆಯ ಭಾಷೆ. ಮಡಿವಾಳಪ್ಪ ಮತ್ತು ಆತನ ಶಿಷ್ಯರದು ಕಲ್ಬುರ್ಗಿ ಜಿಲ್ಲೆಯ ಭಾಷೆ. ವಡಕಿ ತಾತಪ್ಪಯ್ಯ, ಗೂಗಲ್ ಪರಪಯ್ಯ, ಕೂಡಲೂರು ಬಸವಲಿಂಗಪ್ಪನವರದು ರಾಯಚೂರು ಜಿಲ್ಲೆಯ ಭಾಷೆ. ಇದು ಅವರವರ ತತ್ವಪದಗಳಿಂದ ಗೊತ್ತಾಗುತ್ತದೆ. ಲೋಕದ ಯಜಮಾನರಾಗಿರುವುದರಿಂದಲೂ, ಅವರ ವ್ಯಕ್ತಿತ್ವದಲ್ಲಿ ನಿಷ್ಠೂರತೆ ಇರುವುದರಿಂದಲೂ ಮುಕ್ತಪದಗಳು ಅವು ನುಡಿಗಟ್ಟುಗಳಾಗಿ ಹೊರಹೊಮ್ಮಿವೆ. ಅವುಗಳ ಪ್ರಯೋಗಗಳ ಹಿನ್ನೆಲೆಯನ್ನು ಅರಿತರೆ ಅವು ಅಶ್ಲೀಲ ಅನ್ನಿಸುವುದಿಲ್ಲ.

ಅನ್ಯ ದೈವಗಳು ಮತ್ತು ತತ್ವಪದಕಾರರು

ಜನಪದ ಕವಿಗಳ ಮುಖ್ಯ ಗುಣವೆಂದರೆ ಸ್ಥಳೀಯ ದೈವಗಳನ್ನು ಆರಾಧಿಸುವುದು. ಜನತೆಯ ಕವಿಗಳಾದ ತತ್ವಪದಕಾರರು ಕೂಡ ಸ್ಥಳೀಯ ದೈವಗಳನ್ನು ತಮ್ಮ ಅಂಕಿತವನ್ನಾಗಿ ಮಾಡಿಕೊಂಡಿದ್ದಾರೆ. ಗುರುವನ್ನು ಸ್ಮರಿಸುವುದು ಪ್ರಧಾನ ಮತ್ತು ಅಂತಿಮ ಗುರಿಯಾದರೂ ಈ ತತ್ವಪದಕಾರರು ತಮಗೆ ಸರಿಕಂಡ ದೈವಗಳಿಗೆ ಶರಣಾಗಿದ್ದಾರೆ. ಈ ಭಾಗದಲ್ಲಿದ್ದ ಸೂಫಿ ಸಂತರ ಪ್ರಭಾವವನ್ನು ಮುಕ್ತವಾಗಿ ಸ್ಮರಿಸಿಕೊಂಡಿದ್ದಾರೆ. ಸೂಫಿಗಳ ಹಾದಿ ಮತ್ತು ತತ್ವಪದಕಾರರ ಹಾದಿ ಒಂದೇ ಆಗಿದೆ. 'ಫಕೀರನಾಗಬೇಕಾದರೆ ಈ ಮನ ಧಿಕ್ಕಾರ ಮಾಡಿಕೊಂಡಿರಬೇಕು' ಎಂಬ ಮಾತು ಇದಕ್ಕೆ ಸಾಕ್ಷಿಯಾಗಿದೆ. 'ಏಕಲ್ ಖಾಜಾ ಸಾಕ್ಷಾತ್ ಶಿವನು' ಎಂದು ಕೂಡಲೂರು ಬಸವಲಿಂಗಪ್ಪ, ನಿಡವಂಚಿ ಭದ್ರೇಶ್ವರ ಸ್ಮರಿಸಿದ್ದಾರೆ. ವಡಕಿ ತಾತಪ್ಪಯ್ಯ,

ಅಜರತ್ ಘುಡಿವಡಕಿಯ ಕಡೆ ಪಾರಾ
ಯಜಂಟು ಎಸ್‌ಲಕ್ ಪೈಗಂಬರಾ ಜಪಿಸುವೆ ನಾ

ಎಂದಿದ್ದಾನೆ. ಅಷ್ಟೇ ಅಲ್ಲ 'ಫಕೀರನಾಗುವೆನು' 'ಅಖಂಡ ಫಕೀರನಾಗುವೆನು' ಎಂದಿದ್ದಾನೆ.

ದೇವರು ಆನೆ ಅಕಮಾರ ಸಾಹೇಬ ದೊಡ್ಡ ಪೀರ
ಭಾವದಲಿ ಭಜಿಸೋ ನೀ ಪೂರ

ಎಂದು ಗಬ್ಬೂರು ಹಂಪಣ್ಣ ನೆನೆಯಲು ಹೇಳಿದ್ದಾನೆ. ನಿಡವಂಚಿ ಭದ್ರೇಶ್ವರನಿಗೆ ಸಂಬಂಧಿಸಿದ ಒಂದು ಕಥೆಯಿದೆ. ಈ ಭಾಗದಲ್ಲಿ ತತ್ವಪದಕಾರರಿಗೆ ಮತ್ತು ಸೂಫಿಗಳಿಗೆ ಭೇದವಿಲ್ಲ. ಮುಸ್ಲಿಮೇತರ ತತ್ವಪದಕಾರರಿಗೆ ಅನೇಕ ಜನರು ಮುಸ್ಲಿಂ ಶಿಷ್ಯರಿದ್ದಾರೆ. ಭದ್ರೇಶ್ವರನಿಗೆ ಸುಲ್ತಾನಶಾ ಎಂಬ ಮುಸ್ಲಿಂ ಭಕ್ತ ಶಿಷ್ಯನಾಗುತ್ತಾನೆ. ನಿಜಾಮ ರಾಜ್ಯದ ಮೌಲ್ವಿಗಳು ಇದನ್ನು ತಿಳಿದು ವಿರೋಧಿಸುತ್ತಾರೆ ಮತ್ತು ಸುಲ್ತಾನಶಾನಿಗೆ ಶಿಕ್ಷೆ ವಿಧಿಸಲು ನೋಡುತ್ತಾರೆ. ಭದ್ರೇಶ್ವರ ಇದನ್ನು ಕಂಡು ಮೌಲ್ವಿಗಳ ಬಳಿ ಬಂದು, ನಾಮ ಬದಲಾದರೂ ದೇವರೊಬ್ಬನೆ ಇದ್ದಾನೆಂದು ವಿವರಿಸುತ್ತಾನೆ:

ಜೀತಾ ಫಕೀರ ಬಾಬಾ
ಜಂಗಮ ಸಾಚಾ
ಮಯಾಕ ಖೇಲ
ಖಿಲತಾ ಹೈ ಪಾಶಾ
ಜಂಗಮ ಜೀತಾ ಪೀರ
ಜಗಮೆ ಜ್ಯೋತ ಲಗಾಯಿ

ವಹಿ ಉಜಾತಿ ಮೇ
ಆನಾ ಹೈ ಜಾನಾ ಸಹಿ
ಆಗೇ ಪೀಛೇ
ನೀಚೇ ಉಪರ್
ಸಬ್ ಮೆ ಭರಾ ಹೈ
ಅಂದರ ಬಾಹರ
ಸದ್ಗುರು ಈಶಾ
ಭದ್ರೋದಿನ್ ಪಾಶಾ
ಜೀತಾ ಫಕೀರ ಮೌಲಾ

ವಹಿ ಹೈ ಜಗದೀಶಾ -ನಿಡವಂಚಿ ಭದ್ರೇಶ್ವರ ಸ್ಥಳೀಯ ದೇವರನ್ನು ಅಂಕಿತವಾಗಿ ಇಟ್ಟುಕೊಂಡಿದ್ದಾನೆ. ಸೂಫಿ ಸಂತರನ್ನು ಮನಸಾರೆ ಸ್ಮರಿಸುತ್ತಾನೆ. ಜೊತೆಗೆ ತನ್ನ ಕಾಲದ ಮತ್ತು ತನ್ನ ಪ್ರದೇಶದಲ್ಲಿರುವ ನಲವತ್ತೆಂಟು ದೇವರನ್ನು 'ಸಲಾಮ' ಎನ್ನುವ ಪದದಲ್ಲಿ ನಮಿಸಿದ್ದಾನೆ.

ತತ್ವಪದಕಾರರು ತಮ್ಮ ಅಭಿವ್ಯಕ್ತಿಗೆ ಅನೇಕ ಕಾವ್ಯ ರೂಪಗಳನ್ನು ಬಳಸಿಕೊಂಡಿದ್ದಾರೆ. ವೃತ್ತ, ಕಂದ, ಷಟ್ಪದಿ, ತ್ರಿಪದಿ, ಸಾಂಗತ್ಯ, ರಗಳೆ ಮತ್ತು ವಚನ ರೂಪಗಳಲ್ಲಿ ತತ್ವಪದಗಳನ್ನು ಬರೆದಿದ್ದಾರೆ. ಮಠ-ಮಾನ್ಯಗಳಲ್ಲಿ ಬೆಳೆದ, ಅಲ್ಲಿಯ ವಿದ್ಯಾಭ್ಯಾಸ ಹಿನ್ನೆಲೆಯಿದ್ದ ಅನೇಕರು ಈ ಕಾವ್ಯರೂಪಗಳನ್ನು ಬಳಸಿಕೊಂಡಿದ್ದಾರೆ. ಇನ್ನೂ ಅಪಾರವಾಗಿ ಮೌಖಿಕವಾಗಿಯೇ ಉಳಿದಿರುವ ಈ ತತ್ವಪದ ಸಾಹಿತ್ಯ ಸಂಗ್ರಹವಾದರೆ ಮತ್ತು ಅದನ್ನು ಪರಿಶೀಲಿಸಿದರೆ ಅನೇಕ ಬಗೆಯ ಕಾವ್ಯರೂಪಗಳು ಕಾಣಬಹುದು. ಬಕ್ಕಪ್ಪಯ್ಯ ಅನೇಕ ತ್ರಿಪದಿಗಳನ್ನು ಬರೆದಿದ್ದಾನೆ. ಮುಖ್ಯವಾಗಿ ಧಾರ್ಮಿಕ ಆಯಾಮದಲ್ಲೇ ಬರೆದಿರುವ ಖೇಮಣ್ಣ, ಗಬ್ಬೂರು ಹಂಪಣ್ಣ, ನೀರಲಕೇರಿ ಬಸವಲಿಂಗ ಶರಣ, ಘನಮಠದ ಶಿವಯೋಗಿ ಮುಂತಾದವರು ಬೇರೆ ಬೇರೆ ಕಾವ್ಯರೂಪಗಳಲ್ಲಿ ಬರೆದಿದ್ದಾರೆ. ಭಕ್ತಿ ಮೂಲ ಮನಸ್ಸಿನ ಸಂಗ್ರಹಕಾರರು ಭಾವುಕರಾಗಿ ಈ ತತ್ವಪದಕಾರರ ಸಾಹಿತ್ಯವನ್ನು ಸಿಕ್ಕಹಾಗೆ ಪ್ರಕಟಿಸಿದ್ದಾರೆ. ಇದರಿಂದ ಕೆಲವರ ಪದಗಳು ಯಾವ ಕಾವ್ಯ ಪ್ರಕಾರಗಳಲ್ಲಿವೆ ಎಂಬುದು ಸರಿಯಾಗಿ ಗುರುತಿಸಲಾಗುವುದಿಲ್ಲ. ಆದರೆ ಕೂಡಲೂರು ಬಸಲಿಂಗಪ್ಪ, ಮೋಟ್ನಹಳ್ಳಿ ಹಸನಸಾಹೇಬ, ಕೂಡಲೂರು ಬಸಲಿಂಗಪ್ಪ ಆತನ ಶಿಷ್ಯರು ಮುಕ್ತವಾಗಿ ಹಾಡಿದ್ದಾರೆ. ಈ ಮುಕ್ತತೆಯಲ್ಲಿ ಆಂತರಿಕ ಲಯಗಳಿವೆ. ಇದು ತತ್ವಪದಕಾರರ ಪ್ರಧಾನ ಗುಣ. ವ್ಯಾಕರಣಕ್ಕೆ ಪ್ರಾಮುಖ್ಯತೆ ನೀಡುವುದು ಅವರ ವ್ಯಕ್ತಿತ್ವದಲ್ಲಿಲ್ಲ. ಹೀಗಾಗಿ 'ಆನು ಒಲಿದಂತೆ ಹಾಡು'ವುದೇ ಇವರ ಜಾಯಮಾನವಾಗಿದೆ.

ಅಧ್ಯಾಯ ಆರು: ರಾಜಕೀಯ ಸ್ಥಿತ್ಯಂತರಗಳು ಮತ್ತು ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಯ ಅವಸ್ಥೆ

ಕನ್ನಡ ನಾಡು-ನುಡಿ-ಸಾಹಿತ್ಯದ ಹೆಜ್ಜೆ ಗುರುತುಗಳು

ರಾಜಕೀಯ ಸ್ಥಿತ್ಯಂತರಗಳಲ್ಲಿ ಕನ್ನಡ ಭಾಷೆ-ಸಂಸ್ಕೃತಿಯ ಅವಸ್ಥೆ

ಪರ್ಯಾಯ ಲಿಪಿಗಳ ಬಳಕೆ ಹಾಗೂ ಲಿಪಿರಹಿತ ಕನ್ನಡ ಭಾಷೆಯ ಅಸ್ತಿತ್ವ

ನಿಜಾಂ ಆಡಳಿತ ಮತ್ತು ಬಹುಭಾಷೆಗಳ ತೊಡಕು

ಶೈಕ್ಷಣಿಕ ಭಾಷೆಯಾಗಿ ಉರ್ದು ಮತ್ತು ಕನ್ನಡ ಭಾಷೆಯ ಅಭಿಮಾನ

ಹೈದರಾಬಾದ್ ಕರ್ನಾಟಕ ಮತ್ತು ಆಧುನಿಕ ಕನ್ನಡ ಸಾಹಿತ್ಯ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕನ್ನಡ ಭಾಷೆ-ಸಂಸ್ಕೃತಿ

ಅಧ್ಯಾಯ ಆರು:
ರಾಜಕೀಯ ಸ್ಥಿತ್ಯಂತರಗಳು ಮತ್ತು ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಯ ಅವಸ್ಥೆ

ಭಾರತವು ಬ್ರಿಟಿಷರ ವಶದಲ್ಲಿತ್ತು ಎಂಬುದು ನಿಜವಾದರೂ ಭಾರತದ ಅನೇಕ ಪ್ರಾಂತ್ಯಗಳಿಗೆ ಸ್ವತಂತ್ರವಾದ ಪ್ರಭುತ್ವವೂ ಇತ್ತು. ಕರ್ನಾಟಕಕ್ಕೆ ಸಂಬಂಧಿಸಿ ಹೇಳುವುದಾದರೆ 'ಹೈದರಾಬಾದ್ ಕರ್ನಾಟಕ' ಪ್ರಾಂತ್ಯ ಸ್ವತಂತ್ರವಾಗಿದ್ದು ನಿಜಾಂ ಪ್ರಭುತ್ವವನ್ನು ಹೊಂದಿತ್ತು. ನಿಜಾಂ ಸರಕಾರ ಬ್ರಿಟಿಷರ ಸಹಮತದೊಂದಿಗೆ ಇದ್ದರೂ ಅನೇಕ ವಿಷಯಗಳಲ್ಲಿ ಸ್ವತಂತ್ರ ಅಧಿಕಾರವನ್ನು ಹೊಂದಿತ್ತು. ಬ್ರಿಟಿಷರು ಭಾರತಕ್ಕೆ ಆಗಮಿಸಿ ತಮ್ಮ ಪ್ರಭುತ್ವವನ್ನು ಸ್ಥಾಪಿಸುವುದರೊಂದಿಗೆ ಆಧುನಿಕತೆಯನ್ನು ಭಾರತದಲ್ಲಿ ಮೂಡಿಸಿದರು. ಪಶ್ಚಿಮದಿಂದ ಅನೇಕ ಬಗೆಯ ಹೊಸ ಜ್ಞಾನವು ಹರಿದು ಬರತೊಡಗಿತು. ಈ ಹೊಸ ಬಗೆಯ ಜ್ಞಾನದಿಂದಲೇ ಕರ್ನಾಟಕದಲ್ಲಿ ಮಂಗಳೂರು, ಮೈಸೂರು, ಧಾರವಾಡ ಮುಂತಾದ ಪ್ರಾದೇಶಿಕ ಹಿನ್ನೆಲೆಯ ಪ್ರದೇಶಗಳು ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳೆಯತೊಡಗಿ, ಅವುಗಳದೇ ಆದ ಚಿಂತನ ಕ್ರಮಗಳನ್ನು ಹುಟ್ಟುಹಾಕಿದವು. ಈ ಪ್ರದೇಶಗಳು ಸಾಂಸ್ಕೃತಿಕ ಕೇಂದ್ರಗಳಾಗಲು ಅನೇಕ ಪ್ರತಿಭಾವಂತ ವ್ಯಕ್ತಿಗಳು ದುಡಿದಿದ್ದಾರೆ. ಇದರಿಂದ ಈ ಪ್ರದೇಶಗಳು ಒಂದೊಂದು ಪ್ರತ್ಯೇಕ ಸಾಹಿತ್ಯ-ಸಂಸ್ಕೃತಿಯ ಪರಂಪರೆಯನ್ನೇ ಕಟ್ಟಿಕೊಂಡಿವೆ. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ, ಅದರ ಪ್ರಾರಂಭಿಕ ಹಂತದಿಂದ ಗಮನಿಸಿದರೆ ಪ್ರಾದೇಶಿಕವಾಗಿ ಯಾವ ಪ್ರದೇಶದಿಂದ ಯಾವ ಬಗೆಯಲ್ಲಿ ಆಧುನಿಕ ಸಾಹಿತ್ಯ ಚಿಗುರತೊಡಗಿತು ಎಂಬುದು ಕುತೂಹಲದ ಸಂಗತಿಯಾಗಿದೆ. ಆದರೆ 'ಹೈದರಾಬಾದ್ ಕರ್ನಾಟಕ' ಪ್ರದೇಶವು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಆದರೂ ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ್ ನಗರವೇ ಈ ಭಾಗದ ಕನ್ನಡ ಭಾಷೆ ಮತ್ತು ಸಾಹಿತ್ಯ ಅಭಿಮಾನಿಗಳಿಗೆ ಸಾಂಸ್ಕೃತಿಕ ಕೇಂದ್ರವಾಗಿ ಪರಿಣಮಿಸಿತ್ತು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಈ ಪ್ರಾಂತ್ಯದ ಕೊಡುಗೆ ಏನು? ಬೇರೆ ಪ್ರದೇಶಗಳ ಸಾಧನೆ-ಕೊಡುಗೆಗೆ ಹೋಲಿಸಿದರೆ ಈ ಪ್ರಾಂತ್ಯದ ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳು ಒಡೆದು ಕಾಣುವುದಿಲ್ಲ. ಮುಖ್ಯ ಸಾಹಿತಿಗಳಿಲ್ಲ. ಮಹತ್ವದ ಸಾಹಿತ್ಯ ಕೃತಿಗಳಿಲ್ಲ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಇದಕ್ಕೆ ಕಾರಣವೇನು? ಎಂಬ ಪ್ರಶ್ನೆಯನ್ನು ಗಂಭೀರವಾಗಿ ಎತ್ತಿಕೊಂಡು ಪರಿಶೀಲಿಸಲು ಯಾವ ಪ್ರಯತ್ನಗಳು ನಡೆದಿಲ್ಲವೆಂದು ಕಾಣುತ್ತದೆ. ಸಾಂಸ್ಕೃತಿಕವಾಗಿ 'ಹಿಂದುಳಿದ ಪ್ರದೇಶ'ವೆಂದು ಸುಲಭವಾಗಿ ತೀರ್ಮಾನಿಸಲಾಗುತ್ತಿದೆಯೇ ಹೊರತು ಯಾಕೆ ಈ ಪ್ರಾಂತ್ಯ ಅನೇಕ ವಿಷಯಗಳಲ್ಲಿ ಮುಂದುವರಿಸಲು ಸಾಧ್ಯವಾಗಿಲ್ಲ? ಎಂದು ಹುಡುಕಾಟ ನಡೆಸಿದರೆ ಈ ಪ್ರಾಂತ್ಯದ ಚರಿತ್ರೆಯ ಒಡಲೊಳಗೇ ಅನೇಕ ಉತ್ತರಗಳು ಸಿಗುತ್ತವೆ.

ಕನ್ನಡ ನಾಡು-ನುಡಿ-ಸಾಹಿತ್ಯದ ಹೆಜ್ಜೆ ಗುರುತುಗಳು

ಆದರೆ ಪ್ರಾಚೀನ ಕನ್ನಡ ಸಾಹಿತ್ಯಿಕ ಸಂದರ್ಭವನ್ನು, ಅದರ ಪ್ರಾರಂಭಿಕ ಹಂತದಿಂದ ಗಮನಿಸಿದರೆ ಈ ಪ್ರಾಂತ್ಯದ ಸಾಧನೆ-ಕೊಡುಗೆ ಬೆರಗುಗೊಳಿಸುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದ ಉಗಮಕ್ಕೆ ಈ ಪ್ರಾಂತ್ಯವೇ ನೆಲೆಯಾಗಿದೆ. ಕನ್ನಡದ ಮೊದಲ ಕೃತಿ ಎಂಬ ಖ್ಯಾತಿಗೆ ಕಾರಣವಾದ 'ಕವಿರಾಜ ಮಾರ್ಗ' ಹುಟ್ಟಿದ್ದು ಈ ಪ್ರಾಂತ್ಯದಲ್ಲಿ. ಒಂಬತ್ತನೆಯ ಶತಮಾನದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಕಾಲದಲ್ಲಿ ಈ ಶಾಸ್ತ್ರಗ್ರಂಥ ರಚನೆಯಾಗಿದೆ. ಈ ಅರಸನ ಕೇಂದ್ರಸ್ಥಾನವೂ, ಸಾಂಸ್ಕೃತಿಕ ನಗರವೂ ಆದ ಮಾನ್ಯಖೇಟ (ಮಳಖೇಡ) ಈ ಪ್ರಾಂತ್ಯದಲ್ಲಿದೆ. ಈ ಕೃತಿ ಅನೇಕ ಕಾರಣಗಳಿಗೆ ಮಹತ್ವದ್ದಾಗಿ ನಿಂತಿದೆ. ಕನ್ನಡ ಸೀಮೆ, ಈ ಸೀಮೆಯ ಜನರ ಪ್ರತಿಭೆಯನ್ನು ಕುರಿತು ಕವಿರಾಜ ಮಾರ್ಗಕಾರ ಹೇಳಿರುವ ಮಾತುಗಳು ಈ ಹೊತ್ತಿನಲ್ಲಿ ಸಾಂಸ್ಕೃತಿಕ ಸವಾಲಾಗಿ ಪರಿಣಮಿಸಿವೆ. 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಇತ್ತೆಂದು ಹೇಳುತ್ತಾನೆ. ಕರ್ನಾಟಕದ ನೆಲೆ ಉತ್ತರದಲ್ಲಿ ಗೋದಾವರಿ, ದಕ್ಷಿಣದಲ್ಲಿ ಕಾವೇರಿ ನದಿಗಳ ನಡುವಣದ್ದಾಗಿತ್ತು. ಈಗ ಉತ್ತರದ ಗೋದಾವರಿ

ನದಿ ಪ್ರದೇಶ ಕರ್ನಾಟಕದ ಸೀಮೆಯಲ್ಲಿ ಉಳಿದಿಲ್ಲ, ನಿಜ. ಗೋದಾವರಿ-ಕಾವೇರಿ ನದಿಗಳ ನಡುವಿನ ವಿಸ್ತಾರ ಪ್ರದೇಶದಲ್ಲಿ 'ತಿರುಳ್ಗನ್ನಡ' ಸೀಮೆ ಸೇರಿತ್ತು. ಅಲ್ಲದೆ ಕಿಸುವೊಳಲು (ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿರುವ ಪಟ್ಟದಕಲ್ಲು), ಕೊಪಣನಗರ (ರಾಯಚೂರು ಜಿಲ್ಲೆಯ ಕೊಪ್ಪಳ; ಈಗ ಸ್ವತಂತ್ರ ಜಿಲ್ಲೆ), ಪುಲಿಗೆರೆ (ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ), ಒಂಕ್ಕುಂದ (ಬೆಳಗಾವಿ ಜಿಲ್ಲೆಯ ಒಕ್ಕುಂದ) ಈ ನಾಲ್ಕು ನಗರಗಳ ನಡುವಿನ ವಿಸ್ತಾರ ಪ್ರದೇಶವನ್ನು 'ತಿರುಳ್ಗನ್ನಡ ನಾಡು' ಎಂದು ಕರೆಯಲಾಗುತ್ತಿತ್ತು.

'ಕುರಿತೋದದೆಯುಂ' ಕಾವ್ಯವನ್ನು ರಚಿಸುವದರಲ್ಲಿ ಈ ನಾಡಿನ ಜನರು ಪರಿಣತರಾಗಿದ್ದರು. ಒಳ್ಳೆಯ ಕಲಿಗಳು, ಚೆಲುವಾದ ರೂಪವುಳ್ಳವರು, ಸಜ್ಜನರು, ಅಭಿಮಾನಿಗಳು, ಗಂಭೀರ ಸ್ವಭಾವದವರು, ವಿವೇಕಿಗಳು ಆಗಿದ್ದರು. ಅಷ್ಟೇ ಅಲ್ಲ ಕಿರುಮಕ್ಕಳು ಕೂಡ ವಿವೇಕವನ್ನು ಹೇಳುವ ಸಾಮರ್ಥ್ಯವನ್ನು ಪಡೆದಿದ್ದರು. 'ಕನ್ನಡ ಜನರನ್ನು ಕುರಿತು ಕವಿರಾಜಮಾರ್ಗಕಾರನ ಈ ಎಲ್ಲ ಮಾತುಗಳು, ಉತ್ಕಟವಾದ ಪ್ರೀತಿ ಅಭಿಮಾನಗಳಿಂದ ಪುಟಿಯುತ್ತವೆ. ಕನ್ನಡ ಜನ 'ಚದುರರ್ ನಿಜದಿಂ' ಒಳ್ಳೆಯ ಮಾತುಗಾರರು; ಒಳ್ಳೆಯ ವಿಮರ್ಶಕರು, ಸುಭಟರು, ಕವಿಗಳೂ, ಗುಣಿಗಳೂ, ಅಭಿಮಾನಿಗಳು, ಅತ್ಯುಗ್ರರು, ಗಂಭೀರ ಚಿತ್ತರು, ವಿವೇಕಿಗಳು ಎಂಬ ಒಂದೊಂದು ಮಾತು ಕವಿರಾಜಮಾರ್ಗಕಾರನು ಕಂಡ ಕನ್ನಡಿಗರನ್ನು ವರ್ಣಿಸುವ ಮಾತುಗಳಷ್ಟೇ ಆಗದೆ ಕನ್ನಡ ನಾಡಿನ ಜನ ಎಲ್ಲ ಕಾಲಕ್ಕೂ ಹೀಗಿರಬೇಕು ಎಂಬ ಬಹುದೊಡ್ಡ ಆಶಯವನ್ನೂ ಸೂಚಿಸುವಂತೆ ತೋರುತ್ತಿದೆ'[೧೦] ಕವಿರಾಜಮಾರ್ಗಕಾರನು ತನ್ನ ಕಾಲದ ನಾಡು, ನುಡಿ, ಜನರ ಬಗ್ಗೆ ಅಭಿಮಾನದಿಂದ ಗದ್ಯ ಕವಿಗಳನ್ನು, ಪದ್ಯ ಕವಿಗಳನ್ನು, ಕಾವ್ಯ ಪ್ರಕಾರಗಳನ್ನೂ ಹೆಸರಿಸಿದ್ದಾನೆ. 'ವಿಮಲೋದಯ ನಾಗಾರ್ಜುನ ಸಮೇತ ಜಯಬಂಧು ದುರ್ವಿನೀತಾದಿಗಳು' ಕನ್ನಡದ ಆ ಕಾಲದ ಬಹುಮುಖ್ಯ ಕವಿಗಳಾಗಿರಬೇಕು. ಈ ಹೊತ್ತಿಗೂ ಈ ಕವಿಗಳು ರಚಿಸಿದ ಕೃತಿಗಳು ಲಭ್ಯವಾಗಿಲ್ಲ. ಚಾಳುಕ್ಯ ಎರಡನೆಯ ತೈಲಪ ಮಾನ್ಯಖೇಟ ನಗರವನ್ನು ಯುದ್ಧದ ಸಮಯದಲ್ಲಿ ಅಗ್ನಿಗೆ ಆಹುತಿ ಮಾಡಿದಾಗ ರಾಷ್ಟ್ರಕೂಟರ ರಾಜಧಾನಿಯಾದ ಮಾನ್ಯಖೇಟದಲ್ಲಿದ್ದ ಮಹತ್ವದ ಅನೇಕ ಗ್ರಂಥಗಳಿರುವ ಭಾಂಡಾರ ಅಗ್ನಿಗೆ ವಶವಾಯಿತು. ಕವಿರಾಜಮಾರ್ಗಕಾರ ಹೆಸರಿಸಿರುವ ಕೃತಿಗಳು ಅಗ್ನಿಗೆ ಸಿಕ್ಕು ನಾಶವಾಗಿರಬೇಕು.[೧೧] ಆದರೆ ಈ ಎರಡನೆಯ ತೈಲಪ ರಾಷ್ಟ್ರಕೂಟರನ್ನು ಸೋಲಿಸಿ ಈ ಅನಾಹುತಕ್ಕೆ ಕಾರಣನಾದರೂ ಕಲ್ಯಾಣನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಕನ್ನಡ ಸಾಹಿತ್ಯ-ಸಂಸ್ಕೃತಿಯನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸಿದನು. ಇದೇ ತೈಲಪನ ಮಗ ಸತ್ಯಾಶ್ರಯನನ್ನು ಭೀಮನಿಗೆ 'ತಗುಳ್ಚಿ' ರನ್ನ ಕವಿ **'ಸಾಹಸ ಭೀಮವಿಜಯ'** ಎಂಬ ಕೃತಿಯನ್ನು ರಚಿಸಿದ್ದು ಈ ಪ್ರಾಂತ್ಯದಲ್ಲಿಯೆ. **'ಪಂಚತಂತ್ರ'**ದ ಕೃತಿಕಾರ ದುರ್ಗಸಿಂಹನು ಈ ಸತ್ಯಾಶ್ರಯನ ತಮ್ಮನ ಮಗನಾದ ಎರಡನೆಯ ಜಯಸಿಂಹನ ಆಶ್ರಯದಲ್ಲಿ ಸಂಧಿವಿಗ್ರಹಿ ಆಗಿದ್ದನು. **'ಛಂದೋಂಬುಧಿ'** ಹಾಗೂ **'ಕರ್ನಾಟಕ ಕಾದಂಬರಿ'** ಕೃತಿಗಳ ಮೊದಲನೆಯ ನಾಗವರ್ಮ, **'ಜಾತಕ ತಿಲಕ'** ಎಂಬ ಮೊಟ್ಟ ಮೊದಲ ಜ್ಯೋತಿಷ್ಯ ಶಾಸ್ತ್ರವನ್ನು ರಚಿಸಿದ ಶ್ರಿಧರಾಚಾರ್ಯ, **'ಲೋಕೋಪಕಾರ'** ಎಂಬ ಜ್ಯೋತಿಷ್ಯ, ವಾಸ್ತು, ವೈದ್ಯ, ಸೂಪಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಯನ್ನು ರಚಿಸಿದ ಚಾವುಂಡರಾಯ, **'ಧರ್ಮಾಮೃತ'**ದ ನಯಸೇನ ಮುಂತಾದ ಪ್ರಮುಖ ಕವಿಗಳ ನೆಲೆ ಈ ಪ್ರಾಂತ್ಯವೇ ಆಗಿದೆ.

ಆದಿ ಕವಿಯೆಂದೇ ಖ್ಯಾತಿ ಪಡೆದ ಪಂಪ ಹುಟ್ಟಿ ಬೆಳೆದ ಸ್ಥಳ 'ವೆಂಗಿಪಳು' ಎಂಬುದು ಕಲ್ಯಾಣಕ್ಕೆ ಹತ್ತಿರವಾಗಿದೆ. ಪಂಪನು ಆಶ್ರಯ ಪಡೆದದ್ದು ಕನ್ನಡ ಸೀಮೆಗೆ ಹೊಂದಿಕೊಂಡಿರುವ ಕರೀಮ್ ನಗರ ಜಿಲ್ಲೆಯ ಇಂದಿನ ವೆಮುಲವಾಡವನ್ನು ಆಳುತ್ತಿದ್ದ ಚಾಳುಕ್ಯ ವಂಶದ ಎರಡನೆಯ ಅರಿಕೇಸರಿ ಎಂಬ ಸಾಮಂತನಲ್ಲಿ. ಅರಿಕೇಸರಿಯ ವಂಶದ ಮೂಲ ಪುರುಷನಾದ ಯುದ್ಧಮಲ್ಲನ ರಾಜಧಾನಿಯಾದ 'ಬೋದನ'ವು ಕನ್ನಡ ಪ್ರದೇಶವೇ ಆಗಿದೆ. ಕವಿರಾಜಮಾರ್ಗಕಾರ ಹೇಳುವಂಥ ಕನ್ನಡ ಸೀಮೆ ಗೋದಾವರಿ

ನದಿ ಪ್ರದೇಶವು ನಾದೇಂಡ, ನಿಜಾಮಾಬಾದು, ಕರೀಮ್ ನಗರ ಜಿಲ್ಲೆಗಳನ್ನು ಒಳಗೊಂಡಿದೆ. 'ವೆಂಗಿಪಳು' ಎಂಬುದು ಗೋದಾವರಿಯಿಂದ ಹಿಡಿದು ಮೂಸಾ ನದಿಗಳ ನಡುವಿನ ವಿಸ್ತಾರದಲ್ಲಿದೆ ಎಂದು ಗುರುತಿಸಲಾಗಿದೆ. ಪಂಪನ ಸಮಾಧಿ 'ಪರಭಣಿ' ಯಲ್ಲಿ ಸಿಕ್ಕ ಬಗ್ಗೆ ಈ ಹಿಂದೆ ವರದಿಯಾಗಿತ್ತು. ಈ ಪ್ರದೇಶ ಕೂಡ ಈ ಪ್ರಾಂತ್ಯಕ್ಕೆ ಸೇರಿದೆ. ಪಂಪ ಕವಿಯ ಹುಟ್ಟೂರು, ಬೆಳೆದ ಊರು ಮತ್ತು ಪ್ರದೇಶದ ಬಗ್ಗೆ ಮೊದಲು ವೆಂಗಿಪಳು, ಪುಲಿಗೆರೆ ಈಗ ಅಣ್ಣಿಗೇರಿಗೆ ಬಂದು ನಿಂತಿದೆಯಾದರೂ ಈ ಅಣ್ಣಿಗೇರಿಯೂ ತಿರುಳ್ಗನ್ನಡದ ನಾಡೇ ಆಗಿದೆ. ಹೀಗಾಗಿ 'ಆದಿಪುರಾಣ', 'ವಿಕ್ರಮಾರ್ಜುನ ವಿಜಯ' ಕೃತಿಗಳು ಈ ಪ್ರಾಂತ್ಯದಲ್ಲಿ ಸೃಷ್ಟಿಯಾಗಿವೆ. 'ಸಾಜದ ಪುಲಿಗೆರೆಯ ತಿರುಳ್ಗನ್ನಡದೊಳ್' (ವಿಕ್ರಮಾರ್ಜುನ ವಿಜಯ) 'ಕನ್ನಡಮೆರಡರುನೂರರ ಕನ್ನಡ ಮಾ ತಿರುಳು ಕನ್ನಡಂ' (ಸಾಹಸಭೀಮ ವಿಜಯ) ಎಂದು ವ್ಯಕ್ತವಾಗಿರುವುದನ್ನು ನೋಡಿದರೆ ಇದು ಈ ತಿರುಳ್ಗನ್ನಡದ ಅನನ್ಯತೆಯನ್ನು ಸೂಚಿಸುತ್ತದೆ. ತಿರುಳ್ಗನ್ನಡ ಪ್ರದೇಶವು ನಿಜಾಂ ಪ್ರಾಂತ್ಯಕ್ಕೆ ಸೇರಿಹೋಗಿತ್ತು.

ಚಾಳುಕ್ಯ ಅರಸನಾದ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕಾಶ್ಮೀರದಿಂದ ಬಿಲ್ಹಣನೆಂಬ ಕವಿ ಕಲ್ಯಾಣಕ್ಕೆ ಬಂದು 'ವಿಕ್ರಮಾಂಕದೇವ ಚರಿತೆ' ರಚಿಸಿದನು. ಮತ್ತೊಬ್ಬ ಕವಿ ವಿಜ್ಞಾನೇಶ್ವರನು 'ಮಿತಾಕ್ಷರ' ಎಂಬ ಹಿಂದೂ ನ್ಯಾಯಾಂಗ ಗ್ರಂಥವನ್ನು ರಚಿಸಿದನು. ಈ ಅರಸನ ದಂಡನಾಯಕರಲ್ಲಿ ಒಬ್ಬನಾದ ಕೊಂಡಗುಳಿ ಕೇಶಿರಾಜ ಪ್ರಮುಖ ಕವಿಯಾಗಿದ್ದನೆಂದು ಗುರುತಿಸಲಾಗಿದೆ. ವಿಕ್ರಮಾದಿತ್ಯನ ಕಾಲದಲ್ಲಿ ಶಾಸನಗಳು ಹೇರಳವಾಗಿ ಸೃಷ್ಟಿಯಾದವು. ಅವುಗಳ ಸಾಹಿತ್ಯ ಕೂಡ ಮುಖ್ಯವಾಗಿದೆ. ಈ ಚಟುವಟಿಕೆಗಳೆಲ್ಲವೂ ಈ ಪ್ರಾಂತ್ಯದಲ್ಲಿ ನಡೆದಿವೆ. ಕಲ್ಹಣನ 'ರಾಜತರಂಗಿಣಿ' ಎಂಬ ಕೃತಿ ಕಾಶ್ಮೀರದ ಅಧಿಕೃತ ಚರಿತ್ರೆಯ ಆಕರ ಗ್ರಂಥವೆಂದು ಮನ್ನಣೆ ಪಡೆದಿದೆ. ಈ ಕಲ್ಹಣ ಕವಿಯು ಕಲ್ಯಾಣ ನಾಡಿನ ಕನ್ನಡಿಗರ ಸಂಸ್ಕೃತಿಯನ್ನು ಅಭಿಮಾನದಿಂದ ವ್ಯಕ್ತಪಡಿಸಿದ್ದಾನೆ. ಕಾಶ್ಮೀರದ ಅರಸ ಹರ್ಷನು ಕಲ್ಯಾಣ ನಾಡಿನ ಆರನೆಯ ವಿಕ್ರಮಾದಿತ್ಯನ ಕಾಲದ ಜೀವನ ಕ್ರಮಗಳನ್ನು ಅನುಸರಿಸುತ್ತಿದ್ದನೆಂದು ಚಿತ್ರಿಸಲಾಗಿದೆ. ಕಲ್ಯಾಣ ನಾಡಿನ ಕನ್ನಡಿಗರ ಸಂಸ್ಕೃತಿಯು ಅನ್ಯ ಪ್ರಾಂತ್ಯದ ಜನರಿಗೆ ಅನುಕರಣನಿಯವಾಗಿತ್ತು ಎಂಬ ಅಭಿಮಾನ ಇದರಿಂದ ಗುರುತಿಸಬಹುದು.

ಪೊನ್ನನಿಗೆ ಆಶ್ರಯ ನೀಡಿದ ರಾಷ್ಟ್ರಕೂಟ ಅರಸನಾದ ಮೂರನೆ ಕೃಷ್ಣ ಈ ಪ್ರಾಂತ್ಯದವನು. ಪೊನ್ನನಿಂದ **'ಶಾಂತಿ ಪುರಾಣ'**ವನ್ನು ಬರೆಸಿದ ಮಲ್ಲಪ-ಪುನ್ನಿಮಯ್ಯನವರು, **'ಧರ್ಮಾಮೃತ'** ಕೃತಿಯ ನಯಸೇನ (ಮುಧೋಳ್), **'ಸಮಯ ಪರೀಕ್ಷೆ'** ಕೃತಿಯ ಬ್ರಹ್ಮಶಿವ(ಪೊಟ್ಟಣಕೆರೆ) ಮುಂತಾದವರು ಈ ಪ್ರಾಂತ್ಯದವರು. ನಯಸೇನ, ಕುಮಾರವ್ಯಾಸ, ಚಾಮರಸ, ಸರ್ವಜ್ಞ ಮುಂತಾದ ಅಗ್ರಮಾನ್ಯ ಕವಿಗಳು 'ತಿರುಳ್ಗನ್ನಡ' ನಾಡಿನವರಾಗಿ ಕನ್ನಡ ಭಾಷೆಯ ಸತ್ವವನ್ನು ತಮ್ಮ ಕೃತಿಗಳ ಮೂಲಕ ತೋರಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ಮೂಡಿ ನಿಂತದ್ದು ಈ ಪ್ರಾಂತ್ಯದಲ್ಲೇ. ವಚನಕಾರರು ನಡೆಸಿದ ಆಂದೋಲನವು ಜಾಗತಿಕವಾಗಿ ಮುಖ್ಯವಾಗಿದೆ. ಸಾಹಿತ್ಯವೂ ಸೇರಿದಂತೆ ಅನೇಕ ಬಗೆಯಲ್ಲಿ ಹೊಸ ಚಿಂತನೆಗೆ ಕಾರಣರಾಗಿದ್ದಾರೆ. ಕನ್ನಡ ಭಾಷೆ, ಅಚ್ಚಗನ್ನಡ ನುಡಿಗಟ್ಟಿನ ವಚನಗಳು ಜಾಗತಿಕ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳಾಗಿವೆ. ಮುಕ್ತಾಯಕ್ಕ, ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣ, ಮಾದಾರ ಚೆನ್ನಯ್ಯ, ಅಂಬಿಗರ ಚೌಡಯ್ಯ ಮುಂತಾದ ಅನೇಕ ಮಹತ್ವದ ವಚನಕಾರರಿಗೆ ಅವರ ಕಾರ್ಯಕ್ಷೇತ್ರಕ್ಕೆ ನೆಲೆಯಾದ ಬಸವಕಲ್ಯಾಣ ಈ ಪ್ರಾಂತ್ಯಕ್ಕೆ ಸೇರಿದೆ. ಬಹುಮುಖಿ ಚಳುವಳಿಯಿಂದ ಸಮಾಜದಲ್ಲಿ ಹೊಸ ವಿಚಾರ ಹೊಸ ತಿಳುವಳಿಕೆಯನ್ನು ಮೂಡಿಸಲು ಪ್ರಯತ್ನಿಸಿದರು. ಈ ಹೊತ್ತಿನಲ್ಲಿ ನಮ್ಮನ್ನು ಕಾಡುವ, ಬೆರಗುಗೊಳಿಸುವ ಕೆಲಸವನ್ನು ಈ ವಚನಕಾರರು ಎಂಟನೂರು ವರ್ಷಗಳ ಹಿಂದೆಯೇ ಈ ಪ್ರಾಂತ್ಯದಲ್ಲಿ ನಡೆಸಿದ್ದರು. ವಚನ ಚಳುವಳಿಯ ಸಂದರ್ಭದಲ್ಲಿ ಕನ್ನಡ ಲಿಪಿಯನ್ನು ತೀಡಿಸುವ ಮೂಲಕ ವಚನ ರಚನೆಯವರೆಗೆ ಜನಸಾಮಾನ್ಯರಲ್ಲಿ ಕನ್ನಡ ಭಾಷೆಯನ್ನು ಹದಗೊಳಿಸಿದ್ದು

ದೊಡ್ಡ ಸಾಧನೆಯೇ ಸರಿ. ಈ ಹೊತ್ತಿನಲ್ಲಿಯೂ ಸಾಧ್ಯವಾಗದ ಸಾಕ್ಷರತೆಯು ಆ ಹೊತ್ತಿನಲ್ಲಿ ಸಾಧ್ಯವಾಗಿತ್ತು ಎಂಬುದು ಬೆರಗಿನ ಸಂಗತಿಯೇ. ರಗಳೆಯ ಕವಿ ಹರಿಹರ, ವಚನಕಾರರ ನಂತರದಲ್ಲಿ ಮೂಡಿ ಬಂದ ದಾಸರಿಗೆ ಈ ಪ್ರಾಂತ್ಯವೇ ನೆಲೆಯಾಗಿದೆ. ಹನ್ನೆರಡನೆಯ ಶತಮಾನದ ನಂತರ ಪರಕೀಯರ ದಾಳಿ ಪ್ರಾರಂಭವಾಗುತ್ತಿದ್ದಂತೆ ಕೃಷ್ಣಾ ನದಿಯ ಮೇಲಿನ ಪ್ರಾಂತ್ಯದಲ್ಲಿ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿ ಹಿನ್ನೆಲೆಗೆ ಸರಿಯಲಾರಂಭಿಸಿ ಹತ್ತೊಂಬತ್ತನೆಯ ಶತಮಾನದ ಹೊತ್ತಿಗೇ ಈ ಪ್ರಾಂತ್ಯದಲ್ಲಿ ಕನ್ನಡ ಭಾಷೆ ಲಿಪಿಯನ್ನೂ ಕಳೆದುಕೊಳ್ಳುವ ಸ್ಥಿತಿಯನ್ನು ತಲುಪಿತು. ಕನ್ನಡಿಗರಿಗೆ ಕನ್ನಡ ಲಿಪಿ ಅಪರಿಚಿವಾಯಿತು. ಭಾಷೆ ನಾಶವಾದ ಮೇಲೆ ಆ ಭಾಷೆಯ ಸಂಸ್ಕೃತಿಗೆ ಸ್ಥಾನವಿರುವುದಿಲ್ಲ. ವಿಜಯನಗರ ಸಾಮ್ರಾಜ್ಯ, ಸುರಪುರ ಸಂಸ್ಥಾನದಿಂದಾಗಿ ಕೃಷ್ಣಾನದಿಯ ಕೆಳಗಿನ ಪ್ರದೇಶದಲ್ಲಿ ಕನ್ನಡ ಭಾಷೆ-ಸಾಹಿತ್ಯ ಸಂಸ್ಕೃತಿಗೆ ಜೀವವಿತ್ತು. ಹದಿನೆಂಟನೆಯ ಶತಮಾನದಲ್ಲಿ ಆಳ್ವಿಕೆಗೆ ಬಂದ ನಿಜಾಮರಿಂದ ಈ ಪ್ರದೇಶದಲ್ಲಿಯೂ ಕನ್ನಡ ಭಾಷೆ ಹಿನ್ನೆಲೆಗೆ ಸರಿದುಹೋಯಿತು.

ರಾಜಕೀಯ ಸ್ಥಿತ್ಯಂತರಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅವಸ್ಥೆ

ಆರನೆಯ ಶತಮಾನದಲ್ಲಿ ಬಾದಾಮಿಯ ಚಾಳುಕ್ಯರು, ಏಳನೆಯ ಶತಮಾನದಲ್ಲಿ ಚಾಳುಕ್ಯ ವಂಶದ ಪುಲಕೇಶಿ, ಎಂಟನೆಯ ಶತಮಾನದಲ್ಲಿ ರಾಷ್ಟ್ರಕೂಟರು, ನಂತರ ಹತ್ತು-ಹನ್ನೊಂದನೆಯ ಶತಮಾನದವರೆಗೆ ಕಲ್ಯಾಣ ಚಾಳುಕ್ಯರು ಕನ್ನಡ ಅರಸರಾಗಿ ಈ ಪ್ರಾಂತ್ಯದಲ್ಲಿ ಬಾಳಿದರು. ಬಾದಾಮಿಯ ಚಾಳುಕ್ಯರು ಆಂಧ್ರ ಪ್ರದೇಶದವರೆಗೆ, ರಾಷ್ಟ್ರಕೂಟರು ಗುಜರಾತದವರೆಗೆ ಕನ್ನಡಿಗರ ರಾಜ್ಯವನ್ನು ವಿಸ್ತರಿಸಿದ್ದರು. ಚಾಳುಕ್ಯ, ರಾಷ್ಟ್ರಕೂಟರ ಆಡಳಿತ ಭಾಷೆ ಮತ್ತು ಜನಸಾಮಾನ್ಯರ ಭಾಷೆ ಕನ್ನಡವೇ ಆಗಿತ್ತು. ಮಳಖೇಡ, ಕಲ್ಯಾಣ, ಬಾದಾಮಿ, ಕೊಪ್ಪಳ ನಾಡುಗಳು ಕನ್ನಡಿಗರ ಸಾಹಿತ್ಯ-ಸಾಂಸ್ಕೃತಿಕ ಕೇಂದ್ರಗಳಾಗಿ ಮಾನ್ಯತೆ ಪಡೆದಿದ್ದವು. ವಿದೇಶಿ ಪ್ರವಾಸಿಗರು ಈ ಕೇಂದ್ರಗಳ ಬಗ್ಗೆ ಅಭಿಮಾನ ವ್ಯಕ್ತಪಡಿಸಿದ್ದಾರೆ. ಹದಿಮೂರನೆಯ ಶತಮಾನದ ಹೊತ್ತಿಗೆ ಕಲ್ಯಾಣ ಚಾಳುಕ್ಯರ ರಾಜ್ಯವು ಒಡೆದು ಮೂರು ಭಾಗಗಳಾಗಿ ನಿಂತವು. ಓರಂಗಲ್ಲಿನ ಕಾಕತೀಯರು, ದೇವಗಿರಿಯ ಯಾದವರು, ದೋರಸಮುದ್ರದ ಬಲ್ಲಾಳರು ಇವರೇ ಮೂರು ರಾಜ್ಯಗಳಲ್ಲಿ ಪ್ರಭುತ್ವ ಪಡೆದು ಆಳತೊಡಗಿದರು. ತೆಲುಗು (ಕಾಕತೀಯರು), ಮರಾಠಿ (ಯಾದವರು), ಕನ್ನಡ (ಬಲ್ಲಾಳರು) ಈ ಭಾಷೆಗಳು ಇವರ ರಾಜ್ಯಗಳಲ್ಲಿದ್ದವು. ಉತ್ತರದ ಅಲ್ಲಾವುದ್ದೀನ್ ಖಿಲ್ಜಿ, ಮಲ್ಲಿಕಾಫರ್‌ರ ದಾಳಿಗೆ ಸಿಕ್ಕು ಈ ರಾಜ್ಯಗಳು ಸೋತು ಕಣ್ಮರೆಯಾಗತೊಡಗಿದವು. ಹದಿಮೂರನೆಯ ಶತಮಾನದ ನಂತರದಿಂದ ಈ ಪ್ರಾಂತ್ಯವು ಉತ್ತರದ ಅರಸರ ದಾಳಿಗೆ ಸಿಕ್ಕು ನಿರಂತರವಾಗಿ ಅವರ ಆಳ್ವಿಕೆಗೆ ಒಳಪಟ್ಟಿತ್ತು. ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಗುವವರೆಗೆ ಈ ಪ್ರಾಂತ್ಯದಲ್ಲಿ ಪುನಃ ಕನ್ನಡ ಅರಸರಾಗಲಿ, ಕನ್ನಡ ಭಾಷೆಯಾಗಲಿ ನೆಲೆಗೊಳ್ಳಲು ಅವಕಾಶ ದೊರೆಯಲಿಲ್ಲ. ಆಳರಸರ ಭಾಷೆಯಾಗಿದ್ದ ಕನ್ನಡ ಹದಿಮೂರನೆಯ ಶತಮಾನದ ನಂತರ ದಿನಕಳೆದಂತೆ ಬರೆಹದ ಭಾಷೆಯಾಗಿ ಉಳಿಯದೆ ಕೇವಲ ಜನಸಾಮಾನ್ಯರ ಆಡು ಭಾಷೆಯಾಗಿ ಮಾತ್ರ ಜೀವ ಉಳಿಸಿಕೊಂಡಿತ್ತು. ಅದರಲ್ಲೂ ಕೃಷ್ಣಾನದಿಯ ಮೇಲಣ ಪ್ರದೇಶವಂತೂ ಕನ್ನಡ ಲಿಪಿಗಳನ್ನು ಮರೆಯುವಂತಾಯಿತು. ಕೃಷ್ಣಾನದಿಯ ಕೆಳಗಿನ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯ ತಲೆ ಎತ್ತಿದ್ದರಿಂದ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಯ ಬೆಳವಣಿಗೆಗೆ ಅವಕಾಶ ದೊರೆತ್ತಿತ್ತು. ಕೃಷ್ಣಾ ನದಿಯ ಮೇಲಿನ ನಾಡಿನಲ್ಲಿ ಪುನಃ ಹದಿನೇಳನೆಯ ಶತಮಾನದಲ್ಲಿ ಸುರಪುರ ಸಂಸ್ಥಾನ ತಲೆ ಎತ್ತಿದ್ದರಿಂದ ಕನ್ನಡ ಭಾಷೆ, ಸಂಸ್ಕೃತಿಗೆ ಜೀವ ಮೂಡಿತು, ನಿಜ. ಆದರೆ ಈ ಹೊತ್ತಿಗಾಗಲೇ ಮರಾಠಿ ಭಾಷೆ ಈ ನಾಡಿನಲ್ಲಿ ತುಂಬಿ ಹೋಗಿತ್ತು. ಸುರಪುರದ ಸಂಸ್ಥಾನವು ಮೊಗಲರನ್ನು, ಪೇಶ್ವೆಯರನ್ನು ಎದುರಿಸಿ ಬಾಳಿತು. ಆದರೆ ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ಬ್ರಿಟಿಷರ ದಾಳಿಗೆ ಸಿಕ್ಕು ಸೋತು ಹೋದರು. ಈ ಸಂಸ್ಥಾನದ ಪ್ರಾಂತ್ಯವನ್ನು ನಿಜಾಂ ಆಡಳಿತಕ್ಕೆ ಬ್ರಿಟಿಷರೇ ಒಪ್ಪಿಸಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಒಂದು ದಶಕದ ನಂತರ ಬಹುಮನಿ ರಾಜ್ಯ ಸ್ಥಾಪನೆಯಾಯಿತು. ನಂತರ ಆದಿಲ್‌ಶಾಹಿ

ರಾಜ್ಯ ಆಳ್ವಿಕೆಗೆ ಬಂದು ಈ ಪ್ರಾಂತ್ಯದಲ್ಲಿ ಸುಮಾರು ಎರಡುನೂರು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಈ ಅರಸರೇ ಕಾರಣರಾದರು. ನಂತರ ಈ ಅರಸರ ರಾಜ್ಯ ಐದು ಭಾಗಗಳಾಗಿ ಬಿಜಾಪುರ, ಕಲ್ಬುರ್ಗಿ, ಬೀದರ ಜಿಲ್ಲಾ ಪ್ರದೇಶಗಳನ್ನು ಆಳತೊಡಗಿತು. ನಂತರ ಮೊಗಲರ ದಾಳಿಯಲ್ಲಿ ಈ ಅರಸರೂ ಸೋತು ಕಣ್ಮರೆಯಾದರು. ಹೀಗಾಗಿ ಅನ್ಯ ಸಂಸ್ಕೃತಿಯ ಅರಸರ ಆಳ್ವಿಕೆಯಿಂದ ಈ ಪ್ರಾಂತ್ಯದಲ್ಲಿ ಸುಮಾರು ಆರುನೂರು ವರ್ಷಗಳ ಕಾಲ ಕನ್ನಡ ಭಾಷೆ ಹಿನ್ನೆಲೆಗೆ ಸರಿದು ಬಿಟ್ಟಿತ್ತು. ಬಹಮನಿ ಅರಸರ ಕಾಲದಲ್ಲಿ ಸಾಮಾನ್ಯವಾಗಿ ಮತ್ತು ಸಹಜವಾಗಿ ಫಾರಸಿ ಭಾಷೆ ಆಡಳಿತದಲ್ಲಿ ಆದ್ಯತೆ ಪಡೆದಿತ್ತು. ಸಾಹಿತ್ಯ, ಶಾಸನಗಳ ಭಾಷೆಯೂ ಫಾರಸಿಯಾಗಿತ್ತು. ಆಡಳಿತದಲ್ಲಿ ಕನ್ನಡಿಗರಿಗೆ ಸ್ಥಾನವಿರಲಿಲ್ಲ. ಭಾಷೆಯೇ ಬೇರೆಯಾದ ಮೇಲೆ ಆಡಳಿತದಲ್ಲಿ ಸೇರುವ ಪ್ರಶ್ನೆಯೇ ಇರಲಿಲ್ಲ. ಬದಲಾಗಿ ಉತ್ತರದಿಂದ ಜನರನ್ನು ಕರೆಸಿ ರಾಜ್ಯಾಡಳಿತದಲ್ಲಿ ನೇಮಿಸಿಕೊಳ್ಳಲಾಯಿತು. ಉತ್ತರದಿಂದ ಬಂದವರಲ್ಲಿ ಬಹುತೇಕ ಜನರು ಮರಾಠಿಗಳು, ರಜಪೂತರು ಆಗಿದ್ದರು. ಆದಿಲ್ ಶಾಹಿಗಳ ರಾಜ್ಯದ ಆಡಳಿತದಲ್ಲಿ ಬದಲಾವಣೆಗಳು ಕಾಣಿಸಿಕೊಂಡವು. ಎರಡನೆಯ ಇಬ್ರಾಹಿಂ ಕಾಲದಲ್ಲಿ ಫಾರಸಿ ಕಲಿತ ಕನ್ನಡಿಗರು ಆಡಳಿತದಲ್ಲಿ ಸೇರಿರುವ ಸಾಧ್ಯತೆಗಳು ಕಂಡರೂ ಕನ್ನಡಕ್ಕೆ ಸ್ಥಾನವಿರಲಿಲ್ಲ. ಮನುಷ್ಯನ ಸಂಸ್ಕೃತಿಯು ಅವನ ಭಾಷೆಯನ್ನು ಅವಲಂಬಿಸಿರುತ್ತದೆ. ಆ ಭಾಷೆಯೇ ನಾಶವಾದ ಮೇಲೆ ಅವನ ಸಂಸ್ಕೃತಿಯೂ ನಾಶವಾಗಿ ಹೋಗುತ್ತದೆ. ಕನ್ನಡಿಗರ ಸ್ಥಿತಿ ಈ ಪ್ರಾಂತ್ಯದಲ್ಲಿ ಹೀಗಾಯಿತು.

ಆದರೆ ಮುಸ್ಲಿಮ್ ಆಳ್ವಿಕೆ ಬಹುದೀರ್ಘ ಕಾಲ ನಡೆದುದರಿಂದ 'ಇಸ್ಲಾಂ' ಸಂಸ್ಕೃತಿಯ ಧರ್ಮ ಮತ್ತು ಭಾಷೆಗಳು ಮೂಲ ಸ್ಥಳೀಯ ಜನಸಮುದಾಯಗಳ ಮೇಲೆ ಪ್ರಭಾವ ಬೀರತೊಡಗಿದವು. ಪೇಶ್ವೆಯರ ಆಳ್ವಿಕೆಯಿಂದ ಮರಾಠಿ ಭಾಷೆ ಮತ್ತು ಸಂಸ್ಕೃತಿ ಈ ಪ್ರಾಂತ್ಯದಲ್ಲಿ ಸೇರಿತು. ಅದರಲ್ಲೂ ಮೇಲ್ವರ್ಗದ ವೈದಿಕ ಸಮುದಾಯಗಳಲ್ಲಿ ಹೆಚ್ಚು ಪ್ರಭಾವ ಬೀರಿತು. ಉತ್ತರದಿಂದ ಬಂದ ಸೂಫಿಗಳು ಈ ಪ್ರಾಂತ್ಯದ ಕೆಳ ಸಮುದಾಯಗಳ ಮೇಲೆ ತೀವ್ರ ಪರಿಣಾಮ ಬೀರಿದರು. ಈ ಪ್ರಾಂತ್ಯದ ಜನ ಸಮುದಾಯಗಳಲ್ಲೂ ಒಂದೇ ಬಗೆಯ ಧಾರ್ಮಿಕ ನಂಬಿಕೆ, ಪದ್ಧತಿಗಳೇನೂ ಇರಲಿಲ್ಲ. ಮೇಲ್ವರ್ಗದ ಲಿಂಗಾಯಿತರ ಮತ್ತು ವೈದಿಕರ ಧಾರ್ಮಿಕ ನಂಬಿಕೆ, ಪದ್ಧತಿಗಳು ಬೇರೆ ಬೇರೆ ರೀತಿಯಾಗಿದ್ದವು. ಕೆಳವರ್ಗದ ಜನರ ಜೀವನ ಕ್ರಮಗಳೂ ಬೇರೆಯಾಗಿದ್ದವು. ಹೀಗಿರುವಾಗ ಪರಕೀಯರ ಆಳ್ವಿಕೆ ಅವರ ಧಾರ್ಮಿಕತೆ, ಸಂಸ್ಕೃತಿಗಳು, ಸೂಫಿ ಸಂತರ ಸಂಸ್ಕೃತಿಯೂ ಸೇರಿಕೊಂಡು ಈ ಪ್ರಾಂತ್ಯದಲ್ಲಿ ಒಂದು ರೀತಿಯ ಸಂಕರ ಸಂಸ್ಕೃತಿಯೇ ರೂಪಗೊಂಡು ನಿರ್ಮಾಣವಾಯಿತು. 'ಹಿಂದೂ ಮುಸ್ಲಿಂ' ಸಂಸ್ಕೃತಿಗಳು ಒಂದರೊಳಗೊಂದು ಬೆರೆತುಹೋದವು. ಈ ಮಾತು ಹೆಚ್ಚು ಕೆಳವರ್ಗದ ಜನ ಸಮುದಾಯಗಳಿಗೆ ಅನ್ವಯಿಸುತ್ತದೆ. ಕೆಳವರ್ಗದ ಹಿಂದುಗಳ ಮೇಲೆ ಪರಕೀಯ ಸಂಸ್ಕೃತಿ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂಬುದನ್ನು ಕಪಟರಾಳ ಕೃಷ್ಣರಾವ್ ಹೀಗೆ ವ್ಯಕ್ತಪಡಿಸಿದ್ದಾರೆ :' ಮುಸಲ್ಮಾನ ಫಕೀರರು ಗುರುಗಳಾದರು. ವೇದವು ಕುರಾನವು ಒಂದೇಯಾಯಿತು. ಈ ಫಕೀರರ ಗೋರಿಗಳೆ ದೇವಸ್ಥಾನಗಳಾದವು. ಕನ್ನಡಿಗರಿಗೆ ಗೋರಿಗಳು ಕುಲದೈವತಗಳಾದವು. ಸಮಾಜದ ಮಾರ್ಗದರ್ಶಿಗಳಾದ ಮೇಲ್ತರಗತಿಯ ಜನರ ಸ್ಥಿತಿಯು ಈ ರೀತಿಯಾಗಿ ಮಾನಸಿಕ ಬದಲಾವಣೆಯಾದಲ್ಲಿ ಸಮಾಜದ ಸಾಮಾನ್ಯ ಜನರು ಲಾಡಿ ಕಟ್ಟಿಕೊಂಡು ದೀನದೀನ ಎನ್ನುತ್ತ ಗೋರಿಗಳಿಗೂ ಪೀರಗಳಿಗೂ ನೈವೇದ್ಯವನ್ನು ಕೊಡುವುದು ರೂಢಿಯಾದದ್ದೇನು ಆಶ್ಚರ್ಯದ ಮಾತಲ್ಲ.'[೧೨]

ಪರ್ಯಾಯ ಲಿಪಿಗಳ ಬಳಕೆ ಹಾಗೂ ಲಿಪಿರಹಿತ ಕನ್ನಡ ಭಾಷೆಯ ಅಸ್ತಿತ್ವ

ಹದಿಮೂರನೆಯ ಶತಮಾನದ ನಂತರ ಬಹಮನಿ-ಆದಿಲ್‌ಶಾಹಿಗಳ ಆಳ್ವಿಕೆಯಿಂದ, ಅವರ ಧರ್ಮ-ಸಂಸ್ಕೃತಿ-ಭಾಷೆಗಳು ಈ ಪ್ರಾಂತ್ಯದ ಜನ ಸಮುದಾಯಗಳಲ್ಲಿ ಒತ್ತಡ ಹೇರಿದವು. ಹತ್ತೊಂಭತ್ತನೆಯ ಶತಮಾನದ ಹೊತ್ತಿಗೆ ಈ ಪ್ರಾಂತ್ಯದ ಜನ ಸಾಮಾನ್ಯರು ಮರಾಠಿ,ಫಾರಸಿ,ಉರ್ದು, ಹಿಂದಿ ಭಾಷೆಗಳ ಜತೆ ಮುಖಾಮುಖಿಯಾದರು. ಸ್ಥಳೀಯವಾಗಿ ಕನ್ನಡ, ತೆಲುಗು

ಭಾಷೆಗಳಂತು ಸರಿಯೇ. ಕನ್ನಡ ಭಾಷೆ ತನ್ನ ಲಿಪಿಯನ್ನು ಕಳೆದುಕೊಳ್ಳಲಾರಂಭಿಸಿತು. ಅದರ ಬದಲು ಮರಾಠಿ ಭಾಷೆಯ ಮೂಲದಿಂದ ಮೋಡಿ ಲಿಪಿ ಹುಟ್ಟಿಕೊಂಡಿತು. ಭಾಷೆ ಕನ್ನಡವೇ. ಲಿಪಿ ಮಾತ್ರ ಮೋಡಿಯಾಗಿತ್ತು. ಶೀಘ್ರ ಬರವಣಿಗೆಗೆ ಈ ಮೋಡಿ ಅನುಕೂಲವಾಗಿ ಪರಿಣಮಿಸಿತು. ಪ್ರಜ್ಞಾವಂತರು ವ್ಯವಹಾರದಲ್ಲೂ ಈ ಲಿಪಿಯನ್ನು ಬಳಸಿಕೊಂಡರು. ಮೋಡಿ ಲಿಪಿ ಚಲನೆಗೆ ಬಂದ ಮೇಲೆ ಕನ್ನಡ ಲಿಪಿ ಕೃಷ್ಣಾ ನದಿಯ ಮೇಲಿನ ನಾಡಿನಲ್ಲಿ ಮಾಯವಾಗತೊಡಗಿತು. ಅನೇಕ ರಾಜಕೀಯ ಒತ್ತಡಗಳಿಂದ ಕನ್ನಡ ಭಾಷೆ ತನ್ನ ಲಿಪಿಯನ್ನು ಮರೆಮಾಚಿಕೊಂಡು ಅದರ ಸ್ಥಾನದಲ್ಲಿ ಬೇರೊಂದು ಲಿಪಿಯನ್ನು ಸೃಷ್ಟಿಸಿಕೊಂಡಿತ್ತು. ಕೊಡೇಕಲ್ಲು ಬಸವಣ್ಣನ ಕಾಲದಲ್ಲಿ ಕನ್ನಡ ಭಾಷೆಯ ಲಿಪಿಗೆ ಬದಲು ಅಮರಗನ್ನಡ ಲಿಪಿಯನ್ನು ಸೃಷ್ಟಿಸಿ ಚಲನೆಗೆ ತರಲಾಯಿತು. ಶೋಧ ನಡೆದರೆ ಕನ್ನಡ ಲಿಪಿಗೆ ಪರ್ಯಾಯವಾಗಿ ಹುಟ್ಟಿಕೊಂಡ ಅನೇಕ ಲಿಪಿಗಳು ಸಿಗಬಹುದು. ಕನ್ನಡ ಭಾಷೆ ಜನಸಾಮಾನ್ಯರ ಅದರಲ್ಲೂ ಕೆಳವರ್ಗದ ಆಡುಮಾತಿನಲ್ಲಿ ಜೀವ ಉಳಿಸಿಕೊಂಡಿತ್ತು. ರಾಜಕೀಯ ಒತ್ತಡಗಳಿಗೆ ಮಣಿದ ಈ ಪ್ರಾಂತ್ಯದ 'ಹಿಂದೂ'ಗಳು 'ಮುಸ್ಲಿಂ' ಮತಕ್ಕೆ ಮತಾಂತರಗೊಂಡರು. ಈ ಮತಾಂತರಗೊಂಡ ಸಮುದಾಯವು ದಖನಿ ಭಾಷೆಯನ್ನು ಅವಲಂಬಿಸಿತೆಂದು ಕಾಣುತ್ತದೆ. ಮೇಲ್ವರ್ಗದ ವೈದಿಕ ಸಮುದಾಯ ಮರಾಠಿ, ಉರ್ದು, ಫಾರಸಿ ಭಾಷೆಗಳನ್ನು ಕಲಿತರು. ಲಿಂಗಾಯಿತರು ಅಲ್ಪಸ್ವಲ್ಪ ವ್ಯವಹಾರಕ್ಕಾಗಿ ಮರಾಠಿ, ಉರ್ದು ಕಲಿತುಕೊಂಡು ತಮ್ಮ ಮನೆಗಳಲ್ಲಿ, ಮಠಗಳಲ್ಲಿ ಕನ್ನಡ ಭಾಷೆಯನ್ನು ಅದರ ಲಿಪಿಯೊಂದಿಗೆ ಉಳಿಸಿಕೊಂಡಿದ್ದರು. ಕೆಳ ಸಮುದಾಯಗಳು ಕೇವಲ ಆಡು ಭಾಷೆಯಾಗಿ ಕನ್ನಡವನ್ನು ಉಳಿಸಿಕೊಂಡಿದ್ದರೂ ಅದು ಮರಾಠಿ, ದಖನಿ ಭಾಷೆಗಳ ಕಲಬರಿಕೆಯಿಂದಾಗಿ ಭಾಷೆ ಕನ್ನಡವಾದರೂ ಅದು ವಿಚಿತ್ರ ಸ್ವರೂಪವನ್ನು ಪಡೆದು ಬೆಳೆಯಿತು. ಬೀದರ ಕನ್ನಡ ಭಾಷೆಯನ್ನು ಕೇಳುತ್ತಿದ್ದರೆ ಅದನ್ನು ಕನ್ನಡ ಭಾಷೆಯೆಂದು ನಂಬುವುದಕ್ಕೆ ಕಷ್ಟವಾಗುತ್ತದೆ. ಜನ ಸಮುದಾಯಗಳು ಬಹು ಭಾಷೆಗಳ ಹೊಡೆತಗಳ ನಡುವೆ ಕನ್ನಡ ಭಾಷೆಯನ್ನು ಅದು ಹೇಗೋ ಉಳಿಸಿಕೊಂಡು ಬಂದಿರುವುದು ಪವಾಡದಂತೆ ಕಾಣುತ್ತದೆ.

ಈ ಪ್ರಾಂತ್ಯದಲ್ಲಿ ಮೋಡಿ ಲಿಪಿ ತುಂಬಾ ಜನಪ್ರಿಯವಾಗಿ ಬಳಕೆಯಾಗತೊಡಗಿತು. ಕನ್ನಡಿಗರು ಕನ್ನಡ ಭಾಷೆಯನ್ನು ಉಳಿಸಿಕೊಂಡು ಕನ್ನಡ ಲಿಪಿಯನ್ನು ಮರೆತರೆಂದು ಕಾಣುತ್ತದೆ. 'ಮೋಡಿ ಲಿಪಿಯಲ್ಲಿ ಕನ್ನಡ ಕಾವ್ಯಗಳನ್ನು,ಗ್ರಂಥಗಳನ್ನು ರಚಿಸಿದರು. ಕನ್ನಡಕ್ಕೆ ಹೊರತಾದ ಮೋಡಿಯಂಥ ಬೇರೊಂದು ಲಿಪಿಯಲ್ಲಿ ಈ ಸಾಹಿತ್ಯ ರಚನೆಯಾಗಿರುವುದರಿಂದ ಇದುವರೆಗೆ ಯಾವ ವಿದ್ವಾಂಸರು ಆ ಕಡೆಗೆ ಗಮನ ಹರಿಸಿಲ್ಲ. ಆ ಎಲ್ಲ ಕೃತಿಗಳು ಬೆಳಕಿಗೆ ಬರಬೇಕಾಗಿದೆ'[೧೩] ಅಕ್ಷರೇತರ ಸಮುದಾಯಗಳು ಲಿಪಿಯ ಹಂಗನ್ನು ಮೀರಿ ಮೌಖಿಕ ಸಂಪ್ರದಾಯದಲ್ಲೇ ತಮ್ಮ ಕಾವ್ಯಗಳನ್ನು ಅಭಿವ್ಯಕ್ತ ಪಡಿಸಿದ್ದಾರೆ. ತತ್ವಪದ, ಮೊಹರಂ ಪದ, ಬುಲಾಯಿ ಹಾಡು, ಸವಾಲ್ ಜವಾಬ್ ಹಾಡು ಮುಂತಾದ ಕಾವ್ಯ ಪ್ರಕಾರಗಳು ಹೇರಳವಾಗಿ ಕಟ್ಟಲಾಯಿತು. ಈ ಪ್ರಾಂತ್ಯದಲ್ಲಿ ಲಿಖಿತ ಸಾಹಿತ್ಯಕ್ಕಿಂತ ಮೌಖಿಕ ಸಂಪ್ರದಾಯದ ಸಾಹಿತ್ಯವೇ ಅಧಿಕ ಪ್ರಮಾಣದಲ್ಲಿ ವ್ಯಕ್ತವಾಗಿದೆ. ಈ ಸಾಹಿತ್ಯ ಬಹುಭಾಷೆಗಳಲ್ಲಿ ರಚನೆಯಾಗಿದೆ. ತೆಲುಗು, ಕನ್ನಡ, ಮರಾಠಿ, ಉರ್ದು ಭಾಷೆಗಳಲ್ಲಿ ಈ ಜನಪದರು ಕಟ್ಟಿದ ಸಾಹಿತ್ಯವಿದೆ. ಜನಸಮುದಾಯವೇ ಬಹುಭಾಷೆಗಳಲ್ಲಿ ಈ ಸಾಹಿತ್ಯವನ್ನು ಭಾಷಾಂತರ ಮಾಡಿಕೊಂಡಿದೆ.

ಕನ್ನಡ ಭಾಷೆಯ ಅವಸ್ಥೆ ಎಲ್ಲಿಯವರೆಗೆ ಬಂತೆಂದರೆ, 'ಕನ್ನಡಿಗರ ರಾಜ್ಯವು ಹೋದೊಡನೆ ರಾಜಕೀಯ ಸಂಸ್ಥೆಗೆ ಸಂಬಂಧ ಪಟ್ಟ ಪಾರಿಭಾಷಿಕ ಶಬ್ದಗಳನ್ನು ಜನರು ಮರೆತುಬಿಟ್ಟರು.......... ಪೇಶ್ವೆ ರಾಜ್ಯದ ಉದಯದಿಂದ ಮರಾಠಿಯೇ ಸಾರ್ವತ್ರಿಕವಾಗಿ ಬರೆಹದ ಭಾಷೆಯಾಯಿತು. ಕನ್ನಡವು ಬರೇ ಮಾತನಾಡುವ ಭಾಷೆಯಾಗಿ ಸಂತೆ, ಪೇಟೆ, ಹಳ್ಳಿ, ಮನೆಮಾರುಗಳಲ್ಲಿ ಮಾತ್ರ ಉಳಿಯಿತು. ಬಾಲಕರ ಅಕ್ಷರಾಭ್ಯಾಸವಾಗುವುದು ಕೂಡ ಮೋಡಿಯಲ್ಲಿ ಮೊದಲಾಯಿತು. ಇದರಿಂದ ಜನರಿಗೆ ಕನ್ನಡ ಅಕ್ಷರಭ್ಯಾಸವೂ ಇಲ್ಲದಂತಾಯಿತು. ಸಮಾಜದ ಮೇಲ್ಸ್ತರಗತಿಯವರಾದ ದೇಶಮುಖ, ದೇಶಪಾಂಡೆ, ಗೌಡ, ಕುಲಕರ್ಣಿಯರು ವ್ಯಾಪಾರಿಗಳು

ವ್ಯವಹಾರಿಕ ದೃಷ್ಟಿಯಿಂದ ಮರಾಠಿಯನ್ನು ತಕ್ಕ ಮಟ್ಟಿಗೆ ಕಲಿತುಕೊಳ್ಳುತ್ತಿದ್ದರು. ಕನ್ನಡವು ಇವರಿಗೆ ಅನಾವಶ್ಯಕ. ಪೇಶ್ವೆಯರ ಕಾಲದಿಂದೀಚೆಗೆ ಬ್ರಾಹ್ಮಣರು ಮರಾಠಿಗೆ ಮನಸೋತವರಾಗಿ ಕನ್ನಡವೆಂದರೆ ಲಿಂಗಾಯತರ ಭಾಷೆಯೆಂದು ತಿಳಿದರು. ವೈದಿಕ, ಅಭ್ಯಾಸ ಮಾಡುವ ಬ್ರಾಹ್ಮಣರಿಗೆ ಕನ್ನಡವೆಂದರೆ ಒಂದು ತಿರಸ್ಕಾರ.... ಮಠಗಳಲ್ಲಿಯ ಜಂಗಮರು ಪುರಾಣ ಹೇಳುವ ಅಯ್ಯನವರು ಮಾತ್ರ ಅಲ್ಲೊಬ್ಬ ಇಲ್ಲೊಬ್ಬ ಕನ್ನಡ ಅರಿತವರು ಇರುತ್ತಿದ್ದರು. ಅವರಿಗೆ ಅದು ಉಪಜೀವನದ ಸಾಧನವಾದುದರಿಂದ ಅವರು ಪುರಾಣ ಹೇಳುವಷ್ಟರ ಮಟ್ಟಿಗೆ ಕನ್ನಡವನ್ನು ಕಲಿತುಕೊಳ್ಳುತ್ತಿದ್ದರು. ಆದರೆ ಇಂತಹ ಜನರ ಸಂಖ್ಯೆಯು ಅತ್ಯಲ್ಪ'[೧೪] ಜಂಗಮರು ಕನ್ನಡ ಉಳಿಸಿಕೊಂಡದ್ದು ಕೂಡ ಕೃಷ್ಣಾ ನದಿಯ ಕೆಳಗಿನ ನಾಡಿನಲ್ಲಿಯೇ ಹೊರತು ಮೇಲಿನ ನಾಡಿನಲ್ಲಿ ಅಲ್ಲ. ಬೀದರ, ಲಾತೂರು, ಉದಗಿರಿ, ಭಾಲ್ಕಿ, ಔರಾದ ಮುಂತಾದ ಪ್ರದೇಶಗಳಲ್ಲಿ ಜಂಗಮರೂ ಕೂಡ ವಚನಗಳನ್ನು ಮೋಡಿ ಲಿಪಿಯಲ್ಲಿ ಹಾಗೂ ಮರಾಠಿಯಲ್ಲಿ ಬರೆದುಕೊಂಡು ಓದುತ್ತಿದ್ದರು. ಜಂಗಮರು ಜೋಳಿಗೆಯಲ್ಲಿ ಮೋಡಿ, ಮರಾಠಿ ಲಿಪಿಯ ಕನ್ನಡ ವಚನಗಳನ್ನು ಇಟ್ಟುಕೊಂಡು ಮನೆ ಮನೆಗೆ ಕಂತೆ ಭಿಕ್ಷೆಗೆ ಹೋಗಿ ಅಲ್ಲಿ ವಚನಗಳನ್ನು ಓದಿ ಹೇಳಿ, ನಂತರ ತಮ್ಮ ಕಾಯಕಕ್ಕೆ ಫಲ ಪಡೆದು ಮರಳುತ್ತಿದ್ದರು.

ನಿಜಾಂ ಆಡಳಿತ ಮತ್ತು ಬಹುಭಾಷೆಗಳ ತೊಡಕು

ನಿಜಾಂ ವಂಶಜರಲ್ಲಿ ಒಬ್ಬನಾದ ಅಫಜಾಲುನ್ -ದೌಲಾ-ಬಹುದೂರ್ (೧೮೫೭-೧೮೬೯)ನು ಅಧಿಕಾರಕ್ಕೆ ಬಂದಾಗ ಆಡಳಿತದಲ್ಲಿ ಅನೇಕ ಬದಲಾವಣೆಗಳು ಕಾಣಿಸಿದವು. ಜಿಲ್ಲೆ, ತಾಲೂಕುಗಳು ಎಂದು ವಿಭಾಗಿಸಲಾಯಿತು. ಈ ವಿಭಾಗಗಳಿಗೆ ಆಡಳಿತವನ್ನು ನೋಡಿಕೊಳ್ಳಲು ಸುಬೇದಾರರನ್ನು ನೇಮಿಸಲಾಯಿತು. ಭೂಮಿಯನ್ನು ಅಳತೆ ಮಾಡಿಸಲಾಯಿತು. ಹೊಸ ಶಿಕ್ಷಣವನ್ನು ಪಡೆದವರಿಗೆ ಆಡಳಿತದಲ್ಲಿ ಉದ್ಯೋಗಾವಕಾಶಗಳು ದೊರೆತವು. ಈ ಸಂದರ್ಭದಲ್ಲಿಯೇ ಈ ಪ್ರಾಂತ್ಯವನ್ನು ನಳದುರ್ಗ, ಕಲಬುರ್ಗಿ, ರಾಯಚೂರು, ಲಿಂಗಸೂರುಗಳನ್ನು ಜಿಲ್ಲೆಗಳೆಂದು ವಿಂಗಡಿಸಲಾಯಿತು. ಬೀದರ್ ಜಿಲ್ಲೆಯ ಪ್ರದೇಶವು ನಳದುರ್ಗದಲ್ಲಿ ಸೇರಿಕೊಂಡಿತು. ಈ ಜಿಲ್ಲಾ ಪ್ರದೇಶದಲ್ಲಿ ಮರಾಠಿ, ಉರ್ದು ಭಾಷೆ ಬಿಟ್ಟರೆ ಬೇರೆ ಭಾಷೆಗೆ ಅವಕಾಶವು ಇರಲಿಲ್ಲವೆಂದು ಕಾಣುತ್ತದೆ. ಆದರೆ ಕಲ್ಬುರ್ಗಿ ಜಿಲ್ಲಾ ಪ್ರದೇಶಗಳಲ್ಲಿ ಮರಾಠಿ, ಉರ್ದು ಭಾಷೆಗಳ ಜತೆಗೆ ತೆಲುಗು ಭಾಷೆ ವ್ಯವಹಾರದಲ್ಲಿತ್ತು. ರಾಯಚೂರು ಜಿಲ್ಲಾ ಪ್ರದೇಶಗಳಲ್ಲಿಯೂ ತೆಲುಗು, ಮರಾಠಿ, ಉರ್ದು ಭಾಷೆಗಳ ಜತೆ ಕನ್ನಡ ಭಾಷೆ ಬಳಕೆಯಲ್ಲಿತ್ತು. ಲಿಂಗಸೂಗೂರು ಜಿಲ್ಲಾ ಪ್ರದೇಶದಲ್ಲಿ ಕನ್ನಡ ಭಾಷೆ ವ್ಯವಹಾರದಲ್ಲಿತ್ತು. ಇಮಾಮ್ ಜಂಗ್ ಎಂಬ ಸುಬೇದಾರ ಈ ಜಿಲ್ಲೆಗಳ ಭಾಷೆ ಮತ್ತು ವ್ಯವಹಾರವನ್ನು ಪರಿಶೀಲಿಸಿ, ಆಡಳಿತದಲ್ಲಿ ಅನುಕೂಲವಾಗುವಂತೆ ಸ್ಥಳೀಯ ಭಾಷೆಗಳಿಗೆ ಅವಕಾಶಮಾಡಿಕೊಡಲು ಪ್ರಯತ್ನಿಸಿದ. ಸ್ಥಳೀಯ ಭಾಷೆಗಳಾದ ಕನ್ನಡ, ತೆಲುಗು ಭಾಷೆಗಳು ಕೇವಲ ಕೆಲವು ಕಡೆ ಬಾಯಿಮಾತಿನಲ್ಲಿ ಉಳಿದಿದ್ದವು. ಗೌಡ, ಕುಲಕರ್ಣಿ, ದೇಸಾಯಿ ಮುಂತಾದ ಸ್ಥಳೀಯ ಮುಖಂಡರು ಕನ್ನಡವನ್ನಾಗಲಿ, ತೆಲುಗನ್ನಾಗಲಿ ಆಡಳಿತದಲ್ಲಿ ಬಳಸುತ್ತಿರಲಿಲ್ಲ. ರಾಯಚೂರು, ಲಿಂಗಸುಗೂರು ಜಿಲ್ಲಾ ಪ್ರದೇಶಗಳಲ್ಲಿಯೂ ಇವರು ಮರಾಠಿಯನ್ನು ಬಳಸುತ್ತಿದ್ದರು. ಇದನ್ನು ಕಂಡು ಆಡಳಿತದಲ್ಲಿ ಉರ್ದು, ಮರಾಠಿ ಭಾಷೆಗಳ ಜೊತೆಗೆ ಕೆಲವು ಕಡೆ ತೆಲುಗು, ಕೆಲವು ಕಡೆ ಕನ್ನಡ ಭಾಷೆಗಳನ್ನು ಬಳಸಲು ಈ ಅಧಿಕಾರಿ ಯೋಜಿಸಿದನು. ಇದು ಸುಗಮವಾಗಿ ನಡೆಯಲು ಕೆಳ ಹಂತದ ನೌಕರರನ್ನು ಆಡಳಿತದಲ್ಲಿ ತೆಗೆದುಕೊಳ್ಳುವಾಗ ಮುಖ್ಯವಾಗಿ ಆಡಳಿತ ಭಾಷೆ ಉರ್ದುವಿನೊಂದಿಗೆ ಸ್ಥಳೀಯ ಭಾಷೆಯನ್ನು ಬಲ್ಲವರಿಗೆ ಅವಕಾಶಗಳು ದೊರೆಯುವಂತೆ ಮಾಡಲಾಯಿತು. ಇದರಿಂದ ಕೆಲವು ಜಿಲ್ಲಾ ಪ್ರದೇಶಗಳಲ್ಲಿ ದ್ವಿಭಾಷಿ, ತ್ರಿಭಾಷಿ ನೌಕರರನ್ನು ನೇಮಿಸಲಾಯಿತು. ಆಡಳಿತವನ್ನು ನೋಡಿಕೊಳ್ಳುವ ಸ್ಥಳೀಯ ಗೌಡ, ಕುಲಕರ್ಣಿ ಸಾಹೂಕಾರ, ದೇಶಪಾಂಡೆ ಮುಂತಾದವರಿಗೆ ಕನ್ನಡ ಭಾಷೆಯನ್ನು ಕಲಿಯಲು ಒತ್ತಾಯಿಸಲಾಯಿತು. ಇವರಿಗೆ ಕನ್ನಡ ಭಾಷೆ ಮಾತಾಡಲು ಮಾತ್ರ ಬರುತ್ತಿತ್ತು. ಬರೆಯಲು ಮೋಡಿಯನ್ನು ಬಳಸುತ್ತಿದ್ದರು. ಈ ಪ್ರಕ್ರಿಯೆಯಿಂದ 'ಮೂರು ವರ್ಷಗಳ ಅವಧಿಯಲ್ಲಿ ಸುರಪುರ,

ಶಹಪುರ, ಯಾದಗಿರಿ, ಕಲ್ಬುರ್ಗಿ, ಮಹಾಗಾಂವ, ಚಿಂಚೋಳಿ ಮತ್ತು ಸೇಡಂ ತಾಲೂಕುಗಳ ಗೌಡ, ಕುಲಕರ್ಣಿಯರು ಕನ್ನಡವನ್ನು ಕಲಿಯಬೇಕೆಂದು ಅಪ್ಪಣೆ ಕೊಡಲಾಯಿತು' ಆದರೆ ಇದು ಸುಗಮವಾಗಿ ಜಾರಿಗೆ ಬರಲಿಲ್ಲ. ಈ ಬದಲಾವಣೆಗಳು ಆಡಳಿತಾತ್ಮಕವಾಗಿ ಅಡ್ಡಿಯನ್ನುಂಟುಮಾಡಿ ವಿಳಂಬಕ್ಕೆ ದಾರಿಯಾಗುತ್ತದೆಂಬ ನೆಪ ಒಡ್ಡಿ ಕೈ ಬಿಡಲಾಯಿತು. ಇದಕ್ಕಾಗಿ ಶ್ರಮಿಸಿದ ಸುಬೇದಾರರನ್ನು ವರ್ಗಾವಣೆ ಮಾಡಲಾಯಿತು. ಉರ್ದು ಭಾಷೆ ಆಡಳಿತದಲ್ಲಿ ಮುಂದುವರಿಯಿತು. ಒಂದು ವೇಳೆ ಈ ಯೋಜನೆ ಜಾರಿಯಾಗಿದ್ದರೆ ಅನೇಕ ಜಿಲ್ಲಾ ಪ್ರದೇಶಗಳಲ್ಲಿ ಕನ್ನಡ ಭಾಷೆ ೧೯ನೆಯ ಶತಮಾನದಲ್ಲಾದರೂ ಪುನ: ಜೀವ ತುಂಬಿಕೊಂಡು ಬೆಳೆಯುತ್ತಿತ್ತು. ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಸಹಾಯವಾಗುತ್ತಿತ್ತು.

ಶೈಕ್ಷಣಿಕ ಭಾಷೆಯಾಗಿ ಉರ್ದು ಮತ್ತು ಕನ್ನಡ ಭಾಷೆಯ ಅಭಿಮಾನ

ವಸಾಹತುಶಾಹಿಯಿಂದ 'ಆಧುನಿಕತೆ' ಭಾರತವನ್ನು ಪ್ರವೇಶಿಸತೊಡಗಿದಂತೆ ವಿದ್ಯಾವಂತರಿಗೆ ಪಶ್ಚಿಮದ ಜ್ಞಾನ ಲಭ್ಯವಾಗತೊಡಗಿತು. ಮೈಸೂರು, ಮಂಗಳೂರು, ಧಾರವಾಡ ಜಿಲ್ಲಾ ಪ್ರದೇಶಗಳಲ್ಲಿ ಆಧುನಿಕ ಶಿಕ್ಷಣಕ್ಕೆ ಅವಕಾಶ ದೊರೆಯತೊಡಗಿದವು. ಕಲಿಯಲು ಅವಕಾಶವಿದ್ದವರು ಇಂಗ್ಲಿಷ್ ಶಿಕ್ಷಣವನ್ನು ಪಡೆಯುವುದರ ಮೂಲಕ ಹೊಸ ಜ್ಞಾನವನ್ನು ಕನ್ನಡಕ್ಕೆ ತರಲಾರಂಭಿಸಿದರು, ಆದರೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ನಿಜಾಂ ಆಳ್ವಿಕೆಯಿದ್ದ ಕಾರಣ ಉರ್ದು ಭಾಷೆ ಆಡಳಿತದ ಭಾಷೆಯಾಗಿತ್ತು. ಪ್ರಾರಂಭದಲ್ಲಿ ಫಾರಸಿ ಭಾಷೆಯಿತ್ತು. ನಂತರ ಉರ್ದು ಪ್ರಭುತ್ವಕ್ಕೆ ಬಂತು. ಇದರಿಂದಾಗಿ ಇಂಗ್ಲೀಷ್ ಕಲಿಕೆಯಿಂದ ದೊರೆಯಬಹುದಾಗಿದ್ದ ಪಶ್ಚಿಮದ ಹೊಸ ಜ್ಞಾನವು ಈ ಭಾಗದ ವಿದ್ಯಾವಂತರಿಗೆ ದೊರೆಯಲಿಲ್ಲ. ರಾಜಕೀಯ ಇಚ್ಛಾಶಕ್ತಿ ಇದ್ದರೆ ಏನನ್ನಾದರೂ ಸಾಧಿಸಬಹುದು ಎನ್ನುವುದಕ್ಕೆ ಉರ್ದು ಭಾಷೆಯೇ ನಿದರ್ಶನವಾಗಿದೆ. ನಿಜಾಮರ ಆಡಳಿತದಲ್ಲಿ ಶಿಕ್ಷಣವನ್ನು ಉರ್ದು ಮಾಧ್ಯಮದಲ್ಲಿ ನಡೆಸಲಾಯಿತು. ಉನ್ನತ ಶಿಕ್ಷಣವನ್ನೂ ಉರ್ದು ಮಾಧ್ಯಮದಲ್ಲಿ ನಡೆಸಲು ನಿಜಾಂ ಸರಕಾರ ಶ್ರಮಿಸಿತು. ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ಶಿಕ್ಷಣವನ್ನು ಕಲಿಯಲು ಅವಕಾಶವಿದ್ದ ವಿದ್ಯಾರ್ಥಿಗಳೆಲ್ಲ ಉರ್ದುವಿನಲ್ಲೇ ಶಿಕ್ಷಣವನ್ನು ಪಡೆಯಲಾರಂಭಿಸಿದರು. ಉನ್ನತ ಶಿಕ್ಷಣವನ್ನು ಅದೇ ಮಾಧ್ಯಮದಲ್ಲಿ ಓದಿ ಮುಗಿಸುವ ಅಗತ್ಯಕ್ಕೆ ಹೊಂದಿಕೊಂಡರು. ಬೀದರ್, ಕಲ್ಬುರ್ಗಿ ಜಿಲ್ಲಾ ಪ್ರದೇಶಗಳಲ್ಲಿ ಪ್ರಾರಂಭದ ಶಿಕ್ಷಣವನ್ನು ಮರಾಠಿಯಲ್ಲಿ ಸುರು ಮಾಡಿ ನಂತರ ಉರ್ದು ಮಾಧ್ಯಮದಲ್ಲಿ ಮುಂದುವರಿದರೆ ರಾಯಚೂರು, ಕೊಪ್ಪಳ ಭಾಗಗಳಲ್ಲಿ ಪ್ರಾರಂಭದಲ್ಲಿ ಕನ್ನಡ ಅಕ್ಷರ ತೀಡಿದರೂ ನಂತರ ಉರ್ದು ಮಾಧ್ಯಮದಲ್ಲಿ ಮುಂದುವರಿಯುವುದು ಅನಿವಾರ್ಯವಾಗಿತ್ತು. ಆಡಳಿತದಲ್ಲಿ ಉದ್ಯೋಗಾವಕಾಶಗಳನ್ನು ಪಡೆಯಲು ಬಯಸುವ ವಿದ್ಯಾರ್ಥಿಗಳು ಉರ್ದು ಮಾಧ್ಯಮದಲ್ಲಿ ಶಿಕ್ಷಣವನ್ನು ಕಲಿಯಲು ಹಿಂಜರಿಯುತ್ತಿರಲಿಲ್ಲ. ಉರ್ದುವಿನಲ್ಲಿ ಕಲಿತು ಮಾತಾಡುವುದು ಕನ್ನಡ ಭಾಷಿಕ ವಿದ್ಯಾರ್ಥಿಗಳಿಗೆ ಹೆಮ್ಮೆಯ ಸಂಗತಿಯಾಗಿತ್ತು. ಇಂಗ್ಲೀಷ್ ಭಾಷೆಯ ಮೇಲಿನ ಅಭಿಮಾನವೂ ಇದೇ ಆಗಿದೆ.

ದೇಶಭಾಷೆ ಮತ್ತು ಸಂಸ್ಕೃತಿಯ ಮೇಲೆ ಅಭಿಮಾನವಿದ್ದ ಮನೆತನಗಳಲ್ಲಿ ಉರ್ದು ಕಲಿಕೆಯ ಬಗ್ಗೆ ಗೊಂದಲವಿತ್ತು. ಕನ್ನಡದಲ್ಲಿ ಶಿಕ್ಷಣ ಪಡೆಯಲು ಅವಕಾಶಗಳಿರಲಿಲ್ಲ. ಮಠಗಳಲ್ಲಿ ಕನ್ನಡ ಕಲಿಕೆಗೆ ಅವಕಾಶವಿದ್ದರೂ ಅದು ಕೇವಲ ಅಭಿಮಾನದ ಕಲಿಕೆಯಾಗಿತ್ತು. ಅದರಿಂದ ಹೆಚ್ಚಿನ ಅನುಕೂಲಗಳಿರಲಿಲ್ಲ. ಖ್ಯಾತ ಸಂಶೋಧಕ ಕಪಟರಾಳ್ ಕೃಷ್ಣರಾವ್ ಕನ್ನಡ ಕಲಿಯಲು ಇಚ್ಛಿಸಿದಾಗ 'ಬಣಜಿಗರಂತೆ ಕನ್ನಡೇನು ಕಲೀತಿ' ಎಂಬ ಪ್ರಶ್ನೆಯನ್ನು ಎದುರಿಸಬೇಕಾಯಿತು. ಇದರಿಂದ ಕನ್ನಡ ಭಾಷೆ ಬಣಜಿಗರ - ಲಿಂಗಾಯಿತರ ಭಾಷೆಯಾಗಿತ್ತು ಎಂಬುದು ತಿಳಿಯುತ್ತದೆ. ಜಯತೀರ್ಥ ರಾಜ ಪುರೋಹಿತರು ಉನ್ನತ ಅಧಿಕಾರಿಗಳಾಗಿ ಬೀದರ ಜಿಲ್ಲೆಗೆ ವರ್ಗವಾಗಿ ಹೋದಾಗಲೂ ಬೀದರಿನಲ್ಲಿ ಬ್ರಾಹ್ಮಣರು ಮರಾಠಿ ಭಾಷಿಗರಾಗಿದ್ದರು. ಕನ್ನಡದಲ್ಲಿ ಮಾತಾಡಿದರೆ 'ನೀವು

ವಾಣಿ ಜನರೇನ್ರೀ'[೧೭] ಎಂದು ಕೇಳುತ್ತಿದ್ದರಂತೆ. ವಾಣಿ ಜನರೆಂದರೆ ಬಣಜಿಗರು ಎಂದರ್ಥ. ಭಾಲಚಂದ್ರ ಜಯಶೆಟ್ಟಿಯವರು ಮರಾಠಿಯಲ್ಲಿ ಶಿಕ್ಷಣವನ್ನು ಪ್ರಾರಂಭಿಸಿ, ಹೆಚ್ಚಿನ ಶಿಕ್ಷಣವನ್ನು ಉರ್ದು ಮಾಧ್ಯಮದಲ್ಲಿ ಕಲಿಯುವ ಸಂಧರ್ಭ ಬಂದಾಗ, ಕನ್ನಡಾಭಿಮಾನಿ ಮರಾಠಿ ಶಿಕ್ಷಕರೊಬ್ಬರು ಕನ್ನಡದಲ್ಲಿ ಅಭ್ಯಾಸ ಮಾಡಲು ಒತ್ತಾಯಿಸಿದರಂತೆ. ಇವರು ನಿರಾಕರಿಸಿದಾಗ, 'ನೀನು ಕನ್ನಡ ಕಲೀದಿದ್ರೆ ಬಸವಣ್ಣನವರ ವಚನಗಳನ್ನು ಯಾರು ಓದಬೇಕು?'[೧೮] ಎಂದು ಶಿಕ್ಷಕರು ಆಕ್ರೋಶಗೊಂಡರಂತೆ. ಇದರಿಂದ ವಚನಗಳನ್ನು ಓದುವುದಕ್ಕಾಗಿ ಕನ್ನಡವನ್ನು ಕಲಿಯಬೇಕಾಗಿತ್ತು ಎಂದು ತಿಳಿಯುತ್ತದೆ. ವೈದಿಕರು ಆಗಮಿಕ ಪ್ರಯೋಜನಗಳಿಗಾಗಿ ಸಂಸ್ಕೃತ ಕಲಿತಂತೆ, ಲಿಂಗಾಯಿತರು ಕನ್ನಡ ಕಲಿಯಬೇಕಾಗಿತ್ತು, ಅಷ್ಟೇ. ಈ ಕಾರಣದಿಂದಾಗಿ ಕನ್ನಡ ಕಲಿಕೆ ಅಥವಾ ಭಾಷೆ ಲಿಂಗಾಯಿತರ ಮನೆಯಲ್ಲಿ, ಮಠದಲ್ಲಿ ಜೀವ ಹಿಡಿದು ಉಳಿದಿತ್ತು.

ಹೈದರಾಬಾದ್ ಕರ್ನಾಟಕ ಮತ್ತು ಆಧುನಿಕ ಕನ್ನಡ ಸಾಹಿತ್ಯ

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನ, ಮುಂಬಯಿ ಕರ್ನಾಟಕ, ಮದರಾಸು ಕರ್ನಾಟಕ ಮತ್ತು ಕೊಡಗು ಈ ಪ್ರಾಂತ್ಯಗಳ ಸ್ಥಿತಿಗಿಂತ ಹೈದರಾಬಾದ್ ಕರ್ನಾಟಕ ಸ್ಥಿತಿ ಭಿನ್ನವಾಗಿತ್ತು. ಕರ್ನಾಟಕದ ಈ ಪ್ರಾಂತ್ಯಗಳಲ್ಲಿ ಬ್ರಿಟಿಷರ ಮತ್ತು ಸ್ಥಳೀಯ ಅರಸರ ಆಳ್ವಿಕೆಯಿತ್ತು. ಪರಂಪರಾಗತ ಸಂಸ್ಕೃತಿಯ ಮುಂದುವರಿಕೆಗೆ ಯಾವ ಅಡ್ಡಿಗಳಿರಲಿಲ್ಲ. ಬ್ರಿಟಿಷರ ವಸಾಹತು ವ್ಯವಸ್ಥೆಯಿಂದ ಆಧುನಿಕತೆ ಸಮಾಜದಲ್ಲಿ ಮೂಡುತ್ತಿದ್ದರಿಂದ ಬದಲಾವಣೆಯ ಪ್ರಕ್ರಿಯೆಗೂ ಜನರು ಸ್ಪಂದಿಸತೊಡಗಿದರು. ಆದರೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯ ನಿಜಾಂ ಅಧೀನದಲ್ಲಿದ್ದರಿಂದ ಪರಕೀಯ ಭಾಷೆ ಮತ್ತು ಸಂಸ್ಕೃತಿಯೇ ಅರಸರದ್ದಾಗಿರುವಾಗ ಕನ್ನಡಿಗರ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅನೇಕ ಅಡ್ಡಿ ಆತಂಕಗಳು ಇದ್ದವು. ಮೈಸೂರು ಸಂಸ್ಥಾನದಲ್ಲಿ ಭಾಷೆ-ಸಾಹಿತ್ಯ ಕಲೆ ಸಂಸ್ಕೃತಿಯ ಬೆಳವಣಿಗೆಗೆ ಆಳರಸರ ಪ್ರೋತ್ಸಾಹವಿತ್ತು. ಅಂಥ ವಾತಾವರಣವು ಈ ಪ್ರಾಂತ್ಯದಲ್ಲಿ ಎಂದೋ ಮಾಯವಾಗಿ ಹೋಗಿತ್ತು. ಪರಂಪರಾಗತ ಜ್ಞಾನಕ್ಕೂ ಹೊಸ ಜ್ಞಾನ ಪಡೆಯುವುದಕ್ಕೂ ಅವಕಾಶಗಳು ಬೇರೆ ಪ್ರಾಂತ್ಯಗಳಲ್ಲಿದ್ದಂತೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ಇರಲಿಲ್ಲ. ಈ ಶತಮಾನದ ಆದಿಯಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತದಿಂದ ಪಶ್ಚಿಮ ದೇಶಗಳಿಗೆ ಸಂಪರ್ಕ ಸಾಧ್ಯವಾಗಿ ಹೊಸ ಚಿಂತನ ಕ್ರಮಗಳು ಲಭ್ಯವಾಗತೊಡಗಿದವು. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಚಿಂತಕರಿಗೆ ಹೊಸ ಜ್ಞಾನ-ಚಿಂತನೆಗಳು ದಕ್ಕತೊಡಗಿದವು. ಇದರಿಂದಾಗಿ ಅನೇಕ ಕ್ಷೇತ್ರಗಳಲ್ಲಿ ಹೊಸ ವಾತಾವರಣ ಮೂಡಿ ಹೊಸ ಹಾದಿ ಹಿಡಿದವು. ಸಾಹಿತ್ಯ-ಕಲೆಗಳಿಗೂ ಇದು ಪ್ರೇರಕವಾಯಿತು. ಇಂಥ ಹೊಸಗಾಳಿ ಹೈದರಾಬಾದ್ ಕರ್ನಾಟಕ ಪ್ರಾಂತ್ಯದೊಳಗೆ ನುಗ್ಗಲು ಸಾಧ್ಯವಾಗಲಿಲ್ಲ. ಈ ಪ್ರಾಂತ್ಯದ ಒಡಲೊಳಗೇ ಅನೇಕ ಸಮಸ್ಯೆಗಳು, ಆತಂಕ, ತಲ್ಲಣಗಳು ಇದ್ದವು. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ತೀವ್ರವಾದಾಗ ಈ ಪ್ರಾಂತ್ಯದಲ್ಲಿ ನಿಜಾಂ ಶಾಹಿ ವಿರುದ್ಧ ಹೋರಾಟ ತೀವ್ರವಾಗತೊಡಗಿತು. ಕನ್ನಡ ಕಲಿಕೆ ಅಧಿಕೃತವಾಗಿ ನಡೆಯಲು ಅವಕಾಶಗಳೇ ಇರಲಿಲ್ಲ. ನೆರೆಯ ಮುಂಬೈ ಕರ್ನಾಟಕದಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಪ್ರಾರಂಭವಾಗಿ ಒಂದು ಶತಮಾನ ಕಳೆದರೂ ಈ ಪ್ರಾಂತ್ಯದಲ್ಲಿ ಅದು ಸಾಧ್ಯವಾಗಿರಲಿಲ್ಲ. ಕನ್ನಡ ಕಲಿಕೆ ಬಗ್ಗೆ ಹೋರಾಟ ನಡೆಸಬೇಕಾಗಿತ್ತು. ಮಠಗಳಲ್ಲಿ ಬಿಟ್ಟರೆ ಕನ್ನಡ ಅಕ್ಷರ ಕಲಿಕೆ ಬಹಿರಂಗವಾಗಿ ನಡೆಸಲಾಗುತ್ತಿರಲಿಲ್ಲ. ಭಾಲ್ಕಿಯಂಥ ಮರಾಠಿಮಯ ಪ್ರದೇಶದಲ್ಲಿ ಚೆನ್ನಬಸವ ಪಟ್ಟದ್ದೇವರು ಕನ್ನಡದ ಮೇಲಿನ ಅಭಿಮಾನದಿಂದ ಹೊರಗೆ ಉರ್ದು ಮಾಧ್ಯಮ ಶಾಲೆಯ ಬೋರ್ಡು ಹಾಕಿ ಒಳಗೆ ಕನ್ನಡ ಅಕ್ಷರಗಳನ್ನು ಮಕ್ಕಳಿಗೆ ತೀಡಿಸುವ ಕೆಲಸ ಮಾಡುತ್ತಿದ್ದರು. ಕನ್ನಡ ಕಲಿಕೆ ಕೇವಲ ಅಭಿಮಾನದ ಪ್ರಶ್ನೆಯಾಗಿರಲಿಲ್ಲ. 'ಕನ್ನಡತನ' ವನ್ನು ಪುನ: ಸೃಷ್ಟಿಸುವ ಜವಾಬ್ದಾರಿಯು ಇಂಥ ಪ್ರಯತ್ನಗಳಲ್ಲಿ ಕಾಣುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಪ್ರಾಂತ್ಯದಲ್ಲಿ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದರೂ ಅವುಗಳಲ್ಲಿ ಅಧಿಕೃತ ಭಾಷೆ

ಉರ್ದು ಮತ್ತು 'ಸ್ಥಳೀಯ ಭಾಷೆ' ಮರಾಠಿಯಲ್ಲಿ ಕಲಿಕೆ ನಡೆಸುತ್ತಿದ್ದರು. ಕಲ್ಬುರ್ಗಿಯಲ್ಲಿ ಪ್ರಾರಂಭವಾದ 'ನೂತನ ವಿದ್ಯಾಲಯ'ದಂಥ ಶಿಕ್ಷಣ ಸಂಸ್ಥೆಯಲ್ಲಿ ಮರಾಠಿ ಮಾಧ್ಯಮದಲ್ಲಿ ಶಿಕ್ಷಣ ಸುರುವಾಯಿತು.ಬೀದರ್, ಕಲ್ಬುರ್ಗಿ ಭಾಗಗಳಲ್ಲಿ ಅಕ್ಷರ ಕಲಿಯುವ ಕುಟುಂಬಗಳಲ್ಲಿ ಮರಾಠಿ, ಉರ್ದು ಭಾಷೆಗಳಿಗೆ ಒಲಿದುಬಿಟ್ಟದ್ದರು. ವೈದಿಕರು ಪೇಶ್ವೆಯರ ಕಾಲದಲ್ಲಿ ಮರಾಠಿ ಸಂಸ್ಕೃತಿಗೆ ಒಲಿದು ನಂತರ ಅದನ್ನೇ ಮುಂದುವರಿಸಿದ್ದರಿಂದ ೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ಕಲ್ಬುರ್ಗಿ ಭಾಗಗದಲ್ಲಿ ಕನ್ನಡ ವಾತಾವರಣಕ್ಕೆ ಅಡ್ಡಿಯನ್ನುಂಟು ಮಾಡಿದವರೇ ಇಂಥ ಕನ್ನಡಿಗರಾದ ಮರಾಠಿ ಅಭಿಮಾನಿಗಳು. ಅಷ್ಟೇ ಅಲ್ಲ ಕಲ್ಬುರ್ಗಿ ಜಿಲ್ಲಾ ಪ್ರದೇಶ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಅದಕ್ಕೆ ಸಂಬಂಧಿಸಿದ ಪೂರಕ ಇತಿಹಾಸವನ್ನು ಮುಂಚೂಣಿಗೆ ತಂದು ಪ್ರದರ್ಶಿಸಲಾಯಿತು. ಅತ್ತ ಅದೇ ಸಮಯದಲ್ಲಿ ಬೀದರ್ ಜಿಲ್ಲಾ ಪ್ರದೇಶ ಆಂಧ್ರಕ್ಕೆ ಸೇರುತ್ತದೆಂಬ ಕೂಗು ಕೇಳಿಸಲಾರಂಭಿಸಿತು. ಈ ಎರಡು ಸಂಗತಿಗಳಿಗಿಂತ ಭಯಾನಕವಾದ ಸಂಗತಿಯೆಂದರೆ 'ಹೈದರಾಬಾದ್ ಸಂಸ್ಥಾನ'ವೇ ಪ್ರತ್ಯೇಕವಾಗಿ 'ಮುಸ್ಲಿಂ ಸಂಸ್ಥಾನ'ವಾಗಿ ನಿಲ್ಲುತ್ತದೆಂಬ ಘೋಷಣೆ. ಪ್ರಾಂತ್ಯ ವಿಭಜನೆಯ ಕೂಗು ಈ ಪ್ರದೇಶದ ಜನ ಸಮುದಾಯಗಳನ್ನು ತಲ್ಲಣಗೊಳಿಸಿದೆ. ಆಧುನಿಕ ಕನ್ನಡ ಸಾಹಿತ್ಯ ಚಿಗುರುವ ಸಂದರ್ಭದಲ್ಲಿ ಈ ಪ್ರಾಂತ್ಯದಲ್ಲಿ ಇಂಥ ಸಮಸ್ಯೆಗಳ ಸುಳಿಯಲ್ಲಿ ಪ್ರಜ್ಞಾವಂತರು ಸಿಕ್ಕುಬಿದ್ದಿದ್ದರು. ಆದರೂ ಕನ್ನಡ ಭಾಷೆ-ಸಾಹಿತ್ಯಭಿಮಾನಿ ವಿದ್ಯಾರ್ಥಿಗಳೂ ಇಂಥ ಆತಂಕಗಳ ನಡುವೆಯೂ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿದ್ದರು. ರಾಯಚೂರು, ಕೊಪ್ಪಳ ಪ್ರದೇಶದ ವಿದ್ಯಾರ್ಥಿಗಳು ಮುಂಚೂಣಿಯಲ್ಲಿದ್ದವರೆಂದು ಕಾಣುತ್ತದೆ.

ಈ ಪ್ರಾಂತ್ಯದ ವಿಧ್ಯಾರ್ಥಿಗಳೆಲ್ಲ ಹೆಚ್ಚಿನ ಶಿಕ್ಷಣಕ್ಕಾಗಿ ಹೈದರಾಬಾದ್ ನಗರಕ್ಕೆ ಹೋಗಬೇಕಾಗಿತ್ತು. ಬೀದರ್, ಕಲ್ಬುರ್ಗಿ, ರಾಯಚೂರು ಜಿಲ್ಲಾ ಪ್ರದೇಶಗಳ ವಿದ್ಯಾರ್ಥಿಗಳು ಉನ್ನತ ಪದವಿ ಶಿಕ್ಷಣಕ್ಕೆ ಹೋಗುವ ಮುನ್ನವೆ ಉರ್ದು, ಮರಾಠಿ, ಹಿಂದಿ, ಇಂಗ್ಲೀಷ್, ತೆಲುಗು, ಕನ್ನಡ ಮುಂತಾದ ಬಹುಭಾಷಾ ಜ್ಞಾನವನ್ನು ಹೊಂದಿದವರಾಗಿರುತ್ತಿದ್ದರು. ಈ ಭಾಷೆಗಳ ಜ್ಞಾನ ಬಹುತೇಕ ಪಠ್ಯ ಪುಸ್ತಕಗಳಿಗೆ ಸೀಮಿತವಾಗಿತ್ತು. ಇದರಿಂದ ಸಾಹಿತ್ಯ ಚಟುವಟಿಕೆಗಳಾಗಲಿ, ಸಾಹಿತ್ಯಿಕ ಬರವಣಿಗೆಗಳಾಗಲಿ ತೀವ್ರ ಸ್ವರೂಪದಲ್ಲಿ ಕಾಣಿಸಲಿಲ್ಲ. ಸಾಹಿತ್ಯದ ಅಧ್ಯಯನವು ಶಿಕ್ಷಣದಿಂದ ಹೊರಗುಳಿದಿತ್ತು. ಡಿ.ಕೆ. ಭೀಮಸೇನರಾವ್ ಅವರಂಥವರು ಕನ್ನಡ ಎಂ.ಎ. ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪಡೆಯಬೇಕಾಯಿತು. ಸಿದ್ಧಯ್ಯ ಪುರಾಣಿಕರು,ಜಯತೀರ್ಥ ರಾಜಪುರೋಹಿತರು ಕನ್ನಡ ಸಾಹಿತ್ಯವನ್ನು ಶಿಕ್ಷಣದ ಮೂಲಕ ಪಡೆದವರಲ್ಲ. ಸಾಹಿತ್ಯಾಸಕ್ತಿಯಿಂದ ಪಡೆದವರು. ಈ ಮಾತನ್ನು ಯಾಕೆ ಹೇಳಬೇಕಾಯಿತೆಂದರೆ ಸಾಹಿತ್ಯಾಧ್ಯಯನವು ಶಿಕ್ಷಣದಲ್ಲಿ ಕಲಿಯಲು ಹೈದರಾಬಾದ್ ನಗರದಲ್ಲಿ ಅವಕಾಶಗಳಿರಲಿಲ್ಲ. ಇದರಿಂದಲೂ ಸಾಹಿತ್ಯ ಕೃಷಿ ತೀವ್ರಗತಿಯಲ್ಲಿ ಕಾಣಿಸಿಕೊಳ್ಳಲಾಗಲಿಲ್ಲ. ಮೈಸೂರು, ಮಂಗಳೂರು,ಧಾರವಾಡ ಜಿಲ್ಲಾ ಪ್ರದೇಶಗಳಿಗೆ ಹೋಲಿಸಿದರೆ ಈ ಪ್ರದೇಶದಲ್ಲಿ ಅನೇಕ ಕಾರಣಗಳಿಂದ ಸಾಹಿತ್ಯ ಸೃಷ್ಟಿ ಕುಂಠಿತವಾಗಿತ್ತು. 'ಕನ್ನಡದಲ್ಲಿ ನವೋದಯ ಕವಿಗಳು ಕಾವ್ಯ ರಚಿಸುತ್ತಿರುವಾಗ ಬೀದರ್ ಜಿಲ್ಲೆಯಲ್ಲಿ ಕನ್ನಡ 'ಅ''ಆ' ತೀಡುವ ಕೆಲಸ ಪ್ರಾರಂಭವಾಗುತ್ತದೆ'' ಎಂಬ ಮಾತು ಉತ್ಪ್ರೇಕ್ಷೆಯದ್ದಲ್ಲ. ಈ ಮಾತು ಬೀದರ, ಕಲ್ಬುರ್ಗಿ, ಜಿಲ್ಲಾ ಪ್ರದೇಶಗಳಿಗೆ ಹೆಚ್ಚು ಅನ್ವಯಿಸುತ್ತದೆ. ಈ ಜಿಲ್ಲೆಗಳಿಗೆ ಹೋಲಿಸಿದರೆ ರಾಯಚೂರು ಜಿಲ್ಲಾ ಪ್ರದೇಶದಲ್ಲಿ ಸಾಹಿತ್ಯ ಚಟುವಟಿಕೆಗಳು, ಸಾಹಿತ್ಯ ವಾತಾವರಣ ಉತ್ತಮವಾಗಿತ್ತು. ಇದಕ್ಕೆ ಕಾರಣವೆಂದರೆ ಈ ಮೊದಲೇ ಪ್ರಸ್ತಾಪಿಸಿದಂತೆ ಕೃಷ್ಣಾ ನದಿಯ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತವಿದ್ದರಿಂದ ಕನ್ನಡ ಭಾಷೆ, ಸಾಹಿತ್ಯ-ಸಂಸ್ಕೃತಿಗೆ ಅವಸಾನ ಬಂದಿರಲಿಲ್ಲ. ದಾಸರು, ತತ್ವಪದಕಾರರು ಸಾಹಿತ್ಯವನ್ನು ಪೋಷಿಸಿಕೊಂಡಿದ್ದರು. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕೂಡ ರಾಯಚೂರು ಜಿಲ್ಲಾ ಪ್ರದೇಶದ ಸಾಹಿತಿಗಳ ಕೊಡುಗೆ ಹೆಚ್ಚಿದೆ. (ಹೆಸರಿಸುವುದಾದರೆ ಡಿ.ಕೆ. ಭೀಮಸೇನರಾವ್, ಸಿದ್ಧಯ್ಯ ಪುರಾಣಿಕ, ಶಾಂತರಸ, ಜಯತೀರ್ಥ ರಾಜ ಪುರೋಹಿತ, ದೇವೇಂದ್ರ ಕುಮಾರ ಹಕಾರಿ, ಪಂಚಾಕ್ಷರಿ ಹಿರೇಮಠ, ಶೈಲಜ ಉಡಚಣ, ಅಮರಚಿಂತ)

ಬೀದರ, ಕಲ್ಬುರ್ಗಿ ಜಿಲ್ಲಾ ಪ್ರದೇಶದಲ್ಲಿ ಈ ಶತಮಾನದ ಮೊದಲ ಕಾಲುಭಾಗ ಕಳೆದರೂ ಕನ್ನಡ ವಾತಾವರಣವಿರಲಿಲ್ಲ ಎಂಬುದಕ್ಕೆ ೧೯೨೮ರಲ್ಲಿ ಕಲ್ಬುರ್ಗಿದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿ.ಎಂ.ಶ್ರೀ. ಹೇಳಿದ ಮಾತುಗಳೇ ಸಾಕ್ಷಿ. ಅಧ್ಯಕ್ಷರಾಗಿದ್ದ ಅವರು 'ಕನ್ನಡ ನುಡಿಗೆ ಲಿಪಿಯುಂಟೆಂದೂ, ಒಳ್ಳೇ ಸಾಹಿತ್ಯವು ಸಾಹಿತಿಗಳುಂಟೆಂದು' ಹೇಳಿದರು. ಈ ಮಾತನ್ನು ಗಮನಿಸಿದ ಕಪಟರಾಳ ಕೃಷ್ಣರಾವ್ ಅವರು ಬಿ.ಎಂ.ಶ್ರೀ. ಅವರ ಭಾಷಣದಿಂದ ಕನ್ನಡ ಜನರಿಗೆ ಕಣ್ಣಿಗೆ ಅಂಜನ ಹಚ್ಚಿದಂತಾಯಿತು ಎಂದು ಅಭಿಪ್ರಾಯಪಡುತ್ತಾರೆ.[೨೦]

ಶಿಕ್ಷಣಕ್ಕಾಗಿ ಹೈದರಾಬಾದ್ ನಗರ ಸೇರಿದ ಸಾಹಿತ್ಯಾಸಕ್ತ ವಿದ್ಯಾರ್ಥಿಗಳು ಅನೇಕ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಿತ್ತು. ನಿಜಾಂ ನಗರ ಹೈದರಾಬಾದಿನಲ್ಲಿ ಉರ್ದು ಮತ್ತು ಆ ಭಾಷೆಯ ಜನಾಂಗದವರ ಮಧ್ಯ ಬದುಕಬೇಕಾಗಿತ್ತು. ಬ್ರಿಟಿಷರ ಪ್ರಭುತ್ವವನ್ನು ನಿರಾಕರಿಸುವುದು ಎಂದರೆ ನಿಜಾಂ ಪ್ರಭುತ್ವವನ್ನು ತಿರಸ್ಕರಿಸಿದಂತೆ. 'ಸ್ವಾತಂತ್ರ್ಯ ಹೋರಾಟ'ದಲ್ಲಿ ಪಾಲ್ಗೊಳ್ಳುವ ಉತ್ಸಾಹ ಒಂದು ಕಡೆ. ಶಿಕ್ಷಣವನ್ನು ಸುಗಮವಾಗಿ ಮುಗಿಸುವ ಆತಂಕ ಇನ್ನೊಂದು ಕಡೆ. ಕನ್ನಡಾಭಿಮಾನದಿಂದ ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ನಡೆಸುವುದಕ್ಕೆ ಈ ವಿದ್ಯಾರ್ಥಿಗಳಿಗೆ ಅಷ್ಟು ಸ್ವಾತಂತ್ರ್ಯ ಇರಲಿಲ್ಲ. ಇಂಗ್ಲಿಷ್ ಶಿಕ್ಷಣದಿಂದ ಪಶ್ಚಿಮದ ಜ್ಞಾನವನ್ನು ತಿಳಿದುಕೊಳ್ಳುವುದಕ್ಕೆ ಅವಕಾಶಗಳು ಸುಲಭವಾಗಿ ದಕ್ಕಲಿಲ್ಲ. ಮೈಸೂರು, ಧಾರವಾಡ ಪ್ರದೇಶಗಳಲ್ಲಿ ಉತ್ಸಾಹದಿಂದ ಪ್ರಾರಂಭವಾದ ಸಾಹಿತ್ಯ ಚಿಂತನಗಳು ಸಂಪರ್ಕ ಮಾಧ್ಯಮದ ಕೊರತೆಯಿಂದ ಇವರಿಗೆ ದೊರೆಯಲಿಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ ಈ ಪ್ರಾಂತ್ಯದ ಒಡಲೊಳಗೇ ಹುಟ್ಟಿಕೊಂಡ ಅನೇಕ ಬಿಕ್ಕಟ್ಟುಗಳನ್ನು ಎದುರಿಸುವುದರಲ್ಲೇ ಸಮಯ ವ್ಯಯವಾಗಿ ಹೋಯಿತು. ನಿಜಾಂ ಆಡಳಿತದ ಬೆಂಬಲಿಗರಾಗಿ ಹುಟ್ಟಿಕೊಂಡ ಮತೀಯ ಮನೋಧರ್ಮದ ರಜಾಕಾರರ ಹಾವಳಿಯಿಂದ ಈ ಪ್ರಾಂತ್ಯವು ಭಯದ ನೆರಳಿನಲ್ಲಿ ಮುದುಡಿ ಹೋಯಿತು. ಇಂಥ ವಾತಾವರಣದ ನಡುವೆಯೂ ಹೈದರಾಬಾದ್ ಕರ್ನಾಟಕದ ಸಾಹಿತ್ಯದ ವಿದ್ಯಾರ್ಥಿಗಳು ಬಿ.ಎಂ.ಶ್ರೀ. ಅವರ ಸಂಪರ್ಕದಿಂದ ನವೋದಯ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸಿದ್ದಾರೆ. ಅರವತ್ತರ ದಶಕದಲ್ಲಿ ಅ.ನ.ಕೃ. ಅವರ ಸಂಪರ್ಕದಿಂದ ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ನಡೆಯಲು ಪ್ರಯತ್ನಿಸಿದ್ದಾರೆ. ವಿನಾಯಕರ ಸಂಪರ್ಕದಿಂದ ನವ್ಯ ಸಾಹಿತ್ಯ ರಚನೆಗೆ ಒಲಿದಿದ್ದಾರೆ. ಆದರೆ ಇವರ ನಡಿಗೆಯೆಲ್ಲ ಬಾಲ ನಡಿಗೆಯಾಯಿತು. ಅದು ಸಹಜ ಎಂಬುದನ್ನು ಎಲ್ಲರೂ ಬಲ್ಲರು.

ಈ ಪ್ರಾಂತ್ಯದಲ್ಲಿ ಸಾಹಿತ್ಯ ಚಟುವಟಿಕೆಗಳು ಸಂಘಟನಾತ್ಮಕವಾಗಿ ಅಷ್ಟಾಗಿ ನಡೆಯಲಿಲ್ಲ. ಹೈದರಾಬಾದ್ ನಗರದಲ್ಲಿ ಅನೇಕ ಆತಂಕಗಳ ನಡುವೆ ಕಲಿತ ಸಾಹಿತ್ಯಾಸಕ್ತ ವಿದ್ಯಾರ್ಥಿಗಳು ನಂತರ ಬೇರೆ ಬೇರೆ ಭಾಗಗಳಿಗೆ ಉದ್ಯೋಗಾವಕಾಶ ಪಡೆದು ಹೋದರು. ಹೋದವರಲ್ಲಿ ಅನೇಕರು ಬೇರೆ ಬೇರೆ ಸಮಸ್ಯೆಗಳಲ್ಲಿ ಮುಳುಗಿದರು. ಸಿದ್ಧಯ್ಯ ಪುರಾಣಿಕರು, ಜಯತೀರ್ಥ ರಾಜಪುರೋಹಿತರು ಅಧ್ಯಾಪಕರಾಗದೆ ಆಡಳಿತಾತ್ಮಕ ಉನ್ನತ ಹುದ್ದೆಗಳಿಗೆ ಸೇರಿಕೊಂಡದ್ದರಿಂದ ಇಂಥವರಿಗೆ ಸಾಹಿತ್ಯ ಚಟುವಟಿಕೆಗಳನ್ನು ಸಂಘಟನಾತ್ಮಕವಾಗಿ ನಡೆಸಲು ಅವಕಾಶ, ಅನುಕೂಲಗಳಿರಲಿಲ್ಲ. ಇವರೆಲ್ಲ ವ್ಯಕ್ತಿಗತ ಅಧ್ಯಯನದಿಂದ, ಅವಕಾಶ ಮಾಡಿಕೊಂಡು ಸಂಘಟನಾತ್ಮಕವಾಗಿಯೂ ಸಾಹಿತ್ಯ ಕೃಷಿ ಮಾಡಿದರು. ಅಧ್ಯಾಪಕರಾಗಿ ಡಿ.ಕೆ. ಭೀಮಸೇನರಾವ್, ಶಾಂತರಸರು ಸಂಘಟನಾತ್ಮಕವಾಗಿ ದುಡಿದು ಈ ಪ್ರಾಂತ್ಯದಲ್ಲಿ ಸಾಹಿತ್ಯ ವಾತಾವರಣವನ್ನು ಮೂಡಿಸಲು ಪ್ರಯತ್ನಿಸಿದರು. ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಶಾಂತರಸರು 'ಮುಸುಕು ತೆರೆ', 'ಬೆನ್ನ ಹಿಂದಿನ ಬೆಳಕು' ಕೃತಿಗಳ ಸಂಗ್ರಹಗಳೇ ಅವರ ಸಂಘಟನಾತ್ಮಕ ಪ್ರಯತ್ನಗಳಿಗೆ ನಿದರ್ಶನಗಳಾಗಿವೆ. 'ಸತ್ಯ ಸ್ನೇಹ ಪ್ರಕಾಶನ'ದಿಂದ ಅನೇಕ ಕವಿಗಳನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದರು. ಇಂಥ ಪ್ರಯತ್ನಗಳು ಕಿರು ಧಾರೆಯಂತೆ ಕಾಣಿಸಬಹುದು. ಆದರೆ ಈ ಪ್ರಾಂತ್ಯದ ಚರಿತ್ರೆಯಲ್ಲಿ ಈ ಪ್ರಯತ್ನಗಳ ಸಾಧನೆ ದೊಡ್ಡದೇ.

ಆಧುನಿಕ ಕನ್ನಡ ಸಾಹಿತ್ಯವು ಮುಖ್ಯವಾಗಿ ಕಾವ್ಯ, ಕಥೆ, ಕಾದಂಬರಿ ಪ್ರಕಾರಗಳಲ್ಲಿ ಕಾಣಿಸಿಕೊಂಡಿತು. ಈ ಸಾಹಿತ್ಯ ಪ್ರಕಾರಗಳಲ್ಲಿ ಕಥೆ, ಕಾದಂಬರಿ, ನಾಟಕ ಮುಂತಾದವು ಪಶ್ಚಿಮದ ಕೊಡುಗೆಗಳೇ. 'ಕಾವ್ಯ ಪ್ರಕಾರ' ನಮ್ಮದಾದರೂ ಆಧುನಿಕ ಕಾವ್ಯ ಹೊಸ ರೂಪದಲ್ಲೇ ಬೆಳೆಯಿತು. ನಮ್ಮ ಕಾವ್ಯ ಪ್ರಕಾರದಲ್ಲಿ ಆಧುನಿಕ ಮಹಾಕಾವ್ಯಗಳು ಒಡ ಮೂಡಿದವು. ಆದರೆ ನವೋದಯ ಕಾವ್ಯವು ಮಾತ್ರ ಪಶ್ಚಿಮದ 'ಕಾವ್ಯ ರೂಪ'ದಲ್ಲೇ ಹುಟ್ಟಿದೆ. ಈ ಸಾಹಿತ್ಯ 'ರೂಪ'ಗಳ ಪ್ರಸ್ತಾಪ ಯಾಕೆ ಬಂತೆಂದರೆ, ಆಧುನಿಕ ಕನ್ನಡ ಸಾಹಿತ್ಯವು ಈ ಸಾಹಿತ್ಯ 'ರೂಪ'ಗಳಲ್ಲೇ ಬೆಳೆಯಿತು. ಆಧುನಿಕ ಸಾಹಿತಿಗಳು ತಮ್ಮ ಪ್ರತಿಭೆಯನ್ನು ಕಥೆ, ಕಾದಂಬರಿ, ಕಾವ್ಯ, ನಾಟಕ, ಲಲಿತ ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳ ಮೂಲಕ ಪ್ರಾರಂಭಿಸಿ ತಮ್ಮ ತಮ್ಮ ಪ್ರತಿಭೆಯ ಅನನ್ಯತೆಗೆ ಈ ಸಾಹಿತ್ಯ ಪ್ರಕಾರಗಳನ್ನು ದುಡಿಸಿಕೊಂಡರು. ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಆಧುನಿಕ ಕನ್ನಡ ಸಾಹಿತ್ಯಿಕ ಸಂದರ್ಭದಲ್ಲಿ ಕೂಡ ಅನೇಕ ಸಾಹಿತಿಗಳು ಈ ಸಾಹಿತ್ಯ ಪ್ರಕಾರಗಳಲ್ಲೇ ಬರೆಯಲು ತೊಡಗಿದರು. ಆದರೆ ಸಿದ್ಧಯ್ಯ ಪುರಾಣಿಕ ಮತ್ತು ಚೆನ್ನಣ್ಣ ವಾಲೀಕಾರ ಅವರ ಬೆಳವಣಿಗೆಯನ್ನು ಈ ಹೊತ್ತಿನಲ್ಲಿ ನಿಂತು ನೋಡಿದರೆ ಆಶ್ಚರ್ಯವೆನಿಸುತ್ತದೆ. ಇಬ್ಬರದು ಒಂದೊಂದು ತುದಿ. ಸಿದ್ಧಯ್ಯ ಪುರಾಣಿಕರು ವಚನ ಪರಂಪರೆಯ ಮುಂದುವರಿಕೆ ಆಗಲಿಲ್ಲ. ಬದಲಾಗಿ ವಚನ ಸಂಪ್ರದಾಯದಲ್ಲಿ ಸಾಗಿದರು. ಅದೇ ರೀತಿ ಚೆನ್ನಣ್ಣ ವಾಲೀಕಾರರು ಜನಪದ ಸಾಹಿತ್ಯ ರೂಪಗಳಲ್ಲಿ ಕಾವ್ಯ ರಚಿಸುತ್ತ ಜನಪದ ಸಾಹಿತ್ಯ ಸಂಪ್ರದಾಯದಲ್ಲಿ ಸಾಗಿದ್ದಾರೆ. ಪ್ರಧಾನವಾಗಿ ಈ ಇಬ್ಬರು ಸಾಹಿತ್ಯ ರಚನೆ ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಬೆಳೆಯದೆ 'ವಚನ' ಮತ್ತು 'ಜಾನಪದ' ಪ್ರಕಾರಗಳಲ್ಲಿ ಬೆಳೆದಿದೆ. ಇದರಿಂದ ಒಂದು ಬಗೆಯಲ್ಲಿ 'ಸಂಪ್ರದಾಯ'ದಲ್ಲಿ ನಿಂತರೇ ಹೊರತು 'ಪರಂಪರೆ'ಯಲ್ಲಿ ಸೇರಿಕೊಳ್ಳಲಿಲ್ಲ ಅನಿಸುತ್ತದೆ. 'ಸಂಪ್ರದಾಯ'ದಲ್ಲೇ ಸಾಗಿ ಅನನ್ಯತೆಯನ್ನು ಪ್ರಕಟಿಸಿರುವರೆ ಎಂಬ ಪ್ರಶ್ನೆ ಬೇರೆ. ವಚನ ಪರಂಪರೆಯು 'ಸಂಕ್ರಾಂತಿ'(ಲಂಕೇಶ್), 'ಮಹಾಚೈತ್ರ'(ಶಿವಪ್ರಕಾಶ), 'ಕುಸುಮ ಬಾಲೆ'(ದೇವನೂರು)ಯಲ್ಲಿ ಕಾಣಿಸಿದೆ. ಜಾನಪದ ಪರಂಪರೆಯು ಬೇಂದ್ರೆಯವರ ಕಾವ್ಯ, ಕಂಬಾರರ ಕಾವ್ಯದಲ್ಲಿ ಕಾಣಿಸಿದೆ ಎಂಬ ಚರ್ಚೆಗಳು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ನಡೆಯುತ್ತಿವೆ. ಶಾಂತರಸ, ಜಯತೀರ್ಥ ರಾಜಪುರೋಹಿತ, ಗೀತಾ ನಾಗಭೂಷಣ, ಚಂದ್ರಕಾಂತ ಕುಸನೂರ, ವೀರೇಂದ್ರ ಸಿಂಪಿ, ಜಂಬಣ್ಣಾ ಅಮರಚಿಂತ, ಶಿವಶರಣ ಚಾವಳಿ, ಶೈಲಜಾ ಉಡಚಣ ಮುಂತಾದವರು ಆಧುನಿಕ ಸಾಹಿತ್ಯವನ್ನು ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ರಚಿಸಿರುವುದು ಉಚಿತವೆನಿಸುತ್ತದೆ. ಈ ದೃಷ್ಟಿಯಿಂದ ಈ ಪ್ರಾಂತ್ಯದಲ್ಲಿ ಆಧುನಿಕ ಸಾಹಿತ್ಯವು ಅನೇಕ ಸಾಂಸ್ಕೃತಿಕ ತೊಡಕುಗಳ ನಡುವೆಯೂ ನಿಧಾನವಾಗಿ ಹೆಜ್ಜೆಯಿಡುತ್ತಾ ನಡೆದಿದೆ.

ಈ ಹಿಂದೆ ಪ್ರಸ್ತಾಪಿಸಿದಂತೆ ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಕನ್ನಡವು ಲಿಂಗಾಯಿತರ ಮನೆಯಲ್ಲಿ, ಮಠಗಳಲ್ಲಿ ಜೀವ ಹಿಡಿದು ಉಳಿದಿತ್ತಷ್ಟೇ. ಇದೇ ಕನ್ನಡವು ಪುರಾಣ, ಶಾಸ್ತ್ರ, ತತ್ವಪದ, ವಚನ ಮುಂತಾದ ಸಾಹಿತ್ಯ ಸೃಷ್ಟಿಗೆ ಕಾರಣವಾಯಿತು. ಈ ಪ್ರಾಂತ್ಯದಲ್ಲಿ ತತ್ವಪದ ಸಾಹಿತ್ಯಕ್ಕೆ, ಪುರಾಣ ಸಾಹಿತ್ಯಕ್ಕೆ, ವಚನ ಸಾಹಿತ್ಯಕ್ಕೆ ಮಠಮಾನ್ಯಗಳಲ್ಲಿ ಉಳಿದ ಕನ್ನಡ ಭಾಷೆಯೇ ಪ್ರೇರಣೆಯಾಯಿತು. ಜನಸಾಮಾನ್ಯರಲ್ಲಿ, ಓಣಿ, ಸಂತೆಗಳಲ್ಲಿ ಉಳಿದ ಕನ್ನಡ ಭಾಷೆಯು ಪುನಃ ಈ ಹೊತ್ತಿನ ಕಥೆ-ಕಾದಂಬರಿಗಳಲ್ಲಿ ಕಾಣಿಸಿಕೊಂಡಿದೆ. ಬೀದರಿನ ಶಿವಕುಮಾರ ನಾಗವಾರ, ಶ್ರೀಕಾಂತ ಪಾಟೀಲ್, ಕಲ್ಬುರ್ಗಿದ ರಾಜಶೇಖರ ಹತಗುಂದಿ, ಚಿತ್ರಶೇಖರ ಕಂಠಿ, ರಾಯಚೂರಿನ ಕಲಿಗಣನಾಥ ಗುಡದೂರು, ಚಿದಾನಂದ ಸಾಲಿ, ಅಬ್ದುಲ್ ರಹೀಮ್ ಗೋನಾಳ್ ಮುಂತಾದ ಈ ಹೊತ್ತಿನ ತರುಣರು ತಮ್ಮ ಕಥೆಗಳಲ್ಲಿ ಜನ ಸಾಮಾನ್ಯರಲ್ಲಿ, ಕೆಳವರ್ಗದವರಲ್ಲಿ ಜೀವದಿಂದ ಉಳಿದಿದ್ದ ಕನ್ನಡ ಭಾಷೆಯನ್ನೇ ಬಳಸುತ್ತಿದ್ದಾರೆ. ಈ ಎಲ್ಲ ಬೆಳವಣಿಗೆಯ ಹಿನ್ನೆಲೆಯಲ್ಲಿ ಸಿದ್ಧಯ್ಯ ಪುರಾಣಿಕರು 'ವಚನ'ಗಳನ್ನು ಬರೆದಿರುವುದು, ಚೆನ್ನಣ್ಣ ವಾಲೀಕಾರ 'ಬೆಳ್ಳ' ಬರೆದಿರುವುದು ಆಕಸ್ಮಿಕವೂ ಅಲ್ಲ. ಶಾಂತರಸ, ರಾಜ ಪುರೋಹಿತ, ಗೀತಾ ನಾಗಭೂಷಣ, ಕುಸನೂರು, ವೀರೇಂದ್ರ ಸಿಂಪಿ ಇವರ ಭಾಷೆ 'ಸಮನ್ವಯ'ದ್ದು. ಮಠಗಳಲ್ಲಿ ಉಳಿದ ಕನ್ನಡ (ಗ್ರಾಂಥಿಕ ಸ್ವರೂಪದ್ದು) ಮತ್ತು ಓಣಿ, ಸಂತೆಗಳಲ್ಲಿ ಉಳಿದ ಕನ್ನಡ (ಆಡು ಮಾತಿನ ಸ್ವರೂಪದ್ದು) ಭಾಷೆಯನ್ನು ಇವರೆಲ್ಲ ತಮ್ಮ ಕಥೆ-ಕಾದಂಬರಿ-ಪ್ರಬಂಧಗಳಲ್ಲಿ ಬಳಸುತ್ತಿದ್ದಾರೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕನ್ನಡ ಭಾಷೆ-ಸಂಸ್ಕೃತಿ

ಈ ಪ್ರಾಂತ್ಯದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕನ್ನಡ ಕಲಿಕೆ ಮತ್ತು ಕನ್ನಡ ಭಾಷೆಯ ಅಭಿವೃದ್ಧಿಗೆ ತೊಡಕಾದ ಎರಡು ಸಮಸ್ಯೆಗಳಿವೆ ಎಂದು ಕಾಣುತ್ತದೆ. ಈ ಪ್ರಾಂತ್ಯಕ್ಕೆ ೧೯೪೮ರ, ಸೆಪ್ಟೆಂಬರ್ -೧೭ಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದ ಮೇಲೆ ಉರ್ದು ಮಾಧ್ಯಮದ ಶಾಲೆಗಳು ಕಮ್ಮಿಯಾದವು. ಕನ್ನಡ ಮಾಧ್ಯಮ ಶಾಲೆಗಳು ಪ್ರಾರಂಭವಾದವು ಎಂಬುದು ಸುಲಭವಾದ ಸರಳ ಸಂಗತಿಯಾಗಿದೆ. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಈ ಪ್ರಾಂತ್ಯಕ್ಕೆ ಜೀವ ಬಂದಂತಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಅಕ್ಷರ ಕಲಿಯಲು ಸಾಧ್ಯವಿದ್ದ ಬಹುತೇಕ ಕುಟುಂಬಗಳ ಸದಸ್ಯರು ಉರ್ದು, ಮರಾಠಿ ಮತ್ತು ತಕ್ಕಮಟ್ಟಿಗೆ ಇಂಗ್ಲೀಷ್ ಭಾಷೆಯನ್ನು ಬಲ್ಲವರಾಗಿದ್ದರು. ಸ್ವಾತಂತ್ರ್ಯಾನಂತರ ಈ ಕುಟುಂಬಗಳ ಸದಸ್ಯರು ಕನ್ನಡ ಭಾಷೆ ಕಲಿಕೆಗೆ ಮುಂದಾಗಲಿಲ್ಲ. ಇಂಥ ಪೀಳಿಗೆಯ ಜನರು ಉರ್ದು, ಮರಾಠಿ ಭಾಷೆಗಳಲ್ಲೇ ತಮ್ಮ ವ್ಯವಹಾರಗಳನ್ನು ಮುಂದುವರಿಸಿದರು. ಈ ಮನೋಧರ್ಮ ಬೀದರ, ಕಲ್ಬುರ್ಗಿ ಜಿಲ್ಲಾ ಪ್ರದೇಶದಲ್ಲಿ ಹೆಚ್ಚು ಕಾಣಿಸಿತು. ಈ ತಲೆಮಾರಿನ ಜನರು ಬಹುಬೇಗ ಕನ್ನಡ ಭಾಷಾಭಿಮಾನವನ್ನು ಬೆಳೆಸಿಕೊಳ್ಳಲಿಲ್ಲ. ಬೆಳೆಸಿಕೊಳ್ಳುವ ಅಗತ್ಯವೇ ಅವರಿಗೆ ಕಾಣಿಸಲಿಲ್ಲವೋ. ಆದರೆ ಈ ತಲೆಮಾರಿನವರು ತಮ್ಮ ಮಕ್ಕಳಿಗೆ ಇಂಗ್ಲೀಷ್ ಕಲಿಸಲು ನೋಡಿದರೇ ಹೊರತು ಕನ್ನಡ ಕಲಿಯಲು ಪ್ರೇರೇಪಿಸಿದಂತೆ ಕಾಣವುದಿಲ್ಲ. ಇದು ಸ್ವಾತಂತ್ರ್ಯಾನಂತರದ ಅವಸ್ಥೆ.

ಈ ಹೊತ್ತಿನ ಸಂದರ್ಭದಲ್ಲಿ 'ಜಾಗತೀಕರಣ' ಪ್ರಕ್ರಿಯೆಯಿಂದ ಇಂಗ್ಲೀಷ್ ಭಾಷೆಯೇ ಅಧಿಕೃತ ಭಾಷೆಯೆಂಬ ತಿಳುವಳಿಕೆಗೆ ಜನರು ಬಂದಿದ್ದಾರೆ. ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಬಹುತೇಕ ಕುಟುಂಬಗಳು ಇಂಗ್ಲೀಷ್ ಮಾಧ್ಯಮದಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಸಂಭ್ರಮದಿಂದ ಕೊಡಿಸುತ್ತಿದ್ದಾರೆ. ಇಂಗ್ಲೀಷ್ ಮಾಧ್ಯಮ ಶಾಲೆಗಳು ಗ್ರಾಮಾಂತರ ಪ್ರದೇಶಗಳಲ್ಲಿಯೂ ತಲೆ ಎತ್ತುತ್ತಿರುವ ಈ ಹೊತ್ತಿನಲ್ಲಿ ದುಡಿದು ಬದುಕುವ ಕುಟುಂಬದವರೂ ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗೆ ಕಳಿಸಲು ಹಾತೊರೆಯುತ್ತಿದ್ದಾರೆ. ಈ ಪ್ರಕ್ರಿಯೆಯಿಂದ ಗ್ರಾಮಾಂತರ ಪ್ರದೇಶದ ಮಕ್ಕಳಲ್ಲಿಯೂ ಕನ್ನಡ ಕಲಿಕೆಯ ಬಗ್ಗೆ ಉತ್ಸಾಹ ಮಾಯವಾಗುತ್ತಿದೆ. ಕನ್ನಡ ಕಲಿಕೆಯ ಬಗ್ಗೆ ಯಾವುದೇ ಆಡಳಿತ ರೂಢ ಸರಕಾರವು 'ರಾಜಕೀಯ ಇಚ್ಛಾಶಕ್ತಿ'ಯನ್ನು ಪ್ರಯೋಗಿಸಲಾಗಿಲ್ಲ. ಇಂಥ ಬಿಕ್ಕಟ್ಟುಗಳಿಂದ ಈ ಪ್ರಾಂತ್ಯದಲ್ಲಿ ಕನ್ನಡ ಭಾಷೆ ಬಿಡುಗಡೆಯಾಗುವ ಯಾವ ಸೂಚನೆಗಳೂ ಕಂಡು ಬರುತ್ತಿಲ್ಲ. ಆಂಧ್ರ, ಮಹಾರಾಷ್ಟ್ರಗಳ ಗಡಿಗೆ ಈ ಪ್ರಾಂತ್ಯ ಹೊಂದಿಕೊಂಡಿರುವುದರಿಂದಲೂ ತೆಲುಗು, ಮರಾಠಿ ಭಾಷೆಗಳಲ್ಲೇ ಜನಸಾಮಾನ್ಯರು ದಿನ ನಿತ್ಯದ ವ್ಯವಹಾರ ನಡೆಸುತ್ತಾರೆ. ಕಳೆದ ಎರಡು ದಶಕಗಳಿಂದ ರಾಯಚೂರು ಜಿಲ್ಲೆಯ ಬಹುತೇಕ ತಾಲ್ಲೂಕು ಪ್ರದೇಶಗಳಲ್ಲಿ ಆಂಧ್ರದ ಜನರು ನೆಲೆಗೊಂಡಿರುವುದರಿಂದ ಗಡಿಯಲ್ಲಿದ್ದ ತೆಲುಗು ಭಾಷೆವು ಜಿಲ್ಲೆಯ ಒಡಲೊಳಗೂ ಸೇರಿಕೊಂಡಿದೆ. ಇವರ ಸಂಸ್ಕೃತಿಯು ಭಾಷೆಯೂ ಸೇರಿದಂತೆ ಊಟ, ಉಡುಗೆಗಳು ಕನ್ನಡಿಗರ ವ್ಯವಹಾರದಲ್ಲಿ ಸೇರಿಕೊಂಡಿವೆ.

ರಾಯಚೂರು ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ಆಂಧ್ರದ ಜನರು ಬಂದು ಭೂಮಿಯನ್ನು ಕೊಂಡು ಭೂ ಮಾಲಿಕರಾಗಿ ಬೆಳೆದಿದ್ದಾರೆ. ಇಲ್ಲಿಯ ಬಹುಸಂಖ್ಯಾತ ಕೆಳವರ್ಗದ ಜನರು ಈ ಆಂಧ್ರ ಭೂ ಮಾಲಿಕರ ಅಧೀನದಲ್ಲಿ ದುಡಿದು ಬದುಕುತ್ತಿದ್ದಾರೆ. ಕರ್ನಾಟಕದ ಭೂ ಮಾಲಿಕರಲ್ಲಿ ಅಧೀನದಲ್ಲಿ ದುಡಿಯುವುದು ಕೇವಲ ಹೊಟ್ಟೆಪಾಡಿನ ಪ್ರಶ್ನೆ ಮಾತ್ರವಾಗಿರದೆ ಒಂದು ಬಗೆಯ 'ಅಸ್ಪೃಶ್ಯತೆ'ಯನ್ನು ಕಳೆದುಕೊಳ್ಳುವಂತಾದದ್ದೂ ಇದೆ. ಜಾತೀಯ ಕಟ್ಟುಪಾಡುಗಳಿಲ್ಲದೆ ಬೆರೆತು ದುಡಿಯುತ್ತಿದ್ದಾರೆ. ಇದು ಆಂಧ್ರದ ಸಂಸ್ಕೃತಿಯನ್ನು ಅನುಸರಿಸಲು ಕಾರಣವಾಗಿದೆ,

ಹದಿಮೂರನೆಯ ಶತಮಾನದಿಂದಲೇ ಈ ಪ್ರಾಂತ್ಯವು ಉತ್ತರದ ಅರಸರ ದಾಳಿಗೆ ಸಿಕ್ಕು ದುಸ್ಥಿತಿಗೆ ಈಡಾಯಿತು. ಈ ಅರಸರ ನಿರಂತರ ಆಳ್ವಿಕೆಯಿಂದಾಗಿ ಈ ಪ್ರಾಂತ್ಯವು ತನ್ನ ಭಾಷೆ, ಸಂಸ್ಕೃತಿಯನ್ನು ಕಳೆದುಕೊಂಡು ಸೊರಗಿತು. ಕನ್ನಡ ಭಾಷೆ

ಕೇವಲ ಲಿಪಿರಹಿತವಾಗಿ ಜನಸಾಮಾನ್ಯರ ಬಾಯಿಮಾತಿನಲ್ಲಿ ಉಳಿಯಬೇಕಾಗಿತ್ತು. ಇದರಿಂದ ಈ ಪ್ರಾಂತ್ಯದಲ್ಲಿ ಲಿಖಿತ ಸಾಹಿತ್ಯ ಪರಂಪರೆಗೆ ತೊಡಕಾಯಿತು. ಆದರೆ ಮೌಖಿಕ ಸಾಹಿತ್ಯ ಪರಂಪರೆಯು ಸಂಮೃದ್ಧವಾಗಿ ಬೆಳೆಯಲು ಸಾಧ್ಯವಾಯಿತು. ಆದರೂ ಮಠಮಾನ್ಯಗಳಲ್ಲಿ ಉಳಿದಿದ್ದ ಕನ್ನಡ ಭಾಷೆಯಿಂದ ಪುರಾಣಿ, ಶಾಸ್ತ್ರಗ್ರಂಥಗಳು, ತಕ್ಕಮಟ್ಟಿಗೆ ಕಾವ್ಯಗ್ರಂಥಗಳೂ ಸೃಷ್ಟಿಯಾಗಿವೆ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಸಾಂಸ್ಕೃತಿಕ ಬಿಕ್ಕಟ್ಟುಗಳ ನಡುವೆಯೂ ಅನೇಕರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಪುನರ್ ಸ್ಥಾಪಿಸಲು ಶ್ರಮಿಸಿದ್ದಾರೆ. ಕಪಟರಾಳ್ ಕೃಷ್ಣರಾವ್ ಅವರಂಥ ವಿದ್ವಾಂಸರು ಈ ಪ್ರಾಂತ್ಯದಲ್ಲಿ ಹುಟ್ಟಿ ಕನ್ನಡ ಸಂಶೋಧಕರಾಗಿ ಬೆಳೆದದ್ದು ಪವಾಡವೆನಿಸುತ್ತದೆ. ಆಧುನಿಕ ಕನ್ನಡ ಸಾಹಿತ್ಯಿಕ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕದ ಕೊಡುಗೆಯು ಮೇಲು ನೋಟಕ್ಕೆ ಸಮಾನ್ಯವಾಗಿ ಕಾಣುತ್ತದೆ. ಆದರೆ ಈ ಪ್ರಾಂತ್ಯದ ಚರಿತ್ರೆಯ ಸಂಕಷ್ಟಗಳನ್ನು ನೋಡಿದರೆ ಕನ್ನಡದಲ್ಲಿ ಮಾತಾಡುವುದು, ಬರೆಯುವುದೇ ಒಂದು ಸಾಧನೆ ಎಂಬುದನ್ನು ಮರೆಯಲಾಗದು. ಈ ಪ್ರಾಂತ್ಯದ ಕಾವ್ಯ-ಕಥೆ-ಕಾದಂಬರಿ ಸಾಹಿತ್ಯವನ್ನು ಒಟ್ಟಾಗಿ ಗಮನಿಸುವ ಅಗತ್ಯವಿದೆ ಅನ್ನಿಸುತ್ತದೆ. ಜತೆಗೆ ಭಾಷೇತರವಾದ ಸಂಗೀತ, ಚಿತ್ರಕಲೆ, ಶಿಲ್ಪಕಲೆ ಮುಂತಾದ ಕಲೆಗಳು ಈ ಪ್ರಾಂತ್ಯದಲ್ಲಿ ವಿಶಿಷ್ಟವಾಗಿ ಬೆಳೆದಿವೆ.

ಸ್ವಾತಂತ್ರ್ಯಾನಂತರದಲ್ಲಿ ಕನ್ನಡ ಭಾಷೆ, ಸಾಹಿತ್ಯವು ಬೆಳೆಯುವ ಲಕ್ಷಣಗಳು ಕಂಡು ಬಂದವು ಎಂಬುದು ನಿಜ. ಆದರೆ 'ಜಾಗತೀಕರಣ'ದ ಪ್ರಕ್ರಿಯೆಯಿಂದ ಪುನಃ ಈ ಪ್ರಾಂತ್ಯದಲ್ಲಿಯೂ ಕನ್ನಡ ಭಾಷೆಯ ಬೆಳವಣಿಗೆಗೆ ಅಡ್ಡಿಯಾಗುವ ಎಲ್ಲ ಲಕ್ಷಣಗಳು ಕಾಣುತ್ತಿವೆ.

ಅಧ್ಯಾಯ ಏಳು: ಕಥಾ ಸಾಹಿತ್ಯ

ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರಭಾವ

ದೇಶ-ಪ್ರಾಂತ್ಯ ವಿಭಜನೆಗಳ ಸಂದರ್ಭದಲ್ಲಿ ಜನ ಸಾಮಾನ್ಯರ ತಲ್ಲಣಗಳು

ರಜಾಕಾರರ ದಾಳಿ ಮತ್ತು ಜನ ಸಮುದಾಯಗಳು

ಫ್ಯೂಡಲ್ ವ್ಯವಸ್ಥೆ ಮತ್ತು ಕೆಳವರ್ಗದವರು

ಫ್ಯೂಡಲ್ ವ್ಯವಸ್ಥೆ ಮತ್ತು ಮಹಿಳೆಯರು

ಟೆನೆಂಟ್ ಕಾಯ್ದೆ: ಭೂಮಾಲಿಕರು ಮತ್ತು ಉಳುವ ರೈತರು

ಕೌಟುಂಬಿಕ ಬದುಕಿನ ಸಮಸ್ಯೆಗಳು

ಧಾರ್ಮಿಕ ನಂಬಿಕೆಗಳು ಮತ್ತು ಕೆಳವರ್ಗದವರು

ತಾಯಿ ಮತ್ತು ಮಗುವಿನ ಸಮಸ್ಯೆ

ಹಿಂದೂ-ಮುಸ್ಲಿಮ್ ಸಂಬಂಧಗಳು

ಅಧ್ಯಾಯ ಏಳು: ಕಥಾಸಾಹಿತ್ಯ

ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರಭಾವ

ಕುತೂಹಲದ ಸಂಗತಿಯೆಂದರೆ ಈ ಪ್ರದೇಶದ ಸಾಹಿತಿಗಳ ಮೇಲೆ ಪ್ರಾರಂಭದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ಪ್ರಭಾವ ಬೀರಿರುವುದು. ೧೯೪೩-೧೯೫೦ರ ವರೆಗೆ ಮಾತ್ರ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ 'ಮಾನವೀಯತೆಗಾಗಿ ಕಲೆ' ಎಂಬ ದೃಷ್ಟಿಕೋನದಿಂದ ಈ ಚಳುವಳಿ ಚಾಲನೆಯಲ್ಲಿತ್ತು. ೧೯ನೆಯ ಶತಮಾನದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ವೈಜ್ಞಾನಿಕ, ಕೈಗಾರಿಕಾ ಕ್ರಾಂತಿಯಿಂದ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಸ್ಥಿತ್ಯಂತರಗಳಾದ ಪರಿಣಾಮವಾಗಿ ಸಮಾಜದಲ್ಲಿ ಎರಡು ಪ್ರಮುಖ ವರ್ಗಗಳು ಒಡೆದು ಕಾಣಿಸಿಕೊಂಡವು. ಬಂಡವಾಳಗಾರರು, ಶ್ರಮಿಕರು ಎಂಬ ಎರಡು ವರ್ಗಗಳು. ಸಾಮಾಜಿಕ ಮತ್ತು ಮುಖ್ಯವಾಗಿ ಆರ್ಥಿಕ ಅಸಮಾನತೆಗಳಿಂದ ಅನೇಕ ಬಿಕ್ಕಟ್ಟುಗಳು ತಲೆದೋರಿದ್ದವು. 'ವರ್ಗರಹಿತ ಸಮಾಜ'ದ ನಿರ್ಮಾಣಕ್ಕಾಗಿ ಕಾರ್ಲ್‌ಮಾರ್ಕ್ಸ್ ಬರಹಗಳು ದುಡಿದವು. ಸಮಾಜದಲ್ಲಿ ಹೊಸ ಚಿಂತನೆಗಳಿಂದ ಬದಲಾವಣೆಗಳು ಚಿಗುರತೊಡಗಿದವು. ರಷ್ಯಾದಲ್ಲಿ ೧೯೧೭ರ ಕ್ರಾಂತಿಯ ನಂತರ ಸಾಮ್ಯವಾದ ತಲೆಯೆತ್ತಿತು. ಇದರಿಂದಾಗಿಯೇ ಬರಹಗಾರರಲ್ಲಿ ಹೊಸ ಆಲೋಚನಾಕ್ರಮಗಳು ಬೆಳೆದವು. ಸಮಾಜಕ್ಕೆ ಸ್ಫೂರ್ತಿ ನೀಡುವುದೇ ಕಲೆಯ, ಸಾಹಿತ್ಯದ ಉದ್ದೇಶ ಎಂಬ ಲೆನಿನ್ ಅಭಿಪ್ರಾಯ 'ಸಾಮಾಜಿಕ ವಾಸ್ತವ'ವಾದಕ್ಕೆ ಪ್ರೇರಣೆಯಾಯಿತು.

ಭಾರತದಲ್ಲಿ ಈ ಚಳುವಳಿಯು ಸಜ್ಜದ್ ಜಾಹೀರ್, ಮುಲ್ಕರಾಜ್ ಆನಂದ್, ಪ್ರೇಮಚಂದ್ ಮುಂತಾದವರಿಂದ ಜೀವ ಪಡೆದು ಅ.ನ.ಕೃ ಅವರ ಅಧ್ಯಕ್ಷತೆಯಲ್ಲಿ ಕನ್ನಡನಾಡಿನಲ್ಲಿ ೧೯೪೩ರಲ್ಲಿ ಕುಡಿಯೊಡೆಯಿತು. ಈ ಲೇಖಕರು 'ಸಮಾಜವಾದ'ವನ್ನು ಸಾಹಿತ್ಯದ ಮೂಲಕ ಪ್ರತಿಪಾದಿಸತೊಡಗಿದರು. ಸಾಹಿತಿ-ಕಲಾವಿದರಿಗೆ ಸಮಾಜದ ಉದ್ಧಾರವೇ ಪ್ರಧಾನ ಗುರಿಯಾಗಬೇಕೆಂದು, 'ಮಾನವನ ಬದುಕಿಗಾಗಿ ಕಲೆ' ಎಂಬ ಧ್ಯೇಯವಿಟ್ಟುಕೊಂಡು ಶೋಷಣೆ, ಅಜ್ಞಾನ, ಮೂಢನಂಬಿಕೆ, ಅಸಮಾನತೆ ಮುಂತಾದವುಗಳನ್ನು ವಿರೋಧಿಸಿ ಕೃತಿರಚನೆಗೆ ತೊಡಗಿದರು. ಈ ಸಂಘಟನೆಗೆ 'ಸರಕಾರಿ ನೌಕರಿ' ಮಾಡುವವರು ಸೇರಿಕೊಳ್ಳಲು ಹಿಂಜರಿದರು. ಹೀಗಾಗಿ ಮೈಸೂರು ಪ್ರಾಂತ್ಯದ ಕಡೆ ಈ ಚಳುವಳಿಗೆ ಸಾಹಿತಿ-ಕಲಾವಿದರು ಸ್ಪಂದಿಸಲಿಲ್ಲವೆಂದು ಕಾಣುತ್ತದೆ. ಪ್ರಗತಿಶೀಲ ಲೇಖಕರು ಹೊಸದಾಗಿ ಅಕ್ಷರಸ್ಥರಾದ ಮಧ್ಯಮ ವರ್ಗದ ಓದುಗರನ್ನು ತಮ್ಮ ಪರಿಧಿಗೆ ಒಳಪಡಿಸಲು ಹೆಚ್ಚಾಗಿ ಕಥಾ ಸಾಹಿತ್ಯವನ್ನು ಬಳಸಿದರು. ಸರಳ ಭಾಷೆ, ಸುಲಭ ಶೈಲಿಯ ಸಂಭಾಷಣೆ-ತಂತ್ರ-ನಿರೂಪಣೆಯಿಂದ ಬರವಣಿಗೆಯನ್ನು ಆಕರ್ಷಕವಾಗಿಸಿ ಮಧ್ಯಮ ವರ್ಗದವರಲ್ಲಿ ಈ ಸಾಹಿತ್ಯ ಚಳುವಳಿಯನ್ನು ಜನಪ್ರಿಯಗೊಳಿಸಲಾಯಿತು. ಮುಖ್ಯವಾಗಿ ಪ್ರಗತಿಶೀಲ ಬಳಗದ ಬರಹಗಾರರು ನಾಡಿನ ತುಂಬ ಓಡಾಡಿದರು. ಅದರಲ್ಲೂ ಉತ್ತರ ಕರ್ನಾಟಕ, ಹೈದರಾಬಾದ್ ಪ್ರಾಂತ್ಯದಲ್ಲಿ ಈ ಸಾಹಿತ್ಯ ಚಳುವಳಿಯ ಜತೆಗೆ ಭಾವನಾತ್ಮಕ ಸಂಬಂಧವೂ ಏರ್ಪಟ್ಟಿತು. ಇದಕ್ಕೆ ಹೈದರಾಬಾದ್ ಕರ್ನಾಟಕದ ರಾಜಕೀಯ, ಸಾಮಾಜಿಕ ಪರಿಸ್ಥಿತಿಗೂ ಪ್ರಗತಿಶೀಲ ಚಳುವಳಿಯ ರಾಜಕೀಯ ಮತ್ತು ಸಾಮಾಜಿಕ ದೃಷ್ಟಿಕೋನಕ್ಕೂ ಒಳ ಸಂಬಂಧಗಳಿದ್ದವು.

ಹೈದರಾಬಾದ್ ಕರ್ನಾಟಕವು ೧೯೪೮ರ ಅಂತ್ಯದವರೆಗೆ 'ಹೈದರಾಬಾದ್ ಸಂಸ್ಥಾನ'ದಲ್ಲಿ ಉಳಿದಿತ್ತು. ನಿಜಾಮನ ಆಳ್ವಿಕೆ ಮತ್ತು ಉರ್ದು ಆಡಳಿತ ಭಾಷೆಯಾಗಿದ್ದರಿಂದ ಜನರು ಬಿಕ್ಕಟ್ಟಿನಲ್ಲಿದ್ದರು. ಇದರಿಂದ ವಸಾಹತು ಅನುಭವಕ್ಕೆ ನೇರವಾಗಿ ಒಳಗಾಗಲಿಲ್ಲ. ಬೇರೆ ಭಾಗದ ಜನರಿಗಿರುವ ಸಾಧ್ಯತೆಗಳು ಈ ಭಾಗದ ಜನರಿಗಿರಲಿಲ್ಲ. ಪಶ್ಚಿಮದಿಂದ ಹರಿದು ಬರುವ ಹೊಸ ಅರಿವಿಗೆ ಮನಸ್ಸು ಒಡ್ಡಲು ಅವಕಾಶಗಳು ಸಿಗಲಿಲ್ಲ. ೧೭ನೆಯ ಶತಮಾನದಿಂದಲೇ ಈ ಪ್ರದೇಶದಲ್ಲಿ ಕನ್ನಡ ಹಿನ್ನೆಲೆಗೆ

ಸರಿಯತೊಡಗಿತ್ತು. ಅದರಲ್ಲೂ ಬರವಣಿಗೆಯಿಂದಂತೂ ಪೂರ್ತಿ ಹಿಂದೆ ಸರಿದಿತ್ತು. ೨೦ನೆಯ ಶತಮಾನದ ಆರಂಭದಲ್ಲಿ ಅಕ್ಷರ ಕಲಿತವರ ಸಂಖ್ಯೆಯೇ ಅತ್ಯಲ್ಪವಾಗಿದ್ದ ಆ ದಿನಗಳಲ್ಲಿ, ಕಲಿವವರೆಲ್ಲ ತಮ್ಮ ಲೌಕಿಕ ಪ್ರಯೋಜನಗಳಿಗಾಗಿ ಉರ್ದು ಕಲಿಯಲಾರಂಭಿಸಿದ್ದರು. ಹೀಗಾಗಿ ೨೦ನೇ ಶತಮಾನದ ಅರ್ಧ ಭಾಗದವರೆಗೆ ಕನ್ನಡ ಕಲಿಕೆ ರಾಜಕೀಯವಾಗಿ ಸ್ಥಗಿತವಾಗಿತ್ತು. ಮಠಗಳಲ್ಲಿ ಅಯ್ಯನವರ ಶಾಲೆಗಳಲ್ಲಿ ಉಳಿದಿದ್ದ ಕನ್ನಡ ೧೯೪೮ರ ನಂತರ ಚಿಗುರತೊಡಗಿತು.(ಇಂಥ ಸಂದರ್ಭದಿಂದಾಗಿ ನವೋದಯ ಸಾಹಿತ್ಯ ಚಳುವಳಿಯು ಈ ಭಾಗದವರನ್ನು ಅಷ್ಟಾಗಿ ತಟ್ಟಲಿಲ್ಲ) ಇದೇ ಸಂದರ್ಭದಲ್ಲಿಯೇ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರಚಾರ-ಸಂಚಾರ ಈ ಭಾಗದಲ್ಲಿ ನಡೆದದ್ದಕ್ಕೂ ಸರಿಹೋಗಿ, ಅಕ್ಷರಸ್ಥರಾಗುತ್ತಿದ್ದ ಈ ಪ್ರಾಂತ್ಯದ ಜನರು ಈ ಚಳುವಳಿಯಿಂದ ಪ್ರೇರಿತರಾಗಿ ಓದು-ಬರಹ ಸುರುಮಾಡಿದ್ದು ಸಹಜವಾಗಿದೆ.

'ಒರೆಗಲ್ಲು'(೧೯೫೩) ಹಾಗೂ 'ಸನ್ಮಾನ'(೧೯೬೮) ಎಂಬ ಆಂಥ್ಯಾಲಜಿಗಳು ಇದಕ್ಕೆ ಸಾಕ್ಷಿಯಾಗಿವೆ. ನರಸಿಂಹ ಕಠಾವಿ, ಕುಮಾರಿ ಸುಶೀಲಾ ಬಾಡಗಂಡಿ, ವಾಗೀಶ್ವರಿ ನಾರಾಯಣ, ಎಚ್.ಜಿ.ಕುಲಕರ್ಣಿ, ಶ್ಯಾಮಪ್ರಸಾದ ಮುದ್ಗಲ್, ಶಾಂತಾ ಚಿಂಚೋಳಿ, ಗುರುನಾಥ ರೆಡ್ಡಿ ಪರ್ವತಾಬಾದ, ವಸುಂಧರಾ ಕಲಬುರ್ಗಿ, ಅನಂತ ಹರಸೂರು, ಬೆಳಗೆರೆ ಪಾರ್ವತೆಮ್ಮ ಮುಂತಾದವರು ಬರೆದ ಒಂದೊಂದು ಕಥೆಗಳು 'ಒರೆಗಲ್ಲು' (೧೯೫೧) ಕಥಾ ಸಂಕಲನದಲ್ಲಿ ಸೇರಿವೆ. ಆದರೆ ಇವರ ಬರವಣಿಗೆ ಮುಂದುವರೆದ ಬಗ್ಗೆ ದಾಖಲೆಗಳಿಲ್ಲ. ಇವರೆಲ್ಲ ಸ್ವಾತಂತ್ರ್ಯ ಪೂರ್ವದಲ್ಲಿ ಈ ಪ್ರದೇಶದವರಿಗೆ ಕನ್ನಡ ಸಾಹಿತ್ಯ-ಸಂಸ್ಕೃತಿಯ ಕೇಂದ್ರವಾದಂತಿದ್ದ ಹೈದರಾಬಾದ್ ನಗರದಲ್ಲಿ ವಿದ್ಯಾರ್ಥಿಗಳಾಗಿದ್ದವರು. ಹೈದರಾಬಾದ್ ಕರ್ನಾಟಕದ ಕಲಬುರ್ಗಿಗೆ ಅ.ನ.ಕೃ ಬರುವರೆಂದು ತಿಳಿದ ಈ ಭಾಗದ ಲೇಖಕರು, ಅವರಿಗೆ ಅರ್ಪಿಸಲು ತಮ್ಮ ತಮ್ಮ ಕಥೆಗಳನ್ನು ಒಂದೇ ಕೃತಿಯಲ್ಲಿ ಸಂಕಲಿಸಿ, ಅದಕ್ಕೆ 'ಸನ್ಮಾನ' ಎಂದು ಹೆಸರಿಟ್ಟು, ಅದನ್ನು ಅವರಿಗೆ ಅರ್ಪಿಸಿರುವುದೇ ಸಾಕ್ಷಿಯಾಗಿದೆ. ಈ ಎರಡು ಸಂಕಲನದ ಕಥೆಗಳು ಪ್ರಗತಿಶೀಲ ಸಾಹಿತ್ಯದ ಆಶಯಗಳನ್ನು ಹೊಂದಿವೆ. ಇದಕ್ಕೂ ಮುನ್ನ ರಾಯಚೂರು ಭಾಗದಿಂದ ೧೯೪೭ರಲ್ಲಿ ಹೊರಬಂದ 'ಮುಸುಕು ತೆರೆ' ಎಂಬ ಸಂಕೀರ್ಣ ಕೃತಿಯಲ್ಲಿಯೇ ಪ್ರಗತಿಶೀಲರ ಪ್ರಭಾವ ಒಡೆದು ಕಾಣುತ್ತಿತ್ತು. ಇದೇ ಸಮಯದಲ್ಲಿ ಬಂದ ಎ.ಬಿ.ಮುತ್ತಾಳರ 'ಕಳಚಲಿದ ರತ್ನ'(೧೯೫೧) ಸಗರ ಕೃಷ್ಣಾಚಾರ್ಯರ 'ಆದರ್ಶ'(೧೯೬೦) ಹಾಗೂ ಶಿವಲೆಂಕರ 'ಅವಳೇ ಇವಳೂ'(೧೯೬೯)ಕಥಾ ಸಂಕಲನಗಳು ಹೆಚ್ಚಿನ ಪುರಾವೆಗಳನ್ನು ಒದಗಿಸುತ್ತವೆ.

ಶಿವಲೆಂಕ, ಸಿದ್ಧಯ್ಯ ಪುರಾಣಿಕ, ದೇವೇಂದ್ರ ಕುಮಾರ ಹಕಾರಿ, ಪಂಚಾಕ್ಷರಿ ಹಿರೇಮಠ, ಶಾಂತರಸ, ಚಂದ್ರಕಾಂತ ಕುಸನೂರು, ಜಯತೀರ್ಥ ರಾಜಪುರೋಹಿತ, ಜಿ.ವಿ.ವಿಸಾಜಿ ಮುಂತಾದವರ ಕಥೆಗಳಲ್ಲಿ, ಮಧ್ಯಮ, ಕೆಳವರ್ಗದ ಜನರ ತಲ್ಲಣಗಳು, ಕನಸುಗಳು, ಆಸೆ-ಆಕಾಂಕ್ಷೆಗಳು, ಭಾವುಕ-ರಂಜಕ ನೆಲೆಯಲ್ಲಿ ಪ್ರಗತಿಶೀಲ ಸಾಹಿತ್ಯದ ಆಶಯಗಳಿಗೆ ಅನುಗುಣವಾಗಿ ಪ್ರಕಟವಾಗಿವೆ. ಅದರಲ್ಲೂ ಕಲಾವಿದರನ್ನು ಕುರಿತ ಕಥೆಗಳೂ ವಿಶೇಷವಾಗಿವೆ.

ಮೇಲೆ ಹೆಸರಿಸಿದ ಕಥೆಗಾರರಲ್ಲಿ ಶಾಂತರಸ, ಜಯತೀರ್ಥ ರಾಜಪುರೋಹಿತರು ಹೆಚ್ಚು ಕಥೆಗಳನ್ನು ಬರೆದವರು. ಉಳಿದವರೆಲ್ಲ ಪ್ರಾರಂಭದ ಉತ್ಸಾಹವನ್ನು ನಂತರ ಉಳಿಸಿಕೊಳ್ಳಲಿಲ್ಲ. ದಾಖಲೆಗೋಸ್ಕರ ಎಂಬಂತೆ ಒಂದೊಂದು ಕಥಾ ಸಂಕಲನವನ್ನು ಪ್ರಕಟಿಸಿ ವಿರಮಿಸಿದರು.

ಸಾಹಿತಿ-ಕಲಾವಿದರನ್ನು ಕುರಿತು, ಪ್ರಾರಂಭದ ಕಥೆಗಾರರು ಅನೇಕ ಕಥೆಗಳನ್ನು ಬರೆದಿದ್ದಾರೆ. ಆದರ್ಶ ಕಲಾವಿದ, ಸಾಹಿತಿಯ ಜೀವನ, ನಾನು ಕವಿಯಾಗಿದ್ದರೆ(ಸಗರ ಕೃಷ್ಣಾಚಾರ್ಯ), ಇಂದಿರೆ(ಎ.ಬಿ.ಮುತ್ತಾಳ), ಕವಿಯ ಬಾಳೊಂದು(ಸುಶೀಲಾ ಬಾಡಗಂಡಿ), ಸಂಗೀತದಲ್ಲಿ ಸಮಾಧಿ(ವಾಗೀಶ್ವರಿ ನಾರಾಯಣ), ರುದ್ರವೀಣೆ(ಎಸ್.ಬಿ.ಬಿರಾದಾರ) ಮುಂತಾದವು. ಸಾಹಿತಿ-ಕಲಾವಿದರಿಂದ

ಸಾಮಾಜಿಕ ಬದಲಾವಣೆ ಸಾಧ್ಯವೆಂಬ ಪ್ರಗತಿಶೀಲರ ಆಶಯಕ್ಕೆ ಪೂರಕವಾಗುವಂಥ ಈ ಕಥೆಗಳು ಸಾಹಿತಿ-ಕಲಾವಿದರ ಆದರ್ಶ, ಕನಸು, ತ್ಯಾಗ ಇಂಥ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಇವರ ಬದುಕು ಸಾರ್ವಜನಿಕರಿಗೆ ಭವ್ಯವಾಗಿ ಕಾಣುತ್ತದೆ. ಆದರೆ ವೈಯಕ್ತಿಕ ಬದುಕು ಮಾತ್ರ ಬವಣೆಗಳಿಂದ ತುಂಬಿ ದುರಂತದೆಡೆಗೆ ತಲುಪುವ ಚಿತ್ರಗಳಿವೆ. ಈ ಬಗೆಯ ವಸ್ತುವುಳ್ಳ ಕಥೆಗಳು ನಂತರವೂ ಸೃಷ್ಟಿಯಾಗಿವೆ. ಶಾಂತರಸರ **'ನಾಟ್ಯರಾಣಿ'**, **'ಬಯಲಾಟ'**, ಜಯತೀರ್ಥ ರಾಜಪುರೋಹಿತರ **'ಕತೆಗಾರ್ತಿ'**, ಸೂಗಯ್ಯ ಹಿರೇಮಠರ **'ಚಿತ್ರಾನ್ನ'** ಮುಂತಾದವು. ಆಶಯ ಒಂದೇ ಆಗಿದ್ದರೂ ಭಾವುಕತೆಗಿಂತ ವಾಸ್ತವ ಸ್ಥಿತಿಗೆ ಹೆಚ್ಚು ಒತ್ತು ಕೊಟ್ಟಿವೆ. ಸಾಮಾಜಿಕ ಬದುಕಿನಲ್ಲಿ ಇಂಥ ಕಲಾವಿದರ ಸ್ಥಾನಮಾನಗಳು ಹೇಗಿರುತ್ತವೆ ಮತ್ತು ಕಲಾವಿದರೇ ತಮ್ಮ ಕಲಾಬದುಕಿನ ಬಗ್ಗೆ ತಳೆವ ನಿಲುವು ಎಂಥದ್ದು? ಎಂಬುದನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತವೆ.

'ಮಾನವೀಯತೆಗಾಗಿ ಕಲೆ' 'ಮಾನವನ ಬದುಕಿಗಾಗಿ ಕಲೆ' ಎಂಬ ಪ್ರಗತಿಶೀಲ ಸಾಹಿತಿಯ ಮನೋಭಾವವು ಇಲ್ಲಿನ ಸಾಹಿತ್ಯದಲ್ಲಿ ಸಾಬೀತುಗೊಂಡ ರೀತಿ ಕುತೂಹಲಕರವಾಗಿದೆ. **'ಕವಿಯ ಬಾಳೊಂದು'**(ಸುಶೀಲಾ ಬಾಡಗಂಡಿ) ಕಥೆಯಲ್ಲಿ, ಲಲಿತಾ ತನ್ನ ಕವಿ ಪತಿಗೆ, 'ನಿನ್ನಿಂದ ಜಗವು ಉದ್ಧಾರವಾಗುವುದಿದೆ. ನಿನ್ನ ಕವನಗಳ ಸಂದೇಶದಿಂದ ಪಾವನವಾಗುವುದಿದೆ' ಎಂದು ಹೇಳುತ್ತಾಳೆ. ಅವಳ ಮಾತು ವೇದವಾಕ್ಯದಂತೆ ಮೋಹನನು ಜನತೆಯ ಕಲ್ಯಾಣಕ್ಕಾಗಿ ಕವಿತೆಗಳನ್ನು ಬರೆಯುತ್ತಾನೆ. ಪ್ರಕೃತಿಯ ಒಡಲಲಿ ವಿಹರಿಸುವ ಈ ದಂಪತಿಗಳು ಒಬ್ಬರಿಗೊಬ್ಬರು ಸ್ಫೂರ್ತಿ ಪಡೆದು ಬದುಕುವ ಆದರ್ಶಿಗಳು. ಲಲಿತಾ ಸತ್ತ ನಂತರ, ಅವಳು ಸಾಯುವ ಮುನ್ನ ಹೇಳಿದಂತೆ, ತನ್ನ ಸಾವಿನಿಂದ ಗಂಡ ದುಃಖಿತನಾಗಬಾರದು, ಸ್ಫೂರ್ತಿ ಕಳೆದುಕೊಳ್ಳಬಾರದು, ಮಾನವನ ಒಳಿತಿಗೆ ಕವನಗಳನ್ನು ಬರೆಯುವುದು ಮುಂದುವರಿಸಿ, ಲೋಕಕ್ಕೆ ನೀಡಬೇಕು ಎಂಬ ಸಂದೇಶವನ್ನು ಹೊತ್ತು ಮೋಹನ ಕಾವ್ಯ ರಚಿಸುತ್ತಾನೆ. ಅವನ ಕಾವ್ಯ ಜನ ಮನ್ನಣೆ ಪಡೆಯುತ್ತದೆ. ಅದರ ತೃಪ್ತಿ ಭಾವದಿಂದ ಕವಿ ಕೊನೆಯುಸಿರೆಳೆಯುತ್ತಾನೆ. **'ಸಂಗೀತದಲ್ಲೆ ಸಮಾಧಿ'**(ವಾಗೀಶ್ವರಿ ನಾರಾಯಣ) ಕಥೆಯಲ್ಲಿ, ರಘು-ಸರೋಜ ಅಣ್ಣ-ತಂಗಿಯರು. ಅವರ ಹಿರಿಯರಿಂದ ಸಂಗೀತವನ್ನೇ ಬಳುವಳಿಯಾಗಿ ಪಡೆದಿದ್ದರು. ತಂದೆ-ತಾಯಿಯರು ತೀರಿಕೊಂಡಾಗ ಅವರು ತಂಬೂರಿ ಮತ್ತು ಸಾಲ ಎರಡನ್ನು ಮಾತ್ರ ಬಿಟ್ಟುಹೋಗಿದ್ದರು. ಈ ಮಕ್ಕಳಿಗೆ ತಮ್ಮ ಸಂಗೀತದಿಂದ ಜನರ ಮನಸ್ಸನ್ನು ತಣಿಸಿ, ಅಂತರಂಗ ಶುದ್ಧ ಮಾಡಬೇಕೆಂಬ ಬಯಕೆ ಹೊಂದಿದ್ದರು. ಆದರೆ ಸಾಲಗಾರರ ಜತೆ ವಾದ, ಜಗಳ ನಡೆದು, ತಂಬೂರಿ ಒಡೆಯಲು ಬಂದುದಕ್ಕೆ ರಘು ಸಾಲಗಾರನಿಗೆ ಸಿಟ್ಟಿನಿಂದ ಹೊಡೆಯುತ್ತಾನೆ. ಪರಿಣಾಮವಾಗಿ ರಘು ಜೈಲಿಗೆ ಹೋಗುತ್ತಾನೆ. ಸರೋಜ ಊರುಬಿಟ್ಟು, ಎಲ್ಲೋ ಸಿಕ್ಕ ಸಜ್ಜನರಾದ ದಂಪತಿಗಳ ಮನೆಯಲ್ಲಿ ಆಶ್ರಯ ಪಡೆಯುತ್ತಾಳೆ. ತನ್ನ ಸಂಗೀತದಿಂದ ಜನರ ಮನಸ್ಸನ್ನು ತಣಿಸುವ ಆಸೆ ಜೈಲಿಗೆ ಹೋದದ್ದರಿಂದ ಮಣ್ಣಾಯಿತೆಂದು ರಘು ದುಃಖಿಸುತ್ತಾನೆ. ಆದರೆ ಜೈಲಿನಿಂದ ಹೊರಬಂದು ತನ್ನ ತಂಗಿಯನ್ನು ದೂರದಿಂದ ನೋಡುತ್ತಾನೆ. ಅವಳು ದೊಡ್ಡ ಸಂಗೀತ ಕಲಾವಿದೆಯಾಗಿ ಬೆಳೆದಿರುತ್ತಾಳೆ. ಅವಳು ಹಾಡುವ ಸಂಗೀತ ಕಛೇರಿಯಲ್ಲೇ, ಧನ್ಯತೆಯಿಂದ ಉಸಿರೆಳೆಯುತ್ತಾನೆ. **'ಸಾಹಿತಿಯ ಜೀವನ'**(ಸಗರ ಕೃಷ್ಣಾಚಾರ್ಯ) ಕಥೆಯಲ್ಲಿ, ಸಾಹಿತಿಯೊಬ್ಬ ತಾನು ಬರೆದ ಸಾಹಿತ್ಯದಿಂದ ಜನ ಆದರ್ಶರಾದದ್ದು ನೋಡುತ್ತಾನೆ. ತನ್ನ ಸಾಹಿತ್ಯದಿಂದ ಪ್ರೇರಣೆ ಪಡೆದು ಉದ್ಧಾರವಾದುದನ್ನು ಕಾಣುತ್ತಾನೆ. ಅದರಿಂದ ಅಪಾರ ಜನಮನ್ನಣೆ ಸಿಕ್ಕುತ್ತದೆ. ಹೋದಲ್ಲಿ, ಬಂದಲ್ಲಿ ಜನ ಕೊಂಡಾಡುತ್ತಾರೆ. ಆದರೆ ಸ್ವತಃ ಸಾಹಿತಿಗೆ ಅದರಿಂದ ಯಾವ ಪ್ರಯೋಜನವಿಲ್ಲ. ಇದ್ದ ಬಡತನ ನೀಗಲಿಲ್ಲ. ಬಡತನದ ಬೇಗೆಯಲ್ಲೇ ಕೊನೆಯುಸಿರೆಳೆದ. ಈ ಮೂರೂ ಕಥೆಗಳಲ್ಲಿ ಸಾಹಿತಿ-ಕಲಾವಿದರು ಜನರ ಉದ್ಧಾರಕ್ಕಾಗಿ ತಮ್ಮ ಕಲೆಯನ್ನು ಮೀಸಲಿಡುತ್ತ ವೈಯಕ್ತಿಕವಾಗಿ ತಾವು ಮಾತ್ರ ಜಗತ್ತಿನ ದುಃಖ, ನೋವನ್ನು ಪಡೆದು ಅನುಭವಿಸಿದರೂ, ಜಗತ್ತಿಗೆ ಕಲೆಯನ್ನು ನೀಡಿದ ಧನ್ಯತೆ ಅವರಿಗಿರುತ್ತದೆ.

'ರುದ್ರವೀಣೆ'(ಎಸ್.ಜಿ.ಬಿರಾದಾರ) ಇದೇ ಬಗೆಯ ಕಥೆಯಾದರೂ ಭಿನ್ನವಾಗಿದೆ. ಮೇಲಿನ ಕಥೆಯಲ್ಲಿ ರಮ್ಯತೆ, ಭಾವುಕತೆ ತುಂಬಿದೆ. ಈ ಕತೆಯಲ್ಲಿ ವಾಸ್ತವತೆಯಿದೆ. ಉತ್ತರಕರ್ನಾಟಕದಲ್ಲಿ ಉನ್ನತವಾದ ಹಿಂದೂಸ್ಥಾನಿ ಸಂಗೀತ ಪರಂಪರೆ ಹೊಂದಿದ ಕಲಾವಿದರಿದ್ದಾರೆ. ವೃತ್ತಿರಂಗಭೂಮಿಯಲ್ಲಿ ಸೇವೆ ಮಾಡುವವರೂ ನಾಟಕ ಸಂಗೀತದ ಜ್ಞಾನವನ್ನು ಹೊಂದಿದ್ದಾರೆ. ಇಂಥ ಕಲಾವಿದರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಗುರುಸೇವೆ ಮಾಡಿಕೊಂಡು, ಗುರು ಕರುಣಿಸಿದಾಗ ಕಲಿತು ಸಾಧನೆಗೆ ತೊಡಗಿದವರು. 'ಗುರುವಿನ ಗುಲಾಮನಾಗುವವರೆಗೆ' ಎಂಬ ಮಾತನ್ನು ಪಾಲಿಸಿಕೊಂಡವರು. ಹೊಟ್ಟೆಪಾಡಿಗಾಗಿ ವೃತ್ತಿರಂಗಭೂಮಿ ಸೇರಿ, ತಮ್ಮ ಸಂಗೀತ ಮತ್ತು ಅಭಿನಯ ಕಲೆಯಿಂದ, ಕಲಾಸೇವೆ ಮತ್ತು ಅನ್ನಕ್ಕಾಗಿ ದುಡಿದವರ ಒಂದು ದೊಡ್ಡ ಪರಂಪರೆಯಿದೆ. ಇಂಥ ವಾಸ್ತವವನ್ನು ಬಿಂಬಿಸುವ ಈ ಕಥೆಯಲ್ಲಿ, ಮಾಧವನೆಂಬ ರುದ್ರವೀಣೆ ಕಲಾವಿದ ಗುರುರಾಯರಲ್ಲಿದ್ದು ಸುಮ್ಮನೆ ವರ್ಷಾನುಗಟ್ಟಲೆ ಸೇವೆ ಮಾಡುತ್ತಾನೆ. ಅವನ ನಿಷ್ಠೆಯನ್ನು ಕಂಡು ಗುರುವಾದ ಗುರುರಾಯ ರುದ್ರವೀಣೆ ನುಡಿಸುವುದನ್ನು ಕಲಿಸಿ, ಕಲಾವಿದನನ್ನಾಗಿ ಮಾಡಿ ಹರಸುತ್ತಾನೆ. ಮಾಧವ ಸಂಗೀತ, ಅಭಿನಯಗಳಲ್ಲಿ ಪಳಗಿ ಹೊಟ್ಟೆಪಾಡಿಗಾಗಿ ಅನೇಕ ನಾಟಕ ಕಂಪನಿಗಳಲ್ಲಿ ದುಡಿದು ಮಾಲಕರಿಗೆ ಹಣ, ಕೀರ್ತಿಯನ್ನು ತರುತ್ತಾನೆ. ಎಲ್ಲಾ ಮಾಲೀಕರೂ ಅವನ ಕಲೆಯನ್ನು ಉಪಯೋಗಿಸಿಕೊಂಡು ಶ್ರೀಮಂತರಾಗುತ್ತಾರೆ. ಮಾಧವನಿಗೆ ಅದು ಬೇಕಾಗಿರಲಿಲ್ಲ. ಕಲೆ ಮುಂದಾಗಿ ಹಣ-ಕೀರ್ತಿ ಹಿನ್ನೆಲೆಯಲ್ಲಿರಬೇಕೆಂದು ಬಯಸಿದವ. ಆದರೆ ಮಾಲೀಕರು ಮಾಧವನ ಎಲ್ಲ ಕಲೆಯನ್ನು ಅದರ ಹದ ಮೀರಿ ಬಳಸಿಕೊಳ್ಳುತ್ತಾರೆ. ಅದರಿಂದ ಬಿಡುಗಡೆಯಾಗಿ ಹೋಗಲು ಪ್ರಯತ್ನಿಸಿದಾಗ, ಒಂಟಿಯಾಗಿ ಏನೂ ಮಾಡಲಾಗದ ಬಿಕ್ಕಟ್ಟು ಎದುರಿಸಬೇಕಾಗುತ್ತದೆ. ಅವನಿಗೆ ತನ್ನ ಕಲೆಯ ಪ್ರದರ್ಶನಕ್ಕೆ ಒಂದು ವೇದಿಕೆ ಬೇಕಾಗುತ್ತದೆ. ಅದಕ್ಕಾಗಿ ಹೊಟ್ಟೆಯ ಪಾಡಿಗಾಗಿ ಉತ್ತರ ಕರ್ನಾಟಕದ ಅನೇಕ ನಾಟಕ ಕಂಪನಿಗಳಲ್ಲಿ ದುಡಿದು ಒಡೆಯರಿಂದ ಶೋಷಣೆಗೆ ಒಳಗಾಗುತ್ತಾನೆ. ಒಂದು ಸಲ ಮಾಲೀಕನಿಗೆ ತನ್ನ ಅಸಮಾಧಾನ ತೋರಿಸುತ್ತಾನೆ. ಮಾಲೀಕ ತನ್ನ ಅಹಂಕಾರ ತೋರಿಸಿ, ಮಾಧವನ ವೀಣೆಯನ್ನೇ ಮುರಿಯಲು ತಯಾರಾದಾಗ ಮಾಧವ ಅಲ್ಲಿಂದ ಹೊರಟು ಬರುತ್ತಾನೆ. ಕಲೆ ಮತ್ತು ಹಣ, ಕಲಾವಿದ ಮತ್ತು ಮಧ್ಯವರ್ತಿ ಈ ಎರಡರ ತಾತ್ವಿಕ ಸಂಘರ್ಷವನ್ನು ಈ ಕಥೆ ಹೇಳುತ್ತದೆ.

ಇದೇ ಆಶಯವನ್ನು ವಿಸ್ತರಿಸಿಕೊಂಡಿರುವ **'ನಾಟ್ಯರಾಣಿ'**(ಶಾಂತರಸ) ಕಥೆ, ಕಲೆ ಮತ್ತು ಅಸ್ತಿತ್ವದ ಪ್ರಶ್ನೆಯನ್ನು ಎತ್ತುತ್ತದೆ. ಸಾಮಾಜಿಕ ಸಂದರ್ಭದಲ್ಲಿ ಪುರುಷನಾದರೆ ಅವನ ಸ್ಥಾನಮಾನಗಳೇ ಬೇರೆಯಾಗಿರುತ್ತವೆ. ಒಂದು ಕಾಲದಲ್ಲಿ ನಾಟಕಗಳಲ್ಲಿ ಮಹಿಳೆಯರ ವೇಷಗಳನ್ನು ಪುರುಷರೆ ಹಾಕಿ ಅಭಿನಯಿಸುತ್ತಿದ್ದರು. ಇದು ಮಹಿಳೆಯ ಸ್ಥಾನಮಾನದ ಪ್ರಶ್ನೆಯನ್ನು ತೋರಿಸುತ್ತದೆ. ಒಂದು ವೇಳೆ ಮಹಿಳೆ ನಾಟಕಗಳಲ್ಲಿ ಅಭಿನಯಿಸಿದರೆ, ಅವಳ ಕಲೆಯನ್ನು ಪುರಸ್ಕರಿಸಿದಂತೆ, ಸಮಾಜದಲ್ಲಿ ಸಾಮಾಜಿಕವಾಗಿ ಅವಳನ್ನು ಪುರಸ್ಕರಿಸುವುದಿಲ್ಲ. ಅಂಥವರ ಬದುಕು ಅನೇಕ ಬಿಕ್ಕಟ್ಟುಗಳನ್ನು ಎದುರಿಸಬೇಕಾಗುತ್ತದೆ. ಈ ಕಥೆಯಲ್ಲಿ, ಕಲಾವಿದೆ ಸುಂದರಿ ತನ್ನ ಗಾಯನ, ಅಭಿನಯದಿಂದ ಕಲಾಪ್ರಪಂಚದಲ್ಲಿ ಉನ್ನತ ಸ್ಥಾನವನ್ನು ಗಳಿಸಿದ್ದಾಳೆ. ಆದರೆ ಸಾಮಾಜಿಕ ಸನ್ನಿವೇಶದಲ್ಲಿ ಅವಳ ಸ್ಥಾನಮಾನ ಎರಡನೆಯ ದರ್ಜೆಯದಾಗಿರುತ್ತದೆ. ಸಾಮಾಜಿಕ ಸನ್ನಿವೇಶದಲ್ಲಿಯೂ ಅವಳಿಗೊಂದು ಬದುಕಿರುತ್ತದೆ. ಆ ಬದುಕಿಗೆ ಅಸ್ತಿತ್ವ ಕಲ್ಪಿಸಿಕೊಳ್ಳಲು ಆ ಕಲಾವಿದೆ ನಿರಂತರವಾಗಿ ತಾತ್ವಿಕ ಸಂಘರ್ಷ ನಡೆಸಬೇಕಾಗುತ್ತದೆ. ಸುಂದರಿಯ ಗಾಯನ ಮತ್ತು ಅಭಿನಯ ರಸಿಕರಿಗೆ ಬೇಕು. ಜತೆಗೆ ಅವಳ ದೇಹವೂ ಬೇಕು. ಎರಡನೆಯದನ್ನು ಕಲಾವಿದೆ ನಿರಾಕರಿಸಿದರೆ ಪುರುಷ ಸಮಾಜ ಸುಮ್ಮನಿರುವುದಿಲ್ಲ. ಅವಳ ಕಲೆಯನ್ನು ಅನುಭವಿಸಿದಂತೆ, ಅವಳ ದೇಹವನ್ನೂ ಅನುಭವಿಸಲು ಪ್ರಯತ್ನಿಸಿತು. ಸಮಾಜ ಕೊನೆಗೂ ಅವಳ ಕಲೆಯನ್ನು ಸನ್ಮಾನಿಸಿದಂತೆ ಅವಳ ಬದುಕನ್ನು ಗೌರವಿಸುವ ಗುಣವನ್ನು ತೋರಿಸಲಿಲ್ಲ. ಸುಂದರಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲಾಗದೆ ಸತ್ತುಹೋಗುತ್ತಾಳೆ.

'ಕೆಸರಲ್ಲಿ ಕೆಸರಾಗಿ ಹೋದ ಕಮಲ'(ಚೆನ್ನಣ್ಣ ವಾಲೀಕಾರ) ಕಥೆ, ಇಂಥ ಪರಂಪರೆಗೆ ಸೇರಿದ ಕಲಾವಿದೆ ಒಬ್ಬಳನ್ನು ಪ್ರಗತಿಪರನಾದಂಥ ವ್ಯಕ್ತಿ ಅವಳಿಗೆ ಆಶ್ರಯ ನೀಡಲು ಪ್ರಯತ್ನಿಸುತ್ತಾನೆ. ಈ ಕಲಾವಿದರು 'ಉಳ್ಳವರ' ಸೂಳೆಯಾಗಿ ಬದುಕಬೇಕು. ಇಲ್ಲದಿದ್ದರೆ ಅವರಿಗೆ ಅಂಥ ಅಸ್ತಿತ್ವವೂ ಸಿಗುವುದಿಲ್ಲ. ಈ ಕಥೆಯಲ್ಲಿ ವಿಜ್ಜಮ್ಮನನ್ನು ಅವಳ ಬದುಕಿನ ಹಿನ್ನೆಲೆಯನ್ನು ಅರಿತ ಮಾಸ್ತಾರ ಅವಳನ್ನು ಮದುವೆಯಾಗಿ, ಅವಳ ಬದುಕಿಗೊಂದು ಅಸ್ತಿತ್ವ ನೀಡಬೇಕೆಂದು ಪ್ರಯತ್ನಿಸುತ್ತಾನೆ. ಆದರೆ ವಿಜ್ಜಮ್ಮನನ್ನು ಅವಳಿಂದಲೇ ಬದುಕುವ ಅವಳ ಮನೆಮಂದಿಯೇ ಬಿಡುವುದಿಲ್ಲ. 'ಉಳ್ಳವನ' ಸೂಳೆಯಾಗಿ ಇರಲು ಒತ್ತಾಯಿಸುತ್ತಾರೆ. ಜೊತೆಗೆ ವಿಜ್ಜಮ್ಮನನ್ನು ಇಟ್ಟುಕೊಂಡ ವೀರನಗೌಡ ಎಂಬ ಫ್ಯೂಡಲ್ ದೊರೆ ಅವಳನ್ನು ಬಿಡುವುದಿಲ್ಲ. ಅವಳ ಬಾಳಿಗೆ ಬೆಳಕು ನೀಡಲು ಪ್ರಯತ್ನಿಸಿದ ಮಾಸ್ತಾರ ಜೀವಭಯವನ್ನು ಎದುರಿಸಬೇಕಾಗಿ ಬರುತ್ತದೆ.

ಈ ಕಥೆಗಳ ವ್ಯತ್ಯಾಸವೆಂದರೆ, ಅಂಥ ಕಲಾವಿದೆಯನ್ನು ಪುರುಷ ಸಮಾಜ ನೋಡುವ ಬಗೆಯನ್ನು ಮತ್ತು ಅವಳ ಸ್ಥಿತಿಯನ್ನು ಮಾತ್ರ **'ನಾಟ್ಯರಾಣಿ'** ತೋರಿಸುತ್ತದೆ. ಇನ್ನೊಂದು ಅಂಥ ಮಹಿಳೆಗೆ ಅಸ್ತಿತ್ವ ಕೊಡಲು ಪ್ರಯತ್ನಿಸುತ್ತದೆ.

ಕಲಾವಿದರು ಈ ಸಮಾಜದಲ್ಲಿ ವಿಶಿಷ್ಟ ವ್ಯಕ್ತಿತ್ವವುಳ್ಳವರು. ಅವರ ನೋವು ಸಂಕಟಗಳು ಉಳಿದ ಜನರ ನೋವು ಸಂಕಟಗಳಿಗಿಂತ ಭಿನ್ನ ಎಂಬ ನಿಲುವಿನ ಇಂಥ ಕಥೆಗಳನ್ನು ಬರೆಯುವಲ್ಲಿ ಹೈದರಾಬಾದ್ ಕರ್ನಾಟಕದ ಲೇಖಕರು ಸಾಮಾಜಿಕ ಜವಾಬ್ದಾರಿ ಕುರಿತಂತೆ, ಪ್ರಗತಿಶೀಲ ಚಳುವಳಿಯ ಭಾವುಕ ನಿಲುವುಗಳಿಂದ ಪ್ರೇರಣೆ ಪಡೆದಿರಬೇಕು. ಆದರೆ ಮುಂದೆ ಅವರು ಬರೆದ ಕತೆಗಳ ನಾಯಕರು ವಿಶಿಷ್ಟ ವ್ಯಕ್ತಿತ್ವವುಳ್ಳವರಾಗದೆ, ಸಾಮಾನ್ಯರೇ ಆಗುತ್ತಾ ಹೋಗುವಂತೆ ಕಥೆಗಾರಿಕೆಯಲ್ಲಿ ಬದಲಾವಣೆಯಾಯಿತು.

ದೇಶ-ಪ್ರಾಂತ್ಯ ವಿಭಜನೆಗಳ ಸಂದರ್ಭದಲ್ಲಿ ಜನ ಸಾಮಾನ್ಯರ ತಲ್ಲಣಗಳು

ಇಪ್ಪತ್ತನೆಯ ಶತಮಾನದಲ್ಲಿ ಜಾಗತಿಕ ಮಟ್ಟದಲ್ಲಿ ಎರಡು ಮಹಾಯುದ್ಧಗಳು ಸಂಭವಿಸಿ, ಜನ ಸಮುದಾಯಗಳು ಕಂಡರಿಯದ ನೋವು-ಸಾವಿಗೆ ತಲ್ಲಣಿಸಿ ಹೋದವು. ಇದರಿಂದ ಉಂಟಾದ ಪರಿಣಾಮಗಳು ತಲೆಮಾರಿನಿಂದ ತಲೆಮಾರಿಗೆ ಶಾಪವಾಗಿ ಅಂಟಿಕೊಂಡವು. ಆದರೂ ದೇಶಗಳು ಪಾಠ ಕಲಿಯಲಿಲ್ಲ. ಯುದ್ಧಗಳು ಸಂಭವಿಸುತ್ತಲೇ ಹೋದವು. ಈ ಯುದ್ಧದಷ್ಟೇ ಅನರ್ಥಕಾರಿಯಾದದ್ದು ದೇಶ ವಿಭಜನೆಯ ಕೆಲಸ. ಜಾತಿ, ಮತ, ಧರ್ಮ, ಭಾಷೆ, ನಾಡು ಮುಂತಾದ ಹೆಸರುಗಳಲ್ಲಿ ಅಂಧವಾಗಿ ವರ್ತಿಸುವ ರಾಜಕೀಯದಿಂದ ಗಲಭೆ ಉಂಟಾಗಿ ದೇಶವೇ ನಿಟ್ಟುಸಿರು ಬಿಡುವಂತಾಗುತ್ತದೆ. ಜನಸಮುದಾಯಗಳು ಅನೇಕ ಬಿಕ್ಕಟ್ಟುಗಳನ್ನು ಎದುರಿಸುವಂತಾಗುತ್ತದೆ. ಮನೆ,ಮಠ, ಆಸ್ತಿ ಹಾನಿಗೊಳಗಾಗುತ್ತವೆ. ನಿಂತ ನೆಲವೇ ಅಪರಿಚಿತವಾಗುತ್ತದೆ. ಕುಟುಂಬಗಳು ಅಸ್ತವ್ಯಸ್ತವಾಗಿ ಹೋಗುತ್ತವೆ. ಸಮಯಸಾಧಕರ ಕ್ರೌರ್ಯದಿಂದ ಜನ ತತ್ತರಿಸಿ ಹೋಗುತ್ತಾರೆ. ಇಂಥ ಸಂದರ್ಭದ ತಲ್ಲಣಗಳನ್ನು ಹೇಳುವ ಕಥೆಗಳು ಕೆಲವಿವೆ. ಒರೆಗಲ್ಲು(ದೇವೇಂದ್ರ ಕುಮಾರ ಹಕಾರಿ), ನಿರಾಶ್ರಿತೆ(ಶಿವಲೆಂಕ), ಟೊಳ್ಳು ಬುರುಜು(ಸರಿತಾ ಕುಸುಮಾಕರ), ಮುಂದೇನು ಮತ್ತು ಜಾನ್ ಷಣ್ಮುಗನ್ (ಜಯತೀರ್ಥ ರಾಜಪುರೋಹಿತ) ಮುಂತಾದ ಕಥೆಗಳಲ್ಲಿ ಇಂಥ ಹೊತ್ತಿನಲ್ಲಿ ಸಂಭವಿಸಿದ ಘಟನೆಗಳ ಚಿತ್ರಣವಿದೆ. **'ಒರೆಗಲ್ಲು'** ಕಥೆಯಲ್ಲಿ ಭಾರತ ಪಾಕಿಸ್ತಾನ ಇಬ್ಭಾಗವಾದಾಗ, ದೇಶದಲ್ಲಿ ನಡೆದ ಮತೀಯ ಗಲಭೆಗೆ ಹಿಂದೂ ಕುಟುಂಬವೊಂದು ಕಠಿಣವಾದ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ. ಸಮಯ ಸಾಧಕರ ಕ್ರೌರ್ಯಕ್ಕೆ ಮನೆಯ ಸದಸ್ಯರೆಲ್ಲ ಬಲಿಯಾಗಿ ಕಮಲೆ ಮಾತ್ರ ಉಳಿಯುತ್ತಾಳೆ. ಅವಳಿಗೆ ಮಹಮೂದ ಎಂಬ ವ್ಯಕ್ತಿ ಬೆನ್ನು ಬೀಳುತ್ತಾನೆ. ಅವನಿಂದ ಪಾರಾಗಲು ಹುಸೇನಬೀ ಸಹಾಯದಿಂದ, ತನ್ನ ಗಂಡ, ಅತ್ತೆ, ಮಾವರನ್ನು ಕಳೆದುಕೊಂಡು, ಮನೆ-

ಆಸ್ತಿಯನ್ನು, ತನ್ನ ಪ್ರೀತಿಯ ಲಾಹೋರ್ ಅನ್ನು ಬಿಟ್ಟು ಭಾರತಕ್ಕೆ ಬಂದು ನೆಲೆಸುತ್ತಾಳೆ. ಹಿಂದೂ ಕುಟುಂಬವೊಂದರಲ್ಲಿ ಆಶ್ರಯಪಡೆದು, ಉಪಜೀವನಕ್ಕೆ ಅನ್ಯರ ಮನೆಯಲ್ಲಿ ಕೆಲಸಕ್ಕೆ ನಿಲ್ಲುತ್ತಾಳೆ. ಮನೆಯ ಒಡೆಯನ ಕಣ್ಣು ಕಮಲೆಯ ಮೇಲೆ ಬಿದ್ದು ಅವನಿಂದ ಅತ್ಯಾಚಾರಕ್ಕೆ ಒಳಗಾಗುವ ಸಂದರ್ಭ ಬಂದರೂ ಪಾರಾಗುತ್ತಾಳೆ. 'ನಿರಾಶ್ರಿತೆ' ಕಥೆಯಲ್ಲಿಯೂ ನವಖಾಲಿ ಊರಲ್ಲಿ ಜಾತಿಗಲಭೆಗೆ ಸಿಕ್ಕ ಹಿಂದೂಗಳು ಭಾರತಕ್ಕೆ ಬಂದು ನೆಲೆ ಪಡೆಯುತ್ತಿದ್ದರು. ಕುಟುಂಬ ಒಂದರಿಂದ ತಪ್ಪಿಸಿಕೊಂಡ ಶೀಲ ಎಂಬ ಮಹಿಳೆ ಅನಿವಾರ್ಯವಾಗಿ ಜೋಶಿ ಎಂಬುವವನ ಮನೆಯಲ್ಲಿ ಕೆಲಸಕ್ಕೆ ನಿಂತು ನೆಲೆ ಪಡೆಯುತ್ತಾಳೆ. ಆದರೆ ಜೋಶಿಯಿಂದಲೇ ಅತ್ಯಾಚಾರಕ್ಕೆ ಬಲಿಯಾಗಿ ಸಾಯುತ್ತಾಳೆ. ಎಲ್ಲಿ ತಮ್ಮ ಮಾನರಕ್ಷಣೆಗೆ ಕುತ್ತು ಬಂದಿತ್ತೋ, ಅಲ್ಲಿಂದ ತಪ್ಪಿಸಿಕೊಂಡು ಬಂದು ಮಾನ ರಕ್ಷಣೆ ಮಾಡಿಕೊಂಡಿದ್ದರು. ಆದರೆ ರಕ್ಷಣೆ ನೀಡುವವರಿಂದಲೇ ಮಾನಾಪಹರಣಕ್ಕೆ ಒಳಗಾಗುವ ದುರಂತವನ್ನು ಈ ಕತೆಗಳು ಬಿಂಬಿಸಿವೆ. 'ಟೊಳ್ಳು ಬುರುಜು' ಕಥೆಯಲ್ಲಿ ಇನ್ನೊಂದು ಮುಖವಿದೆ. ದಿಲ್ಲಿಯ ಟಾಂಗಾವಾಲ ರಾಮಸಿಂಗನಿಗೆ ತನ್ನ ಮನೆ-ಮಕ್ಕಳಿಂದ ಸಂಸಾರ ನಿಭಾಯಿಸುವುದು ಅಸಾಧ್ಯವಾಗಿರುತ್ತದೆ. ಹೇಗೆ ದುಡಿದರೂ ಟಾಂಗಾ ದಂಧೆಯಿಂದ ಎಲ್ಲರ ಹೊಟ್ಟೆ ತುಂಬುತ್ತಿರಲಿಲ್ಲ. ಅವನಿಗೆ ಒಂದು ಸಮಯದಲ್ಲಿ ಮುಸ್ಲಿಂ ಅಧಿಕಾರಿ ಸಿಗುತ್ತಾನೆ. ರಾಮಸಿಂಗನ ಪ್ರಾಮಾಣಿಕ ವ್ಯಕ್ತಿತ್ವ ಕಂಡು ನೌಕರಿ ಕೊಡಲು ನಿರ್ಧರಿಸುತ್ತಾನೆ. ಇನ್ನೇನು ನೌಕರಿ ಸಿಕ್ಕು ಸಂಸಾರ ಸುಧಾರಿಸುತ್ತದೆ ಎನ್ನುವ ಹೊತ್ತಿನಲ್ಲಿ ದೇಶ ವಿಭಜನೆಯಾಗುತ್ತದೆ. ಮತೀಯ ಗಲಭೆಗಳು ನಡೆದು ರಾಮಸಿಂಗನ ಅಧಿಕಾರಿ ಗೋರಾಸಾಬರು ಡೆಲ್ಲಿ ತೊರೆದು ಪಾಕಿಸ್ತಾನಕ್ಕೆ ಹೋಗಿಬಿಡುತ್ತಾರೆ. ರಾಮಸಿಂಗನ ನೌಕರಿಯೂ ತಪ್ಪಿ ಹೋಗುತ್ತದೆ.

ಜಾತಿ ಗಲಭೆಗೆ ಸಿಕ್ಕ ಕುಟುಂಬವೊಂದರ ದುರಂತ 'ಮುಂದೇನು' ಎಂಬ ಕಥೆಯಲ್ಲಿದೆ. ಬಂಗಾಲ ಪ್ರಾಂತ್ಯದ ರಾಜಶಾಹಿ ಎಂಬ ಹಳ್ಳಿಯು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಪೂರ್ವ ಪಾಕಿಸ್ತಾನಕ್ಕೆ ಸೇರುತ್ತದೆ. ಇದರಿಂದ ತಲೆದೋರಿದ ಬಿಕ್ಕಟ್ಟುಗಳು ನೆಹರೂ-ಲಿಯಾಕತ್ ಒಪ್ಪಂದದಿಂದ ಕಡಿಮೆಯಾಗಿ ವಾತಾವರಣ ಸುಧಾರಿಸುತ್ತದೆ. ಮುಂದೆ ಕಾಶ್ಮೀರದಲ್ಲಿ ಪಾಕಿಸ್ತಾನಿ ಹಸ್ತಕರ ಹಿಂಸಾಕೃತ್ಯಗಳಿಂದ ಸಾಮಾನ್ಯ ಜನ ಬಲಿಯಾಗಬೇಕಾಗುತ್ತದೆ. ರಾಜಶಾಹೀ ಗ್ರಾಮದ ಕಾಲೀಚರಣನು ತನ್ನ ಮಗಳು ಮತ್ತು ಅಳಿಯನೊಂದಿಗೆ ದುಡಿದು ಬದುಕುವ ವ್ಯಕ್ತಿ. ಭಯೋತ್ಪಾದಕರ ಕೃತ್ಯಕ್ಕೆ ಅಳಿಯ ಬಲಿಯಾದಾಗ, ತಂದೆ ಮಗಳನ್ನು ಕರೆದುಕೊಂಡು ಭಾರತದ ಕಡೆ ಬರುತ್ತಾನೆ. ಸರಕಾರದ ನೆರವಿನಿಂದ ನಿರಾಶ್ರಿತರ ಪುನರ್ವಸತಿಯಲ್ಲಿ ಆಶ್ರಯಪಡೆದು ಪುನಃ ನೆಮ್ಮದಿಯ ಬದುಕನ್ನು ಕಂಡಂತಾದರೂ ಮಗಳ ಭವಿಷ್ಯದ ಬಗೆಗಿನ ಕೊರಗಲ್ಲೇ ಸಾಯುತ್ತಾನೆ. ವಿಧವೆಯಾದ ಮಗಳು ತಂದೆ ಸತ್ತ ನಂತರ ಯುವಕನೊಬ್ಬನನ್ನು ಕೂಡಲು ಪ್ರಯತ್ನಿಸುತ್ತಾಳೆ.

ಇಂಥದೇ ಸಮಸ್ಯೆಯ ಇನ್ನೊಂದು ಕಥೆ 'ಜಾನ್ ಷಣ್ಮುಗನ್'. ಮದ್ರಾಸ್ ಪ್ರಾಂತ್ಯದಿಂದ ಪೆರಿಯಾಸ್ವಾಮಿ ತನ್ನ ಕುಟುಂಬದೊಂದಿಗೆ ಬರ್ಮಾಕ್ಕೆ ವಲಸೆ ಹೋಗುವನು. ಅಲ್ಲಿ ಆಂಗ್ಲ ಕಲೆಕ್ಟರರ ಸ್ಫೂರ್ತಿಯಿಂದ ಕ್ರಿಶ್ಚಿಯನ್ ಮತಕ್ಕೆ ಸೇರಿ, ಬರ್ಮಾದಲ್ಲಿ ಭಾರತೀಯ ವಲಸೆಗಾರರನ್ನು ಮತಾಂತರಗೊಳಿಸಿ 'ತುಚ್ಛ' ಹಿಂದೂ ಧರ್ಮದಿಂದ ಮುಕ್ತಗೊಳಿಸಲಾರಂಭಿಸುತ್ತಾನೆ. ಆದರೆ ಅವನ ಮಗ ರತ್ನಸ್ವಾಮಿಗೆ ತಂದೆಯ ಕಾರ್ಯ ಹಿಡಿಸುತ್ತಿರಲಿಲ್ಲ. ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಬರ್ಮಾ ಜಪಾನಿಯರ ವಶಕ್ಕೆ ಸೇರಿತು. ಬ್ರಿಟಿಷರನ್ನು ಓಡಿಸಲು ಸಿದ್ಧತೆಯಲ್ಲಿದ್ದ ಆಜಾದ್ ಹಿಂದ್ ಸೇನೆಯನ್ನು ರತ್ನಸ್ವಾಮಿ ಸೇರಿದಾಗ ಅವನ ತಂದೆ ತನ್ನ ಅನ್ನದಾತರಾದ ಬ್ರಿಟಿಷರ ಪರವಾಗಿದ್ದರಿಂದ ಮನೆಯಲ್ಲಿ ತಾತ್ವಿಕ ಘರ್ಷಣೆ ಉಂಟಾಯಿತು. ಕದನದಲ್ಲಿ ಮಗ ಸತ್ತ. ಬ್ರಿಟಿಷರು ಮರಳಿ ನಡೆದರು. ಬರ್ಮಾಕ್ಕೂ ಸ್ವಾತಂತ್ರ್ಯ ಬಂತು. ಇವು ಪೆರಿಯಾಸ್ವಾಮಿಗೆ ಪ್ರತಿಕೂಲವಾಗಿ ಪರಿಣಮಿಸಿದ್ದರಿಂದ ಚಿಂತೆಯಲ್ಲಿ ಸಾಯುತ್ತಾನೆ. ಈ ಕುಟುಂಬದ ಉಳಿದ ಒಂದು ಕುಡಿ ರತ್ನಸ್ವಾಮಿಯ ಮಗ ಜಾನ್ ಷಣ್ಮುಗನು ಪಿನ್ ಎಂಬ

ಬರ್ಮಾದ ಹುಡುಗಿಯನ್ನು ಪ್ರೀತಿಸುತ್ತಿದ್ದ. ಆದರೆ ವಲಸೆ ಬಂದ ಭಾರತೀಯರನ್ನು ಬರ್ಮಾ ಸರಕಾರ ಹೊರಹಾಕಲು ತೀರ್ಮಾನಿಸಿತು. ಷಿನ್‌ಳನ್ನು ಬಿಟ್ಟು ಜಾನ್ ಹೋಗಬೇಕಾಯಿತು. ಅವಳನ್ನು ಕರೆದರೂ, ಅವಳು ಬರ್ಮಾ ಬಿಟ್ಟು ಹೋಗಲು ನಿರಾಕರಿಸುತ್ತಾಳೆ. ಅಲ್ಲಿಂದ ಜಾನ್ ತಮಿಳುನಾಡಿಗೆ ಬರುತ್ತಾನೆ. ವಲಸೆ ಹೋದವರನ್ನು ಪುನಃ ನಾಡಿನೊಳಗೆ ಕರೆದುಕೊಳ್ಳುವುದಿಲ್ಲ. ಆಗ ಜಾನ್ ಕರ್ನಾಟಕದಲ್ಲಿ ಬಂದಿರಬೇಕಾಯಿತು. ಇಂಥ ವಲಸೆಗಾರರಿಗೆ ಪುನರ್ ವಸತಿ ಮತ್ತು ಉದ್ಯೋಗವನ್ನು ಕಲ್ಪಿಸಲಾಯಿತು. ವಾಸ್ತವದ ಸಂಗತಿಯೆಂದರೆ ಅದೇ ಸಮಯದಲ್ಲಿ ಪ್ರಾರಂಭವಾಗಿದ್ದ ತುಂಗಭದ್ರಾ ಆಣೆಕಟ್ಟು ಯೋಜನೆಗೆ ಈ ವಲಸೆಯನ್ನು ಬಳಸಿಕೊಳ್ಳಲಾಯಿತು. ಅಂದು ತುಂಗಭದ್ರಾ ಆಣೆಕಟ್ಟು ಯೋಜನೆಯಲ್ಲಿ ದುಡಿಯಲು ನಿಂತ ಈ ವಲಸಿಗರ ಕುಟುಂಬಗಳು ಅಲ್ಲೇ ನೆಲೆಯೂರಿ ನಿಂತವು. ಕಾಲಿಚರಣ್ ಮತ್ತು ಜಾನ್ ಷಣ್ಮುಗನ್ ಇಬ್ಬರೂ ಕರ್ನಾಟಕಕ್ಕೆ ಬಂದು ನೆಲೆಯೂರುತ್ತಾರೆ. ಭಾರತದ ನೆರೆರಾಜ್ಯಗಳು ಇಂಥ ವಲಸಿಗರನ್ನು ಸಹನೆಯಿಂದ ನೋಡಲಿಲ್ಲವೆಂದು ಅದರಲ್ಲೂ ಜಾನ್ ತನ್ನ ತಮಿಳುನಾಡಿಗೆ ಹೋದರೂ ಈ ಹಿಂದೆ ವಲಸೆ ಹೋದವನೆಂದು ಹೊರಹಾಕುತ್ತದೆ. ರೈಲ್ವೇ ಸ್ಟೇಷನ್‌ನಲ್ಲಿ ಹಿಂದಿ ಕಾರ್ಯಕ್ರಮ ಬರುತ್ತಿದ್ದ ರೇಡಿಯೋವನ್ನು ಬಂದ್ ಮಾಡಿಸಲಾಗುತ್ತದೆ. ಕರ್ನಾಟಕದ ಔದಾರ್ಯ ಮತ್ತು ಸಹಬಾಳ್ವೆಯ ವಾಸ್ತವ ಸಂಗತಿಯನ್ನು ತೋರಿಸಲು ಈ ಕತೆಗಳಲ್ಲಿ ಜಯತೀರ್ಥ ರಾಜಪುರೋಹಿತರು ಪ್ರಯತ್ನಿಸಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ರಾಜಕೀಯ ಕಾರಣಗಳಿಂದ ನಡೆದ ಯುದ್ಧಗಳು, ದೇಶ, ಪ್ರಾಂತ್ಯ ವಿಭಜನೆಗಳು, ಮತಾಂತರಗಳು ಮುಂತಾದ ಅನೇಕ ಘಟನೆಗಳಿಂದ ಜನಸಮುದಾಯಗಳು ಸಾವು ನೋವಿನ ಬಿಕ್ಕಟ್ಟುಗಳನ್ನು ಎದುರಿಸಿವೆ. ಜಾತಿಗಾಗಿ, ಧರ್ಮಕ್ಕಾಗಿ, ಭಾಷೆಗಾಗಿ, ದೇಶಕ್ಕಾಗಿ ಅನೇಕ ಗಲಭೆಗಳು ನಡೆದು ಕುಟುಂಬಗಳು ಅಸ್ತವ್ಯಸ್ತಗೊಂಡಿವೆ. ಈ ಬಗೆಯ ಮತೀಯ ಗಲಭೆಗಳ ಹಿಂದೆ ರಾಜಕೀಯ ಹಿತಾಸಕ್ತಿಯ ಕೈವಾಡ ಇತ್ತು. ಆದರೆ ಈ ಮತೀಯ ಗಲಭೆಗಳಿಗೆ ಸಿಕ್ಕು ಅತಂತ್ರರಾಗಿ ನೋವು ಸಾವಿಗೆ ಗುರಿಯಾಗುವವರು ಎಲ್ಲ ಜಾತಿಗಳಿಗೆ ಸೇರಿದವರಾಗಿರುತ್ತಾರೆ. ಇಂಥ ಸಂದರ್ಭದಲ್ಲಿ ಜನಸಮುದಾಯಗಳ ತಲ್ಲಣ ಮತ್ತು ಅವಸ್ಥೆಗಳು ಈ ಪ್ರದೇಶದ ಕಥೆಗಾರರನ್ನು ಕಾಡಿದವು. ಯಾಕೆಂದರೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯವೇ ಇಂಥ ಬಿಕ್ಕಟ್ಟುಗಳಿಗೆ ಸಿಕ್ಕು ತತ್ತರಿಸುತ್ತಿತ್ತು. ಇಲ್ಲಿ ಅನುಭವಿಸಿದ ನೋವು ಕೂಡ ಇಂಥ ಕತೆಗಳ ಸೃಷ್ಟಿಗೆ ಕಾರಣವಾಯಿತು.

ರಜಾಕಾರರ ದಾಳಿ ಮತ್ತು ಜನಸಮುದಾಯಗಳು

೧೯೪೭ರಲ್ಲಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದು, ಬ್ರಿಟಿಷರ ಸಹಮತದೊಂದಿಗೆ ಸ್ವತಂತ್ರವಾಗಿದ್ದ ಅನೇಕ ಸಂಸ್ಥಾನಗಳೂ ಸ್ವತಂತ್ರ ಭಾರತದಲ್ಲಿ ಸೇರಿಕೊಂಡವು. ಆದರೆ 'ಹೈದರಾಬಾದ್ ಸಂಸ್ಥಾನ'ವನ್ನು ಆಳುತ್ತಿದ್ದ ನಿಜಾಮ ಇದಕ್ಕೆ ಸಮ್ಮತಿಸದೆ ಸ್ವತಂತ್ರವಾಗಿಯೇ ಮುಂದುವರಿಯಲು ದೃಢ ನಿಲುವು ತಾಳಿದ. ಸಂಸ್ಥಾನದ ಪ್ರಜೆಗಳು ನಿಜಾಮನ ಆಳ್ವಿಕೆಯನ್ನು ಒಪ್ಪಲಿಲ್ಲ. ವಿಮೋಚನಾ ಹೋರಾಟ ಸುರುವಾಯಿತು. ನಿಜಾಮನ ಆಳ್ವಿಕೆಯನ್ನು ಸ್ಥಿರಗೊಳಿಸಲು ಬೆಂಬಲವಿತ್ತ ಅನೇಕ ಸಂಘಸಂಸ್ಥೆಗಳು ಹೈದಾರಾಬಾದನಲ್ಲಿ ಹುಟ್ಟಿಕೊಂಡು, ಸಂಸ್ಥಾನದಲ್ಲೂ ವಿಸ್ತರಿಸಿದವು. 'ಹೈದರಾಬಾದ್ ಸಂಸ್ಥಾನ' ಸ್ವತಂತ್ರವಾಗಿರಬೇಕು ಅದನ್ನು ನಿಜಾಮ ಪ್ರಭು ಆಳಬೇಕು ಎಂಬ ನಿಲುವು ಈ ಸಂಘಸಂಸ್ಥೆಗಳದಾಗಿತ್ತು. ಕಾಶಿಂರಜ್ವಿ ಎಂಬ ವ್ಯಕ್ತಿ ನಿಜಾಮನ ಬೆಂಬಲದೊಂದಿಗೆ 'ರಜಾಕಾರರ' ಒಂದು ಪಡೆಯನ್ನೇ ಕಟ್ಟಿದ. ಎಲ್ಲ ಸಂಘ-ಸಂಸ್ಥೆಗಳ ಶಕ್ತಿಯನ್ನು ಬಳಸಿಕೊಂಡು. ವಿಮೋಚನೆಗಾಗಿ ಹೋರಾಡುವವರ ಮೇಲೆ ದಾಳಿ ನಡೆಸಿದ. ಸ್ಥಳೀಯ ಮುಸ್ಲಿಮರಲ್ಲಿ ಮತೀಯ ಭಾವನೆಯನ್ನು ಹೆಚ್ಚಿಸಿದ. ರಾಜಕೀಯ ಬೆಂಬಲದಿಂದ ಮತಾಂತರಕ್ಕೆ ಪ್ರಚೋದಿಸಿದ. ವಿಮೋಚನೆಗಾಗಿ ಹೋರಾಡಲು ನಿಂತವರಿಗೆ ಹಿಂಸಿಸತೊಡಗಿದ. ಇದರಿಂದ ಸಂಸ್ಥಾನದ ಪ್ರಜೆಗಳು ಹೋರಾಟವನ್ನು ಗಂಭೀರವಾಗಿ ಪರಿಗಣಿಸಿ ತೀವ್ರಗೊಳಿಸಿದರು. ರಜಾಕಾರರೂ ಇಡೀ ಸಂಸ್ಥಾನದ ತುಂಬ

ಹಬ್ಬಿ ಜನರ ಮೇಲೆ ದೌರ್ಜನ್ಯ ನಡೆಸಿದರು. ಇದರಲ್ಲಿ ಪಠಾಣರು ಸೇರಿದರು. ಮತೀಯ ಶಕ್ತಿಗಳು, ಸಮಯಸಾಧಕರು ಸೇರಿಕೊಂಡು ಹಳ್ಳಿಹಳ್ಳಿಗಳಲ್ಲಿ ಅಮಾಯಕರ ಮೇಲೆ ದಾಳಿ ನಡೆಸಿದರು. ದರೋಡೆ, ಹೆಂಗಸರ ಅತ್ಯಾಚಾರ, ಕೊಲೆಗಳು ನಿತ್ಯ ಸಾಮಾನ್ಯ ಎನಿಸಿದವು. ಅನೇಕರು ತಲೆ ತಪ್ಪಿಸಿಕೊಂಡು ನೆರೆ ರಾಜ್ಯಗಳಿಗೆ ಹೋಗತೊಡಗಿದರು. ಜನರಿಗೆ ಬದುಕು ಜೀವನ್ಮರಣದ ಪ್ರಶ್ನೆಯಾಗಿ, ಸಾಮೂಹಿಕ ಹೋರಾಟಕ್ಕೆ ನಿಂತರು. ಈ ಪ್ರದೇಶದ ತುಂಬ ಕದನಗಳು ನಡೆದವು. ಇಂಥ ಪರಿಸ್ಥಿತಿಯನ್ನು ಅರಿತು ಸ್ವತಂತ್ರ ಭಾರತದ ಸರಕಾರ ಈ ಸಂಸ್ಥಾನದ ಬಿಕ್ಕಟ್ಟನ್ನು ಪರಿಹರಿಸಲು ಸೈನ್ಯವನ್ನು ಕಳಿಸಿತು. ಈ ಸೈನ್ಯ ದಾಳಿಕೋರರನ್ನು ಬಗ್ಗುಬಡಿದು ಸಂಸ್ಥಾನದಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸಿತು. ಇದು ತನ್ನ ಸ್ವರೂಪದಲ್ಲಿ 'ಹಿಂದೂ-ಮುಸ್ಲಿಂ' ಹೋರಾಟ ಎಂಬುದು ನಿಜವಾದರೂ, ಇದರ ಒಳಗೆ ಅನೇಕ ಶಕ್ತಿಗಳು ಸೇರಿದ್ದವು. ಎರಡೂ ಸಮುದಾಯಗಳು ನೋವು-ಸಾವನ್ನು ಅನುಭವಿಸಿದವು. ೧೯೪೮ರ ಸೆಪ್ಟೆಂಬರ್, ೧೭ರವರೆಗೆ ನಡೆದ ಈ ಗಲಭೆಯಿಂದ ಹೈದರಾಬಾದ್ ಕರ್ನಾಟಕ ತಲ್ಲಣಿಸಿ ಹೋಗಿತ್ತು.

ಐವತ್ತು ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ನಡೆದ ರಜಾಕಾರರ ದಾಳಿ, ಅದರ ದೌರ್ಜನ್ಯಕ್ಕೆ ಸಿಕ್ಕು ಹಿಂಸೆಯನ್ನು ಅನುಭವಿಸದ ಹಳ್ಳಿಗಳಿಲ್ಲ. ಇಂದಿಗೂ ಈ ಸಂದರ್ಭದಲ್ಲಿ ಸಂಭವಿಸಿದ ಸಾವು-ನೋವುಗಳನ್ನು ಕುರಿತು ಜನ ನೆನಪಿಸಿಕೊಳ್ಳುತ್ತಾರೆ. ತಮ್ಮ ತಮ್ಮ ಹಳ್ಳಿಗಳಲ್ಲಿ ನಡೆದ ಘಟನೆಗಳನ್ನು ಪುರಾಣ ಕಾಲದ ಕಥೆಗಳಂತೆ ಹೇಳುತ್ತಾರೆ. ಈ ಭಾಗದ ಅನೇಕ ಸಾಹಿತಿಗಳೂ ಈ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಕುತೂಹಲದ ವಿಷಯವೆಂದರೆ ಇಂಥ ಚಾರಿತ್ರಿಕ ಸನ್ನಿವೇಶವನ್ನು ಕುರಿತು ಗಂಭೀರವಾಗಿ ಬರೆಯಲಾಗದಿರುವುದು. ಭೀಷ್ಮ ಸಹಾನಿಯವರ **'ತಮಸ್'** ಕಾದಂಬರಿಯನ್ನು ನೆನೆಯಬಹುದು. ಒಂದು ನಾಡಿನ ಜನಸಮುದಾಯಗಳನ್ನು ಕಲಕಿದಂಥ ಘಟನೆಗಳನ್ನು ಕುರಿತು **'ಮಾಡಿ ಮಡಿದವರು,' 'ಚಿರಸ್ಮರಣೆ,'** ಮುಂತಾದ ಕಾದಂಬರಿಗಳು ಕನ್ನಡದಲ್ಲೂ ಬಂದಿವೆ. ಆದರೂ ಹೈದರಾಬಾದ್ ಕರ್ನಾಟಕದ ಅನೇಕ ಲೇಖಕರು ರಜಾಕಾರ ದಂಗೆ ಕುರಿತು ಬರೆಯಲು ಪ್ರಯತ್ನಿಸಿದ್ದಾರೆ. ಇಂಥ ಚಾರಿತ್ರಿಕ ಸನ್ನಿವೇಶವನ್ನು ಕುರಿತು ತಕ್ಕಮಟ್ಟಿಗೆ ಶಿವಲೆಂಕ, ಶಾಂತರಸ, ರಾಜಪುರೋಹಿತ ಮುಂತಾದವರು ಪ್ರಯತ್ನಿಸಿದ್ದಾರೆ. ರಜಾಕಾರರ ದಾಳಿಯನ್ನೇ ಕೇಂದ್ರವಾಗಿಟ್ಟುಕೊಂಡು ಹಳೇ ಮೈಸೂರು ಪ್ರಾಂತ್ಯದ ಮಾಸ್ತಿ **'ಸುಶೀಲಾ, ರಜಾಕಾರ್'** ಎಂಬ ಕಥೆಯನ್ನು, ಲಂಕೇಶ್ **'ದಾಳಿ'** ಎಂಬ ಕಥೆಯನ್ನು ಬರೆದಿರುವುದು ಕುತೂಹಲ ಎನಿಸುತ್ತದೆ. ಇವರೆಲ್ಲರ ಕಥೆಗಳು ಈ ಚಾರಿತ್ರಿಕ ಸಂದರ್ಭವನ್ನು ಗ್ರಹಿಸಿದ ಕ್ರಮ ಮತ್ತು ಅದರ ಸ್ವರೂಪವನ್ನು ಅರಿಯಲು ಸಹಾಯಕವಾಗಿವೆ.

ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ಆಕಸ್ಮಿಕವಲ್ಲ. ಆದರೆ ಹೈದರಾಬಾದ್ ಕರ್ನಾಟಕ ವಿಮೋಚನೆಗಾಗಿ ನಿಜಾಂ ಆಳ್ವಿಕೆಯ ವಿರುದ್ಧದ ಹೋರಾಟದ ನಡುವೆ ಬಂದ ರಜಾಕಾರರು ಮತ್ತು ಅವರ ದಾಳಿ ಆಕಸ್ಮಿಕವಾದದ್ದು. ಈ ಆಕಸ್ಮಿಕ ಸಂದರ್ಭವನ್ನು ಉಪಯೋಗಿಸಿಕೊಂಡವರು ಸಮಯಸಾಧಕರು ಮತ್ತು ರಾಜಕೀಯ ಬೆಂಬಲ ಪಡೆದ ಮತೀಯ ಶಕ್ತಿಗಳು ಎಂಬುದನ್ನು ಈ ಕಥೆಗಳು ತಿಳಿಸುತ್ತವೆ. ಮುಸ್ಲಿಂ ಆಳ್ವಿಕೆಯನ್ನು ಓಡಿಸಲು ಸಂಸ್ಥಾನದ ಪ್ರಜೆಗಳು ಹೋರಾಟ ನಡೆಸಿದರು ಎಂಬುದು ನಿಜ. ಆದರೆ ಇದನ್ನು 'ಹಿಂದು ಮತ್ತು ಮುಸ್ಲಿಂ ನಡುವಿನ ಹೋರಾಟ' ಎಂದರೆ ಸರಳೀಕರಣವಾಗುತ್ತದೆ. ಎಲ್ಲ ಮುಸ್ಲಿಮರು ನಿಜಾಂ ಆಳ್ವಿಕೆಯನ್ನು ಬೇಕು ಎನ್ನಲಿಲ್ಲ. ಎಲ್ಲ ಹಿಂದುಗಳು ನಿಜಾಂ ಆಳ್ವಿಕೆ ಬೇಡ ಎನ್ನಲಿಲ್ಲ ಎಂಬುದೇ ವಾಸ್ತವ ಸಂಗತಿ. ಇದಕ್ಕೆ ಚರಿತ್ರೆಯ ದಾಖಲೆಗಳಲ್ಲೂ ಸಾಹಿತ್ಯ ಕೃತಿಗಳಲ್ಲೂ ಬೇಕಾದಷ್ಟು ಆಧಾರಗಳಿವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅನೇಕ ಭೂಮಾಲೀಕರು ಬ್ರಿಟಿಷರ ಜೊತೆಗೆ ಇದ್ದಂತೆ ರಜಾಕಾರರ ದಾಳಿಯ ಸಂದರ್ಭದಲ್ಲಿಯೂ ನಿಜಾಮನ ಪರವಾಗಿದ್ದು ಸುರಕ್ಷವಾಗಿದ್ದರು. ಜನ ಸಾಮಾನ್ಯರು ಮಾತ್ರ ಬಲಿಯಾಗುತ್ತಿದ್ದರು.

'ಕತ್ತಲೆಯಲ್ಲಿ ಬೆಳಕು' (ಶಿವಲೆಂಕ) ಕಥೆಯು, ಈ ಚಾರಿತ್ರಿಕ ಸಂದರ್ಭದಲ್ಲಿ ಹೈದರಾಬಾದ್ ನಗರದಲ್ಲಿ ಜರುಗಿದ

ಅನೇಕ ವಾಸ್ತವ ಸಂಗತಿಗಳ ಚಿತ್ರಣವನ್ನು ಒಳಗೊಂಡಿದೆ. ಒಂದೇ ಕಂಪನಿಯಲ್ಲಿ ದುಡಿಯುವ, ಅನೇಕ ಜಾತಿಗಳಿಗೆ ಸೇರಿದ ಕಾರ್ಮಿಕರ ಓಣಿಯಲ್ಲಿ ನಬಿಲಾಲನೂ ಗಂಗಾರಾಮನೂ ತಮ್ಮ ತಮ್ಮ ಕುಟುಂಬಗಳ ಜತೆಗಿದ್ದರು. ದುಡಿದು ತಿನ್ನುವ ಈ ಕಾರ್ಮಿಕರಿಗೆ ಹೈದರಾಬಾದ್ ನಗರದಲ್ಲಿ ಯಾವ ಚಳುವಳಿ, ಹೋರಾಟ, ಗಲಭೆ ನಡೆದರೂ ಅವು ಅವುಗಳ ಪಾಡಿಗೆ ನಡೆಯುತ್ತಿದ್ದವು. ಅದರ ಬಿಸಿ ನೇರವಾಗಿ ತಟ್ಟುತ್ತಿರಲಿಲ್ಲ. ತಟ್ಟಿದರೂ ಅವರು ಅದರಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ದುಡಿದರೆ ಮಾತ್ರ ಅನ್ನ ಕಾಣುವ ಈ ಜನರು ಅನಗತ್ಯವಾಗಿ ಯಾವುದರಲ್ಲೂ ಸೇರುತ್ತಿರಲಿಲ್ಲ. ನಿಜಾಮನ ಆಳ್ವಿಕೆಯ ಪರ-ವಿರುದ್ಧ ನಡೆದ ಹೋರಾಟದಲ್ಲಿ ನಬಿಲಾಲ ರಜಾಕಾರರ ಪಡೆಯಲ್ಲಿ ಸೇರುತ್ತಾನೆ. ತನ್ನ ಓಣಿಯ ಜನರಿಗೆ ಮತೀಯ ಭಾವನೆಗಳು ಕೆರಳುವಂತೆ ಮಾಡಲು ಪ್ರಯತ್ನಿಸುತ್ತಾರೆ. ಆದರೆ ಓಣಿಯ ಕಾರ್ಮಿಕರೆಲ್ಲ ನಬಿಲಾಲನ ವರ್ತನೆಯನ್ನು ಖಂಡಿಸಿ ಅವನನ್ನು ಓಣಿಯಿಂದ ಹೊರಹಾಕುತ್ತಾರೆ. ಅವನು ಬಿತ್ತಿದ್ದ ಮತೀಯ ಭಾವನೆಗಳಿಗೆ ಪ್ರಚೋದನೆ ಸಿಗುವಂತೆ, ನಗರದಲ್ಲೇ ಅಂಥ ವಾತಾವರಣ ಮೂಡತೊಡಗಿತ್ತು. ಗಂಗಾರಾಮನಂತಹವರು ಅದನ್ನು ಸುಧಾರಿಸಲು ಹೋದರೂ, ಓಣಿಯಲ್ಲಿ ಹಿಂದೂ-ಮುಸ್ಲಿಂ ಎಂಬ ಭಾವನೆ ಜಾಗೃತಿಯಾಗಿತ್ತು. ನಬಿಲಾಲ ಕಂಪನಿಯ ಮಾಲೀಕ ಮುಸ್ಲಿಮನಾಗಿದ್ದ ಕಾರಣ ಅವನನ್ನು ಬೆದರಿಸಿ, 'ರಾಜ್ಯ ನಮ್ಮದು, ಪ್ರಭುತ್ವ ನಮ್ಮದು' ಎಂದು, ಹಿಂದೂ ಕೂಲಿಕಾರರನ್ನು ಕೆಲಸದಿಂದ ಹೊರಹಾಕಲು ಒತ್ತಾಯಿಸುತ್ತಾನೆ. ಗಂಗಾರಾಮನಂಥ ಮುಸ್ಲಿಂಮೇತರರಿಗೆ ಅನ್ನದ ಬಿಕ್ಕಟ್ಟು ಎದುರಾಗುತ್ತದೆ. ಅನಿವಾರ್ಯವಾಗಿ ಹೋರಾಟಕ್ಕೆ ನಿಲ್ಲುತ್ತಾರೆ. ಹಿಂದೂ-ಮುಸ್ಲಿಂ ಕೂಲಿಕಾರರ ನಡುವೆ ಕಂಪನಿಯಲ್ಲಿ ಕದನವೇ ನಡೆದು ರಕ್ತಹರಿಯುತ್ತದೆ. ಸಾವು-ನೋವು ಸಂಭವಿಸಿ, ಅದರಲ್ಲಿ ಕಂಪನಿಯ ಮಾಲಿಕನೇ ಗಾಯಗೊಂಡು ನೆಲಕ್ಕೆ ಉರುಳುತ್ತಾನೆ. ನಬಿಲಾಲ ತಪ್ಪಿಸಿಕೊಂಡು ಓಡಿರುತ್ತಾನೆ. ತನ್ನ ಕಂಪೆನಿಯ ಕೂಲಿಕಾರರ ಒಗ್ಗಟ್ಟಿಗೆ, ಸ್ನೇಹಕ್ಕೆ ಧಕ್ಕೆ ತಂದವರೇ ತನ್ನಂಥ ಮತೀಯ ವ್ಯಕ್ತಿಗಳೆಂದು ಅರಿತುಕೊಂಡು, ಎಲ್ಲ ಕಾರ್ಮಿಕರಿಗೆ ಒಂದಾಗಿರುವಂತೆ ಮನವಿ ಮಾಡಿಕೊಳ್ಳುತ್ತಾನೆ. ರಜಾಕಾರರನ್ನು ಸಂಘಟಿಸಿದ ಚಾರಿತ್ರಿಕ ವ್ಯಕ್ತಿ ಕಾಶೀಂ ರಜ್ವಿಯನ್ನು ಪ್ರತಿನಿಧಿಸುವಂತೆ ಕಾಣುವ ನಬಿಲಾಲ, ತನ್ನ ಸ್ವಾರ್ಥ ಮತ್ತು ಮತೀಯತೆಗಳಿಂದ ಜನಸಮುದಾಯವನ್ನೇ ಒಡೆದು, ಕೂಮು ಭಾವನೆಯನ್ನು ಕೆರಳಿಸಿ ರಕ್ತಪಾತಕ್ಕೆ ಕಾರಣನಾಗುತ್ತಾನೆ. ಸಣ್ಣಪುಟ್ಟ ಘಟನೆಗಳಿಗೆ ಸಮಯಸಾಧಕರು ರಾಜಕೀಯವನ್ನು ತಗಲಿಸಿ ಗಲಭೆಗಳಿಗೆ ಬಿಸಿ ಮೂಡಿಸುವ ಹಾಗೂ ಇದರಿಂದ ಅಮಾಯಕರು ಬಲಿಯಾಗುವ ಸನ್ನಿವೇಶಗಳ ಚಿತ್ರಣ ಈ ಕಥೆಯಲ್ಲಿದೆ.

'ಬಡೇಸಾಬು ಪುರಾಣ' (ಶಾಂತರಸ) ಎಂಬ ಕಥೆ ಒಂದು ಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡಿದೆ. ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ರಜಾಕಾರರು ಹೇಗೆ ಹುಟ್ಟಿಕೊಂಡರು? ಅವರ ಗುರಿ ಯಾವುದಿತ್ತು? ಅದನ್ನು ತಲುಪಲು ನಡೆಸಿದ ಕಾರ್ಯಗಳ ಸ್ವರೂಪ ಎಂಥದ್ದು? ಅದರ ಪರಿಣಾಮವೇನಾಯಿತು ಎಂಬ ಚಿತ್ರಣ ಈ ಕಥೆಯಲ್ಲಿದೆ. ಊರಿಗೆ ಬಡೇಸಾಬನೆಂಬ ವ್ಯಕ್ತಿ ಹತ್ತಿ ವ್ಯಾಪಾರಕ್ಕೆ ಬಂದು ನೆಲೆಯೂರುತ್ತಾನೆ. ಆರ್ಥಿಕವಾಗಿ ಗಟ್ಟಿಯಾದಂತೆ, ಅಲ್ಲಿಯವರೆಗೆ ಗೌಡ, ಸಾಹುಕಾರರ ಹಿಡಿತದಲ್ಲಿದ್ದ ಕೆಳವರ್ಗದ ಜನ ಬಡೇಸಾಬನ ಕಡೆ ವಾಲುತ್ತಾರೆ. ದುಡಿದು ತಿನ್ನುವವರಿಗೆ ಬಡೇಸಾಬನ ಸಣ್ಣಪುಟ್ಟ ಆಮಿಷಗಳು ಆಕರ್ಷಿತವಾಗುತ್ತವೆ. ಆದರೆ ಇದು ಎಲ್ಲ ವಿಷಯಕ್ಕೆ ಅನ್ವಯಿಸುವುದಿಲ್ಲ. ಬಡೇಸಾಬ ಇದ್ದಕ್ಕಿದ್ದ ಹಾಗೆ ತನ್ನ ಜಾತಿಯವರನ್ನೇ ಕರೆದು, 'ನಮ್ಮದು ಆಳುವ ಜಾತಿ, ರಾಜ ನಮ್ಮವ, ದೇಶ ನಮ್ಮದು, ನಾವು ಯಾರಿಗೂ ತಲೆ ಬಗ್ಗಿಸಬಾರದು. ನಮ್ಮ ಧರ್ಮ ಶ್ರೇಷ್ಠವಾದ ಧರ್ಮ, ಇದಕ್ಕಾಗಿ ಪ್ರಾಣ ಕೊಡಬೇಕು' ಎಂದು ಮತೀಯ ಭಾವನೆಯನ್ನು ಪ್ರಚೋದಿಸುವ ಮಾತಾಡುತ್ತಾನೆ. ಇದು ಒಡೆದು ಆಳುವ ನೀತಿಯೆಂದು ಮುಲ್ಲಾ, ರಸೂಲ್‌ಸಾಬನಿಗೆ ಅನ್ನಿಸುತ್ತದೆ. ಬಡೇಸಾಬನ ರಾಜಕೀಯ ಪ್ರೇರಿತ ಮಾತನ್ನು ಊರ ಮುಸ್ಲಿಮರು ಸ್ವೀಕರಿಸಲು ಸಿದ್ಧರಾಗಲಿಲ್ಲ. ಆದರೆ ಆರ್ಥಿಕವಾಗಿ ದುರ್ಬಲವಿರುವ ಅನೇಕರು ಬಡೇಸಾಬು ಕೊಡುವ ಅಲ್ಪಸ್ವಲ್ಪ ಸವಲತ್ತಿಗಾಗಿ ಅವನನ್ನು ಬೆಂಬಲಿಸುತ್ತಾರೆ. ಸಾಹುಕಾರ, ಗೌಡ ಮತ್ತಿತರರ ನಡುವಿನ ವೈಷಮ್ಯಗಳಿಂದ ತಮಗರಿವಿಲ್ಲದಂತೆ ಬಡೇಸಾಬನನ್ನು

ಬೆಂಬಲಿಸುವುದು ಮಾಡುತ್ತಾರೆ. ಇದರಲ್ಲೂ ಒಡೆದು ಆಳುವ ಬಡೇಸಾಬನ ಕೈ ಇದ್ದೇ ಇರುತ್ತದೆ. ಇದರಿಂದ ಊರು ದುರ್ಬಲವಾಗುತ್ತ ಹೋಗುತ್ತದೆ. ಬಡೆಸಾಬನ ಹೆಂಡ, ಸರಾಯಿ, ಮಾಂಸದ ವ್ಯಾಪಾರ ಸುರುವಾದಾಗ ಅದನ್ನು ಒಗ್ಗಟ್ಟಿನಿಂದ ಎದುರಿಸಲು ಯಾರಿಗೂ ಸಾಧ್ಯವಾಗುವುದಿಲ್ಲ. ಗೌಡ, ಸಾಹುಕಾರರ ಕೈಕೆಳಗಿರುವ ಜನರೆಲ್ಲ ಬಡೇಸಾಬನ ಕಡೆ ಹೋಗಿರುತ್ತಾರೆ. ಈ ಬದಲಾವಣೆ ಸಹಜವೆ. ಅಲ್ಲಿಯವರೆಗೆ ಗೌಡ, ಸಾಹುಕಾರನ ಅಧೀನದಲ್ಲಿದ್ದ ಆರ್ಥಿಕವಾಗಿ ದುರ್ಬಲವಿದ್ದ ಜನ ಈಗ ಬಡೇಸಾಬನ ಅಧೀನದಲ್ಲಿರುತ್ತಾರೆ. ಈ ಬದಲಾವಣೆ ಹಣ ಮತ್ತು ಅಧಿಕಾರವನ್ನು ಅವಲಂಬಿಸಿರುತ್ತದೆ. ಕರ್‍ಯನ ಹೆಂಡತಿಯನ್ನು ಬಡೇಸಾಬ ಇಟ್ಟುಕೊಂಡರೆ ಅವನು ಸುಮ್ಮನಿರುತ್ತಾನೆ. ಇದಕ್ಕಿಂತ ಮೊದಲು ಸಾಬಣ್ಣನ ಜತೆಗಿದ್ದ ಬುಡ್ಡಮ್ಮ ಬಡೇಸಾಬನ ಅಧೀನಕ್ಕೆ ಬಂದಿರುತ್ತಾಳೆ. ಊರಿನ ಸ್ವಾಭಿಮಾನವನ್ನೇ ನಾಶ ಮಾಡುವ ಹಂತಕ್ಕೆ ಬಡೇಸಾಬ ಬೆಳೆದಿದ್ದಾನೆಂದು ಜನಕ್ಕೆ ಗೊತ್ತಾಗುವ ಹೊತ್ತಿಗೆ ರಜಾಕಾರರ ದಾಳಿ ಸುರುವಾಗುತ್ತದೆ. ಬಡೇಸಾಬ ಊರಲ್ಲಿ ತಾನು ದುರ್ಬಲವಾಗುತ್ತಿದ್ದೇನೆ ಅನ್ನಿಸಿದಾಗ ರಜಾಕಾರನಾಗಿ ಪುನಃ ಚಾಲ್ತಿಗೆ ಬರುತ್ತಾನೆ. ಅನೇಕ ಕೆಳವರ್ಗದವರನ್ನು ರಜಾಕಾರರನ್ನಾಗಿ ಮಾಡುತ್ತಾನೆ. ಊರಲ್ಲಿ ತನ್ನ ಬಗ್ಗೆ ಅಸಮಾಧಾನ ಇಟ್ಟುಕೊಂಡಿದ್ದವರ ಮೇಲೆ ದೌರ್ಜನ್ಯ ನಡೆಸುತ್ತಾನೆ. ಇಂಥ ಸಂದರ್ಭದಲ್ಲಿ ಊರಿನ ಆಂತರಿಕ ರಾಜಕೀಯವೂ ಎದ್ದು ನಿಲ್ಲುತ್ತದೆ. ಹಳೆ ಜಗಳ, ವೈಷಮ್ಯಗಳು ತಮ್ಮ ಸೇಡಿಗೆ ನೆಲೆಯನ್ನು ಒದಗಿಸಿಕೊಳ್ಳುತ್ತವೆ. ಅತ್ಯಾಚಾರಗಳು, ದರೋಡೆ, ಲೂಟಿ, ಕೊಲೆ ನಡೆದು ಊರು ತಲ್ಲಣಿಸುತ್ತದೆ. ಇದರಲ್ಲಿ ಬಡೇಸಾಬನ ಪಾಲೆಷ್ಟು? ಸಮಯಸಾಧಕರ ಪಾಲೆಷ್ಟು? ಅಂತಿಮವಾಗಿ ಸಿಕ್ಕು ಹಾಕಿಕೊಂಡವನು ಬಡೇಸಾಬನೇ. ಅಲ್ಲಿಯವರೆಗೆ ನಡೆದ ದೌರ್ಜನ್ಯದ ಸೇಡು ಬಡೇಸಾಬನ ಮೇಲೆ ತಿರುಗುತ್ತದೆ. ರಾಮವ್ವ, ನಾಗಲಿಂಗಿ ಮೇಲೆ ಅತ್ಯಾಚಾರ ಮಾಡಿದ್ದು ಯಾರು? ಬಡೇಸಾಬನಿಂದ ಬಿಡುಗಡೆಯಾಗುತ್ತಿದ್ದಂತೆ ಬುಡ್ಡಮ್ಮನನ್ನು ದಕ್ಕಿಸಿಕೊಳ್ಳಲು ಸಾಬಣ್ಣ, ಸಾಹುಕಾರ, ಕುಲಕರ್ಣಿ ಯಂಕಪ್ಪ ಯತ್ನಿಸುವುದು ಇದೆಲ್ಲ ಏನನ್ನು ತೋರಿಸುತ್ತವೆ? ರಜಾಕಾರರ ದಾಳಿಯಲ್ಲಿ ಹಳ್ಳಿ, ಹಳ್ಳಿಗಳಲ್ಲಿ ಸಮಯ ಸಾಧಕರೆಲ್ಲ ಸೇರಿಕೊಂಡು ತಮಗೆ ಬೇಕಾದದ್ದನ್ನು ಈಡೇರಿಸಿಕೊಂಡರು. ನಂತರ ವಾತಾವರಣ ತಿರುವು ಮುರುವಾದಾಗ ಬರೀ ಮುಸ್ಲಿಮರು 'ಹಿಂದೂ'ಗಳ ದಾಳಿಗೆ ಸಿಕ್ಕು ಸಾವಿಗೀಡಾದರು.

ಈ ಕಥೆಯಲ್ಲಿ ಕರ್‍ಯ, ಉಪ್ಪಾರ ಜಂಗಲೆಪ್ಪ, ನಿಂಗಿ, ಕಬ್ಬೇರ ನಾರಾಯಣ, ಬುಡ್ಡಮ್ಮರಂಥ ಮುಸ್ಲಿಮೇತರರು, ದಸ್ತಗೀರಿ, ಆಬ್ದುಲ್ಲಾ, ಸಲೀಂ, ಕಾಚಾ ಸಾಬರಂಥ ಮುಸ್ಲಿಮರು ಬಡೆಸಾಬನ ಜತೆ ಸೇರಿ ರಜಾಕಾರರಾಗಿ ಊರಲ್ಲಿ ಮನ ಬಂದಂತೆ ಮೆರೆಯುತ್ತಾರೆ. ಮುಸ್ಲಿಮರಿರಲಿ, ಮುಸ್ಲಿಮೇತರರಿರಲಿ ಇವರೆಲ್ಲ ಕೆಳವರ್ಗದವರು ಮತ್ತು ದಲಿತರು. ತಮ್ಮ ಜೀವವನಾವಧಿಯೆಲ್ಲ ಗೌಡ, ಸಾಹುಕಾರ, ದೇಸಾಯಿರಂಥ ಉಳ್ಳವರ ಜೀತದಾಳುಗಳಾಗಿ ದುಡಿದೇ ಬದುಕಿದವರು. ಸಾಮಾಜಿಕವಾಗಿ, ಆರ್ಥಿಕವಾಗಿ ದುರ್ಬಲರು. ಆನೇಕ ಕಾರಣಗಳಿಂದ ದಮನಕ್ಕೆ ಒಳಗಾದವರು. ಉಳ್ಳವರ ಮೇಲೆ ಇವರ ಸಿಟ್ಟು ಸೂಕ್ತವಾಗಿ ಇದ್ದೇ ಇರುತ್ತಿತ್ತು. ರಜಾಕಾರರ ದಾಳಿ ಶುರುವಾದಾಗ ಈ ಶೋಷಿತರಿಗೆ ಅವಕಾಶ ಸಿಕ್ಕಂತಾಯಿತು. ಬಡೆಸಾಬನ ಕಡೆ ಸೇರಿ ತಮ್ಮ ಆಕ್ರೋಶವನ್ನು ಉಳ್ಳವರ ಮೇಲೆ ವ್ಯಕ್ತಪಡಿಸಲು ಉಪಯೋಗಿಸಿಕೊಂಡರು. ಇಂಥ ಪರಿಸ್ಥಿತಿಗೆ ಸಮಾಜದ ಒಟ್ಟು ಪರಿಸ್ಥಿತಿಗಳು ಕಾರಣವಾಗಿರುತ್ತವೆ. ಈ ಪರಿಸ್ಥಿತಿಗಳೇ ಮನುಷ್ಯನನ್ನು ನಿಯಂತ್ರಿಸುತ್ತವೆ.

ಈ ಸಂದರ್ಭದಲ್ಲಿ ಸ್ಥಳೀಯ ಮುಸ್ಲಿಮರು ರಜಾಕಾರರಾಗಿ ಊರಲ್ಲಿ ದೌರ್ಜನ್ಯ ನಡೆಸಿರುವುದು ನಿಜ. ಇವರೂ ಸಮಯಸಾಧಕರೆ. ಸಮಯಸಾಧಕತನಕ್ಕೆ ಜಾತಿ ಅಡ್ಡ ಬರುವುದಿಲ್ಲ. 'ಉರಿದ ಬದುಕು'(ಶಾಂತರಸ) ಕಥೆಯಲ್ಲಿ, ತಲತಲಾಂತರದಿಂದ ಊರಲ್ಲಿಯೇ ಬಾಳಿದ ಮುಸ್ಲಿಮರ ಮನೆತನದ ಕಾಶೀಮಲಿ ರಜಾಕಾರರ ದಾಳಿಯಲ್ಲಿ ಸೇರಿಕೊಂಡು ತನಗೆ ಬೇಕಾಗದವರನ್ನೆಲ್ಲ ಹಿಂಸಿಸುತ್ತಾನೆ. ಅವನ ಅಹಂಕಾರಕ್ಕೆ ಮಿತಿ ಇರುವುದಿಲ್ಲ. ಅಧಿಕಾರ ಮತ್ತು ಹಣ ಬಂದಾಗ ಮನುಷ್ಯ ವಿವೇಕ ಕಳೆದುಕೊಂಡರೆ

ಎಂಥ ಕ್ರೂರಿಯಾಗುತ್ತಾನೆ ಎನ್ನುವುದಕ್ಕೆ ಕಾಶೀಮಲಿ ನಿದರ್ಶನ. ರಜಾಕಾರನಾಗಿ ನಾಯಿಂದ ಕಸುಬಿನ ರಾಚಪ್ಪನನ್ನು ಕರೆಸಿ ತನ್ನ ಟೊಂಕದ ಕೆಳಗಿನ ಕೂದಲನ್ನು ತೆಗೆಯಲು ಹೇಳುತ್ತಾನೆ. ಸ್ವಾಭಿಮಾನಿಯಾದ ರಾಚಪ್ಪ ನಿರಾಕರಿಸಿದಾಗ ಅವನನ್ನು ಒದ್ದು ಸಾಯಿಸುತ್ತಾನೆ. ರಾಚಪ್ಪ ಮಗ ತಿಪ್ಪಣ್ಣನನ್ನೂ ಕೊಲ್ಲಲು ಪ್ರಯತ್ನಿಸುತ್ತಾನೆ. ಆದರೆ ತಿಪ್ಪಣ್ಣ ನಬೆಮ್ಮನ ಮನೆಯಲ್ಲಿ ಅಡಗಿ ರಕ್ಷಣೆ ಪಡೆಯುತ್ತಾನೆ. ಕಾಶೀಮಲಿಯನ್ನು ನಬೆಮ್ಮ ತನ್ನ ಮನೆಯಲ್ಲಿ ಬಿಟ್ಟುಕೊಡುವುದಿಲ್ಲ. ತಿಪ್ಪಣ್ಣನ ರಕ್ಷಣೆಗಾಗಿ ತನ್ನ ಜೀವವನ್ನೇ ಕೊಡುತ್ತಾಳೆ. ಅದೇ ತಿಪ್ಪಣ್ಣನಿಗೆ ಅವನ ತಂಗಿ ಅನ್ನವ್ವನ ಮನೆಯಲ್ಲಿ ಆಶ್ರಯ ಸಿಕ್ಕಿರಲಿಲ್ಲ. ತಂಗಿಯ ಗಂಡನು ರಜಾಕಾರನಾಗಿರುತ್ತಾನೆ. ಮುಸ್ಲಿಮನಾದ ಕಾಶೀಮಲಿ ರಜಾಕಾರನಾಗಿ ಊರನ್ನು ಹಿಂಸಿಸುತ್ತಾನೆ. ಮುಸ್ಲಿಮಳಾದ ನಬೆಮ್ಮ ಮುಸ್ಲಿಮೇತರನಾದ ತಿಪ್ಪಣ್ಣನಿಗಾಗಿ ಪ್ರಾಣಕೊಡುತ್ತಾಳೆ. ಕಾಶೀಮಲಿಯೇ ಅವಳ ಜೀವ ತೆಗೆಯುತ್ತಾನೆ.

ಸಮಯಸಾಧಕರು ರಜಾಕಾರರ ದಾಳಿಯಲ್ಲಿ ತಮ್ಮ ಸಾಧಕತನದಿಂದ ಎಲ್ಲಿಗೆ ತಲುಪುತ್ತಾರೆ ಎಂಬುದನ್ನು **'ನಾಯಿ ಮತ್ತು ಪಿಂಚಣಿ'** ಹಾಗೂ **'ಸ್ವಾತಂತ್ರ್ಯವೀರ'(ಶಾಂತರಸ)** ಕಥೆಯಲ್ಲಿ ಕಾಣಬಹುದು. ರಜಾಕಾರರ ದಾಳಿಯಲ್ಲಿ ಸ್ವಾಭಿಮಾನಿಗಳು ಹೋರಾಡಿ ಸಾವಿಗೀಡಾದರು. ಹೋರಾಡುವ ಧೈರ್ಯವಿಲ್ಲದ ಆದರೆ ರಜಾಕಾರರ ಜತೆ ಸೇರಿ ಅವರ ಜತೆ ಗುರುತಿಸಿಕೊಳ್ಳಲು ಜನಕ್ಕಂಜಿ ಮಧ್ಯಂತರ ಉಳಿದು, ಗಲಭೆ ತೀವ್ರವಾದಾಗ ತಲೆಮರೆಸಿಕೊಂಡಿದ್ದು, ವಾತಾವರಣ ತಿಳಿಯಾದಾಗ ಇದ್ದಕ್ಕಿದ್ದಂತೆ ಕಾಣಿಸಿಕೊಂಡು 'ಹೋರಾಡಲು ಅಲ್ಲಿಗೆ ಹೋಗಿದ್ದೆ, ಇಂಥ ಸಾಹಸ ಮಾಡಿ ರಜಾಕಾರರನ್ನು ಬಗ್ಗು ಬಡಿದೆ ಎಂದು ಹೇಳಿಕೊಂಡು ಮುನ್ನೆಲೆಗೆ ಬಂದು' ಮೆರೆದ ಅವಕಾಶವಾದಿಗಳೂ ಇದ್ದಾರೆ. **'ನಾಯಿ ಮತ್ತು ಪಿಂಚಣಿ'** ಕಥೆಯಲ್ಲಿ, ಸಂಗಪ್ಪನು ರಜಾಕಾರರ ದಾಳಿಯನ್ನು ಎದುರಿಸಿ ಸತ್ತು ಹೋದ. ಅವನ ಗೆಳೆಯ ರಂಗಪ್ಪ ನೇರವಾಗಿ ರಜಾಕಾರರ ಜತೆ ಸೇರಲು ಊರ ಜನರಿಗೆ ಅಂಜಿ, ಸಂಗಪ್ಪನಿಗೆ ಸಹಾಯ ಮಾಡಲು ನಿಂತಂತೆ ಮಾಡಿ, ಬಿಕ್ಕಟ್ಟಿನ ಪ್ರಸಂಗದಲ್ಲಿ ತಲೆಮರೆಸಿಕೊಂಡ. ವಾತಾವರಣ ತಣ್ಣಗಾಗುವ ಹೊತ್ತಿಗೆ ಸಂಗಪ್ಪ ಹೋರಾಟದಲ್ಲಿ ಮರಣ ಹೊಂದಿದ್ದ. ತಲೆ ಮರಿಸಿಕೊಂಡಿದ್ದ ರಂಗಪ್ಪ ಊರಲ್ಲಿ ಕಾಣಿಸಿಕೊಂಡ ತನ್ನ ಸಾಹಸಗಳನ್ನು ಅತಿರಂಜಕವಾಗಿ ಹೇಳಿ, ತನ್ನ ಚೇಲಾಗಳಿಂದ ಪ್ರಚಾರ ಮಾಡಿಸಿ, ಸ್ವಾತಂತ್ರ್ಯ ಹೋರಾಟಗಾರನೆಂದು ಕೊನೆಗೆ ಕಾಂಗ್ರೆಸ್ ಸೇರಿ ದೇಶಭಕ್ತನಾಗಿ, ಚುನಾವಣೆಗೆ ನಿಂತು ಎಂ.ಎಲ್.ಎ. ಆಗಿಬಿಟ್ಟ. **'ಸ್ವಾತಂತ್ರ್ಯವೀರ'** ಕಥೆಯ ಪರಪ್ಪನೂ ರಂಗಪ್ಪನಂತೆ ಮುನ್ನೆಲೆಗೆ ಬಂದಿದ್ದ. ರಂಗಪ್ಪ ತನ್ನ ಗೆಳೆಯ ಸಂಗಪ್ಪನ ಹೆಂಡತಿ ಈರವ್ವಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ನೋಡಿದರೆ ಪರಪ್ಪ ತನ್ನ ಗೆಳೆಯ ಸಿದ್ದಪ್ಪನ ಹೆಂಡತಿಯನ್ನು ಅತ್ಯಾಚಾರ ಮಾಡಿ ಸಾವಿಗೆ ತಳ್ಳಿಬಿಡುತ್ತಾನೆ. **'ನಾಯಿ ಮತ್ತು ಪಿಂಚಣಿ'** ಕತೆಯಲ್ಲಿ ಬರುವ ಮೌಲಾನಾಯಕ, **'ಸ್ವಾತಂತ್ರ್ಯವೀರ'** ಕಥೆಯಲ್ಲಿ ಬರುವ ಅಲ್ಲಿಸಾಬ ಇವರು ಸ್ಥಳೀಯ ಸಮಯಸಾಧಕರೇ. ರಜಾಕಾರರ ದಾಳಿಯಲ್ಲಿ, ನೇರವಾಗಿ ರಜಾಕಾರರಾಗಿ ಊರಿನಲ್ಲಿ ತಮ್ಮ ಕ್ರೌರ್ಯ ಮೆರೆಯುತ್ತಾರೆ. ಆದರೆ ರಂಗಪ್ಪ, ಪರಪ್ಪನಂಥವರು ಅತ್ತ ಹೋರಾಡದೆ, ಇತ್ತ ರಜಾಕಾರರ ಜತೆ ಬಹಿರಂಗವಾಗಿ ಗುರುತಿಸಿಕೊಳ್ಳದೆ, ರಜಕಾರರ ಜೊತೆ ಹೋರಾಡಿದಂತೆ ಮಾಡುವುದು, ಅದೇ ರಜಾಕಾರರ ಜತೆ ಗುಪ್ತವಾಗಿ ಸಖ್ಯ ಹೊಂದಿ, ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಸೇರಿ ದೇಶಭಕ್ತರಾಗಿ, ಅಧಿಕಾರದ ಗದ್ದುಗೆಯನ್ನೇರಿ ನಿಲ್ಲುತ್ತಾರೆ. ಆದರೆ ಮೌಲಾನಾಯಕ ಅಲ್ಲಿಸಾಬನಂಥ ಹುಂಬರು ಪ್ರತಿದಾಳಿಯಲ್ಲಿ ದುರ್ಮರಣಕ್ಕೆ ಒಳಗಾಗುತ್ತಾರೆ.

'ಯಾರು ನಮ್ಮವರು' (ಜಯತೀರ್ಥ ರಾಜಪುರೋಹಿತ) ಕಥೆಯಲ್ಲಿ ಇದೇ ಸನ್ನಿವೇಶ ಮುಂದುವರೆದಿದೆ. ರಜಾಕಾರರ ದಾಳಿ ಸುರುವಾದ ಕೂಡಲೇ ಪೊಲೀಸ್ ಗೌಡ ರಜಾಕಾರರ ಹುಸೇನಿ ಜತೆ ಸ್ನೇಹ ಬೆಳೆಸುತ್ತಾನೆ. ಕಾಂಗ್ರೆಸ್ ಅನ್ನು ಬಯ್ಯುತ್ತಾನೆ. ರಾಘಣ್ಣ, ಅನಂದತೀರ್ಥ ತಮ್ಮ ಸರಕಾರಿ ನೌಕರಿಗೆ ಧಕ್ಕೆ ಬರಬಾರದೆಂದು ನಿರ್ಲಿಪ್ತವಾಗಿ ಉಳಿಯುತ್ತಾರೆ. ರಜಾಕಾರರ ವಿರುದ್ಧ ಗುಪ್ತವಾಗಿ ಹೋರಾಡುತ್ತಿದ್ದ ರಾಜಣ್ಣನ ಮೇಲೆ ಪೊಲೀಸರ ಕಣ್ಣು ಬೀಳುತ್ತದೆ. ಅವನನ್ನು ಹಿಡಿಯಲು ಬಲೆ ಬೀಸಿದಾಗ, ರಾಜಣ್ಣನಿಗೆ

ಬಂಧುಗಳಾದ ರಾಘಣ್ಣ, ಆನಂದತೀರ್ಥರಿಂದ ಆಶ್ರಯ ಸಿಗುವುದಿಲ್ಲ. ಊರಿನ ಮಾನ ಕಾಪಾಡಬೇಕಾದ ಗೌಡ ರಜಾಕಾರರ ಜತೆಗಿದ್ದಾನೆ. ಹೊನ್ನೂರ ಸಾಹೇಬ ಮತ್ತು ನಂಬಿಯಣ್ಣನಂಥವರಿಂದ ರಾಜಣ್ಣ ರಕ್ಷಣೆ ಪಡೆಯುತ್ತಾನೆ. 'ನಾವು ಮೊದಲು ಮನಸೇರ್ರಿ. ಆಮ್ಯಾಲೆ ಉಳಿದುದ್ವೆಲ್ಲ. ಮಳಿ ಬರತಿದ್ರ ದನಾ ತೊಯ್ಯಾರ್ದಂತ ನಮ್ಮ ಬಗಲಾಗೆ ದನಾನ ಕರಕಂಬರೋರು ನಾವು' ಎನ್ನುವವರು. ಸಮಯಸಾಧಕರು, ಧೂರ್ತರು ಮಾನವೀಯತೆ ಕಳೆದುಕೊಂಡು ಸಮಯದ ಲಾಭ ಪಡೆಯಲೆತ್ನಿಸುವ ಮುಖಗಳ ನಡುವೆ, ಇಂಥವರ ಮಾನವೀಯತೆಯೇ ರಾಜಣ್ಣನನ್ನು ಬದುಕಿಸುತ್ತದೆ.

'ಸಯಿದಾ ಸುಮತಿಯಾದಳು' (ಜಯತೀರ್ಥ ರಾಜಪುರೋಹಿತ) ಕಥೆಯಲ್ಲಿ, ಸುಮತಿ ಆಕಸ್ಮಿಕ ಎಂಬಂತೆ ಮಸ್ತಾನ ಆಲಿಯ ಜತೆ ಸಂಪರ್ಕ ಬೆಳೆಸುತ್ತಾಳೆ. ಒಮ್ಮೆ ಜಾರಿದ ಮೇಲೆ ಪಶ್ಚಾತ್ತಾಪದಿಂದ ಫಲವಿಲ್ಲ ಎಂದು ಆಲಿಗೆ ನಿಷ್ಠಳಾಗಿರುತ್ತಾಳೆ. ರಜಾಕಾರರ ದಾಳಿಯ ಸಂದರ್ಭದಲ್ಲಿ ಮತ್ತು ನಿಜಾಮನ ಆಳ್ವಿಕೆಯಲ್ಲಿ ಬಲವಂತವಾಗಿ ಮತಾಂತರ ಹೊಂದಿದವರನ್ನು ಪುನಃ 'ಹಿಂದೂ' ಮತಕ್ಕೆ ಮರಳಲು ಸಹಾಯ ಮಾಡಲು ಬಂದಾಗಲೂ ಸುಮತಿ ಆಲಿಗೆ ನಿಷ್ಠಳಾಗಿರುತ್ತಾಳೆ. ಆದರೆ ಆಲಿ ಪಾಕಿಸ್ತಾನಕ್ಕೆ ಭಾರತದ ಮುಖ್ಯ ದಾಖಲೆಗಳನ್ನು ಕಳಿಸುವ ಗುಪ್ತ ಕೆಲಸಕ್ಕೆ ಇಳಿದಾಗ ಸುಮತಿ ಅವನ ಸಮಯಸಾಧಕತನಕ್ಕೆ ಬೇಸತ್ತು ಪೊಲೀಸರಿಗೆ ಅವನನ್ನು ಒಪ್ಪಿಸಿ ತಾನು ಮರಣ ಹೊಂದುತ್ತಾಳೆ.

'ಆದರ್ಶ' (ಸಗರ ಕೃಷ್ಣಾಚಾರ್ಯ) ಕಥೆಯಲ್ಲಿ, ಮೋಹನರಾಯ ಸ್ವಾತಂತ್ರ್ಯ ಹೋರಾಟದಲ್ಲೂ, ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದಲ್ಲೂ, ರಜಾಕಾರರ ಹಾವಳಿಯಲ್ಲೂ ಹೋರಾಡಿದನೆಂಬ ಖ್ಯಾತಿ ಪಡೆದಿದ್ದ. ಅನೇಕ ಸಾಹಸಗಳನ್ನು ಮಾಡಿ 'ದೇಶಪ್ರೇಮಿ' ಅನ್ನಿಸಿಕೊಂಡಿದ್ದ. ಅವನ ಮೇಲೆ ಜನರಿಗೆ ವಿಶೇಷ ಗೌರವವಿತ್ತು. ಆದರೆ ಅವನ ಗುಪ್ತ ಕೆಲಸಗಳು ಜನರಿಗೆ ತಿಳಿದಿರಲಿಲ್ಲ. ಕಥೆಯ ನಿರೂಪಕ ಮೋಹನರಾಯನ ಮನೆಯಲ್ಲಿ ಒಂದು ದಿನ ತಂಗಬೇಕಾದ ಪ್ರಸಂಗ ಬಂದಾಗ, ಅವನ ತೋಟದಲ್ಲಿ ಒಂಟಿಯಾಗಿ ಅಲೆಯುತ್ತ ಹೆಂಗಸೊಬ್ಬಳನ್ನು ಆಕಸ್ಮಿಕವಾಗಿ ಕಾಣುತ್ತಾನೆ. ಮೋಹನರಾಯ ಅವಳನ್ನು ಬಂಧನದಲ್ಲಿರಿಸಿದ್ದನು. ವಿಚಾರಿಸಲಾಗಿ ರಜಾಕಾರರ ದಾಳಿಯ ದಿನಗಳಲ್ಲಿ ಅವಳನ್ನು ಆತ ಅಪಹರಿಸಿಕೊಂಡು ಬಂದಿದ್ದ. ತನ್ನ ಗಂಡನಿಂದ ದೂರ ಮಾಡಿದ ಮೋಹನರಾಯನನ್ನು ಆ ಹೆಂಗಸು ಹೀಗಳೆಯುತ್ತಾಳೆ. 'ಕಾಂಗ್ರೆಸ್ಸಿನ ಉದಾತ್ತ ಧ್ಯೇಯ ಧೋರಣೆಗಳನ್ನು ಹಾಳು ಮಾಡುತ್ತಿರುವ ಇಂಥ ಕೃತ್ರಿಮ ಕಾಂಗ್ರೆಸ್ ಕಾರ್ಯಕರ್ತರ ಬಗ್ಗೆ ನಿರೂಪಕನ ಮನಸ್ಸು ಕುದಿಯುತ್ತದೆ. ಈ ಜನ ಮಹಾತ್ಮರ ಆದರ್ಶ ತತ್ವಗಳ ಅವಹೇಳನ ಮಾಡುತ್ತಿರುವರಲ್ಲ' ಎಂದು ಮರುಗುತ್ತಾನೆ. ಬಂಧಿತಳಾಗಿದ್ದವಳು 'ಹಸೀನಾ' ಎಂಬ ಮುಸ್ಲಿಂ ಹೆಂಗಸು. ದೇಶಪ್ರೇಮಿಯೆಂದು ಜನರಿಂದ ಕರೆಸಿಕೊಳ್ಳುವ ಮೋಹನರಾಯನೇ ಹಸೀನಾಳ ಪಾಲಿಗೆ ರಾಕ್ಷಸನಾಗಿದ್ದಾನೆ.

ರಜಾಕಾರರನ್ನು ಕುರಿತ ಕಥೆಗಳಲ್ಲಿ ಶ್ರೀಕಾಂತ ಪಾಟೀಲರ ಕಥೆ **'ಸಂಬಂಧ'** ಭಿನ್ನವಾಗಿದೆ. ರಜಾಕಾರರ ದಾಳಿಯಿಂದ ಇಡೀ ಹೈದರಾಬಾದ್ ಕರ್ನಾಟಕದ ಜನಸಮುದಾಯಗಳೇ ತಲ್ಲಣಿಸಿ ಹೋಗಿವೆ. 'ಹಿಂದೂ-ಮುಸ್ಲಿಮ'ರ ನಡುವಿನ ಹೋರಾಟವೆಂದು ಹೇಳುತ್ತ ಹಳ್ಳಿಗಳೆಲ್ಲ ಹೊತ್ತಿ ಉರಿಯತೊಡಗಿವೆ. ಇಂಥ ಸಂದರ್ಭದಲ್ಲಿ ರಜಾಕಾರರು ಶರಣಾಗತರಾದ ಬೆನ್ನಲ್ಲೆ, ಹಿಂದುಗಳು ಮುಸ್ಲಿಮರನ್ನು ಹಿಡಿದು ಸೇಡು ತೀರಿಸಿಕೊಳ್ಳಲು ನಿಂತಾಗ, 'ಮುಸ್ಲಿಮ್' ಕುಟುಂಬವನ್ನು 'ಹಿಂದೂ' ಕುಟುಂಬ ರಕ್ಷಿಸುತ್ತದೆ. ದಳ್ಳುರಿಯನ್ನು ನೆನೆಸಿಕೊಂಡು ಇದು ಯಾವುದಕ್ಕಾಗಿ, ಯಾರಿಗಾಗಿ? ಇದಕ್ಕೆ ಕೊನೆಯೆಂದು? ಎಂದು ಮಾಸ್ತಾರ ಮತ್ತು ಮಹಮ್ಮದ ಸಾಬ ಚಿಂತಿಸುತ್ತಾರೆ. ಕೊನೆಗೆ ಮಾಸ್ತರನು 'ಮಹ್ಮದಾ, ನಿನ್ನ ಮಕ್ಳಿಗ ನನ್ನ ಮಕ್ಳಿಗ ನೆಂಟಸ್ತನಾ ಮಾಡಿ ರಕ್ತಸಂಬಂಧ ಬೆಳಸಾಮಿ. ಇಲ್ಲಂದ್ರ ಮನಷಾರ ಜನಮಕ ಸುಖಾ ಇಲ್ಲ' ಎಂದು ವ್ಯಕ್ತಪಡಿಸುತ್ತಾನೆ. ಇದು ಅಸಾಧ್ಯ ಎನ್ನಿಸಬಹುದು. ಆದರೆ ಈ ಸಂದರ್ಭವು ಇಂಥ ಪ್ರಶ್ನೆಯನ್ನು ಹುಟ್ಟು ಹಾಕಿರುವುದು ಮಹತ್ವದ ಸಂಗತಿ ಎನಿಸುತ್ತದೆ.

ಈ ಎಲ್ಲ ಕಥೆಗಳನ್ನು ಗಮನಿಸಿದರೆ, ಈ ಸಂದರ್ಭದಲ್ಲಿ ನಡೆದ ಹೋರಾಟ ಯಾರ ಯಾರ ನಡುವೆ ನಡೆಯಿತು? ಯಾಕೆ ನಡೆಯಿತು? ಪ್ರಶ್ನೆಗಳಿಗೆ ಉತ್ತರ ಸರಳವಾಗಿಲ್ಲ. ಮಾಸ್ತಾರ ಮಹಮ್ಮದನ ಕುಟುಂಬವನ್ನು, ಮಹಮ್ಮದ ಮಾಸ್ತಾರನ ಕುಟುಂಬವನ್ನು ಯಾಕೆ ರಕ್ಷಿಸಬೇಕಾಗಿತ್ತು.(ಸಂಬಂಧ) ಈರವ್ವ ರಂಗಪ್ಪನ ಜೊತೆ ಯಾಕೆ ಹೋರಾಡಬೇಕಾಯಿತು(ನಾಯಿ ಮತ್ತು ಪಿಂಚಣಿ), ಚೆನ್ನವ್ವ ಯಾಕೆ ಅತ್ಯಾಚಾರಕ್ಕೆ ಬಲಿಯಾಗಬೇಕಾಯಿತು(ಸ್ವಾತಂತ್ರ್ಯ ವೀರ) ನಬೆಮ್ಮ ಯಾಕೆ ಜೀವ ಕೊಡಬೇಕಾಯಿತು(ಉರಿದ ಬದುಕು) ನಂಬಿಯಣ್ಣ ರಾಜಣ್ಣನ ಯಾಕೆ ಉಳಿಸಬೇಕಾಯಿತು.(ಯಾರು ನಮ್ಮವರು) ಎಂಬ ಪ್ರಶ್ನೆಗಳು ಹುಟ್ಟುತ್ತವೆ.

ಈ ಪ್ರದೇಶದ ಪ್ರಜೆಗಳು ನಿಜಾಮನ-ರಜಾಕಾರರ ವಿರುದ್ಧ ಹೋರಾಡುವ ಸಂದರ್ಭ ನಿರ್ಮಾಣವಾದದ್ದು ನಿಜ. ಆದರೆ ಹಳ್ಳಿಹಳ್ಳಿಗಳಲ್ಲಿ ನಡೆದ ಈ ಹೋರಾಟದ ಸ್ವರೂಪವನ್ನು ನೋಡಿದರೆ, ಸ್ವಾತಂತ್ರ್ಯ ಹೋರಾಟ, ವಿಮೋಚನೆಯ ಹೋರಾಟ ಧೂರ್ತರಿಗೆ ನೆಪವಾಯಿತು. ಮನುಷ್ಯನ ಕೆಟ್ಟ ಗುಣಗಳು ಪ್ರಕಟವಾದವು. 'ಅವಕಾಶ' ಮನುಷ್ಯನ ಗುಣವನ್ನು ಹೊರಹಾಕಬಲ್ಲದು ಎಂಬುದಕ್ಕೆ ಈ ಸಂದರ್ಭವೇ ನಿದರ್ಶನವಾಗಿದೆ. ಲಂಕೇಶರ 'ದಾಳಿ' ಕಥೆ ಇದನ್ನು ಸಮರ್ಥವಾಗಿ ವ್ಯಕ್ತಪಡಿಸುತ್ತದೆ. ರಜಾಕಾರರು ಹಳ್ಳಿಗೆ ದಾಳಿ ಮಾಡುತ್ತಾರೆ. ನಾಳೆ, ನಾಡದ್ದು ಗೊತ್ತಿಲ್ಲ. ಆದರೆ ರಜಾಕಾರರ ನಿರೀಕ್ಷೆಯಲ್ಲಿಯೇ ಊರು ದಾಳಿಯನ್ನು ಆವಾಹಿಸಿಕೊಳ್ಳುತ್ತದೆ. ಊರ ಜನರ ಮನಸ್ಸು ರಜಾಕಾರರು ಬರುವುದಕ್ಕಿಂತ ಮೊದಲೇ ದಾಳಿ ನಡೆದು ಹೋಗಿದೆಯೋ ಏನೋ ಎಂಬಂತಾಗಿರುತ್ತದೆ. ಹಳ್ಳಿ ಹಳ್ಳಿಗಳ ಜನಸಮುದಾಯಗಳ ಒಳಗೇ ನೂರಾರು ಜನ ರಜಾಕಾರರಿರುತ್ತಾರೆ. ಈ ರಜಾಕಾರರ ವಿರುದ್ಧವೇ ನಿರಂತರ ಹೋರಾಟ ನಡೆದಿರುತ್ತದೆ. ಸಾವು ನೋವು ಅನುಭವಿಸುವವರು ಮಾತ್ರ ದುರ್ಬಲರು, ಅಮಾಯಕರು.

ಫ್ಯೂಡಲ್ ವ್ಯವಸ್ಥೆ ಮತ್ತು ಕೆಳವರ್ಗದವರು

'ಒಂದು ಊರಿನ ಕಥೆ'(ಚಂದ್ರಕಾಂತ ಕುಸನೂರು)ಯಲ್ಲಿ ಬರುವ ಚೆನ್ನಪ್ಪಗೌಡ ಎರಡು ಸಾವಿರ ಎಕರೆ ಭೂಮಿಯ ಒಡೆಯ. ಸ್ವಾತಂತ್ರ್ಯ ಹೋರಾಟದಲ್ಲಿ ನೋಡುವವರಿಗೆ ತಟಸ್ಥ ನೀತಿಯನ್ನು ಅನುಸರಿಸಿದಂತೆ ಕಂಡರೂ ಗುಪ್ತವಾಗಿ ಬ್ರಿಟಿಷರ ಸಖ್ಯ ಹೊಂದಿದ್ದ. ಹತ್ತಾರು ಹಳ್ಳಿಗಳಲ್ಲಿ ಹಬ್ಬಿದ ಭೂಮಿಯನ್ನು ಉಳುವವರು, ದುಡಿಯುವವರು ಗೌಡನ ಅಧೀನದಲ್ಲಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದಂತೆ ಆತ ತನ್ನ ಅಧೀನದಲ್ಲಿದ್ದ ಹಳ್ಳಿಗಳ ಜನರಿಗೆ ಎಚ್ಚರಿಸಿದ್ದ. ಸ್ವಾತಂತ್ರ್ಯಾ ನಂತರ ನಿಜವಾದ ಹೋರಾಟಗಾರರನ್ನು ಬದಿಗೊತ್ತಿ, ಗುಪ್ತವಾಗಿ ತಾನು ಮಾಡಿದ ಹೋರಾಟ ಸಣ್ಣದಲ್ಲವೆಂದು ಹಲವು ಸುಳ್ಳುಗಳನ್ನು ಸೃಷ್ಟಿಸಿ, ತನ್ನ ಚೇಲಾಗಳಿಂದ ಪ್ರಚಾರ ಮಾಡಿಸಿ ಜನಸಾಮಾನ್ಯ ನಂಬಿಕೆಯನ್ನು ಗಳಿಸಿಕೊಂಡು ಮುನ್ನೆಲೆಗೆ ಬಂದ. ಮಠದ ಸ್ವಾಮಿಗಳ ಉಪಯೋಗ ಪಡೆದು ಚೆನ್ನಪ್ಪ ಗೌಡನ ಹೆಂಡತಿ ಸಾವಿತ್ರಿ ಚುನಾವಣೆಯಲ್ಲಿ ಗೆದ್ದು ಎಂ.ಪಿ. ಆದಳು. ಸ್ವಾತಂತ್ರ್ಯಪೂರ್ವದಲ್ಲೂ, ಸ್ವಾತಂತ್ರ್ಯಾನಂತರದಲ್ಲೂ ಗೌಡ ತನ್ನ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಲಿಲ್ಲ. ರಾಜಕೀಯ ಸ್ಥಿತ್ಯಂತರಗಳು ಗೌಡನನ್ನು ಅಲುಗಾಡಿಸಲಿಲ್ಲ. ಎರಡು ಸಾವಿರ ಎಕರೆ ಭೂಮಿಯನ್ನು ಉಳುತ್ತಿದ್ದ ನೂರಾರು ರೈತರು ನಿಷ್ಠೆಯಿಂದ ದುಡಿದು ಗೌಡನಿಗೆ ಬೆಳೆ ತಂದುಕೊಡುತ್ತಿದ್ದರು. ಟೆನೆನ್ಸ್ ಕಾಯಿದೆ ಬಂದಾಗ ಗೌಡ ವಿಚಲಿತನಾಗಲಿಲ್ಲ. ಉಳುವ ರೈತರು ಕಾಯ್ದೆ ಜಾರಿಯಾದ ಸುದ್ದಿ ಕೇಳಿ ಕನಸು ಕಂಡರು. ತಾವು ಉಳುತ್ತ ಬಂದಿರುವ ಭೂಮಿಯನ್ನು ಪಡೆಯಲು ಪ್ರಯತ್ನಿಸಿ ಗೌಡರಿಂದ ನೋವು-ಸಾವು ಅನುಭವಿಸಿದರು. ಉಳುವವನೇ ಭೂಮಿಯ ಒಡೆಯನೆಂದು ತಿಳಿದ ಶಾಂತಪ್ಪನೆಂಬ ರೈತ ಮುಖಂಡ ಗೌಡರ ಬಂದೂಕಿಗೆ ಬಲಿಯಾದ. ಸರಕಾರದ ಮಂತ್ರಿಗಳು, ಜಿಲ್ಲೆಯ ಎಂ.ಪಿ.ಯಾದ ಸಾವಿತ್ರಿ ಮತ್ತು ಗೌಡರು ನಿರಾತಂಕವಾಗಿದ್ದರು. ಸ್ವತಂತ್ರ ಭಾರತದ ಸರಕಾರದಲ್ಲಿ ಜಮೀನ್ದಾರರು ಒಳ್ಳೆಯ ಸ್ಥಾನವನ್ನು ಪಡೆದುಕೊಂಡರು.

ಸ್ವಾತಂತ್ರ್ಯೋತ್ತರ ಕಾಲದ ರಾಜಕೀಯ, ಸಾಮಾಜಿಕ ಬದುಕಿನ ಬಿಕ್ಕಟ್ಟುಗಳನ್ನು, ತಲ್ಲಣಗಳನ್ನು ಈ ಕಥೆ ನಗ್ನವಾಗಿ ಹೇಳುತ್ತದೆ. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಹೈದರಾಬಾದ್ ಕರ್ನಾಟಕಕ್ಕೆ ಸಿಗಬೇಕಾದ ಕನಿಷ್ಠ ರಾಜಕೀಯ ಸೌಲಭ್ಯಗಳು ಸಿಗದೆ 'ಹಿಂದುಳಿದ ಪ್ರದೇಶ' ಎಂದು ಕರೆಸಿಕೊಂಡಿದೆ. ಇದಕ್ಕೆ ಅನೇಕ ಕಾರಣಗಳು ಇದರ ಒಡಲಲ್ಲೇ ಇವೆ. ಈ ಪ್ರದೇಶವನ್ನು ರಾಜಕೀಯವಾಗಿ ಬ್ರಿಟಿಷರು ಆಳಿದರು, ನಿಜಾಮನೂ ಆಳಿದ ಎಂಬುದು ಹೆಸರಿಗೆ ಮಾತ್ರ. ನಿಜವಾಗಿ ಆಳಿದ್ದು ಜಮೀನ್ದಾರರು. ಎರಡೆರಡು ಸಾವಿರ ಎಕರೆಯ ಜಮೀನ್ದಾರರಾದ ದೇಸಾಯಿ, ಗೌಡ, ನಾಯಕದೊರೆ ಇವರೇ ಜನಸಾಮಾನ್ಯರನ್ನು ಆಳಿದ್ದು. ಸ್ವಾತಂತ್ರ್ಯಪೂರ್ವದಲ್ಲಿ ಈ ಜಮೀನ್ದಾರರು ಜನಸಾಮಾನ್ಯರನ್ನು ಹೇಗೆ ನೋಡುತ್ತಿದ್ದರೋ, ಸ್ವಾತಂತ್ರ್ಯೋತ್ತರದಲ್ಲಿ ರಾಜಕೀಯ ಅಧಿಕಾರ ಪಡೆದ ಮೇಲೆಯೂ ಹಾಗೇ ನೋಡಿದರೇ ಹೊರತು ದೃಷ್ಟಿ ಬದಲಾಯಿಸಲಿಲ್ಲ. ಆಗ ಕೇವಲ ಫ್ಯೂಡಲ್‌ಗಳಾಗಿದ್ದರು. ಈಗ ಅಧಿಕಾರ ಹಿಡಿದ ರಾಜಕಾರಣಿಗಳೂ ಆದರು. ಜನಸಾಮಾನ್ಯರಿಗೆ ಅವರು ಸ್ಪಂದಿಸುವ ಕ್ರಿಯೆಯಲ್ಲಿ ಯಾವ ಬದಲಾವಣೆಗಳಾಗಲಿಲ್ಲ, ಇದು ವಸ್ತುಸ್ಥಿತಿ. ಈ ಪ್ರದೇಶದ ದುರಂತ. ಎಪ್ಪತ್ತರ ದಶಕದವರೆಗೆ ಈ ಪ್ರದೇಶದ ಜನಸಾಮಾನ್ಯರಲ್ಲಿ ರಾಜಕೀಯ ಪ್ರಜ್ಞೆ ಕಾಣಿಸಿಕೊಳ್ಳಲಿಲ್ಲ. ಭೂ ಸುಧಾರಣೆ ಕಾಯ್ದೆ ಬಂದರೂ ಈ ಪ್ರದೇಶದಲ್ಲಿ ಹೇಳಿಕೊಳ್ಳುವಂಥ ಬದಲಾವಣೆಗಳು ಕಾಣಿಸಿಕೊಳ್ಳಲಿಲ್ಲ. ದಲಿತ ಚಳುವಳಿ ಸುರುವಾದ ಮೇಲೆ, ಕೆಳವರ್ಗದವರಲ್ಲಿ ಕೆಲವರು ರಾಜಕೀಯ ಸೇರತೊಡಗಿದರು. ಅಂಥವರು ರಾಜಕೀಯ ಸೇರಿದಾಗಲೂ ವೈಯಕ್ತಿಕವಾಗಿ ಅವರಿಗೆ ಅಧಿಕಾರ ಸಿಕ್ಕಿತೇ ವಿನಾ ಅವರ ಸಮುದಾಯಕ್ಕಲ್ಲ. ಆದರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕನಿಷ್ಠ ರಾಜಕೀಯ ಸೌಲಭ್ಯಗಳನ್ನು ಪಡೆಯುವ ಹಕ್ಕು ಹೊಂದಿದ್ದಾರೆಂಬ ಪ್ರಜ್ಞೆ ಬೆಳೆದುದು ತಡವಾಗಿಯೇ ಎಂದು ಕಾಣುತ್ತದೆ. ರಾಜಕೀಯ ವಲಯದಲ್ಲಿ ಸೇರಿ ಮುಂಚೂಣಿಗೆ ಬಂದ ನಾಯಕರಿಗೆ ಈ ಪ್ರದೇಶದ ರಾಜಕೀಯ, ಸಾಮಾಜಿಕ ಚರಿತ್ರೆಯ ಪ್ರಜ್ಞೆ ಬಂದಿದೆಯೇ? ಬಂದಿದ್ದರೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಈ ಪ್ರದೇಶ 'ಹಿಂದುಳಿದ ಪ್ರದೇಶ' ಎಂದು ಕರೆಸಿಕೊಳ್ಳುವ ಸ್ಥಿತಿಯಲ್ಲಿ ಖಂಡಿತ ಇರುತ್ತಿರಲಿಲ್ಲ.

ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂತು. ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಬಂತು. ರಾಜಕೀಯ ಸಾಮಾಜಿಕ ರಂಗದಲ್ಲಿ ಬದಲಾವಣೆಗಳು ಕಾಣಿಸಲಾರಂಭಿಸಿದವು. ಈ ಬದಲಾವಣೆಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಸಮಸ್ಯೆಗಳು ಉದ್ಭವವಾದವು. ಅವುಗಳನ್ನು ಜನಸಾಮಾನ್ಯರು ಎದುರಿಸಲು ಪಟ್ಟಪಾಡುಗಳ ವಾಸ್ತವ ಚಿತ್ರಣ ಅನೇಕ ಕಥೆಗಳಲ್ಲಿದೆ. ಗೌಡ, ಶಾನುಭೋಗ, ಸಾಮಾನ್ಯರು, ದಲಿತರಿಂದ ತುಂಬಿದ ಹಳ್ಳಿ ಒಂದು ಬಗೆಯ ಸಂಘರ್ಷ ಹೀನ ಹೊಂದಾಣಿಕೆಯ ಜೀವನ ವ್ಯವಸ್ಥೆಯನ್ನು ರೂಪಿಸಿಕೊಂಡಿತ್ತು. ಪ್ರಜಾಪ್ರಭುತ್ವ ಬಂದ ಮೇಲೆ ರಾಜಕೀಯವಾಗಿ ಅನೇಕ ಕಾಯ್ದೆ, ಕಾನೂನುಗಳು ಜಾರಿಗೆ ಬಂದವು. ಭೂಸುಧಾರಣೆ ಕಾಯ್ದೆ ಬಂದ ಬಳಿಕ ಜಮೀನ್ದಾರರ ಮತ್ತು ಉಳುವವರ ನಡುವೆ ಸಂಘರ್ಷಕ್ಕೆ ಕಾರಣವಾಯಿತು. ರಾಜಕೀಯ ಸೌಲಭ್ಯಗಳು ಯಾರನ್ನು ತಲುಪಬೇಕೋ ಅವರನ್ನು ತಲುಪದೆ ಸಾಮಾಜಿಕ ಬದುಕನ್ನು ಕದಡಿದವು. ಹೀಗೆ ಬದಲಾವಣೆಯ ಪರಿಣಾಮಗಳು ವಿಕೃತ ರೂಪದಲ್ಲೇ ಕಾಣಿಸಿಕೊಂಡವು. ಸ್ಥಿತ್ಯಂತರ ಕಾಲದಲ್ಲಿ ಇದು ಸಹಜವಾದ ಪ್ರಕ್ರಿಯೆಯೇ ಅನ್ನಿಸುತ್ತದೆ. ಈ ಸಂದರ್ಭದ ತಲ್ಲಣಗಳನ್ನು ಚಂದ್ರಕಾಂತ ಕುಸನೂರರ ಕಥೆಗಳು ಕಾಣಿಸಿವೆ.

ಸ್ವಾತಂತ್ರ್ಯಾನಂತರ ಜಮೀನ್ದಾರರು ಸ್ವತಂತ್ರ ಭಾರತದ ರಾಜಕೀಯದಲ್ಲೂ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡ ಮೇಲೆ ಜನಸಾಮಾನ್ಯರ ಪರಿಸ್ಥಿತಿ ಹೇಗಾಯಿತು ಎಂಬುದನ್ನು 'ಒಂದು ಊರಿನ ಕಥೆ' (ಚಂದ್ರಕಾಂತ ಕುಸನೂರು) ಹೇಳುತ್ತದೆ. ಊರಿಗೆ ಶಾಲೆ ಬಂದು ಜನಸಾಮಾನ್ಯರು ಅಕ್ಷರ ಕಲಿತರೆ ಅದರಿಂದ ಉಂಟಾಗುವ ಪರಿಣಾಮಗಳನ್ನು ನೆನೆಸಿಕೊಂಡ ಊರಾಳುವವರು ಶಾಲೆಯನ್ನು ಊರೊಳಗೆ ಬರದಂತೆ ಮಾಡುತ್ತಾರೆ. ವಿದ್ಯೆ ಊರೊಳಗೆ ಎಲ್ಲಿಯವರೆಗೆ ಕಾಲಿಡುವುದಿಲ್ಲವೋ ಅಲ್ಲಿಯವರೆಗೆ ನಾವು

ಸುರಕ್ಷಿತವಾಗಿ ಉಳಿಯುತ್ತೇವೆ ಎಂದು ಅರಿತ ಆಳುವವರು ಶಾಲೆಯನ್ನು ಓಡಿಸಿ 'ನಾವು ಮುಂದ್ ಬರ್‍ಯಾದಂತ ಸರಕಾರ ನಮ್ಮೂರಾಗ ಸಾಲೀ ತೆಗೀಲಿಕತ್ತರ' ಎಂದು ಆಧುನಿಕತೆಯನ್ನೇ ದೂರುತ್ತಾರೆ. ಈ ಚಿತ್ರಣ **'ಯಳವಂತಿ'** (ಚಂದ್ರಕಾಂತ ಕುಸನೂರು) ಕಥೆಯಲ್ಲಿದೆ. ಅಪ್ಪಣ್ಣಗೌಡ ಮಾಡುವ ಅನೇಕ ಅನ್ಯಾಯಗಳಿಗೆ ಜನಸಾಮಾನ್ಯರು ಬೇಸತ್ತರೂ ಅವನನ್ನು ಎದುರಿಸುವ ಧೈರ್ಯ ಯಾರಿಗೂ ಬರುವುದಿಲ್ಲ. ಸಾಮೂಹಿಕ ಹೋರಾಟಕ್ಕೆ ಊರು ಪಕ್ವಗೊಳ್ಳಲು ಸಾಧ್ಯವಾಗುವುದಿಲ್ಲ. ಒಡೆದು ಆಳುವ ನೀತಿ ಪ್ರಭುತ್ವ ಶಕ್ತಿಗೆ ಕರಗತವಾಗಿರುತ್ತದೆ. ಇದರಿಂದ ಜನಸಾಮಾನ್ಯರು ಮೂಕವಾಗಿ ನೋವನ್ನು ಅನುಭವಿಸುತ್ತಾರೆ. 'ಕಾಗೆ' (ಚಂದ್ರಕಾಂತ ಕುಸನೂರು) ಕಥೆಯಲ್ಲಿ ಅನಂತ ಮತ್ತು ಅವನ ಹೆಂಡತಿ, ಗೌಡರ ದರ್ಪಕ್ಕೆ ಬೇಸತ್ತು ಊರು ಬಿಡುವುದು ಕೇವಲ ನಿದರ್ಶನವಾಗುತ್ತದೆ. ಗೌಡರ ದುಷ್ಟತನವನ್ನು ನೋಡುವ ಹಳ್ಳಿ, ತನ್ನ ನೈತಿಕ ಸ್ಥೈರ್ಯವನ್ನೇ ಕುಂದಿಸಿಕೊಂಡ ದಾರುಣ ಚಿತ್ರ ಈ ಕಥೆಯಲ್ಲಿದೆ. ಅನೇಕ ಕಥೆಗಳಲ್ಲಿ ಇದೇ ಬಗೆಯ ಚಿತ್ರಗಳಿವೆ. ಹಣ, ಜಾತಿ ಮತ್ತು ಧರ್ಮದ ಬಲದಿಂದ ಗೌಡ, ಸಾಹುಕಾರ, ದೇಸಾಯಿ ಎಂಬ ಊರಾಳುವ ಶಕ್ತಿಗಳು ದುಡಿಯುವ ಹೆಂಗಸರನ್ನು, ಗಂಡಸರನ್ನು ಒಟ್ಟು ಕೆಳವರ್ಗದ ಸಮುದಾಯವನ್ನು ಶೋಷಣೆಗೆ ಗುರಿಮಾಡುತ್ತವೆ. ದುಡಿಯುವ ಮತ್ತು ದುಡಿಸಿಕೊಳ್ಳುವ ಎರಡು ಶಕ್ತಿಗಳ ಮಧ್ಯ ಸಂಘರ್ಷ ಆರಂಭವಾಗುತ್ತದೆ. ಫ್ಯೂಡಲ್‌ಗಳ ದರ್ಪ, ಕ್ರೌರ್ಯಗಳಿಗೆ ದುಡಿಯುವ ವರ್ಗ ಬಲಿಯಾಗುತ್ತಾ ಹೋಗುತ್ತದೆ.

'ಹೊಲಗೇರಿ' (ಚೆನ್ನಣ್ಣ ವಾಲೀಕಾರ) ಕಥೆಯಲ್ಲಿ, ಶಿವರಾಯ ಮಾಸ್ತಾರನನ್ನು 'ಗೌಡರ ತಿಪ್ಪೆಯಲ್ಲಿ ಕುಳಿತು ಉಚ್ಚೆ ಹೊಯ್ದ' ಎಂಬ ನೆಪವನ್ನು ಮುಂದೆ ಮಾಡಿ, ಗೌಡನ ಜೀತದಾಳುಗಳು ಹೊಡೆದುಕೊಲ್ಲುತ್ತಾರೆ. ಊರಲ್ಲಿ ಶಿವರಾಯ ಮಾಸ್ತರ ಕೆಳವರ್ಗದ 'ಮಾದಿಗರು' ಮತ್ತು 'ಹೊಲೆಯರು' ಶಿಕ್ಷಣ ಪಡೆದು ಮುಂದೆ ಬರಲಿ ಎಂದು ಶ್ರಮಿಸಿದವನು. ಆದರೆ ಇದೇ ಜನ ಮಾಸ್ತರನನ್ನು ಹೊಡೆದು ಕೊಲ್ಲುತ್ತಾರೆ. ಇದರಲ್ಲಿ ಗೌಡನ ಕೈ ಇರುತ್ತದೆ. ಆದರೆ ಕೆಳವರ್ಗದ ಜನರಿಗೆ ಈ ಘಟನೆಯಲ್ಲಿ ಗೌಡನ ಕೈ ಇದೆ ಎಂಬ ಪ್ರಜ್ಞೆಯಾಗಲಿ, ಶಿವರಾಯ ಮಾಸ್ತಾರ ನಮ್ಮ ಉದ್ಧಾರಕ್ಕಾಗಿ ಶ್ರಮಿಸುತ್ತಿದ್ದ ಎಂಬ ಪ್ರಜ್ಞೆಯಾಗಲಿ ಜಾಗೃತಗೊಳ್ಳುವುದಿಲ್ಲ. ಜಾಗೃತಗೊಳ್ಳದಂತೆ ಗೌಡ ಎಚ್ಚರ ವಹಿಸುತ್ತಿರುತ್ತಾನೆ. ಊರಲ್ಲಿ ಬಂಡೆಪ್ಪ ಸಾಹುಕಾರ, ಮಾಲಿಗೌಡರ ಬಸಪ್ಪ ಮತ್ತು ಕುಲಕರ್ಣಿ ಭೀಮಪ್ಪ ಇವರು ಆರ್ಥಿಕವಾಗಿ ಬಲವುಳ್ಳವರು. ಕೆಳವರ್ಗದವರೆಲ್ಲ ಇವರ ಅಧೀನದಲ್ಲಿದ್ದು ದುಡಿದು ತಿನ್ನುವವರು. ಸಾಹುಕಾರ, ಗೌಡ, ಕುಲಕರ್ಣಿ ಇವರು ಯಾವ ವಿಷಯದಲ್ಲೂ ಒಂದಾಗುತ್ತಾರೆ. ಯಾವ ವಿಷಯದಲ್ಲಿ ಬೇರೆಯಾಗುತ್ತಾರೆ ಮತ್ತು ಇವರಲ್ಲೇ ವೈಮನಸ್ಸು ಬಂದರೆ ಯಾರು ಒಂಟಿಯಾಗುತ್ತಾರೆ, ಯಾರು ಯಾರು ಒಂದಾಗುತ್ತಾರೆ ಎಂಬುದು ಹೊರಗಿನ ಮಂದಿಗೆ ತಿಳಿಯುವುದಿರಲಿ, ಅವರಿಗೇ ಅದು ಗೊತ್ತಾಗುತ್ತಿರಲಿಲ್ಲ. ಎಲ್ಲವೂ ಸಮಯ ಸಂದರ್ಭವನ್ನು ಅವಲಂಬಿಸಿರುತ್ತಿತ್ತು. ಇದರಿಂದ ಈ ಮೂವರಿಗೆ ಅಂಥ ತೊಂದರೆ ಬಿಕ್ಕಟ್ಟುಗಳು ಬರುತ್ತಿರಲಿಲ್ಲ. ಆದರೆ ಇವರ ಅಧೀನದಲ್ಲಿದ್ದ ಕೇರಿಯ ಮಾದಿಗರಿಗೆ, ಹೊಲೆಯರಿಗೆ ಸಂಕಷ್ಟಗಳು ಇದರಿಂದ ಹೆಚ್ಚಾಗುತ್ತಿದ್ದವು. ಹೊಟ್ಟೆಯ ಪಾಡಿಗಾಗಿ ಈ ಮೂವ್ವರಲ್ಲಿ ಯಾರನ್ನಾದರೂ ನಂಬಿ ಅವರ ಪಕ್ಷದಲ್ಲಿದ್ದು ಬದುಕಬೇಕು. ಯಾವುದೇ ವಿಷಯದಲ್ಲಿ ಈ ಮೂವ್ವರಲ್ಲಿ ಜಗಳ ಸುರುವಾದರೆ ಹೊಡೆದಾಡುವುದಕ್ಕೆ ಅವರಿಗೆ ಹೊಲೆಯರು, ಮಾದರು ಬೇಕಾಗುತ್ತಿತ್ತು. ಇದರ ಪರಿಣಾಮವಾಗಿ ಉಂಟಾದ ಸಾವು-ನೋವುಗಳನ್ನು ಅನುಭವಿಸುವವರು ಅಂತಿಮವಾಗಿ ಈ ಕೆಳವರ್ಗದ ಜನರೇ. ಇಂಥ ಸಾವು ನೋವುಗಳಿಗೆ ಕಾರಣರಾದವರು ಇವರನ್ನು ಬಳಸಿಕೊಳ್ಳುತ್ತಾರೆಯೇ ಹೊರತು ಕರುಣೆಯಿಂದ ಸ್ಪಂದಿಸುವುದಿಲ್ಲ. ಶಿವರಾಯ ಮಾಸ್ತಾರ ಇಂಥ ಪ್ರಜ್ಞೆಯನ್ನು ಮೂಡಿಸಲು ಕೆಳವರ್ಗದವರ ಪರವಾಗಿ ಜವಾಬ್ದಾರಿಯಿಂದ ಶ್ರಮಿಸಿದರೂ ಇದು ಕೆಳವರ್ಗದವರಿಗೆ ಅರ್ಥವಾಗುತ್ತಿರಲಿಲ್ಲ. ಈ ಮಾಸ್ತಾರನ ಶಿಷ್ಯ ರಾಯ ಕೂಡ ಮಾಸ್ತಾರನ ಹಾದಿಯಲ್ಲಿ ನಡೆದರೂ ಅವನಿಗೆ ಜನರ ಬೆಂಬಲ ಸಿಗುತ್ತಿರಲಿಲ್ಲ. ರಾಯನಿಗೆ ಚೆನ್ನಗೊಂಡನ ಬೆಂಬಲವಿತ್ತು. ಗೌಡ, ಸಾಹುಕಾರ, ಕುಲಕರ್ಣಿ ಶೋಷಣೆ ಮಾಡುತಾರೆ ಎಂಬ ಪ್ರಜ್ಞೆ ಕೆಳವರ್ಗದವರಲ್ಲಿ ಮೂಡಿಸುವುದು ಮತ್ತು

ಕೆಳವರ್ಗದಲ್ಲಿ ಒಗ್ಗಟ್ಟು ಬೆಳೆಸುವುದು ರಾಯನಿಗಾಗಲಿ, ಚೆನ್ನಗೊಂಡನಿಗಾಗಲಿ ಸುಲಭವಾಗಲಿಲ್ಲ. ಅವರ ಶ್ರಮ ಸಾರ್ಥಕವಾಗುವ ಹೊತ್ತಿಗೆ ಕೆಳವರ್ಗದವರಲ್ಲೇ ಕಾದಾಟ ನಡೆಯುತ್ತಿತ್ತು. ಕೆಳವರ್ಗದವರಲ್ಲೇ 'ಹೊಲೆಯರು' ಮತ್ತು 'ಮಾದಿಗರು' ನಡುವೆ ಮೇಲು-ಕೀಳು ಎಂಬ ಭೇದವನ್ನು ಗೌಡ, ಸಾಹುಕಾರ, ಕುಲಕರ್ಣಿ ಸೃಷ್ಟಿಸಿ ಜಗಳಕ್ಕೆ ಹಚ್ಚುತ್ತಿದ್ದರು. ಅದನ್ನು ಅರಿಯದೆ ಕೆಳವರ್ಗದವರು ಹೊಡೆದಾಡಿ ಪೊಲೀಸ್, ಕೋರ್ಟು, ಜೈಲು ಎಂದು ಪರದಾಡಿ ಪುನಃ ಅದೇ ಮೇಲ್ವರ್ಗದವರ ಮೊರೆಹೋಗಿ ಶರಣಾಗುತ್ತಿದ್ದರು. ಇದರಿಂದ ಮೇಲ್ವರ್ಗದವರು ನಿರಂತರವಾಗಿ ಕೆಳವರ್ಗದವರ ಮೇಲೆ ಅಧಿಕಾರ ಉಳಿಸಿಕೊಂಡಿರಲು ಸಾಧ್ಯವಾಗಿತ್ತು. ಊರಲ್ಲಿ ಯಾರದೋ ಭೂಮಿ ಕಸಿಯುವುದು, ಬೇರೆ ಹೆಂಗಸರನ್ನು ಭೋಗಿಸುವುದು ಸಾಮಾನ್ಯ ಸಂಗತಿಗಳಾಗಿದ್ದವು. ರಾಯನ ತಾಯಿಯನ್ನೇ ಬಂಡೆಪ್ಪ ಸಾಹುಕಾರ ಅತ್ಯಾಚಾರ ಮಾಡಿದ್ದ. ಇದು ಉದಾಹರಣೆ ಅಷ್ಟೇ. ಶಿವರಾಯ ಮಾಸ್ತಾರ ಸತ್ತ ಮೇಲೆ ರಾಯ, ಚೆನ್ನಗೊಂಡ, ಅದೇ ನೆಪಮಾಡಿಕೊಂಡು ಕೆಳವರ್ಗದ ಜನರಿಗೆ 'ನಿಮಗಾಗಿ ಮಾಸ್ತಾರ ಸತ್ತ' ಎಂದು ಬಗೆಬಗೆಯಾಗಿ ತಿಳಿಹೇಳಿ ಪ್ರಜ್ಞೆ ಮೂಡಿಸುತ್ತಿದ್ದರೂ, ಕೆಳವರ್ಗದವರು ಮೇಲ್ವರ್ಗದವರು ಎಸೆಯುವ ರೊಟ್ಟಿಗಾಗಿ ಪುನಃ ಅವರಂತೆ ಕೇಳುತ್ತ ರಾಯನಿಗೆ, ಚೆನ್ನಗೊಂಡನಿಗೇ ಸಮಸ್ಯೆಗಳನ್ನು ತಂದೊಡ್ಡುತ್ತಿದ್ದರು. ತುಂಡು ಬೀಡಿಗಾಗಿ, ಗುಟುಕು ಹೆಂಡಕ್ಕಾಗಿ ಕೆಳವರ್ಗದವರು ಮೇಲ್ವರ್ಗದವರ ಮಾತು ಕೇಳಿ ಶೋಷಣೆಗೆ ಒಳಗಾಗುತ್ತಿದ್ದರೆ ಹೊರತು ಎಚ್ಚೆತ್ತುಕೊಳ್ಳುತ್ತಿರಲಿಲ್ಲ. ಕೊನೆಗೆ ಶಿವರಾಯ ಮಾಸ್ತಾರನಿಗೆ ಆದಂತೆ ರಾಯನನ್ನು ಗೌಡನೇ ಕಾಳ್ಯಾನಿಂದ ಹೊಡೆಸಿ ಕೊಲ್ಲಿಸುತ್ತನೆ. ಕಥೆಯಲ್ಲಿ ಮೇಲ್ವರ್ಗದವರ ಕ್ರೌರ್ಯ, ಕೆಳವರ್ಗದವರು ಅಸಹಾಯಕತೆಯಿಂದ ಸಾವು-ನೋವಿಗೆ ಬಲಿಯಾಗುವ ಅನೇಕ ಪ್ರಸಂಗಗಳು ಬರುತ್ತವೆ. ಮೇಲ್ವರ್ಗದವರು ಕೆಳವರ್ಗದ ಗಂಡಸರನ್ನು ಜೀತದಾಳುಗಳನ್ನಾಗಿಸಿ ಹೆಂಗಸರನ್ನು ಲೈಂಗಿಕವಾಗಿ ಶೋಷಣೆ ಮಾಡುವ ಚಿತ್ರಣವು ಈ ಕಥೆಯಲ್ಲಿ ದಟ್ಟವಾಗಿ ಮೂಡಿ ನಿಂತಿದೆ.

'ಅಡಿ ಜಾತಿ' (ಚೆನ್ನಣ್ಣ ವಾಲೀಕಾರ) ಕಥೆಯಲ್ಲೂ ಇದೇ ತುಂಬಿದೆ. ಹಾಗೆ ನೋಡಿದರೆ ಈ ಕಥೆ ಲಮಾಣಿ ತಾಂಡಾವೊಂದು ಅಡವಿಯಿಂದ ಊರು ಸೇರಿಯೇ ನಾಶವಾದ ದುರಂತವನ್ನು ಹೇಳುತ್ತದೆ. ಜಯ್ರಾಮ ತಾಂಡಾದ ಹಿರಿಯನಾಗಿ ತನ್ನ ದೊಡ್ಡ ಕಳ್ಳುಬಳ್ಳಿಯ ಜತೆಗೆ ಇತರ ಕುಲಬಂಧುಗಳೊಂದಿಗೆ ಅಡವಿಯಲ್ಲಿದ್ದು, ತಮ್ಮ ಪೂರ್ವಜರಿಂದ ಉಳಿದಿದ್ದ ಅಲ್ಪಸ್ವಲ್ಪ ಭೂಮಿಯನ್ನೇ ಉತ್ತಿ ಬಿತ್ತಿ ಬೆಳೆದು ಬದುಕಿದ್ದವನು. ಅಡವಿಯಲ್ಲಿದ್ದ ನಿರುಪದ್ರವಿ ಸಮುದಾಯ ಒಂದು ಸಂದರ್ಭದಲ್ಲಿ ಸಮೀಪದ ಸರಡಗಿ ಎಂಬ ಊರನ್ನು ಸೇರುತ್ತದೆ. ಇಲ್ಲಿಂದಲೇ ಜಯ್ರಾಮನ ತಲ್ಲಣಗಳು ಸುರುವಾಗುತ್ತವೆ. ಅವನ ಮಕ್ಕಳು, ಸೊಸೆಯರು, ಮೊಮ್ಮಕ್ಕಳು, ಅವನ ಕುಲದ ಮಂದಿ ಅಡವಿಯಿಂದ ಊರು ಸೇರಿದ್ದೇ ತಡ ಬದುಕಿನ ಲಯವನ್ನೇ ಬದಲಾಯಿಸಿಕೊಂಡು ಬಿಡುತ್ತಾರೆ. ಜನ, ರಸ್ತೆ, ಹೋಟಲು, ವಾಹನ, ಇವುಗಳ ಸಂಪರ್ಕದಿಂದ ಈ ಜನರಿಗೆ ಹಣದ ಅವಶ್ಯಕತೆ ಬೀಳುತ್ತದೆ. ಇದರಿಂದ ಗಂಡಸರು ಬೇರೆ ಬೇರೆ ಸೆಳೆತಕ್ಕೆ ಒಳಗಾಗುತ್ತಾರೆ. ಊರ ರಾಜಕೀಯವೂ ಇವರ ಮೇಲೆ ಇಲ್ಲದ ಒತ್ತಡ ಹೇರುತ್ತದೆ. ಜಯ್ರಾಮನು ತನ್ನ ಕಣ್ಣಮುಂದೆ ಬಳಗವೆಲ್ಲ ತನ್ನ ಕೈಮೀರಿ ಹೋಗುವುದನ್ನು ನೋಡಿ ವ್ಯಥೆಪಡುತ್ತಾನೆ. ಊರಲ್ಲಿ ಕುಲಕರ್ಣಿ ರಾಮ್ರಾಯ, ಮಾಲಿಗೌಡ ಭೀಮ್ರಾಯ ಎಂಬ ಉಳ್ಳವರ ಮಧ್ಯ ಬದುಕುವ ಸಂದರ್ಭದಲ್ಲಿ, ಯಾರನ್ನಾದರೂ ಆಯ್ಕೆ ಮಾಡಿಕೊಳ್ಳುವ ಅನಿವಾರ್ಯ ಸ್ಥಿತಿ ಬರುತ್ತದೆ. ಈ ನಡುವೆ ಊರಲ್ಲಿ ಒಂದು ಘಟನೆ ಸಂಭವಿಸುತ್ತದೆ. ಕುಲಕರ್ಣಿ ರಾಮ್ರಾಯನ ತಂಗಿ ವಿಧವೆ ಸರಳಾ ಜೀಪ್ ಡ್ರೈವರ್ ಹುಸೇನಿಗೆ ಬಸುರಾಗುತ್ತಾಳೆ. ಅದು ಹೊರ ಬೀಳುವ ಮುನ್ನ ಸಾವಿಗೆ ತುತ್ತಾಗುತ್ತಾಳೆ. ಅದು ಹುಸೇನಿಯ ಮೇಲೆ ಬಂದಾಗ, ಅದರಿಂದ ತಪ್ಪಿಸಿಕೊಳ್ಳಲು ಜಯ್ರಾಮನ ಮೊಮ್ಮಗ ಕಾಶ್ಯಾನ ಮೇಲೆ ಹೊರಿಸಿಬಿಡುತ್ತಾನೆ. ದರ್ಪದ ಕುಲಕರ್ಣಿ ಹಿಂದೆ ಮುಂದೆ ನೋಡದೆ ನಿರಪರಾಧಿ ಕಾಶ್ಯಾನನ್ನು ಹೊರಿಸಿ ತಂದು, ತಂಗಿಯ ಹೆಣದ ಜತೆ ಸುಟ್ಟುಬಿಡುತ್ತಾನೆ. ಅಷ್ಟಕ್ಕೂ ಸಿಟ್ಟು ಇಳಿಯದೆ ತನ್ನ ತಂಗಿ ಮಾಡಿದ ಅಪರಾಧದಿಂದ ಊರಲ್ಲಿ ಮಾನ ಕಳೆದುಕೊಂಡ ಸಿಟ್ಟಿಗೆ, ಜಯ್ರಾಮನ ಭೂಮಿಯನ್ನೇ ಕಸಿದುಕೊಂಡು ಬಿಡುತ್ತಾನೆ. ಜಯ್ರಾಮ ಆಕಸ್ಮಿಕವಾಗಿ ಒದಗಿದ ಈ ಪ್ರಹಾರದಿಂದ ತತ್ತರಿಸಿ ಹೋಗುತ್ತಾನೆ. ಕುಲಕರ್ಣಿಯ ಸಿಟ್ಟು ಜಯ್ರಾಮನನ್ನು ಸಾವಿಗೆ

ತಳ್ಳುತ್ತದೆ. ಅವನ ಸೊಸೆಯಂದಿರು ವಯಸ್ಸಾಗಿದ್ದರೂ ಕುಲಕರ್ಣಿ ಬಿಡದೆ ಹೊರಿಸಿಕೊಂಡು ತಂದು ಭೋಗಿಸುತ್ತಾನೆ. ಕೊನೆಗೆ ಜಯ್ರಾಮನ ಮಂದಿ ಊರು ಬಿಟ್ಟು ಬಂಬಾಯಿಗೆ ಹೋಗುತ್ತಾರೆ. ಚೂಣ್ಯಾ ಮತ್ತು ಅವನ ಹೆಂಡತಿ ಸೋನಿ ಮಾತ್ರ ಉಳಿದುಕೊಳ್ಳುತ್ತಾರೆ. ಸೋನಿಯನ್ನು ಭೋಗಿಸಲು ಊರಲ್ಲಿ ಕುಲಕರ್ಣಿ ರಾಮ್ರಾಯ ಮತ್ತು ಮಾಲೀಗೌಡ, ಭೀಮ್ರಾಯ ಇವರ ಮಧ್ಯ ಸ್ಪರ್ಧೆ ನಡೆದು ಕೊನೆಗೆ ಭೀಮ್ರಾಯ ಸೋನಿಯನ್ನು ವಶಪಡಿಸಿಕೊಳ್ಳುತ್ತಾನೆ. ಜಯ್ರಾಮನ ಮೊಮ್ಮಗ ಚೂಣ್ಯಾನಿಗೆ ಸಿಟ್ಟು ಬರುತ್ತದೆ. ಒಂದು ಕಡೆ ತನ್ನ ಬಳಗದ ಹೆಂಗಸರನ್ನೆಲ್ಲ ಭೋಗಿಸಿದ ಕುಲಕರ್ಣಿ, ಇನ್ನೊಂದು ಕಡೆ ತನ್ನ ಹೆಂಡತಿಯನ್ನು ಇಟ್ಟುಕೊಂಡ ಭೀಮ್ರಾಯ ಇಬ್ಬರ ಕೃತ್ಯಗಳು ಚೂಣ್ಯಾನಿಗೆ ಸಹಿಸದಾಯಿತು. ಚೂಣ್ಯಾ ಕೊನೆಗೆ ತನ್ನ ಹೆಂಡತಿಯನ್ನು ಇಟ್ಟುಕೊಂಡಿದ್ದ ಭೀಮ್ರಾಯನನ್ನು ಕೊಲ್ಲುತ್ತಾನೆ. ಅದು ಕುಲಕರ್ಣಿಯ ಮೇಲೆ ಬೀಳುತ್ತದೆ. ಪೋಲೀಸರಿಗೆ ಲಂಚ ನೀಡಿ ಅದರಿಂದ ಕುಲಕರ್ಣಿ ಪಾರಾಗುತ್ತಾನೆ. ಸೋನಿಯ ಕೊಲೆಯಾಗುತ್ತದೆ. ಅದನ್ನು ಉಪಯೋಗಿಸಿಕೊಂಡ ಕುಲಕರ್ಣಿ ಕುಡಿದು ಹೆಂಡತಿಯನ್ನು ಚೂಣ್ಯಾನೇ ಕೊಂದಿದ್ದಾನೆಂದು ಪೋಲೀಸರಿಗೆ ತಿಳಿಸಿದ್ದರಿಂದ ಚೂಣ್ಯಾ ಜೈಲಿಗೆ ಹೋಗಬೇಕಾಗುತ್ತದೆ.

ಕುಲಕರ್ಣಿ ರಾಮ್ರಾಯ ತನ್ನ ತಂಗಿ ಬಸಿರಾದದ್ದು, ಮನೆತನಕ್ಕೆ ಕಳಂಕ ಬಂದ ಸಿಟ್ಟಿಗೆ ಕಾಶ್ಯಾನನ್ನು ಜೀವಂತ ಸುಡುವುದು, ಜಯ್ರಾಮನ ಆಸ್ತಿಯನ್ನೆಲ್ಲಾ ವಶಪಡಿಸಿಕೊಳ್ಳುವುದು, ಜಯ್ರಾಮನಿಗೆ ಯಾರ ಸಹಾಯವೂ ಸಿಗದೆ ಸಾಯುವುದು, ಅವನ ಸೊಸೆಯರಿಗೆ ವಯಸ್ಸಾಗಿದ್ದರೂ ಬಲವಂತವಾಗಿ ಭೋಗಿಸುವುದು, ಕೊನೆಗೆ ಚೂಣ್ಯಾನನ್ನು ಜೇಲಿಗೆ ಕಳಿಸುವುದು ಇವು ರಾಮ್ರಾಯನ ಕ್ರೌರ್ಯಕ್ಕೆ ಸಾಕ್ಷಿಯಾಗಿವೆ. ಮೊದಲು ಮಾಲೀಗೌಡ ಭೀಮ್ರಾಯ ಮತ್ತು ರಾಮ್ರಾಯ ಜೊತೆಗೇ ಇರುತ್ತಾರೆ. ಆ ಕಾರಣದಿಂದ ಜಯ್ರಾಮನಿಗೆ ಸಹಾಯ ಸಿಗುವುದಿಲ್ಲ. ಕೆಳವರ್ಗದ ಜೀತದಾಳುಗಳೇ ಅವನ ಪರ ಒಂದಷ್ಟು ಜನ, ಇವನ ಪರ ಒಂದಷ್ಟು ಜನ ಹೊಡೆದಾಡಿ ಸಂಕಷ್ಟಕ್ಕೆ ಗುರಿಯಾಗುತ್ತಾರೆ.

'ಸೋಬಾನ' (ಬಾಲಚಂದ್ರ ಜಯಶೆಟ್ಟಿ) ಕಥೆಯಲ್ಲಿ, ಊರಿಗೆ ಸೊಸೆಯಾಗಿ ಬರುವ ಹೆಂಗಸು ತನ್ನ ಮನೆಯಲ್ಲಿ ಮೊದಲರಾತ್ರಿ ಕಳೆದು, ಗೌಡ ಕೊಡುವ 'ಚಾಜದ ಸೀರೆ' ಉಟ್ಟುಕೊಂಡೇ ಹೋಗುವ ಸಂಪ್ರದಾಯವನ್ನು ಗೌಡ ಕಡ್ಡಾಯವಾಗಿ ವಿಧಿಸಿರುತ್ತಾನೆ. ಕೆಳವರ್ಗದ ಜನರು ಇದನ್ನು ಒಪ್ಪಿಕೊಂಡು ಬಿಟ್ಟಿದ್ದರು. ಇದನ್ನು ಮುರಿಯಲು ಯಾರಾದರೂ ಪ್ರಯತ್ನಿಸಿದರೆ ಊರಲ್ಲಿ ಅವರಿಗೆ ನೆಲೆ ಇಲ್ಲದಂತಾಗುತ್ತಿತ್ತು. ವಿಚಿತ್ರವೆಂದರೆ ಗೌಡ ಷಂಡ, ನಿರ್ವೀರ್ಯನಾಗಿದ್ದ. ಜನರಿಗೂ ಇದು ಗೊತ್ತಿತ್ತು. ಆದರೆ ತನ್ನನ್ನು ನಿರ್ವೀರ್ಯನೆಂದು ಕಲ್ಪಿಸಿಕೊಳ್ಳಲು ಪ್ರತಿಷ್ಠೆ ಗೌಡನಿಗೆ ಅಡ್ಡ ಬರುತ್ತದೆ ತಾನು ವೀರ್ಯವಂತನೆಂದು, ಅದರ ಸಂಕೇತ ಎಂಬಂತೆ ಮೊದಲರಾತ್ರಿ ತನ್ನ ಹಾಸಿಗೆಯಲ್ಲಿ ನೆಪಕ್ಕೆ ಮಲಗಿಸಿಕೊಂಡು 'ಚಾಜದ ಸೀರೆ' ಯನ್ನು ಹೆಂಗಸರಿಗೆ ಉಡಿಸಿ ಕಳಿಸುವ ನಿಯಮವನ್ನು ಆತ ರೂಪಿಸಿದ್ದ. ಹೆಂಗಸರಿಗೆ 'ಕಳಂಕ' ಹೊರಿಸಿ ಕಳಿಸುತ್ತಿದ್ದ. **'ಎಲ್ಲಮ್ಮನ ಸೇವೆ'** (ಭಾಲಚಂದ್ರ ಜಯಶೆಟ್ಟಿ) ಕಥೆಯಲ್ಲಿ ಬರುವ ಗೌಡ ಕೂಡ ಷಂಡನೆ. ಕೇರಿಯ ಹರೆಯದ ಹುಡುಗಿಯರನ್ನು ಎಲ್ಲಮ್ಮದೇವಿಗೆ 'ಬೆತ್ತಲೆ ಸೇವೆ' ಮಾಡಲು ಬಲವಂತವಾಗಿ ಒಗ್ಗಿಸಿ ನಂತರ ಅವರನ್ನು ತಾನು ಉಪಯೋಗಿಸಿಕೊಳ್ಳುತ್ತಿದ್ದವನು. ಆದರೆ ಮನೆಯಲ್ಲಿ ಗೌಡನ ಹೆಂಡತಿ ಮಕ್ಕಳಿಲ್ಲದೆ ಅನ್ಯ ಪುರುಷನ ಸಂಬಂಧ ಬೆಳೆಸಲು ಯೋಚಿಸುತ್ತಿದ್ದಳು.

'ರಾಚಿ'(ಭಾಲಚಂದ್ರ ಜಯಶೆಟ್ಟಿ) ಕಥೆಯಲ್ಲಿ, ಮೇಲ್ವರ್ಗದವರು ದಲಿತರಿಗೆ 'ಉತ್ತಮ'ರಾಗುವ ಅವಕಾಶವನ್ನು ನೀಡಿ, ಅದಕ್ಕೆ ಕಠಿಣವಾದ ವಿಧಿವಿಧಾನವನ್ನು ವಿಧಿಸಿ, ವ್ರತ ಮಾಡಲು ಅಸಹಾಯಕರನ್ನಾಗಿ ಮಾಡುತ್ತಿದ್ದರು. ಕೆಲವು ದಿನಗಳಾದರೂ 'ಉತ್ತಮರಾಗಿ' ಮೇಲ್ವರ್ಗದವರ ಸರಿಸಮ ಎನಿಸಿಕೊಳ್ಳಲು ಹರಿಜನರು ಪ್ರಯತ್ನಿಸಿ ಸೋಲುತ್ತಿದ್ದರು. ಗೌಡ ಅವರು ಸೋಲುವುದನ್ನೇ ಬಯಸುತ್ತಿದ್ದ. ಮಾದ ಎಂಬುವವನು ಛಲದಿಂದ ವ್ರತ ಮಾಡಿ 'ಉತ್ತಮ'ನಾಗಲು ಯತ್ನಿಸಿದಾಗ, ಸಹಿಸದ ಗೌಡ ಅವನನ್ನು

ಕೊಲ್ಲಿಸುತ್ತಾನೆ. ನಿಯಮ ಪಾಲನೆಯಲ್ಲಿ ತಪ್ಪಿದ ಕಾರಣ ದೆವ್ವ ಹಿಡಿದು ಸತ್ತನೆಂದು ಸುದ್ದಿ ಹಬ್ಬಿಸುತ್ತಾನೆ. ಕೆಳವರ್ಗದವರು 'ಉತ್ತಮ'ನಾಗುವದನ್ನು ಗೌಡ ಸಹಿಸುವುದಿಲ್ಲ. ಕ್ರೌರ್ಯದ ಮನಸ್ಸು ಕೆಳವರ್ಗದವರನ್ನು ತುಳಿಯಲು ದಾರಿಯನ್ನು ಹುಡುಕುತ್ತಲೇ ಇರುತ್ತದೆ.

'ಗರ್ಭ'(ಗೀತಾ ನಾಗಭೂಷಣ) ಕಥೆಯಲ್ಲಿ, ಗೌರವ್ವ ಗೌಡತಿಯೇ ಚಿಕ್ಕಿ ಎಂಬ ಮುಗ್ಧ ಹುಡುಗಿಯನ್ನು ಬಲಿಯಾಗುವಂತೆ ಮಾಡುತ್ತಾಳೆ. ಗೌಡತಿ ಗೌರವ್ವಳಿಗೆ ಮಕ್ಕಳಾಗುವುದಿಲ್ಲ. ಆದರೆ ಕೇರಿಯಲ್ಲಿ ಗೌಡನ ಅಕ್ರಮ ಸಂತಾನ ಬೆಳೆಯುತ್ತಲೇ ಇದೆ. ತನ್ನ ಬಂಜೆತನ ಬಯಲಾಗಬಾರದು. ಗೌಡನ ವೀರ್ಯದಿಂದಲೇ ವಂಶ ಬೆಳೆಯಬೇಕು ಎಂದು ಯೋಚಿಸಿ ಚಿಕ್ಕಿ ಎಂಬ ಸುಂದರ ಹುಡುಗಿಯನ್ನು ಗೌಡನಲ್ಲಿ ಮಲಗಿಸಿ, ಆ ಚಿಕ್ಕಿಗೆ ಹುಟ್ಟಿದ ಕೂಸು ತನಗೆ ಹುಟ್ಟಿದ್ದೆಂದು ಊರು-ಕೇರಿಯಲ್ಲಿ ನಂಬಿಸುವಂತೆ ಗೌಡತಿ ಮಾಡುತ್ತಾಳೆ. ಇದರಿಂದ ತನ್ನ ಬಂಜೆತನ ಹೋಗದಿದ್ದರೂ ಊರ ಜನರಲ್ಲಿ ಅದು ಹೋಗುವಂತೆ ಮಾಡುತ್ತಾಳೆ. ಆದರೆ ಮುಗ್ಧ ಚಿಕ್ಕಿ ಅನೈತಿಕವಾಗಿ ಗೌಡನಲ್ಲಿ ಮಲಗಬೇಕಾಯಿತು. ಭವಿಷ್ಯದಲ್ಲಿ ಅವಳ ಬದುಕು ಏನಾಗಬೇಕು? ತಮ್ಮ ಕಳಂಕ ಮುಚ್ಚಿಕೊಳ್ಳಲು ಆಳುವ ವರ್ಗಕ್ಕೆ ಚಿಕ್ಕಿ ಬಲಿಯಾಗಬೇಕಾಯಿತು.

'ಬೆಳಕಿನೆಡೆಗೆ' (ಗೀತಾನಾಗಭೂಷಣ) ಕಥೆಯಲ್ಲಿ, ಗೌಡನ ಮಗ ಈರಣ್ಣ ಭವಾನಿಯನ್ನು ಬಲಾತ್ಕಾರ ಮಾಡಿ ಕೆಡಿಸುತ್ತಾನೆ. ಭವಾನಿಯ ತಂದೆ ಮಗಳಿಗೆ ನ್ಯಾಯ ಒದಗಿಸಿಕೊಡಿ ಎಂದು ಗೌಡನನ್ನು ಕೇಳಿದಾಗ, ಭವಾನಿಯನ್ನು 'ಇಟ್ಟು'ಕೊಳ್ಳಲು ಮಗನಿಗೆ ಸೂಚಿಸುತ್ತಾನೆ. ಮದುವೆಯಾಗಿ ಗೌರವದಿಂದ ಬದುಕಬೇಕೆಂಬ ಕನಸು ಕಂಡಿದ್ದ ಭವಾನಿಗೆ 'ಸೂಳೆ'ಯಾಗಿ ಬದುಕಬೇಕಾಯಿತು. ಈರಣ್ಣನಲ್ಲಿ ಭವಾನಿ ಹೆಂಡತಿಯಂತೆ ನಿಷ್ಠಳಾಗಿ ಸಂಸಾರ ಮಾಡಿದಳು. ಗೌರಿ ಎಂಬ ಮಗಳನ್ನು ಪಡೆದು ಬೆಳೆಸಿದಳು. ಒಳ್ಳೆಯ ವರ ನೋಡಿ ಮದುವೆ ಮಾಡೆಂದು ಈರಣ್ಣನಿಗೆ ಭವಾನಿ ಕೇಳಿದಾಗ, ಈರಣ್ಣ ಗೌರಿ ತನಗೆ ಹುಟ್ಟಿದ 'ಮಗಳು' ಎಂಬ ಕಿಂಚಿತ್ ಅಭಿಮಾನ ಉಳಿಸಿಕೊಳ್ಳದೆ, ತನ್ನ ಅಕ್ಕನ ಮಗ ಗೌರಿಯನ್ನು ಇಟ್ಟುಕೊಳ್ಳಲು ಬಯಸಿದ್ದನ್ನು ಭವಾನಿಗೆ ಹೇಳುತ್ತಾನೆ. ಹೆಂಡತಿಯ ನಿಷ್ಠೆಯನ್ನು, ಗೌರಿ 'ಮಗಳೆಂಬ' ಅಭಿಮಾನವನ್ನು ಮರೆಸುವಂತೆ, ಫ್ಯೂಡಲ್ ವ್ಯವಸ್ಥೆ ವರ್ತಿಸುತ್ತದೆ.

'ಹಕ್ಕಲ ಶೇಂಗಾ' (ಶ್ರೀಕಾಂತ ಪಾಟೀಲ್) ಕಥೆಯಲ್ಲಿ, ದಿನದ ಹೊಟ್ಟೆ ತುಂಬಿಸಿಕೊಳ್ಳಲು ಕೂಲಿ ಕೆಲಸ ಸಿಗದ ನೀಲವ್ವ, ಯಮುನಿ, ಸಾಹುಕಾರನ ಹೊಲದಲ್ಲಿ ಹಕ್ಕಲ ಶೇಂಗಾ ಆಯಲು ಹೋಗುತ್ತಾರೆ. ಬೆಳೆ ತೆಗೆದುಕೊಂಡು ಹಾಳು ಬಿದ್ದ ಹೊಲದಲ್ಲಿ ಮಣ್ಣು ಕೆದರಿದರೆ ಅಲ್ಲೊಂದು ಇಲ್ಲೊಂದು ಶೇಂಗಾವನ್ನು ಆಯ್ದು ಹೊಟ್ಟೆಯ ಹಸಿವು ನೀಗಿಸಿಕೊಳ್ಳಲು ಬಿಸಿಲಲ್ಲಿ ಮಣ್ಣು ಕೆದರಿ ಕೆದರಿ ಸಿಕ್ಕ ಹಿಡಿ ಶೇಂಗಾವನ್ನು ಉಡಿಯಲ್ಲಿ ತುಂಬಿಕೊಳ್ಳುವ ಹೊತ್ತಿಗೆ ಸಾಹುಕಾರ ಬಂದು ನಿಲ್ಲುತ್ತಾನೆ. ಹೊಲ ಅವನದು. ಕಸಿದುಕೊಳ್ಳುವ ಹಕ್ಕು ಅವನಿಗಿದೆ. ಹಿಂದೆ ನೀಲಮ್ಮನನ್ನು ಬಳಸಿಕೊಳ್ಳಲು ನೋಡಿ ಸೋತಿದ್ದ ಸಾಹುಕಾರನಿಗೆ ಈಗ ಅವಳು ಸಿಕ್ಕು ಬಿದ್ದಿದ್ದಳು. ಇಬ್ಬರು ಹೆಂಗಸರು ಶೇಂಗಾ ಅವನಿಗೆ ನೀಡಿ ತಣ್ಣಗೆ ಮರಳುತ್ತಾರೆ. ಬಡವರ ಹಸಿವು ಅವರನ್ನು ಅಸಹಾಯಕರನ್ನಾಗಿ ಮಾಡುತ್ತದೆ. ಹಿಡಿ ಶೇಂಗಾ ಬೇಕಾದರೆ ನೀಲವ್ವ ಸಾಹುಕಾರನ ತೆಕ್ಕೆಗೆ ಹೋಗಬೇಕು. ಬಡವರ 'ಮಾನ'ದ ಬೆಲೆ ಇದು.

'ಹಬ್ಬ ಮತ್ತು ಬಲಿ'(ಬಿ.ಟಿ.ಲಲಿತಾನಾಯಕ) ಕಥೆಯಲ್ಲಿ, ಒಂದು ಹಬ್ಬ ಮಾಡಲು ತೊಳಚಾ ಗೌಡನಲ್ಲಿ ಮುನ್ನೂರು ರೂಪಾಯಿ ಸಾಲ ತರುತ್ತಾನೆ. ತಂದ ಸಾಲದ ಹಣದಲ್ಲಿ ಹೆಂಡತಿ-ಮಕ್ಕಳ ಜತೆ ಎರಡು ದಿನ ಉಂಡು-ತಿಂದು ಹಬ್ಬ ಆಚರಿಸುತ್ತಾನೆ. ಆದರೆ ಆ ಹಬ್ಬಕ್ಕೆ ಸಾಲ ತರುವಾಗ, ಒಂದು ವರ್ಷ ಜೀತ ಮಾಡಲು ಒಪ್ಪಿಕೊಂಡು ಸಾಲ ತಂದಿರುತ್ತಾನೆ. ಇದು ಕೇವಲ ಒಂದು ವರ್ಷದ ಜೀತದ ಪ್ರಶ್ನೆಯಾಗಿರುವುದಿಲ್ಲ. ನಿರಂತರವಾಗಿ ಜೀತದಲ್ಲಿ ಮುಳುಗಬೇಕಾಗುತ್ತದೆ. ಮುನ್ನೂರು ರೂಪಾಯಿಯ ಸಾಲ ಮುಟ್ಟಿಸಲು ಜೀತಕ್ಕೆ ನಿಲ್ಲುವುದು ಸರಿ. ಜೀತ ನಿಂತ ಮೇಲೆ ಹೆಂಡತಿ-ಮಕ್ಕಳಿಗೆ ವರ್ಷವೆಲ್ಲ ಹೊಟ್ಟೆಗಾಗಿ ಪುನಃ ಗೌಡನಲ್ಲಿ ಸಾಲ

ಮಾಡಬೇಕು, ಸಾಲ ಬೆಳೆಯುತ್ತ ಹೋಗುತ್ತದೆ. ಜೀತದ ಅವಧಿಯೂ ಬೆಳೆಯುತ್ತ ಹೋಗುತ್ತದೆ. ಸಾಲ ಕೊಟ್ಟ ಗೌಡ ಅಂದೇ ತೊಳಜಾನನ್ನು ಜೀತಕ್ಕಾಗಿ ಬಲಿ ಮಾಡಿದ್ದ. ಬಡವರನ್ನು ಶೋಷಣೆಗೆ ಗುರಿಮಾಡಲು ಜಮೀನ್ದಾರಿ ವ್ಯವಸ್ಥೆಗೆ ಎಷ್ಟೊಂದು ನೆಪಗಳು!

'ಗೋದಾನ' (ಶಾಂತರಸ) ಕಥೆಯಲ್ಲಿ, ಕರಿಯನ ಮಗ ರೋಗದಿಂದ ಸಾವಿಗೀಡಾಗಿರುತ್ತಾನೆ. ಮಗ ಸತ್ತ 'ಗಳಿಗೆ' ಕೆಟ್ಟದ್ದು. ಅದಕ್ಕಾಗಿ 'ಶಾಂತಿ' ಮಾಡಿಸಬೇಕೆಂದು ಪುರೋಹಿತ ಹೇಳುತ್ತಾನೆ. 'ಶಾಂತಿ' ಮಾಡಿಸಲು, ಹಾಲು ಕೊಡುವ ಆಕಳು ಅದರ ಕರುವಿನೊಂದಿಗೆ ಬ್ರಾಹ್ಮಣರಿಗೆ ದಾನ ಮಾಡಬೇಕಾದ ಪ್ರಮೇಯ ಕರಿಯನಿಗೆ ಎದುರಾಗುತ್ತದೆ. ಕರಿಯನಲ್ಲಿದ್ದ ಹಾಲು ಕೊಡುವ ಆಕಳು-ಕರುವನ್ನು ಹೊಡೆದುಕೊಂಡು ಪುರೋಹಿತ ಹೋಗುತ್ತಾನೆ. ಕೊಟ್ಟ ಕರಿಯನ ಕುಟುಂಬ ಅದನ್ನು ನೋಡುತ್ತ ನಿಲ್ಲುತ್ತದೆ. ಮಗ ಸತ್ತ ಗಳಿಗೆ ಸರಿಯಿಲ್ಲ ಎನ್ನುವ ನಂಬಿಕೆ, ಅದನ್ನು ನಂಬುವ ಕರಿಯ ಶೋಷಣೆಗೆ ಗುರಿಯಾಗುತ್ತಾನೆ. ಅವನನ್ನು ನಂಬಿಸುವ ಪುರೋಹಿತಶಾಹಿಗಳು ಫ್ಯೂಡಲ್‌ಗಳನ್ನು ಮೀರಿಸುವ ಕ್ರೂರಿಯಾಗಿರುತ್ತಾರೆ.

ಜಮೀನ್ದಾರಿ ವ್ಯವಸ್ಥೆ ಕೆಳವರ್ಗದ ಜನಸಾಮಾನ್ಯರನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಲೇ ಬಂದಿದೆ. ದುಡಿವ ಕೆಳವರ್ಗದವರ ಬಡತನ, ಹಸಿವು ಎಲ್ಲ ದೌರ್ಬಲ್ಯಗಳಿಗೆ ಕಾರಣವಾಗುತ್ತದೆ. ಈ ದೌರ್ಬಲ್ಯವನ್ನು ವ್ಯವಸ್ಥೆ ದುರುಪಯೋಗ ಪಡಿಸಿಕೊಳ್ಳುತ್ತಾ, ಸ್ವಾರ್ಥಕ್ಕಾಗಿ, ತನ್ನ ಪ್ರತಿಷ್ಠೆಗಾಗಿ ಜನಸಾಮಾನ್ಯರನ್ನು ಬಲಿಪಡೆಯುತ್ತಾ ಹೋಗುತ್ತದೆ. ಈ ಕಥೆಗಳಲ್ಲಿ ಉಳ್ಳವರು ಕೆಳವರ್ಗದ ಹೆಂಗಸನ್ನು ಲೈಂಗಿಕವಾಗಿ, ಗಂಡಸನ್ನು ಜೀತದ ಮೂಲಕ ಶೋಷಣೆ ಮಾಡುವುದು ಕಾಣುತ್ತದೆ. ಉಳ್ಳವರ ಕ್ರೌರ್ಯಕ್ಕೆ ಹೆಂಗಸರು ಬಲಿಯಾಗುವುದು ಸಾಮಾನ್ಯ ಮತ್ತು ಉಳ್ಳವರು ಕೆಳವರ್ಗದ ಗಂಡಸರಿಗಿಂತ ಹೆಚ್ಚಾಗಿ ಹೆಂಗಸರಿಂದ ಪ್ರತಿರೋಧವನ್ನು ಎದುರಿಸಬೇಕಾಗಿ ಬರುತ್ತದೆ. ಪ್ರತಿರೋಧಿಸುವ ಶಕ್ತಿ ಗಂಡಸಿಗಿಂತ ಹೆಂಗಸಿನಲ್ಲಿ ಹೆಚ್ಚು ಕಾಣುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಗೌಡ, ಕುಲಕರ್ಣಿ, ಸಾಹುಕಾರ ಮುಂತಾದ ಉಳ್ಳವರು ಜನಸಾಮಾನ್ಯರ ಮೇಲೆ, ಕೆಳವರ್ಗದವರ ಮೇಲೆ ಒತ್ತಡ ಹಾಕುತ್ತಾರೆ. ಪಟ್ಟಣ ಪ್ರದೇಶಗಳಲ್ಲಿ ಇದು ಬೇರೆ ಸ್ವರೂಪದಲ್ಲಿ ಜೀವಂತವಾಗಿದೆ. ರಾಜಕಾರಣದ ಹೆಸರಿನಲ್ಲಿ ಈ ಕ್ರೌರ್ಯ ಕಾಣಿಸುತ್ತದೆ. ಪ್ರಜಾಪ್ರಭುತ್ವ ಬಂದರೂ ಪ್ರಜೆಗಳಿಗೆ ರಕ್ಷಣೆಯಿಲ್ಲ ಎಂಬುದು **'ಪ್ರಜಾಪ್ರಭುತ್ವದಲ್ಲೊಂದು ಸಾವು'** (ರಾಜಶೇಖರ ನೀರಮಾನ್ವಿ) ಕಥೆಯಲ್ಲಿದೆ. ನಗರದಲ್ಲಿ ನಗರಸಭಾಧ್ಯಕ್ಷರ ಮಗ, ತನ್ನ ಚೇಲಾಗಳ ಜತೆ ಸೇರಿಕೊಂಡು ಗುಂಡಾಗಿರಿಯನ್ನು ಮಾಡುತ್ತ ಜನರಿಗೆ ತಲೆನೋವಾಗಿರುತ್ತಾನೆ. ಹುಡುಗಿಯರು ಮಾನವಂತರಾಗಿ ಧೈರ್ಯದಿಂದ ತಿರುಗಾಡಲು ಭಯಪಡುವಷ್ಟು ಅವನ ಗುಂಡಾಗಿರಿ ನಡೆದಿರುತ್ತದೆ. ಪೋಲೀಸರು ಏನೂ ಮಾಡುವ ಹಾಗಿಲ್ಲ. ಸಾಮಾನ್ಯರಿಗೆ ಅಧಿಕಾರಸ್ಥರನ್ನು ಶಕ್ತ ರಾಜಕಾರಣಿಗಳನ್ನು ಎದುರಿಸುವ ಧೈರ್ಯವಿರುವುದಿಲ್ಲ. ಅವನು ಅಪಘಾತದಲ್ಲಿ ಸತ್ತಾಗ, ಕಾಲೇಜುಗಳಿಗೆ ರಜೆ ಕೊಡಲಾಗುತ್ತದೆ. ಪತ್ರಿಕೆಗಳು ಅವನ ಸ್ಮಶಾನ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಗಣ್ಯರ ಹೆಸರುಗಳನ್ನು, ಸಂತಾಪಸೂಚಕ ಸಂದೇಶಗಳನ್ನು ದೊಡ್ಡದಾಗಿ ಪ್ರಕಟಿಸುತ್ತವೆ. ಅವನ ಗುಂಡಾಗಿರಿ ಸಾಮಾಜಿಕ ಬದುಕಿನ ನೆಮ್ಮದಿಯನ್ನು ಕೆಡಿಸಿದ್ದರೂ, 'ಏನ ಹೇಳ್ರಿ ಬಹದ್ದೂರ ಮಗ ಅವ. ರಾಜಕುಮಾರನಂಗ ಮೆರೆದ. ವೀರಾಧಿ ವೀರನಂಗ ಸತ್ತ. Weekness ಯಾರಿಗೆ ಇರಂಗಿಲ್ಲ?' ಎಂದು ಜನ ಅಭಿಪ್ರಾಯಪಡುತ್ತಾರೆ. ಅವನು ಬದುಕಿದ್ದಾಗ ಚಂದ್ರು ಎಂಬ ಸಂಭಾವಿತನನ್ನು ಬೀದಿಗೆ ತಳ್ಳಿ, ಅವನ ಹೆಂಡತಿಯನ್ನು ಸೂಳೆಯನ್ನಾಗಿ ಇಟ್ಟುಕೊಂಡಿದ್ದ. ಇದು ಕೇವಲ ಒಂದು ಉದಾಹರಣೆ ಅಷ್ಟೆ. ಪ್ರಕಾಶ ಈ ಚಂದ್ರನನ್ನು ರಕ್ಷಿಸಲು ಹೋಗಿ, ಅವನ ಹೆಂಡತಿಯ ಸ್ಥಿತಿಯನ್ನು ಕಂಡು, ಅವರಿಗೆ ಒದಗಿದ ಸ್ಥಿತಿಗೆ ನಗರಸಭಾಧ್ಯಕ್ಷರ ಮಗನೆ ಕಾರಣವೆಂದು ಪತ್ರಿಕೆಯಲ್ಲಿ ಬರೆದು ಅವನೂ ಅಪಾಯಕ್ಕೆ ಸಿಕ್ಕಿಕೊಂಡ. ಸತ್ತವನು ಹೋದರೂ, ಅವನು ಬೆಳೆಸಿದ ಚೇಲಾಗಳು ಪ್ರಕಾಶನನ್ನು ಮುಗಿಸಲು ಪ್ರಯತ್ನಿಸುತ್ತವೆ. ಈ ಸ್ಥಿತಿಯನ್ನು ಪೋಲೀಸರಿಗೆ ಹೇಳಿ ರಕ್ಷಣೆ ಕೇಳಿದರೂ, ಪೋಲೀಸರೇ ಅಸಹಾಯಕರಾಗಿ ಅವನಿಗೆ ರಕ್ಷಣೆ ನೀಡಲು ಸಾಧ್ಯವಾಗುವುದಿಲ್ಲ. ದೇಶವನ್ನಾಳುವ ಪ್ರತಿನಿಧಿಗಳಾದ ಶಾಸಕರು,

ಮಂತ್ರಿಗಳು, ಅಧ್ಯಕ್ಷರು ಅಧಿಕಾರದ ಅಹಂಕಾರದಿಂದ ಸಮಾಜದಲ್ಲಿ ಮಾಡುವ ದಬ್ಬಾಳಿಕೆಗಳು ಜನಸಾಮಾನ್ಯರನ್ನು ನೆಮ್ಮದಿಯಿಂದಿರಲು ಬಿಡುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಅಧಿಕಾರಸ್ಥರಿಂದ ನಡೆಯುವ ದೌರ್ಜನ್ಯವನ್ನು ಪ್ರತಿಭಟಿಸುವುದಿರಲಿ, ಸಾಮಾನ್ಯರು ಅವರ ಪಾಡಿಗೆ ಅವರು ಬದುಕುವ ಹಾಗಿಲ್ಲ ಎಂಬ ವಾತಾವರಣವಿರುತ್ತದೆ. ಈ ಕಥೆಯಲ್ಲಿ ಅಮಾಯಕ ಚಂದ್ರು ಸಾವಿಗೀಡಾದ. ಅವನ ಹೆಂಡತಿ ನಗರಸಭಾಧ್ಯಕ್ಷನ ಮಗನಿಂದ ಅತ್ಯಾಚಾರಕ್ಕೆ ಒಳಗಾದಳು. ಪ್ರತಿಭಟಿಸಲು ಯೋಚಿಸಿದ ಪ್ರಕಾಶನಿಗೆ ಜೀವ ಬೆದರಿಕೆ ಬಂತು. ಇದು ನಗರಗಳಲ್ಲಿ ರಾಜಕಾರಣಿಗಳಿಂದ ನಡೆಯುವ ಶೋಷಣೆ. ಹಳ್ಳಿಯ ಫ್ಯೂಡಲ್‌ಗಳಿಗೂ, ನಗರದ ರಾಜಕಾರಣಿಗಳಿಗೂ ಯಾವ ವ್ಯತ್ಯಾಸವಿಲ್ಲ. ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯರ ಸ್ಥಿತಿಯ ವಾಸ್ತವ ಮತ್ತೊಂದು ಮುಖ ಈ ಕಥೆಯಲ್ಲಿದೆ.

'ನೀರು ಮತ್ತು ನೆತ್ತರು' (ಗೀತಾ ನಾಗಭೂಷಣ) ಕಥೆಯಲ್ಲಿ ಒಂದು ಘಟನೆ ನಡೆಯುತ್ತದೆ: ಹಳ್ಳಿಯಲ್ಲಿ ಮಳೆಯಿಲ್ಲದೆ ಬರಗಾಲ ಬಿದ್ದು ಕ್ರಮೇಣ ಕೆರೆ, ಊರ ಬಾವಿಗಳು ಬತ್ತುತ್ತವೆ. ನೀರಿಲ್ಲದೆ ಜನರು, ದನಗಳು ಕೂಡಿಯೇ ದಾಹದಿಂದ ಪರಿತಪಿಸುವ ಸ್ಥಿತಿ ಬರುತ್ತದೆ. ಅದರಲ್ಲೂ ಕೇರಿಯಲ್ಲಿದ್ದ ಬಾವಿ ಬೇಗ ನೀರಿಲ್ಲದೆ ಬತ್ತಿದ್ದರಿಂದ ಕೆಳವರ್ಗದವರಿಗೆ ತೊಂದರೆಯಾಗುತ್ತದೆ. ಕೆಳವರ್ಗದವರು ಮಠದ ನೀರು ಪಡೆಯಲು ಪ್ರಯತ್ನಿಸುತ್ತಾರೆ. ಮಠದ ಸ್ವಾಮಿಗಳು ಮತ್ತು ಮೇಲ್ವರ್ಗದವರ ಕೂಡಿ ಕೆಳವರ್ಗದವರಿಗೆ ನೀರು ಕೊಡಲು ಒಪ್ಪುವುದಿಲ್ಲ. ಕೆಳವರ್ಗದವರು ಕೊನೆಗೆ ಅನಿವಾರ್ಯವಾಗಿ ರಾತ್ರಿಯಲ್ಲಿ ಮಠದ ಬಾವಿಯ ನೀರನ್ನು ತುಂಬಿಕೊಂಡು ಹೋಗುತ್ತಾರೆ. ದಲಿತರೆಲ್ಲ ಒಗ್ಗಟ್ಟಾಗಿಯೇ ನೀರನ್ನು ಪಡೆಯುವ ಬಗ್ಗೆ ತೀರ್ಮಾನಿಸಿಯೇ ಧೈರ್ಯದಿಂದ ರಾತ್ರಿ ನೀರನ್ನು ಒಯ್ದಿರುತ್ತಾರೆ. ಇಂಥದ್ದಕ್ಕೆ ಪ್ರೇರೇಪಿಸಿದ ದಲಿತರ ಮುಖಂಡ ದುರ್ಮರಣಕ್ಕೀಡಾಗುತ್ತಾನೆ. ಮಠದ ಸ್ವಾಮಿಗಳು ಮಠದ ನೀರನ್ನು ದಲಿತರು ಮುಟ್ಟಿದ್ದಕ್ಕೆ ರಕ್ತಕಾರಿ ಸತ್ತಿದ್ದಾನೆಂದು ಸುದ್ದಿ ಹುಟ್ಟಿಸುತ್ತಾರೆ.

ನಡೆದದ್ದೇ ಬೇರೆಯಾಗಿರುತ್ತದೆ. ಮಠದ ಸ್ವಾಮಿಗಳ ಜತೆ ಮೇಲ್ವರ್ಗದವರು ಮಾತಾಡಿಕೊಂಡೇ ದಲಿತರ ಮುಖಂಡನನ್ನು ಕೊಲೆ ಮಾಡಲಾಗಿರುತ್ತದೆ. ಚರಿತ್ರೆಯ ಉದ್ದಕ್ಕೂ ಆಳುವ ಶಕ್ತಿಯ ಪರವಾಗಿಯೇ ಧರ್ಮ ದುಡಿದಿದೆ. ಅವು ಒಂದಕ್ಕೊಂದು ಪೂರಕವಾಗಿ, ರಕ್ಷಣಾತ್ಮಕವಾಗಿ ಸಾಗಿ ಬಂದಿದ್ದರಿಂದಲೇ ಜನಸಾಮಾನ್ಯರಿಗೆ, ಬಡವರಿಗೆ, ದಲಿತರಿಗೆ ಯಾವ ವಿಷಯದಲ್ಲಿಯೂ, ಯಾವ ಸಂದರ್ಭದಲ್ಲಿಯೂ ನ್ಯಾಯ ಸಿಕ್ಕಿಲ್ಲ. ಸಾಮಾಜಿಕ ಸಂದರ್ಭದಲ್ಲಿ ಧರ್ಮ ಪರಾರ್ಥವನ್ನು ಸಾಧಿಸಬೇಕಾದ್ದು ಬಿಟ್ಟು ಸ್ವಾರ್ಥಕ್ಕಾಗಿ ದುಡಿದಿರುವುದೇ ಹೆಚ್ಚು. ಧರ್ಮ ಮತ್ತು ರಾಜಕಾರಣ ಒಂದಕ್ಕೊಂದು ಪೂರಕವಾಗಿಯೇ ನಡೆದಿವೆ. ಅವು ಒಂದನ್ನೊಂದು ನಿಯಂತ್ರಿಸುತ್ತ ತಮ್ಮ ಹಿತಸಾಧನೆಯಲ್ಲಿ ತೊಡಗಿರುವದರಿಂದ ಸಾಮಾಜಿಕ ಬದುಕಿನಲ್ಲಿ ಒಳ್ಳೆಯ ಪರಿಣಾಮಗಳಾಗಿಲ್ಲ ಎಂದೇ ಕಾಣುತ್ತದೆ.

ಈಚಿನ ದಿನಗಳಲ್ಲಿ ಊರು ಮತ್ತು ಕೇರಿಗಳ ನಡುವೆ ಸಂಘರ್ಷ ಹೆಚ್ಚಿದೆ. ಹಿಂದೆ ಈ ಸಂಘರ್ಷ ಇರಲಿಲ್ಲವೆಂದಲ್ಲ. ಹಿಂದೆ ಕೇರಿಗೆ ರಾಜಕೀಯ ಮತ್ತು ಧಾರ್ಮಿಕ ಶಕ್ತಿಯ ಬೆಂಬಲವಿರಲಿಲ್ಲ. ಇದರಿಂದಾಗಿ ಮೇಲ್ವರ್ಗದವರ ಎಲ್ಲ ಬಗೆಯ ಶೋಷಣೆಗೆ ಕೆಳವರ್ಗದವರು ಗುರಿಯಾಗುತ್ತಿದ್ದರು. ಬಡತನ, ಜಾತಿ ಕಾರಣದಿಂದಾಗಿ ಕೆಳವರ್ಗದವರನ್ನು ಮೂಕವಾಗಿಸಿತ್ತು. ಆದರೂ ಊರು ಮತ್ತು ಕೇರಿ ಒಂದನ್ನೊಂದು ಅವಲಂಬಿಸಿದ್ದವು. ಒಂದು ಬಗೆಯ ಸಂಬಂಧದಿಂದಾಗಿ ಅವೆರಡರ ನಡುವೆ ಬಿಡದ ನಂಟಿತ್ತು. ಸ್ವಾತಂತ್ರ್ಯಾನಂತರ ರಾಜಕೀಯ ಸೌಲಭ್ಯಗಳು ಕೆಳವರ್ಗದವರಿಗೆ ಸಿಗಲಾರಂಭಿಸಿದವು. 'ಅಕ್ಷರ' ಕೇರಿಯಲ್ಲಿ ಸ್ಥಾನ ಪಡೆಯಿತು. ಅದರಿಂದ ಚರಿತ್ರೆಯನ್ನು ಅರಿಯಲು ಸಾಧ್ಯವಾಯಿತು. ಸಹಜವಾಗಿಯೇ ಕೆಳವರ್ಗದವರಲ್ಲಿ ಪ್ರಜ್ಞೆ ಜಾಗೃತವಾಯಿತು. ಇದು ಮೇಲ್ವರ್ಗದವರಿಗೆ ಸಹಿಸದಾಯಿತು. ತಲತಲಾಂತರದಿಂದ ನಡೆಸಿಕೊಂಡು ಬಂದ ಅಧಿಕಾರಕ್ಕೆ ಇದರಿಂದ ಪೆಟ್ಟು ಬೀಳಲಾರಂಭಿಸಿತು.

ಅಸಹನೆ ಹೆಚ್ಚಾಗತೊಡಗಿತು. ಚರಿತ್ರೆ ಕೆಳವರ್ಗದವರಲ್ಲಿ ಒಂದು ಬಗೆಯ ಪ್ರಜ್ಞೆ ಮೂಡಿಸಿದಂತೆ, ಅದೇ ಚರಿತ್ರೆ ಮೇಲ್ವರ್ಗದವರಲ್ಲೂ ಪ್ರಜ್ಞೆಯನ್ನು ಮೂಡಿಸಬೇಕಾಗಿತ್ತು. ಅಂದರೆ ತಲತಲಾಂತರದಿಂದ ಕೆಳವರ್ಗದವರು ಅನುಭವಿಸಿದ ಸ್ಥಾನಮಾನ ಯಾವ ಬಗೆಯದ್ದು, ಅದಕ್ಕೆ ಕಾರಣ ಯಾರು? ಎಂದು ಅರಿಯಬೇಕಾಗಿತ್ತು. ಈ ಪ್ರಕ್ರಿಯೆ ನಡೆಯಲು ತಡವಾದರೂ ಈಗ ಸಮಾಜದಲ್ಲಿ ಈ ಎರಡು ವರ್ಗಗಳ ಮಧ್ಯ ಒಂದು ಬಗೆಯ ತಿಳುವಳಿಕೆ ಮೂಡಿದೆ. ಆದರೆ ರಾಜಕಾರಣ ಮತ್ತು ಧರ್ಮ ತನ್ನ ಸ್ವಾರ್ಥಕ್ಕಾಗಿ ಈ ಎರಡು ವರ್ಗಗಳ ನಡುವೆ ಬಿರುಕು ಹುಟ್ಟುವಂತೆ ಮಾಡುತ್ತಿರುವುದು ಕಾಣುತ್ತದೆ. ಇದರಿಂದ ಊರು ಮತ್ತು ಕೇರಿಗಳ ನಡುವೆ ಸಾಮರಸ್ಯಕ್ಕೆ ಬದಲು ವೈಷಮ್ಯ ಬೆಳೆಯುತ್ತಿದೆ. ಈ ಮೇಲ್ವರ್ಗ ಮತ್ತು ಕೆಳವರ್ಗ ಎಂಬ ಜನಸಮುದಾಯಗಳಿಗೆ ಸಾಮಾಜಿಕ ಪ್ರಜ್ಞೆ ಇರುತ್ತದೆಯಾದರೂ, ವ್ಯಕ್ತಿಗತ ಪ್ರಜ್ಞೆಗಳೂ ಕೆಲವೊಮ್ಮೆ ಮುನ್ನೆಲೆಗೆ ಬಂದು ಒಟ್ಟಿನ ಅಭಿಪ್ರಾಯಕ್ಕೆ ಧಕ್ಕೆ ತರುತ್ತಿರುತ್ತವೆ.

'ಮಲಿನ ಮಜ್ಜನ ನ್ಯಾಯಕ್ಕೆಳಸಿ'(ಶಾಂತರಸ) ಕಥೆಯಲ್ಲಿ ಈ ಸಮಸ್ಯೆಯಿದೆ. ಇಲ್ಲಿ ಲಿಂಗಾಯತ, ಬ್ರಾಹ್ಮಣ, ಮುಸ್ಲಿಂ ಮತ್ತು ದಲಿತ ಸಮುದಾಯಗಳ ನಡುವೆ ನಡೆಯುವ 'ರಾಜಕಾರಣ'ದ ಚಿತ್ರಣವಿದೆ. ಆರ್ಥಿಕವಾಗಿ ಮುಸ್ಲಿಂ, ದಲಿತ ಸಮುದಾಯಗಳು ದುರ್ಬಲವಾಗಿರುವುದರಿಂದ ಮೇಲ್ವರ್ಗದ ಲಿಂಗಾಯಿತರು ಆಳ್ವಿಕೆ ನಡೆಸುವುದು ಮೊದಲಿನಿಂದಲೂ ನಡೆದಿದೆ. ಎಲ್ಲರನ್ನು ತಮ್ಮ ಧಾರ್ಮಿಕ ಮತ್ತು ಬೌದ್ಧಿಕ ಬಲದಿಂದ ಹಿಡಿತದಲ್ಲಿಟ್ಟುಕೊಳ್ಳಲು ಬ್ರಾಹ್ಮಣ ಸಮುದಾಯ ಶಕ್ತವಾಗಿರುತ್ತದೆ. ಲಿಂಗಾಯತ ಮತ್ತು ಬ್ರಾಹ್ಮಣ ಸಮುದಾಯಗಳು ಪರಸ್ಪರ ವಿರೋಧ ನಿಲುವುಗಳನ್ನು ಹೊಂದಿರುವುದು ನಿಜ. ಆದರೂ ಈ ಎರಡು ಸಮುದಾಯಗಳು ಏಕಕಾಲಕ್ಕೆ ದಲಿತ ಸಮುದಾಯದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿರುತ್ತವೆ. ಹಳ್ಳಿಗಳಲ್ಲಿ ಅಲ್ಪಸಂಖ್ಯಾತರು ಮತ್ತು ಆರ್ಥಿಕವಾಗಿ ದುರ್ಬಲರೂ ಆದ ಮುಸ್ಲಿಮರು ಮೇಲ್ವರ್ಗದವರ ಜತೆ ಹೊಂದಾಣಿಕೆಯಿಂದ ಬದುಕಲು ಪ್ರಯತ್ನಿಸುತ್ತಿರುತ್ತಾರೆ. ಇಂಥ ಸ್ಥಿತಿಯಲ್ಲಿ 'ಧರ್ಮ' ಮತ್ತು 'ರಾಜಕೀಯ' ಜನಸಮುದಾಯದ ಒಡಲಲ್ಲಿ ಸುಪ್ತವಾಗಿರುತ್ತದೆ. ಯಾವುದೋ ಒಂದು ಚಿಕ್ಕ ಘಟನೆ ನೆಪವಾಗಿ ಎರಡೂ ಎದ್ದು ಕೂಡುತ್ತವೆ. ಈ ಕಥೆಯಲ್ಲಿ ಮಾದೇವಿ ಎನ್ನುವ ದಲಿತ ಹೆಂಗಸು ನೀರು ಹೊತ್ತು ಬರುವಾಗ ಬಹುದಿನಗಳಿಂದಲೂ ಬಯಲಲ್ಲಿಯೇ ಇದ್ದ ಈಶ್ವರಲಿಂಗಕ್ಕೆ ಬೀದಿನಾಯಿಯೊಂದು ಮೂತ್ರವಿಸರ್ಜನೆ ಮಾಡುತ್ತದೆ. ಅದನ್ನು ನೋಡಿ ಓಡಿಸುತ್ತಾಳೆ. ಆ ಕ್ಷಣದಲ್ಲಿ ಏನನ್ನಿಸಿತೋ ಹೊತ್ತ ನೀರನ್ನು ಲಿಂಗಕ್ಕೆ ಹಾಕಿ ಮುಂದಕ್ಕೆ ಹೋಗುತ್ತಾಳೆ. ಊರ ರಾಜಕಾರಣಕ್ಕೆ ಇಷ್ಟು ನೆಪ ಸಾಕು. ದಲಿತ ಹೆಂಗಸು ಮೇಲ್ವರ್ಗದ ದೇವರಿಗೆ ನೀರು ಹಾಕಿ ಲಿಂಗವನ್ನು ಮಲಿನ ಮಾಡಿದಳೆಂದು ಮೇಲ್ವರ್ಗದವರು ಎದ್ದು ಕೂಡುತ್ತಾರೆ. ಇದು ದಲಿತರನ್ನು ಬಗ್ಗುಬಡಿಯಲು ಒಳ್ಳೆಯ ಅವಕಾಶವೆಂದು ಪದ್ಮನಾಭಾಚಾರ್ಯ ಮತ್ತು ಶಿವಾಚಾರ್ಯ ಯೋಚಿಸುತ್ತಾರೆ. ಕಾರಣವಿಷ್ಟೇ. ಕೇರಿಯ ದಲಿತ ಹೆಂಗಸರು ಇವರಿಬ್ಬರಿಗೆ ಸಿಗುವುದು ಕಮ್ಮಿಯಾಗಿತ್ತು. ಮಾದೇವಿಯನ್ನು ಬಸವಿಗೆ ಬಿಡಿಸಿ ತಾನು ಅನುಭೋಗಿಸಬೇಕೆಂದು ಶಿವಾಚಾರ್ಯ ಮಾಡಿದ ಎಲ್ಲ ಪ್ರಯತ್ನಗಳನ್ನು ಮಾದೇವಿ ಮುರಿದಿರುತ್ತಾಳೆ. ಆಕೆ ಬಸವಿಯಾಗದೆ ಮದುವೆಯಾದದ್ದೇ ಶಿವಾಚಾರ್ಯನಿಗೆ ಸಿಟ್ಟಿರುತ್ತದೆ. ಅದನ್ನು ತೀರಿಸಿಕೊಳ್ಳಲು ಮಾದೇವಿಯನ್ನು ಮತ್ತು ಮಾದೇವಿ ಮಾಡಿದ ತಪ್ಪಿನ ಮೂಲಕ ದಲಿತರನ್ನು ಬಗ್ಗುಬಡಿಯಲು ಪದ್ಮನಾಭಾಚಾರ್ಯನ ಸಹಾಯವನ್ನೂ ಪಡೆದಿರುತ್ತಾನೆ. ಬಾಬರಿ ಮಸೀದಿ ಪ್ರಕರಣ ನಡೆದ ಸಂದರ್ಭದಲ್ಲಿ ಊರ ಮಸೀದಿಯನ್ನು ಕೆಡವಲು ಮೇಲ್ವರ್ಗದ ಎರಡು ಸಮುದಾಯಗಳು ಕಾರಣವಾದವು. ಅದರ ಸಿಟ್ಟು ಮುಸ್ಲಿಮರಲ್ಲಿತ್ತು. ಅದು ಈಗ ದಲಿತರ ಪರ ನಿಂತು ಮೇಲ್ವರ್ಗದವರ ಮೇಲೆ ಸೇಡುತೀರಿಸಿಕೊಳ್ಳಲು ನಿಂತಿತು. ಮಾದೇವಿ ತನಗೆ ದಕ್ಕಲಿಲ್ಲ ಎಂಬ ಕಾರಣಕ್ಕೆ ಮಠದ ಶಿವಾಚಾರ್ಯ ಈಗ ಮಾದೇವಿಯನ್ನು ಅಪರಾಧಿಯನ್ನಾಗಿ ಮಾಡಿ ಶಿಕ್ಷೆ ವಿಧಿಸಲು ಮಾಡಿದ ಈ ವೈಯಕ್ತಿಕ ನಿರ್ಧಾರದಿಂದ, ಊರಲ್ಲಿ ಪಂಚಾಯ್ತಿ ಸೇರುವಂತೆ ಮಾಡುತ್ತಾನೆ. ಊರ ಪಂಚಾಯ್ತಿಗೆ ಎಲ್ಲ ಜಾತಿಯ ಸಮುದಾಯಗಳು ಸೇರಬೇಕಾಗುತ್ತವೆ. ಸೇರುವ ಮುನ್ನ, ಮಾದೇವಿ ಮಾಡಿದ್ದು ಅಪರಾಧವೇ? ಆಕೆಗೆ ಶಿಕ್ಷೆ ಕೊಡಿಸಬೇಕೆ? ಬೇಡವೆ? ಎಂದು ನಿರ್ದಿಷ್ಟವಾಗಿ ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ಸಮುದಾಯವೂ

ಯೋಚಿಸುವುದಿಲ್ಲ. ಬದಲಾಗಿ ಈ ಪ್ರಕರಣದ ಮೂಲಕ ಯಾರು ಯಾರನ್ನು ಮತ್ತು ಯಾವ ಯಾವ ಜಾತಿಯನ್ನು ಬಗ್ಗು ಬಡಿಯಬೇಕು ಎಂದು ಯೋಚಿಸುತ್ತದೆ. ಇಂಥ ಸಂದರ್ಭವನ್ನು 'ಧರ್ಮ' ಮತ್ತು 'ರಾಜಕೀಯ'ಗಳು ಸೃಷ್ಟಿ ಮಾಡುತ್ತವೆ. ಶಕ್ತವಾದ ಸಮುದಾಯ 'ಧರ್ಮ' ಮತ್ತು 'ರಾಜಕೀಯ'ಗಳನ್ನು ಅಸ್ತ್ರವಾಗಿ ಬಳಸಿ, ಸಮಾಜದ ಬದುಕನ್ನು ಹದಗೆಡಿಸುತ್ತವೆ. ಈ ಪ್ರಕರಣದಲ್ಲಿ ನಡೆದ ಗದ್ದಲದಲ್ಲಿ ಅಶ್ವತ್ಥ ವೃಕ್ಷ ಸುಟ್ಟುಹೋಗುತ್ತದೆ. ಈ ಹಿಂದೆ ಊರಲ್ಲಿ ಮಸೀದಿ ಸುಟ್ಟು ಹೋಗಿತ್ತು.

'ಬೆತ್ತಲೆ ಸ್ವಾಮಿ'(ರಾಜಶೇಖರ ನೀರಮಾನ್ವಿ) ಕಥೆಯಲ್ಲಿ, ಸ್ವಾರ್ಥಿಗಳು, ಸಮಯಸಾಧಕರು ಧರ್ಮವನ್ನು ಬಳಸಿಕೊಂಡು ಮುಗ್ಧರನ್ನು ಜನಸಾಮಾನ್ಯರನ್ನು ಮರುಳು ಮಾಡಿ, ಅದರಿಂದ ತಮ್ಮ ಹಿತಸಾಧನೆಯನ್ನು ಮಾಡಿಕೊಂಡ ಚಿತ್ರಣವಿದೆ. ಊರಿನಲ್ಲಿ ನಿರುಪದ್ರವಿಯಾಗಿ ತಿರುಗುತ್ತ ಸಿಕ್ಕಲ್ಲಿ ತಿಂದು, ಸಿಗದಿದ್ದರೆ ಎಲ್ಲೋ ನಿಂತ ನೀರು ಕುಡಿದು ಬದುಕುವ ಬೆತ್ತಲೆ ವ್ಯಕ್ತಿಯನ್ನು ಜನಸಾಮಾನ್ಯರೆಲ್ಲ ಬಲ್ಲರು. ಬೆತ್ತಲೆ ವ್ಯಕ್ತಿ ತನ್ನ ಹಸಿವಿಗೆ ಕೂಡ ಮನೆಮನೆ ಬೇಡಲು ಹೋಗುತ್ತಿರಲಿಲ್ಲ. ಅವನ ಸ್ಥಿತಿಯನ್ನು ನೋಡಿ ಯಾರಾದರೂ ನೀಡಿದರೆ ಮಾತ್ರ ತಿನ್ನುತ್ತಿದ್ದ, ರಾತ್ರಿ ಗುಡ್ಡದಲ್ಲಿ ತಂಗುತ್ತಿದ್ದ. ಊರಲ್ಲಿ ಬರಗಾಲ ಬಿದ್ದು ಮಳೆಯಾಗದೆ ಜನ ಪರದಾಡುವ ಸ್ಥಿತಿ ಬಂದಾಗ, ಭಜನೆ ಮಾಡಿದರೆ ಮಳೆ ಬರುತ್ತದೆಂದು ಬೆನಕಪ್ಪನ ಮುಂದಾಳುತನದಲ್ಲಿ ದೋಶಿ ಶೀನಪ್ಪ, ಕಬ್ಬೇರ ತಿಪ್ಪಣ್ಣ, ಗಿರಣಿ ಮಾಬಲಿ, ಉಪ್ಪಾರ ಹುಸೇನಿ, ಬ್ಯಾಗಾರ ಯಲ್ಲಪ್ಪ ಮುಂತಾದವರು ಊರಲ್ಲಿ ಚಂದಾ ಎತ್ತಿ ಬೆತ್ತಲ ಸ್ವಾಮಿ ಇರುವ ಗುಡ್ಡದಲ್ಲಿ ಭಜನೆ ಸುರುಮಾಡುತ್ತಾರೆ. ಬರಗಾಲ ಬಿದ್ದು ಜನ ಪರದಾಡಿ ಗುಳೆ ಹೋಗುವ ಸಂದರ್ಭದಲ್ಲಿ ಇವರು ಭಜನೆ ಮಾಡಿದರೆ ಒಳ್ಳೆಯ ಮಳೆ ಬರುತ್ತದೆಂದು ಹೇಳಿಕೊಳ್ಳುತ್ತಾ ಕಾಡಿ, ಬೇಡಿ, ನಂತರ ಬೆದರಿಸಿ ತಮ್ಮ ದಂಧೆಯನ್ನು ಸುರುಮಾಡುತ್ತಾರೆ. ಅತ್ತ ಮಳೆಗಾಗಿ, ಇತ್ತ ತಮ್ಮ ಪೋಷಣೆಯನ್ನು ಮೆಲ್ಲಗೆ ಪ್ರಾರಂಭಿಸಿ ನಂತರ ಬೆತ್ತಲೆ ಸ್ವಾಮಿಯನ್ನು ಬಂಡವಾಳ ಮಾಡಿಕೊಂಡು, 'ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಡುವ, ಒಡೆದ ಸಂಸಾರವನ್ನು ಒಂದುಗೂಡಿಸುವ, ಚುನಾವಣೆಯಲ್ಲಿ ಗೆಲ್ಲಿಸುವ, ಕೇಳಿದವರಿಗೆ ಕೇಳಿದ್ದನ್ನು ಕೊಡುವ' ಬೆತ್ತಲೆ ಸ್ವಾಮಿಯನ್ನು ವೈಭವೀಕರಿಸಿ ಪ್ರಚಾರ ಮಾಡುತ್ತಾರೆ. ಪ್ರಕೃತಿಗನುಗುಣವಾಗಿ ಮಳೆಯೂ ಬಂತು. ಮುಗ್ಧ ಜನಸಾಮಾನ್ಯರು ಈ ಸುದ್ದಿ ಕೇಳಿ ತಮ್ಮ ಬದುಕಿನ ತಾಪತ್ರಯಗಳಿಗೆ ಪರಿಹಾರ ಕಾಣಿಸುವ ಬೆತ್ತಲೆ ಸ್ವಾಮಿ ಗವಿಗೆ ಇರುವೆಯಂತೆ ಸಾಲುಗಟ್ಟಿ ಹೋದಾಗ ಬೆನಕಪ್ಪ, ಅವನ ಸದಸ್ಯರು ವ್ಯವಸ್ಥಿತವಾಗಿ ನಿಭಾಯಿಸುತ್ತಾರೆ. ಗುಡ್ಡದಲ್ಲಿ ಬಾರು, ಮಟಕ, ಹೋಟೆಲ್, ಇಸ್ಪೀಟ್ ಆಟ ಎಲ್ಲವೂ ಸುರುವಾಗುತ್ತವೆ. ಎಲ್ಲಿಂದಲೋ ಬಂದ ಯಮನಕ್ಕನಂಥವರಿಗೂ ಅಲ್ಲಿ ಕೆಲಸ ಸಿಕ್ಕಿತು. ಇಂಥ ಚಟುವಟಿಕೆಗಳಿಗೂ ಬೆತ್ತಲೆಸ್ವಾಮಿಗೂ ಸಂಬಂಧವೇ ಇಲ್ಲದಂತಾಗಿತ್ತು. ಅವನ ಪಾಡಿಗೆ ಅವನು ರಾತ್ರಿಯಲ್ಲಿ ಗುಡ್ಡದಲ್ಲಿ ತಂಗುತ್ತಿದ್ದ ಅಷ್ಟೆ. ಕೆಲವೇ ತಿಂಗಳಲ್ಲಿ ಬೆನಕಪ್ಪ, ಅವನ ಸದಸ್ಯರು, ಯಮನಕ್ಕ ಎಲ್ಲರೂ ಶ್ರೀಮಂತರಾದರು. ರಾಜಕೀಯವಾಗಿ ಸ್ಥಾನವನ್ನೂ ಹೊಂದಿದರು. ಸಣ್ಣಪುಟ್ಟ ಅಧಿಕಾರ ಸ್ಥಾನವನ್ನು ಹೊಂದಿದರು.

ಸಾಮಾಜಿಕ ಸಂದರ್ಭದಲ್ಲಿ ಇಂಥ ಘಟನೆಗಳು ತಣ್ಣಗೆ ಸಾವಿರಾರು ನಡೆಯುತ್ತವೆ ಅನ್ನಿಸುತ್ತದೆ. ಬೆನಕಪ್ಪನಂಥ ಧೂರ್ತ ಮನಸ್ಸಿನವರು ಇದರಿಂದ ಮಂಚೂಣಿಗೆ ಬಂದುಬಿಡುತ್ತಾರೆ. ಅನೇಕ ದಂಧೆಯ ಜನರೂ ಇದರಲ್ಲಿ ಪಾಲ್ಗೊಂಡು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಾರೆ. ದೇವರು-ದೈವ ಎಂದು ಜನಸಾಮಾನ್ಯರ ಮನಸ್ಸಿನಲ್ಲಿ ಭ್ರಮೆ ಹುಟ್ಟಿಸಿ ಮೋಸಗೊಳಿಸುತ್ತಾರೆ. ಇದರ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಯಾರೂ ಮುಂದಾಗುವುದಿಲ್ಲ, ಅದರ ಪಾಡಿಗೆ ಅದು ನಡೆಯುತ್ತದೆ. ಸಾಮಾಜಿಕ ಬದುಕಿನಲ್ಲಿ ಇಂಥ ಘಟನೆ, ಸಂದರ್ಭಗಳ ನಿಜಸ್ಥಿತಿ ಹೊರಬೀಳುವುದರಲ್ಲಿ ಬೆನಕಪ್ಪನಂಥವರು ಅದರಿಂದ ಪಡೆಯಬೇಕಾದ್ದನ್ನು ಪಡೆದಿರುತ್ತಾರೆ. ಆದರೆ ಜನಸಾಮಾನ್ಯರು ಭ್ರಮೆಗಳಿಂದ ತಮ್ಮ ಸಾಮಾಜಿಕ ನೆಮ್ಮದಿಯನ್ನು ಹಾಳುಮಾಡಿಕೊಳ್ಳುತ್ತಲೇ ಇರುತ್ತಾರೆ.

'ಬೆಂಕಿ ಮಳೆಯ ತಂಪು'(ಶ್ರೀಕಾಂತ ಪಾಟೀಲ್) ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವೆ ಸಾಮಾನ್ಯವಾಗಿ ದುಡಿಸಿಕೊಳ್ಳುವ

ಮತ್ತು ದುಡಿಯುವ ಸಂಬಂಧ ಕಂಡುಬರುತ್ತದೆ. ಇದಷ್ಟೇ ವಾಸ್ತವವಲ್ಲ. ಒಡೆಯ ಮತ್ತು ಜೀತದಾಳಿನ ನಡುವೆ ದುಡಿವ ಮತ್ತು ದುಡಿಸಿಕೊಳ್ಳುವ ಸಂಬಂಧದ ಆಚೆ ಬಿಡಿಸದ ನಂಟಿರುತ್ತದೆ. ನಿಷ್ಠೆಯಿಂದ ದುಡಿವ ಆಳಿನ ಮೇಲೆ ಒಡೆಯನಿಗೆ ಅಗಾಧವಾದ ಪ್ರೀತಿ ಇರುತ್ತದೆ. ಆಳಿಗೂ ಅಷ್ಟೇ. 'ಜಾತಿ' ಅವರ ಮಧ್ಯ ಒಡೆದು ಕಾಣುವ ರೇಖೆಯಾಗಿರುವುದಿಲ್ಲ. ಸಾಮಾಜಿಕವಾಗಿ ಈ ರೇಖೆ ಇರುತ್ತದೆಯೇ ಹೊರತು ಅವರಿಬ್ಬರ ನಡುವೆ ಅದು ಕಾಣಿಸುವುದಿಲ್ಲ ಎಂಬುದನ್ನು ಈ ಕಥೆ ಹೇಳುತ್ತದೆ. ಒಡೆಯ ಬಸವಂತರಾಯ, ಆಳು ಅರ್ಜುನರ ನಡುವೆ ಅನ್ಯೋನ್ಯ ಸಂಬಂಧವಿರುತ್ತದೆ. ಆದರೆ ಅರ್ಜುನನ ಮಗನಿಗೆ ಈ ಸಂಬಂಧವನ್ನು ಮುಂದುವರೆಸುವುದಿರಲಿ, ಅದನ್ನು ನೋಡಿ ಸಹಿಸುವುದಾಗುವುದಿಲ್ಲ. ಮಗನ ಸಿಟ್ಟು, ಆಕ್ರೋಶ ಅರ್ಜುನನಿಗೆ ಅರ್ಥವೇ ಆಗುವುದಿಲ್ಲ. ಬಸವಂತರಾಯ ಮತ್ತು ಅರ್ಜುನ ಇಬ್ಬರೂ ಈಚಿನ ಊರು-ಕೇರಿಗಳ ನಡುವೆ ನಡೆಯುವ ಜಗಳ, ದ್ವೇಷಗಳ ಬಗ್ಗೆ ಬೇಸರಪಡುತ್ತಾರೆ. ಅರ್ಜುನನ ಮಗನ ಗುಂಪು ಬಸವಂತರಾಯನ ಬಣವಿಗೆ ಬೆಂಕಿ ಹಚ್ಚಲು ಬರುತ್ತದೆ. ಅರ್ಜುನ ಅದನ್ನು ಪ್ರಾಣದ ಭಯವಿಲ್ಲದೆ ಎದುರಿಸಿ ಹೊಡೆದು ಓಡಿಸಿ ಒಡೆಯನ ಬಣವಿಯನ್ನು ಉಳಿಸುತ್ತಾನೆ. ಬಸವಂತರಾಯನ ಜಾತಿ ಹುಡುಗರು ಕೇರಿಯ ಗುಡಿಸಲುಗಳಿಗೆ ಬೆಂಕಿ ಹಚ್ಚಲು ಪ್ರಯತ್ನ ನಡೆಸಿ ಹಚ್ಚಿಬಿಡುತ್ತಾರೆ. ಅದನ್ನು ಕಂಡ ಬಸವಂತರಾಯ ಬೆಂಕಿ ಆರಿಸಲು ಓಡುತ್ತಾನೆ.

ಈ ಕಥೆಯಲ್ಲಿ, ತಲೆಮಾರುಗಳ ನಡುವಿನ ಸಂಘರ್ಷವಿದೆ. ಇದಕ್ಕೆ ಇರುವ ಕಾರಣವೆಂದರೆ ಮೇಲ್ಜಾತಿ ಜನ ತಲೆತಲಾಂತರಗಳಿಂದ ನಮ್ಮನ್ನು ಆಳುತ್ತ ಬಂದಿದ್ದಾರೆ ಎಂಬುದನ್ನು ಅಕ್ಷರ ಕಲಿತ ದಲಿತ ಹುಡುಗರು ಭಾವಿಸಿ ಈಗ ಅದನ್ನು ಸೇಡಿನ ರೂಪದಲ್ಲಿ ತೀರಿಸಿಕೊಳ್ಳಲು ನಿಂತಿದ್ದಾರೆ. ಇದಕ್ಕೆ ಪ್ರತಿಯಾಗಿ ಮೇಲ್ಜಾತಿಯ ಕಲಿತ ಹುಡುಗರೂ ತಯಾರಾಗಿದ್ದಾರೆ. ಇದರಿಂದ ಊರು-ಕೇರಿಯಲ್ಲಿ ಸಂಘರ್ಷ ನಡೆಯುತ್ತಿದೆ. ಇದು ಹಳೆ ತಲೆಮಾರಿನ ಬಸವಂತರಾಯ ಅರ್ಜುನ ಇಬ್ಬರಿಗೆ ಇದು ಅನಾವಶ್ಯಕವಾಗಿ ನಡೆಯುತ್ತದೆ, ಇದು ಮನುಷ್ಯರು ಮಾಡುವ ಕೆಲಸವಲ್ಲ ಎಂದು ಆತಂಕಗೊಳ್ಳುತ್ತಾರೆ. ಇಂದಿನ ಅಕ್ಷರ ಕಲಿತ ಕೇರಿಯ ಹುಡುಗರು ಈ ಎರಡು ವರ್ಗಗಳ ಮಧ್ಯ ಯಾವುದೇ ಬಗೆಯ ಸಂಬಂಧ ಇರುವುದನ್ನು ನಿರಾಕರಿಸುತ್ತಾರೆ. ಇದೇ ಬಿಕ್ಕಟ್ಟಿಗೆ ಕಾರಣವಾಗಿದೆ. ಅಂತಿಮವಾಗಿ ಇದಕ್ಕೆ ಕೊನೆ ಎಲ್ಲಿ? ಈ ಪ್ರಶ್ನೆಗೆ ಪುನಃ ಬಸಂತರಾಯ-ಅರ್ಜುನರ ಮಧ್ಯದ ಪ್ರೀತಿಯೇ ಉತ್ತರವಾಗಿ ನಿಲ್ಲುತ್ತದೆ.

ಚಂದ್ರಕಾಂತ ಕುಸನೂರರ ಕಥೆಗಳನ್ನು ಗಮನಿಸಿದರೆ, ಅಲ್ಲಿ ಜಮೀನ್ದಾರರ ಅಧೀನದಲ್ಲಿದ್ದ ದುಡಿಯುವ ವರ್ಗದವರು ಅನೇಕ ರೀತಿಯಿಂದ ಶೋಷಣೆಗೆ ಗುರಿಯಾಗುತ್ತಿದ್ದರೂ ನಿರೋಧಿಸುವ ಗುಣವನ್ನೇ ಕಳೆದುಕೊಂಡಿದ್ದರು. ಅದಕ್ಕೆ ಕೆಳವರ್ಗದವರ ಬಡತನ, ಹಸಿವು ಮುಂತಾದ ಆನೇಕ ಕಾರಣವಾಗಿದ್ದವು. ಎಷ್ಟೇ ದಮನಕ್ಕೆ ಒಳಗಾದರೂ ಸಹಿಸಿಕೊಂಡೇ ಬದುಕಬೇಕಾಗಿತ್ತು. ಯಾವುದೋ ಸಂದರ್ಭದಲ್ಲಿ ಜಮೀನ್ದಾರರ ಅಧೀನದಲ್ಲಿದ್ದವರು ವಿರೋಧಿಸುವ ಗುಣವನ್ನು ಕಂಡರೆ ಸಾಕು ಮುಗಿಸಿಬಿಡುತ್ತಿದ್ದರು. ಚೆನ್ನಣ್ಣ ವಾಲೀಕಾರರ ಕಥೆಗಳಲ್ಲಿಯೂ ಈ ಅಂಶ ಕಾಣುತ್ತದೆ. ಶೋಷಣೆಗೆ ಒಳಗಾಗುವವರು ಒಟ್ಟಾಗಿ ತಮ್ಮ ಶಕ್ತಿಯನ್ನು ಪ್ರಯೋಗಿಸಲು ಸಾಧ್ಯವಾಗದಂತೆ ಫ್ಯೂಡಲ್ ವ್ಯವಸ್ಥೆಯೇ ವ್ಯವಸ್ಥಿತವಾಗಿ ಮುರಿಯುತ್ತಿತ್ತು. ಅನೇಕ ಸಂದರ್ಭಗಳಲ್ಲಿ ಕೆಳವರ್ಗದವರು ತಮಗೆ ಒದಗಿದ ವಿಪತ್ತಿನಿಂದ ಬಿಡುಗಡೆಯಾಗಲು ವೈಯಕ್ತಿಕ ನೆಲೆಯಲ್ಲಿ ಹೋರಾಡಿ ತಮ್ಮ ಶಕ್ತಿಯನ್ನು ವ್ಯಕ್ತಪಡಿಸಿದ್ದಾರೆಯೇ ಹೊರತು ಒಟ್ಟಾಗಿ ಅಲ್ಲ. ಭಾಲಚಂದ್ರ ಜಯಶೆಟ್ಟಿ ಅವರ ಕಥೆಗಳಲ್ಲಿಯೂ ಇದು ಕಾಣಿಸುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೆಳವರ್ಗದವರು ಜಮೀನ್ದಾರರ ವಿರುದ್ಧ ಒಟ್ಟಾಗಿ ವಿರೋಧಿಸುವ ಶಕ್ತಿಯನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ದಮನಕ್ಕೆ ಒಳಗಾಗುತ್ತಿದ್ದೇವೆ ಎಂಬ ಪ್ರಜ್ಞೆ ವೈಯಕ್ತಿಕ ನೆಲೆಯಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಮೂಡುತ್ತಿತ್ತು. 'ಹೊಲಗೇರಿ' (ಚೆನ್ನಣ್ಣ ವಾಲೀಕಾರ) ಕಥೆಯಲ್ಲಿ ಯಾಕೆ ಈ ಪ್ರಜ್ಞೆ ಶೋಷಿತರಿಗೆ ಮೂಡಲು ಸಾಧ್ಯವಾಗುತ್ತಿರಲಿಲ್ಲ ಎಂಬುವುದಿದೆ. ಸ್ವಾತಂತ್ರ್ಯಾನಂತರ ರಾಜಕೀಯ ಪ್ರಜ್ಞೆ ಕೆಳವರ್ಗದವರಲ್ಲಿ ಮೂಡತೊಡಗಿತು. ಆಗ ಒಟ್ಟಾಗಿ ಹೋರಾಡುವ ಶಕ್ತಿಯನ್ನು ಪ್ರಕಟಿಸಲು ಪ್ರಯತ್ನಿಸಲಾಯಿತು.

ಆಗಲೂ ಮೇಲ್ವರ್ಗದವರು ರಾಜಕೀಯ, ಆರ್ಥಿಕ, ಧಾರ್ಮಿಕ ಶಕ್ತಿಯಿಂದ ಪ್ರಬಲರಾಗಿದ್ದರಿಂದ ಕೆಳವರ್ಗದವರ ಪ್ರಯತ್ನ ವಿಫಲಗೊಳ್ಳುತ್ತಿವೆ. ಇದರಿಂದ ಪುನಃ ಮೇಲ್ವರ್ಗದವರ ದಮನ ಕೃತ್ಯಗಳು ಮುಂದುವರೆದಿವೆ. 'ನೀರು ಮತ್ತು ನೆತ್ತರು' (ಗೀತಾ ನಾಗಭೂಷಣ) ಕಥೆಯಲ್ಲಿ ಒಟ್ಟಾಗಿ ವಿರೋಧಿಸಿದ ಕೆಳವರ್ಗದವರನ್ನು ಬಗ್ಗು ಬಡಿಯಲಾಯಿತು. ಇದರ ಸಂಕೀರ್ಣ ಸ್ವರೂಪ 'ಮಲಿನ ಮಜ್ಜನ ನ್ಯಾಯಕ್ಕೆಳಸಿ' (ಶಾಂತರಸ) ಕಥೆಯಲ್ಲಿದೆ. ರಾಜಕೀಯ ಬೆಂಬಲ ಪಡೆದಿದ್ದರೂ ಕೆಳವರ್ಗದವರ ಶೋಷಣೆ ಮುಂದುವರೆಯುತ್ತದೆ.

ಫ್ಯೂಡಲ್ ವ್ಯವಸ್ಥೆ ಮತ್ತು ಮಹಿಳೆಯರ ಬದುಕು

'ಶಾನುಭೋಗರ ಬಾವಿ'(ಬೆಳಗೆರೆ ಪಾರ್ವತಮ್ಮ) ಕಥೆಯಲ್ಲಿ ಬರುವ ಮಡಿವಾಳರ ಮಾಳಿ ತಂದೆ-ತಾಯಿಗಳನ್ನು ಕಳೆದುಕೊಂಡ ತಬ್ಬಲಿ. ತಾತನ ಆಶ್ರಯದಲ್ಲಿ ಬೆಳೆದದ್ದು ಕೆಲವೇ ದಿನಗಳು. ಹಕ್ಕಿಯಂತೆ ಹಾರುವ, ಮೀನಿನಂತೆ ಈಜುವ ಮಾಳಿ ಮುಗ್ಧಳು. ಅವಳ ಯೌವನವೇ ಅವಳಿಗೆ ಮುಳುವಾಗುವ ಕಾಲ ಬಂದಿತು. ಶಾನುಭೋಗರ ಮಗ ರಂಗಣ್ಣ ತನ್ನ ತೋಟದ ಬಾವಿಯಲ್ಲಿ ಮಾಳಿಗೆ ಮಾತ್ರ ಬಟ್ಟೆ ಒಗೆಯಲು ಅವಕಾಶ ನೀಡಿದ್ದ. ಒಂದು ದಿನ ಮಾಳಿಯನ್ನು ಬಾವಿಯಲ್ಲಿ ತಬ್ಬಿಕೊಂಡ. 'ದೊಡ್ಡಕುಲ'ದ ರಂಗಣ್ಣ ಬಳಸಿ ಹಿಡಿದದ್ದೇ ಅವಳಿಗೆ ವಿಚಿತ್ರವಾಯಿತು. ಅವನಿಗೆ ಬೇಕಾದದ್ದನ್ನು ಅವಳಿಂದ ಪಡೆದದ್ದೇನೋ ನಿಜ. ಆದರೆ ಅದು ಬಯಲಾಗಬಾರದೆಂದು, 'ತನ್ನ ದೊಡ್ಡಕುಲ'ದ ಪ್ರತಿಷ್ಠೆಗೆ ಕುಂದು ಬರಬಾರದೆಂದು ರಂಗಣ್ಣ ತನ್ನ ಕುಲದ ಜಾಣತನ ಉಪಯೋಗಿಸಿಕೊಂಡು ಮಾಳಿಗೆ ಬೋಧಿಸಿದ: ತಾನು ಅವಳು ಜನ್ಮಜನ್ಮಾಂತರದಲ್ಲಿ ದಂಪತಿಗಳೆಂದೂ, ಯಾವುದೋ ತಪ್ಪಿಗೆ ಅವಳು 'ಕೀಳು' ಕುಲದಲ್ಲಿ ಹುಟ್ಟಿದ್ದಾಗಿಯೂ, ಈಗ ತಮ್ಮ ಕೂಡುವಿಕೆಯಿಂದ ಅವಳ ಪಾಪವೆಲ್ಲ ನೀಗುತ್ತದೆಂದು, ಆದರೆ ಪಾಪ ನೀಗುವವರೆಗೆ ತಮ್ಮ ಈ ಸಂಬಂಧ ಗುಪ್ತವಾಗಿ ಉಳಿಸಿಕೊಳ್ಳಬೇಕೆಂದು ಎಚ್ಚರಿಸಿದ. ಈ ಸಂಬಂಧದ ಫಲ ಮಾಳಿ ಬಸುರಾಗಿ ಹಡೆದಳು. ಸಮಾಜದಲ್ಲಿ ಕಳಂಕ ಹೊತ್ತು, ಅಪಮಾನ ಸಹಿಸಿಕೊಂಡು ತನ್ನ 'ಕೀಳು' ಕುಲದಿಂದ ಮತ್ತು ಹಿಂದಿನ ಜನ್ಮದಲ್ಲಿ ಮಾಡಿದ ಪಾಪದಿಂದ ಮುಕ್ತಳಾಗಲು ದಾರಿಯನ್ನು ಕಾಯ್ದಳು. ಒಂದು ದಿನ ಮಾಳಿಯ ಮಗ ಬಾವಿಗೆ ಈಜಲು ಹಾರಿದ. ಮೇಲೆ ಬರಲಿಲ್ಲ. ಮಾಳಿ ಇಳಿದು ಮಗನನ್ನು ಎತ್ತಲು ಪ್ರಯತ್ನಿಸಿದಳು. ಸಾಧ್ಯವಾಗದೆ ಕೂಗಿಕೊಂಡಳು. ತೋಟದ ಜೀತದಾಳುಗಳು, ರಂಗಣ್ಣ ಬಂದು ನೋಡಿದರು. ರಂಗಣ್ಣನಿಗೆ ಇನ್ನು ಮೇಲೆ ಅವಳಿಂದ ಪಡೆಯಬೇಕಾದದ್ದು ಏನೂ ಇರಲಿಲ್ಲ. 'ದೊಡ್ಡಕುಲ'ದ ರಂಗಣ್ಣ ಮಾಳಿಯನ್ನು ಮುಟ್ಟಿ ತೆಗೆಯುವಂತಿಲ್ಲ. ಜೀತದಾಳುಗಳು ಶಾನುಭೋಗರ ಬಾವಿಗೆ ಇಳಿಯಬಾರದು. ಮಾಳಿ ಎಲ್ಲರ ಕಣ್ಣೆದುರಿನಲ್ಲಿ ಮಗನೊಂದಿಗೆ ಬಾವಿಯಲ್ಲಿಯೇ ಸತ್ತಳು.

ಇದು ಅರವತ್ತರ ದಶಕದಲ್ಲಿ ಬರೆದ ಕಥೆ. ಪುರಾತನ ಕಾಲದ ಪುರಾಣ ಕಥೆಯಂತಿದೆ. ಆದರೂ ಇದು ಬ್ರಾಹ್ಮಣ ಮತ್ತು ಅಸ್ಪೃಶ್ಯರ ನಡುವಿನ ಲೈಂಗಿಕ ಸಂಬಂಧವನ್ನು ಮತ್ತು ಶೋಷಣೆಯನ್ನು ತೋರಿಸುವಂತಿದೆ. ಸಮಾಜದಲ್ಲಿ ಮತ್ತೊಬ್ಬರ ಸ್ಥಾನಮಾನಕ್ಕೆ ಧಕ್ಕೆ ಬರದಂತೆ ನೋಡಿಕೊಂಡ ಮಾಳಿ ತನ್ನ ಮಾನ ಮತ್ತು ಜೀವ ಎರಡನ್ನೂ ಕಳೆದುಕೊಂಡಳು. ಕೆಳವರ್ಗದ ಮಹಿಳೆಯರ ಬದುಕಿನ ಅವಸ್ಥೆಯಿದು. ಮಾಳಿಯ ಮೌನದ ಹಿಂದೆ ದೊಡ್ಡ ಕುಲದವನ ಹುನ್ನಾರ ಇತ್ತು, ಅವಳು ಬಲಿಯಾದಳು. **'ಎಲ್ಲಮ್ಮನ ಸೇವೆ'** ಮತ್ತು **'ಶೋಭಾನ'**(ಭಾಲಚಂದ್ರ ಜಯಶೆಟ್ಟಿ) ಈ ಎರಡು ಕಥೆಗಳಲ್ಲಿ ದಾನವ್ವ, ಚೆನ್ನವ್ವ ಎಂಬ ಇಬ್ಬರು ತಮ್ಮ ಮಾನ ಉಳಿಸಿಕೊಳ್ಳಲು ಶಕ್ತಿ ಮೀರಿ ಪ್ರತಿಭಟಿಸುತ್ತಾರೆ. ಸಾಧ್ಯವಾಗುವುದಿಲ್ಲ. ಸಂಪ್ರದಾಯದ ಹೆಸರಿನಲ್ಲಿ ಚೆನ್ನವ್ವನನ್ನು ಎಲ್ಲಮ್ಮದೇವಿಗೆ ಬೆತ್ತಲೆ ಸೇವೆ ಮಾಡಲು ಒತ್ತಾಯದಿಂದ ಮಾಡಿಸಿದ ಗೌಡ, ನಂತರ ಅವಳನ್ನು ಬಳಸಿಕೊಂಡ. ಗೌಡನ ಕೈವಾಡದಿಂದಲೇ ಚೆನ್ನವ್ವ ಲೈಂಗಿಕ ಬಳಕೆಗೆ ಒಳಗಾದಳು. ದಾನವ್ವ ಊರ ಸಂಪ್ರದಾಯದಂತೆ ಮದುವೆಯಾಗಿ ಗಂಡನ ಹಾಸಿಗೆಗೆ ಸೇರುವ ಮುನ್ನ ಗೌಡನ

ಹಾಸಿಗೆಗೆ ಹೋಗಿ 'ಬಾಜದ ಸೀರೆ' ಉಟ್ಟುಕೊಳ್ಳಬೇಕೆಂಬ ನಿಯಮಕ್ಕೆ ಬಗ್ಗಲೇಬೇಕಾಯಿತು. ಈ ಇಬ್ಬರು ಮಹಿಳೆಯರು ತಮ್ಮ ಮಾನವನ್ನು ಮಾಳಿಯಂತೆ ಮೌನವಾಗಿ ಕಳೆದುಕೊಳ್ಳಲಿಲ್ಲ. ವಿರೋಧಿಸಿ ತಮ್ಮ ಶಕ್ತಿಮೀರಿ ಅದರಿಂದ ಪಾರಾಗಲು ಪ್ರಯತ್ನಿಸಿದರೂ ಕೊನೆಗೆ ಸಮಾಜದ ಎದುರಿನಲ್ಲೇ ದಮನಕ್ಕೆ ಒಳಗಾಗಬೇಕಾಯಿತು. ಫ್ಯೂಡಲ್ ಶಕ್ತಿಗಳು ಸಂಪ್ರದಾಯದ ಹೆಸರಿನಲ್ಲಿ ಇವರಿಬ್ಬರನ್ನು ಬಳಸಿಕೊಳ್ಳುತ್ತವೆ.

'ನೆಲೆ'(ರಾಜಶೇಖರ ನೀರಮಾನ್ವಿ) ಕಥೆಯ ರಂಗಮ್ಮ, 'ಮಲ್ಕಮ್ಮ'(ಶಾಂತರಸ) ಕಥೆಯ ಮಲ್ಕಮ್ಮ ಇಬ್ಬರು ಮದುವೆಯಾದ ಹೆಂಗಸರು. ಮಾನವಂತರಾಗಿ ಸಂಸಾರ ಮಾಡುವ ಕನಸು ಕಂಡವರು. ಬಡತನವಿದ್ದರೂ ದುಡಿದು ತಿನ್ನುವ ಶಕ್ತಿಯುಳ್ಳವರು. ಗಂಡಂದಿರು ಮೈಗಳ್ಳರಾದರೂ ಅದನ್ನು ಸಹಿಸಿಕೊಂಡು, ಅವರಿಗೂ ತಮ್ಮ ದುಡಿತದಿಂದಲೇ ಹೊಟ್ಟೆ ತುಂಬಿಸಲು ಬೇಸರಪಡದವರು. ಹೊರಗಿನ ಗಂಡಸರ ದೃಷ್ಟಿಯನ್ನು ಎದೆಗಾರಿಕೆಯಿಂದ ಎದುರಿಸುವ ಗಟ್ಟಿ ಹೆಂಗಸರು. ಆದರೆ ಇವರ ಗಂಡಂದಿರೇ ಇವರನ್ನು ಅನ್ಯ ಗಂಡಸರಿಗೆ ಮಾರಲು ಪ್ರಯತ್ನಿಸುತ್ತಾರೆ. ಅನ್ಯ ಗಂಡಸರಿಂದ ತಮ್ಮ ಮಾನವನ್ನು ಕಾಪಾಡಿಕೊಂಡ ರಂಗಮ್ಮ, ಮಲ್ಕಮ್ಮರನ್ನು ಅವರ ಗಂಡಂದಿರೆ ಮಾರಲು ನಿಂತರೆ ಯಾರು ಕಾಪಾಡಬೇಕು? ಇವರಿಬ್ಬರು ಗಂಡಂದಿರನ್ನು ಧಿಕ್ಕರಿಸಿ ಹೊರಬರುತ್ತಾರೆ. ಆದರೆ ಆಸರೆಗೆ ಅನ್ಯ ಗಂಡಸರನ್ನೇ ಅನಿವಾರ್ಯವಾಗಿ ಆಶ್ರಯಿಸಬೇಕಾಯಿತು. ಇದನ್ನು ಗಮನಿಸಿದಾಗ ಮಹಿಳೆ ತನ್ನ 'ಮಾನ'ವನ್ನು ಕಾಪಾಡಿಕೊಳ್ಳಲು ದಾರಿಗಳೇ ಇಲ್ಲ ಅನಿಸುತ್ತದೆ. ಲೈಂಗಿಕವಾಗಿ ತುಳಿತಕ್ಕೆ ಒಳಗಾಗಲೇಬೇಕಾದಂಥ ಅವಸ್ಥೆ ಅವಳಿಗೆ ಒದಗಿಬರುತ್ತದೆ. ಇಂಥ ಅನಿವಾರ್ಯ ಸ್ಥಿತಿಯಲ್ಲಿಯೂ ಆಕೆಗೆ ಮಾನಕ್ಕಿಂತ ಬದುಕು ದೊಡ್ಡದೆಂದು ಕಾಣುತ್ತದೆ. ಮಾನ ಕಿತ್ತುಕೊಂಡವರ ಮುಂದೆ ತನ್ನ ಬದುಕನ್ನು ಕಟ್ಟಿಕೊಂಡು ನಿಲ್ಲುವ ಛಾತಿಯನ್ನು ಹೊಂದಿದ್ದಾಳೆ. 'ನೆಲೆ' ಕಥೆಯ ರಂಗಮ್ಮ ಇದಕ್ಕೆ ಸಾಕ್ಷಿ. ಈ ಮಹಿಳೆ ಕೇವಲ ಲೈಂಗಿಕ ದಮನಕ್ಕೆ ಒಳಗಾಗಿಲ್ಲ. ಅಂತಿಮವಾಗಿ ಸಂಸಾರದ ಜವಾಬ್ದಾರಿಯನ್ನು ಹೊರಬೇಕು. ಇಲ್ಲಿನ ಕುಟುಂಬಗಳು ಹೆಸರಿಗೆ ಪಿತೃಪ್ರಧಾನದಂತೆ ಕಾಣುತ್ತವೆ. ಆದರೆ ತೀರ ಕೆಳವರ್ಗದಲ್ಲಿ ಹೆಸರಿಗೆ ಗಂಡಸು ಇದ್ದರೂ ಮನೆಯ ಭಾರ ಹೆಂಗಸಿಗೆ ಇರುತ್ತದೆ. ಆದರೂ ಅವಳಿಗೆ ಸ್ವಾತಂತ್ರ್ಯವಿಲ್ಲ, ನೆಮ್ಮದಿಯಿಲ್ಲ. ಅವಳು ಹೋರಾಡಿ ಇದನ್ನು ಪಡೆದುಕೊಳ್ಳಬೇಕು. ಕೆಳವರ್ಗದ ಗಂಡಸು ಸೋಮಾರಿ. ಜವಾಬ್ದಾರಿ ಹೊರುವುದಕ್ಕೆ ಶಕ್ತನಲ್ಲ. ಇಂಥ ಸ್ಥಿತಿಯಲ್ಲಿ ಮಹಿಳೆಗೆ ಸಂಸಾರದ ಹೊರೆ ಅನಿವಾರ್ಯವಾಗಿ ಬೆನ್ನಿಗೆ ಬೀಳುತ್ತದೆ. ಅಡಿಗೆಮನೆಯಲ್ಲಿ ದುಡಿಯಬೇಕು. ಅಡಿಗೆ ಮನೆಯಲ್ಲಿ ಅನ್ನ ಕುದಿಯಬೇಕಾದರೆ ಹೆಂಗಸು ಹೊರಗೆ ಕೂಲಿಗೆ ಹೋಗಿ ದುಡಿಯಬೇಕು. ಮಕ್ಕಳ ಪಾಲನೆ ಮಾಡಬೇಕು. ಗಂಡಸರಿಗೆ ಜವಾಬ್ದಾರಿಯೇ ಇಲ್ಲವೆಂದರ್ಥವಲ್ಲ. ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ. 'ಲಕ್ಕಮ್ಮನ ಮಂದಿ'(ಮಲ್ಲಿಕಾರ್ಜುನ ಹಿರೇಮಠ) ಕಥೆಯಲ್ಲಿ, ಹನುಮವ್ವನ ಗಂಡ ಸಂಸಾರದ ತಾಪತ್ರಯಗಳಿಗೆ ಬೇಸತ್ತು ಹೆಂಡತಿ-ಮಕ್ಕಳನ್ನು ಬಸ್‌ಸ್ಟ್ಯಾಂಡಿನಲ್ಲೇ ಬಿಟ್ಟು ಕಣ್ಮರೆಯಾಗುತ್ತಾನೆ. ಹೆಂಡತಿ ಮಕ್ಕಳು ಸಂಸಾರ ಕಳ್ಳುಬಳ್ಳಿಯ ಬಗ್ಗೆ ಕಿಂಚಿತ್ ಮಾನವೀಯತೆ ಇರದವನಂತೆ ಓಡಿ ಹೋಗುತ್ತಾನೆ. ಆದರೆ ಹನುಮವ್ವನಿಗೆ ಗಂಟು-ಮೂಟೆ, ಮಕ್ಕಳನ್ನು ಬಿಟ್ಟು ಹೋಗಲಾಗುವುದಿಲ್ಲ. ಅದು ಸುಲಭವೂ ಅಲ್ಲ. ಮಕ್ಕಳನ್ನು ಉಡಿಯಲ್ಲಿ ತುಂಬಿಕೊಂಡೇ ಬದುಕಲು ನಿಲ್ಲುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಈ ಅನಾಥ ಹೆಂಗಸನ್ನು, ಅವಳ ಗೋಳನ್ನು ಯಾವ ಸಂಬಂಧವೂ ಇಲ್ಲದ ದಾರಿ ಹಿಡಿದು ಹೋಗುವಂಥ ನಾಗವ್ವ ಎನ್ನುವ ಹೆಂಗಸು ಹೊರುತ್ತಾಳೆ. ಕೇವಲ ಮಾನವೀಯ ಸಂಬಂಧದ ನೆಲೆಯಿಂದಲೇ ನಾಗವ್ವ ಹನುಮವ್ವನ ದುಃಖದಲ್ಲಿ ಭಾಗಿಯಾಗಿ ಆಶ್ರಯ ನೀಡುತ್ತಾಳೆ. ನಾಗವ್ವ ತನ್ನ ಒಂದು ಹೊತ್ತಿನ ತುತ್ತಿಗಾಗಿ ಪರದಾಡುವ ಸ್ಥಿತಿಯಲ್ಲಿಯೇ ಹನುಮವ್ವನ ಸಂಸಾರವನ್ನು ಎತ್ತಿ ಹಿಡಿದು, ಅವಳ ತುತ್ತಿಗಾಗಿಯೂ ಶ್ರಮಿಸುತ್ತಾಳೆ. ನಾಗವ್ವನ ಈ ಜವಾಬ್ದಾರಿ ಸಣ್ಣದಲ್ಲ. ಇದು ಕೆಳವರ್ಗದ ಮಹಿಳೆಯ ವ್ಯಕ್ತಿತ್ವದಲ್ಲಿದೆ. ಆದರೆ ದಾನವ್ವ, ಚೆನ್ನವ್ವ ಸಂಪ್ರದಾಯದ ಹಸರಿನಲ್ಲಿ ಬಲಿಯಾಗುವ ಮುನ್ನ ವಿರೋಧಿಸಲು ನಿಂತಾಗ, ಮೇಲ್ವರ್ಗದ ಗೌಡತಿಯರೇ ಅವರಿಬ್ಬರನ್ನು ತಗ್ಗುವಂತೆ ಮಾಡುತ್ತಾರೆ.

ಮಾನರಕ್ಷಣೆಗಾಗಿ ಕೆಳವರ್ಗದ ಹೆಂಗಸರು ನಿರಂತರವಾಗಿ ಹೋರಾಟ ನಡೆಸಿರುವುದು ಕಾಣುತ್ತದೆ. ಆದರೆ ಅವರು ಹೋರಾಟದಲ್ಲಿ ಸೋತು ಗಂಡಸಿನ ಅತ್ಯಾಚಾರಕ್ಕೆ ಬಲಿಯಾದರೂ, ಶೀಲಹರಣವೇ ಅಂತಿಮ ಕಾರಣವಾಗಿ ಯಾರೂ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳು ಅಪವಾದವಾಗಿ ಸಿಗುತ್ತವೆ. ಉಳಿದಂತೆ ಬಹುತೇಕ ಮಹಿಳೆಯರು ಬದುಕನ್ನು ಕಟ್ಟಿಕೊಂಡು ಬದುಕಲು ನಿಂತವರೇ ಹೆಚ್ಚು. ಯಾವುದೋ ಒತ್ತಡಕ್ಕೆ ಮಣಿದು, ಅಸಹಾಯಕತೆಯಿಂದ ಲೈಂಗಿಕ ಶೋಷಣೆಗೆ ಒಳಗಾಗಿ ಮಾನಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳು ಈ ಕಥೆಗಳಲ್ಲಿ ಸಿಗುವುದಿಲ್ಲ. ಇದು ಸಾವಿಗೆ ಅಂಜುವ ಪ್ರಶ್ನೆಯಲ್ಲ. ಮಾನ ಕಸಿಯುವ ಗಂಡಸನ್ನು ನಾಚಿಸುವ ಛಲದಂತೆ ಕಾಣುತ್ತದೆ.

'ಒರೆಗಲ್ಲು'(ದೇವೇಂದ್ರ ಕುಮಾರ ಹಕಾರಿ) ಕಥೆಯಲ್ಲಿ, ದೇಶ ಇಬ್ಭಾಗವಾದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಜಾತಿಗಲಭೆಗೆ ಕಮಲೆ ತನ್ನ ಗಂಡ, ಬಂಧು-ಬಳಗ, ಆಸ್ತಿ ಎಲ್ಲವನ್ನೂ ತೊರೆದು, ಮಾನ ಕಸಿಯಲು ಬಂದ ಮುಸ್ಲಿಂ ಯುವಕನಿಂದ ತಪ್ಪಿಸಿಕೊಂಡು ಲಾಹೋರಿನಿಂದ ಭಾರತಕ್ಕೆ ಬರುತ್ತಾಳೆ. ಮನೆಗೆಲಸಕ್ಕೆ ನಿಂತ ಕಮಲೆಯನ್ನು ಮನೆಯ ಒಡೆಯ ಅವಳ ಮಾನ ಕಸಿಯಲು ಪ್ರಯತ್ನಿಸುತ್ತಾನೆ. 'ನಿರಾಶ್ರಿತ'(ಶಿವಲೆಂಕ) ಕಥೆಯಲ್ಲಿ, ಕಮಲೆ ಎದುರಿಸಿದ ಬಿಕ್ಕಟ್ಟನ್ನೇ ಶೀಲ ಎದುರಿಸಿ, ನವಖಾಲಿಯಿಂದ ಭಾರತಕ್ಕೆ ಬಂದು ಚೋಶಿಯ ಅತ್ಯಾಚಾರಕ್ಕೆ ಬಲಿಯಾಗುತ್ತಾಳೆ. ಯಾವುದನ್ನು ಕಾಪಾಡಿಕೊಳ್ಳಲು ಸಾವಿರಾರು ಮೈಲುಗಳಿಂದ, ಎಲ್ಲವನ್ನೂ ಬಿಟ್ಟು ಬಂದಿದ್ದರೋ ಅಂಥ ಈ ಮಹಿಳೆಗೆ ಆಶ್ರಯ ನೀಡಿದವರೇ ಬಲಾತ್ಕರಿಸುತ್ತಾರೆ. 'ಚೇಲಿ'(ಗೀತಾ ನಾಗಭೂಷಣ) ಕಥೆಯಲ್ಲಿ, ಸೀನಿಂಗಿ ಗಂಡನನ್ನು ಕಳೆದುಕೊಂಡ ವಿಧವೆ. ಹೊರಗಿನ ಗಂಡಸರ ದೃಷ್ಟಿಯನ್ನು ಎದುರಿಸಿ, ತನ್ನ ಮಾನ ಕಾಪಾಡಿಕೊಂಡಿದ್ದಳು. ಆದರೆ ಮನೆಯೊಳಗಿನ ಮಾವ(ಗಂಡನ ತಂದೆ)ನೇ ಅವಳ ಮಾನವನ್ನು ಕಸಿದುಕೊಳ್ಳುತ್ತಾನೆ. 'ಸೋಲು'(ಲಲಿತಾ ದೇಮಶೆಟ್ಟಿ) ಕಥೆಯಲ್ಲಿ, ಗಂಗಿ ತನ್ನ ಜಾತಿಯಲ್ಲಿ ಬಸವಿಗೆ ಬಿಡುವುದನ್ನು ಕಂಡು ಹೇಸಿಕೊಂಡವಳು. ಅವಳಿಗೆ ಅಂಥ ಅವಕಾಶಕ್ಕೆ ಒತ್ತಾಯ ಬಂದಾಗ ಖಂಡಿಸಿ ನಿರಾಕರಿಸಿ ನಿಂತಳು. ಮದುವೆ ಮಾಡಿಕೊಂಡು ಗೌರವದಿಂದ ಸಂಸಾರ ಮಾಡಬೇಕೆಂದು ಕನಸು ಕಂಡಳು. ಸುಂದರವಾಗಿದ್ದ ಗಂಗಿಯನ್ನು ಅನುಭವಿಸಲು ಹತ್ತಾರು ಜನ ಪ್ರಯತ್ನಿಸಿ ಅವಳಿಂದ ಬಯ್ಯಿಸಿಕೊಳ್ಳುತ್ತಾರೆ. ಸಾಹುಕಾರ ಗಂಗಿಯ ಬಯಕೆ ತಿಳಿದು ತಾಳಿ ಕಟ್ಟಿ ಮದುವೆಯಾಗುತ್ತಾನೆ. ಎಲ್ಲರಂತೆ ಗಂಗಿ ಸಂಸಾರಕ್ಕೆ ತೊಡಗಿದಳು ಎನ್ನುವ ಹೊತ್ತಿಗೆ ಸಾಹುಕಾರನ ವಂಚನೆಗೆ ಬಲಿಯಾಗುತ್ತಾಳೆ. ಅವನು ಅವಳನ್ನು ಬಾಂಬೆಗೆ ಮಾರಿಬಿಡುತ್ತಾನೆ. ಬಸವಿಯಾಗಲು ನಿರಾಕರಿಸಿ ಅನೇಕ ಸಂಕಷ್ಟಗಳನ್ನು ಎದುರಿಸಿದ್ದ ಗಂಗಿ ಕೊನೆಗೆ ಸಾಹುಕಾರನ ಕ್ರೌರ್ಯಕ್ಕೆ ಬಲಿಯಾಗಿ ಬಾಂಬೇ ಸೇರಿ ಸೂಳೆಯಾದಳು.

'ಢಾಲು'(ಗೀತಾ ನಾಗಭೂಷಣ) ಕಥೆಯಲ್ಲಿ, ಮಾಗಿಯ ಗಂಡ ಗೌಡ ಮಾಡಿದ ಕೊಲೆಯನ್ನು ತಾನೆ ಮಾಡಿದ್ದೇನೆಂದು ಒಪ್ಪಿಕೊಂಡು ಜೈಲಿಗೆ ಹೋಗಿದ್ದ. ಗೌಡನ ಮೇಲೆ ಜೀತದಾಳಿನ ನಿಷ್ಠೆಯಿಂದಾಗಿ ಇದು ನಡೆದಿತ್ತು. ಹರೆಯದ ಮಾಗಿ ಒಂಟಿಯಾಗಿ ಗಂಡ ಜೈಲಿನಿಂದ ಬರುವುದನ್ನೇ ಕಾಯುತ್ತ ಅದೇ ಗೌಡನ ಹೊಲದಲ್ಲಿ ದುಡಿಯುತ್ತಿದ್ದಳು. ಗೌಡ ಮಾಗಿಯ ಮೇಲೆ ಕಣ್ಣಿಟ್ಟ. ಅದು ಅವಳಿಗೆ ಗೊತ್ತಾಯಿತು. ತಪ್ಪಿಸಿಕೊಳ್ಳುವುದು ಅಸಾಧ್ಯ. ಆದರೆ ಗಂಡನ ಮೇಲೆ ನಿಷ್ಠೆ ಇಟ್ಟುಕೊಂಡಿದ್ದ ಮಾಗಿ ಬಿಕ್ಕಟ್ಟು ಎದುರಿಸಬೇಕಾಯಿತು. ಯೋಚಿಸಿ ಮೈಮೇಲೆ ಮರಗವ್ವನನ್ನು ತಂದುಕೊಂಡು, ಮೈತುಂಬಿ ತೂರಾಡಿ ಕೇರಿ ಮಂದಿಯನ್ನು ಕೂಡಿಸಿ, 'ಮಾಗಿ ಮ್ಯಾಲ ಯಾವ ಬ್ಯಾರೆ ಗಂಡಸನ ನೆಳ್ಳುನೂ ಬೀಳಬಾರ್ದು. ಬೀಳಲಾರ್ದಂಗ ಕೇರಿ ಮಂದೆಲ್ಲ ಕಾಯ್ಬೇಕು' ಎಂದು ಆಜ್ಞಾಪಿಸಿದಳು. ಅಂದಿನಿಂದ ಮಾಗಿ ಮರಗವ್ವನ ಖಾಸಾಮಗಳಾಗಿ ದೇವಿಯಂತೆ ನಟಿಸಿದಳು. ಗಂಡ ಜೈಲಿನಿಂದ ಬರುವವರೆಗೆ ಗೌಡನ ಕಟ್ಟುಗಣ್ಣಿನಿಂದ ಪಾರಾದಳು. ಮಾನ ಉಳಿಸಿಕೊಳ್ಳಲು ಮಾಗಿ ಮಾಡಿದ ನಾಟಕ ನೋಡಿದರೆ, ಕೆಳವರ್ಗದ ಮಹಿಳೆಯರು ತಮ್ಮ ಪಾವಿತ್ರ್ಯವನ್ನು ರಕ್ಷಿಸಿಕೊಳ್ಳಲು ನಿರಂತರವಾಗಿ ಹೋರಾಡಿದ ರೀತಿ ಮನದೆದುರು ಬರುತ್ತದೆ.

'ಮೂಡಲದಾಗ ಕೆಂಪುರಾಶಿ ಮೂಡಿತ್ತು'(ಶ್ರೀಕಾಂತ ಪಾಟೀಲ್) ಕಥೆಯ ಸಣ್ಣಿಯ ಹೋರಾಟ ಸಣ್ಣದಲ್ಲ. ಸಾಮಾನ್ಯವಾಗಿ ಮೇಲಿನ ಕಥೆಗಳಲ್ಲಿ ಬರುವ ಮಹಿಳೆಯರು ಮೇಲ್ವರ್ಗದವರ ಕ್ರೌರ್ಯದ ವಿರುದ್ಧ ಹೋರಾಡಿದರೆ ಈ ಕಥೆಯ ಸಣ್ಣಿ ತನ್ನ ಮೈದುನರ ವಿರುದ್ಧ ಹೋರಾಡುತ್ತಾಳೆ. ಗಂಡನನ್ನು ಕಳೆದುಕೊಂಡ ಮೇಲೆ ಬಸುರಾದ್ದಕ್ಕೆ, ಮೇಲಾಗಿ ಹೆಣ್ಣು ಹಡೆದದ್ದಕ್ಕೆ ಈ ಎರಡು ಕಾರಣಗಳಿಂದಾಗಿ ಸಣ್ಣಿಗೆ ಮೈದುನರು ಅವಳಿಗೆ ಬರಬೇಕಾಗಿದ್ದ ಹೊಲದ ಪಾಲನ್ನು ಕೊಡಲು ನಿರಾಕರಿಸಿ ಕಿರುಕುಳ ನೀಡುತ್ತಾರೆ. ತನ್ನ ಗಂಡನಿಗೆ ಬರಬೇಕಾದ ಆಸ್ತಿಯನ್ನು ಗಂಡಸತ್ತರೇನಾಯಿತು? ಮಗಳಿದ್ದಾಳೆ ಮತ್ತು ಅವಳೂ ಬದುಕಿದ್ದಾಳೆ. ಈ ಕಾರಣದಿಂದ ಸಣ್ಣಿ ಪಾಲು ಬೇಡುತ್ತಾಳೆ. ಕೊನೆಗೆ ಮೈದುನರನ್ನು ಲೆಕ್ಕಿಸದೆ ತನಗೆ ಬರಬೇಕಾಗಿದ್ದ ಹೊಲದಲ್ಲಿ ಉಳಲು ನಿಲ್ಲುತ್ತಾಳೆ. ಅಡ್ಡ ಬಂದ ಮೈದುನರಿಗೆ ಹೊಡೆದು ಅಟ್ಟುತ್ತಾಳೆ. ಸಣ್ಣಿ ಮಗಳ ಭವಿಷ್ಯಕ್ಕಾಗಿ ಎದೆಗಾರಿಕೆಯಿಂದ ಹೋರಾಡುತ್ತಾಳೆ.

ಕೆಳವರ್ಗದ ಮಹಿಳೆ ಕೇವಲ ಪಾವಿತ್ರ್ಯವನ್ನು ರಕ್ಷಣೆ ಮಾಡಿಕೊಳ್ಳುವುದರಲ್ಲೇ ಉಳಿಯುವುದಿಲ್ಲ. ಅದು ಕೇವಲ ಪ್ರಾರಂಭದ ದಿನಗಳಲ್ಲಿ ನಡೆಸುವ ಹೋರಾಟ. ಯೌವನಕ್ಕೆ ಕಾಲಿಡುತ್ತಿದ್ದಂತೆ ಎದುರಿಸುವ ಬಿಕ್ಕಟ್ಟು ಮಾತ್ರ. ಬದುಕಿನಲ್ಲಿ ಸಾಯುವವರೆಗೆ ಒಂದಲ್ಲ ಒಂದು ಬಿಕ್ಕಟ್ಟಿಗೆ ಗುರಿಯಾಗುತ್ತಲೇ ಇರುತ್ತಾಳೆ. ಚೆನ್ನಣ್ಣ ವಾಲಿಕಾರರ ಕಥೆಗಳಲ್ಲಿ ಬರುವ ಮಹಿಳೆಯರಾದ ಕಣ್ಣೆಮ್ಮ, ನೀಲಮ್ಮ, ಜಕ್ಕವ್ವ, ಅಂಬವ್ವ ಇವರೆಲ್ಲ ಬಂಡಾಯಗಾರರೆ. ವಾಲೀಕಾರರ ಆಶಯಕ್ಕೆ ಈ ಪಾತ್ರಗಳು ದುಡಿದಿವೆ. ಆದರೂ ವಾಲೀಕಾರರ ಉದ್ದೇಶ ಪೂರ್ವಕ ಬಂಡಾಯದ ಆಶಯವನ್ನು ಬದಿಗೊತ್ತಿ, ಕೆಲವು ಪಾತ್ರಗಳು ಜೀವಂತವಾಗಿ ನಿಂತಿವೆ. **'ಕೆಸರಲ್ಲಿ ಕೆಸರಾಗಿ ಹೋದ ಕಮಲ'** ಕಥೆಯಲ್ಲಿ, ವಿಜ್ಜಮ್ಮ ತನ್ನ ಮನೆತನದ ಸಂಪ್ರದಾಯದ ಶಾಪಕ್ಕೆ ಬಲಿಯಾದಂತೆ, 'ಇಟ್ಟುಕೊಂಡವನ' ಜತೆಗೆ ಬದುಕು ಸವೆಸಬೇಕು. ಮದುವೆಯ ಭಾಗ್ಯವಿಲ್ಲ. ಅವಳ ಚರಿತ್ರೆಯನ್ನು ಅರಿತ ಮಾಸ್ತಾರ ಅವಳನ್ನು ಮದುವೆಯಾಗಲು ಬರುತ್ತಾನೆ. ಪ್ರವಾಹಕ್ಕೆ ಸಿಕ್ಕ ಅವಳಿಗೆ ಮರದ ತುಂಡಿನಂತೆ ಮಾಸ್ತಾರ ಸಿಗುತ್ತಾನೆ. ಆದರೆ ಅವಳನ್ನು ಇಟ್ಟುಕೊಂಡ ವ್ಯಕ್ತಿಯಿಂದ ಬಿಡುಗಡೆ ಆಗುವುದು ಅವಳಿಂದ ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲ ಮಾಸ್ತಾರನ ಜೀವಕ್ಕೆ ಅಪಾಯ ಒದಗಿದಾಗ ಅವಳೇ ಅಸಹಾಯಕಳಾಗಿ ಹಿಂದೆ ಸರಿದು ಮಾಸ್ತಾರನ ಜೀವ ಉಳಿಸಲು ಪ್ರಯತ್ನಿಸುತ್ತಾಳೆ.

ಮಹಿಳೆ ತನಗೆ ಒದಗಿದ ಬದುಕನ್ನು ಅರ್ಥಪೂರ್ಣವಾಗಿ ಎದುರಿಸುವ ಎದೆಗಾರಿಕೆಯನ್ನು ತೋರಿಸುತ್ತಾಳೆ. ಇದೇ ಅವಳ ಶಕ್ತಿಯ ಅನನ್ಯತೆ. **'ಪಾರವ್ವನ ಪಂಚಾಯಿತಿ'**(ಜಯತೀರ್ಥ ರಾಜಪುರೋಹಿತ) ಕಥೆಯಲ್ಲಿ ಬರುವ ಪಾರವ್ವ ಮನೆತನದಿಂದ ಸೂಳೆಯಾದರೂ ಆತ್ಮಗೌರವ ಉಳ್ಳವಳು. ತನ್ನ ಕಸುಬಿನ ಬಗ್ಗೆ ಅವಳಿಗೆ ಹಿಂಜರಿಕೆಯಿದೆ, ಅಪಮಾನವಿದೆ. ಅವಳನ್ನು ಉಪಯೋಗಿಸಿದ ಗಂಡಸರಿಗೆ ಇಲ್ಲದ ಅವಮಾನ ಅವಳೂ ಉಳಿಸಿಕೊಂಡಿಲ್ಲ. ಆದರೆ ತನ್ನ ಅಂತರಂಗದಲ್ಲಿ ಪಶ್ಚಾತ್ತಾಪ ಪಟ್ಟಿದ್ದಾಳೆ. ತನ್ನ ಇಳಿ ವಯಸ್ಸಿನಲ್ಲಿ ಅನಿವಾರ್ಯವಾಗಿ ಗ್ರಾಮಪಂಚಾಯಿತಿ ಚುನಾವಣೆಗೆ ನಿಲ್ಲುವುದು ಬರುತ್ತದೆ. ಗೆದ್ದು ಅಧ್ಯಕ್ಷಳೂ ಆಗುತ್ತಾಳೆ. ಬಸವಿಯಾಗಿ ಬದುಕಿದ್ದಕ್ಕೆ ಒಳಗೆ ಎಂಥದೋ ಪಾಪಪ್ರಜ್ಞೆ ಇಟ್ಟುಕೊಂಡ ಆಕೆ ಅದನ್ನು ಮರೆಯಲೋ ಎಂಬಂತೆ, ಗಂಡಸರ ಎದುರಿಗೆ ಗಟ್ಟಿಯಾಗಿ ನಿಂತು ಊರಲ್ಲಿ ನಾಲ್ಕು ಕಾಲ ಬಾಳುವಂಥ ಕೆಲಸ ಮಾಡುತ್ತಾಳೆ. ಊರ ಗೌಡ, ಕುಲಕರ್ಣಿ ಮುಂತಾದವರು ಒಡ್ಡಿದ ಬಿಕ್ಕಟ್ಟುಗಳನ್ನೆಲ್ಲ ಎದುರಿಸಿ ಜನಪರ ಕೆಲಸಗಳನ್ನು ಮಾಡುತ್ತಾಳೆ. ಪಾರವ್ವ ಬಸವಿಯಾಗಿ, ನಂತರ ಗ್ರಾಮ ಪಂಚಾಯತಿಯ ಅಧ್ಯಕ್ಷಳಾಗಿ ಎರಡನ್ನು ಸ್ವೀಕರಿಸಿ ಪ್ರಾಮಾಣಿಕತೆಯಿಂದ ಬದುಕನ್ನು ಅನುಭವಿಸಿದಳು.

'ಹರಿದ ಕಾಗದದ ಚೂರುಗಳು' (ಶಿವಕುಮಾರ ಸಾಗವಾರ) ಕಥೆ ಮಂಡಲ ಪಂಚಾಯಿತಿ ವ್ಯವಸ್ಥೆಯ ಅವಸ್ಥೆಯನ್ನು ತೋರಿಸುತ್ತದೆ. ಅಧಿಕಾರ ವಿಕೇಂದ್ರಿಕರಣದ ಹೆಸರಿನ್ನಲ್ಲಿ ಜಾರಿಗೆ ಬಂದ ಈ ವ್ಯವಸ್ಥೆಯ ಪರಿಣಾಮಗಳ ವಾಸ್ತವ ಚಿತ್ರ ಇಲ್ಲಿದೆ. ದುಡಿದರೆ ಮಾತ್ರ ರೊಟ್ಟಿಕಾಣುವ ಶಿವಮ್ಮ ಕೆಳವರ್ಗದವರ ಪ್ರತಿನಿಧಿಯಾಗಿ ಅನಿವಾರ್ಯವಾಗಿ ಮಂಡಲ ಪಂಚಾಯಿತಿ

ಚುನಾವಣೆಯಲ್ಲಿ ನಿಂತು ಗೆಲ್ಲುತ್ತಾಳೆ. ಮೀಸಲಾತಿ ಪ್ರಕಾರ ಶಿವಮ್ಮನೆ ಸರಪಂಚಳಾಗುತ್ತಾಳೆ. ಊರ ಗೌಡನಿಗೆ ಸರಕಾರದ ನೀತಿಯಿಂದ ಅಧಿಕಾರ ಕೈ ತಪ್ಪಿಹೋಗುವ ಸಂದರ್ಭ ಬಂದಾಗ ತನ್ನ ಬೆಂಬಲಿಗಳು ಎಂದು ಅನಿವಾರ್ಯವಾಗಿ ಸಹಾನುಭೂತಿ ತೋರಿಸುತ್ತಾನೆ. ಬೆಳಗಾದರೆ ಕೂಲಿಗೆ ಹೋಗುವ ಮತ್ತು ಸರಪಂಚ ಹುದ್ದೆಯ ಅಧಿಕಾರದ ಗಂಧವಿಲ್ಲದ ಶಿವಮ್ಮನನ್ನು ಹೆಸರಿಗೆ ಮಾತ್ರ ಮುಖ್ಯಸ್ಥಳನ್ನಾಗಿ ಮಾಡಿಕೊಂಡು ಎಲ್ಲವನ್ನು ಗೌಡನೆ ಮಾಡತೊಡಗುತ್ತಾನೆ. ಶಿವಮ್ಮ ಅಸಹಾಯಕಳಾಗುತ್ತಾಳೆ. ತನ್ನ ದಲಿತರಿಗೆ ಸಿಗಬೇಕಾದ ಸೌಲತ್ತುಗಳು ಮೇಲ್ವರ್ಗದವರಿಗೆ ಸಿಗತೊಡಗುತ್ತವೆ. ಶಿವಮ್ಮನನ್ನು ಊರ ಜನ ಕೇಳತೊಡಗುತ್ತಾರೆ. ಅವಳು ಗೌಡನನ್ನು ಪ್ರಶ್ನಿಸಿದರೆ ಅನೇಕ ಬಿಕ್ಕಟ್ಟುಗಳನ್ನು ತಂದಿಡತೊಡಗಿದ. ಎಲ್ಲ ದೃಷ್ಟಿಯಿಂದ ಹಿಂದುಳಿದವಳೆಂದು ಶಿವಮ್ಮನಿಗೆ ಕಾನೂನಿನ ಪ್ರಕಾರ ಅಧಿಕಾರವೇನೋ ಸಿಕ್ಕಿತ್ತು ಆದರೆ ಅದರ ಸೂತ್ರ ಗೌಡನ ಕೈಯಲ್ಲಿತ್ತು. ಜನ ನಾನಾ ಬೇಡಿಕೆಗಳಿಗಾಗಿ ಶಿವಮ್ಮನನ್ನು ಒತ್ತಾಯಿಸುತ್ತಾರೆ. ಬೆಳಗಾದರೆ ಕೂಲಿಗೆ ಹೋಗಬೇಕು. ಗೌಡ ತಂದ ಯೋಜನೆಗಳಿಗೆ ಸಹಿ ಮಾತ್ರ ಹಾಕಬೇಕು. ಪ್ರಶ್ನಿಸಿದರೆ ಅವಳಿಗೆ ಊರಲ್ಲಿ ಕೂಲಿಯ ಕೆಲಸಕ್ಕೆ ಯಾರೂ ಕರೆಯದಂತೆ ಗೌಡ ವ್ಯವಸ್ಥೆ ಮಾಡಿದ್ದ. ಅವಳ ಗಂಡನನ್ನೂ ಕೇವಲ ಒಂದು ಸೀಸ ಹೆಂಡದಿಂದ ಕೊಂಡಿದ್ದ. ಇದರಿಂದ ಗೌಡ ಹೇಳಿದ್ದಕ್ಕೆ ಸಹಿ ಹಾಕಬೇಕೆಂದು ಗಂಡನೇ ಒತ್ತಾಯಿಸುತ್ತಾನೆ. ಇಂಥ ಹಲವಾರು ಬಿಕ್ಕಟ್ಟುಗಳಲ್ಲಿ ಸಿಕ್ಕು ಒದ್ದಾಡಿದ ಶಿವಮ್ಮ ಸರಪಂಚ ಹುದ್ದೆಗೆ ರಾಜೀನಾಮೆ ನೀಡಲು ನಿರ್ಧರಿಸುತ್ತಾಳೆ. ಆದರೆ ಈ ನಿರ್ಧಾರದಿಂದ ಏನೂ ಸಾಧಿಸಿದಂತಾಗುವುದಿಲ್ಲವೆಂದು, ತನ್ನ ಸ್ವಂತ ನಿರ್ಧಾರಗಳೇ ಜಾರಿಗೆ ಬರಬೇಕು ಎಂದು ರಾಜೀನಾಮೆಯನ್ನು ಹರಿದು ಎಸೆಯುತ್ತಾಳೆ.

ಒದಗಿದ ಬದುಕು ಧೈರ್ಯದಿಂದ ಬಾಳಲು ಕೆಳವರ್ಗದ ಈ ಮಹಿಳೆ ಎದೆಗಾರಿಕೆ ತೋರಿಸುತ್ತಾಳೆ. ಪಾರವ್ವ,ಶಿವಮ್ಮ ಪಾಲಿಗೆ ಬಂದದ್ದನ್ನು ಎದುರಿಸಿ ನಿಂತರೇ ಹೊರತು ಹಿಂಜರಿಯಲಿಲ್ಲ. ಈ ಪ್ರದೇಶದ ಕೆಳವರ್ಗದ ಮಹಿಳೆಯಲ್ಲಿ ಕಾಣುವ ಅನನ್ಯ ಶಕ್ತಿಯಿದು.

'ಮಲ್ಕಮ್ಮ' (ಶಾಂತರಸ) ಕಥೆಯಲ್ಲಿ ಜವಾಬ್ದಾರಿಯಿಲ್ಲದ, ಹೆಂಡತಿ ಎಂಬ ಕಿಂಚಿತ್ ಅಭಿಮಾನವಿಲ್ಲದ, ಅನ್ಯರಿಗೆ ಮಾರಲು ನಿಂತ ಗಂಡನ ಹೆಂಡತಿಯಾಗಿ ಮಲ್ಕಮ್ಮ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಪರಪುರುಷನಾದ 'ಬೂದೆಣ್ಣನ ಸೂಳೆ' ಎಂಬ ಅಪವಾದವನ್ನು ಅನಾವಶ್ಯಕವಾಗಿ ಹೊರಬೇಕಾಗುತ್ತದೆ. ಬೂದೆಣ್ಣನ ಜತೆ ಅವಳ ಸಂಬಂಧ ಇರುವುದೇ ಇಲ್ಲ. ಜನ ಸಂಬಂಧವನ್ನು ಕಲ್ಪಿಸಿ ಅದನ್ನು ಸತ್ಯ ಎಂಬಂತೆ ತಗುಲಿಸುತ್ತಾರೆ. ತನ್ನ ಪ್ರಾಮಾಣಿಕತೆಯನ್ನು ಹೇಗೆ ತೋರಿಸಬೇಕೆಂದು ತಿಳಿಯದೆ ಅಸಹಾಯಕಳಾಗಿ ನೋವನ್ನು ಅನುಭವಿಸಿ ಸಾಯಲು ನಿರ್ಧರಿಸುತ್ತಾಳೆ. ಸತ್ತರೂ 'ಬೂದೆಣ್ಣನ ಸೂಳೆ' ಎಂಬ ಅಪವಾದ ತಪ್ಪುವುದಿಲ್ಲ ಎಂಬ ಸತ್ಯ ಮಲ್ಕಮ್ಮನಿಗೆ ಗೊತ್ತಾಗುತ್ತದೆ. ಸಾವನ್ನು ನಿರಾಕರಿಸಿ ಬೂದೆಣ್ಣನ ಹಾಸಿಗೆಗೆ ಹೋಗಿ ಮಲಗುತ್ತಾಳೆ. ಇದು ಮಲ್ಕಮ್ಮನ ಸೋಲು ಎನಿಸುತ್ತದೆ. ಆದರೆ ಸೋಲಲ್ಲ. ಅವಳನ್ನು ಬಳಸಲು ನೋಡಿ ಸೋತವರೇ ಅವಳ ಬಗ್ಗೆ ಸುಳ್ಳು ಅಪವಾದ ಹೊರಿಸಿರುತ್ತಾರೆ. ಗಂಡನೂ ಓಡಿಹೋಗಿರುತ್ತಾನೆ. ಸೀತೆಯಂತೆ ಸಾಬೀತು ಮಾಡಿ ಸಾಧಿಸುವುದೇನಿದೆ? ಅದರಿಂದ ಯಾವ ಫಲವಿಲ್ಲ ಎಂದು ಅವಳು ಹೊಸ ನೆಲೆ ಪಡೆಯುತ್ತಾಳೆ.

ಮಲ್ಕಮ್ಮನಿಗೆ ವ್ಯತಿರಿಕ್ತವಾದ ಮಹಿಳೆ 'ಬೆಳಕಿನೆಡೆಗೆ' (ಗೀತಾ ನಾಗಭೂಷಣ)ಕಥೆಯ ಭವಾನಿಯದು. ಯೌವ್ವನದಲ್ಲಿ ಗೌಡನ ಮಗ ಈರಣ್ಣನ ಬಲತ್ಕಾರಕ್ಕೆ ಒಳಗಾದರೂ, ನ್ಯಾಯ ಬೇಡಿ ಅವನಲ್ಲೇ ನೆಲೆ ಪಡೆಯುತ್ತಾಳೆ. ಆದರೆ 'ಇಟ್ಟುಕೊಂಡವಳು' ಎನಿಸುತ್ತಾಳೆಯೇ ಹೊರತು ಹೆಂಡತಿಯಾಗಿ ಪಡೆಯುವ ಗೌರವ ಭವಾನಿಗೆ ಸಿಗುವುದಿಲ್ಲ. ಕೆಳವರ್ಗದವಳಿಗೆ ಗೌಡನ ಮಗನ ಹೆಂಡತಿಯಾಗಿ ಸ್ಥಾನಪಡೆಯಲು ಅಸಾಧ್ಯವಾದದ್ದು. ಆದರೆ ನೆಲೆ ಪಡೆದ ಭವಾನಿ ಈರಣ್ಣನಿಗೆ ನಿಷ್ಠಳಾಗಿ ಹೆಂಡತಿಯಂತೆ ಬಾಳುತ್ತಾಳೆ.

ಗೌರಿ ಎಂಬ ಮಗಳನ್ನು ಪಡೆದು ಬೆಳೆಸುತ್ತಾಳೆ. ಭವಾನಿಯ ಕನಸೆಂದರೆ ತನ್ನ ಮಗಳು ಗೌರಿ ತನ್ನಂತೆ 'ಇಟ್ಟುಕೊಂಡವಳಂತೆ' ಬದುಕಬಾರದು, ಮದುವೆಯಾಗಿ ಗೌರವದಿಂದ ಬಾಳಬೇಕೆಂಬ ಆಸೆಯಾಗಿತ್ತು. ಈರಣ್ಣನೇ ತನ್ನ ಜಾತಿಯ ವರನನ್ನು ಹುಡುಗಿ ಗೌರಿಗೆ ಮದುವೆ ಮಾಡಬೇಕೆಂದು ಭವಾನಿ ಹಠಹಿಡಿಯುತ್ತಾಳೆ. ಈರಣ್ಣನಿಗೆ ಅದು ಸಮಸ್ಯೆಯೇ. ಮೊದಲೇ ಭವಾನಿ ಕೆಳವರ್ಗದವಳು, ಗೌರಿಯನ್ನು ಕೆಳವರ್ಗದವರು ಒಪ್ಪಬಹುದೇ ಹೊರತು ಮೇಲ್ವರ್ಗದವರು ಒಪ್ಪುವುದು ಅಸಾಧ್ಯವಾಗಿತ್ತು. ಆದರೆ ಮಗಳಿಗೆ ತಂದೆಯ ಜಾತಿ ಅಂಟುತ್ತದೆಯೇ ಹೊರತು ತಾಯಿಯದಲ್ಲ ಎಂಬುದು ಭವಾನಿಯ ವಾದ. ಆದರೆ ಈರಣ್ಣ ಭವಾನಿಯ ವಾದವನ್ನು ಒಪ್ಪುವುದಿರಲಿ, ಗೌರಿಗೆ ಎಂಥದೋ ವರ ತಂದು ಮದುವೆ ಮಾಡುವ ಬಗ್ಗೆಯೂ ಯೋಚಿಸುವುದಿಲ್ಲ. ಬದಲಾಗಿ ತನ್ನ ಅಕ್ಕನ ಮಗ ಗೌರಿಯನ್ನು ನೋಡಿ ಮೆಚ್ಚಿ ಇಟ್ಟುಕೊಳ್ಳಲು ತಯಾರಿದ್ದಾನೆ ಎಂದು ಭವಾನಿಗೆ ಹೇಳುತ್ತಾನೆ. ಭವಾನಿ ಆಕ್ರೋಶಗೊಂಡು ಗಂಡನಂತಿದ್ದ ಈರಣ್ಣನ ಬಗ್ಗೆ ಹೇಸಿಕೊಂಡು,ಇದ್ದ ನೆಲೆಯನ್ನು ಧಿಕ್ಕರಿಸಿ ಗೌರಿಯನ್ನು ಕರೆದುಕೊಂಡು ಹೊರಬೀಳುತ್ತಾಳೆ. ಗಂಡನೆಂದು ನಂಬಿ ನಿಷ್ಠಳಾಗಿ ಹೆಂಡತಿಯಂತೆ ಬದುಕಿದ ಭವಾನಿಯ ಆಕ್ರೋಶ ಸಹಜವಾದದ್ದು. ಬದುಕುವ ಎದೆಗಾರಿಕೆ ತೋರಿಸಿಯೇ, ಗಂಡನಂತಿದ್ದ ಈರಣ್ಣನ ಕ್ರೌರ್ಯದ ಮನಸ್ಸನ್ನು ಧಿಕ್ಕರಿಸುತ್ತಾಳೆ.

'ಉಡಿಯಲ್ಲಿನ ಉರಿ' (ಕಲಿಗಣನಾಥ ಗುಡದೂರು) ಶ್ಯಾಣಮ್ಮ ತನ್ನ ಮಗಳನ್ನು ಬಡತನದ ಕಾರಣದಿಂದಲೋ ಏನೋ ಎರಡನೆಯ ಸಂಬಂಧ ಬೆಳಸಿ ಮದುವೆ ಮಾಡಿ ಕೊಟ್ಟಿರುತ್ತಾಳೆ. 'ಇಟ್ಟು ಕುದಿಯುವುದಕ್ಕಿಂತ ಕೊಟ್ಟು ಕುದಿಯುವುದು ಲೇಸು' ಎಂಬ ಮಾತೊಂದಿದೆ. ಹೆಣ್ಣಿಗೆ ಬೇಗ ಮದುವೆಯಾಗದಿದ್ದರೆ ಹೆಣ್ಣನ್ನು ಮನೆಯಲ್ಲಿಟ್ಟುಕೊಂಡು ಚಿಂತಿಸುವುದಕ್ಕಿಂತ ಸಿಕ್ಕವರಿಗೆ ಕೊಟ್ಟು ಚಿಂತಿಸುವುದು ಲೇಸು ಎಂಬರ್ಥದಲ್ಲಿ ಈ ಮಾತು ಹೆಂಗಸಿಗೆ ಅನ್ವಯಿಸಿ ಪ್ರಚಲಿತವಿರುವ ಗಾದೆ. ಒಂದರ್ಥದಲ್ಲಿ ಇದು ಹೆಣ್ಣಿಗೂ ಮುಳುವು, ಹೆತ್ತವರಿಗೂ ಮುಳುವು. ಆದರೆ ಇಂಥದ್ದೊಂದು ಮಾತಿನ ಹಿಂದೆ ಅಪಾರವಾದ ನೋವಿದೆ, ಚರಿತ್ರೆಯಿದೆ ಅನ್ನಿಸುತ್ತದೆ. ಅನೇಕ ಕಾರಣಗಳಿಂದ ಮದುವೆ ತಡವಾಗಿ ಮಗಳು ಮನೆಯಲ್ಲಿದ್ದರೆ ಹೆತ್ತವರಿಗೆ ಭಾರ,ಒಡಲುರಿ. ಹಾಗೆಂದು ಸಿಕ್ಕಸಿಕ್ಕವರಿಗೆ ಕೊಡಲು ಬರುವುದಿಲ್ಲ. ಇಂಥ ಬಿಕ್ಕಟ್ಟುಗಳಿಂದ ಅಸಹಾಯಕರಾದಾಗ ಮೇಲಿನ ಮಾತು ಹುಟ್ಟುತ್ತದೆ. ಶ್ಯಾಣವ್ವನ ಅಳಿಯನಿಗೆ ಮೊದಲೊಂದು ಮದುವೆಯಾಗಿ ಸಂಬಂಧ ಮುರಿದು ಹೋಗಿರುತ್ತದೆ. ಅವರಿವರ ಒತ್ತಾಯಕ್ಕೆ ಮನಸ್ಸಿಲ್ಲದಿದ್ದರೂ ಮಗಳನ್ನು ಕೊಟ್ಟಿರುತ್ತಾಳೆ. ಮಕ್ಕಳೂ ಆಗಿರುತ್ತವೆ. ಆದರೆ ಅಳಿಯನ ರಾಕ್ಷಸ ಕೃತ್ಯಕ್ಕೆ ಮಗಳು ನಿತ್ಯ ನೋವು ಅನುಭವಿಸುತ್ತಿರುತ್ತಾಳೆ. ಮಗಳ ನೋವನ್ನು ತಾನೇ ಅನುಭವಿಸಿದ್ದಷ್ಟು ನೊಂದ ಶ್ಯಾಣಮ್ಮ ಬಿರುಗಾಳಿಯಂತೆ ಅಳಿಯನ ಊರಿಗೆ ಹೋಗಿ ಮಗಳನ್ನು ಕರೆದುಕೊಂಡು ಬರುತ್ತಾಳೆ. ಹಸಿಗೂಸೊಂದು ಸತ್ತು ಹೋಗುತ್ತದೆ. ಮಗಳಿಗೆ ಅಳಿಯ ಸುಟ್ಟ ಗಾಯಗಳಿರುತ್ತವೆ. ಈ ಸಂದರ್ಭದಲ್ಲಿ ಶ್ಯಾಣಮ್ಮನ ನಿಲುವು ಬೆಚ್ಚಿಬೀಳಿಸುವಂತದ್ದು. 'ಕೊಟ್ಟಮನೆಗೆ ದೂರು' ಎಂಬ ಮಾತನ್ನು ಧಿಕ್ಕರಿಸುವಂತೆ, ಮಗನ ಸಂಸಾರವನ್ನು ಹೊರುವಂತೆ ಮಗಳ ಸಂಸಾರವನ್ನೂ ಯಾಕೆ ಹೊರುವ ಜವಾಬ್ದಾರಿಯನ್ನು ತೆಗೆದುಕೊಳ್ಳಬಾರದು? ಎಂದು ಮಗಳನ್ನು ಮನೆಗೆ ಕರೆದುಕೊಂಡು ಬರುತ್ತಾರೆ.ಮಗಳು ರಾಕ್ಷಸನಂತಿದ್ದ ಗಂಡನಿಂದ ಅಪಾರ ನೋವು ಅನುಭವಿಸಿದರೂ, ತಾಯಿಯ ಆಕ್ರೋಶದ ನಡುವೆಯೂ ಮನೆಯಿಂದ ನಿಂತ ನಿಲುವಿನಿಂದ ಹೊರಬರುವಾಗ ಗಂಡನ ಫೋಟೋವನ್ನು ಬಚ್ಚಿಟ್ಟುಕೊಂಡು ಬರುತ್ತಾಳೆ. ಇದು ಹೆಣ್ಣಿನ ಸ್ಥಿತಿ. ಗಂಡನ ಬಗ್ಗೆ ಹೆಂಡತಿಗಿರುವ ಈ ಮೋಹ ವ್ಯಾಖ್ಯಾನಕ್ಕೆ ಸಾಧ್ಯವಾಗುವುದಿಲ್ಲ ಎನಿಸುತ್ತದೆ.

ಮೇಲಿನ ಈ ಎರಡು ಕಥೆಗಳಲ್ಲಿ ಬರುವ ಮಹಿಳೆಯರು ಭಿನ್ನವಾಗಿ ಕಾಣುತ್ತಾರೆ. ಇವರು ಸ್ಥಾನಮಾನದಿಂದ ಮಧ್ಯಮವರ್ಗದ ಕುಟುಂಬಕ್ಕೆ ಹೊಂದಿದವರು. ಕೆಳವರ್ಗದ ಮಹಿಳೆಯರಂತೆ ಬಿಕ್ಕಟ್ಟು ಬಂದರೆ ಗಂಡನನ್ನು ಧಿಕ್ಕರಿಸಿ ಹೋಗುವ ಧೈರ್ಯವಿರುವುದಿಲ್ಲ. 'ಶೀಲ' ಜೀವಕ್ಕಿಂತ ದೊಡ್ಡದೆಂದು ಭಾವಿಸಿದವರು. ಬೇರೆ ಬೇರೆ ಕಾರಣಗಳಿಂದ ಗಂಡನಿಂದ ನೋವನ್ನು ಅನುಭವಿಸಿದರೂ ಕೂಡ

ಕೊನೆಗೆ ಗಂಡನಿಂದ ಬೇರ್ಪಟ್ಟವರು. ಆದರೆ ಗಂಡನ ನೆನಹಿನಲ್ಲೇ ಉಳಿಯುವ ಸ್ಥಿತಿಯನ್ನು ಉಳಿಸಿಕೊಂಡವರು. ಇಂಥ ಮಹಿಳೆಯರಿಗೆ ನಿಜವಾದ ನೆಲೆ ಎಂಬುದು ಇದೆ ಎನಿಸುವುದಿಲ್ಲ.

'ಮಣ್ಣಿನ ಗುಣ' (ಕೋರಗಲ್ ವಿರೂಪಾಕ್ಷಪ್ಪ) ಕಥೆಯಲ್ಲಿ ಬರುವ ಗಂಗವ್ವನ ಸ್ಥಿತಿಯೂ ಇದೆ. ಇಪ್ಪತ್ತು ವರ್ಷ ಗಂಡನಿಂದ ದೂರವಿದ್ದು ಬದುಕಿದ್ದರೂ ಅವನ ಮೇಲಿನ ಪ್ರೀತಿ ಮಾಸಿರುವುದಿಲ್ಲ. ಜಾತ್ರೆಯಲ್ಲಿ ತೆಗೆಸಿಕೊಂಡ ಫೋಟೋವನ್ನು ನಿಧಿ ಎಂಬಂತೆ ತನ್ನ ಹಳೆಯ ಟ್ರಂಕಿನಲ್ಲಿಟ್ಟುಕೊಂಡಿರುತ್ತಾಳೆ. ಪುನ: ಕರೆಯಲು ಬಂದ ಗಂಡ, ಅವನ ಮಕ್ಕಳು, ಗಂಗವ್ವ ಈ ಇಪ್ಪತ್ತು ವರ್ಷ ದುಡಿದು ಗಳಿಸಿದ ಹಣ ಟ್ರಂಕಿನಲ್ಲಿರಬೇಕು ಎಂಬ ಆಶೆಯಿಂದ ನೋಡಿದಾಗ, ಅವಳ ಗಂಡನ ಫೋಟೋ ಇರುತ್ತದೆ. ಇದರಲ್ಲಿ ಗಂಡ ಹೆಂಡತಿ ಸಂಬಂಧದ ನಂಟಿನ ಸೂಕ್ಷ್ಮತೆಯಿತ್ತು. ಇಪ್ಪತ್ತು ವರ್ಷ ಒಂಟಿಯಾಗಿ ಕಳೆದ ಗಂಗವ್ವ ಗಂಡನ ಮೇಲೆ ಮಾಸದ ನಿಷ್ಠೆಯನ್ನು ಉಳಿಸಿಕೊಂಡಿರುತ್ತಾಳೆ. ಪುನ:ಗಂಡ ಕರೆಯಲು ಬಂದರೂ ಅವನೇನು ಅವಳ ಮೇಲಿನ ಪ್ರೀತಿಗಾಗಿ ಬಂದಿರುವುದಿಲ್ಲ. ಮನೆ, ಮಕ್ಕಳು ಸಂಸಾರದ ಭಾರ ಹೆಚ್ಚಾಗಿದ್ದರಿಂದ ಅದನ್ನು ಗಂಗವ್ವನಿಗೆ ಹೊರಿಸಲು ಬಂದಿರುತ್ತಾನೆ. ಸಂಸಾರದ ಭಾರ ಹೊರಲು ಗಂಗವ್ವ ಹಿಂದೆಯೂ ಹಿಂದೇಟು ಹಾಕಿರಲಿಲ್ಲ. ಈಗಲೂ ಅದಕ್ಕೆ ಅವಳು ಹಿಂಜರಿಯುವುದಿಲ್ಲ. ಆದರೆ ಹೆಣ್ಣಿಗೆ ಗಂಡನ ಆಶ್ರಯ ಬೇಕು ಎಂಬ ಗಂಗವ್ವನಂಥ ಹೆಂಗಸರ ನಿಷ್ಠೆ ಈ ನೆಲದ ಸಂಪ್ರದಾಯದಿಂದ ಬಂದದ್ದು ಎಂದು ಈ ಕಥೆ ನಿರೂಪಿಸುತ್ತದೆ.

'ಕಿಡಿ'(ಶಾಂತರಸ) ಕಥೆಯಲ್ಲಿ ಇದೇ ವಸ್ತುವಿನ ಇನ್ನೊಂದು ಮುಖವಿದೆ. ಗಂಡನಿಲ್ಲದ ಸೂಗಮ್ಮ ಒಂಟಿಯಾಗಿರಲು ಅಸಾಧ್ಯವಾಗಿ ಬುದ್ದಿವಂತಪ್ಪನನ್ನು ಕೂಡುತ್ತಾಳೆ. ಇಲ್ಲಿ ಅನೈತಿಕತೆಯ ಪ್ರಶ್ನೆಯೇ ಹುಟ್ಟುವುದಿಲ್ಲ. ಬುದ್ದಿವಂತಪ್ಪನಿಗೂ ಒಂದು ಸಂಸಾರವಿರುತ್ತದೆ. ಆದರೂ ಅವನನ್ನು ಸೂಗಮ್ಮ ಆಯ್ಕೆಮಾಡಿಕೊಂಡು ತನ್ನ ಆಸ್ತಿಯನ್ನು ಕೊಡುತ್ತಾಳೆ. ಒಂದು ಸಂದರ್ಭದಲ್ಲಿ ಬುದ್ದಿವಂತಪ್ಪನೊಡನೆ ವಿರಸ ಬಂದು ಅವನು ಕೈತಪ್ಪಿ ಹೋಗುವ ಸ್ಥಿತಿ ಬರುತ್ತದೆ. ಇದೇ ಸಂದರ್ಭವನ್ನು ಕಾಯುತ್ತಿದ್ದ ಪರಮಯ್ಯನಂತವರು ಸೂಗಮ್ಮ ಮತ್ತು ಬುದ್ದಿವಂತಪ್ಪರ ನಡುವೆ ಬಿಟ್ಟ ಬಿರುಕನ್ನು ದೊಡ್ಡದು ಮಾಡಲು ನೋಡಿ, ಅಲ್ಲಿ ತಾವು ಸ್ಥಾನ ಪಡೆಯಲು ಪ್ರಯತ್ನಿಸುತ್ತಿರುತ್ತಾರೆ. ಆದರೆ ಸೂಗಮ್ಮ ಬುದ್ದಿವಂತಪ್ಪನಿಗೆ ಒಲಿದಿದ್ದರಿಂದ ಅವನ ಮೇಲಿನ ಪ್ರೀತಿಯಿಂದ ಪುನ: ಅವನನ್ನು ತನ್ನ ಮನೆಗೆ ಬರುವಂತೆ ಮಾಡಲು ಅನ್ಯಮಾರ್ಗಗಳಿಂದ ಅವನಿಗೆ ಸಂಕಷ್ಟಗಳನ್ನು ತಂದು, ಅವನನ್ನು ಸೋಲುವಂತೆ ಮಾಡಿ ತನ್ನ ಬಳಿಗೆ ಬರುವಂತೆ ಮಾಡಿಕೊಳ್ಳುತ್ತಾಳೆ. ಅವನಿಗೆ ಜೀವ ಬೆದರಿಕೆ ಹಾಕಿ ತನ್ನ ಬಳಿಗೆ ಬರುವಂತೆ ಮಾಡುವಾಗಲೂ ಅವಳು ಅದನ್ನೆಲ್ಲ ನೋವಿನಿಂದಲೇ ಮಾಡುತ್ತಾಳೆ. ಸೂಗಮ್ಮನಿಗೆ ಬುದ್ಧಿವಂತಪ್ಪ ಲೈಂಗಿಕವಾಗಿ ಮಾತ್ರ ಬೇಕಾಗಿರಲಿಲ್ಲ. ಅವನ ಮೇಲಿನ ಪ್ರೀತಿಗಾಗಿ, ಆಸ್ತಿಯನ್ನು ಕೊಟ್ಟು ತನ್ನವನನ್ನಾಗಿ ಮಾಡಿಕೊಂಡಿರುತ್ತಾಳೆ. ಹೆಂಗಸು ಒಲಿದರೆ ಮಾತ್ರ ಇದು ಸಾಧ್ಯ.

'ಮಾಯೆ ಅಂದ್ರೆ ಮಾಯೆ'(ಶಾಂತರಸ) ಈ ಕಥೆಯ ರಾಚಮ್ಮನೂ ಇದೇ ಸ್ಥಿತಿಯ ಇನ್ನೊಂದು ಮುಖದಂತಿದ್ದಾಳೆ. ವಯಸ್ಸಾದ ಶ್ರೀಮಂತ ವೆಂಕನಗೌಡನ ಮೂರನೆಯ ಹೆಂಡತಿಯಾಗಿ ರಾಚಮ್ಮ ಸಂಸಾರಕ್ಕೆ ನಿಲ್ಲಬೇಕಾಗುತ್ತದೆ. ಅವಳ ಬಡತನ ಮತ್ತು ವೆಂಕನಗೌಡನ ಶ್ರೀಮಂತಿಕೆಯೇ ಈ ಸಂದರ್ಭವನ್ನು ತಂದಿರುತ್ತದೆ. ಅನ್ನ, ಹಣ, ಒಡವೆ ಮತ್ತು ಸೇವೆಗೆ ಆಳುಗಳು ಎಲ್ಲ ಸೌಲಭ್ಯವಿದೆ. ಬಡತನದಿಂದ ಬಂದಿದ್ದರೂ ರಾಚಮ್ಮನಿಗೆ ವೆಂಕನಗೌಡನ ಈ ಸಂಪತ್ತು ರುಚಿಸುವುದಿಲ್ಲ. ಅವಳಿಗೆ ಬೇಕಾದ ಮೈ ಸುಖ ವೆಂಕನಗೌಡನಿಂದ ಸಿಗುವುದಿಲ್ಲ. ಮೇಲಾಗಿ ಅದು ವಿಷಮ ದಾಂಪತ್ಯವಾಗಿತ್ತು. ಇದನ್ನು ಗ್ರಹಿಸದ ವೆಂಕನಗೌಡ ಅವಳ ಮೇಲೆ ವಿಕೃತವಾಗಿ ದಾಳಿ ಮಾಡಲು ನೋಡುತ್ತಾನೆ. ಈ ಕೃತ್ಯ ಇನ್ನೂ ರಾಚಮ್ಮನಿಗೆ ವಿಮುಖವಾಗಲು ದಾರಿಯಾಗುತ್ತದೆ. ಅವಳು ತವರು ಮನೆಯಲ್ಲಿರುವಾಗ ಗಂಗ್ಯಾನೆಂಬ ಬಡವನ ಮೇಲೆ ಮನಸ್ಸಿಟ್ಟಿದ್ದಳು. ವೆಂಕನಗೌಡನ ವಿಕೃತ ಕಾಮವನ್ನು, ಅವನ ಶ್ರೀಮಂತಿಕೆಯನ್ನು ತೊರೆದು ಕೂಲಿ ಮಾಡಿ ಬದುಕುವ ಗಂಗ್ಯಾನ ಬಳಿಗೆ ಹೋಗಿ ಸೇರುತ್ತಾಳೆ. ಮಹಿಳೆಯ ಇಂಥ ನಿರ್ಧಾರಗಳು

ತಾತ್ಕಾಲಿಕ ಎನ್ನಿಸುವುದಿಲ್ಲ. ರಾಚವ್ವನಂಥ ಹೆಂಗಸರಿಗೆ ಕೇವಲ ದೈಹಿಕಸುಖ ಬೇಕಾಗಿದ್ದರೆ ಅದನ್ನು ಅವಳು ವೆಂಕನಗೌಡನಲ್ಲಿದ್ದುಕೊಂಡೇ ಅನ್ಯರಿಂದ ಪಡೆಯಬಹುದಾದ ಅವಕಾಶಗಳಿದ್ದವು. **'ಹಿಡಿ'** ಕಥೆಯಲ್ಲಿ ಸೂಗಮ್ಮನಿಗೆ ಬುದ್ದಿವಂತಪ್ಪನೇ ಬೇಕಾದಂತೆ ರಾಚವ್ವನಿಗೆ ಗಂಗ್ಯಾ ಬೇಕಾಗುತ್ತಾನೆ. ಇದು ಮಹಿಳೆಯಲ್ಲಿ ಕಾಣುವ ಗುಣ ಎಂದು ಕಾಣುತ್ತದೆ.

'ತಯಾರಿ' (ಮಲ್ಲಿಕಾರ್ಜುನ ಹಿರೇಮಠ) ಕಥೆಯ ಮಮತಾ ಮತ್ತು **'ರೋಗಿ'** (ಶಾಂತರಸ)ಕಥೆಯ ಸಾವಿತ್ರಿ ಈ ಇಬ್ಬರು ಭಿನ್ನವಾಗಿ ನಿಲ್ಲುತ್ತಾರೆ. ನಗರ ಬದುಕಿಗೆ ಸಂಬಂಧಿಸಿದ ಮಹಿಳೆಯರಿವರು. ಹಾಗೆ ನೋಡಿದರೆ ಸಮಸ್ಯೆ ಭಿನ್ನವಾಗಿಲ್ಲ. 'ತಯಾರಿ' ಕಥೆಯ ಮಮತಾ ಮಧ್ಯಮ ವರ್ಗದಲ್ಲಿ ಬೆಳೆದು ವಿದ್ಯೆಕಲಿತ ಮಹಿಳೆ. ಮೊದಲ ಗಂಡನನ್ನು ಕಳೆದುಕೊಂಡರೂ ಅಸಹಾಯಕಳಾಗದೆ ಕಾಲೇಜು ಸೇರುತ್ತಾಳೆ. ಅಲ್ಲಿ ಒಬ್ಬ ಯುವಕನನ್ನು ಪ್ರೀತಿಸಿ ಮದುವೆಯಾಗುತ್ತಾಳೆ. ಎರಡನೆಯ ಮದುವೆಯಿಂದ ಗಂಡನ ಮನೆಯವರ ಬಂಧು ಬಳಗದಿಂದ ಸಾಕಷ್ಟು ಕಿರುಕುಳ ಅನುಭವಿಸಿದರೂ ಗಂಡನ ಪ್ರೀತಿಯಿಂದ ಬದುಕು ಸಹ್ಯಮಾಡಿಕೊಂಡಿರುತ್ತಾಳೆ. ಆದರೆ ಎರಡನೆಯ ಗಂಡ ಅಪಘಾತದಲ್ಲಿ ಸಾಯುತ್ತಾನೆ. ಆಗ ಬಿಕ್ಕಟ್ಟು ಎದುರಾಗುತ್ತದೆ. ಮಕ್ಕಳು, ಗಂಡನ ಮನೆ, ಆಸ್ತಿ ಮತ್ತು ಅವನ ಉಳಿತಾಯ ಪತ್ರಗಳ ಎಲ್ಲವು ಅವಳ ಮುಂದಿರತ್ತವೆ. ಆದರೆ ಸತ್ತ ಗಂಡನ ಮನೆಯ ಮಂದಿಗೆ ಮಮತಾ ಮೊದನಿಂದಲೂ ಬೇಡವಾದವಳು. ಈಗ ಅವನೂ ಇಲ್ಲ. ಗಂಡನ ಮನೆ ಮಂದಿಯೆಲ್ಲ ಕೂಡಿ ಅವಳನ್ನು ಬೀದಿಗೆ ನೂಕಲು ಹಿಂದುಮುಂದು ನೋಡದ ಜನರು.ಇಂಥ ಸಮಯದಲ್ಲಿ ಮಮತಾ ಮಕ್ಕಳನ್ನು ಕಟ್ಟಿಕೊಂಡು, ಗಂಡನ ಆಸ್ತಿಯನ್ನು ರಕ್ಷಿಸಿಕೊಂಡು ಬದುಕಲು ಮಾನಸಿಕವಾಗಿ ತಯಾರಿ ನಡೆಸಿಕೊಳ್ಳುತ್ತಾಳೆ. ಮುಗ್ಧಳಾಗಿರುವಾಗಲೇ ಮೊದಲ ಗಂಡನನ್ನು ಕಳೆದುಕೊಂಡಿದ್ದಳು. ಆದರೂ ಅಸಹಾಯಕಳಾಗದೆ ಪುನ: ಎರಡನೆಯ ಗಂಡನನ್ನು ಮದುವೆ ಮಾಡಿಕೊಂಡು ಹಿಂದಿನದೆಲ್ಲವನ್ನು ಮರೆತು ಸಂಸಾರ ನಡೆಸಿದ್ದಳು. ಗಂಡ-ಮಕ್ಕಳು ಸಂಸಾರ ಎಂದು ಬದುಕನ್ನು ಕಟ್ಟಿಕೊಂಡು ನಿಲ್ಲುವ ಹೊತ್ತಿಗೆ ಮತ್ತೊಂದು ಆಘಾತ ಅವಳಿಗೆ ಕಾದಿತ್ತು. ಮುಂದೆ ಹೊಸ ಬದುಕು ಅಸಾಧ್ಯ. ಇರುವುದನ್ನೆಲ್ಲ ಧಕ್ಕಿಸಿಕೊಂಡು ಬದುಕಲು ಗಟ್ಟಿ ನಿರ್ಧಾರ ಮಾಡುತ್ತಾಳೆ.

ಹೈದರಾಬಾದ್ ಕರ್ನಾಟಕದ ಕಥೆಗಾರರ ಕಥೆಗಳಲ್ಲಿ ಹಳ್ಳಿಯ ಕೆಳವರ್ಗದ ಮಹಿಳೆಯರ ಬದುಕಿನ ಹೋರಾಟದ ಚಿತ್ರಗಳೇ ಹೆಚ್ಚು. ನಗರದ ಮಧ್ಯಮ ವರ್ಗದ ಮಹಿಳೆಯ ಬದುಕಿನ ಚಿತ್ರಗಳು ಕಮ್ಮಿ.ಹೀಗಾಗಿ ಮಮತಾ ವಿಶೇಷವಾಗಿ ನಿಲ್ಲುತ್ತಾಳೆ. ಹಾಗೆಯೇ **'ರೋಗಿ'** ಕಥೆಯ ಸಾವಿತ್ರಿ, ಆಧುನಿಕ ಕುಟುಂಬಕ್ಕೆ ಸೇರಿದ ಮಹಿಳೆ. ಮುಕ್ತ ಮನಸ್ಸಿನವಳು. ಲಿಂಗ ಭೇದವಿಲ್ಲದೆ ಬೆರೆಯುವ ಸಾವಿತ್ರಿಯನ್ನು ಡಾ.ಸಾಂಬಯ್ಯ ತಪ್ಪಾಗಿ ಭಾವಿಸುತ್ತಾನೆ. ಅವಳು ಅನಾರೋಗ್ಯದ ನಿಮಿತ್ತ ಡಾ.ಸಾಂಬಯ್ಯನಲ್ಲಿಗೆ ಒಮ್ಮೆ ಬಂದು ಪರಿಚಯ ಮಾಡಿಕೊಂಡಿರುತ್ತಾಳೆ. ನಂತರ ಮುಜುಗರವಿಲ್ಲದೇ ಅವನ ಜತೆ ಮಾತುಕತೆ, ಆಟ,ಪ್ರವಾಸ ಎಲ್ಲದರಲ್ಲಿ ಪಾಲ್ಗೊಳ್ಳುತ್ತಾಳೆ. ಆದರೆ ಡಾ.ಸಾಂಬಯ್ಯ ಮಾತ್ರ ವಿಚಿತ್ರ ಮನಸ್ಥಿತಿಗೆ ಒಳಗಾಗುತ್ತಾನೆ. ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಿ ಕೊನೆಗೆ ಸೋಲುತ್ತಾನೆ. ಅವಳ ರೋಗ ವಾಸಿಮಾಡಲು ಹೋಗಿ ತಾನೇ ರೋಗಿಯಾಗುತ್ತಾನೆ. ಸಾವಿತ್ರಿ ಅವನ ಬಯಕೆಯನ್ನು ನಿರಾಕರಿಸುತ್ತಾಳೆ. ಡಾ.ಸಾಂಬಯ್ಯ ಅವಳನ್ನು ರೇಪ್ ಮಾಡಬಹುದಿತ್ತು. ಆದರೆ ಮಾಡುವುದಿಲ್ಲ. ಆನಂತರ ಸಾವಿತ್ರಿ ಅವನ ಬಗ್ಗೆ ಹಿಂದಿನಂತೆಯೇ ಇರಲು ಪ್ರಯತ್ನಿಸಿದಂತೆ ಕಾಣುತ್ತದೆ. ಅವರಲ್ಲಿ ಬೌದ್ಧಿಕತೆ ಮತ್ತು ಆಧುನಿಕ ಮನಸ್ಸು ಇದ್ದುದ್ದರಿಂದ ಅವರಿಬ್ಬರು ಪುನ: ಮೊದಲಿನ ಸ್ಥಿತಿಗೆ ಬರಲು ಸಾಧ್ಯವಾಗಬಹುದು. ಆದರೆ ಇದೇ ಸಂದರ್ಭವನ್ನು ಹಳ್ಳಿಯ ಫ್ಯೂಡಲ್ ವ್ಯವಸ್ಥೆಯಲ್ಲಿ ಕಲ್ಪಿಸಿಕೊಳ್ಳಲು ಅಸಾಧ್ಯವಾಗುತ್ತದೆ.

ಕೆಳವರ್ಗದ ಮಹಿಳೆಯ, ಅಲ್ಪ ಸ್ವಲ್ಪ ಮಧ್ಯಮವರ್ಗದ ಮಹಿಳೆಯ ಸಮಸ್ಯೆಗಳು ಈ ಕಥೆಗಳಲ್ಲಿ ವ್ಯಕ್ತವಾಗಿವೆ. ಎಲ್ಲ ರೀತಿಯಿಂದ ಕೆಳವರ್ಗದ ಮಹಿಳೆ ಶೋಷಣೆಗೆ ಒಳಗಾಗುತ್ತಾಳೆ ಎಂಬುದನ್ನು ಈ ಭಾಗದ ಕಥೆಗಾರರು ಚಿತ್ರಿಸಿದ್ದಾರೆ. ಈ ಹೊತ್ತಿನಲ್ಲಿ

ಬರೆಯಲು ಪ್ರಯತ್ನಿಸುತ್ತಿರುವ ರಾಜಶೇಖರ ಹತಗುಂದಿ, ಕಲಿಗಣನಾಥ ಗುಡದೂರು, ಈರಣ್ಣ ಕೋಸಗಿ, ಶಿವಕುಮಾರ ನಾಗವಾರ ಮುಂತಾದವರು ಇದನ್ನು ಮುಂದುವರೆಸಿದ್ದಾರೆ. ಮೇಲ್ವರ್ಗದ ಶ್ರೀಮಂತ ಕುಟುಂಬಗಳಲ್ಲಿರುವ ಮಹಿಳೆಯ ಬದುಕು ಯಾವ ರೀತಿಯಲ್ಲಿದೆ? ಆವಳಿಗಿರುವ ಬದುಕಿನ ಸಮಸ್ಯೆಗಳು ಯಾವುವು? ಆವುಗಳ ಸ್ವರೂಪ ಎಂಥದ್ದು? ಎಂಬ ಪ್ರಶ್ನೆಗಳು ಮೂಡುತ್ತವೆ. 'ಮಹಿಳೆ' ಆಂದರೆ ಒಂದಲ್ಲ ಒಂದು ರೀತಿಯಲ್ಲಿ ಶೋಷಿತಳು ಎಂಬುದು ನಿಜ. ಜಮೀನ್ದಾರೀ ಕುಟುಂಬಗಳಲ್ಲಿ 'ಯಜಮಾನತಿ'ಯರಾಗಿ ಬದುಕುವ ಮಹಿಳೆಯ ಬದುಕನ್ನು ಕುರಿತು ಈ ಭಾಗದ ಕಥೆಗಾರರು ಬಹಳ ಬರೆದಿಲ್ಲ. ಕೆಲವು ಕಥೆಗಳಲ್ಲಿ ಕಾಣಿಸಿದೆ. 'ಒಂದು ಊರಿನ ಕಥೆ' (ಚಂದ್ರಕಾಂತ ಕುಸನೂರ) ಯಲ್ಲಿ ಗೌಡನ ಮೂರನೆಯ ಹೆಂಡತಿ ಸಾವಿತ್ರಿ ಶೋಷಿತಳೇ. ಮೂರನೆಯ ಹೆಂಡತಿಯಾಗಿರುವುದೇ ಇದನ್ನು ತಿಳಿಸುತ್ತದೆ. ಗೌಡನ ಆಸ್ತಿ ಟೆನೆನ್ಸಿ ಕಾಯ್ದೆಯಿಂದ ಉಳುವವನಿಗೆ ಹೋಗುವ ಸ್ಥಿತಿ ಬಂದಾಗ ಸಾವಿತ್ರಿ ಮಂತ್ರಿಯ ಸಖ್ಯ ಬೆಳೆಸಬೇಕಾಗುತ್ತದೆ. ಇದು ಗೌಡನ ಪ್ರೇರಣೆಯಿಂದ ನಡೆಯಿತೋ? ಸಾವಿತ್ರಿಯ ನಿರ್ಧಾರವೋ? ಇಬ್ಬರೂ ಕಾರಣವಾಗಿರಬೇಕು. ಗೌಡನಿಗೆ ಆಸ್ತಿ ಉಳಿಯಬೇಕು. ಸಾವಿತ್ರಿಗೆ ಇದೂ ಸೇರಿದಂತೆ ಗೌಡನಿಂದ ಸಿಗಲಾರದ ಸುಖ ಅಲ್ಲಿ ಪಡೆಯುವ ಬಯಕೆಯೂ ಇರಬಹುದು. ಒಟ್ಟಿನಲ್ಲಿ ಸಾವಿತ್ರಿಯ ಅವಸ್ಥೆ ಇದು. ಭಾಲಚಂದ್ರ ಜಯಶೆಟ್ಟಿ, ಗೀತಾ ನಾಗಭೂಷಣ ಆವರ ಕಥಗಳಲ್ಲಿ ಬರುವ 'ಗೌಡತಿ'ಯರಿಗೆ ಅನೇಕ ಸಮಸ್ಯೆಗಳಿವೆ. ಗೌಡನಿಂದಲೇ ಮಕ್ಕಳನ್ನು ಪಡೆಯುವ ಶಕ್ತಿ ಇಲ್ಲದಿದ್ದರೆ ಆಗ ಗೌಡತಿಗೆ ಒಂದು ರೀತಿಯ ಬಿಕ್ಕಟ್ಟು ಎದುರಾಗುತ್ತದೆ. ವಂಶ ಬೆಳೆಯಬೇಕಾದರೆ ಗೌಡತಿ ಬೇರೆ ದಾರಿ ಕಂಡುಕೊಳ್ಳಬೇಕಾಗುತ್ತದೆ. ಅದು ಸುಲಭವೂ ಅಲ್ಲ. ಒಂದು ವೇಳೆ ಗೌಡತಿಗೆ ಆ ಶಕ್ತಿ ಇಲ್ಲದಿದ್ದರೆ ಆಗ ಸ್ಥಾನಮಾನಗಳೂ ಬೇರೆಯಾಗುತ್ತವೆ. 'ಎಲ್ಲಮ್ಮನ ಸೇವೆ', 'ಸೋಬಾನ' (ಭಾಲಚಂದ್ರ ಜಯಶೆಟ್ಟಿ), 'ಗರ್ಭ' (ಗೀತಾ ನಾಗಭೂಷಣ) ಕಥೆಗಳಲ್ಲಿ ಬರುವ ಗೌಡತಿಯರಿಗೆ ಇಂಥ ಸಮಸ್ಯೆಗಳಿವೆ. ಈ ಸಮಸ್ಯೆಗಳ ಪರಿಹಾರ ಸುಲಭವಾಗಿಲ್ಲ. ಇಂಥ ಸಂದರ್ಭಗಳಲ್ಲಿ ಮೇಲ್ವರ್ಗದ ಶ್ರೀಮಂತ ಕುಟುಂಬದ ಮಹಿಳೆಯೂ ಶೋಷಿತಳೇ ಎನಿಸುತ್ತದೆ.

ಟೆನೆಂಟ್ ಕಾಯ್ದೆ: ಭೂಮಾಲಿಕರು ಮತ್ತು ಉಳುವ ರೈತರು

'ಉಳುವವನೆ ಭೂಮಿಯ ಒಡೆಯ' ಎಂಬ ಕಾಯ್ದೆ ತಾನು ಬಂದ ದಿನಗಳಲ್ಲಿ ಕರ್ನಾಟಕದಾದ್ಯಂತ ಕೋಲಾಹಲವನ್ನು ಉಂಟುಮಾಡಿತ್ತು. ಭೂಸುಧಾರಣೆ ಕಾಯ್ದೆಯ ಪ್ರಕಾರ ಭೂಮಿಯನ್ನು 'ಉಳುವವನೆ ಒಡೆಯ'ನೆಂದು ಘೋಷಿಸಿದಾಗ ಭೂಮಾಲಿಕರು ಆತಂಕಗೊಂಡರು. ಉಳುವ ಸಾಮಾನ್ಯರೈತರಿಗೆ ಒಂದು ಕಡೆ ಸಂಭ್ರಮ ಇನ್ನೊಂದು ಕಡೆ ಭಯ ಸುರುವಾಯಿತು. ಕಾನೂನಿನ ಪ್ರಕಾರ ಉಳುವವನಿಗೆ ಭೂಮಿ ಸಿಗಬೇಕು ಮತ್ತು ಸಾಮಾಜಿಕ ನ್ಯಾಯ ತತ್ವ ಜಾರಿಯಾಗಬೇಕಾಗಿತ್ತು. ಆದರೆ ಒಡೆಯನ ಭೂಮಿಯನ್ನು ಉಳಿಮೆ ಮಾಡಿ ದುಡಿದು ಬದುಕುವ ಸಾಮಾನ್ಯರಿಗೆ ಒಡೆಯನಿಂದ ಭೂಮಿಯನ್ನು ಕಿತ್ತುಕೊಂಡು ತಮ್ಮದಾಗಿಸಿಕೊಳ್ಳುವದು ಸುಲಭವಾಗಿ ಕಾಣಿಸಲಿಲ್ಲ. ತಲೆಮಾರುಗಳಿಂದ ಒಡೆಯನ ಅಧೀನದಲ್ಲಿ ಬದುಕಿದ ಸಾಮಾನ್ಯರಿಗೆ ಕಾನೂನಿನ ಪ್ರಕಾರ ಸರಕಾರವೇನೋ ಭೂಮಿಯನ್ನು ಕಸಿದುಕೊಡಬಹುದು. ಆದರೆ ಭೂಮಿ ಕಳೆದುಕೊಂಡ ಒಡೆಯನ ಕಣ್ಣೆದುರಲ್ಲೇ ಬದುಕು ಸಾಗಿಸಬೇಕಾದ ಸ್ಥಿತಿ ಒಂದುಕಡೆ ಭಯಗ್ರಸ್ತರನ್ನಾಗಿ ಮಾಡಿತು. ಕಾನೂನಿನನ್ವಯ ಮತ್ತು ಸಾಮಾಜಿಕ ನ್ಯಾಯದನ್ವಯ ಭೂಮಾಲಿಕರು ಪರಿಸ್ಥಿತಿಯನ್ನು ಗ್ರಹಿಸಿ ಉಳುವವರಿಗೆ ಭೂಮಿಯನ್ನು ಸ್ವ-ಇಚ್ಛೆಯಿಂದ ಬಿಟ್ಟುಕೊಟ್ಟಿದ್ದರೆ, ಭೂಮಿ ಉಳುವವರಿಗೆ ಭಯದ ಪ್ರಶ್ನೆ ಎದುರಾಗುತ್ತಿರಲಿಲ್ಲ. ಅಂಥ ಔದಾರ್ಯವನ್ನು ತೋರಿಸುವ ಸ್ಥಿತಿಯಲ್ಲಿ ಜಮೀನ್ದಾರಿಗಳಿರಲಿಲ್ಲ. ಭೂಮಿ ಒಡೆಯ ಮತ್ತು ಉಳುವ ಆಳಿನ ಮಧ್ಯದ ಸಂಬಂಧ ಸಂಕೀರ್ಣ ಸ್ವರೂಪದ್ದು. ಭೂಮಿ ಒಡೆಯನಿಗೆ ತನ್ನ ಭೂಮಿ ಉಳುವವನ ನಿಷ್ಠೆಯ ಮೇಲೆ ಅನುಮಾನ, ಉಳುವವನಿಗೆ ತನ್ನ ಒಡೆಯನ ಔದಾರ್ಯದ ಮೇಲೆ ಅನುಮಾನಗಳು ಸುರುವಾಗಿ ತಾತ್ವಿಕ ಸಂಘರ್ಷವೇ ಏರ್ಪಟ್ಟಂತಾಯಿತು.

ಕಾನೂನಿನ ಅನ್ವಯ 'ನ್ಯಾಯ' ಎಂಬಂತೆ ಕಂಡರೆ ಜನಸಾಮಾನ್ಯರಿಗೆ ತಮ್ಮ ಪರಂಪರಾಗತ ಆಲೋಚನೆಯ ಕ್ರಮದಿಂದ ತಮ್ಮದಲ್ಲದ ಭೂಮಿಯನ್ನು ತಮ್ಮದೆಂದು ಹೇಳಿಕೊಳ್ಳುವುದೂ ಸುಲಭವಾಗಲಿಲ್ಲ. 'ಆತ್ಮಸಾಕ್ಷಿಯ' ಬಿಕ್ಕಟ್ಟನ್ನು ಭೂಮಾಲೀಕರೂ, ಭೂಮಿ ಉಳುವವನೂ ಇಬ್ಬರೂ ಎದುರಿಸಬೇಕಾಯಿತು.

ಭೂಮಾಲಿಕರಲ್ಲಿ ಕೆಲವರು ಅಸಹಾಯಕರಾಗಿ ಭೂಮಿಯನ್ನು ಉಳುವವನಿಗೆ ಬಿಟ್ಟುಕೊಟ್ಟರು. ಇನ್ನೂ ಕೆಲವರು ಮಾನವೀಯ ನೆಲೆಯಿಂದ ಬಿಟ್ಟುಕೊಟ್ಟರು. ಹಲವು ಜಮೀನ್ದಾರರು ಕಾಯ್ದೆ ಜಾರಿಯಾಗುತ್ತಿದ್ದಂತೆ ತಮ್ಮ ಭೂಮಿಯನ್ನು ತಮ್ಮ ಬಂಧು-ಬಳಗದವರ ಹೆಸರಿಗೆ ವರ್ಗಾಯಿಸಿ ತಪ್ಪಿಸಿಕೊಂಡರು. ಹಲವರು ಶಕ್ತಿಯಿಂದ ಉಳಿಸಿಕೊಂಡರು. ಜನಸಾಮಾನ್ಯರಲ್ಲಿ ಕೆಲವರಿಗೆ ಮಾನವೀಯತೆಯ ಪ್ರಶ್ನೆ ಕಾಡಿ ಇದು ನ್ಯಾಯ ಸಮ್ಮತವಲ್ಲವೆಂದು ಭೂಮಿಯನ್ನು ಪಡೆಯುವ ಪ್ರಯತ್ನವನ್ನೇ ಮಾಡಲಿಲ್ಲ. ಒಟ್ಟಿನಲ್ಲಿ ಟೆನೆಂಟ್ ಕಾಯ್ದೆಯ ಪರಿಣಾಮಗಳು ಏಕಮುಖವಾಗಿರಲಿಲ್ಲ. ಆದರೆ ಈ ಕಾಯ್ದೆಯ ಹಿನ್ನಲೆಯಿಂದ ಕರ್ನಾಟಕದಾದ್ಯಂತ ಒಂದು ಬಗೆಯ ಸಂಘರ್ಷವೆ ನಡೆಯಿತು.

ಬೇರೆ ಭಾಗಕ್ಕೆ ಹೋಲಿಸಿದರೆ ಉತ್ತರಕರ್ನಾಟಕದಲ್ಲಿ ಭೂಮಾಲಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ಕಾಣುತ್ತದೆ. ಅದರಲ್ಲೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಗೌಡ, ಸಾಹುಕಾರ, ಕುಲಕರ್ಣಿ, ದೇಸಾಯಿ, ಶಾನುಭೋಗ, ನಾಯಕ ಮನೆತನದವರೆಲ್ಲ ಸಾವಿರಾರು ಎಕರೆ ಭೂಮಿಯ ಮಾಲಿಕರಾಗಿರುವವರು. ಇವರೆಲ್ಲ ಒಂದಲ್ಲ ಒಂದು ರಾಜಮನೆತನಕ್ಕೆ ಸಂಬಂಧಿಸಿದ ವಂಶಸ್ಥರೇ ಆಗಿರುವವರು. ಸ್ವಾತಂತ್ರ್ಯಾನಂತರವೂ ಈ ಜಮೀನ್ದಾರರು ತಮ್ಮ ಭೂಮಿಯನ್ನು ಹತ್ತಾರು ಜನ ದುಡಿದು ಉಳುವವರಿಗೆ ಕೊಟ್ಟು ಅದರಿಂದ ಬರುವ ಫಲವನ್ನು ಪಡೆದು ಭೋಗ ಜೀವನವನ್ನು ನಡೆಸುತ್ತಿದ್ದಾರೆ.

ಈ ಪ್ರದೇಶದಲ್ಲಿ ಸಾವಿರಾರು ಎಕರೆ ಭೂಮಿಯುಳ್ಳ ಜಮೀನ್ದಾರರು ಇರುವುದು ಸರಿಯಷ್ಟೇ. ಈ ಜಮೀನ್ದಾರರ ಭೂಮಿಯನ್ನು ಗೇಣಿದಾರರು ಉಳಿಮೆ ಮಾಡುತ್ತಾರೆ. ಬರುವ ಫಲವನ್ನು ಒಪ್ಪಂದವಾದಂತೆ ಹಂಚಿಕೊಳ್ಳುವ ವ್ಯವಸ್ಥೆ ಇರುತ್ತದೆ. ಆದರೆ ಈ ವ್ಯವಸ್ಥೆ ಈ ಪ್ರದೇಶದಲ್ಲಿ ಹೆಚ್ಚಾಗಿ ಕಾಣುವುದಿಲ್ಲ. ಜಮೀನ್ದಾರರೇ ತಮ್ಮ ಭೂಮಿಯನ್ನು ಉಳಿಮೆ ಮಾಡಿಸುತ್ತಾರೆ. ಕೆಳವರ್ಗದವರನ್ನು ಜೀತದಾಳುಗಳನ್ನಾಗಿ ಇಟ್ಟುಕೊಂಡು ದುಡಿಸುತ್ತಾರೆ. ಈ ಜೀತದಾಳುಗಳ ಕುಟುಂಬದ ಉಪಜೀವನವು ಜಮೀನ್ದಾರರನ್ನು ಆವಲಂಬಿಸಿರುತ್ತದೆ. ಸಣ್ಣ ಪುಟ್ಟ ರೈತರ ಭೂಮಿಯನ್ನು ಈ ಜಮೀನ್ದಾರರೇ ತಮ್ಮ ವಶಕ್ಕೆ ತೆಗೆದುಕೊಂಡು ಉಳಿಮೆ ಮಾಡಿಸುತ್ತಾರೆ. ಈ ರೈತರು ಇವರು ಕೊಟ್ಟಷ್ಟನ್ನು ಪಡೆಯುತ್ತಾರೆ. ಇದು ಈ ಪ್ರದೇಶದಲ್ಲಿ ಕಾಣುತ್ತದೆ. ಯಾಕೆಂದರೆ ಈ ಸಣ್ಣ ಪುಟ್ಟ ರೈತರ ಭೂಮಿಗಳು ಜಮೀನ್ದಾರರ ದೊಡ್ಡ ಹಾಸಿನ ಭೂಮಿಗಳ ನಡುವೆ ಬರುವದರಿಂದ ಬಿತ್ತುವುದಕ್ಕೆ, ಹರಗುವುದಕ್ಕೆ ಅಡ್ಡಿಯಾಗುತ್ತವೆಂದು ಇಂಥ ತುಂಡು ತುಂಡು ಭೂಮಿಗಳನ್ನು ವಶಪಡಿಸಿಕೊಂಡುಬಿಡುತ್ತಾರೆ. ಜಮೀನ್ದಾರರ ಭೂಮಿಗಳ ನಡುವೆ ತಮ್ಮ ಅಲ್ಪ ಪ್ರಮಾಣದ ಭೂಮಿಯನ್ನು ಉಳುಮೆ ಮಾಡಿಕೊಂಡು ಬದುಕುವುದು ಎಂದರೆ ಹುಲಿಗಳು ಇರುವ ಕಡೆ ಹಸುಗಳು ಬದುಕಿದಂತೆ. ಇದರಿಂದ ಸಣ್ಣ ಪುಟ್ಟ ರೈತರು ಭಯಗೊಂಡು ಜಮೀನ್ದಾರರಿಗೇ ಬಿಟ್ಟುಕೊಡುತ್ತಾರೆ. ಮುಂದೆ ಇಂಥ ಭೂಮಿಗಳು ಜಮೀನ್ದಾರರಿಗೆ ಸೇರಿ ಹೋಗಿರುವ ಉದಾಹರಣೆಗಳೇ ಹೆಚ್ಚು. ಇದು ಇಲ್ಲಿನ ಆರ್ಥಿಕ ಸಂದರ್ಭದಲ್ಲಿ ಕಾಣುವ ವಾಸ್ತವ ಸಂಗತಿ.

ಈ ಕಾಯ್ದೆಯ ಪ್ರಕಾರ ಉಳುವವನಿಗೆ ಭೂಮಿ ಸಿಕ್ಕಿತೆ? ಭೂಮಾಲೀಕರು ಭೂಮಿಯನ್ನು ಬಿಟ್ಟುಕೊಟ್ಟರೆ? ಭೂಮಿಯನ್ನು ಕೊಡಿಸುವುದಕ್ಕೆ ಕಾಯ್ದೆ ಮಾಡಿದ ಸರಕಾರ ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ದುಡಿಯಿತು? ಎಂಬ ಪ್ರಶ್ನೆಗಳನ್ನು ಎತ್ತುವ ಕೆಲವು ಕಥೆಗಳಿವೆ. **'ಒಂದು ಊರಿನ ಕಥೆ' (ಚಂದ್ರಕಾಂತ ಕುಸನೂರ)ಯಲ್ಲಿ ಈ ಸಮಸ್ಯೆಯಿದೆ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ** ಸಮಾಜ ಎದುರಿಸಿದ ಸಮಸ್ಯೆಗಳ ಸ್ಥಿತಿಗತಿಗಳನ್ನು ತೋರಿಸುವ ರಾಜಕೀಯ ಕಥೆ ಇದು. ಸ್ವಾತಂತ್ರ್ಯ ಸಿಕ್ಕ ಬೆನ್ನಲ್ಲೇ ಆದ ರಾಜಕೀಯ,

ಸಾಮಾಜಿಕ ಬದಲಾವಣೆಗಳಲ್ಲಿ ಸಮಾಜ ಯಾವ ಸ್ವರೂಪವನ್ನು ಪಡೆಯಿತು ಎಂಬ ವಾಸ್ತವ ಸಂಗತಿಯನ್ನು ಕುಸನೂರರ ಕೆಲವು ಕಥೆಗಳು ವ್ಯಕ್ತಪಡಿಸುತ್ತವೆ. ಈ ಕಥೆಯಲ್ಲಿ ಈ ಪ್ರದೇಶದ ಭೂಮಾಲಿಕರು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಜತೆ ಹೊಂದಾಣಿಕೆ ಮಾಡಿಕೊಂಡು, ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ಲಿಪ್ತರಾಗಿ ಉಳಿದಿದ್ದರು. ನಿಜಾಮನ ಆಳ್ವಿಕೆ ಬಲಗೊಂಡಾಗಲೂ ಅದೇ ಸ್ಥಿತಿಯನ್ನು ಮುಂದುವರಿಸಿದ್ದರು. ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದ ನಂತರ ಕಾಲಕ್ಕೆ ತಕ್ಕಂತೆ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ಪ್ರಜಾರಾಜ್ಯಕ್ಕಾಗಿ ಹೋರಾಡಿದವರಂತೆ ನಟಿಸಿ ಕಾಂಗ್ರೆಸ್ ಜತೆ ಸಕ್ರಿಯವಾಗಿ ತೊಡಗಿಸಿಕೊಂಡರು. ದೇಶದ ರಾಜಕಾರಣದಲ್ಲಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡರು. ರಾಜಕಾರಣಿಗಳಾಗುವ ಮೂಲಕ ಬದಲಾದ ಕಾಲದಲ್ಲೂ ತಮ್ಮ ಪ್ರತಿಷ್ಠೆಯನ್ನು ಮುಕ್ಕಾಗದಂತೆ ನೋಡಿಕೊಂಡರು. ಈ ಕಥೆಯಲ್ಲಿ ಬರುವ ಚೆನ್ನಪ್ಪಗೌಡ ಇದಕ್ಕೆ ನಿದರ್ಶನ. ಸಾವಿರಾರು ಎಕರೆ ಭೂಮಿಯ ಒಡೆಯನಾಗಿದ್ದ ಗೌಡ ಬ್ರಿಟಿಷರ ಸಖ್ಯದಿಂದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಿರ್ಲಿಪ್ತವಾಗಿದ್ದುದು ಅಲ್ಲದೆ, ತನ್ನ ಅಧೀನದಲ್ಲಿದ್ದ ಹತ್ತಾರು ಊರುಗಳಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಕುಡಿಯೊಡೆಯದಂತೆ ನೋಡಿಕೊಂಡಿದ್ದ. ಸ್ವಾತಂತ್ರ್ಯ ಬಂದಾಗ ತಾನು ಮಾಡಿದ ಹೋರಾಟವನ್ನು ಕಥೆಕಟ್ಟಿ ಪ್ರಚಾರಮಾಡಿಸಿ ಜನಸಾಮಾನ್ಯರ ಕಣ್ಣಿನಲ್ಲಿ ದೇಶಭಕ್ತನಾದ. ನಿಜವಾಗಿ ಹೋರಾಡಿದ ದ್ಯಾಂಪುರದ ವೆಂಕಟರಾಯ ಚೆನ್ನಪ್ಪಗೌಡನ ಅಬ್ಬರದಲ್ಲಿ ಹಿನ್ನೆಲೆಗೆ ಸರಿದು ಮಸುಕಾಗಬೇಕಾಯಿತು. ಜನಸಾಮಾನ್ಯರು ಹಣ, ಅಧಿಕಾರ, ಇದ್ದವರ ಇಂಥ ನಾಟಕವನ್ನು ನೋಡಿ ಸುಮ್ಮನಾಗುತ್ತಾರೆ. ಭೂಸುಧಾರಣೆ ಕಾಯ್ದೆ ಬಂದಾಗ ಚೆನ್ನಪ್ಪಗೌಡ ವಿಚಲಿತನಾಗಲಿಲ್ಲ. ಅವನ ಸಾವಿರಾರು ಎಕರೆ ಭೂಮಿಯನ್ನು ಉಳುವ ರೈತರು ಭೂಮಿಯನ್ನು ತಮ್ಮದಾಗಿಸಿಕೊಳ್ಳುವ ಕನಸು ಕಂಡರು. ಅದಕ್ಕಾಗಿ ಗೌಡನಲ್ಲಿ ಬೇಡಿಕೆ ಸಲ್ಲಿಸಿದರು. ಗೌಡನ ನಿರ್ಲಿಪ್ತತೆ ಕಂಡೇ ಕೆಲವರು ಹಿಂದೆ ಸರಿದರು. ಕೆಲವರು ಆ ವರ್ಷ ಬೆಳೆದ ಧಾನ್ಯವನ್ನು ಗೌಡನ ಅಂಗಳಕ್ಕೆ ತರುವ ಬದಲು ತಮ್ಮ ಅಧೀನಕ್ಕೆ ಪಡೆಯಲು ಪ್ರಯತ್ನಿಸಿದರು. ಅಂಥವರನ್ನು ಗೌಡ ಗುಂಡಿಕ್ಕಿ ಕೊಲ್ಲಿಸಿದ. ಧಾನ್ಯವೆಲ್ಲ ಗೌಡನ ಅಂಗಳಕ್ಕೆ ಬಂತು. ಈ ಹೊತ್ತಿನಲ್ಲಿ ಗೌಡರ ಮೂರನೆಯ ಹೆಂಡತಿ ಸಾವಿತ್ರಿ ಎಂ.ಪಿ.ಯಾಗಿದ್ದಳು. ಗೌಡರ ಮನೆಯಲ್ಲಿ ತಂಗಿದ್ದ ಮಂತ್ರಿಗಳ ಹಾಸಿಗೆಯಲ್ಲಿ ಸಾವಿತ್ರಿ ಇದ್ದಳು. ಹೊರಗಡೆ ಪೊಲೀಸ್ ಕಾವಲಿತ್ತು. ಭೂಮಿ ಬೇಕೆಂದ ರೈತರ ಹೆಣಗಳು ಹಳ್ಳದಲ್ಲಿ ನಾಯಿಗೆ ಆಹಾರವಾಗಿದ್ದವು.

ಟೆನನ್ಸಿ ಕಾಯ್ದೆ ಪರಿಣಾಮದಿಂದ ಹಳ್ಳಿಗಳಲ್ಲಿ ಒದಗಿದ ಸ್ಥಿತಿಯಿದು. ವೆಂಕಟರಾಯನಂಥ ನಿಸ್ವಾರ್ಥ, ಸ್ವಾತಂತ್ರ್ಯ ಹೋರಾಟಗಾರ, ಸ್ವಾತಂತ್ರ್ಯೋತ್ತರ ಗ್ರಾಮ ಭಾರತದಲ್ಲಿ ಜನಪರ ಸೇವೆ ಮಾಡಲು ಅವಕಾಶ ಸಿಗಲಿಲ್ಲ. ಮಠದ ಸ್ವಾಮಿಗಳು ಲೋಕ ಕಲ್ಯಾಣವನ್ನು ಬಯಸುವ ಬದಲು ಚೆನ್ನಪ್ಪಗೌಡನ ಕಲ್ಯಾಣವನ್ನು ಬಯಸಿ ದುಡಿದರು, ಸರಂಜಾಮಿ ಪದ್ಧತಿಯನ್ನು ಪೋಷಿಸಿದರು. ಫ್ಯೂಡಲ್ ಚೆನ್ನಪ್ಪಗೌಡ, ಮಠದ ಸ್ವಾಮಿ ಸರಕಾರದ ಕಾನೂನಿನ ನಡುವೆ ಈ ಬಡ ರೈತರು ಸಂಕಷ್ಟಗಳಿಗೆ ಗುರಿಯಾದ ವಾಸ್ತವ ಚಿತ್ರಣ ಈ ಕಥೆಯಲ್ಲಿದೆ.

'ಗೌರಮ್ಮನ ಹಾಲು' (ಜಯತೀರ್ಥ ರಾಜಪುರೋಹಿತ) ಈ ಕಥೆಯಲ್ಲಿ ಇನ್ನೊಂದು ಮುಖದ ವಸ್ತುಸ್ಥಿತಿಯಿದೆ. ಆದರೆ ಟೆನನ್ಸಿ ಕಾಯ್ದೆಯ ಹಿನ್ನೆಲೆಯಲ್ಲಿ ನಡೆದ ಸಂಘರ್ಷವನ್ನು ಕಥೆಗಾರರು ಮಾನವೀಯ ನೆಲೆಯಲ್ಲಿ ಪರಿಹರಿಸಿದ್ದುದು ಕಾಣುತ್ತದೆ. ಬಹುದಿನಗಳಿಂದ ನಾಗಣ್ಣ, ರಾಜಣ್ಣನ ಭೂಮಿಯನ್ನು ಉಳುತ್ತ ಬಂದಿದ್ದ. ಟೆನನ್ಸಿ ಕಾಯ್ದೆ ಜಾರಿಯಾಗುತ್ತಿದ್ದಂತೆ ನಾಗಣ್ಣನಿಂದ ರಾಜಣ್ಣ ಭೂಮಿಯನ್ನು ಬಿಡಿಸಿ ತಾನೇ ಸಾಗುವಳಿಗೆ ನಿಲ್ಲಲು ಪ್ರಯತ್ನಿಸಿದ. ಇದರಿಂದ ನಾಗಣ್ಣ ಎಚ್ಚೆತ್ತು ಭೂಮಿಯನ್ನು ಬಿಡದೆ ತಾನೇ ಉಳುವವನಾಗಿ ಮುಂದುವರಿಯಲು ನಿರ್ಧರಿಸಿದ. ಇಬ್ಬರ ಮಧ್ಯ ಜಗಳವೇ ನಡೆದು ಹೋಯಿತು. ಇವರ ಜಗಳವನ್ನು ಕಂಡ ರಾಜಣ್ಣನ ತಂದೆ ಶೇಷಪ್ಪನಿಗೆ ದುಃಖವಾಗುತ್ತದೆ. ಅದರಂತೆ ನಾಗಣ್ಣನ ತಾಯಿ ಗೌರಮ್ಮನಿಗೆ ನೋವಾಗುತ್ತದೆ. ಯಾಕೆಂದರೆ

ಶೇಷಪ್ಪನಿಗೆ ಹುಟ್ಟುತ್ತ ಬಂದ ಮಕ್ಕಳು ತಾಯಿ ಎದೆ ಹಾಲಿಲ್ಲದೆ ಮರಣಕ್ಕಿಡಾಗುತ್ತಿದ್ದವು. ರಾಜಣ್ಣ ಹುಟ್ಟಿದಾಗ ಶೇಷಪ್ಪ ಹಿಂದಿನ ಸ್ಥಿತಿಯನ್ನು ನೆನೆಸಿಕೊಂಡು ದುಃಖದಲ್ಲಿದ್ದ. ಆಗ ಅವನ ಜೀತದಾಳು ಶಿವಪ್ಪನ ಹೆಂಡತಿ ಗೌರಮ್ಮ ನಾಗಣ್ಣನನ್ನು ಹಡೆದಿದ್ದರು. ಒಡೆಯನ ದುಃಖ ನೋಡಿ ತಡಿಯದ ಗೌರಮ್ಮ ಶಿವಪ್ಪ ಮಾತಾಡಿಕೊಂಡು ರಾಜಣ್ಣನಿಗೆ ತನ್ನ ಎದೆ ಹಾಲನ್ನು ಗೌರಮ್ಮ ನೀಡಿ ಬದುಕಿಸಿದ್ದಳು. ಕೊನೆಗೆ ಒಂದು ಮಗುವಾದರೂ ಉಳಿಯಲೆಂದು ಶೇಷಪ್ಪ ಸಮ್ಮತಿಸಿದ್ದ. ಗೌರಮ್ಮನ ಎದೆ ಹಾಲನ್ನು ರಾಜಣ್ಣನೂ ನಾಗಣ್ಣನೂ ಇಬ್ಬರೂ ಕುಡಿದು ಬೆಳೆದಿದ್ದರು. ಅದರ ನೆನಪಿಗೋ ಋಣಕ್ಕೊ ಶೇಷಪ್ಪ ಶಿವಪ್ಪನಿಗೆ ಭೂಮಿಯನ್ನು ಉಳುಮೆ ಮಾಡಲು ಮಾಡಲು ಕೊಟ್ಟಿದ್ದ. ಅದನ್ನು ತಂದೆಯಿಂದ ಮಗ ನಾಗಣ್ಣನೂ ಮುಂದುವರೆಸಿದ್ದ. ಕಾಯ್ದೆ ಬಂದ ಸಂದರ್ಭದಲ್ಲಿ ತನ್ನ ಭೂಮಿ ಹೋಗುತ್ತದೆಂಬ ಭಯದಿಂದ ರಾಜಣ್ಣ ನಾಗಣ್ಣನಿಂದ ಭೂಮಿ ಕಸಿದುಕೊಳ್ಳಲು ಪ್ರಯತ್ನಿಸಿದ್ದರಿಂದ ಹೊಡೆದಾಟ ನಡೆದಿತ್ತು. ಶೇಷಪ್ಪ ಗೌರಮ್ಮ ಇದನ್ನು ಕಂಡು ಹಿಂದಿನದನ್ನು ಹೇಳಿ ರಾಜಣ್ಣನಿಂದ ನಾಗಣ್ಣನಿಗೆ ಭೂಮಿ ಕೊಡಿಸುತ್ತಾರೆ. ಮಾನವೀಯ ದೃಷ್ಟಿಯಿಂದ ಇಲ್ಲಿ ಪರಿಹಾರ ಒದಗುತ್ತದೆ. ಶೇಷಪ್ಪನವರ ಭೂಮಿಯನ್ನು ಉಳುವ ಶಿವಪ್ಪ, ಗೌರಮ್ಮನ ಮಗ ನಾಗಣ್ಣನನ್ನು ತಮ್ಮ ಮಗನೆಂದೇ ಭಾವಿಸಿ ಭೂಮಿಯನ್ನು ಬಿಡುತ್ತಾರೆಯೇ ಹೊರತು ಟೆನಸ್ಸಿ ಕಾಯ್ದೆಯ ಪರಿಣಾಮವಾಗಿ ಅಲ್ಲ. ಭೂಮಿಯನ್ನು ಬಿಡುವುದಕ್ಕೆ ಋಣವೂ ನೆಪ ಆಗುತ್ತದೆ. ಇದೇನೇ ಕಾರಣಗಳಿದ್ದರೂ ಕೂಡ ಟೆನಸ್ಸಿ ಕಾಯ್ದೆ ಬಂದು ಹಳ್ಳಿಗಳಲ್ಲಿ ಸಂಘರ್ಷವನ್ನುಂಟುಮಾಡಿದ್ದು ನಿಜ.

'ಪಟ್ಟ' (ಚಿತ್ರಶೇಖರ ಕಂಠಿ) ಕಥೆಯಲ್ಲಿ, ಇದೇ ಸಂಘರ್ಷದ ಇನ್ನೊಂದು ಮುಖವಿದೆ.ಟೆನೆಸ್ಸಿ ಕಾಯ್ದೆಯ ಪರಿಣಾಮವಾಗಿ ಭೂಮಿಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದ ಭೂಮಾಲಿಕರು, ತಮ್ಮ ಪ್ರಭಾವದಿಂದ ಹೇಗೋ ರಕ್ಷಣೆಯಲ್ಲಿರಲು ಪ್ರಯತ್ನಿಸುತ್ತಿದ್ದರು. ಕಥೆಯಲ್ಲಿ, ಭೂಮಿಯನ್ನು ಉಳುವ ಜೀತದಾಳು ನಾಗೇಂದ್ರಪ್ಪನ ಔದಾರ್ಯದಿಂದಾಗಿ ಭೂ ಒಡೆಯನಾದ ಈರಯ್ಯನ ಭೂಮಿ ಕೈ ತಪ್ಪುವುದಿಲ್ಲ. ಕಾಲ ಸರಿದಂತೆ ನಾಗೇಂದ್ರಪ್ಪನ ಮಗನಿಗೆ ಸರಕಾರಿ ಇಲಾಖೆಯಲ್ಲಿ ಕೆಲಸ ದಕ್ಕಿಸಿಕೊಳ್ಳಲು ಲಂಚ ನೀಡಬೇಕಾದ ಸಮಸ್ಯೆ ಎದುರಾಗುತ್ತದೆ. ಆಗ ಅನಿವಾರ್ಯವಾಗಿ ನಾಗೇಂದ್ರಪ್ಪ ಈರಯ್ಯನ ಸಹಾಯ ನಿರೀಕ್ಷಿಸುತ್ತಾನೆ. ಮೂಲತಃ ಈ ಹಿಂದೆ ನಾಗೇಂದ್ರಪ್ಪ ಭೂಮಿ ವಿಷಯದಲ್ಲಿ ಔದಾರ್ಯ ತೋರಿಸಲು ಈರಯ್ಯನ ಸಾತ್ವಿಕ ಗುಣ ಸ್ವಭಾವವೇ ಕಾರಣವಾಗಿತ್ತು. ಈ ಸಂದರ್ಭದಲ್ಲಿ ನಾಗೇಂದ್ರಪ್ಪನಿಗೆ ಸಹಾಯ ಮಾಡಲು ಈರಯ್ಯನ ಮನಸ್ಸು ಕಿಂಚಿತ್ ಹಿಂಜರಿಯಲಿಲ್ಲ. ಆದರೆ ಹಣವಿರಲಿಲ್ಲ. ಮಗ ನಗರದಲ್ಲಿ ಸರಕಾರಿ ನೌಕರಿಯಲ್ಲಿದ್ದು ಸ್ಥಿತಿವಂತನಾಗಿದ್ದ. ಈ ಸ್ಥಿತಿಗೆ ಬರಲು ನಾಗೇಂದ್ರಪ್ಪನ ಔದಾರ್ಯವೂ ಕಾರಣವಾಗಿತ್ತು. ಹಿಂದೆ ಸರಕಾರದ ಬೆಂಬಲದಿಂದ ನಾಗೇಂದ್ರಪ್ಪ ಭೂಮಿ ಕಸಿದುಕೊಂಡಿದ್ದರೆ, ಈರಯ್ಯ ಮಗನನ್ನು ಓದಿಸಲಾಗುತ್ತಿರಲಿಲ್ಲ. ನಾಗೇಂದ್ರಪ್ಪನ ಮಗನಿಗೆ ಸಹಾಯ ಮಾಡಲು ಈರಯ್ಯ ಮಗನ ಸಹಾಯ ನಿರೀಕ್ಷಿಸಿ ಹೋಗಿ ಕೇಳುತ್ತಾನೆ. ಆದರೆ ನಗರ ಸೇರಿದ್ದ ಮಗನಲ್ಲಿ ದೊಡ್ಡ ಮನಸ್ಸಿಲ್ಲದ್ದು ಕಂಡು ಜುಗುಪ್ಸೆ ಹೊಂದಿ ಮರಳುತ್ತಾನೆ. ಮೂಲತಃ ಈರಯ್ಯ ಮಠದ ಸ್ವಾಮಿಯಾಗಿದ್ದ. ಓದಿದ ಮಗ ತಂದೆಗೆ ಹಣ ಕೊಡುವುದಿರಲಿ ಬದಲಾಗಿ ಕಾಲ ಬದಲಾಗಿದೆ, ದಲಿತರಿಗೆ ಸಹಾಯ ಮಾಡುವುದು ಒಳ್ಳೆಯದಲ್ಲವೆಂದು ಬುದ್ಧಿವಾದ ಹೇಳಿ ಕಳಿಸಿರುತ್ತಾನೆ. ಆದರೆ ಈರಯ್ಯ ನಾಗೇಂದ್ರಪ್ಪನ ಹಿಂದಿನ ತ್ಯಾಗ ನೆನೆದು, ಅದೇ ಹೊಲವನ್ನು ಮಾರಿ ಹಣ ನೀಡುತ್ತಾನೆ. ಜತೆಗೆ ಹಿಂದುಳಿದ ನಾಗೇಂದ್ರಪ್ಪನ ಮಗ ಮುಂದು ಬರಲೆಂದು ಆಶಿಸುತ್ತಾನೆ.

ಈ ಕಥೆ ಟೆನಸ್ಸಿ ಕಾಯ್ದೆಯ ಪರಿಣಾಮದ ಒಂದು ಮುಖದ ಜತೆಗೆ, ತಲೆಮಾರಿನಿಂದ ತಲೆಮಾರಿಗೆ ಬದಲಾದ ನೈತಿಕತೆಯನ್ನು ತೋರಿಸುತ್ತದೆ. ಹಳ್ಳಿಯ ಸಾಂಪ್ರದಾಯಿಕ ಕುಟುಂಬಗಳಲ್ಲಿ ಅಕ್ಷರ ಕಲಿತವರಿಂದಲೇ ಬಿಕ್ಕಟ್ಟುಗಳು ಹುಟ್ಟುತ್ತವೆ, ಅಕ್ಷರ ಕಲಿತವರಲ್ಲಿ ಪ್ರತ್ಯೇಕತೆ ಕಾಣಿಸಿ ಕುಟುಂಬಗಳು ಒಡೆಯುವುದಕ್ಕೆ ಕಾರಣವಾಗುತ್ತವೆ ಎಂಬ ಮನೋಭಾವ ಅನೇಕ ಕಥೆಗಳಿಂದ ವ್ಯಕ್ತವಾಗುತ್ತದೆ. ಇದು ತಲೆಮಾರುಗಳ ತಾತ್ವಿಕ ಸಂಘರ್ಷಕ್ಕೆ ಪಟ್ಟ ಸಮಸ್ಯೆಯಾಗಿದೆ. ಇದು ಸಹಜವಾಗಿ ಹುಟ್ಟಿಕೊಳ್ಳುವ ಬಿಕ್ಕಟ್ಟಾಗಿದೆ.

ಕೌಟುಂಬಿಕ ಬದುಕಿನ ಸಮಸ್ಯೆಗಳು

ಹಳ್ಳಿ ಮತ್ತು ಹಳ್ಳಿಯ ಜನಸಮುದಾಯದ ಸಂಬಂಧಗಳನ್ನು ಕುರಿತು ಬರೆದ ಕಥೆಗಳಂತೆ ಕುಟುಂಬ, ಅದರ ಸಮಸ್ಯೆ-ಸಾಮರಸ್ಯವನ್ನು ಕುರಿತು ಈ ಭಾಗದ ಕಥೆಗಾರರು ಹೆಚ್ಚು ಕಥೆಗಳನ್ನು ಬರೆದಿಲ್ಲವೆಂಬುದು ಕುತೂಹಲ ಹುಟ್ಟಿಸುತ್ತದೆ. ಒಂದು ಕುಟುಂಬ ಅದರಲ್ಲಿರುವ ಸದಸ್ಯರ ಸಂಬಂಧಗಳು, ಬಿಕ್ಕಟ್ಟುಗಳು, ತಾತ್ವಿಕ ಸಂಘರ್ಷಗಳು, ಸಹಬಾಳ್ವೆಯನ್ನು ಚಿತ್ರಿಸುವ ಕಥೆಗಳು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಯಾಕೆ ಸೃಷ್ಟಿಯಾಗಿಲ್ಲ? ಎಂಬ ಪ್ರಶ್ನೆ ಮೂಡುತ್ತದೆ. ಹಳ್ಳಿಯ ಬದುಕನ್ನು ಕುರಿತು ಬರೆದಷ್ಟು ನಗರದ ಬದುಕನ್ನು ಬರೆದಿಲ್ಲ. ಈ ಹೊತ್ತಿನ ಪೀಳಿಗೆಯನ್ನು ಗಮನಿಸಿದರೂ ಇದು ನಿಜವೆನಿಸುತ್ತದೆ. ಸಾಮಾನ್ಯವಾಗಿ ಒಂದು ಹಳ್ಳಿಯೇ ಒಂದು ಕುಟುಂಬದಂತಿರುತ್ತದೆ. ಈ ಹಳ್ಳಿಯಲ್ಲಿರುವ ಹತ್ತಾರು ಕುಟುಂಬಗಳು ಒಂದು ಘಟಕದ ಸದಸ್ಯರಂತಿರುತ್ತಾರೆ. ಊರಗೌಡ, ಮಠದ ಅಧಿಪತಿ(ಸ್ವಾಮಿ)ಗಳ ಅಧೀನದಲ್ಲಿಯೇ ಹಳ್ಳಿಯಿರುತ್ತದೆ. ಇದರಿಂದ ಕುಟುಂಬಕ್ಕೆ ಸಾಮಾನ್ಯವಾಗಿ ಸ್ವತಂತ್ರ ಅಸ್ತಿತ್ವವಿರುವುದು ಕಡಿಮೆ. ಗಂಡ-ಹೆಂಡತಿ, ಅಣ್ಣ-ತಮ್ಮ, ತಂದೆ-ಮಕ್ಕಳ ಜಗಳಗಳು ಮನೆಯಲ್ಲಿಯೇ ಬಗೆಹರಿಯುವುದಿಲ್ಲ. ಊರಗೌಡನ ಪಡಸಾಲೆಯಲ್ಲಿ ಇಲ್ಲವೇ ಮಠಾಧಿಪತಿಯ ಮಠದಲ್ಲಿ ಇತ್ಯರ್ಥವಾಗುವುದೇ ಹೆಚ್ಚು. ಮದುವೆ, ಜವಳ, ತೊಟ್ಟಿಲು, ತಿಥಿ ಮುಂತಾದ ಕಾರ್ಯಗಳು ಕೂಡ ಊರೊಟ್ಟಿನ ಸಂಬಂಧವಿರಿಸಿಕೊಂಡೇ ನಡೆಯುತ್ತವೆ. ಉತ್ತುವುದು, ಬಿತ್ತುವುದು, ಕಣ ಮಾಡುವುದು, ಹಬ್ಬ ಆಚರಿಸುವುದು, ದನಕರ ಮಾರುವುದು-ಕೊಳ್ಳುವುದು ಮುಂತಾದವು ಸಾಮೂಹಿಕವಾಗಿಯೇ ನಡೆಯುತ್ತವೆ. ಇಂಥ ವ್ಯವಸ್ಥೆ ಇರುವ ಊರುಗಳಲ್ಲಿ ಕುಟುಂಬಕ್ಕೆ ಪ್ರತ್ಯೇಕ ಅಸ್ತಿತ್ವವಿರುವುದು ಕಡಿಮೆ.

ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವೆಂದೇ ಹೆಸರು ಪಡೆದಿದೆ. ನಿಜಾಮರು ಬ್ರಿಟಿಶರು ಬಿಟ್ಟು ಹೋಗಿ ಸ್ವಾತಂತ್ರ್ಯ ಸಿಕ್ಕು ಐವತ್ತು ವರ್ಷಗಳಾದರೂ ಹಿಂದುಳಿಯುವಿಕೆ ಮುಂದುವರಿದಿದೆ. ನಾಗರಿಕ ಸೌಲಭ್ಯಗಳು, ಶೈಕ್ಷಣಿಕ ಸೌಲಭ್ಯಗಳು ಇವು ಈ ಹೊತ್ತಿನವರೆಗೂ ಈ ಪ್ರದೇಶಕ್ಕೆ ಸರಿಯಾಗಿ ಲಭ್ಯವಾಗುತ್ತಿಲ್ಲ. ಸರಕಾರದ ಆಡಳಿತ ಕಛೇರಿಗಳು, ವಿಶ್ವವಿದ್ಯಾಲಯಗಳು, ಕೈಗಾರಿಕಾ ಉದ್ಯಮಗಳು, ಈ ಪ್ರದೇಶವನ್ನೂ ತುಂಬಿಕೊಂಡು ಬದಲಾವಣೆಗೆ ಕಾರಣವಾಗಲಿಲ್ಲ. 'ಆಧುನಿಕತೆ' ಜನ ಸಮುದಾಯಗಳಲ್ಲಿ ಪ್ರವೇಶಿಸಲಿಲ್ಲ. ಶಿಕ್ಷಣ ಮತ್ತು ಉದ್ಯೋಗ ಸೌಲಭ್ಯಗಳು ಜನರಿಗೆ ದೊರೆಯುತ್ತ ಹೋದಂತೆ ಮಧ್ಯಮ ವರ್ಗವು ಹುಟ್ಟಿಕೊಂಡು ವ್ಯಕ್ತಿಗಳಲ್ಲಿ ಪ್ರತ್ಯೇಕತೆ ಬೆಳೆಯುತ್ತದೆ. ಪ್ರತ್ಯೇಕತೆಯಿಂದಲೇ ಕುಟುಂಬಗಳಿಗೆ ಅಸ್ತಿತ್ವ ಮತ್ತು ಸ್ವಾತಂತ್ರ್ಯ ಬರುತ್ತದೆ. ಆಗ ಅವುಗಳಿಗೆ ಅವುಗಳದೇ ಆದ ಅನುಕೂಲಗಳು, ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಈ ಪ್ರದೇಶದಲ್ಲಿ ಬಡತನವಿದೆ. ಅಕ್ಷರಜ್ಞಾನದ ಕೊರತೆಯಿದೆ. ಜನರಲ್ಲಿ ಸ್ವಾವಲಂಬನೆಯ ಕಲ್ಪನೆಯಿಲ್ಲ. ಸಾವಿರಾರು ಎಕರೆ ಭೂಮಿಯ ಜಮೀನ್ದಾರರಿರುವ ಈ ಪ್ರದೇಶದಲ್ಲಿ ಅವರ ಭೂಮಿಗಳನ್ನೇ ಉಳುವ ಮತ್ತು ಜೀತದಾಳುಗಳಾಗಿ ಬದುಕುವ ಜನಸಾಮಾನ್ಯರಿಗೆ ಸ್ವಾತಂತ್ರ್ಯದ ಕಲ್ಪನೆಯಿರುವುದಿಲ್ಲ. ಇಂಥ ಹಲವಾರು ಕಾರಣಗಳಿಂದ ಕುಟುಂಬಗಳಿಗೆ ತನ್ನದೇ ಆದ ಅಸ್ತಿತ್ವ ಮತ್ತು ಸ್ವಾತಂತ್ರ್ಯವಿತ್ತು ಎನಿಸುವುದಿಲ್ಲ. ಕುಟುಂಬದ ಸಮಸ್ಯೆಗಳು ಸಮುದಾಯದ ಸಮಸ್ಯೆಗಳೇ ಆಗಿರುವುದರಿಂದಲೋ ಏನೋ ಈ ಪ್ರದೇಶದ ಕಥೆಗಳಲ್ಲಿ ಕೌಟುಂಬಿಕ ಬದುಕಿನ ಚಿತ್ರಣಗಳ ಪ್ರಮಾಣ ಕಡಿಮೆ ಇದೆ. ಇರುವ ಕೆಲವು ಕಥೆಗಳಲ್ಲಿ ಈ ಪ್ರದೇಶದ ಕೌಟುಂಬಿಕ ವ್ಯವಸ್ಥೆ ಕಾಲಾಂತರದಲ್ಲಿ ಹೇಗೆ ಬದಲಾಗುತ್ತ ನಡೆದಿದೆ ಎಂಬುದರ ಚಿತ್ರಣವಿದೆ.

'ಆ ಮನೆಯ ಕಥೆ' (ಕುಮಾರಿ ನೀಲಾ) ಇದು ಸುಮಾರು ಐವತ್ತು ವರ್ಷಗಳ ಹಿಂದೆ ಬರೆದ ಕಥೆ. **'ಕಳಚಲಿದೆ ರತ್ನ'** (೧೯೫೧) ಎಂಬ ಎ.ಬಿ.ಮುತ್ತಾಳರ ಕಥಾಸಂಕಲನದಲ್ಲಿ ಅವರು ತಮ್ಮ ಸಹೋದರಿಯ ಎರಡು ಕಥೆಗಳನ್ನು ಸೇರಿಸಿದ್ದಾರೆ. ಅದರಲ್ಲಿ 'ಆ ಮನೆಯ ಕಥೆ' ಒಂದು. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಕಾಲದಲ್ಲಿ ಬರೆದ ಈ ಕತೆ ಭಾವುಕತೆ ಮತ್ತು ರಮ್ಯ

ಭಾಷೆಯಿಂದ ಕೂಡಿದೆ. ಜಮೀನ್ದಾರಿ ಮನೆತನಗಳಲ್ಲಿ ಕುಡಿತ,ಜೂಜು,ಪರಸ್ತ್ರೀ ಸಂಗ, ಹೊಡೆದಾಟ ಇವು ಸಾಮಾನ್ಯ. ಇದಕ್ಕೆ ವಿರುದ್ಧವಾದ ಕುಟುಂಬಗಳೂ ಅಸ್ತಿತ್ವದಲ್ಲಿವೆಯೆಂದು ಕಾಣುತ್ತದೆ. ಈ ಕುಟುಂಬಗಳಲ್ಲಿ ವಿದ್ಯಾವಂತರಿದ್ದು ಕುಡಿತ, ಜೂಜು, ಪರಸ್ತ್ರೀಸಂಗ ಇವುಗಳಿಂದ ದೂರವಿದ್ದು ಜನಸಾಮಾನ್ಯರ ದೃಷ್ಟಿಯಲ್ಲಿ ಗೌರವ ಸ್ಥಾನವನ್ನು ಪಡೆದಿದ್ದವು. ಕೆಟ್ಟ ಅಭ್ಯಾಸಗಳೆಂದು ಕರೆಯುವ ಇವುಗಳಿಂದ ದೂರವಿರುವ ಇಂಥ ಮನೆತನಗಳಿಗೆ ಜನ ವಿಶೇಷವಾದ ಮನ್ನಣೆ-ಗೌರವ ಕೊಡುತ್ತಿದ್ದರು. ಈ ಕಥೆಯಲ್ಲಿ ಇಂಥ ಮನೆತನದ ದುರಂತ ಚಿತ್ರಣವಿದೆ. ವಿದ್ಯಾವಂತರೂ ಸಜ್ಜನರೂ ದಾನಿಗಳೂ ಆದ ಚೆನ್ನಬಸಪ್ಪನವರ ಮೂರು ಜನ ಮಕ್ಕಳು ವಿದ್ಯಾವಂತರಾದರೂ ಒಬ್ಬ ಮಗ ಯಾವುದೋ ಕಾರಣಕ್ಕೆ ತಂದೆ ಜತೆ ಜಗಳವಾಡಿ ಸೈನ್ಯ ಸೇರಿದ. ಇನ್ನೊಬ್ಬ ಮಗ ಅನ್ಯಜಾತಿ ಹುಡುಗಿಯನ್ನು ಮದುವೆ ಮಾಡಿಕೊಂಡು ಬೇರೆ ಹೋದ. ಮೂರನೆ ಮಗ ಚಂದ್ರಶೇಖರನ ಮೇಲೆ ನಂಬಿಕೆಯಿಟ್ಟು, 'ಚಂದ್ರಭವನ' ಎಂಬ ಮನೆಯನ್ನೂ, ಆಸ್ತಿಯನ್ನೂ ಅವನ ಹೆಸರಿಗೆ ಮಾಡಿಸಿದರು. ಸುಸಂಸ್ಕೃತ ಮನೆತನದ ಕನ್ಯೆ ಶಾರದಳನ್ನು ತಂದು ಮದುವೆ ಮಾಡಿದರು. ನಂತರದ ಕೆಲವೇ ವರ್ಷಗಳಲ್ಲಿ ಮಗ ಕುಡಿದು, ಜೂಜು ಆಡಿ ಮನೆತನದ ಗೌರವವನ್ನು ಹಾಳುಮಾಡಿದ. ನಂತರ ಪಶ್ಚಾತ್ತಾಪದಿಂದ ಆತ್ಮಹತ್ಯೆ ಮಾಡಿಕೊಂಡ. 'ಪ್ರತಿಷ್ಠಿತ' ಎಂದು ಕರೆಸಿಕೊಂಡ ಮನೆತನಗಳ ಜನರು ಇಂಥ ಕಳಂಕ ತರುವ ವಿಷಯದಲ್ಲಿ ಜನಕ್ಕೂ ಮನಕ್ಕೂ ಅಂಜುತ್ತಿದ್ದರು. ಇಂಥ ದುರಭ್ಯಾಸಗಳು ಸಮಾಜದಲ್ಲಿ ಕಳಂಕಪ್ರಾಯವಾಗಿದ್ದವು ಎಂದು ಈ ಕಥೆ ಹೇಳುತ್ತದೆ. ಇಂಥ ಒಂದು ಪ್ರತಿಷ್ಠಿತ ಮನೆ ಕುಡಿತದಿಂದ, ಜೂಜಿನಿಂದ ಹಾಳಾದದ್ದು ಎಂದರೆ ಜನ ಸಾಮಾನ್ಯರ ಕಣ್ಣಲ್ಲಿ ಒಂದು ಸಾಮ್ರಾಜ್ಯ ಹಾಳಾದಂತೆ ಕಾಣಿಸುತ್ತಿತ್ತು.

'ಅವಳೇ ಇವಳು'(ಶಿವಲೆಂಕ) ಕಥೆಯಲ್ಲಿ, ಹಳ್ಳಿಯ ಮಧ್ಯಮ ವರ್ಗದ ಕುಟುಂಬದಲ್ಲಿ ಅಕ್ಷರ ಕಲಿತವರಿಂದ ಬಿಕ್ಕಟ್ಟುಗಳು ಉಂಟಾಗುವ ವಸ್ತುಸ್ಥಿತಿ ಇದೆ. ಚಂದ್ರಶೇಖರ ವಿದ್ಯಕಲಿತ ಕಾರಣ ಅವನ ತಂದೆ ತಾಯಿ ಮಾಡಿದ ಹಳ್ಳಿ ಹುಡುಗಿಯನ್ನು ನಿರಾಕರಿಸುತ್ತಾನೆ. ಇದು ಹಳ್ಳಿಯ ಕುಟುಂಬ ವ್ಯವಸ್ಥೆಗೆ ಧಕ್ಕೆ ತರುವಂತದ್ದು. ಕಲಿತ ಹುಡುಗಿ ಮನೆಗೆ ಹೊಂದಿಕೊಳ್ಳುವುದಿಲ್ಲ ಎಂಬ ನಂಬಿಕೆ ಸಾಮಾನ್ಯವಾಗಿ ಸಂಪ್ರದಾಯ ಕುಟುಂಬಗಳಿಗಿರುತ್ತದೆ. ಆದರೆ ಕಲಿತ ಹುಡುಗಿಯನ್ನು ಮದುವೆಯಾಗುವುದು ಯುವಕರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿರುತ್ತದೆ. ಈ ಕಥೆಯಲ್ಲಿ ವಿದ್ಯಾವಂತನಾದ ಗಂಡ ತನ್ನನ್ನು ನಿರಾಕರಿಸಿದ ಎಂದು ನೀಲೇಶ್ವರಿ, ತಾನೂ ಓದಿ ಮುಂದೆ ಅವನ ಜತೆ ಸಂಸಾರಕ್ಕೆ ನಿಲ್ಲುತ್ತಾಳೆ. ಈ ಕಥೆ ಕೂಡ ಪ್ರಗತಿಶೀಲ ಸಾಹಿತ್ಯದ ಆಶಯಗಳಿಗೆ ಅನುಗುಣವಾಗಿದೆ. ಅರವತ್ತರ ದಶಕದಲ್ಲಿ ಬರೆದದ್ದು. ಆದರೂ ಈ ಕಥೆ ಹಳ್ಳಿಯ ಸಂಪ್ರದಾಯಸ್ಥ ಕುಟುಂಬಗಳಲ್ಲಿ ವಿದ್ಯೆ ಕಲಿತ ಯುವಕರಿಂದ ಇಂಥ ಬಿಕ್ಕಟ್ಟುಗಳು ಎದುರಾಗುತ್ತವೆ ಎಂಬುದನ್ನು ಹೇಳುತ್ತದೆ. ಈ ಸಮಸ್ಯೆ ಇನ್ನಷ್ಟು ಸಮರ್ಥವಾಗಿ **'ಗುಡಿಯ ನೋಡಿರಣ್ಣ'** (ರಾಜಶೇಖರ ನೀರಮಾನ್ವಿ) ಕಥೆಯಲ್ಲಿ ಮೂಡಿಬಂದಿದೆ. ಕಳ್ಳುಬಳ್ಳಿಯ ಸಂಬಂಧಗಳು ಒಂದು ಕುಟುಂಬ ವ್ಯವಸ್ಥೆಯಲ್ಲಿ ಹೇಗೆ ಅಸ್ತಿತ್ವ ಪಡೆದಿರುತ್ತವೆ ಎಂಬುದಿದೆ. ಹಳ್ಳಿಯ ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿದ ರವಿ, ವಿದ್ಯೆ ಕಲಿತು ಅಕ್ಕನ ಮಗಳು ಗೌರಿಯನ್ನು ನಿರಾಕರಿಸಿ, ವಿದ್ಯೆ ಕಲಿತ ಸುಧಾಳನ್ನು ಮದುವೆಯಾಗಿ ಕಾಲೇಜೊಂದರಲ್ಲಿ ಲೆಕ್ಚರರ ಆಗಿ ನಗರ ಸೇರುತ್ತಾನೆ. ಪರಿಣಾಮಸ್ಥ ರವಿಯ ತಂದೆ ತಾಯಿಗೆ ಮಗ ಮಾಡಿದ್ದು ಸರಿ ಎನಿಸುವುದಿಲ್ಲ. ಒಬ್ಬನೇ ಗಂಡು ಮಗನಾಗಿದ್ದ ರವಿಗೆ ಮನೆಯ ಜವಾಬ್ದಾರಿಯೂ ಇತ್ತು. ಅವನ ತಂದೆಗೆ ಮೊಮ್ಮಗಳು ಗೌರಿಯನ್ನು ಸೊಸೆಯಾಗಿ ತಂದು ಕೊಳ್ಳುವ ಮೂಲಕ ಕುಟುಂಬ ವ್ಯವಸ್ಥೆಯಂತೆ ಕಳ್ಳುಬಳ್ಳಿಯ ಸಂಬಂಧವನ್ನು ಗಟ್ಟಿಗೊಳಿಸುವುದಾಗಿತ್ತು. ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳಿಸಿದಾಗಲೇ ಸಂಬಂಧ ಕಳಚಿತು ಎಂಬ ಭಾವನೆ ರವಿಯ ತಂದೆಗೆ ಬಂದಿದ್ದರೂ ಮೊಮ್ಮಗಳನ್ನು ತಂದುಕೊಳ್ಳುವ ಮೂಲಕ ಪುನ: ಸಂಬಂಧವನ್ನು ಉಳಿಸಲು ಯೋಚಿಸಿದ್ದರು. ಇದು ಕುಟುಂಬದ ವ್ಯವಸ್ಥೆಯೂ ಆಗಿತ್ತು. ಹಳ್ಳಿಗಳ ಕುಟುಂಬಗಳಲ್ಲಿ ವಿದ್ಯೆ ಕಲಿತ ಯುವಕರು ಅಕ್ಕನ ಮಗಳನ್ನು ನಿರಾಕರಿಸಿ, ಹೊಸ ಸಂಬಂಧವನ್ನು ಬೆಳೆಸುವುದು ಒಂದು ರೀತಿಯ ಕ್ರಾಂತಿ ಎಂದೇ ಭಾವಿಸಿರುತ್ತಾರೆ. ಇದು ಕುಟುಂಬ ವ್ಯವಸ್ಥೆಗೆ ದಕ್ಕೆ

ತರುವಂಥಾದಾಗುತ್ತದೆ ಮತ್ತು ಬಿಕ್ಕಟ್ಟನ್ನು ತರುತ್ತದೆ. ಮಗ ಮನೆಯನ್ನು, ಆಸ್ತಿಯನ್ನು ಮತ್ತು ಸಂಬಂಧವನ್ನು ನಿರಾಕರಿಸಿ ಹೋದಂತೆ ತಂದೆಗೆ ಕಾಣುತ್ತದೆ. ರವಿಯ ನೌಕರಿ ತಂದೆಗೆ ಇಷ್ಟವಾಗುವುದಿಲ್ಲ. ಒಂದು ಕಾಲದಲ್ಲಿ ಸರಕಾರಿ ನೌಕರಿ ಮಾಡುವುದು ಎಂದರೆ ಗುಲಾಮಗಿರಿ ಮಾಡಿದಂತೆ ಎಂಬ ಭಾವನೆ ಭೂಮಾಲಿಕ ಕುಟುಂಬಗಳಲ್ಲಿತ್ತು. ಗೌರಿಯನ್ನು ರವಿ ಮದುವೆ ಮಾಡಿಕೊಂಡಿದ್ದರೆ ಈ ಮನೆ, ಈ ಆಸ್ತಿ, ಮಗ-ಮೊಮ್ಮಗಳು ಎಲ್ಲರೂ ಕಣ್ಣ ಮುಂದಿರುತ್ತಿದ್ದರೆಂದು ತಂದೆಯ ಬಯಕೆಯಾಗಿತ್ತು. ಆದರೆ ಕಲಿತ ರವಿ ಅದರಲ್ಲೂ ಒಬ್ಬನೇ ಮಗನಾಗಿ ಕುಟುಂಬ ಬಿಟ್ಟುಹೋದದ್ದು ವ್ಯಥೆಯಾಗುತ್ತದೆ. ಗೌರಿಗೆ ಬೇರೆ ಮದುವೆ ಮಾಡುತ್ತಾರೆ. ಅವಳ ಗಂಡ ಮನೆಗೆ ಹೊಂದದವನಾಗಿ ಇದ್ದದ್ದನ್ನು ದೋಚುವವನಾಗಿ ಮನೆಯನ್ನು ದಿವಾಳಿ ಮಾಡಲಾರಂಭಿಸಿದಾಗ ತಂದೆಗೆ ಚಿಂತೆಯಾಗುತ್ತದೆ. ರವಿ ಮನೆಯ ಅವ್ಯವಸ್ಥೆಯನ್ನು ನೋಡುತ್ತಾನೆ. ಅವನ ಹೆಂಡತಿ ಸುಧಾ ಬಂದು ಮಾವ, ಗೌರಿಯ ಅವಸ್ಥೆ ನೋಡಿ, ಮನೆತನದ ಭವಿಷ್ಯದ ಬಗ್ಗೆ ಯೋಚಿಸಿ, ನಗರವನ್ನು ಬಿಟ್ಟು ಬಂದು ಹಳ್ಳಿಯಲ್ಲಿಯೇ ಇರಲು ಯೋಚಿಸುತ್ತಾಳೆ. ರವಿಯ ತಂದೆ ಸುಧಾಳನ್ನು ಪ್ರೀತಿಯಿಂದ ಕಾಣುತ್ತಾನೆ. ಹೊರಗಿನಿಂದ ಬಂದ ಸುಧಾ ರವಿಯ ಮನೆಯ ಪರಿಸ್ಥಿತಿಯನ್ನು ಗ್ರಹಿಸಿ ಗಂಡನಿಗೆ ಕೆಲಸಕ್ಕೆ ರಾಜೀನಾಮೆ ನೀಡಿಸಿ, ಕುಟುಂಬವನ್ನು ಮಾವನ ಬಯಕೆಯಂತೆ ನಡೆಸಲು ಪ್ರಯತ್ನಿಸುತ್ತಾಳೆ. ಇದು ತಲೆಮಾರಿನ ತಾತ್ವಿಕ ಸಂಘರ್ಷಕ್ಕೆ ಸಂಬಂಧಿಸಿದ್ದಾಗಿ ಕಾಣುತ್ತದೆ.

'ಹಂಗಿನರಮನೆಯ ಹೊರಗೆ'(ರಾಜಶೇಖರ ನೀರಮಾನ್ವಿ)ಕಥೆಯಲ್ಲಿಯೂ ಈ ಸಮಸ್ಯೆಯಿದೆ. ಕಲಿತ ಮಗ ಮತ್ತು ಪರಂಪರಾಗತ ಕುಟುಂಬ ವ್ಯವಸ್ಥೆಯಲ್ಲಿ ಬೆಳೆದ ತಂದೆಯ ನಡುವೆ ತಾತ್ವಿಕ ಭಿನ್ನಾಭಿಪ್ರಾಯಗಳು ಉಂಟಾಗಿ ಸಂಬಂಧಗಳೇ ಶಿಥಿಲವಾಗಿ ಬಿಡುತ್ತದೆ. ಎಲ್ಲವೂ ತಂದೆಯಂತೆ ನಡೆಯಬೇಕಾದರೆ ಮಗನಿಗೆ ತನ್ನ ಅಸ್ತಿತ್ವದ ಪ್ರಶ್ನೆ ಏಳುತ್ತದೆ. 'ಕಲತೋರು ನಮಗಿಂತ ಶಾಣ್ಯೋರು ಅಂಬೋದೇ ತಲೆತುಂಬ ತುಂಬಿಕೊಂಡಿರೋರಿಗೆ ಏನು ಹೇಳಬಹುದು?' ಎಂದು ತಂದೆಯೆಂದರೆ, 'ಅಪ್ಪ, ಈ ಪರಸ್ಥಿತಿಗೆ ನನ್ನನ್ನು ತಂದಾತನೇ ನೀನು' ಮಗನ ಅಭಿಪ್ರಾಯವಿದು. ತಾತ್ವಿಕ ಭಿನ್ನಾಭಿಪ್ರಾಯಗಳು ಕೇವಲ ತಾತ್ವಿಕ ಮಟ್ಟದಲ್ಲಿ ಉಳಿಯಲು ಸಾಧ್ಯವಿಲ್ಲ ಎನಿಸುತ್ತದೆ. ಇದು ವ್ಯಕ್ತಿತ್ವದ, ಬದುಕಿನ ಪ್ರಶ್ನೆಯಾಗುತ್ತದೆ. ಒಟ್ಟಿಗೆ ಮುಂದುವರಿಯಲು ಕಷ್ಟವಾಗುತ್ತದೆ. ಇದರಿಂದ ತಾತ್ವಿಕ ಭಿನ್ನತೆಯಿಂದ ಕುಟುಂಬಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಂಘರ್ಷಗಳು ಹುಟ್ಟುತ್ತವೆ. ಕಲಿಕೆಯಿಂದ ಮಾತ್ರ ಹುಟ್ಟುವಂಥದ್ದಲ್ಲ. ಅಂದರೆ ಕುಟುಂಬಗಳಲ್ಲಿ ಒಬ್ಬ ವಿದ್ಯೆಕಲಿತ ಮಾತ್ರಕ್ಕೆ ತಾತ್ವಿಕ ಭಿನ್ನಾಭಿಪ್ರಾಯಗಳು ತಲೆದೋರುತ್ತವೆ ಎಂದಲ್ಲ. ಕುಟುಂಬಗಳಲ್ಲಿ ಕಲಿತವರು ಇರದಿದ್ದರೂ ಭಿನ್ನಾಭಿಪ್ರಾಯಗಳು ಹುಟ್ಟುತ್ತವೆ. ಇದು ವ್ಯಕ್ತಿತ್ವಕ್ಕೆ ಸಂಬಂಧ ಪಟ್ಟದ್ದು, ಕಾಲದ ಬದಲಾವಣೆಗೆ ಸಂಬಂಧ ಪಟ್ಟದ್ದು.

'ಗಟ್ಟಿ ಎಳೆ'(ಶ್ರೀಕಾಂತ ಪಾಟೀಲ್) ಕಥೆಯಲ್ಲಿ ಕಳ್ಳುಬಳ್ಳಿಯ ಸಂಬಂಧದ ಸಮಸ್ಯೆ ಮುಂದುವರಿದಿದೆ. ಕುಟುಂಬ ವ್ಯವಸ್ಥೆಯಂತೆ ಅಕ್ಕನ ಮಗಳನ್ನು ಮದುವೆ ಮಾಡಿಕೊಳ್ಳುವುದರಿಂದ ವರದಕ್ಷಿಣೆ ಬಿಕ್ಕಟ್ಟು ಇರುವುದಿಲ್ಲ. ಸೊಸೆಯಾಗಿ ಅಕ್ಕನ ಮಗಳು ಮನೆಗೆ ಬಂದರೆ ಗಂಡನೂ ಅಪರಿಚಿತನಾಗಿರುವುದಿಲ್ಲ. ಅತ್ತೆ, ಮಾವರ ಬದಲು ತಾತ-ಅವ್ವ ಇರುತ್ತಾರೆ. ಇಡೀ ಕುಟುಂಬವೇ ಪರಿಚಯವಿರುತ್ತದೆ. ಅವಳಿಗೆ ಅನ್ಯತನ, ಪರಕೀಯತೆ ಕಾಡುವುದಿಲ್ಲ. ಮೊಮ್ಮೊಗಳು ಸೊಸೆಯಾಗಿ ಬಂದರೆ ಸೊಸೆಯಂತೆ ಕಾಣುವುದಿಲ್ಲ. ಮುಪ್ಪಿನಲ್ಲಿ ಆಸರೆಯಾಗಿರುತ್ತಾಳೆ. ಗಂಡನಿಗೆ ಅಕ್ಕನ ಮಗಳಾಗಿದ್ದರೆ ಮನೆಗೆ, ಮನೆಯ ಮಂದಿಗೆ ಹೊಂದಿಕೊಂಡು ಹೋಗುವ ಬಿಕ್ಕಟ್ಟಿರುವುದಿಲ್ಲ. ಇದರಿಂದ ಕುಟುಂಬಗಳೂ ಬೇಗ ಒಡೆಯುವುದಿಲ್ಲ. ಇಂಥ ಅನುಕೂಲಗಳಿಂದ ಕುಟುಂಬಗಳಲ್ಲಿ ಈ ವ್ಯವಸ್ಥೆ ಇದೆ ಎಂದು ಕಾಣುತ್ತದೆ. ಇದು ಪರಂಪರಾಗತ ಕುಟುಂಬಗಳ ನಂಬಿಕೆಯೂ ಆಗಿದೆ. ಆದರೆ ಇಂದಿನ ದಿನಗಳಲ್ಲಿ ಇಂಥ ಪಾರಂಪರಿಕ ಸಂಬಂಧಗಳು ಕಮ್ಮಿಯಾಗತೊಡಗಿವೆ. ಅಕ್ಷರ ಕಲಿತ ಯುವಕರು ಹೊಸ ಸಂಬಂದ ಮತ್ತು ಅದರಿಂದ ಸಿಗುವ

ಸೌಲತ್ತುಗಳಿಗೆ ಹಾತೊರೆಯುತ್ತಾರೆ. ಹಿತ್ತಲ ಗಿಡ ಮದ್ದಲ್ಲವೆಂಬಂತೆ ಅಕ್ಕನ ಮಗಳನ್ನು ನಿರಾಕರಿಸುತ್ತಾರೆ. ಈ ಕಥೆಯಲ್ಲಿ ಚಂದ್ರಕಾಂತ ಅಕ್ಕನ ಮಗಳನ್ನು ಅನಿವಾರ್ಯ ಎಂಬಂತೆ ಅರೆ ಮನಸ್ಸಿನಿಂದಲೇ ಮದುವೆಯಾಗುತ್ತಾನೆ. ಬಡತನದಿಂದ ಓದುವುದು ಆಗದಿದ್ದರೂ ಈ ಮದುವೆಯೇ ಓದಿಗೆ ಅಡ್ಡಿಯಾಯಿತೆಂದು ಅಸಮಧಾನ ಪಡುತ್ತಾನೆ. ಸುಗಂಧಿ ಅವನ ಓದಿಗಾಗಿ ಸೀರೆ ನೂಲಿ ಹಣ ಸಂಪಾದಿಸಿ ಓದಿಸುತ್ತಾಳೆ. ಅವನಿಗೆ ನೌಕರಿ ಸಿಕ್ಕ ಕೂಡಲೇ ಸುಂಗಂಧಿಯನ್ನು ಮರೆತು ಬೇರೆ ಓದಿದ ಹುಡುಗಿಯನ್ನು ಮದುವೆಯಾಗುತ್ತಾನೆ. ಗಂಡ ವಿಶ್ವಾಸದ್ರೋಹಗೈದರೂ ಅವಳು ಏನೂ ಮಾಡುವಂತಿಲ್ಲ. ದುಡಿದಜೀವ ಸುಗಂಧಿ ದುಡಿದು ಬದುಕಲು ನಿಲ್ಲುತ್ತಾಳೆ. ಇಂಥ ಸಂಕಷ್ಟ ಸಂದರ್ಭದಲ್ಲಿ ಸುಗಂಧಿ ಸ್ವಾವಲಂಬಿಯಾಗಿದ್ದರಿಂದ ತಾತ್ಕಾಲಿಕವಾಗಿಯಾದರೂ ಒಂದು ಪರಿಹಾರ ಕಂಡುಕೊಂಡಳು. ಚಂದ್ರಕಾಂತನಂಥ ಮನಸ್ಸಿನವರು ಹಳೆಯ ಸಂಬಂಧವನ್ನು ಅದೂ ಮದುವೆಯಾದ ಮೇಲೆ ನಿರಾಕರಿಸುವುದು ಸ್ವಾರ್ಥಕ್ಕಾಗಿ. ಅದಕ್ಕಿಂತ ಮೇಲಾಗಿ 'ಆಧುನಿಕ' ಬದುಕನ್ನು ಬದುಕಬೇಕೆಂಬ ಭ್ರಮೆಯಿಂದ ಇಂಥ ಬಿಕ್ಕಟ್ಟುಗಳನ್ನು ಹುಟ್ಟುಹಾಕುತ್ತಾರೆ. ಚಂದ್ರಕಾಂತನಂಥ ಕಲಿತ ಯುವಕರಲ್ಲಿ ವಿದ್ಯ ಕಲಿಯುವುದು, ಉದ್ಯೋಗಸ್ಥರಾಗುವುದು, ಓದಿದ ಹುಡುಗಿಯರನ್ನು ಮದುವೆಯಾಗುವುದು ಎಂದರೆ 'ಆಧುನಿಕ'ವಾಗುವುದು ಎಂಬ ಕಲ್ಪನೆಯಿದೆ.

'ಗಾಂಧಿ ಗುಂಡು ಸಾವು ಇತ್ಯಾದಿ'(ಬಿ.ಟಿ.ಲಲಿತಾನಾಯಕ)ಕಥೆಯಲ್ಲಿ ಕಲಿತ ಲಮಾಣಿ ಯುವಕನೊಬ್ಬ ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗಿ, ತನ್ನ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳದೆ ಮೇಲ್ ಸಂಸ್ಕೃತಿ ಕಡೆ ಚಲಿಸ ತೊಡಗುತ್ತಾನೆ. ತೊಳಜಾ ತನ್ನ ಹೆಂಡತಿಯ ಜತೆ ಮಗನನ್ನು ಓದಿಸಲು ಹಗಲಿರಳು ದುಡಿದು ದಣಿದಿದ್ದ. ಅವನ ಓದು ತನ್ನ ಬಡನತವನ್ನು ಕಳೆಯಬಹುದೆಂದು ಹಿರಿಯಾಸೆ ಇಟ್ಟುಕೊಂಡಿದ್ದ. ಇತರ ಮಕ್ಕಳಿಗೆ ಅರೆಹೊಟ್ಟೆಮಾಡಿ ಹಿರಿಮಗನನ್ನು ಓದಿಸಿದ. ಮಗ ನೌಕರಿ ಹಿಡಿದು ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗಿ ತನ್ನ ಕುಟುಂಬವನ್ನೇ ಮರೆತ.ಅವನು ತನ್ನ ತಂದೆ ತಾಯಿಗಳಿಗೆ ತಾನು ಮದುವೆಯಾದದ್ದು ಬ್ರಾಹ್ಮಣ ಹುಡುಗಿಯನ್ನು, ಅವಳ ಸಂಸ್ಕೃತಿಗೂ ತಮ್ಮ ಸಂಸ್ಕೃತಿಗೂ ತುಂಬಾ ವ್ಯತ್ಯಾಸವಿದೆ, ತಮ್ಮ ಕೆಳ ಸಂಸ್ಕೃತಿಯ ಜತೆ ಅವಳು ಹೊಂದಿಕೊಳ್ಳುವುದು ಸಾಧ್ಯವಿಲ್ಲ. ಅದಕ್ಕಾಗಿ ತನ್ನ ತಂದೆ-ತಾಯಿಗಳನ್ನು ಕರೆದುಕೊಂಡು ಹೋಗಲು ಅಸಾಧ್ಯ. ಇದನ್ನು ಅರ್ಥಮಾಡಿಕೊಳ್ಳಬಲ್ಲಿರಿ ಎಂದು ಹೇಳಿ ಹೋಗುತ್ತಾನೆ. ಇದು ಕೆಳವರ್ಗದಲ್ಲಿ ಓದಿದ ಹುಡುಗರು ತಮ್ಮ ಜಾತಿ, ಸಂಸ್ಕೃತಿಯ ಬಗ್ಗೆ ತಪ್ಪು ಕಲ್ಪನೆಯಿಂದ ಇಂಥ ಬಿಕ್ಕಟ್ಟುಗಳನ್ನು ಸೃಷ್ಟಿಮಾಡುತ್ತಾರೆ. ಮೇಲ್ವರ್ಗದವರ ಸಂಸ್ಕೃತಿ 'ಶ್ರೇಷ್ಠ' ಎಂಬ ಕಲ್ಪನೆಯಿಂದ ಮತ್ತು ತಲತಲಾಂತರದಿಂದ 'ಕನಿಷ್ಠ'ವಾಗಿ ಬದುಕಿದ ಕೀಳರಿಮೆ ಬಳಲಿದ ಕೆಳವರ್ಗದವರು ಆರ್ಥಿಕವಾಗಿ ಸುಧಾರಿಸುತ್ತ ನಡೆದರೆ ಸಾಕು ಮೇಲ್ವರ್ಗದ ಸಂಸ್ಕೃತಿಯನ್ನು ಅನುಸರಿಸಲು ಪ್ರಯತ್ನಿಸುತ್ತಾರೆ. ತಮ್ಮ ಜಾತಿಗಿಂದ ಮೇಲ್ಜಾತಿಯವರನ್ನು ಮದುವೆಯಾಗುವುದು 'ಪ್ರತಿಷ್ಠೆ' ಎಂದು ಭಾವಿಸಿದಂತೆ ಕಾಣುತ್ತದೆ. ಬ್ರಾಹ್ಮಣ ಯುವತಿಯರು ತಮಗಿಂತ ಕೆಳವರ್ಗದ ಯುವಕರನ್ನು ಮದುವೆಯಾಗುವುದು ಬ್ರಾಹ್ಮಣ ಕುಟುಂಬಗಳ ಬಿಕ್ಕಟ್ಟನ್ನು ತೋರಿಸುತ್ತದೆ. ವರದಕ್ಷಿಣೆ ಕೊಡಲಾಗದೆ ಇಂಥ ದಾರಿಯನ್ನು ಬ್ರಾಹ್ಮಣ ಕುಟುಂಬದ ಯುವತಿಯರು ಹುಡಕಿಕೊಳ್ಳುತ್ತಾರೆ. ಇದು ಪುನ: ಕೆಳವರ್ಗದವರಿಗೇ ಹೊಡೆತ ಎಂದು ಕಾಣುತ್ತದೆ. ೧೨ನೆಯ ಶತಮಾನದಲ್ಲಿ ಶರಣರು ಮಾಡಿದ ಸಾಂಸ್ಕೃತಿಕ ಚಳುವಳಿಯಲ್ಲಿ ಇದಕ್ಕೆ ಉತ್ತರ ಸಿಗುತ್ತವೆ.

'ತಾಯಿ ಸಾಕೀಬಾಯಿ' (ಬಿ.ಟಿ.ಲಲಿತಾನಾಯಕ)ಕಥೆಯಲ್ಲಿ ಲಮಾಣಿಜಾತಿಯ ಸಾಕೀಬಾಯಿ ಚಿಕ್ಕವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ. ಒಂಟಿಯಾಗಿ ದುಡಿದು ಮಕ್ಕಳನ್ನು ಸಲಹುತ್ತಾಳೆ. ಒಬ್ಬ ಮಗನನ್ನು ಓದಿಸುತ್ತಾಳೆ. ಅವನು ಓದಿ ಅನ್ಯ ಜಾತಿ ಹುಡುಗಿಯನ್ನು ಮದುವೆಯಾಗುತ್ತಾನೆ. ಇನ್ನೊಬ್ಬ ತಾಯಿಯ ಜತೆಗಿದ್ದು ಅವನೂ ಮದುವೆಯಾಗಿ ಸಂಸಾರ ನಡೆಸುತ್ತಿರುತ್ತಾನೆ. ಸಾಕೀಬಾಯಿ ಮಕ್ಕಳ ವಿಷಯದಲ್ಲಿ ತನ್ನ ಕರ್ತವ್ಯವನ್ನು ಮಾಡಿರುತ್ತಾಳೆ. ವಯಸ್ಸಾಗಿರದ ಸಾಕೀಬಾಯಿ ಮುನಿಯ

ಎಂಬುವವನ ಸಂಬಂಧವನ್ನು ಹೊಂದಿರುತ್ತಾಳೆ. ಮದುವೆಯಾಗಲು ಯೋಚಿಸಿದಾಗ ಓದಿದ ಮಗನೇ ವಿರೋಧಿಸುತ್ತಾನೆ. ಆದರೆ ಓದಿದ ಮಗನ ಹೆಂಡತಿ ಅನ್ಯ ಜಾತಿಯವಳಾದರೂ ಸಾಕೀಬಾಯಿ ಬದುಕನ್ನು ಅರ್ಥಮಾಡಿಕೊಂಡು ಅವಳಿಗೆ ಮದುವೆಯಾಗಲು ಸಹಾಯ ಮಾಡಲು ನಿಲ್ಲುತ್ತಾಳೆ. ಆದರೆ ಇಬ್ಬರು ಮಕ್ಕಳು ತಾಯಿಯನ್ನು, ಅವಳ ಗಂಡನಾಗುವವನಿದ್ದ ಮುನಿಯನನ್ನು ಕೊಲ್ಲಿಸುತ್ತಾರೆ. ಒಂದು ಜಾತಿಗೆ ಅದರದೇ ಆದ ರೀತಿ-ನೀತಿಗಳು, ಸಂಸ್ಕೃತಿ ಇರುತ್ತವೆ. ಓದಿದ ಮಗ ಸಂಪ್ರದಾಯವನ್ನು ಮುರಿದು ಅನ್ಯ ಜಾತಿಯ ಹುಡುಗಿಯನ್ನು ಮದುವೆಯಾಗಿದ್ದ. ಆದರೆ ತಾಯಿ ವಿಧವೆಯಾಗಿ ಅನ್ಯ ಪುರುಷನನ್ನು ಪುನ: ಮದುವೆಯಾಗುವುದನ್ನು ವಿರೋಧಿಸಿದ. ಕಲಿತವನ ವಿರೋಧಾಭಾಸದಿಂದ ತಾಯಿ ಬದುಕು ಬರ್ಬರವಾಗುತ್ತದೆ. ಈ ವೈಚಾರಿಕ ದ್ವಂದ್ವವೇ ಅನೇಕ ಕುಟುಂಬಗಳಲ್ಲಿ ಬಿಕ್ಕಟ್ಟನ್ನು ಉಂಟುಮಾಡಿದೆ.

'ನೆಲ ಹಿಡಿಯುವ ಮುನ್ನ'(ಶಿವಕುಮಾರ ನಾಗವಾರ) ಎಲ್ಲ ಕುಟುಂಬಗಳಲ್ಲಿ ಉದ್ಭವವಾಗುವ ಮತ್ತು ಪ್ರತಿಯೊಬ್ಬ ಮನುಷ್ಯನು ಎದುರಿಸುವ ಬಿಕ್ಕಟ್ಟಿನ ಚಿತ್ರಣ ಈ ಕಥೆಯಲ್ಲಿದೆ. ಹಳ್ಳಿ,ನಗರ, ಆಧುನಿಕ, ಸಂಪ್ರದಾಯ ಇಂಥ ಯಾವುದೇ ಸ್ವರೂಪದ ಕುಟುಂಬವಿರಲಿ ಆ ಕುಟುಂಬಗಳ ವೃದ್ಧರು ತಮ್ಮ ಮುಪ್ಪಿನ ದಿನಗಳನ್ನು ಯಾರ ಆಶ್ರಯದಲ್ಲಿ ಕಳೆಯಬೇಕೆಂಬ ಪ್ರಶ್ನೆ ಇಲ್ಲಿದೆ. ಕುಟುಂಬಗಳಿಂದ ಕುಟುಂಬಗಳಿಗೆ ಈ ಸಮಸ್ಯೆ ಭಿನ್ನಭಿನ್ನವಾಗಿರುತ್ತದೆ. ಇಲ್ಲಿ ಸಾಮಾನ್ಯ ರೈತ ಕುಟುಂಬದ ಇಬ್ಬರು ಮಕ್ಕಳು ಆಸ್ತಿಯನ್ನು ಪಾಲುಮಾಡಿಕೊಂಡು ಬೇರೆಬೇರೆಯಾಗುತ್ತಾರೆ. ತಂದೆ-ತಾಯಿಗಳಿಗೆ ಸಮಸ್ಯೆ ಎದುರಾಗುವುದು ಇಲ್ಲಿಯೇ. ಯಾರ ಆಶ್ರಯದಲ್ಲಿದ್ದರೆ ಮುಪ್ಪಿನ ದಿನಗಳನ್ನು ನೆಮ್ಮದಿಯಿಂದ ಕಳೆಯಬಹುದು ಎಂಬ ಆಯ್ಕೆಯೇ ಸಮಸ್ಯೆಯಾಗುತ್ತದೆ. ಈ ಆಯ್ಕೆ ಅನಿವಾರ್ಯವಾಗಿರುತ್ತದೆ. ಇಬ್ಬರು ಮಕ್ಕಳಿರುವುದರಿಂದ ತಾಯಿ ಒಬ್ಬ ಮಗನಿಗೆ, ತಂದೆ ಒಬ್ಬ ಮಗನಿಗೆ ಸೇರ ಬೇಕಾಗುತ್ತದೆ. ಇಬ್ಬರು ಒಬ್ಬ ಮಗನ ಕಡೆಗೆ ಹೋಗುವಂತಿಲ್ಲ. ಯಾಕೆಂದರೆ ಇಬ್ಬರನ್ನು ಹೊರುವುದು ಒಬ್ಬನಿಗೆ ಭಾರವಾಗುತ್ತದೆ. ಇದು ಮಕ್ಕಳ ಸಮಸ್ಯೆಯಾದರೆ, ಬಹುದೀರ್ಘ ಕಾಲದಿಂದ ಕೂಡಿ ಬಾಳಿದ ಜೀವಗಳು ಮುಪ್ಪಿನಲ್ಲಿ ಬೇರೆ ಬೇರೆ ಇರಬೇಕಾದ ಪ್ರಸಂಗವೇ ವ್ಯಥೆಯದ್ದು. ಒಬ್ಬರಿಗೊಬ್ಬರ ಆಸರೆ ಮುಪ್ಪಿನಲ್ಲಿಯೇ ಹೆಚ್ಚಿರುತ್ತದೆ. ಈ ಕಥೆಯಲ್ಲಿ ವೃದ್ಧ ಗಂಡ-ಹೆಂಡತಿ ಇಡೀ ರಾತ್ರಿ ಯೋಚಿಸುತ್ತಲೇ ಇರುತ್ತಾರೆ. ಹಡೆದು ಬೆಳೆಸಿದ ಮಕ್ಕಳ ಗುಣ ಸ್ವಭಾವ ಬಲ್ಲ ಇವರಿಗೆ ಒಬ್ಬನಲ್ಲಿ ಒಂದಿದ್ದರೆ, ಇನ್ನೊಬ್ಬನಲ್ಲಿ ಇನ್ನೊಂದಿರುವುದಿಲ್ಲ. ಮಗ ಸರಿ ಇದ್ದರೆ ಹೆಂಡತಿ ಸರಿಯಿರುವುದಿಲ್ಲ. ಹೆಂಡತಿ ಸರಿಯಿದ್ದರೆ ಮಗ ಸರಿ ಇರುವುದಿಲ್ಲ. ಒಬ್ಬೊಬ್ಬರಲ್ಲಿ ಒಂದೊಂದು ಕೊರತೆಗಳು ಎದ್ದು ಕಾಣತೊಡಗಿದವು. ಮುದಕ-ಮುದುಕಿ ಯೋಚಿಸಿ, ಯೋಚಿಸಿ ಮಲಗಿದಲ್ಲಿಯೇ ಹಗಲು ರಾತ್ರಿಯ ವ್ಯತ್ಯಾಸವನ್ನು ಕಳೆದುಕೊಳ್ಳುತ್ತಾರೆ. ಅವರಿಬ್ಬರು ತಮ್ಮ ತಮ್ಮ ಕಾಳಜಿ ನೋಡಿಕೊಳ್ಳುವುದಿಲ್ಲ. ಒಬ್ಬರ ಕಾಳಜಿ ಒಬ್ಬರು ಮಾಡತೊಡಗಿರುತ್ತಾರೆ. ಇದರ ಸಂಕೇತವೆಂಬಂತೆ ಮಧ್ಯ ರಾತ್ರಿಯಾದರೆ ಒಮ್ಮೆ ಕಾಲುಮಡಿಯುವ ಅಭ್ಯಾಸವಿರಿಸಿಕೊಂಡಿದ್ದ ಹೆಂಡತಿಗೆ ಅದನ್ನು ಎಚ್ಚರಿಸುತ್ತಾನೆ. ಆದರೆ ಅದನ್ನು ತಾನೇ ಮರೆತು ಪಂಚೆಯಲ್ಲಿ ಉಚ್ಚೆ ಮಾಡಿರುತ್ತಾನೆ. ಮನುಷ್ಯನಿಗೆ ಮುಪ್ಪೇ ಒಂದು ಸಮಸ್ಯೆ. ಅದರ ಜತೆಗೆ ಆಶ್ರಯ ಇನ್ನೊಂದು ಸಮಸ್ಯೆ. ಸಾಮಾನ್ಯವಾಗಿ ಮಧ್ಯಮವರ್ಗ ರೈತ ಕುಟುಂಬಗಳಲ್ಲಿ ಕಾಣುವ ವಸ್ತು ಸ್ಥಿತಿಯ ಚಿತ್ರಣ ಈ ಕಥೆಯಲ್ಲಿದೆ.

ಇದೇ ಸಮಸ್ಯೆ **'ಸಂಗಾತಿ'** (ಗೀತಾ ನಾಗಭೂಷಣ) ಕಥೆಯಲ್ಲಿದೆ. ಉದ್ಯೋಗಸ್ಥ ಕುಟುಂಬಗಳಲ್ಲಿ ಈ ಸಮಸ್ಯೆ ಬೇರೆ ಸ್ವರೂಪದ್ದಾಗಿರುತ್ತದೆ. ಸತೀಶಚಂದ್ರ ಉನ್ನತ ಅಧಿಕಾರಿಯಾಗಿ ನಿವೃತ್ತಿ ಹೊಂದಿದವನು. ಹೆಂಡತಿ ತೀರಿಕೊಂಡಿದ್ದಳು. ಇರುವ ಒಬ್ಬ ಮಗ ಅಮೆರಿಕದಲ್ಲಿದ್ದರಿಂದ. ಒಂಟಿಯಾಗಿ ನಿವೃತ್ತ ಜೀವನ ಕಳೆಯುತ್ತಿದ್ದ. ಇದೂ ಒಂದು ಸಮಸ್ಯೆಯೇ. ಮಗನಲ್ಲಿಗೆ ಹೋಗಿ ಇರುವುದಕ್ಕೆ ಸತೀಶಚಂದ್ರನಿಗೆ ಆಗುವುದಿಲ್ಲ. ಆರ್ಥಿಕವಾಗಿ ಗಟ್ಟಿಯಾಗಿರುವ ಇಂಥವರು ಕೆಲಸದವರನ್ನಿಟ್ಟುಕೊಂಡು

ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ. ಮುಪ್ಪಿನಲ್ಲಿಯೂ ಆರ್ಥಿಕವಾಗಿ ಗಟ್ಟಿಯಾಗಿರುವುದು ಈ ಕಾರಣಕ್ಕಾಗಿ. ಈ ಕಥೆಯಲ್ಲಿ ಸುಚಿತ್ರಾ ಎನ್ನುವ ವೃದ್ಧೆಯೂ ಕೂಡ ಒಂಟಿಯಾಗಿದ್ದವಳು. ಗಂಡ ತೀರಿಹೋಗಿದ್ದ. ಇರುವ ಮಕ್ಕಳು ದೂರದ ಊರುಗಳಲ್ಲಿ ಉದ್ಯೋಗಸ್ಥರಾಗಿದ್ದರು. ಅವರಿಗೆ ಯಾಕೆ ತೊಂದರೆ ಕೊಡುವುದೆಂದು ಏಕಾಂಗಿಯಾಗಿದ್ದಳು. ಇವರಿಬ್ಬರು ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಸರಿಯಾಗಿಯೇ ನಿರ್ವಹಿಸಿ ನಿವೃತ್ತರಾಗಿದ್ದರು. ಆಕಸ್ಮಿಕವಾಗಿ ಒಬ್ಬರಿಗೊಬ್ಬರು ಪರಿಚಯವಾಗಿ ತಮ್ಮ ತಮ್ಮ ಬದುಕಿನ ಸ್ಥಿತಿಯನ್ನು ವಿನಿಮಯ ಮಾಡಿಕೊಂಡು, ಕೊನೆಗೆ ಜತೆಯಾಗಿರಲು ಒಪ್ಪಂದ ಮಾಡಿಕೊಳ್ಳುತ್ತಾರೆ. ಇದು ಆಧುನಿಕ ಕುಟುಂಬಗಳಲ್ಲಿ ನಡೆಯುವಂಥದ್ದು. ಆಧುನಿಕ ಮನಸ್ಸು ಇಂಥ ವ್ಯವಸ್ಥೆಯನ್ನು ಮಾಡಿಕೊಳ್ಳಬಲ್ಲದು. ಆದರೆ ಆರ್ಥಿಕ ಬಲವೂ ಕಾರಣವಾಗುತ್ತದೆ. ಆರ್ಥಿಕವಾಗಿ ದುರ್ಬಲವಿದ್ದ ನಿವೃತ್ತರು ಅನಿವಾರ್ಯವಾಗಿ ಮಕ್ಕಳನ್ನೇ ಆಶ್ರಯಿಸಿ, ಅನೇಕ ಸಮಸ್ಯೆಗಳಿಗೆ ಗುರಿಯಾಗುವುದು ಸಾಮಾಜಿಕ ಸನ್ನಿವೇಶದಲ್ಲಿ ಕಾಣುವ ವಾಸ್ತವ ಸಂಗತಿ.

'ಚಾಳೀಸು'(ಭಾಲಚಂದ್ರ ಜಯಶೆಟ್ಟಿ) ಕಥೆಯಲ್ಲಿ ಇದೇ ಸಮಸ್ಯೆಯ ಇನ್ನೊಂದು ಮುಖವಿದೆ. ನಿವೃತ್ತನಾಗುವ ಮುನ್ನ ಹೆಂಡತಿಯನ್ನು ಕಳೆದುಕೊಂಡ ಭಾವೂರಾಯ ಆಶ್ರಯಕ್ಕೆ ತಮ್ಮ ರಂಗನಾಥ ಮತ್ತು ಮಕ್ಕಳಿದ್ದರೂ ಹರಿಣಾಬಾಯಿಯನ್ನು ಮದುವೆಯಾಗುತ್ತಾನೆ. ಕುಟುಂಬದಲ್ಲಿ ಹರಿಣಾಬಾಯಿ ಹೊಂದಿಕೊಂಡಿದ್ದುದು ಮತ್ತು ತಮ್ಮ ಹಾಗೂ ಮಕ್ಕಳು ಹರಿಣಾಭಾಯಿಯನ್ನು ಪ್ರೀತಿಯಿಂದ ಹಚ್ಚಿಕೊಂಡದ್ದು ಕಂಡು ಭಾವುರಾಯ ಸಮಾಧಾನ ಪಡುತ್ತಾನೆ. ಮದುವೆಗೆ ಮುನ್ನ ತಮ್ಮ ರಂಗನಾಥ 'ಅಣ್ಣಾ ಎರಡು ಮಕ್ಕಳ ಮ್ಯಾಲ ನೀ ಹಿಂಗ ಇನ್ನೊಂದು ಮದವಿ ಮಾಡಿಕೊಳ್ಳಾದಂದ್ರ ಭಾಳ ಗೈರ ಅನಸ್ತದ' ಎಂದಿದ್ದ ಅಂಥ ತಮ್ಮನೇ ವೈನಿಯನ್ನು ಹಚ್ಚಿಕೊಂಡಿದ್ದು ಭಾವುರಾಯನಿಗೆ ಸಾರ್ಥಕ ಎನ್ನಿಸಿತ್ತು. ಬರುಬರುತ್ತ ಭಾವೂರಾಯನಿಗೆ ತನ್ನನ್ನು ಮತ್ತು ತಮ್ಮ ರಂಗನಾಥನನ್ನು ರಾಮ-ಲಕ್ಷ್ಮಣರಿದ್ದಂತೆ ಎಂದು ಜನ ಭಾವಿಸುತ್ತಾರೆ. ಹರಿಣಾಬಾಯಿ ಸೀತೆಯಾಗಿ ನಿಲ್ಲಬೇಕು ಎಂದು ಯೋಚಿಸುತ್ತಾನೆಯೇ ಹೊರತು ತಾನು ರಾಮನಾಗಿ ನಿಲ್ಲಲು ಪ್ರಯತ್ನಿಸಿದ್ದೇನೆಯೇ ಎಂದು ಯೋಚಿಸುವುದಿಲ್ಲ. ವಿಷಮ ದಾಂಪತ್ಯದಿಂದಾಗಿ ಭಾವೂರಾಯನ ಹರಿಣಾಬಾಯಿ ಸೀತೆಯಾಗಿ ನಿಲ್ಲುವುದಿಲ್ಲ. ರಂಗನಾಥ ಲಕ್ಷ್ಮಣನಾಗಿ ನಿಲ್ಲುವುದಿಲ್ಲ. ಇಂಥ ಬಿಕ್ಕಟ್ಟುಗಳು ಕುಟುಂಬಗಳಲ್ಲಿ ಸಂಭವಿಸುವುದು ಸಹಜ. ಇದನ್ನು ನಿಬಾಯಿಸುವುದು, ಇಂಥ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳು, ರಾದ್ಧಾಂತಗಳು ಕುಟುಂಬಗಳಿಂದ ಕುಟುಂಬಗಳಿಗೆ ಭಿನ್ನವಾಗಿರುತ್ತವೆ. ಕುಟುಂಬಗಳು ಮತ್ತು ಅದರ ಸದಸ್ಯರ ಅಂತಸ್ತು ಮತ್ತು ವ್ಯಕ್ತಿತ್ವವನ್ನು ಅವಲಂಬಿಸಿರುತ್ತವೆ. ಮನಕ್ಕೂ ಜನಕ್ಕೂ ಅಂಜುವ ಮಧ್ಯಮ ವರ್ಗದ ಸುಶಿಕ್ಷಿತ ಕುಟುಂಬಗಳಲ್ಲಿ ಇಂಥ ಘಟನೆ ಸಂಭವಿಸಿದರೆ ಅದನ್ನು ಹೊರಗೆ ಹಬ್ಬಲು ಬಿಡದೆ ಮನೆಯಲ್ಲೇ ಅಡಗಿಸಿಟ್ಟುಕೊಳ್ಳಬೇಕಾಗುತ್ತದೆ. ಭಾವೂರಾಯ ಮುಪ್ಪಿಗೆ ಕಾಲಿಡುವ ಮುನ್ನವೇ ಇದರಿಂದ ತಣ್ಣಗೆ ಕಣ್ಣುಮುಚ್ಚಿಕೊಂಡು ಬಿಡುತ್ತಾನೆ.

'ಗೋಮಯ ವಿವೇಕ'(ಜಯತೀರ್ಥ ರಾಜಪುರೋಹಿತ) ಈ ಕಥೆಯಲ್ಲಿ, ತಾತ್ವಿಕ ಸಂಘರ್ಷದಿಂದ ಉಂಟಾಗುವ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳುವ ಚಿತ್ರಣವಿದೆ. ಅತ್ಯಾಧುನಿಕ ಮನೆಯಲ್ಲಿ ಗೋದಾಬಾಯಿ ತನ್ನ ಸಂಪ್ರದಾಯವನ್ನು ಬಿಡದೆ 'ಮೊಸೇಕ್ ನೆಲ'ವನ್ನು ಸಗಣಿಯಿಂದ ಸಾರಿಸುತ್ತಾಳೆ. ಅದನ್ನು ಕಂಡ ಸೊಸೆ ಮಮತಾ 'ಮೊಸೇಕ್ ನೆಲ'ವನ್ನು ಯಾವುದರಿಂದ ತೊಳೆಯಬೇಕೊ ಅದರಿಂದ ತೊಳೆದು ತೋರಿಸುತ್ತಾಳೆ. ಆದರೆ ಗೋದಾಬಾಯಿ ತನ್ನ ಸಂಪ್ರದಾಯವನ್ನು ಬಿಡಬಾರದೆಂದು ವಾದಿಸುತ್ತಾಳೆ. ಸೊಸೆ ಅದನ್ನು ಪ್ರೀತಿಯಿಂದ ಸಹನೆಯಿಂದ ತಿದ್ದುತ್ತಾ ಅತ್ತೆಯನ್ನು ಬದಲಾದ ಕಾಲಕ್ಕೆ ಹೊಂದಿಸಲು ಪ್ರಯತ್ನಿಸುತ್ತಾಳೆ. ಆಧುನಿಕ ಮನೆಯಲ್ಲಿ ಸಗಣಿಯ ಅವಶ್ಯಕತೆ ಇಲ್ಲ ಎಂಬುದನ್ನು ಮಮತಾ ತೋರಿಸಿದಂತೆ ಆಧುನಿಕ ಬದುಕಿನಲ್ಲಿ ಸಂಪ್ರದಾಯಗಳು ಹಿನ್ನೆಲೆಗೆ ಸರಿಯಬೇಕು ಎಂಬುದನ್ನು ಹೇಳುತ್ತಾಳೆ. ಅದನ್ನು ಗಮನಿಸಿದ ಮಾವ ಸೊಸೆಯ ವಿವೇಕವನ್ನು ಮೆಚ್ಚಿಕೊಂಡು ಹೆಂಡತಿಗೇ ಹೊಂದಿಕೊಳ್ಳುವಂತೆ

ತಿಳಿಸುತ್ತಾನೆ. ಇದು ಬದುಕಿನ ಎಲ್ಲ ಹಂತಗಳಲ್ಲಿ ವಿಸ್ತರಿಸುತ್ತ ಹೋಗುತ್ತದೆ. ಹಳೆಯದನ್ನು ಯಾವ ಸಂದರ್ಭದಲ್ಲಿ ಕೈ ಬಿಡಬೇಕು, ಹೊಸದನ್ನು ಯಾವ ಬಗೆಯಲ್ಲಿ ಸ್ವೀಕರಿಸಬೇಕು ಎಂಬ ತಿಳುವಳಿಕೆಯನ್ನು ಸಂಪ್ರದಾಯಸ್ಥರಾದ ಅತ್ತೆ-ಮಾವನಿಗೆ ಹೇಳುತ್ತಾ ಸೊಸೆ ಮನ ಒಲಿಸುತ್ತಾಳೆ. ಅತ್ತೆ ಸುಲಭವಾಗಿ ಹಿಂದೆ ಸರಿಯುವುದಿಲ್ಲ. ಆದರೆ ಇಲ್ಲಿ ಸೋಲು ಗೆಲುವಿನ ಪ್ರಶ್ನೆಯಿಲ್ಲ. ಬದಲಾವಣೆಗೆ ಹೊಂದುವ ಪ್ರಶ್ನೆಯಿದೆ ಎಂಬುದು ಅತ್ತೆಗೆ ಮನವರಿಕೆಯಾಗುತ್ತದೆ. ಇಂಥದ್ದನ್ನು ವಾದ ಪ್ರತಿವಾದದಿಂದ ಬಗೆಹರಿಸಲು ಮಮತಾ ಪ್ರಯತ್ನಿಸುವುದಿಲ್ಲ. ಒಮ್ಮೊಮ್ಮೆ ಅತ್ತೆಗೆ ಜಗಳದಂತೆ ಕಾಣುವ ಚರ್ಚೆಯನ್ನು ಸೊಸೆ ಬುದ್ದಿವಂತಿಕೆಯಿಂದ ನಿಬಾಯಿಸುತ್ತಿದ್ದಳು. ನಂತರ ಅತ್ತೆ ಅದನ್ನು ಅರ್ಥಮಾಡಿಕೊಂಡು ಬದಲಾಗುತ್ತಿದ್ದಳು. ವಿವೇಕವುಳ್ಳ ಮಾವ ಅತ್ತೆ-ಸೊಸೆಯ ಹೊಂದಾಣಿಕೆಯನ್ನು ನೋಡುತ್ತಾ ತನ್ನಲ್ಲಿರುವ ಆದರೆ ಈಗ ಅವು ಉಪಯೋಗಕ್ಕೆ ಬರದ ನಂಬಿಕೆ, ಸಂಪ್ರದಾಯಗಳೆಂದು ಅರಿತು ಹಿನ್ನೆಲೆಗೆ ಸರಿಸಿಕೊಳ್ಳುತ್ತಾನೆ. ಸೊಸೆಯಲ್ಲಾಗಲಿ, ಮಗನಲ್ಲಾಗಲಿ ತಾವು ವಿದ್ಯಾವಂತರು, ಆಧುನಿಕರು ಎಂಬ ಭ್ರಮೆಯನ್ನು ತೋರಿಸಿಕೊಳ್ಳದೆ, ತಮ್ಮ ಕಾಲದ ಮೌಲ್ಯಗಳಿಗೆ ಹೊಂದುವಂತೆ ತಮ್ಮ ಹಿರಿಯರನ್ನು ಪ್ರೀತಿಯಿಂದ ಮನವೊಲಿಸತ್ತಾರೆ. ಸ್ವಲ್ಪ ಹಳಿ ತಪ್ಪಿದ್ದರೆ ಕುಟುಂಬದ ನೆಮ್ಮದಿ ಕೆಡುತ್ತಿತ್ತು. ಹಳೆಯ ಮತ್ತು ಹೊಸ ವಿಚಾರಗಳು, ಸಂಪ್ರದಾಯ ಮತ್ತು ಪರಂಪರೆಯ ನಡುವಿನ ತಾತ್ವಿಕ ಸಂಘರ್ಷವನ್ನು ಈ ಕಥೆ ಹೇಳುತ್ತದೆ.

ಗ್ರಾಮಾಂತರ ಪ್ರದೇಶದಲ್ಲಿ ಇರುವ ಮಧ್ಯಮ ವರ್ಗದ ಸುಶಿಕ್ಷಿತ ಕುಟುಂಬಗಳ ವ್ಯವಸ್ಥೆ ಮತ್ತು ಅದರ ಸಮಸ್ಯೆ ಸಾಮರಸ್ಯಗಳ ಸ್ವರೂಪವನ್ನು **'ಗುಡಿಯ ನೋಡಿರಣ್ಣ'** ಕಥೆಯಲ್ಲಿದೆ. ಸುರಕ್ಷಿತ ಕುಟುಂಬದ ಸ್ವರೂಪವನ್ನು **'ಆ ಮನೆಯ ಕಥೆ'** ತೋರಿಸುತ್ತದೆ. ನಗರಕ್ಕೆ ಸಂಬಂಧಿಸಿ **'ಚಾಳೀಸು'** ಕಥೆ,ಮಧ್ಯಮ ವರ್ಗದ ಕುಟುಂಬದಲ್ಲಿ ನಡೆಯುವ ಅಂಥ ಘಟನೆ ಮತ್ತು ಅದು ತಲುಪುವ ಸ್ಥಿತಿ ಯಾವ ಬಗೆಯದ್ದು ಎಂಬುದಿದ್ದರೆ 'ಮೌಲ್ಯಗಳು'ಕಥೆಯಲ್ಲಿ ಅದರ ಸ್ವರೂಪ ಬೇರೆಯದ್ದಾಗಿದೆ.ಕುಟುಂಬಗಳಲ್ಲಿ ಉದ್ಭವಿಸುವ ಸಮಸ್ಯೆಗಳು, ಬಿಕ್ಕಟ್ಟುಗಳು ಅವುಗಳ ಸ್ವರೂಪ ಆಯಾ ಕುಟುಂಬಗಳ ಅಂತಸ್ತಿಗೆ ತಕ್ಕಂತಿರುತ್ತವೆ ಎಂಬುದು ಸರಿ. ಹೈದರಾಬಾದ್ ಕರ್ನಾಟಕದ ಕಥೆಗಾರರು ಕೌಟುಂಬಿಕ ಕಥೆಗಳನ್ನು ಹೆಚ್ಚಾಗಿ ಬರೆದಿಲ್ಲ ಎಂಬುದು ಕೊರತೆಯೂ ಅಲ್ಲ. ದೌರ್ಬಲ್ಯವೂ ಅಲ್ಲ. ಇದು ಒಂದು ಪ್ರದೇಶದ ಸಾಮಾಜಿಕ ಬದುಕಿನ ಚರಿತ್ರೆಯನ್ನು ಅವಲಂಬಿಸಿದೆ. ಪ್ರಾರಂಭದಲ್ಲಿ ಹೇಳಿದ ಅನೇಕ ಸಮಸ್ಯೆಗಳು ಕಾರಣವಾಗಿರುವಂತೆ ಈ ಭಾಗದ ಕಥೆಗಾರರು ಬದುಕನ್ನು ಒಂದು ಮಿತಿಯಲ್ಲೇ ಇಡಿಯಾಗಿ ನೋಡಲು ಪ್ರಯತ್ನಿಸಿರುವುದು ಕಾರಣವಾಗಿದೆ. ದೊಡ್ಡ ದೊಡ್ಡ ಕಥೆಗಳನ್ನು ಬರೆದಿರುವುದು ಇದಕ್ಕೆ ಪೂರಕವಾಗಿದೆ. ಗ್ರಾಮಾಂತರ ಪ್ರದೇಶದ ಹಿನ್ನೆಲೆಯಿಂದ ಬಂದ ಕಥೆಗಾರರಿಗೆ ಒಂದು ಕುಟುಂಬ ಎಂದರೆ ಒಂದು ಹಳ್ಳಿ ಎಂಬ ಕಲ್ಪನೆ ಇರುತ್ತದೆ. ಹಳ್ಳಿ ಮತ್ತು ಹಳ್ಳಿಯ ಕುಟುಂಬದ ಸಂಬಂಧ ಹಾಸುಹೊಕ್ಕಾಗಿರುತ್ತದೆ. ನಗರಕ್ಕೆ ಸಂಬಂಧಿಸಿ ಈ ಮಾತು ನಿಜವಾಗುವುದಿಲ್ಲ.ಈ ಕಥೆಗಾರರು ತಮ್ಮ ಬಾಲ್ಯಕಾಲದಲ್ಲಿ ನೋಡಿದ,ಅನುಭವಿಸಿದ ಸಾಮಾಜಿಕ ಬದುಕನ್ನೇ ಕುರಿತು ಬರೆಯುತ್ತಿರುವುದು ಕಾರಣವಾಗಿದೆ. ಈ ಹೊತ್ತಿನ ತಲ್ಲಣಗಳು ಕಥೆಯಲ್ಲಿ ಮೂಡ ತೊಡಗಿಲ್ಲ. ಹೈದರಾಬಾದ್ ಕರ್ನಾಟಕದ ಮನಸ್ಸು ಈ ಹೊತ್ತಿನಲ್ಲು ಆಧುನಿಕವಾದದ್ದಲ್ಲ ಎನಿಸುತ್ತದೆ.

ಧಾರ್ಮಿಕ ನಂಬಿಕೆಗಳು ಮತ್ತು ಕೆಳವರ್ಗದವರು

ಸಂಪ್ರದಾಯ, ನಂಬಿಕೆ, ಪದ್ಧತಿಗಳು ಮನುಷ್ಯನನ್ನು ನಿಯಂತ್ರಿಸುತ್ತವೆ ನಿಜ.ಇವುಗಳ ಆಚರಣೆ ಸಂಸ್ಕೃತಿಕ ಭಾಗವಾಗಿದ್ದರೆ ಅವು ಮನುಷ್ಯನ, ಸಮಾಜದ ಒಳಿತಿಗೆ ಕಾರಣವಾಗಿರುತ್ತವೆ. ಯಾವುದೇ ಸಂಪ್ರದಾಯ, ನಂಬಿಕೆ, ಪದ್ಧತಿಗಳು ಸಾಮಾಜಿಕ ಅನಿಷ್ಟವಾಗಿ ಆಚರಣೆಯಲ್ಲಿ ವ್ಯಕ್ತವಾದರೆ ಅದು ಜೀವವಿರೋಧಿಯಾಗಿ ಸಮಾಜಕ್ಕೆ ಕಳಂಕವಾಗಿ ಪರಿಣಮಿಸುತ್ತದೆ. ಇವುಗಳನ್ನು ಮನುಷ್ಯನೇ ಸೃಷ್ಟಿಸಿಕೊಂಡಿದ್ದರಿಂದ ಇವುಗಳಲ್ಲಿ ಸ್ವಾರ್ಥವಿರುವುದು ಸಹಜ. ಅವುಗಳ ಬಳಕೆಯಲ್ಲಿ ಮನುಷ್ಯನ ಅಜ್ಞಾನ ಮತ್ತು ಮೂಢ

ಶ್ರದ್ಧೆ ವ್ಯಕ್ತವಾಗುತ್ತವೆ.ಸಮಾಜಕ್ಕೆ ಹಿತವಾಗುವಂತಿದ್ದರೆ ಅಂಥ ನಂಬಿಕೆಗಳ ಆಚರಣೆಯಲ್ಲಿ ಮನುಷ್ಯನ ವಿವೇಕ ಕಾಣುತ್ತದೆ. ಮಾರಕವಾಗುವಂತಿದ್ದರೆ ಅದು ಮನುಷ್ಯನ ಅಜ್ಞಾನವನ್ನು ತೋರಿಸುತ್ತದೆ. ಆದರೆ ಮನುಷ್ಯ ಇವುಗಳನ್ನು ಸ್ವಾರ್ಥಕ್ಕಾಗಿ ಬಳಸಿದರೆ ಸಾಂಸ್ಕೃತಿಕ ಅಪಚಾರವಾಗುತ್ತದೆ. ಉದಾಹರಣೆಗೆ ಹೆಣ್ಣುದೇವತೆಗೆ ಸೇವೆಯ ಹೆಸರಿನಲ್ಲಿ ಮುಗ್ಧ ಯುವತಿಯರನ್ನು 'ಬಸವಿ' ಬಿಡುವ ಪದ್ಧತಿ ಸಮಾಜದಲ್ಲಿ ರೂಢಿಯಲ್ಲಿದೆ. ಆದರೆ ಮೇಲ್ವರ್ಗದವರು ಇದನ್ನು ತಮ್ಮ ಅಧೀನಕ್ಕೆ ಒಳಪಡಿಸಿಕೊಂಡು ಮುಗ್ಧ ಯುವತಿಯರನ್ನು ಲೈಂಗಿಕವಾಗಿ ಶೋಷಿಸುತ್ತಲೇ ಬಂದಿದ್ದಾರೆ. ಇದಕ್ಕೆ ಬಲಿಯಾಗುವವರು ಕೆಳವರ್ಗದವರು. ಆರ್ಥಿಕವಾಗಿ, ಮಾನಸಿಕವಾಗಿ ದುರ್ಬಲವಿರುವವರು.

'ಎಲ್ಲಮ್ಮನ ಸೇವೆ' (ಭಾಲಚಂದ್ರ ಜಯಶೆಟ್ಟಿ) ಕಥೆಯಲ್ಲಿ, ಕೆಳವರ್ಗದ ಚೆನ್ನಿ ಎಲ್ಲಮ್ಮನಿಗೆ ಬೆತ್ತಲೆಸೇವೆ ಮಾಡಲು ನಿರಾಕರಿಸುತ್ತಾಳೆ. ಅವಳಿಗೆ ಈ ಪ್ರಜ್ಞೆ ಬಂದದ್ದು ಅಕ್ಷರ ಕಲಿಕೆಯಿಂದಲ್ಲ. ಅನುಭವ ಮತ್ತು ತಿಳುವಳಿಕೆಯಿಂದ ಯುವತಿಯರು ಎಲ್ಲಮ್ಮನಿಗೆ 'ಬೆತ್ತಲೆ ಸೇವೆ' ಮಾಡಿ ಆನಂತರ ಅವರು ಜೀವನ ಹೇಗೆ ಸಾಗಿಸುತ್ತಾರೆ ಎಂಬ ನಿದರ್ಶನಗಳು ಚೆನ್ನಿಗೆ ಅವಳ ಕೇರಿಯಲ್ಲೇ ಸಿಗುತ್ತವೆ. ಆದ್ದರಿಂದ ಅವಳು ಮದುವೆ ಮಾಡಿಕೊಂಡು ಸಂಸಾರಸ್ಥಳಾಗಿ ಬದುಕಲು ನಿರ್ಧರಿಸುತ್ತಾಳೆ. ಊರ ಗೌಡನಿಗೆ ಅದು ಸರಿ ಬರುವುದಿಲ್ಲ. ಚೆನ್ನಿಯನ್ನು ಎಲ್ಲಮ್ಮನಿಗೆ ಅರ್ಪಿಸುವ, ನಂತರ ಭೋಗಿಸುವ ಗೌಡನ ಹೂನ್ನಾರಕ್ಕೆ ಚೆನ್ನಿ ಬಲಿಯಾಗುತ್ತಾಳೆ. ಅವಳನ್ನು ಸಂಪ್ರದಾಯದ ಒತ್ತಡ ತಂದು ಬೆತ್ತಲೆ ಸೇವೆಗೆ ಒಪ್ಪಿಸಲು ಅವನ ತಂದೆ-ತಾಯಿಗಳು,ಪೂಜಾರಿ ಕೊನೆಗೆ ಗೌಡತಿಯಿಂದ ಒತ್ತಾಯ ಬರುತ್ತದೆ. ಅಸಹಾಯಕಳಾಗಿ ಚೆನ್ನಿ ಗೌಡನ ಕಾಮಕ್ಕೆ ಬಲಿಯಾಗುತ್ತಾಳೆ.ಆದರೆ ಚೆನ್ನಿ ಗೌಡತಿಗೆ 'ಗೌಡ್ತೇರ ನೀವ ಸ್ವಂತ ಯಾಕ ಬೆತ್ಲ ಸೇವ ಒಪ್ಪಿಸಬಾರ್ದ?' ಎಂದು ಪ್ರಶ್ನಿಸುತ್ತಾಳೆ. ಚೆನ್ನಿಗೆ ಬೆತ್ತಲೆ ಸೇವೆ ಅನಿಷ್ಟ ಸಂಪ್ರದಾಯವಾಗಿ ಪರಿಣಮಿಸಿದೆ. ಇದು ಆಳುವ ಶಕ್ತಿಗೆ ಭೋಗದ ಪ್ರಶ್ನೆ.

'ಸೋಭಾನ' ಎಂಬ ಇನ್ನೊಂದು ಕಥೆಯಲ್ಲಿ ಇದು ಮುಂದುವರಿದಿದೆ. ಕೆಳವರ್ಗದ ಯುವತಿಯರು ಮದುವೆಯಾಗಿ ಗಂಡನ ಹಾಸಿಗೆಗೆ ಹೋಗುವ ಮುನ್ನ ಗೌಡನ ಹಾಸಿಗೆಯಲ್ಲಿ ಒಂದು ರಾತ್ರಿ ಕಳೆದು, ಗೌಡ ಕೊಡುವ 'ಚಾಜದ ಸೀರಿ' ಉಟ್ಟುಕೊಳ್ಳಬೇಕು. ಇದು ಪದ್ಧತಿ. ಗೌಡನ ಅಧೀನದಲ್ಲಿರುವವರೆಲ್ಲ ಅದನ್ನು ಒಪ್ಪಿಕೊಂಡಿದ್ದರು ಎಂಬುದಕ್ಕಿಂತ ಅದನ್ನು ಸಹಿಸಿದ್ದರು. ದಾನವ್ವ ಗೌಡರ ಊರಿಗೆ ಸೊಸೆಯಾಗಿ ಬರುವ ಸುದ್ದಿ ಕೇಳಿದಾಗ ಗೌಡ, 'ನಿನ್ನ ಸೊಸಿ ಮೈನೆರ್ದ ವಿಚಾರ ಮತ್ತ ಯಾಕ ನೆಪ್ಪ ಮಾಡಲಿಲ್ಲೋ ಹರಾಮ!' ಎಂದು ಜೀತದಾಳಿಗೆ ಕೇಳುತ್ತಾನೆ. 'ಇಲ್ಲ ಧೋರಿ! ಧಣೇರಿಗೆ ಪುರಸೊತ್ತರೇ ಎಲ್ಲಾದ?' ಜೀತದಾಳು ಅಂದಾಗ, 'ನೀ ಪೈಲೇನೇ ಹೇಳಿದ್ರ ನಾವೇನ ಒಲ್ಲೆ ಅಂತಿದ್ವ್ಯಾ?' ಎನ್ನುತ್ತಾನೆ ಗೌಡ. ಇದನ್ನು ಗಮನಿಸಿದರೆ ಈ ಸಂಪ್ರದಾಯದ ಮೇಲೆ ಗೌಡನ ಹಿಡಿತ, ಅದನ್ನು ಒಪ್ಪಿಕೊಂಡಿದ್ದ ಜೀತದವರ ಸ್ಥಿತಿ ಅಸಹಾಯಕ ಅರಿವಿಗೆ ಬರುತ್ತದೆ. ಆದರೆ ಈ ಪದ್ಧತಿಗೆ ಬಲಿಯಾಗಬೇಕಾದದ್ದು ಮೊದಲು ಹೆಣ್ಣು. ಕುತೂಹಲದ ಸಂಗತಿ ಎಂದರೆ ಗೌಡ ಪುರುಷತ್ವವಿಲ್ಲದವನು ಎಂದು ಊರಿಗೆ ಗೊತ್ತಿರುತ್ತದೆ. ಗೌಡನ 'ಚಾಜದ ಸೀರಿ' ಉಟ್ಟುಕೊಂಡು ಬರುವುದು ನೆಪಮಾತ್ರಕ್ಕೆ ನಡೆದಿರುತ್ತದೆ. ಪುರುಷತ್ವ ಇದೆ ಎಂದು ತೋರಿಸುವುದು ಗೌಡನಿಗೆ ಪ್ರತಿಷ್ಠೆಯ ಪ್ರಶ್ನೆ. ಗೌಡ ನಿರ್ವೀರ್ಯನೆಂದು ಹೇಳುವ ಎದೆಗಾರಿಕೆ ಊರಲ್ಲಿ ಯಾರಿಗೂ ಇಲ್ಲ. ಗೌಡನಿಗೆ ಪುರುಷತ್ವ ಇಲ್ಲ ಎಂಬುದೇ ಕೆಳವರ್ಗದವರಿಗೆ ಸಮಾಧಾನದ ಸಂಗತಿಯಾಗಿದೆ. ಆದರೆ ದಾನವ್ವನ ಸಂಕಷ್ಟ ಬೇರೆಯದು. ದಾನವ್ವನ ತಾಯಿ ಗುಜ್ಜವ್ವ ತನ್ನ ಯೌವ್ವನದಲ್ಲಿ ಇದನ್ನು ಎದುರಿಸಿ ಅನೇಕ ಸಮಸ್ಯೆಗಳನ್ನು ಎದುರಿಸಿದ್ದಳು. ಮೊದಲ ರಾತ್ರಿ, ಗೌಡನ ಹಾಸಿಗೆಗೆ ಅಸಹಾಯಕಳಾಗಿ ಹೋದಳು. ಹೋಗುವುದು ತಪ್ಪುವುದಿಲ್ಲವೆಂದು, ಹೋಗುವಾಗ ಗಟ್ಟಿ ಮನಸ್ಸು ಮಾಡಿಕೊಂಡೇ ಹೋಗಿ ಗೌಡನನ್ನು ಮುಗಿಸಿ, ಇದನ್ನು ನಿಲ್ಲಿಸಬೇಕೆಂದೋ ಅದರಿಂದ ತಾನು ಬಿಡುಗಡೆಯಾಗಬೇಕೆಂದೋ ನಿರ್ಧರಿಸಿದ್ದಳು. ಆದರೆ ಅವಳ ಪ್ರಯತ್ನ ಗೌಡನನ್ನು ಗಾಸಿಗೊಳಿಸಿತೇ ಹೊರತು ಅಂತ್ಯಗೊಳಿಸಲಿಲ್ಲ. ಅದರಿಂದ ಗುಜ್ಜವ್ವ ಬದುಕಿನಲ್ಲಿ

ನೋವು ಅನುಭವಿಸಿದ್ದಳು. ಮಗಳಿಗೂ ಈಗ ಅದೇ ಗತಿ ಬಂದದ್ದು ಕೂಡ ಹಿಂದಿನದರ ಫಲವೇ ಆಗಿತ್ತು. ಮಗಳು ಈ ಸಂಪ್ರದಾಯವನ್ನು ನಿರಾಕರಿಸಿದಾಗ, ಅದನ್ನು ಬಹಳ ಹಿಂದೆಯೇ ನಿರಾಕರಿಸಿದ ತಾಯಿ ಈಗ ಮಗಳನ್ನು ಅದಕ್ಕೆ ದೂಡುತ್ತಾಳೆ. ಆಳುವ ಶಕ್ತಿಯ ಬಲ ಎಷ್ಟಿರಬಹುದು ಎಂದು ಇದರಿಂದ ಗೊತ್ತಾಗುತ್ತದೆ. ದಾನವ್ವನಿಗೆ. ಗೌಡನ ಹಾಸಿಗೆಗೆ ನೆಪಮಾತ್ರಕ್ಕೆ ಹೋಗುವುದು ಎಂಬುದೂ ಗೊತ್ತು. ಆದರೆ ಗೌಡನು ಕೊಡುವ 'ಚಾಜದ ಸೀರಿ' ಸ್ವೀಕರಿಸುವುದೇ ಅವಳ ಅಪಮಾನದ ಸಂಗತಿ. ಗೌಡನಿಗೆ 'ಚಾಜದ ಸೀರಿ' ಕೊಡುವುದು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಆದರೆ ದಾನವ್ವ ಸೋಲುತ್ತಾಳೆ. 'ಉಡ್ಯಾಗ ಕಳಂಕ ಕಟ್ಕೊಂಡೆ' ಹೊರ ಬೀಳುವ ಪ್ರಸಂಗ ಬರುತ್ತದೆ. ನಿರಾಕರಿಸಿದ್ದರೆ ಅವಳ ಕೇರಿಯವರೆಲ್ಲ ಅನ್ನದ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತಿತ್ತು.

ಭಾಲಚಂದ್ರ ಜಯಶೆಟ್ಟಿಯವರ ಇನ್ನೊಂದು ಕಥೆ **'ರಾಚಿ'** ಕುತೂಹಲಕರವಾಗಿದೆ. ದಲಿತರು ವರ್ಷದ ಕೆಲವು ವಿಶಿಷ್ಟ ದಿನಗಳಲ್ಲಿ 'ಉತ್ತಮ'ರಾಗುವ ಅವಕಾಶವನ್ನು ಪಡೆಯಬಹುದಿತ್ತು. ಅದಕ್ಕೆ ಅನೇಕ ವಿಧಿ ವಿಧಾನಗಳು ಅದರ ಸುತ್ತ ಇದ್ದವು. ಆದರೆ ಉತ್ತಮರಾಗಲು ವಿಧಿಸಿದ ನಿಯಮಗಳೆಲ್ಲ ದಲಿತ ಸಂಸ್ಕೃತಿಗೆ ವಿರೋಧಿಯಾಗಿದ್ದವು. ಇದರಿಂದ ದಲಿತರು ಈ ವಿಧಿವಿಧಾನಗಳನ್ನು ಅನುಸರಿಸುವುದು ಜೀವನ್ಮರಣದ ಪ್ರಶ್ನೆಯಾಗಿತ್ತು. ಆದರೆ 'ಉತ್ತಮ'ರಾಗಿ ಮೇಲ್ವರ್ಗದವರ ಎದುರಿನಲ್ಲಿ ನಿಲ್ಲಬೇಕೆಂಬ, ಬಾಳಬೇಕೆಂಬ ಛಲ ಕಾಡುತ್ತಿತ್ತು. 'ಕೀಳು' ತನದಿಂದ ಮುಕ್ತರಾಗಬೇಕೆಂಬ ಬಯಕೆ ದಲಿತರಲ್ಲಿತ್ತು. ಅನೇಕ ದಲಿತರು 'ಉತ್ತಮ'ರಾಗುವ ವ್ರತ ಹಿಡಿದು, ಅದಕ್ಕೆ ವಿಧಿಸಿದ ನಿಯಮಗಳನ್ನು ಪಾಲಿಸಲಾಗದೆ ಅರ್ಧಕ್ಕೆ ನಿಲ್ಲಿಸಿಬಿಡುತ್ತಿದ್ದರು. ಕೆಲವೇ ದಿನಗಳ ಕಾಲ 'ಉತ್ತಮ'ರಾಗುವ ಅವಕಾಶಕ್ಕಾಗಿ ಹತ್ತು ದಿನ ಬರಿ ಉಳ್ಳವರ ಮನೆಯಿಂದ ಬರುವ ಹಾಲು-ಹಣ್ಣು ಪ್ರಸಾದದಂತೆ ಸೇವಿಸಬೇಕು. ಮೂರು ಹೊತ್ತು ಸ್ನಾನ, ಸಂಸಾರದಿಂದ ದೂರವಿರಬೇಕು. ಇದನ್ನು ಪಾಲಿಸಲು ಛಲದಿಂದ ನಿಂತವರೆಲ್ಲ ಸೋಲುತ್ತಿದ್ದರು. ಇದರಲ್ಲಿ ಊರ ಗೌಡನ ಕೈವಾಡವಿರುತ್ತಿತ್ತು. ಹೆಂಡ, ಖಂಡದ ಆಮಿಷವನ್ನು ತೋರಿಸಿ ದಲಿತರು ಹಿಡಿದ ವ್ರತವನ್ನು ವಿಫಲಗೊಳಿಸುತ್ತಿದ್ದ. ದಲಿತರು 'ಉತ್ತಮ'ರಾಗಿ ತನ್ನ ಸಮ ನಿಲ್ಲುವಂತಾಗಬಾರದೆಂದೇ ಉಳ್ಳವರ ಉದ್ದೇಶ. ಆದರೆ ಮಾದರ ಮಾದ ಅದನ್ನು ಸಾಧಿಸಿ ತೋರಿಸುವ ಹಿಂದಿನ ದಿನವೇ ಗೌಡರ ಕೈವಾಡಕ್ಕೆ ಬಲಿಯಾಗಿ ಸಾಯುತ್ತಾನೆ. ನಿಯಮ ಪಾಲನೆಯಲ್ಲಿ ಏನೋ ಕ್ರಮ ತಪ್ಪಿದ ಕಾರಣಕ್ಕೆ ಸತ್ತನೆಂದು ಜನ ಮಾತಾಡುವಂತೆ ಮಾಡುತ್ತಾನೆ. ನಿಯಮ ಪಾಲನೆಯಲ್ಲಿ ಸ್ವಲ್ಪ ತಪ್ಪಿದರೆ ಸಾವಿಗೆ ಗುರಿಯಾಗುತ್ತಾರೆ ಎಂಬ ಭಯವನ್ನು ದಲಿತರಿಗೆ ಮೇಲ್ವರ್ಗದವರಿಗೆ ತುಂಬಿರುತ್ತಾರೆ. ಅವಕಾಶ ನೀಡುವುದು, ಅದನ್ನು ತಲುಪದಂತೆ ನೋಡಿಕೊಳ್ಳುವುದು ಎರಡನ್ನೂ 'ಉಳ್ಳವರು' ಮಾಡಿರುತ್ತಾರೆ.

ಭಾಲಚಂದ್ರ ಜಯಶೆಟ್ಟಿಯವರ ಈ ಮೂರು ಕಥೆಗಳಲ್ಲಿ ಸಾಮಾಜಿಕ ಸಂಧರ್ಭದಲ್ಲಿ ನಡೆಯುವ ಸಂಗತಿಗಳನ್ನು ಒಳಗೊಂಡಿವೆ. ಈ ಸಂಪ್ರದಾಯಗಳು ಉಳ್ಳವರಿಗೆ ಪೂರಕವಾಗಿ, ದಲಿತರಿಗೆ ಮಾರಕವಾಗಿ ಪರಿಣಮಿಸಿದೆ. ಆರ್ಥಿಕವಾಗಿ, ದುರ್ಬಲರಾಗಿರುವ ದಲಿತರಿಗೆ ಇದರಿಂದ ಬಿಡುಗಡೆಯಾಗುವ ಸಾಧ್ಯತೆಗಳಿಲ್ಲ ಎನಿಸುತ್ತದೆ. ಈ 'ಸಂಪ್ರದಾಯಗಳನ್ನು ದಲಿತರು ಅಸಹಾಯಕರಾಗಿ ಒಪ್ಪಿಕೊಂಡಿದ್ದಾರೆಯೇ ಹೊರತು ಮನಃಪೂರ್ವಕವಾಗಿ ಅಲ್ಲ ಎಂಬುದು ನಿಜ. ಬಲವಂತವಾಗಿ ಒಪ್ಪಿಸುವ ಸಂಧರ್ಭಗಳೇ ಹೆಚ್ಚಿವೆ. ತಾತ್ವಿಕ ಸಂಘರ್ಷ ಸುಪ್ತವಾಗಿ ಇದ್ದೇ ಇದೆ. ಹರಕೆ, ಮುಡುಪು, ಬಲಿ ಇವು ದುರ್ಬಲರಿಗೆ ಅಂಟಿದ ರೋಗಗಳಂತಿದೆ. ಬೌದ್ಧಿಕತೆಯ ಕೊರತೆಯೇ ಇದಕ್ಕೆ ಕಾರಣವೆಂದು ಕಾಣುತ್ತದೆ.

'ಕೋಡುಗಲ್ಲಿನ ಕೂಗು' (ಭಾಲಚಂದ್ರಜಯಶೆಟ್ಟಿ) ಕಥೆಯಲ್ಲಿ ಕೂಡ ಶಿವಗಂಗೆ ಬೆಟ್ಟಕ್ಕೆ ಹರಕೆ ಸಲ್ಲಿಸಲು ಬೇಡಿಕೊಂಡು, ಅದನ್ನು ಪೂರೈಸಲಾಗದೇ ಎಷ್ಟೋ ವರ್ಷ ಕಳೆದು ಕೊನೆಗೆ ಅದರಿಂದ ಮಾನಸಿಕವಾಗಿ ಮುಕ್ತರಾಗಲು ಬಡ ಕುಟುಂಬವೊಂದು ಬೆಟ್ಟ ಹತ್ತಲು ಹೋಗಿ ದುರಂತ ಕಾಣುತ್ತದೆ. **'ಸುಂದರಿ ಎಲ್ಲಿ'** (ಭಾಲಚಂದ್ರಜಯಶೆಟ್ಟಿ) ಕಥೆಯಲ್ಲಿ, ಜೀವಂತ ಮಗುವನ್ನು

ಬಲಿಕೊಟ್ಟರೆ ಮಾತ್ರ ಬಂಜೆಯರಿಗೂ ಮಕ್ಕಳಾಗುತ್ತವೆ ಎಂಬ ನಂಬಿಕೆಯನ್ನು ನಂಬಿದ ಬಂಜೆ ಹೆಂಗಸೊಬ್ಬಳು ಅನ್ಯರ ಮಗುವನ್ನು ಕದ್ದು ಒಯ್ದು ಬಲಿಕೊಡುತ್ತಾಳೆ. ಬಂಜೆಗೆ ಮಕ್ಕಳು ಬೇಕೆಂಬ ಆಸೆಯಿಂದ ಇಂಥ ನಂಬಿಕೆಗಳಿಂದ ಅಂಧಳಾಗಿ ಅನ್ಯರ ಮಗುವನ್ನು ಬಲಿಕೊಡುತ್ತಾಳೆ. ಅವಳೂ ಬಲಿಯಾಗುತ್ತಾಳೆ. ಇಂಥ ಪ್ರಸಂಗಗಳಿಂದ ಸಾಮಾಜಿಕ ಬದುಕಿನ ನೆಮ್ಮದಿಯೂ ಕೆಡುತ್ತದೆ. ಬೀದರ ಜಿಲ್ಲಾ ಪ್ರದೇಶಗಳಲ್ಲಿ ಇಂಥ ನಂಬಿಕೆಗಳು ಅದರಿಂದ ನಡೆಯುವ ಬರ್ಬರ ಕೃತ್ಯಗಳು ಜೀವಂತವಾಗಿರುವುದು ಕಂಡು ಬರುತ್ತಿದೆ. ದೆವ್ವ, ಭಾನಾಮತಿ, ಬಲಿ ಇಂಥ ವಾಮ ಕೃತ್ಯಗಳು ಅಜ್ಞಾನ ಮತ್ತು ಅಬೌದ್ಧಿಕತೆಯ ನಿದರ್ಶನಗಳಂತಿದೆ.

ಇಂಥ ಘಟನೆಗಳು ಮನುಷ್ಯನ ದೌರ್ಬಲ್ಯ, ಅಜ್ಞಾನ ಮತ್ತು ಅಬೌದ್ಧಿಕತೆಯಿಂದ ಸಂಭವಿಸುತ್ತವೆ ಎಂಬುದು ನಿಜ. ಇವುಗಳನ್ನು ವ್ಯವಸ್ಥಿತವಾಗಿ ಹುಟ್ಟು ಹಾಕಿ ಸಾಮಾಜಿಕ ಬದುಕನ್ನು ಹದಗೆಡಿಸುವ ವೇಷಧಾರಿಗಳು ತಮ್ಮ ಸ್ವಾರ್ಥಕ್ಕಾಗಿ ಮನುಷ್ಯನ ದೌರ್ಬಲ್ಯದ ಜತೆ ಆಟವಾಡುತ್ತಾರೆ. ಇದರ ಪರಿಣಾಮಗಳು ಒಮ್ಮೊಮ್ಮೆ ಬರೀ ವ್ಯಕ್ತಿಗಳ ಮೇಲಾಗುವುದಿಲ್ಲ. ಸಮಾಜದ ಮೇಲಾಗುತ್ತದೆ. ಇದರ ವ್ಯಾಪ್ತಿ ವ್ಯಕ್ತಿಯಿಂದ ಹಿಡಿದು ಸಾಮೂಹಿಕವಾಗುತ್ತದೆ. 'ನಿಧಿ'(ಕೋರಗಲ್ ವಿರುಪಾಕ್ಷಪ್ಪ) ಕಥೆಯಲ್ಲಿ, ಅಂಜನಪ್ಪನೆಂಬ ವ್ಯಕ್ತಿ ನಿಧಿ ಇರುವುದನ್ನು ತೋರಿಸುತ್ತೇನೆಂದು ಲಚುಮವ್ವನ ಮನೆಯಲ್ಲಿ ನಂಬಿಕೆ ಹುಟ್ಟುವಂತೆ ಭಯಾನಕ ಪೂಜೆ ಮಾಡುವ ನಟನೆ ಮಾಡಿ, ನಿಧಿ ಇರುವುದನ್ನು ತೋರಿಸಿದಂತೆ ಮಾಡಿ ಅವಳನ್ನು ಮತ್ತು ಊರ ಜನರನ್ನು ಮೋಸಗೊಳಿಸಿ, ದುಡ್ಡು ಮಾಡಿಕೊಂಡು ಮರೆಯಾಗುತ್ತಾನೆ. ಹಣ ಸಿಗುತ್ತದೆ ಎಂದರೆ ಸಾಕು ಎಂಥ ವಿವೇಕದ ಎಚ್ಚರವಿದ್ದರೂ ಮನುಷ್ಯ ದುರ್ಬಲನಾಗಿ ಸೋಲುತ್ತಾನೆ. ಪರಿಣಾಮ ಲಚುಮವ್ವನಿಗೆ ಮಾತ್ರ ಸೀಮಿತವಾಗಲಿಲ್ಲ. ಹಣದ ಮೇಲಿನ ಮೋಹವೇ ಅಂತಹದ್ದು.

ಸೂಗಯ್ಯ ಹಿರೇಮಠರು ಇಂಥ ಕಥೆಗಳನ್ನು ಸಾಲುಗಟ್ಟಿ ಬರೆದಿದ್ದಾರೆ. 'ರೋಗ', 'ತಂತ್ರ', 'ದೀಪಾ','ಹುಳಗಳು' ಮತ್ತು 'ಭಾನಾಮತಿ' ಎಂಬ ಕಥೆಗಳ ವಸ್ತು ಇದೇ ಆಗಿದೆ. ಧರ್ಮದ ಹೆಸರಿನಲ್ಲಿ ನಡೆಯುವಂತೆ ಕಾಣುವ ಧಾರ್ಮಿಕ ಕೃತ್ಯಗಳಿಗೆ ವೇಷಧಾರಿ ಸಮಯಸಾಧಕರೆ ಕಾರಣರು. 'ಹುಳಗಳು' ಕಥೆಯಲ್ಲಿ ತೊಗರಿ ಬೆಳೆಗಳಿಗೆ ಹುಳುಗಳು ಬೀಳುತ್ತವೆ. ಪ್ರಕೃತಿಯಲ್ಲಿ ಇದು ಸಹಜವಾಗಿ ಸಂಭವಿಸುತ್ತವೆ. ರೈತರು ಕ್ರಿಮಿನಾಶಕಗಳನ್ನು ಬಳಸಿದರೂ ಹುಳುಗಳನ್ನು ನಿಯಂತ್ರಿಸಲಾಗುವುದಿಲ್ಲ. ಇಂಥ ಸಮಯದಲ್ಲಿ ರೈತರು ಭಯಗ್ರಸ್ತರಾಗುವುದು, ಅಸಹಾಯಕರಾಗುವುದು ಸಹಜವೇ. ಭಯಗ್ರಸ್ತ ಜನರ ದೌರ್ಬಲವನ್ನು ಕಂಡ ಸ್ವಾಮಿಯೊಬ್ಬ ತನ್ನ ಸ್ವಾರ್ಥಕ್ಕಾಗಿ ಈ ಸಂದರ್ಭವನ್ನೇ ಬಳಸಿಕೊಳ್ಳುತ್ತಾನೆ. ಹುಳಗಳ ನಿಯಂತ್ರಣಕ್ಕೆ ಮಂತ್ರಿಸಿದ ನೀರನ್ನು ಕೊಡಲು ಪ್ರಾರಂಭಿಸುತ್ತಾನೆ. ಜನ ನಂಬಿ ಔಷಧಗಳನ್ನು ಬಿಟ್ಟು ಮಂತ್ರಿಸಿದ ನೀರನ್ನು ಉಪಯೋಗಿಸುತ್ತಾರೆ. ಇದು ಸಾರ್ವತ್ರಿಕವಾಗಿ ರೋಗದಂತೆ ಹಬ್ಬುತ್ತದೆ. ಆದರೆ ರೈತರ ಬೆಳೆ ಹುಳಗಳಿಂದ ನಾಶವಾಗುತ್ತದೆ. ತನ್ನ ಹಿತಕ್ಕಾಗಿ ಸ್ವಾಮಿ ಇಡೀ ರೈತರ ತೊಗರಿ ಬೆಳೆಯ ನಾಶಕ್ಕೆ ಕಾರಣನಾಗುತ್ತಾನೆ. ಸಾಮಾಜಿಕ ಸ್ವಾಸ್ಥ್ಯವೇ ನಾಶವಾಗುತ್ತದೆ. ನಂಬಿಕೆಗಳ ದುಷ್ಪರಿಣಾಮಗಳು ಕೇವಲ ವ್ಯಕ್ತಿಗತವಾಗಿರುವುದಿಲ್ಲ. ಸಂಗಯ್ಯ ಹಿರೇಮಠರ ಉಳಿದ ಕಥೆಗಳು ಇಂಥದ್ದನ್ನೇ ಕಾಣಿಸಿವೆ.

ಭಾಲಚಂದ್ರ ಜಯಶೆಟ್ಟಿ ಅವರ ಕಥೆಗಳಲ್ಲಿ ಬಲಿಷ್ಠ ಜಮೀನ್ದಾರರು ತಮ್ಮ ಆರ್ಥಿಕ ಬಲದಿಂದ ಕೆಳವರ್ಗದವರನ್ನು ಎಲ್ಲಾ ರೀತಿಯಿಂದ ದಮನಕ್ಕೆ ಗುರಿ ಮಾಡುತ್ತಾರೆ. ಇದಕ್ಕಾಗಿ ಧರ್ಮ-ದೇವರ ಹೆಸರಿನಲ್ಲಿ ಮೂಢನಂಬಿಕೆ, ಸಂಪ್ರದಾಯ, ಪದ್ಧತಿಗಳನ್ನು ಬಳಸಿಕೊಳ್ಳುತ್ತಾರೆ. ಪ್ರಧಾನವಾಗಿ ಹೆಂಗಸರನ್ನು ಲೈಂಗಿಕವಾಗಿ ಬಳಸುತ್ತಾರೆ. ಫ್ಯೂಡಲ್ ವ್ಯವಸ್ಥೆಯ ಕೃತ್ಯಗಳಿಗೆ ಹೆಂಗಸರು ಅಂತಿಮವಾಗಿ ಬಲಿಯಾದರೂ ವೈಯಕ್ತಿಕ ನೆಲೆಯಲ್ಲಿ ಮೊದಲು ಪ್ರತಿರೋಧವನ್ನು ಒಡ್ಡಿ ಶಕ್ತಿಮೀರಿ ಹೋರಾಡಿ ಪಾರಾಗಲು ಪ್ರಯತ್ನಿಸುತ್ತಾರೆ. ಬಲಿಷ್ಠರ ಕುತಂತ್ರಕ್ಕೆ ಒಳಗಾಗಿ ದಮನಕ್ಕೀಡಾಗುತ್ತಾರೆ. ಸೂಗಯ್ಯ ಹೀರೇಮಠರ ಕಥೆಗಳಲ್ಲಿ ಈ ಬಗೆಯ ಶೋಷಣೆ ಇಲ್ಲ. ಆದರೆ ಪುರೋಹಿತಶಾಹಿ ವ್ಯವಸ್ಥೆ ಧರ್ಮದ ನೆರಳಿನಲ್ಲಿಯೇ ಸಮಾಜದಲ್ಲಿ ಮೂಢನಂಬಿಕೆಗಳನ್ನು

ಬೇರು ಬಿಡುವಂತೆ ಮಾಡಿರುತ್ತದೆ. ಇದಕ್ಕೆ ಈ ಪ್ರದೇಶದ ಜನ ಸಾಮಾನ್ಯರಿಗೆ ಇನ್ನು ಕನಿಷ್ಟ ಮಟ್ಟದ ಶಿಕ್ಷಣ, ಆರೋಗ್ಯ, ವೈಚಾರಿಕತೆ, ನಾಗರಿಕ ಸೌಲಭ್ಯಗಳು ಇಲ್ಲದಿರುವುದೇ ಮುಖ್ಯ ಕಾರಣವಾಗಿದೆ.

ತಾಯಿ ಮತ್ತು ಮಗುವಿನ ಸಮಸ್ಯೆ

ಈ ಭಾಗದ ಕಥೆಗಳಲ್ಲಿ ಕೆಳವರ್ಗದ ದಲಿತ ಮಹಿಳೆಯರಿಗೆ ಅನೇಕ ಸಮಸ್ಯೆಗಳಿರುವುದು ಸರಿಯಷ್ಟೆ. ಗಂಡಸರಿಗಿಂತ ಇಮ್ಮಡಿ ದುಡಿತ ಮತ್ತು ಸಂಸಾರದ ಜವಾಬ್ದಾರಿ ಪ್ರಧಾನವಾಗಿ ಕಾಣುತ್ತದೆ. ಹೊಟ್ಟೆಗಾಗಿ ಹಿಟ್ಟು, ನೀರು, ಬೆಂಕಿಯನ್ನು ಸಂಪಾದಿಸಿಕೊಂಡು ಅಡಿಗೆ ಮನೆಯನ್ನು ಮತ್ತು ಹಡೆದ ಮಕ್ಕಳನ್ನು ನೋಡಿಕೊಳ್ಳಬೇಕು. ಗಂಡನ ದುಡಿತ ಕಮ್ಮಿ. ಅವನ ಹೊಟ್ಟೆಯನ್ನೂ ತುಂಬಿಸಿ, ಬೀಡಿಗೂ ಹೆಂಡಕ್ಕೂ ದುಡ್ಡು ಕೊಡಬೇಕು. ಆದರೂ ಅವಳಿಗೆ ಅವನಿಂದ ಕಿರುಕುಳ ತಪ್ಪಿದ್ದಲ್ಲ. ಇನ್ನೊಂದು ಕಡೆ ದುಡಿಸಿಕೊಳ್ಳುವ ಒಡೆಯನ ಅಧೀನದಲ್ಲೂ ಅದು ತಪ್ಪಿದ್ದಲ್ಲ. ಗಂಡನಿಗೂ ಸುಖ ನೀಡಬೇಕು, ಒಡೆಯ ಬೇಡಿದರೂ ನೀಡಬೇಕು. ಇಷ್ಟಾಗಿಯೂ ಅವಳಿಗೆ ಯಾವುದಕ್ಕೂ ಸ್ವಾತಂತ್ರ್ಯವಿಲ್ಲ. ಮಹಿಳೆಗೆ ಕೆಲವು ಸಂದರ್ಭಗಳಲ್ಲಿ ತಾನು ಹೆತ್ತ ಮಗುವಿನಿಂದಲೇ ಗಂಭೀರ ಬಿಕ್ಕಟ್ಟು ಎದುರಿಸಿರುವುದು ಕಾಣುತ್ತದೆ. ಇದಕ್ಕೆ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳೂ ಕಾರಣವಾಗಿವೆ.

'ಉಡುಕಿ' (ಭಾಲಚಂದ್ರ ಜಯಶೆಟ್ಟಿ) ಕಥೆಯಲ್ಲಿ, ಕೂಸುಳ್ಳ ಶಿವಮ್ಮ ಗಂಡನನ್ನು ಕಳೆದುಕೊಂಡ ವಿಧವೆ. ಕೆಳವರ್ಗದಲ್ಲಿ ಹೆಂಗಸು ವಿಧವೆಯಾದರೆ ಇನ್ನೊಂದು ಮದುವೆಯಾಗುವ ಅವಕಾಶವಿರುತ್ತದೆ. ಅದಕ್ಕೆ 'ಉಡುಕಿ' ಎಂದು ಕರೆಯಲಾಗುತ್ತದೆ. ಗಂಡನನ್ನು ಕಳೆದುಕೊಂಡ ಶಿವಮ್ಮ ಉಡುಕಿ ಮಾಡಿಕೊಳ್ಳಲು ಒಪ್ಪುತ್ತಾಳೆ. ಮರುಮದುವೆ ಎಂದರೆ ಅದು ಅವಳಿಗೆ ಪುನರ್ಜನ್ಮವೇ ಸರಿ. ಆದರೆ ಅವಳನ್ನು ಉಡುಕಿ ಮಾಡಿಕೊಳ್ಳುವ ಗಂಡಸು, ಅವಳ ಜತೆಗಿರುವ ಮಗುವನ್ನು ಒಪ್ಪದೆ ನಿರಾಕರಿಸುತ್ತಾನೆ. ಅವಳಿಗೆ ಅದು ಜೀವನ್ಮರಣದ ಪ್ರಶ್ನೆಯಾಗುತ್ತದೆ. ಮಗುವಿನ ಮೇಲಿನ ಮಮತೆ ಒಂದು ಕಡೆ. ಪುನರ್‌ಜನ್ಮದಂತೆ ಕಾಣುವ ಮರುಮದುವೆ ಇನ್ನೊಂದು ಕಡೆ. ಅವಳ ಸಂಕಟ ಅವಳಿಗೆ ಗೊತ್ತು. ಊರ ಪಂಚಾಯ್ತಿ ಮಗು ಚಿಕ್ಕದಿದ್ದರಿಂದ ತಾಯಿಯ ಜತೆಗಿರಬೇಕು. ಅದನ್ನು ಉಡುಕಿ ಮಾಡಿಕೊಳ್ಳುವ ಗಂಡಸು ಒಪ್ಪಬೇಕು ಎಂದು ನಿರ್ಣಯಿಸಿದರೂ ಅವನು ಒಪ್ಪುವುದಿಲ್ಲ. ಅವಳು ಒಂಟಿಯಾಗಿ ತನ್ನ ದೀರ್ಘಾವಧಿ ಆಯಷ್ಯ ಕಳೆಯಲಿಚ್ಛಿಸದೆ ಮಗುವನ್ನು ಸಂಬಂಧಿಕರ ಕೈಗೆ ಒಪ್ಪಿಸಲು ಯೋಚಿಸುತ್ತಾಳೆ. ಪರಿಸ್ಥಿತಿ ಮತ್ತು ಭವಿಷ್ಯ ಅವಳನ್ನು ಅಸಹಾಯಕಳನ್ನಾಗಿ ಮಾಡುತ್ತದೆ. ಗಂಡನಾಗುವವನಿಗೆ ಶಿವಮ್ಮ ಬೇಕು, ಅವಳ ಮಗು ಬೇಡ ಎಂಬುದು ಗಂಡಸಿನ ಮನಸ್ಥಿತಿಯನ್ನು ತೋರಿಸುತ್ತದೆ.

ಇಂಥದೇ ಸಂದರ್ಭದ ಇನ್ನೊಂದು ಮುಖ **'ಮಮತೆಯ ಕೊಲೆ'** (ಲಲಿತಾ ದೇಮಶೆಟ್ಟಿ)ಕಥೆಯಲ್ಲಿದೆ.ಉರಿಯುವ ಯೌವನದಲ್ಲಿರುವಾಗಲೇ ಚಂದ್ರಿ ಗಂಡನನ್ನು ಕಳೆದುಕೊಂಡು ಬೆಳ್ಳಿ ಎಂಬ ಚಿಕ್ಕ ಮಗುವಿನೊಂದಿಗೆ ಬದುಕಿದ್ದರೂ ಒಂಟಿತನವನ್ನು ಸಹಿಸುವುದು ಅವಳಿಗೆ ಅಸಾಧ್ಯವೆನಿಸುತ್ತದೆ. ಸಿಕ್ಕವರ ಜತೆ ಒಂಟಿತನ ಕಳೆದುಕೊಳ್ಳುವುದು ಅವಳಿಗೆ ಸರಿ ಎನಿಸುವುದಿಲ್ಲ. ಆದರೆ ಒಂಟಿ ಹೆಂಗಸಿನ ಸಂಕಷ್ಟಗಳೇ ಬೇರೆ. ಬೀದಿಹೋಕರ ಕಾಟದಿಂದ ಚಂದ್ರಿ ಒಬ್ಬನನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಅವನಿಗೆ ಚಂದ್ರಿ ಬೇಕು. ಚಂದ್ರಿಯ ಮಗು ಬೇಡ. ಈಗ ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಅವಳಿಗೆ ಅಸಾಧ್ಯವಾಗುತ್ತದೆ.ಅವಳು ಕಸ ಮುಸುರೆ ಮಾಡುವ ಮನೆಯೊಡತಿಯೊಬ್ಬಳಿಗೆ ಮಕ್ಕಳಿರಲಿಲ್ಲ. ಆಕೆ ಬೆಳ್ಳಿಯನ್ನು ಕಂಡರೆ ಅಪಾರ ಪ್ರೀತಿ ತೋರಿಸುತ್ತಿದ್ದಳು. ಚಂದ್ರಿ ತನ್ನ ಸಮಸ್ಯೆಯನ್ನು ನೇರವಾಗಿ ಹೇಳದೆ ಆದರೆ ಸುತ್ತು ಬಳಸಿ ಹೇಳುತ್ತಾಳೆ. ತನ್ನ ಮೈಸುಖಕ್ಕೆ ಮಗುವನ್ನು ಅನಾಥಮಾಡುವ ಸ್ಥಿತಿಯನ್ನು ಮನೆಯೊಡತಿ ಒಪ್ಪುವುದಿಲ್ಲ. ಚಂದ್ರಿಗೆ ಸಂಬಂಧಿಕರಿಲ್ಲ. ಬೆಳ್ಳಿಯನ್ನು ಯಾರಿಗೆ ಒಪ್ಪಿಸಬೇಕೆಂದು ಸಮಸ್ಯೆಯಾಗುತ್ತದೆ.

ಆದರೆ ಅವಳಿಗೆ ಅವಳನ್ನು ಆಯ್ಕೆ ಮಾಡಿಕೊಂಡವನು ಬೇಕು. ಚಂದ್ರಿ ತನ್ನ ಮಗಳನ್ನು ಸಾಕಿಕೊಳ್ಳಲು ಹಲವರನ್ನು ಕೇಳಿಕೊಳ್ಳುತ್ತಾಳೆ. ಅಂಥ ಔದಾರ್ಯವನ್ನು ಸಮಾಜ ತೋರಿಸುವುದಿಲ್ಲ. ಅಸಹಾಯಕಳಾದ ಚಂದ್ರಿ ಮಗುವನ್ನು ಸಾವಿಗೆ ಒಪ್ಪಿಸಿ ಬಿಡುತ್ತಾಳೆ. ಈ ಎರಡು ಕಥೆಯಲ್ಲಿ ಹೆಂಗಸಿಗೆ ಭವಿಷ್ಯದ ಬದುಕು ಆಯ್ಕೆಗೆ ಒತ್ತಾಯಿಸುತ್ತದೆ. ಇದು ಹೆಂಗಸಿನ ಅವಸ್ಥೆಯೇ ಹೊರತು ಅವಳ ಕ್ರೌರ್ಯ ಅನ್ನಿಸುವುದಿಲ್ಲ.ಇಲ್ಲಿ ಗಂಡಸು ಮಗುವನ್ನು ಒಪ್ಪಿದ್ದರೆ ಅಂತಿಮವಾಗಿ ಅದನ್ನು ಸಾಕುವವಳು ಅವಳೇ ಆಗಿರುತ್ತಿದ್ದಳು.

'ಕೂಸು' ಹಾಗೂ **'ಮಗು ಮತ್ತು ಪ್ರಿಯಕನ ಮಧ್ಯೆ'** (ಚೆನ್ನಣ್ಣ ವಾಲೀಕಾರ) ಈ ಎರಡೂ ಕಥೆಗಳಲ್ಲಿ ಇದೇ ಸಮಸ್ಯೆಯಿದೆ. ಕಣ್ಣೆಮ್ಮನನ್ನು ಗೌಡ ಭೋಗಿಸಬೇಕಾಗಿತ್ತು. ಅದಕ್ಕಾಗಿ ಅವಳ ಮತ್ತು ನಬಿಲಾಲಾನ ಮದ್ಯೆ ಸಂಬಂಧ ಕಲ್ಪಿಸಿ ಸುದ್ದಿ ಹಬ್ಬಿಸಿದ. ಅವಳ ಗಂಡನಿಗೆ ನಬಿಲಾಲನಿಗೆ ಕದನ ಹುಟ್ಟಿಸಿದ. ಅದರ ಪರಿಣಾಮ ನಬಿಲಾಲ ಜೈಲಿಗೆ ಹೋದ. ಗಂಡನನ್ನು ಗೌಡನೇ ಕೊಲ್ಲಿಸಿದ. ತುಂಬು ಬಸುರಿಯಾಗಿದ್ದ ಕಣ್ಣೆಮ್ಮನನ್ನು.ಅವಳನ್ನು ಒಯ್ದು ಬಂಧನದಲ್ಲಿರಿಸಿ, ಅವಳ ಹೆರಿಗೆಯಾದ ಮೇಲೆ ಕೂಸನ್ನು ಅವಳ ಎದುರಲ್ಲೇ ಕೊಲ್ಲಿಸಿದ. ಮಗುವನ್ನು ಕೊಲ್ಲಿದ ಗೌಡನನ್ನು ಕಣ್ಣೆಮ್ಮ ಪ್ರತಿಭಟಿಸಿದ್ದನ್ನು ಮತ್ತು ಅವನ ಭೋಗಕ್ಕೆ ತುತ್ತಾಗಲು ನಿರಾಕರಿಸಿದ್ದಕ್ಕೆ ಗೌಡ ಅವಳನ್ನು ಕೊಂದುಬಿಟ್ಟ. (ಕೂಸು) ಇನ್ನೊಂದು ಕಥೆಯಲ್ಲಿ ಗಂಡನಿಲ್ಲದ ತಾಯವ್ವ ಮಗುವಿನೊಂದಿಗೆ ಬದುಕಿದ್ದಳು. ಮಸ್ಕಾಕನೆಂಬ ವ್ಯಕ್ತಿ ಅವಳನ್ನು ಬಲವಂತವಾಗಿ ಬಳಸಿಕೊಂಡ. ಅದು ಒಂದು ದಿನದ ಮಾತಾಗಿರಲಿಲ್ಲ. ತಾಯವ್ವನಿಗೆ ಸಮಸ್ಯೆಯಾಯಿತು. ಮಸ್ಕಾಕ ಒಂದು ದಿನ ಬಂದು ತಾಯವ್ವನಿಗೆ ಕರೆದು, ಕಾಮಾತುರದಲ್ಲಿ ವಿವೇಕವನ್ನೇ ಕಳೆದುಕೊಂಡು ಅವಳ ಮಗುವನ್ನೇ ಕೊಂದುಬಿಡುತ್ತಾನೆ. ಎರಡೂ ಕಥೆಗಳಲ್ಲಿ ಹೆಣ್ಣನ್ನು ಬಳಸಿಕೊಳ್ಳಲು ನಿಂತ ಗಂಡಸಿನ ಅಮಾನವೀಯತೆ ಎದ್ದು ಕಾಣುತ್ತದೆ. ಹೆಣ್ಣನ್ನು ತಮ್ಮದಾಗಿಸಿಕೊಳ್ಳಲು ನಿಂತಾಗ ಮಧ್ಯ ಕೂಸು ಅಡ್ಡಿಯಾದದ್ದನ್ನು ಸಹಿಸದ ಗಂಡಸು ಅದನ್ನು ಹೊಸಗಿ ಹಾಕುವ ಕ್ರೌರ್ಯ ಭಯಾನಕವಾದದ್ದು.'ಮಮತೆ' ಮತ್ತು 'ಪಾವಿತ್ರ್ಯ' ಎರಡನ್ನೂ ಕಳೆದುಕೊಳ್ಳುವ ಹೆಂಗಸು ಗಂಡಸಿನ ಕ್ರೌರ್ಯಕ್ಕೆ ಬಲಿಯಾದ ವಸ್ತು ಸ್ಥಿತಿ ಇಲ್ಲಿದೆ.

'ಅವ್ವ' (ಗೀತಾ ನಾಗಭೂಷಣ) ಕಥೆಯಲ್ಲಿ ಅನಾರೋಗ್ಯಕ್ಕೆ ಬಲಿಯಾದ ಮಗುವನ್ನು ನಗರದ ಸರಕಾರಿ ದವಾಖಾನೆಗೆ ತಂದು ಹಾಕಿದ ತಾಯಿ, ಅದರ ಚಿಕಿತ್ಸೆಗೆ ಹಣವಿಲ್ಲದ ಪ್ರಸಂಗ ಒದಗಿ ಮಗುವನ್ನು ಬದುಕಿಸಲು ಹಣಕ್ಕಾಗಿ ತನ್ನ ಮೈಮಾರಿಕೊಂಡರೂ ಮಗು ಬದುಕಲಿಲ್ಲ. ಮಗು ಮತ್ತು ಶೀಲ ಎರಡನ್ನು ಕಳೆದುಕೊಳ್ಳುವ ಹೆಂಗಸಿನ ಚಿತ್ರಣವಿದೆ. ಮಗುವಿನ ಮುಂದೆ ಶೀಲ ದೊಡ್ಡದಾಗಲಿಲ್ಲ. ಆದರೆ ಯಾವುದೂ ಆಕೆಗೆ ಧಕ್ಕಲಿಲ್ಲ. ಇವರ ಇನ್ನೊಂದು ಕಥೆ **'ಗರ್ಭ'** ದಲ್ಲಿ ಇದೇ ಸಮಸ್ಯೆ ಭಿನ್ನವಾಗಿದೆ. ಗೌಡತಿಗೆ ಮಕ್ಕಳಾಗಲಿಲ್ಲ. ಅದು ಅಪಮಾನದ ಪ್ರಶ್ನೆಯೂ, ವಂಶದ ಪ್ರಶ್ನೆಯೂ, ಆಸ್ತಿಯ ಪ್ರಶ್ನೆಯೂ ಎಲ್ಲಕ್ಕಿಂತ ಗೌಡತಿಯ ಬಂಜೆಯ ಪ್ರಶ್ನೆಯೂ ಆಗಿ ನಿಲ್ಲುತ್ತದೆ. ಇದರಿಂದ ಪಾರಾಗಲು ಗೌಡತಿ ಒಂದು ಯೋಜನೆ ಹಾಕುತ್ತಾಳೆ. ಮುಗ್ಧ ಅರಿಯದ ಹೆಂಗಸನ್ನು ತಂದು ಗೌಡನಲ್ಲಿ ಬಿಡುತ್ತಾಳೆ. ಅವಳಿಗೆ ಹುಟ್ಟಿದ ಮಗುವನ್ನು ತನ್ನದೆಂದು ಊರಲ್ಲಿ ಸಾಬೀತು ಮಾಡಿ ತನಗೆ ಒದಗಿದ ಕಳಂಕವನ್ನು ಕಳೆದುಕೊಳ್ಳಲು ಪ್ರಯತ್ನಿಸುತ್ತಾಳೆ. ಗಂಡ, ಆ ಮುಗ್ಧ ಹುಡುಗಿ ಮತ್ತು ತನ್ನ ನಡುವೆ ಒಪ್ಪಂದವಾಗಿ ಎಲ್ಲವೂ ಗುಪ್ತವಾಗಿ ನಡೆಯುತ್ತದೆ. ಆ ಅಮಾಯಕ ಹುಡುಗಿ ಗೌಡನಿಗೆ ಬಸುರಾದದ್ದು ಗೊತ್ತಾದ ತಕ್ಷಣ ಗೌಡತಿಯೇ ಬಸುರಾದಳೆಂದು ಊರಲ್ಲಿ ಸುದ್ದಿಯನ್ನು ಹಬ್ಬಿಸುತ್ತಾಳೆ. ದೂರದ ಮುಂಬಯಿಯಲ್ಲಿ ತಿಂಗಳಾನುಗಟ್ಟಲೇ ಇದ್ದು ಮಗುವನ್ನು ಹೊತ್ತು ಗೌಡತಿ ತನ್ನೂರಿಗೆ ಬರುವ ಸಂದರ್ಭ ಬಂದಾಗ, ಹೆತ್ತ ಮುಗ್ಧ ಹೆಂಗಸಿಗೆ ಸಂಕಟವಾಗುತ್ತದೆ. ಎಲ್ಲರಂತೆ ತನ್ನ ಬದುಕು ನಡೆಯುಲಿಲ್ಲವೆಂದು, ಎಲ್ಲ ದೃಷ್ಟಿಯಿಂದ ಖಾಲಿ ಎನಿಸಿ ದು:ಖಿಸುತ್ತಾಳೆ. ಊರಿಗೆ ಹೋಗಲು ರೈಲ್ವೆ ನಿಲ್ದಾಣಕ್ಕೆ ಬಂದ ಸಂದರ್ಭದಲ್ಲಿ ಆ ಹೆಂಗಸು ಹಿಂದೂ ಮುಂದು ನೋಡದೆ ಕೇವಲ ಮಗುವಿನ ಮೇಲೆ ಮಮತೆ ಉಕ್ಕಿ, ಉದ್ವೇಗಗೊಂಡು ಗೌಡತಿಯ ಕಣ್ಣುತಪ್ಪಿಸಿ

ಮಗುವನ್ನೆತ್ತಿಕೊಂಡು ಕಣ್ಮರೆಯಾಗಿ ಹೋಗುತ್ತಾಳೆ. ಮುಂದೆ ಗೌಡತಿಯಿಂದ ಸಿಗಬಹುದಾದ ಸೌಲತ್ತು, ಅವಮಾನಗಳು ತನ್ನ ಮಗುವಿನ ಮುಂದೆ ದೊಡ್ಡವಾಗಿ ಕಾಣಲಿಲ್ಲ.

ಈ ಎಲ್ಲ ಕಥೆಗಳಲ್ಲಿ ಹೆಂಗಸು 'ಆಯ್ಕೆ' ಯ ಸಂಘರ್ಷವನ್ನು ಎದುರಿಸಬೇಕಾಗುತ್ತದೆ. ಭವಿಷ್ಯದ ಬದುಕು ಮತ್ತು ಮಗುವಿನ ನಡುವೆ ಹೆಂಗಸಿಗೆ ಅಲ್ಲಿ ಆಯ್ಕೆಯ ಪ್ರಶ್ನೆಯಿಲ್ಲ, ಎರಡೂ ಬೇಕು. ಆದರೆ ಗಂಡಸು ಆಯ್ಕೆಯ ಸಮಸ್ಯೆಯನ್ನು ಸೃಷ್ಟಿಸುತ್ತಾನೆ. ವಾಲೀಕಾರರ ಕಥೆಯಲ್ಲಿ ಹೆಂಗಸಿಗೆ ಆಯ್ಕೆ ಪ್ರಶ್ನೆಯೇ ಉದ್ಭವಾಗಲಿಲ್ಲ. ಮಗುವಿನೊಂದಿಗೆ ಹೆಂಗಸು ಹೇಗೋ ಬದುಕಿದ್ದಳು. ಗಂಡಸಿನ ಕಾಮದ ಆತುರ, ಅದರಿಂದ ಉಂಟಾದ ಅಸಹನೆಗೆ ಹೆಂಗಸೂ-ಮಗು ಬಲಿಯಾಗಬೇಕಾಗುತ್ತದೆ. ಇಡೀ ಸಂದರ್ಭವನ್ನು ಗಮನಿಸಿದರೆ ಗಂಡಸಿನ ಕ್ರೌರ್ಯ, ಹೆಂಗಸಿನ ಅಬಲೆತನ ಎದ್ದು ಕಾಣುತ್ತದೆ.

ಕೆಳವರ್ಗದ ಗಂಡಸಿಗೆ ಯಾವ ಜವಾಬ್ದಾರಿಗಳಿವೆ? ಸಂಸಾರ, ಮನೆ-ಮಕ್ಕಳು ಎಲ್ಲದರ ಪೋಷಣೆ ಹೆಂಗಸಿನ ದುಡಿತದ ಮೇಲೆ ನಿಂತಿರುತ್ತದೆ. ಆದರೂ ಹೆಂಗಸಿನ ಮೇಲೆ ಗಂಡಸು ಅಧಿಕಾರವನ್ನು ಸ್ಥಾಪಿಸಿದ್ದಾನೆ. ಈ ಅಧಿಕಾರವನ್ನು ಅನೇಕ ಸಂದರ್ಭಗಳಲ್ಲಿ ಮಹಿಳೆ ಧಿಕ್ಕರಿಸಿದ್ದಾಳೆ ನಿಜ. ಆದರೆ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಗೆ ಒಬ್ಬ ಗಂಡಸನ್ನು ತಗುಲಿಸಿಕೊಂಡಿರುವುದು ಅನಿವಾರ್ಯ. ಹೆಂಗಸಿಗೆ ಒಬ್ಬ 'ಗಂಡ' ಇದ್ದಾನೆ ಎಂಬುದೇ ಅವಳಿಗೆ ಒಂದು ಬಗೆಯ ರಕ್ಷಣೆ ಒದಗಿರುತ್ತದೆ ಎಂಬ ಕಾರಣ ಬಿಟ್ಟರೆ ಈ ಗಂಡನಿಂದ ಯಾವ ಜವಾಬ್ದಾರಿಯನ್ನು ಹೆಂಗಸು ನಿರೀಕ್ಷಿಸುವಂತಿಲ್ಲ ಎನಿಸುತ್ತದೆ. ಒಂದು ಬಗೆಯ ರಕ್ಷಣೆಗಾಗಿ ಗಂಡನಿಂದ ಹೆಣ್ಣು ಪಡುವ ಪಾಡು ಅಗಾಧವಾದದ್ದು. ಒಂದು ವೇಳೆ ಮಹಿಳೆ ವಿಧವೆಯಾದರೆ ಕೆಳವರ್ಗದಲ್ಲಿ ಮತ್ತೊಂದು ಮದುವೆ ಮಾಡಿಕೊಳ್ಳುವ ಅವಕಾಶವಿದೆ ಎಂಬುದು ನಿಜ. ಆದರೆ ಇದೂ ಅಷ್ಟು ಸುಲಭವಲ್ಲ. ವಿಧವೆಗೆ ಮಗು-ಮಕ್ಕಳು ಇದ್ದರೆ ಅವನ್ನು ಏನು ಮಾಡಬೇಕು? ಎಂಬ ಸಮಸ್ಯೆಯ ಸ್ಥಿತಿ ಅನೇಕ ಕಥೆಗಳಿಂದ ವ್ಯಕ್ತವಾಗಿದೆ. ಅವಳ ಸ್ಥಿತಿಯನ್ನು ಪುನಃ ಮದುವೆಯಾಗುವ ಗಂಡಸು ಅರ್ಥಮಾಡಿಕೊಳ್ಳುವುದಿರಲಿ ಅದರ ಬಗ್ಗೆ ಕನಿಷ್ಠ ಮಟ್ಟದಲ್ಲಿ ಯೋಚಿಸುವುದಕ್ಕೂ ಹೋಗುವುದಿಲ್ಲ. ಮಹಿಳೆಗೆ ಎಷ್ಟೇ ಎದೆಗಾರಿಕೆ ಇದ್ದರೂ ಇಂಥ ಸಂದರ್ಭದಲ್ಲಿ ಅಸಹಾಯಕಳಾಗಿ ನಿಲ್ಲುತ್ತಾಳೆ.

ಹಿಂದೂ-ಮುಸ್ಲಿಮ್_ಸಂಬಂಧಗಳು

'ಹೈದರಾಬಾದ್ ಕರ್ನಾಟಕ' ವನ್ನು ನೈಜಾಪ್ರಾಂತ್ಯ,ನೈಜಾಂ ಕರ್ನಾಟಕ, ಮೊಗಲಾಯಿ ಎಂದು ಗುರುತಿಸಲಾಗುತ್ತಿದೆ. ಈ ಪ್ರದೇಶ ನೆನಪಾದರೆ ಸಾಕು ನಿಜಾಮ, ಮುಸ್ಲಿಮರು ನೆನಪಾಗುತ್ತಾರೆ. ಈ ಪ್ರದೇಶದ ಚರಿತ್ರೆಯೇ ಇದಕ್ಕೆ ಕಾರಣವಾಗಿದೆ. ಕಳೆದ ಮೂರುನಾಲ್ಕು ಶತಮಾನಗಳ ಕಾಲ ಈ ಪ್ರದೇಶ ಸಂಪೂರ್ಣವಾಗಿ ಮುಸ್ಲಿಂ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಚರಿತ್ರೆಯಲ್ಲಿ ೧೧ನೆಯ ಶತಮಾನದಿಂದ ಭಾರತಕ್ಕೆ ಅನ್ಯರ ದಾಳಿ ಸುರವಾದಾಗಿನಿಂದಲೇ, ಅವರ ಸಂಸ್ಕೃತಿಯೂ ದಾಳಿಮಾಡಲಾರಂಭಿಸಿತು. ಕರ್ನಾಟಕದಲ್ಲಿ ಅಂದಿನಿಂದಲೇ 'ಹಿಂದೂ' ಸಂಸ್ಕೃತಿಯ ಜತೆಗೆ ಹಿಂದೂಯೇತರ ಸಂಸ್ಕೃತಿಯು ಬೆರೆಯಲಾರಂಭಿಸಿತು. ತಾತ್ವಿಕ ಸಂಘರ್ಷದ ಮಧ್ಯೆಯೂ ಒಂದಾಗತೊಡಗಿದವು. ರಾಜಕೀಯ ಪ್ರಾಬಲ್ಯದಿಂದ ಮುಸ್ಲಿಮರು ಕರ್ನಾಟಕದ ತುಂಬ ತಮ್ಮ ಪ್ರಭಾವ ಬೀರುತ್ತ, ಧರ್ಮ ಮತ್ತು ರಾಜ್ಯ ಎರಡನ್ನೂ ಏಕಕಾಲಕ್ಕೆ ವಿಸ್ತರಿಸಲು ತೊಡಗಿದಾಗಲೇ ಇಲ್ಲಿಯ ಕೆಳವರ್ಗದ ಜನ ಅನೇಕ ರಾಜಕೀಯ, ಧಾರ್ಮಿಕ,ಒತ್ತಡಗಳಿಂದಾಗಿ ಮುಸ್ಲಿಮ ಮತಕ್ಕೆ ಮತಾಂತರ ಹೊಂದತೊಡಗಿದರು. ೧೪ನೆಯ ಶತಮಾನದ ಹೊತ್ತಿಗೆ ಬಹಮನಿ ರಾಜ್ಯ ನೆಲೆಗೊಂಡ ನಂತರ 'ಹೈದರಾಬಾದ್ ಕರ್ನಾಟಕ' ಪ್ರದೇಶ ಮುಸ್ಲಿಮರ ಅಧೀನಕ್ಕೆ ಹೋಯಿತು. ಇಬ್ರಾಹಿಂ ಆದಿಲ್ ಶಾಹಿ ದೊರೆಯಂಥ ಮುಕ್ತ ಮನಸ್ಸಿನ ವ್ಯಕ್ತಿಯಿಂದ ಎರಡು ಭಿನ್ನ ಸಂಸ್ಕೃತಿಯ ಜನಾಂಗಗಳಲ್ಲಿ ಸಹನೆ-ಸಾಮರಸ್ಯ ಚಿಗುರತೊಡಗಿತು. ಜತೆಗೆ ಉತ್ತರದಿಂದ ಬಂದ ಸೂಫಿಗಳು ಈ ಭಾಗದಲ್ಲಿ ತಮ್ಮ ಮುಕ್ತ ಜೀವನ ವ್ಯವಸ್ಥೆಯಿಂದ ಜನಸಾಮಾನ್ಯರಲ್ಲಿ

ಬೇರುಬಿಟ್ಟು ನಿಂತರು. ೧೨ನೆಯ ಶತಮಾನದ ನಂತರ ಶರಣರ ಪರಂಪರೆಯ ಉತ್ತರಾಧಿಕಾರಿಗಳಾಗಿ ಮೂಡಿಬಂದ ತತ್ವಪದಕಾರರು ಜನಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆತದ್ದು ಮತ್ತು ಸರಳ ಜೀವನ ವ್ಯವಸ್ಥೆಯ ಸೂಫಿಗಳಿಗೆ ಹತ್ತಿರದವರಾಗಿ ಒಂದೇ ನಾಣ್ಯದ ಎರಡು ಮುಖಗಳಂತಾದರು. ಹೀಗಾಗಿ 'ಹಿಂದೂ-ಮುಸ್ಲಿಂ' ಜನ ಸಮುದಾಯಗಳು ಅನೇಕ ವಿಷಯಗಳಲ್ಲಿ ಅನ್ಯೋನ್ಯತೆ ಗಳಿಸಲಾರಂಭಿಸಿದರು. ಚರಿತ್ರೆಯಲ್ಲಿ ಈ ಅನ್ಯೋನ್ಯತೆಗೆ ಈ ಪ್ರದೇಶದಲ್ಲಿ ನೂರಾರು ಕುರುಹುಗಳು ಸಿಗುತ್ತವೆ. ತಿಂತಿಣಿ ಮೋನಪ್ಪಯ್ಯನ ಪರಾಕು ಆಗಿರುವ 'ಏಕ್ ಲಾಖ್ ಐಂಸೀ ಹಜಾರ್ ಪಾಂಚೋ ಪೀರ್ ಪೈಗಂಬರ್ ಮೌನೋದಿನ್,ಜೀತಾ ಫೀರ್ ಜಗದ್ಗುರು ಪೈಗಂಬರೊದೀನ್ ಮೌನೋದಿನ್, ಕಾಶೀಪತಿ ಗಂಗಾಧರ ಹರಹರ ಮಹಾದೇವ' ಕುರುಹಿಗೆ ಇದು ಒಂದು ಸಾಕ್ಷಿ ಸಾಕೆನಿಸತ್ತದೆ. ಇದು ಎರಡು ಸಂಸ್ಕೃತಿಗಳ ನೇತಾರರ ಉದಾರವಾದೀತನದಿಂದ ಸಾಧಿತವಾದದ್ದಲ್ಲ. ಇದನ್ನು ಗಟ್ಟಿಗೊಳಿಸಿದ ಜನಸಾಮಾನ್ಯರ ಮನಸ್ಸು ಇನ್ನೂ ದೊಡ್ಡದೆಂದೇ ಕಾಣುತ್ತದೆ. ದುಡಿವ ವರ್ಗದವರಿಗೆ ಧರ್ಮ ಜಾತಿ ಮುಖ್ಯವಾಗುವುದಿಲ್ಲ. ದುಡಿತದ ನಡುವೆ ತಲೆದೋರಿದ ಸಂಕಷ್ಟಗಳ ಪರಿಹಾರಕ್ಕೆ ಅಕ್ಕಪಕ್ಕದ ದೈವವನ್ನು ಮೊರೆಹೋಗುತ್ತಾರೆ. ಆ ದೈವದ ಚರಿತ್ರ ಅವರಿಗೆ ಮುಖ್ಯವಾಗುವುದಿಲ್ಲ. ಸಂಕಷ್ಟಗಳನ್ನು ನಿವೇದಿಸಿಕೊಳ್ಳಲು ಒಂದು ದೈವ ಬೇಕಷ್ಟೇ. ಅದು ಗುಡಿಯಲ್ಲಿರಬಹುದು, ಚಾವಡಿಯಲ್ಲಿರಬಹುದು, ಮಸೀದೆ-ದರಗಾ ಯಾವುದಾದರೂ ಸರಿಯೇ ಅಲ್ಲಿಗೆ ಹೋಗಿ ತಮ್ಮ ನೋವನ್ನು ನಿವೇದಿಸಿಕೊಂಡು ನಿರುಮ್ಮಳರಾಗುತ್ತಾರೆ. ಕೆಳವರ್ಗದಲ್ಲಿ ಇರುವ ಇಂಥ ಗುಣದಿಂದಾಗಿಯೆ ಹೈದರಾಬಾದ್ ಕರ್ನಾಟಕದ ಪ್ರದೇಶದಲ್ಲಿ 'ಹಿಂದೂ-ಮುಸ್ಲಿ' ಒಂದೇ ಅಂಗಳದಲ್ಲಿ ಕಷ್ಟಸುಖಗಳ ಕೊಡುಕೊಳ್ಳುವಿಕೆ ನಡೆದಿದೆ. ಹಿಂದೂ-ಮುಸ್ಲಿಂ ಹಬ್ಬಗಳು ಇಬ್ಬರನ್ನು ಒಂದು ಮಾಡಿವೆ. ಹಸನಪ್ಪ,ಹುಸೇನಪ್ಪ,ಫಕೀರಪ್ಪ, ಈ ಹೆಸರುಗಳಿಂದ ಜಾತಿಯನ್ನು ನಿರ್ಧರಿಸಲಾಗುವುದಿಲ್ಲ. ಹನ್ನೆರಡನೆಯ ಶತಮಾನದಲ್ಲಿ ನಡೆದ ಕ್ರಾಂತಿಗಿಂತ ಈ ಕ್ರಾಂತಿಯೂ ಮುಖ್ಯವೆಂದು ಹೇಳಬೇಕಾಗುತ್ತದೆ.

ಬಹುದೀರ್ಘಕಾಲ ಈ ಪ್ರದೇಶದಲ್ಲಿ ಎರಡು ಭಿನ್ನ ಸಂಸ್ಕೃತಿಯ ಜನ ಸಮುದಾಯಗಳು ಕೂಡಿ ಬಾಳಿವೆ. ಇವುಗಳ ನಡುವಿನ ಸಾಮರಸ್ಯ, ತಾತ್ವಿಕ ಸಂಘರ್ಷ, ಸಾಧಕ ಬಾಧಕಗಳನ್ನು ಕುರಿತು ಈ ಪ್ರದೇಶದ ಬರಹಗಾರರು ಹೇಗೆ ಗ್ರಹಿಸಿದ್ದಾರೆ ಎಂದು ಅವರ ಸಾಹಿತ್ಯ ಕೃತಿಗಳನ್ನು ಪರಿಶೀಲಿಸಿದರೆ ಅಂಥ ಪ್ರಯತ್ನಗಳು ಇಲ್ಲದಿರುವುದು ಕುತೂಹಲವೆನಿಸುತ್ತದೆ. ಈ ಎರಡು ಕೋಮಿನವರ ನಡುವೆ ಸಾಮರಸ್ಯಗಳನ್ನು ಹುಡುಕುವುದು ಯಾವಾಗಲೂ ಅವುಗಳ ಕೊರತೆ ಇದ್ದಾಗ ನಡೆಯುತ್ತದೆ. ಆದರೆ ಈ ಹೆಕ್ಕಿ ತೆಗೆಯುವ ಕೆಲಸ 'ರಾಜಕೀಯ' ಎನಿಸುತ್ತದೆ. ಆದರೆ ಈ ಪ್ರದೇಶದಲ್ಲಿ ಈ ಎರಡು ಭಿನ್ನ ಸಂಸ್ಕೃತಿಯ ಸಮುದಾಯಗಳು ನಿಸರ್ಗ ಸಹಜ ಎಂಬಂತೆ ಬೆರೆತಿರುವುದು ಸರಿಯಷ್ಟೇ. ಇಂಥ ನಿಸರ್ಗ ಸಹಜ ಸಂಬಂಧಗಳ ಚಿತ್ರಣವೂ ಸೇರಿದಂತೆ ಹಿಂದೂ-ಮುಸ್ಲಿಂ ಸಂಬಂಧಗಳು ಅವು ಹೇಗೇ ಇರಲಿ ಅವುಗಳ ಚಿತ್ರಣ ಕಥೆಗಳಲ್ಲಿ ಬಂದಿವೆಯೇ? ಪ್ರಯತ್ನಪಟ್ಟು ಹುಡುಕಿದರೆ ಅಲ್ಪಸ್ವಲ್ಪ ಕಾಣಸುತ್ತವೆ. ಈ ಎರಡು ಸಂಸ್ಕೃತಿಯ ಸಾಂಸ್ಕೃತಿಕ ಸಂಬಂಧದ ದೊಡ್ಡ ಪರಂಪರೆ ಇರುವಾಗ ಇಲ್ಲಿಯ ಬರಹಗಾರರಿಗೆ ಇಂಥದೊಂದು ಬದುಕಿನ ಚಿತ್ರಣವನ್ನು ನೀಡಲು ಯಾಕೆ ಸಾಧ್ಯವಾಗಿಲ್ಲ? ಸಾಹಿತ್ಯ ಪರಂಪರೆಯಲ್ಲಿ ೧೯ನೇ ಶತಮಾನದಲ್ಲಿ ಮಾತ್ರ ಮುಸ್ಲಿಂ ತತ್ವಪದಕಾರರನ್ನು ಬಿಟ್ಟರೆ ಈ ಭಾಗದಲ್ಲಿ ಈ ಹೊತ್ತಿನವರೆಗೆ ಒಬ್ಬ ಮುಸ್ಲಿಂ ಬರಹಗಾರ ಹುಟ್ಟಿಕೊಂಡಿಲ್ಲ ಎಂಬುದು ಕೂಡ ಕುತೂಹಲದ ಸಂಗತಿಯೇ.

ಗ್ರಾಮಾಂತರ ಪ್ರದೇಶಗಳಲ್ಲಿರುವ ಮುಸ್ಲಿಮರು ಕೆಳವರ್ಗದ 'ಹಿಂದೂ' ಜನರಿಗಿಂತ ಭಿನ್ನವಾಗಿಲ್ಲ. ಇವರಿಗೆ ಉರ್ದು ಬರುವುದಿಲ್ಲ.ನಮಾಜು ಗೊತ್ತಿಲ್ಲ. ಮುಸ್ಲಿಂ ಸಂಸ್ಕೃತಿಯ ಜೀವನ ಕ್ರಮದ ರೀತಿ ನೀತಿಗಳನ್ನು ಅಳವಡಿಸಿಕೊಂಡಿಲ್ಲ ಎಂಬುದು ನಿಜ. ಅದಕ್ಕೆ ಅನೇಕ ಕಾರಣಗಳಿವೆ. ಮೂಲ 'ಇಸ್ಲಾಂ' ಸಂಸ್ಕೃತಿಯ ಪರಂಪರೆಗೆ ಸೇರಿದವರು ಇವರಲ್ಲ. ಇವರೆಲ್ಲ ಮತಾಂತರ

ಹೊಂದಿದವರು. ಪಿಂಜಾರರು,ಕಟುಕರು, ಜಾತಿಗಾರರು ಎಂಬ ಇಸ್ಲಾಂ ಜನಾಂಗದ ಉಪಜಾತಿಗೆ ಸೇರಿದವರು. ಸಾಂಸ್ಕೃತಿಕವಾಗಿ ಇವರೂ ದಲಿತರು ಎಂದು ಕಾಣುತ್ತದೆ. ಈ ಭಾಗದ ಕಥೆಗಳಲ್ಲಿ ಕಾಣಿಸಿಕೊಂಡವರು ಇವರೆ. ಹೀಗಾಗಿ ಕೆಳವರ್ಗದ ಜನರಂತೆ ಇವರಿದ್ದಾರೆ. ಧರ್ಮ ಮತ್ತು ರಾಜಕಾರಣ ಇವರನ್ನು ಭಿನ್ನರನ್ನಾಗಿ ಮಾಡಲಾಗಿಲ್ಲ.

'ಹಿಂದೂ ಮುಸ್ಲಿಂ' ಸಂಬಂಧಗಳು ಕೆಲವು ಕಥೆಗಳಲ್ಲಿ ಕಾಣಿಸಿದೆ. ಅದನ್ನು ಸಂಬಂಧ ಎಂದು ಕರೆಯುವುದು ಕಷ್ಟ ಎನಿಸುತ್ತದೆ ಆದರೂ ಕೆಲವು ಸಂದರ್ಭಗಳು ಸಂಬಂಧದ ಸ್ವರೂಪವನ್ನು ತಿಳಿಸುತ್ತವೆ. 'ಉರಿದ ಬದುಕು' (ಶಾಂತರಸ) ಕಥೆಯಲ್ಲಿ ಒಂದು ಸನ್ನಿವೇಶ ಹೀಗಿದೆ :ಕಾಶೀಮಲಿ ತನ್ನ ರಜಾಕಾರರ ತಂಡದೊಂದಿಗೆ ನಬೆಮ್ಮನ ಮನೆಗೆ ದಾಳಿ ಮಾಡುತ್ತಾನೆ. ಒಂದು ಕೋಣೆಯ ಬಾಗಿಲಿಗೆ ನಬೆಮ್ಮ ಅಡ್ಡ ನಿಂತಿದ್ದಾಳೆ. ಕಾಶೀಮಲಿ ಬಂದೂಕಿನೊಂದಿಗೆ ಆ ಕೋಣೆಗೆ ನುಗ್ಗಲು ಪ್ರಯತ್ನಿಸುತ್ತಾನೆ. ನಬೆಮ್ಮ ಒಳಗೆ ಬಿಡುವುದಿಲ್ಲ.'ಮೊದ್ಲ ನನ್ನ ಕೊಲ್ಲು ಆ ಮ್ಯಾಲೆ ಒಳಗ ಹೋಗು' ಎನ್ನುತ್ತಾಳೆ. ಸೋತ ಕಾಸೀಮಲಿ ಬಂದೂಕು ಕೆಳಗಿಳಿಸಿ ಮರಳಿ ಹೋಗುತ್ತಾನೆ. ನಬೆಮ್ಮ ರಜಾಕಾರರ ವಿರುದ್ದ ಹೋರಾಡುತ್ತಿದ್ದ ತಿಪ್ಪಣ್ಣನನ್ನು ಕಾಶೀಮಲಿಯಿಂದ ರಕ್ಷಿಸಲು ಒಳಗೆ ಅಡಗಿಸಿಟ್ಟಿರುತ್ತಾಳೆ. ಅದೇ ಊರಿನ ಕಾಶೀಮಲಿ ರಜಾಕಾರರ ದಾಳಿಯ ಕಾಲದಲ್ಲಿ ಸಮಯ ಸಾಧಕನಂತೆ ರಜಾಕಾರನಾಗಿ ಕೂಡಿ ಬಾಳಿದ ತನ್ನೂರಿನ ಜನರಿಗೇ ತೊಂದರೆ ಕೊಡಲು ನಿಂತಿರುತ್ತಾನೆ. ಸಹಜವಾಗಿಯೇ ನಬೆಮ್ಮನಿಗೆ ಅದನ್ನು ಸಹಿಸುವುದು ಅಸಾಧ್ಯವಾಗಿತ್ತು. ರಜಾಕಾರರ ದಾಳಿಯಲ್ಲಿ ತಿಪ್ಪಣ್ಣ ಗುಪ್ತವಾಗಿ ಅವರ ವಿರುದ್ದ ಹೋರಾಟ ನಡೆಸಿರುತ್ತಾನೆ. ಆ ರಾತ್ರಿ ಅನಿವಾರ್ಯವಾಗಿ ಅಡಗಲು ಅವನಿಗೆ ಸುರಕ್ಷೆಯ ಸ್ಥಳಬೇಕಾಗಿರುತ್ತದೆ. ತನ್ನ ತಂಗಿಯ ಮನೆಯಲ್ಲಿಯೇ ಅವನಿಗೆ ಅಡಗಲು ಅವಕಾಶ ಸಿಗುವುದಿಲ್ಲ. ತಂಗಿಯ ಗಂಡ ರಜಾಕಾರರಲ್ಲಿ ಸೇರಿರುತ್ತಾನೆ. ಕೊನೆಗೆ ತಿಪ್ಪಣ್ಣನಿಗೆ ಸುರಕ್ಷೆಯ ಸ್ಥಳ ನಬೆಮ್ಮನ ಮನೆ ಎಂದು ಕಾಣುತ್ತಾನೆ. ನಬೆಮ್ಮ ಪುನ: ಕಾಶೀಮಲಿಯ ದಾಳಿಗೆ ಬಲಿಯಾಗುತ್ತಾಳೆಯೇ ಹೊರತು, ತಿಪ್ಪಣ್ಣನನ್ನು ಅಡಗಿಸಿಟ್ಟ ಸ್ಥಳಕ್ಕೆ ಬಿಡುವುದಿಲ್ಲ. ಈ ಸಂದರ್ಭದಲ್ಲಿ ನಬೆಮ್ಮನಿಗೆ ತಿಪ್ಪಣ್ಣನನ್ನು ರಕ್ಷಿಸುವುದು ನ್ಯಾಯ ಅನ್ನಿಸುತ್ತದೆ. ಸಂದರ್ಭ ಮನುಷ್ಯನ ಮೂಲ ಗುಣವನ್ನು ತೋರಿಸುತ್ತದೆ. ಕಾಶಿಂ ಅಲಿ, ನಬೆಮ್ಮ ಈ ವಿಷಯದಲ್ಲಿ ಒಂದಾಗುವಂತೆ ಯಾವ ಬಗೆಯ ಸಂಬಂಧವೂ ಕೆಲಸ ಮಾಡುವುದಿಲ್ಲ. ತಿಪ್ಪಣ್ಣನನ್ನು ಉಳಿಸುವುದಕ್ಕೆ ನಬೆಮ್ಮನಲ್ಲಿ ಇರುವ ಕಾರಣವೆಂದರೆ ಪ್ರಾಮಾಣಿಕತೆ ಮತ್ತು ಮಾನವೀಯತೆ ಮಾತ್ರ ಎಂದು ಕಾಣುತ್ತದೆ.

'ಬಡೆಸಾಬು ಪುರಾಣ' (ಶಾಂತರಸ) ಕಥೆಯಲ್ಲಿ, ಬಡೆಸಾಬನ ಬೆಂಬಲಿಗರಾಗಿ ಬೇಡರ ಪರಸಣ್ಣ, ಕರ್ರ್ಯ, ನಿಂಗಿ, ಬುಡ್ಡೆಮ್ಮ,ಉಪ್ಪಾರ ಜಂಗಲೆಪ್ಪ, ಕಬ್ಬೇರ ನಾರಾಯಣ ಮುಂತಾದವರು ನಿಂತು ಬಹುಕಾಲದಿಂದ ಕೂಡಿ ಬಂದ ತಮ್ಮ ಜನರನ್ನೇ ಹಿಂಸೆಗೆ ಗುರಿಮಾಡುತ್ತಾರೆ. ಬಡೆಸಾಬ ಎಲ್ಲಿಂದಲೋ ಊರಿಗೆ ಬಂದಿರುತ್ತಾನೆ. ಅವನ ಬಳಿಯಿದ್ದ ಹಣ ಮತ್ತು ರಾಜಕೀಯ ಬೆಂಬಲಕ್ಕೆ ಅಂಜಿ ಇವರೆಲ್ಲ ಅವನ ಬೆನ್ನಿಗೆ ಬಿದ್ದಿದ್ದರು. ದಸ್ತಗೀರಿ, ಅಬ್ದುಲ್ಲಾ, ಖಾಜಾಸಾಬ್, ಸಲೀಮ್, ಮುಂತಾದವರು ಸ್ಥಳಿಯರೇ ಸಮಯ ಸಾಧಕರಾಗಿ ಬಡೇಸಾಬನ ಹಿಂದಿರುತ್ತಾರೆ. ಬಡೆಸಾಬನ ಒತ್ತಾಯಕ್ಕೆ ಅದೇ ಮುಲ್ಲಾ ರಸೂಲ್ ಸಾಬ ಮಣಿಯುವುದಿಲ್ಲ 'ಊರಲ್ಲಿ ಎಲ್ಲರು ಅಣ್ಣತಮ್ಮರಂತೆ ಇದ್ದೇವೆ. ಬಡೆಸಾಬನ ಈ ವರ್ತನೆ ಊರಲ್ಲಿ ಜಾತಿಭಾವನೆ ಹುಟ್ಟಿಸುವುದು' ಎಂದು ಖಂಡಿಸುತ್ತಾನೆ. ಕರ್ರ್ಯ ಗುಟುಕು ಹೆಂಡಕ್ಕಾಗಿ ತನ್ನ ಹೆಂಡತಿಯನ್ನು ಬಡೆಸಾಬನಿಗೆ ಬಿಟ್ಟಿರುತ್ತಾನೆ. ಬುಡ್ಡಮ್ಮ ಸಾಬಣ್ಣನನ್ನು 'ವರ್ಷಕ್ಕೆ ಎಲ್ಡ ಸೀರೆ ತರಲಾರದ ಗಂಡಸು' ಎಂದು ನಿರಾಕರಿಸಿ ಬಡೆಸಾಬನನ್ನು ಕೂಡುತ್ತಾಳೆ. ಕೆಳವರ್ಗದ ಈ ದಲಿತರು ಈ ರೀತಿ ವರ್ತಿಸುವುದಕ್ಕೆ ಸಾಮಾಜಿಕ, ಆರ್ಥಿಕ ಒತ್ತಡಗಳೇ ಕಾರಣವಾಗಿರುತ್ತವೆ. 'ಸ್ವಾತಂತ್ರ್ಯ ವೀರ' (ಶಾಂತರಸ) ಕಥೆಯಲ್ಲಿ ಸಿದ್ದಣ್ಣ, ಅಲ್ಲಿಸಾಬು ಕುಡಿ ಪರಪ್ಪನ ಹೆಂಡತಿ ಚೆನ್ನಿಯನ್ನು ಕೆಡಿಸುತ್ತಾರೆ. 'ನಾಯಿ ಮತ್ತು ಪಿಂಚಣಿ' (ಶಾಂತರಸ) ಕಥೆಯಲ್ಲಿ ರಂಗಣ್ಣ-

ಮೌಲಾನಾಯಕ ಕೂಡಿ ಊರಿಗೆ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಂಗಪ್ಪನ ಹೆಂಡತಿ ಈರವ್ವನನ್ನು ಹಿಂಸಿಸಿ ಅತ್ಯಾಚಾರ ಮಾಡಲು ಪ್ರಯತ್ನಿಸುತ್ತಾರೆ. ಈ ಸಂಬಂಧಗಳು ಅಪವಿತ್ರ ಮೈತ್ರಿಯಂತೆ ಕಾಣುತ್ತವೆ. ಇದು ವ್ಯಕ್ತಿಯ ಗುಣವನ್ನು ಅವಲಂಬಿಸಿದೆ. ಇದಕ್ಕೆ ಸಮಾಜದ ಸಾಮಾಜಿಕ ವಾತಾವರಣವೂ ಕಾರಣವಾಗಿದೆ.

'ಸಾವು ಸತ್ತಾಗ' (ಶಾಂತರಸ) ಕಥೆಯಲ್ಲಿ, ರಶೀದ್ ಮತ್ತು ಈರಣ್ಣನ ಸ್ನೇಹ ಮನುಷ್ಯ ಮನುಷ್ಯನ ನಡುವಿನ ಸಂಬಂಧದ ಪ್ರತೀಕವಾಗಿದೆ. ಬರಗಾಲ ಬಿದ್ದಾಗ ಇವರಿಬ್ಬರು ಬಡವರ ಪರವಾಗಿ ನಿಂತು ಶ್ರೀಮಂತ ರಾಜಕಾರಣಿಗಳ,ಅಧಿಕಾರಿಗಳ ವಿರುದ್ಧ ಹೋರಾಡಿದರು. ಅವರಿಬ್ಬರನ್ನು ಗೋವಿಂದಪ್ಪ, ಬೆಟ್ಟಪ್ಪ ಅಗಲಿಸಲು ಪ್ರಯತ್ನಿಸಿದರು. ಪೋಲಿಸರಿಗೆ ಹೇಳಿ ಕಿರುಕುಳ ಕೊಟ್ಟರೂ ರಶೀದ-ಈರಣ್ಣನ ಸ್ನೇಹ ಕೆಡಲಿಲ್ಲ. ಕೊನೆಗೆ ಬರಗಾಲ ಬಂದು ರಶೀದ ಊರುಬಿಡುವಾಗ ಈರಣ್ಣನಿಗೆ ಹಿಟ್ಟು-ನೀರು ಕೊಟ್ಟು ಹೋಗುತ್ತಾನೆ. ಮನುಷ್ಯತ್ವಕ್ಕೆ ಜಾತಿಯಿಲ್ಲ ಎಂದು ಇದರಿಂದ ಅರಿಯಬಹುದು. **'ಯಾರು ನಮ್ಮವರು'** (ಜಯತೀರ್ಥ ರಾಜಪುರೋಹಿತ) ಕಥೆಯಲ್ಲಿ,ರಜಾಕಾರರ ವಿರುದ್ಧ ಹೋರಾಡಲು ನಿಂತಿದ್ದ ರಾಜಣ್ಣನಿಗೆ ಹೊನ್ನೂರ ಸಾಹೇಬನಿಂದ ಸಹಾಯ ದೊರೆಯತ್ತದೆಯೇ ಹೊರತು, ಅವನ ಬಂಧುಗಳಾದ ರಾಘುಪ್ಪ, ಆನಂದತೀರ್ಥರಿಂದಲ್ಲ. ರಾಜಣ್ಣನನ್ನು ಹಿಡಿಯಲು ಹುಸೇನಿಯ ಜತೆ ಪೊಲೀಸ್ ಗೌಡ ಸೇರಿಕೊಂಡಿರತ್ತಾನೆ.

'ಚಾಟಿ' (ದೇವೇಂದ್ರ ಕುಮಾರ ಹಕಾರಿ) ಕಥೆಯಲ್ಲಿ, ರವಿ ದಿಲಾವರ್‌ನನ್ನು ಒಮ್ಮೆ ಪ್ರಾಣಾಪಾಯದಿಂದ ಪಾರುಮಾಡುತ್ತಾನೆ. ಅದರಿಂದಾಗಿ ಅವರಲ್ಲಿ ಸ್ನೇಹ ಬೆಳೆಯುತ್ತದೆ. ದಿಲಾವರನ ಮನೆಯವರೆಲ್ಲ ರವಿಗೆ ಪರಿಚಯವಾಗಿ ಅವರ ಕುಟುಂಬದ ಸದಸ್ಯನಾಗುತ್ತಾನೆ. ದಿಲಾವರನ ತಂದೆ ತೀರಿಕೊಂಡಿರುತ್ತಾನೆ. ನವಾಬ ವಂಶಸ್ಥರಾದ ತಾಯಿ ಜುಲೇಖಾಬೇಗಮ್, ತಂಗಿ ರಜಿಯಾ ಎಲ್ಲರ ಜತೆ ರವಿ ಅನೋನ್ಯವಾಗಿ ಸೇರಿಹೋಗುತ್ತಾನೆ. ಜುಲೇಖಾ ಬೇಗಮ್ ರವಿಯನ್ನು ಮಗನಂತೆ ಪ್ರೀತಿಸುತ್ತಾಳೆ. ಮಗ ದಿಲಾವರ ಬೇಜವಾಬ್ದಾರಿಯಿಂದ ಮನೆಯ ಬಗ್ಗೆ, ತಂಗಿಯ ಬಗ್ಗೆ ಕಾಳಜಿಯಿಲ್ಲದೆ ಉಡಾಳನಾಗಿ ತಿರುಗುತ್ತಿರುತ್ತಾನೆ. ಹುಡುಗಿಯರ ಬೆನ್ನು ಹತ್ತುವುದೇ ಅವನ ಕೆಲಸವಾಗಿರುತ್ತದೆ. ರಜಿಯಾಳ ಮದುವೆಯನ್ನು ಮಾಡಿಸುವ ಜವಾಬ್ದಾರಿಯನ್ನು ಜುಲೇಖಾ ಬೇಗಮ್ ರವಿಗೆ ವಹಿಸುತ್ತಾಳೆಯೇ ಹೊರತು ಮಗನಿಗಲ್ಲ. ಅಷ್ಟರ ಮಟ್ಟಿಗೆ ರವಿ ಆ ಮುಸ್ಲಿಂ ಮನೆಯಲ್ಲಿ ದಿಲಾವರನ ಸ್ಥಾನವನ್ನು ಪಡೆಯುತ್ತಾನೆ. ಮನುಷ್ಯರ ನಡುವಿನ ಪ್ರೀತಿ-ವಿಶ್ವಾಸಕ್ಕೆ ಜಾತಿ ಅಡ್ಡ ಬರುವುದಿಲ್ಲ ಎಂಬುದಕ್ಕೆ ನಿದರ್ಶನವಾಗಿದೆ.

'ಸಂಬಂಧ' (ಶ್ರೀಕಾಂತ-ಪಾಟೀಲ್) ಕಥೆಯಲ್ಲಿ, ಹಿಂದೂ ಮುಸ್ಲಿಂ ಸಂಬಂಧವು ಅಂತಿಮ ಹಂತ ತಲುಪಿಸುವ ಬಗ್ಗೆ ಯೋಚಿಸಲಾಗಿದೆ. ಈ ಪ್ರದೇಶದಲ್ಲಿ ಬಹು ದೀರ್ಘಕಾಲದಿಂದ ಕೂಡಿ ಬಂದ ಈ ಎರಡು ಜನಾಂಗವನ್ನು ಕಲುಕಿದ ಘಟನೆ ಎಂದರೆ ರಜಾಕರರ ದಾಳಿಯೇ. ಹಿಂದೂ-ಮುಸ್ಲಿಂರ 'ಐಕ್ಯತೆ' ಎಂದರೆ ತಮ್ಮ ತಮ್ಮ ಸಾಂಸ್ಕೃತಿಕ ಅಸ್ತಿತ್ವವನ್ನು ಉಳಿಸಿಕೊಂಡೇ ಅನ್ಯೋನ್ಯತೆಯನ್ನು ಸಾಧಿಸುವುದು ಎಂದರ್ಥ. ಮುಸ್ಲಿಮರು ತಮ್ಮ ಜೀವನ ಕ್ರಮವನ್ನು ಅವರ ಸಂಸ್ಕೃತಿಗೆ ಅನುಗುಣವಾಗಿ ಅನುಸರಿಸುವುದು, ಅದರಂತೆ ಹಿಂದೂಗಳು. ಪ್ರಾಮಾಣಿಕ ವರ್ತನೆಗೆ, ಸ್ವಭಾವಕ್ಕೆ, ಸ್ನೇಹಕ್ಕೆ ಜಾತಿ ಅಡ್ಡಗೋಡೆಯಾಗುವುದಿಲ್ಲ. ಆದರೆ ಇದನ್ನು ರಾಜಕೀಯದಿಂದ ಕೂಡಿದ ಮತಾಂಧತೆ ಮಾತ್ರ ಒಡೆಯಬಲ್ಲದು. ರಜಾಕಾರರ ದಾಳಿಯಲ್ಲಿ ಧರ್ಮ ಮತ್ತು ರಾಜಕೀಯ ಶಕ್ತಿಯೇ ಈ ಎರಡು ಜನಾಂಗಗಳ ಅನ್ಯೋನ್ಯ ಸಂಬಂಧಕ್ಕೆ ಕೊಡಲಿಯನ್ನು ಹಾಕಿದ್ದು 'ಸಂಬಂಧ' ಕಥೆಯಲ್ಲಿ ರಜಾಕಾರರ ಹಾವಳಿಯ ದಿನಗಳಲ್ಲಿ ಹಿಂದು ಮತ್ತು ಮುಸ್ಲಿಮರ ನಡುವೆ ಜಾತಿ ಗಲಭೆ ನಡೆದು ಊರು ಕೇರಿಗಳು ಉರಿಯತೊಡಗಿದಾಗ ಶಂಕ್ರಪ್ಪ ಮಾಸ್ತಾರ ಮತ್ತು ಮಾಹಮ್ಮದಸಾಬನ ಕುಟುಂಬಗಳು ಒಂದನ್ನೊಂದು ದಳ್ಳುರಿಯಲ್ಲಿ ಜೀವಾಪಾಯದಿಂದ ರಕ್ಷಿಸಿಕೊಂಡವು. ಹೆಸರಿಗೆ ಒಂದು ಹಿಂದೂ ಕುಟುಂಬ, ಇನ್ನೊಂದು ಮುಸ್ಲಿಮ್ ಕುಟುಂಬ.ಒಂದನ್ನೊಂದು ರಕ್ಷಿಸಿಕೊಂಡು ನಿಂತಿವೆ. ಇಡಿ ಗಲಭೆ

ಯಾರ ಯಾರ ನಡುವೆ ನಡೆಯುತ್ತವೆ? ಆ ಎರಡು ಕುಟುಂಬಗಳು ಹೊರಗೆ ನಡೆದ ದಳ್ಳುರಿಯನ್ನು ಕಂಡು ತಲ್ಲಣಗೊಂಡಿವೆ. ಒಂದು ವೇಳೆ 'ಹಿಂದೂ' ಮತ್ತು 'ಮುಸ್ಲಿಂ' ನಡುವೆಯೇ ಈ ಗಲಭೆ ನಡೆಯುತ್ತಿದ್ದರೆ ಯಾಕೆ ಮತ್ತು ಇದಕ್ಕೆ ಕೊನೆ ಎಂದು ಪ್ರಶ್ನಿಸಿಕೊಳ್ಳುತ್ತವೆ. ಅದಕ್ಕೆ ಆ ಎರಡು ಭಿನ್ನ ಸಂಸ್ಕೃತಿಯ ಕುಟುಂಬಗಳ ನಡುವೆ 'ಮದುವೆ' ಸಂಬಂಧ ಏರ್ಪಟ್ಟರೆ ಪರಿಹಾರವಾದೀತು ಎಂದು ಅದಕ್ಕೂ ಸಿದ್ಧವಾಗುತ್ತವೆ. 'ಮದುವೆ' ಏರ್ಪಡಲು ಸಾಧ್ಯವೇ? ಏರ್ಪಟ್ಟರೆ ಪರಿಹಾರ ಸಾಧ್ಯವೆ? ಎಂಬ ಪ್ರಶ್ನೆ ಬೇರೆ. ಒಂದು ಮತೀಯ ಸಂದರ್ಭ ಇಂಥದ್ದನ್ನು ಯೋಚಿಸುವ ಒತ್ತಡಕ್ಕೆ ಪ್ರೇರೇಪಿಸಿತು ಎಂಬುದು ಮುಖ್ಯವಾಗುತ್ತದೆ.

'ಸಹಬಾಳ್ವೆ'ಯ ಹುಡುಕಾಟ ಈ ಹೊತ್ತಿನಲ್ಲಿ ರಾಜಕೀಯದಿಂದ ಪ್ರೇರಿತವಾಗಿದೆ. ಈ ಪ್ರಶ್ನೆ ಕೇವಲ 'ಹಿಂದೂ-ಮುಸ್ಲಿಂ' ಸಮುದಾಯಕ್ಕೆ ಅನ್ವಯಿಸಬೇಕು. ಹಿಂದೂ ಸಮುದಾಯದ ಒಳಗೇ ಇರುವ ಅನೇಕ ಜಾತಿ-ಜಾತಿಗಳ ನಡುವೆ ಸಾಮರಸ್ಯ ಇದೆಯೇ ಎಂದು ಹುಡುಕಾಡಿದರೆ ಸಿಗುವ ಉತ್ತರವೇ ಮೇಲಿನದಕ್ಕೂ ಅನ್ವಯಿಸುತ್ತದೆ.

ಅಧ್ಯಾಯ ಎಂಟು: ಕಾದಂಬರಿ ಸಾಹಿತ್ಯ

ಬರಗಾಲಕ್ಕೆ ಸಿಕ್ಕ ಊರಿನ ಕಥೆ

ಪ್ರಕ್ಷುಬ್ಧ ಸಂದರ್ಭದ ಸಾಮಾಜಿಕ ಚಿತ್ರಣ

ರಾಜಕೀಯ ಪಲ್ಲಟಗಳ ಪರಿಣಾಮಗಳು

ನವಾಬ್ ಮನೆತನದ ಅವನತಿಯ ಚಿತ್ರಣ

ದೇಶಿ ನುಡಿಗಟ್ಟಿನ 'ಬೆಳ್ಳ'ದ ಸುತ್ತಮುತ್ತ

ಜಾತಿ, ಹಣ, ಹಾದರ, ಕೊಲೆ ಮುಂತಾದ ಗ್ರಾಮೀಣ ರಾಜಕಾರಣದ ಚಿತ್ರಣಗಳು

ಕೆಳವರ್ಗದ ಮಹಿಳೆಯ ಕಥನಗಳು

ಕೊರವ ಸಮುದಾಯ ಎಂಬ ಲೋಕ

ಲಮಾಣಿ ಸಮುದಾಯದ ಅವಸ್ಥೆ

ಜಾತಿಗೇರ ಮಾಬಮ್ಮನ ಕಥೆ

ಅಧ್ಯಾಯ ಎಂಟು: ಕಾದಂಬರಿ ಸಾಹಿತ್ಯ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಾದಂಬರಿಗಳು ಸೃಷ್ಟಿಯಾದದ್ದೇ ಸ್ವಾತಂತ್ರ್ಯೋತ್ತರ ಕಾಲದಲ್ಲಿ. ಅದು ಅರವತ್ತರ ದಶಕದಲ್ಲಿ. ಕನ್ನಡ ಕಾದಂಬರಿ ಪರಂಪರೆಯಲ್ಲಿ 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮರಳಿ ಮಣ್ಣಿಗೆ', 'ಗ್ರಾಮಾಯಣ', 'ನಿಸರ್ಗ', 'ಮಲೆಗಳಲ್ಲಿ ಮದುಮಗಳು', 'ಗಂಗವ್ವ ಗಂಗಾಮಾಯಿ' ಮುಂತಾದ ಮಹತ್ವದ ಕಾದಂಬರಿಗಳು ಸೃಷ್ಟಿಯಾಗಿದ್ದವು. 'ಸಂಸ್ಕಾರ', 'ಮುಕ್ತಿ', 'ಶಿಕಾರಿ', 'ಸ್ಥಿತಿಗತಿ', 'ಕಾಡು' ಮುಂತಾದ ಕಾದಂಬರಿಗಳು ಬಂದು ಈ ಪರಂಪರೆಗೆ ಹೊಸ ಆಯಾಮವನ್ನು ನೀಡಿದ್ದವು. ಈ ಶತಮಾನದ ಪ್ರಾರಂಭದ ಹೊತ್ತಿನಲ್ಲಿ ಪಾಶ್ಚಾತ್ಯರ ಪ್ರಭಾವ-ಪ್ರೇರಣೆಯಿಂದ ಕನ್ನಡದಲ್ಲಿ ಈ ಪ್ರಕಾರವು ಜೀವ ಪಡೆದು ಮಹತ್ವದ ಸಾಧನೆಯನ್ನು ಅರವತ್ತರ ದಶಕದ ಹೊತ್ತಿಗೇ ಮಾಡಿತ್ತು. ಇಪ್ಪತ್ತನೆಯ ಶತಮಾನದಲ್ಲಿ ಸಮಾಜದಲ್ಲಿ ಆದ ಬದಲಾವಣೆಗಳು, ಮನುಷ್ಯನ ತಲ್ಲಣಗಳು ಕಾದಂಬರಿಗಳಲ್ಲಿ ವ್ಯಕ್ತವಾಗತೊಡಗಿದವು. ಸಾಮಾನ್ಯ ಮನುಷ್ಯನ ಬದುಕಿನ ವಾಸ್ತವತೆಯನ್ನು ಹಿಡಿದು ಕಾಣಿಸಲೆಂದೇ ಹುಟ್ಟಿಕೊಂಡ ಕಾದಂಬರಿ ಮಾಧ್ಯಮ ಇದುವರೆಗೆ ಅನೇಕ ತಿರುವುಗಳನ್ನು ಪಡೆಯುತ್ತ ನಡೆದು ಬಂದಿದೆ.

ಕನ್ನಡ ಕಾದಂಬರಿ ಪರಂಪರೆಯನ್ನು ಗಮನಿಸಿದರೆ ಅದು ಪ್ರಾದೇಶಿಕ ವೈಶಿಷ್ಟ್ಯವನ್ನು ದಾಖಲಿಸುತ್ತ ನಡೆದಿದೆ. ಪ್ರಾರಂಭದ ಕಾದಂಬರಿಗಳಲ್ಲಿ ಪ್ರಾದೇಶಿಕವಾಗಿ ಭಿನ್ನ ಜೀವನಕ್ರಮ, ಸಂಪ್ರದಾಯ-ನಂಬಿಕೆಗಳು, ಪ್ರಾಕೃತಿಕ ಪರಿಸರ, ಭಾಷೆ, ಸಾಂಸ್ಕೃತಿಕ ಅನನ್ಯತೆಗಳು ದಾಖಲಾಗಿ ವೈವಿಧ್ಯಮಯ ಬದುಕು ಅನಾವರಣಗೊಂಡವು. ಮಲೆನಾಡಿನ ಬದುಕನ್ನು ಕುವೆಂಪು ಕಾದಂಬರಿಗಳು, ಕಡಲ ಪರಿಸರದ ಬದುಕನ್ನು ಕಾರಂತರ ಕಾದಂಬರಿಗಳು, ಉತ್ತರ ಕರ್ನಾಟಕದ ಬದುಕನ್ನು ರಾವ್ ಬಹದ್ದೂರ್, ಮಿರ್ಜಿ ಅಣ್ಣಾರಾಯ, ಶಂಕರ ಮೊಕಾಶಿ ಪುಣೇಕರ್ ಮುಂತಾದವರ ಕಾದಂಬರಿಗಳು ಹಿಡಿದಿಟ್ಟಿವೆ. ಅದರಂತೆ ಹೈದರಾಬಾದ್ ಕರ್ನಾಟಕದ ಸಾಂಸ್ಕೃತಿಕ ಬದುಕನ್ನು ಇಡಿಯಾಗಿ ಬಿಂಬಿಸುವ ಕಾದಂಬರಿಗಳು ಸ್ವಾತಂತ್ರ್ಯಪೂರ್ವದಲ್ಲಿ ಸಾಮಾಜಿಕ ರಾಜಕೀಯ ಕಾರಣಗಳಿಂದ ಹುಟ್ಟಿಕೊಳ್ಳಲಿಲ್ಲ. ಅರವತ್ತರ ದಶಕದಲ್ಲಿ ಹುಟ್ಟಿಕೊಂಡ 'ಬೆಳ್ಳ', 'ಯಾತನಾ ಶಿಬಿರ' 'ಹಾಲುಚೇನು' 'ಸುಳಿಗಾಳಿ' 'ಗೋಹರಜಾನ್ ಮಾಲತಿ ಮತ್ತು ನಾನು', 'ಸಣ್ಣ ಗೌಡಸಾನಿ', 'ಕುರುಮಯ್ಯ ಮತ್ತು ಅಂಕುಶದೊಡ್ಡಿ', 'ಗತಿ', ಹಾಗೂ ಗೀತಾ ನಾಗಭೂಷಣ ಅವರ ಕಾದಂಬರಿಗಳು ಸ್ವಾತಂತ್ರ್ಯಪೂರ್ವದ ಈ ಭಾಗದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ತಲ್ಲಣಗಳನ್ನು ಬಿಂಬಿಸಲು ಪ್ರಯತ್ನಿಸಿವೆ. ಸಾಮಾಜಿಕ ಸಂದರ್ಭದ ವಸ್ತುಸ್ಥಿತಿಯ ಚಿತ್ರಗಳು ಈ ಕಾದಂಬರಿಯಲ್ಲಿ ಮರುಸೃಷ್ಟಿ ಪಡೆದಿವೆ. ಕುತೂಹಲವೆಂದರೆ ಗ್ರಾಮಾಂತರ ಪ್ರದೇಶಗಳ ಸಾಂಸ್ಕೃತಿಕ ಏಳುಬೀಳಿನ ಬದುಕನ್ನು ಕಾಣಿಸುವ ಕಾದಂಬರಿಗಳು ಮಾತ್ರ ಇದುವರೆಗೂ ಸೃಷ್ಟಿಯಾಗುತ್ತಿವೆಯೇ ಹೊರತು ನಗರ ಪ್ರದೇಶದ ಬದುಕಿನ ವಿವರಗಳನ್ನು ಕಾಣಿಸುವ, 'ಆಧುನಿಕ' ಬದುಕಿನ ತಲ್ಲಣಗಳನ್ನು ಕಟ್ಟಿಕೊಡುವ ಕಾದಂಬರಿಗಳು ಹುಟ್ಟಿಕೊಳ್ಳುತ್ತಿಲ್ಲ. ಈ ಮಾತು ಸಣ್ಣ ಕಥೆಗಳ ವಿಷಯದಲ್ಲಿಯೂ ನಿಜ. ಈ ಶತಮಾನದ ಪ್ರಾರಂಭದ ಹೊತ್ತಿನಲ್ಲಿ ಸೃಷ್ಟಿಯಾದ ಪ್ರಾದೇಶಿಕ ವೈಶಿಷ್ಟ್ಯವನ್ನು ಮುಂದುಮಾಡಿ ದಾಖಲಿಸುವ ಕಾದಂಬರಿಗಳು ಈ ಭಾಗದವರಿಗೆ ತಡವಾಗಿ ಪ್ರೇರೇಪಿಸಿರುವುದರಿಂದಲೂ, ಸ್ವಾತಂತ್ರ್ಯಪೂರ್ವದಲ್ಲಿ ಬರೆಯುವ ಒತ್ತಡವನ್ನು ಸೃಷ್ಟಿಸಿಕೊಳ್ಳದೇ ಇರುವುದರಿಂದಲೂ, ಅರವತ್ತರ ದಶಕದಲ್ಲಿ ಬರೆಯಲು ತೊಡಗಿದ ಲೇಖಕರಿಗೆ ಸಹಜವಾಗಿ ತಮ್ಮ ಪ್ರಾದೇಶಿಕ ಅನನ್ಯತೆಯನ್ನು ಸೃಷ್ಟಿಸಲು ಪ್ರೇರಕವಾಗಿರಬೇಕು. ಈ ಸಂದಿಗ್ಧತೆಯಲ್ಲಿಯೇ ನವ್ಯ ಸಾಹಿತ್ಯ ಚಳುವಳಿ ಬಂದು ಹೋದದ್ದು ಈ ಭಾಗದವರ ಗಮನಕ್ಕೆ ಬರಲಿಲ್ಲ. ಬಂದರೂ ನವ್ಯ ಸಾಹಿತ್ಯದ ಧೋರಣೆಗಳು ಈ ಭಾಗದ ಲೇಖಕರಿಗೆ ಅಪರಿಚಿತವಾಗಿದ್ದವು. ಆಧುನಿಕ ಬದುಕಿನ ಆತಂಕಗಳು, ವ್ಯಕ್ತಿಗಳ ಅನಾಥಪ್ರಜ್ಞೆ ಮುಂತಾದ ಪರಿಸರವೇ ಈ ಭಾಗದ ಬರಹಗಾರರಿಗೆ ದಕ್ಕಲಿಲ್ಲ. ದಕ್ಕಿಸಿಕೊಳ್ಳಲು ನೋಡಿದವರಿಗೆ ಅದರ ಲಯವೇ ಸಿಗಲಿಲ್ಲ.

ಹೀಗಾಗಿ (ಚಂದ್ರಕಾಂತ ಕುಸನೂರು ಅವರು 'ಚರ್ಚ್‌ಗೇಟ್' ಅಪವಾದ ಎಂಬಂತೆ ನವ್ಯ ಕಾದಂಬರಿ ಬರೆದಿದ್ದಾರೆ.) ಸ್ವಾತಂತ್ರ್ಯಪೂರ್ವ ಕಾದಂಬರಿಗಳ ಆಶಯಗಳ ಇನ್ನೊಂದು ರೂಪದಂತೆ ಕಾಣುವ ಬಂಡಾಯ ಸಾಹಿತ್ಯ ಚಳುವಳಿಯ ಕಾಲದಲ್ಲಿ ಹುಟ್ಟಿಕೊಂಡ ಧೋರಣೆಗಳು ಪುನಃ ಈ ಭಾಗದ ಲೇಖಕರಿಗೆ ಬರೆಯುವ ಒತ್ತಡಗಳನ್ನು ನಿರ್ಮಾಣ ಮಾಡಿದವು. ಪ್ರಾದೇಶಿಕ ಅನನ್ಯತೆಯನ್ನು ಕಟ್ಟಿಕೊಡುವ ಕಾದಂಬರಿಗಳ ಸೃಷ್ಟಿ ಅರವತ್ತರ ದಶಕದ ಹೊತ್ತಿಗೆ ಮುಗಿದು ಹೋಗಿ, ನವ್ಯ ಸಾಹಿತ್ಯ ಚಳುವಳಿಯ ಪ್ರೇರಣೆಯಿಂದ ಹುಟ್ಟಿಕೊಂಡ ನವ್ಯ ಕಾದಂಬರಿಗಳ ಅಬ್ಬರದ ಹೊತ್ತಿನಲ್ಲಿ ಈ ಭಾಗದ ಬರಹಗಾರರಿಗೆ, ಮುಗಿದು ಹೋದಂತೆ ಕಾಣಿಸುತ್ತಿದ್ದ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಹೊತ್ತ ಕಾದಂಬರಿಗಳ ಮಾದರಿಯಲ್ಲಿ ಬರೆಯಲೂ ಅನುಮಾನ ಪಟ್ಟಂತೆ ಕಾಣುತ್ತದೆ. ನವ್ಯ ಕಾದಂಬರಿಗಳಂತೆ ಬರೆಯಲು ಆ ಪ್ರಜ್ಞೆಯ ಅನುಭವದ ಕೊರತೆ. ಇಂಥ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದವರಲ್ಲಿ ಶಾಂತರಸ ಮತ್ತು ಜಂಬಣ್ಣ ಅಮರಚಿಂತರು ಮುಖ್ಯರು. ಅರವತ್ತರ ದಶಕದಲ್ಲಿ ಸ್ಥಳೀಯ ಬದುಕಿನ ವಿವರಗಳನ್ನು ಬಿಂಬಿಸುವ 'ಸಣ್ಣಗೌಡಸಾನಿ' ಎಂಬ ದೊಡ್ಡ ಕಾದಂಬರಿಯನ್ನು ಬರೆದರೂ ಪ್ರಕಟಿಸಲು ಹಿಂಜರಿಕೆ. ಈ ಹಿಂಜರಿಕೆಗೆ ಅದರ ಪ್ರಸ್ತುತತೆಯ ಪ್ರಶ್ನೆ ಒಂದು ಕಡೆಯಾದರೆ, ಇನ್ನೊಂದು ಪ್ರಕಾಶಕರ ಕೊರತೆ. ಅದರಂತೆ ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯನ್ನು ಎಪ್ಪತ್ತರ ದಶಕದಲ್ಲಿ ದೊಡ್ಡದಾಗಿ ಬರೆದಿದ್ದರು. ಅದು ಪ್ರಾದೇಶಿಕ ಅನನ್ಯತೆಯ ವಿವರಗಳಿಗಿಂತ ಬುಡಕಟ್ಟು ಜನಾಂಗದವರಾದ ಕೊರವರ ಬದುಕಿನ ಕ್ರಮ, ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಬರೆದಿದ್ದರೂ ಪ್ರಕಟವಾಗಲಿಲ್ಲ. ಇದಕ್ಕೂ 'ಸಣ್ಣ ಗೌಡಸಾನಿ' ಕಾದಂಬರಿಯ ಪ್ರಕಟಣೆಗೆ ಇದ್ದ ಹಿಂಜರಿಕೆಯೇ ಕಾರಣವಾಗಿರಬಹುದು. ದುರಂತವೆಂದರೆ ಅವು ಸೃಷ್ಟಿಯಾದ ಅವಧಿಯಲ್ಲೇ ಪ್ರಕಟವಾಗಿದ್ದರೆ ಮಹತ್ವದ ಕಾದಂಬರಿಗಳ ಸಾಲಿನಲ್ಲಿ ಚರ್ಚೆಯಾಗುತ್ತಿದ್ದವು. ಆದರೆ ಅನೇಕ ಕಾರಣಗಳಿಂದ ಒಂದೂವರೆ ಎರಡು ದಶಕಗಳ ಮೇಲೆ ಪ್ರಕಟವಾದವು. ಅದು ಮೂಲದ ಗಾತ್ರವನ್ನು ಕಳೆದುಕೊಂಡು ಸಂಕ್ಷಿಪ್ತ ರೂಪದಲ್ಲಿ ಪ್ರಕಟವಾದವು. ೧೯೮೮ರಲ್ಲಿ 'ಸಣ್ಣಗೌಡಸಾನಿ'ಯು ೧೯೯೪ರಲ್ಲಿ 'ಕುರುಮಯ್ಯ ಮತ್ತು ಅಂಕುಶದೊಡ್ಡಿ'ಯು ಹೊರಬಂದವು. ಇದು ಈ ಭಾಗದ ಸಾಹಿತ್ಯ ಪರಿಸರದಲ್ಲಿ ಜರುಗಿದ ವಾಸ್ತವ ಸಂಗತಿ.

ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯೋತ್ತರದಲ್ಲಿ ಕಾದಂಬರಿಗಳು ಹುಟ್ಟಿಕೊಳ್ಳಲು ಶುರುವಾದರೂ ಪ್ರಾರಂಭದಲ್ಲಿ ಚರಿತ್ರೆಗೆ ಸಂಬಂಧಿಸಿದ ಕಾದಂಬರಿಗಳು ಬಂದವು. ಈ ಭಾಗದಲ್ಲಿ ಪ್ರಭಾವ ಬೀರಿದ ಶರಣರ ಚರಿತ್ರೆಗೆ ಸಂಬಂಧಿಸಿದ ವಿಷಯವೇ ವಸ್ತು. ಶರಣರ ಪವಾಡಸದೃಶ ವ್ಯಕ್ತಿತ್ವದ ವೈಭವೀಕರಣ, ಭಕ್ತಿ-ಭಾವುಕತೆಯಿಂದ ಕೂಡಿದ 'ಮದಗಜ ಮಲ್ಲ' 'ಕುಂತಲೇಶ್ವರ' 'ಜಯಗೋದಾವರಿ' 'ಕೂಗುತ್ತಿವೆ ಕಲ್ಲು' 'ಚೆಲ್ವ ಕೋಗಿಲೆ' 'ತ್ರಿಭುವನ ಮಲ್ಲ' ಮುಂತಾದ ಕಾದಂಬರಿಗಳು ಸೃಷ್ಟಿಯಾದವು. ಇಪ್ಪತ್ತನೆಯ ಶತಮಾನದಲ್ಲಿ ಈ ಭಾಗದಲ್ಲಿ ಬರೆಯಬಲ್ಲ ಪ್ರತಿಭೆಯನ್ನು ಹೊಂದಿದ್ದ ಸಿದ್ದಯ್ಯ ಪುರಾಣಿಕರು 'ತ್ರಿಭುವನಮಲ್ಲ' ಎಂಬ ಐತಿಹಾಸಿಕ ಕಾದಂಬರಿಯನ್ನೂ ವಚನಗಳನ್ನು ಬರೆದರೇ ಹೊರತು ಕುವೆಂಪು, ಕಾರಂತ, ರಾವ್ ಬಹಾದ್ದೂರ್ ಅವರ ಸರೀಕರಾಗಿ ಕೈಗೂಡಿಸಲಿಲ್ಲ. 'ತ್ರಿಭುವನಮಲ್ಲ' 'ವಚನೋದ್ಯಾನ' 'ವಚನ ಚಂದನ' ಕೃತಿಗಳ ಪ್ರಸ್ತುತತೆಯ ಪ್ರಶ್ನೆ ಅವರಿಗೆ ಏಳಲಿಲ್ಲ ಅನಿಸುತ್ತದೆ.

ಚಂದ್ರಕಾಂತ ಕುಸನೂರು ಅವರು ನವ್ಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಅಸಂಗತ ನಾಟಕ, ನವ್ಯ ಕಾವ್ಯ, ಹಯಕುಗಳನ್ನು ಬರೆದು ತಮ್ಮನ್ನು ಗುರುತಿಸಿಕೊಂಡರು. ಇದುವರೆಗೂ ಅವರ ಹೆಸರು ನವ್ಯ ಸಾಹಿತ್ಯ ಚಳುವಳಿಯ ಕಾಲದಲ್ಲಿ ಮಾಡಿದ ಪ್ರಯೋಗಗಳ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ. ಆದರೆ ಅವರು ಕಥೆಗಳನ್ನು, ಕಾದಂಬರಿಗಳನ್ನು ('ಚರ್ಚ್‌ಗೇಟ್' ಹೊರತುಪಡಿಸಿ) ವಾಸ್ತವ ಮಾರ್ಗದಲ್ಲಿ ಬರೆದಿದ್ದಾರೆ. ಅವರ ನವ್ಯ ಮಾದರಿಯ ಬರವಣಿಗೆಯನ್ನು ಹೊರತುಪಡಿಸಿದರೆ ಈ ಶತಮಾನದ ಮೊದಲರ್ಧ

ಭಾಗದಲ್ಲಿ ನಡೆದ ರಾಜಕೀಯ ಸ್ಥಿತ್ಯಂತರಗಳಿಂದ ಉದ್ಭವಿಸಿದ ಸಾಮಾಜಿಕ ಬಿಕ್ಕಟ್ಟುಗಳನ್ನು ತೋರಿಸುವ ಫಿಕ್ಷನ್ ಬರೆದಿದ್ದಾರೆ ಎಂಬುದು ಗೊತ್ತಾಗುತ್ತದೆ. **'ಯಾತನಾ ಶಿಬಿರ'** ಕಾದಂಬರಿಯಲ್ಲಿ ಚಂದನಕೇರಿ ಎಂಬ ಹಳ್ಳಿಯನ್ನು, **'ಗೋಹರಜಾನ್ ಮಾಲತಿ ಮತ್ತು ನಾನು'** ಕಾದಂಬರಿಯಲ್ಲಿ ಕಲಬುರ್ಗಿ ಮತ್ತು ಅದರ ಸುತ್ತ ಮುತ್ತಲಿನ ಹತ್ತಾರು ಹಳ್ಳಿಗಳನ್ನು ಕೇಂದ್ರವಾಗಿಟ್ಟುಕೊಳ್ಳಲಾಗಿದೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದ ಸಾಮಾಜಿಕ ಸಂದರ್ಭದಲ್ಲಿ ಕಾಣಿಸಿಕೊಂಡ ಸ್ವಾತಂತ್ರ್ಯ ಹೋರಾಟ, ರಜಾಕಾರರ ದಾಳಿ, ನಿಜಾಂ ಆಡಳಿತದ ವ್ಯವಸ್ಥೆ, ಕ್ಷಾಮ, ಬರಗಾಲ, ಜಾತಿ ಗಲಭೆಗಳು ಮುಂತಾದ ಘಟನೆಗಳು, ಜನಸಮುದಾಯಗಳ ಮೇಲೆ ಮಾಡಿದ ಪರಿಣಾಮಗಳನ್ನು, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಪರಿಸರದಲ್ಲಿ ಉಂಟಾದ ಬದಲಾವಣೆಗಳನ್ನು ಈ ಎರಡು ಕಾದಂಬರಿಗಳಲ್ಲಿ ಕುಸುನೂರರು ಚಿತ್ರಿಸಿದ್ದಾರೆ.

ಬರಗಾಲಕ್ಕೆ ಸಿಕ್ಕ ಊರಿನ ಕಥೆ

'ಯಾತನಾ ಶಿಬಿರ' ಕಾದಂಬರಿಯಲ್ಲಿ ಒಂದು ಪ್ರಸಂಗ ಬರುತ್ತದೆ: ಕೆಳವರ್ಗದ ರಂಗಪ್ಪ ಅಸ್ಪೃಶ್ಯತಾ ನಿವಾರಣೆಯನ್ನು ಕುರಿತ ಒಂದು ಸಮಾರಂಭಕ್ಕೆ ಊರಿನ ಪ್ರತಿಷ್ಠಿತ ವ್ಯಕ್ತಿಗಳಾದ ಬಸವಂತಗೌಡ ಮತ್ತು ಕೃಷ್ಣಾ ಎಂಬ ದೀಕ್ಷಿತ ಇಬ್ಬರನ್ನು ಆಹ್ವಾನಿಸುತ್ತಾನೆ. ಈ ಶತಮಾನದಲ್ಲಿ ಪುನಃ ಗಾಂಧೀಜಿಯಂಥ ರಾಷ್ಟ್ರನಾಯಕರಿಂದ ನಡೆದ ಹರಿಜನೋದ್ಧಾರದ ಪ್ರಯತ್ನಗಳು ಚಂದನಕೇರಿಯ ದಲಿತ ರಂಗಪ್ಪನಲ್ಲಿ ಹೊಸ ಚಿಂತನೆಗೆ ಕಾರಣವಾಗಿದ್ದವು. ಅದಕ್ಕಾಗಿ ಇಂಥ ಪ್ರಯತ್ನಗಳಲ್ಲಿ ಊರಿನ ಮೇಲ್ವರ್ಗದ ಪ್ರಮುಖರನ್ನು ಒಳಗೊಳ್ಳುವಂತೆ ಮಾಡುವುದು ರಂಗಪ್ಪನ ಉದ್ದೇಶವಾಗಿತ್ತು. ಸ್ವಾತಂತ್ರ್ಯೋತ್ತರದ ದಿನಗಳಲ್ಲಿ ದಲಿತರಿಗೆ ಸಿಗುವ ಮಾನ್ಯತೆಯ ಪ್ರತೀಕವಾಗಿ ತಿಮ್ಮಪ್ಪ ಕಲಬುರ್ಗಿ ಪ್ರದೇಶದಲ್ಲಿ ಹರಿಜನರ ಮುಖಂಡನಾಗಿದ್ದರಿಂದ ಅವನೂ ಸಮಾರಂಭಕ್ಕೆ ಬಂದಿರುತ್ತಾನೆ. ಸಮಾರಂಭವು ದ್ಯಾವಮ್ಮನ(ಕೇರಿ) ಗುಡಿಯಲ್ಲಿ ಜರುಗುತ್ತದೆ. ಬಹುಕಾಲದಿಂದ ಊರ ಹೊರಗೆ ಬದುಕುತ್ತ, ಮೇಲ್ವರ್ಗದವರ ತುಳಿತಕ್ಕೆ ಸಿಕ್ಕು ನೊಂದಿರುವ ದಲಿತರು ಇನ್ನು ಮುಂದೆ ಸಮಾಜದಲ್ಲಿ ಸಮಾನ ಸ್ಥಾನಮಾನ ಹೊಂದಬೇಕಾಗಿದೆ. ಇದಕ್ಕೆ ಮೇಲ್ವರ್ಗದವರ ಪ್ರೀತಿ, ಸರಕಾರದ ಬೆಂಬಲ ಸಿಗಬೇಕು. ದಲಿತರು ಪ್ರಗತಿಪಥದಲ್ಲಿ ಸಾಗುವಂತಾಗಬೇಕು ಎಂಬ ಚರ್ಚೆ ಆ ಸಮಾರಂಭದಲ್ಲಿ ನಡೆಯುತ್ತದೆ. ಗೌಡ, ದೀಕ್ಷಿತ ಇಬ್ಬರೂ ಇಂಥ ಬದಲಾವಣೆಗಳನ್ನು ಮೆಚ್ಚಿಕೊಂಡು ತಲೆದೂಗುತ್ತಾರೆ. ಸಮಾರಂಭದ ನಂತರ ದಲಿತರು ಆಹ್ವಾನಿತರಿಗೆ ಫಲಹಾರ ಕೊಡುತ್ತಾರೆ. ಗೌಡರಿಗೆ ಆತಂಕ ಶುರುವಾಗುತ್ತದೆ. ದೀಕ್ಷಿತರೂ ಅದರಿಂದ ತಪ್ಪಿಸಿಕೊಳ್ಳದೆ ಅನಿವಾರ್ಯವಾಗಿ ಸ್ವೀಕರಿಸುವ ಶಾಸ್ತ್ರ ಮಾಡಿ ಪಾರಾಗುತ್ತಾರೆ. ದ್ಯಾವಮ್ಮನ ಕೇರಿಯಿಂದ ಬರುವಾಗ ಗೌಡರಿಗೆ ಸಂಕಟ ಹೆಚ್ಚಾಗುತ್ತದೆ. ಊರಲ್ಲಿ ಈ ಸುದ್ದಿ ಯಾರಿಗೂ ಗೊತ್ತಾಗಬಾರದು. ಹರಿಜನರು ಕೊಟ್ಟ ಫಲಹಾರ ಗೌಡರು ತಿಂದರೆಂಬುದು ಗೊತ್ತಾದರೆ ತನ್ನ ಪ್ರತಿಷ್ಠೆಗೆ ಕುಂದು ಬರುತ್ತದೆಂದು ದೀಕ್ಷಿತನಲ್ಲಿ ತೋಡಿಕೊಳ್ಳುತ್ತಾನೆ. ಆಶ್ಚರ್ಯ, ಕುತೂಹಲವೆಂಬಂತೆ, 'ಗೌಡ್ರ ಈ ಹಳೆ ವಿಚಾರ ನಾವು ಈಗ ಬಿಟ್ಟುಬಿಡಬೇಕು. ಹರಿಜನರೂ ನಮ್ಮಂಥ ಮನುಷ್ಯರೇ. ನಾವು ಇಷ್ಟು ದಿನ ಅವರ ಮೇಲೆ ಬಹಳ ಅತ್ಯಾಚಾರ ಮಾಡಿದ್ದೇವೆ. ಈಗ ಅವರು ಜಾಗ್ರತಗೊಂಡಿದ್ದಾರೆ. ನಾವೂ ಜಾಗ್ರತರಾಗಬೇಕು. ಆ ಜನರನ್ನು ನಾವು ನಮ್ಮವರನ್ನಾಗಿಸಿಕೊಳ್ಳಬೇಕು' (ಪು.೪೧) ಎನ್ನುತ್ತಾನೆ.

ದೀಕ್ಷಿತ ಪರಿವರ್ತನೆಯ ದಾರಿ ಹಿಡಿಯುತ್ತಾನೆ. ಆದರೆ ಗೌಡ ದ್ವಂದ್ವದಲ್ಲಿ ಬೀಳುತ್ತಾನೆ. ಊರ ಹೊರಗಿದ್ದ ತನ್ನ ಜೀತದಾಳುಗಳಾಗಿ ದುಡಿಯುವ ಮಾದಿಗರನ್ನು ತನ್ನ ಸಮಾನರೆಂದು ಒಪ್ಪಿಕೊಳ್ಳುವುದಕ್ಕೆ ವ್ಯಕ್ತಿಗತವಾಗಿ ಆತನ ಸಂಸ್ಕಾರದ ಕಾರಣದಿಂದ ಒಪ್ಪಿಕೊಳ್ಳಲಾಗುವುದಿಲ್ಲ. ಊರಲ್ಲಿ ಇನ್ನಿತರ ಹರಿಜನೇತರರಲ್ಲಿ ತನ್ನ ಪ್ರತಿಷ್ಠೆಯ ಪ್ರಶ್ನೆ ಎದ್ದು ಕಾಡುತ್ತದೆ. ಪರಿವರ್ತನೆ ಗೌಡನಲ್ಲಿ ಮಾತ್ರವಲ್ಲ ಊರೇ ಪರಿವರ್ತನೆಗೆ ಸಿದ್ಧವಾಗಬೇಕಾಗುತ್ತದೆ. ಇದು ಸಾಧ್ಯವೇ? ಇದು ಸ್ವಾತಂತ್ರ್ಯ ಪೂರ್ವಕಾಲದ ಸಾಮಾಜಿಕ

ಸಂದರ್ಭದಲ್ಲಿ ಉಂಟಾದ ಬಿಕ್ಕಟ್ಟು. ಪೂಜ್ಯನಾದ ಗಾಂಧೀಜಿ ಅಂಥ ವ್ಯಕ್ತಿಯೇ ದಲಿತರ ಉದ್ಧಾರಕ್ಕಾಗಿ ನಿಂತಿರುವ ಸಂದರ್ಭದಲ್ಲಿ ಗಾಂಧೀಜಿ ಭಕ್ತನಾದ ಊರ ಗೌಡನಂಥವರು? ಇಂಥದ್ದನ್ನು ಸ್ವೀಕರಿಸುವ, ತಿರಸ್ಕರಿಸುವ ದ್ವಂದ್ವದಲ್ಲಿ ಬೀಳುವುದು ಸಹಜವೆ. ವಾಸ್ತವ ಸಂಗತಿಯೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿ ಅವರಂಥ ರಾಷ್ಟ್ರನಾಯಕರ ಮೇಲಿರುವ ಪೂಜ್ಯಭಾವನೆ, ತಾತ್ವಿಕ ಭಾವನೆಗಳು ನಂಬಿಕೆಗಳು ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಬಹುಬೇಗನೆ ಮಾಯವಾಗುತ್ತವೆ. 'ರಾಜಕೀಯ' ಇಂಥ ಸಂದರ್ಭವನ್ನು ಹುಟ್ಟುಹಾಕುತ್ತದೆ. ಸಮಯ ಸಾಧಕತನ, ಸ್ವಾರ್ಥ, ಅಧಿಕಾರದ ದಾಹ ಮುಂತಾದ ಗುಣಗಳು ಮನುಷ್ಯನಲ್ಲಿ ಬಹುಬೇಗ ಬೆಳೆದು ಸಮಾಜದ ಅಧಃಪತನಕ್ಕೆ ಕಾರಣವಾಗುತ್ತವೆ. ಇದರಿಂದಾಗಿಯೇ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿ ಅವರಂಥ ಚೇತನಗಳ ತಾತ್ವಿಕ ಶಕ್ತಿ ಕಾರ್ಯಗತವಾಗುವುದಿಲ್ಲ. ಇಂದಿನವರೆಗೆ ಇದು ಹಾಗೆ ಮುಂದುವರೆದಿದೆ. ಚಂದನಕೇರಿಯ ಬಸವಂತಗೌಡನ ಸ್ಥಿತಿ ಇದಕ್ಕೆ ಹೊರತಾಗಿಲ್ಲ. ಜಾತಿ ನಿರ್ಮೂಲನಾ ಪ್ರಯತ್ನಗಳನ್ನು ಮಾಡಿದ ಬುದ್ಧ, ಶರಣರು, ದಾಸರು, ಅಂಬೇಡ್ಕರ್, ಗಾಂಧೀಜಿ, ಮುಂತಾದವರ ಸಾಧನೆ ಸಣ್ಣದಲ್ಲ ಎಂಬುದು ಸತ್ಯ. ಇಂಥ ಪ್ರಯತ್ನಗಳಿಗೆ ವ್ಯಕ್ತಿ ಶಕ್ತಿಯ ಜೊತೆಗೆ 'ರಾಜಕೀಯ ಶಕ್ತಿ' ಬೇಕಾಗುತ್ತದೆ. ಆದರೆ ಕಾಲದ ಉದ್ದಕ್ಕೂ ಇಂಥ ಪ್ರಯತ್ನಗಳಿಗೆ ರಾಜಕೀಯ ಶಕ್ತಿ ಸಂಪೂರ್ಣವಾಗಿ ಬೆಂಬಲಿಸಿಲ್ಲ ಎಂದೇ ಹೇಳಬೇಕಾಗುತ್ತದೆ. ರಾಜಕೀಯ ಇಚ್ಛಾಶಕ್ತಿ ಇದ್ದರೂ ಬಳಸಲು ನಿರಾಕರಿಸುವ ಬಸವಂತಗೌಡನಂಥವರೂ ಬರೀ ವ್ಯಕ್ತಿಶಕ್ತಿಯನ್ನೇ ನಂಬಿಕೊಂಡ ದೀಕ್ಷಿತನಂಥವರೂ ಒಂದೇ ಬಯಲಿನಲ್ಲಿ ಬದುಕುತ್ತಿದ್ದಾರೆ. ದೀಕ್ಷಿತನಂಥವರು ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿ ಪರಂಪರೆಯ ಪಳಿಯುಳಿಕೆಯಂತೆ ಕಾಣುತ್ತಾರೆ. ಬಸವಂತಗೌಡ ಎಂದಿನಂತೆ ಊರಲ್ಲಿ ತನ್ನ ದರ್ಬಾರದೊಂದಿಗೆ ಮುಂದುವರೆಯುತ್ತಾನೆ. ದೀಕ್ಷಿತ ಪರಿವರ್ತನೆಯಾಗುತ್ತ ತನ್ನ ಬ್ರಾಹ್ಮಣಿಕೆಯನ್ನು ಪ್ರಶ್ನಿಸಿ, ದಾಸರಂತೆ ಸರಳವಾಗುತ್ತ ನಡೆದು, ಸಂಪ್ರದಾಯವಾದಿಗಳಾದ ಮನೆಮಂದಿಗೂ, ಹೆಂಡತಿ ಕುಸುಮಳಿಗೂ ಸಂಕಟಕ್ಕೀಡುಮಾಡುತ್ತಾನೆ. ಅವರ ಸಂಕಟ, ಸಿಟ್ಟು, ಅವನ ದಾರಿಯನ್ನು ತಡೆಯುವುದಿಲ್ಲ. ಹೆಂಡತಿಗೆ ಇದರಿಂದ ಸಂಕಷ್ಟಗಳು ಬಂದರೂ ದೀಕ್ಷಿತ ಲೆಕ್ಕಿಸುವುದಿಲ್ಲ. ಊರಿಗೆ ಕ್ಷಾಮ, ಬರಗಾಲ ಬಂದು, ಊರೇ ರೋಗ, ಹಸಿವಿನಿಂದ ನರಳತೊಡಗುತ್ತದೆ. ಅಂಥ ಸಂದರ್ಭದಲ್ಲಿ ಹರಿಜನರ ರಂಗಪ್ಪನನ್ನು ದೀಕ್ಷಿತ ಮನೆಗೆ ಕರೆದು, ತನ್ನ ಅಡಿಗೆ ಮನೆಯಲ್ಲಿ ಕೂಡಿಸಿಕೊಂಡು, ಕುಸುಮಳಿಂದಲೇ ಊಟಕ್ಕೆ ನೀಡಿಸಿ ಉಪಚರಿಸಿ ಕಳಿಸುತ್ತಾನೆ. ಹೈದರಾಬಾದ್ ಕರ್ನಾಟಕ ಪ್ರದೇಶದ ತುಂಬ ಬಾಳಿದ ದಾಸರ ಪ್ರಭಾವದಿಂದ ದೀಕ್ಷಿತರಲ್ಲಿ ಪರಿವರ್ತನೆ ಮೂಡಿತು ಎಂಬುದನ್ನು ನಿರಾಕರಿಸುವಂತಿಲ್ಲ. ದೀಕ್ಷಿತ ತನ್ನ ಜಾತಿ ಸಂಬಂಧಿ ಸಂಪ್ರದಾಯಗಳನ್ನು ಬಿಟ್ಟು ಯಾವಾಗಲೂ ದಾಸರ ಹಾಡುಗಳನ್ನು ಗುನುಗುತ್ತಲೇ ಕಾಲ ಕಳೆಯುತ್ತಿರುತ್ತಾನೆ.

ಈ ಮೇಲಿನ ಮುಖ್ಯ ಸಂಗತಿಯ ಜೊತೆಗೆ ಈ ಕಾದಂಬರಿಯಲ್ಲಿ ಬರಗಾಲ ಮತ್ತು ಪ್ಲೇಗು ಬಂದು ಊರಿನ ಸಮಸ್ತ ಬದುಕು ಅಸ್ತವ್ಯಸ್ತವಾಗುತ್ತದೆ. ಹೈದರಾಬಾದ್ ಕರ್ನಾಟಕದಲ್ಲಿ ಅರವತ್ತರ ದಶಕದವರೆಗೆ ಬರಗಾಲ ಮತ್ತು ಪ್ಲೇಗು ಬಂದು ಇಡೀ ಜನಸಮುದಾಯದ ಜೀವನ ಗತಿಯನ್ನೇ ಬದಲಿಸಿ ದುರಂತದಲ್ಲಿ ಕೊನೆಗೊಳಿಸಿದೆ. ಈ ಪ್ರದೇಶದಲ್ಲಿ ಈ ಹೊತ್ತಿನವರೆಗೂ ಬರಗಾಲ, ನೀರಿನ ಬವಣೆಯಿಂದ ಜನರು ಮುಕ್ತವಾಗಿಲ್ಲ. ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುತ್ತಿರುವ 'ಆಧುನಿಕ' ಭಾರತದಲ್ಲಿ ಬರಗಾಲ, ಕ್ಷಾಮದಿಂದ ಸಮಾಜ ಬರ್ಬರಗೊಳ್ಳುವುದು ನಿಂತಿಲ್ಲ. ಇನ್ನು ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಬಂದು ಎರಗಿದ ಬರಗಾಲ, ಕ್ಷಾಮ, ಪ್ಲೇಗು ಮುಂತಾದ ಜನ ಸಮುದಾಯಗಳಿಗೆ ಮಾರಕವಾಗುವ ಘಟನೆಗಳಿಗೆ ಲೆಕ್ಕವಿಲ್ಲ. ಚಂದನಕೇರಿ ಹಳ್ಳಿಯಲ್ಲಿ ಶ್ರೀಮಂತರೇನೂ ಬಹಳ ಜನರಿರಲಿಲ್ಲ. ಬಸವಂತಗೌಡ, ದೀಕ್ಷಿತರ ಮನೆತನಗಳು ಮಾತ್ರ ಸ್ಥಿತಿವಂತವಾಗಿದ್ದವು. ಉಳಿದಂತೆ ರೈತರು, ಕೂಲಿಗಳು, ಕೆಳವರ್ಗದವರೇ ಹೆಚ್ಚು. ವರ್ಷ ವರ್ಷ ಮಳೆಯಾಗಿ ಬೆಳೆ ಬೆಳೆದರೆ ಮಾತ್ರ ಆ ವರ್ಷ ಬದುಕುವುದಕ್ಕೇ ತೊಂದರೆಪಡುವ ರೈತರಿಗೆ ಒಂದು ವರ್ಷ ಬರಬಿದ್ದರೆ ಬದುಕುವುದೇ ಅಸಾಧ್ಯವಾಗುತ್ತದೆ. ಇಂಥವರ ಸ್ಥಿತಿಯೇ ಹೀಗಾದಾಗ ದುಡಿದರೆ ಮಾತ್ರ ಆ ದಿನದ ರೊಟ್ಟಿ ಲಭ್ಯವಾಗುವ ಜನರಿಗೆ, ವಾರದ ಬರಗಾಲವನ್ನೇ ತಡೆದುಕೊಳ್ಳುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ

ವಾಸ್ತವ ಸಂಗತಿಯೆಂದರೆ ದುಡಿದು ಬದುಕುವ ಜನ ಬರಗಾಲ ಬಂತೆಂದರೆ ಹಿಂದು ಮುಂದು ನೋಡದೆ, ಊರು ಬಿಟ್ಟು ಬದುಕಲು ಗುಳೆ ಹೊರಟುಬಿಡುತ್ತಾರೆ. ಅಲ್ಪಸ್ವಲ್ಪ ಭೂಮಿ, ದನಕರುಗಳಿರುವ ರೈತರಿಗೆ ಊರು ಬಿಡಲೂ ಆಗುವುದಿಲ್ಲ. ಊರಲ್ಲಿ ಬಹಳ ದಿನವಿದ್ದು ಉಪವಾಸ ತಡೆಯುವುದು ಆಗದೆ ನರಳುತ್ತಾರೆ. ದನಗಳಿಗೆ, ಮನುಷ್ಯರಿಗೆ, ಆಹಾರ, ನೀರು ಇಲ್ಲದಿದ್ದರೆ ಎಂಥ ಭೀಕರ ಪರಿಸ್ಥಿತಿ ಎಂಬುದರ ನೈಜ ಚಿತ್ರಣ ಈ ಕಾದಂಬರಿಯಲ್ಲಿ ಮೂಡಿದೆ. ಇಂಥ ಪರಿಸ್ಥಿತಿಯಲ್ಲಿ ಬಸವಂತಗೌಡ, ದೀಕ್ಷಿತ ಜನಸಮುದಾಯವನ್ನು ಹಚ್ಚಿಕೊಂಡು ಊರುಬಿಡದಿರಲು ಪ್ರಯತ್ನಿಸುತ್ತಾರೆ. ಆದರೆ ದಿನಕ್ಕೊಂದು ಕುಟುಂಬದಂತೆ ಊರು ಬಿಟ್ಟು ನಡೆದಿರುತ್ತವೆ. ಇದ್ದವರ ಗೋಳು ಗಳಿಗೆಗೊಂದು ಎದುರಾಗುತ್ತಿರುತ್ತವೆ. ಊರು ಬಿಡುವ ಕುಟುಂಬದ ಚಿತ್ರವೊಂದು ಹೀಗಿದೆ:

'ಒಂದು ಎತ್ತಿನ ಗಾಡಿಯಲ್ಲಿ ಮುಲ್ಲಾ ಸಾಬನ ಇಡೀ ಸಂಸಾರ ಹೊರಟಿತ್ತು. ಹೆಂಗಸರು, ಮಕ್ಕಳು ಗಾಡಿಯಲ್ಲಿ ಕುಳಿತಿದ್ದರು. ಮುಲ್ಲಾಸಾಬ ಗಾಡಿಯ ಹಿಂದೆ ನಡೆಯುತ್ತಿದ್ದ. ಎತ್ತು ಸುಸ್ತಾಗಿ ನಡೆಯುತ್ತಿದ್ದವು. ಮುಲ್ಲಾಸಾಬನ ಮಗ ಗಫೂರ್ ಗಾಡಿ ಹೊಡೆಯುತ್ತಿರುವುದು ಸುಮ್ಮನೆ ನಿಮಿತ್ತ ಮಾತ್ರಕ್ಕೆ. ಯಾಕೆಂದರೆ ಗೊತ್ತು ಗುರಿ ಇಲ್ಲದೆ ಹೊರಟಿದ್ದರು. ಅವಸರ ಏನೂ ಇರಲಿಲ್ಲ. ಹೋದಾಗ ಹೋಗಲಿ ಎಂಬ ನಿರಾಸಕ್ತಿ ಭಾವದಿಂದ ಎಲ್ಲರೂ ಕುಳಿತಿದ್ದರು.' (ಪು.೧೧೧) ಬರಗಾಲ, ಪ್ಲೇಗಿನಿಂದ ಕ್ಷಣ ಕ್ಷಣಕ್ಕೆ ಮನುಷ್ಯರು, ದನಗಳು ಸಾಯುತ್ತಿದ್ದುದರಿಂದ ಉಳಿದವರ ಗೋಳು ಲೆಕ್ಕಕ್ಕೇ ಬರುತ್ತಿರಲಿಲ್ಲ. ಗೌಡರ ಮನೆಯೇ ಖಾಲಿಯಾಗಿ ಅವರೂ ಊರು ಬಿಡುವ ಸ್ಥಿತಿಗೆ ಬಂದರು. ದೀಕ್ಷಿತರು ದಾಸರ ಹಾಡು ಗುನುಗುತ್ತ ಉಳಿದವರ ಗೋಳಿನ ಜೊತೆ ಭಾಗಿಯಾಗುತ್ತಲೇ ಕೊನೆಗೆ ಹೆಂಡತಿ ಕುಸುಮಳನ್ನು ಕಳೆದುಕೊಂಡರು.

ಈ ದುರಂತ ಹುಟ್ಟಿಸುವ ಭಯಕ್ಕಿಂತ ಇನ್ನೊಂದು ವಾಸ್ತವ ಸಂಗತಿ ಈ ಕಾದಂಬರಿಯಲ್ಲಿದೆ. ಬರಗಾಲ, ಕ್ಷಾಮ ಬಂದ ಈ ವಿಷಯ ಸರಕಾರಕ್ಕೆ ವರದಿ ಹೋಗಿ ನಂತರ ಚಂದನಕೇರಿಯಲ್ಲಿ ಬರಗಾಲ ಪರಿಹಾರಕಾಮಗಾರಿಗಳು ಸುರುವಾಗುತ್ತವೆ. ಗಂಜಿ ಕೇಂದ್ರಗಳು ತೆರೆಯುತ್ತವೆ. ಆದರೆ ಸರಕಾರದಿಂದ ನಡೆಯುವ ಪರಿಹಾರ ಒದಗಿಸುವ ಸಂದರ್ಭವೇ ಸರಕಾರದ ಅಧಿಕಾರಿಗಳಿಗೆ ತಿನ್ನಲು ಅನುಕೂಲವಾಗುತ್ತದೆ. ತುತ್ತು ಅನ್ನಕ್ಕಾಗಿ ಸಾಲಾಗಿ ನಿಲ್ಲುವ ಜನರ ಮೇಲೆ ಸರಕಾರಿ ಅಧಿಕಾರಿಗಳ ದರ್ಪ-ಅಹಂಕಾರದಿಂದ ಜನರು ಬೇಸತ್ತು ಸಾವಿಗೆ ಮೊರೆಹೋಗುವಂತಾಗುತ್ತದೆ. ಭ್ರಷ್ಟ ಅಧಿಕಾರಿಗಳಿಂದ ಇಂಥ ಸಂದರ್ಭದಲ್ಲಿ ಜನರಿಗೆ ನೆರವು ದೊರೆಯುವುದಿಲ್ಲ. ದೀಕ್ಷಿತರೇ ಒಮ್ಮೆ ಅನಿವಾರ್ಯವಾಗಿ ಅನ್ನಕ್ಕೆ ಕೈ ಒಡ್ಡದೇ, ಬರಗಾಲ ಪರಿಹಾರ ಕಾಮಗಾರಿ ಕೆಲಸಕ್ಕೆ ಹೋಗಿ ನಿಲ್ಲುತ್ತಾನೆ. ನಿನಗೆ ಕೆಲಸವಿಲ್ಲವೆಂದು ಅಧಿಕಾರಿಗಳು ಹೊರದೂಡುತ್ತಾರೆ. ಆದರೆ ಹತ್ತು ಮಂದಿ ದುಡಿದಿದ್ದರೆ ಇಪ್ಪತ್ತು ಮಂದಿಯ ದುಡಿತದ ಲೆಕ್ಕ ತೋರಿಸುವ ಅಧಿಕಾರಿಗಳು ಒಂದು ಕಡೆಯಾದರೆ, ಬರಗಾಲ, ಕ್ಷಾಮ, ಪ್ಲೇಗಿನಿಂದ ಬಳಲುವ ಚಂದನಕೇರಿಗೆ ವರದಿಮಾಡಲು ಬಂದ ಪತ್ರಿಕೆ, ಟಿ.ವಿ. ಮುಂತಾದ ಸಮೂಹ ಮಾಧ್ಯಮಗಳ ಕಾರ್ಯವೈಖರಿಯೇ ಇನ್ನೊಂದು ತರ. ರೋಗದಿಂದ ಬಳಲುವ ಜನರಿಗೆ ಚಿಕಿತ್ಸೆ ಕೊಡಲು ಬಂದ ಸರ್ಕಾರಿ ವೈದ್ಯರ ಕೆಲಸದ ಪರಿ ಮತ್ತೊಂದು ತರ. ಇವರೆಲ್ಲ ಸರಕಾರಿ ಪ್ರತಿನಿಧಿಗಳಾಗಿ ತಮ್ಮ ಪ್ರಚಾರ, ಪ್ರತಿಭೆ, ಪ್ರತಿಷ್ಠೆಯನ್ನೇ ಮೆರೆದು ನಿಮಿತ್ತಕ್ಕೆ ಮಾತ್ರ ಕೆಲಸ ಮಾಡುವವರು; ಮಾಡಿದ್ದೇವೆಂದು ದಾಖಲು ಮಾಡಿಕೊಂಡು ಸಮೂಹ ಮಾಧ್ಯಮಗಳ ಮೂಲಕ ಸಮಾಜಕ್ಕೆ ಫೋಜು ಕೊಡುವದು. ನಿಜವಾದ ಪರಿಹಾರ ಕಾರ್ಯ ಹಿನ್ನೆಲೆಗೆ ಸರಿದು ಇದರಿಂದ ಜನರಿಗೆ ಪರಿಹಾರ ಸಿಗುವುದಕ್ಕಿಂತ ತಾಪತ್ರಯಗಳೇ ಹೆಚ್ಚಾದವು ಎಂಬ ಚಿತ್ರಣ ಈ ಕಾದಂಬರಿಯಲ್ಲಿ ನೈಜವಾಗಿ ಕಾಣಿಸಿದೆ.

ಆದರೆ ಇಂಥ ಸಂದರ್ಭದಿಂದ ಜನಸಮುದಾಯಗಳು ಹಸಿವಿನಿಂದ ಸಾವು-ನೋವಿಗೆ ತುತ್ತಾದರೂ ಮನುಷ್ಯನು ಇಂಥದ್ದನ್ನು ತಾಳಿಕೊಳ್ಳುವ, ಮೀರಿ ನಿಲ್ಲುವ ಧಾರಣಶಕ್ತಿ ಪವಾಡ ಸದೃಶ್ಯ ಎಂಬಂತೆ ಕಾಣುತ್ತದೆ. ಚಂದನಕೇರಿಯಲ್ಲಿ ಇದ್ದ ದನಕರ, ಆಸ್ತಿ,

ಮನೆ ನೋಡಿಕೊಳ್ಳಲು ಒಬ್ಬ ಮುದುಕಿಯನ್ನು ಬಿಟ್ಟು ಮನೆಮಂದಿಯೆಲ್ಲ ಗುಳೆ ಹೋಗಿರುತ್ತಾರೆ. ಬರಗಾಲ ಹೆಚ್ಚಾದಂತೆ ಮುದುಕಿ ನಿರ್ಗತಿಕಳಾಗಿ ಹಸಿವಿನಿಂದ ಉಳಿದ ಮನೆಗಳಲ್ಲಿ ಭಿಕ್ಷೆ ಬೇಡಲು ಅನಿವಾರ್ಯವಾಗಿ ಹೋಗುತ್ತಾಳೆ. ಅವಳು ಭಿಕ್ಷೆ ಬೇಡುವ ಸ್ಥಿತಿಯನ್ನು ಲಿಂಗಬಸ್ಯ ಕಂಡು ಮರುಗಿದಾಗ ಮುದುಕಿ, 'ಅವನ ಕರೆ ಬರತನಕ ಬದುಕಿರಬೇಕು, ಭಿಕ್ಷಾಬೇಡಿಕೊಂತ ಕುಂತೀನಿ. ಅದು ಬಂತೂ ಅಂದ್ರಾಯ್ತು ನೋಡು, ಈ ಭಿಕ್ಷಾದ ಜೋಳ್ಗಿ, ಈ ಕೋಲು, ಆ ಶಿವನ ಕೈಯಾಗೇ ಕೊಟ್ಟು ನಾ ಪಾರ ಹೋಗಿಬಿಡ್ತೀನಿ. ಅಂವ ನಂಗ ಈಗ ಭಿಕ್ಷಾ ಬೇಡ್ಲಿಕ್ಕೆ ಹಚ್ಯಾ್ಕನ. ನಾ ಎಂದೆಂದೂ ಇಂಥಾ ಕೆಲ್ಸ ಮಾಡಿದಾಕ್ಕಲ್ಲ. ಈಗ ಅಂವ ನನ್ನ ಈ ಪರಿಸ್ಥಿತಿ ತಂದಾನ. ತರ್ಲಿ ತರ್ಲಿ, ನೋಡ್ತೀನಿ ನಾನೂ, ತಾನ್ ಹುಟ್ಸಿದ್ದ ಮಕ್ಕಳಿಗಿ ಭಿಕ್ಷಾ ಬೇಡಾಕ ಹಚ್ಯಾನ ಆ ಸೂಳಿಮಗಾ.......ಬರ್ಲಿ ಅವ್ನಿಗೇ ಭಿಕ್ಷಾ ಬೇಡಾಕ ಹಚ್ಲಿಲ್ಲಾಂದ್ರ ನನ್ನ ಹೆಸ್ರು ಶಂಕ್ರಮ್ಮಲ್ಲಾಂತ ತಿಳಿ.........'(ಪು.೯೭) ಎನ್ನುತ್ತಾಳೆ. ಇಂಥ ಸ್ಥಿತಿಯಲ್ಲಿ, ಅವಳ ಬದುಕು ಅವಳಿಗೆ ಕಲಿಸಿದ ತಿಳುವಳಿಕೆ, ತಾಳ್ಮೆ, ನಂಬಿಕೆಗಳ ಒಳಗಿನ ಆಕ್ರೋಶ ಎಲ್ಲವೂ ವ್ಯಕ್ತವಾಗಿವೆ. ದೀಕ್ಷಿತರದೊಂದು ಮುಖ. ಈ ಮುದುಕಿಯದೊಂದು ಮುಖ. ಈ ಮುದುಕಿಯ ಅನುಭಾವದ ಮಾತುಗಳು ದೇವರದಾಸಿಮಯ್ಯನ 'ನೀನೊಮ್ಮೆ ಒಡಲುಗೊಂಡು ನೋಡಾ' ಎಂಬ ಮಾತನ್ನು ಮೀರಿಸುವಂತಿದೆ. ಅನುಭಾವಿ, ಸೂಫಿಗಳು ಬಾಳಿದ ಈ ನೆಲ ಇಂಥ ಮುದುಕಿಯನ್ನು ಸೃಷ್ಟಿಸಿರುವುದು ಸಹಜವೇ ಆಗಿದೆ. ಉಳಿದಂತೆ ಯಾವುದೇ ಹಳ್ಳಿಯಲ್ಲಿರಬಹುದಾದ ಪ್ರೀತಿ, ವೈಷಮ್ಯ, ಹಾದರ, ಕಳ್ಳತನ, ಬಡವರ ತೊಂದರೆ, ಶ್ರೀಮಂತರ ದರ್ಪ ಮುಂತಾದವು ಚಂದನಕೇರಿ ಹಳ್ಳಿಯಲ್ಲಿಯೂ ಇರುವಂತೆ ಈ ಕಾದಂಬರಿಯಲ್ಲಿ ಮೂಡಿ ಬಂದಿವೆ.

ಪ್ರಕ್ಷುಬ್ಧ ಸಂದರ್ಭದ ಸಾಮಾಜಿಕ ಚಿತ್ರಣ

'ಗೋಹರಜಾನ್ ಮಾಲತಿ ಮತ್ತು ನಾನು' (ಚಂದ್ರಕಾಂತ ಕುಸನೂರು) ಕಾದಂಬರಿಯಲ್ಲಿ, ಕಲಬುರ್ಗಿ ಹಾಗೂ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳನ್ನು ಕೇಂದ್ರವಾಗಿಟ್ಟುಕೊಂಡು, ಈ ಶತಮಾನದ ಆರಂಭದಿಂದ ಹಿಡಿದು ಅರವತ್ತರ ದಶಕದ ಅವಧಿತನಕ ಈ ಪ್ರದೇಶದಲ್ಲಿ ಘಟಿಸಿದ ಅನೇಕ ಸಂಗತಿಗಳನ್ನು ಚಿತ್ರಿಸಲಾಗಿದೆ. ಮುಖ್ಯವಾಗಿ ಹೊಸೂರಿನ ರಾಜಕೀಯ, ಈ ರಾಜಕೀಯಕ್ಕೆ ಬಲಿಯಾದಂತೆ ಕಾಣುವ ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬವೊಂದರ ಚಿತ್ರಣ ಒಂದು ಭಾಗವಾದರೆ, ನಿಜಾಂ ಆಡಳಿತಕ್ಕೆ ಒಳಪಟ್ಟಿದ್ದ ಕಲಬುರ್ಗಿ ಪ್ರದೇಶದಲ್ಲಿ ನಿಜಾಂ ಆಳ್ವಿಕೆ, ಸ್ವಾತಂತ್ರ್ಯ ಹೋರಾಟ, ರಜಾಕಾರರ ಹಾವಳಿ, ಸ್ವತಂತ್ರ ಭಾರತದಲ್ಲಿ ಹೈದರಾಬಾದ್ ಸಂಸ್ಥಾನವನ್ನು ವಿಲೀನಗೊಳಿಸಲು ನಿರಾಕರಿಸಿ ಸ್ವತಂತ್ರನಾಗಿ ಆಳಲು ನಿರ್ಧರಿಸಿದ್ದರ ಪರಿಣಾಮಗಳಾದ ದಂಗೆ, ಕೋಮು ಗಲಭೆಗಳು, ಇವನ್ನು ನಿಲ್ಲಿಸಲು ಸ್ವತಂತ್ರ ಭಾರತದ ಸೈನ್ಯ (ಪೊಲೀಸ್ ಕಾರ್ಯಾಚರಣೆ) ಈ ಪ್ರದೇಶದಲ್ಲಿ ಪ್ರವೇಶಿಸಿದ್ದು ನಿಜಾಂ ಆಡಳಿತ ಕೊನೆಗೊಂಡದ್ದು, ನಂತರ ಹೊಸ ಆಡಳಿತ ಬಂದಾಗ ಆಡಳಿತ ಮಟ್ಟದಲ್ಲಿ ಉಂಟಾದ ಬಿಕ್ಕಟ್ಟುಗಳು ಇನ್ನೊಂದು ಭಾಗವಾಗಿವೆ. ಈ ನಡುವೆ ರವೀಂದ್ರನ ಖಾಸಗೀ ಬದುಕಿನಲ್ಲಿ ಮಾಲತಿ, ಗೋಹರಜಾನ್ ಬಂದು ಹೋಗುತ್ತಾರೆ. ಹೀಗೆ ವ್ಯಕ್ತಿ ಹಾಗೂ ಪರಿಸರ ಬದುಕಿನ ಅನೇಕ ವಿಷಯಗಳನ್ನು ಈ ಕಾದಂಬರಿ ಒಡಲೊಳಗೆ ಇರಿಸಿಕೊಂಡಿದೆ.

ಮೂರು ತಲೆಮಾರುಗಳ ಬದುಕಿನಲ್ಲಿ ಉಂಟಾದ ಏರುಪೇರುಗಳನ್ನು ಸಂಕೀರ್ಣ ಸ್ವರೂಪದಲ್ಲಿ ಬಿಂಬಿಸಿದ ಈ ಕಾದಂಬರಿಯಲ್ಲಿ ಸಾಮಾಜಿಕ ಸಂದರ್ಭದ ಅನೇಕ ವಿದ್ಯಮಾನಗಳು ವರದಿಯ ರೂಪದಲ್ಲಿಯೂ ವ್ಯಕ್ತವಾಗಿವೆ. ದತ್ತಾತ್ರೇಯರಾಯ, ಈತನ ಮಗ ಗೋಪಾಲರಾಯ, ಈತನ ಮಗ ರವೀಂದ್ರ ಇವರೇ ಸ್ಥೂಲವಾಗಿ ಮೂರು ತಲೆಮಾರಿನವರು. ದತ್ತಾತ್ರೇಯರಾಯ-ದೇವರಾಯ-ನರಸಿಂಹರಾಯ ಮೊದಲ ತಲೆಮಾರಿನ ಒಡಹುಟ್ಟಿದ ಅಣ್ಣ-ತಮ್ಮಂದಿರು. ಮೊದಲು ಕಲಬುರ್ಗಿಯಿಂದ ಸ್ವಲ್ಪದೂರದಲ್ಲಿದ್ದ, ಈಗ ಕಲಬುರ್ಗಿಗೆ ಹೊಂದಿಕೊಂಡಿರುವ ಹೊಸೂರಿನಲ್ಲಿ ಈ ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬ ಅಲ್ಪಸ್ವಲ್ಪ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿತ್ತು. ಈ ಕಾದಂಬರಿಯ ಪ್ರಾರಂಭದಲ್ಲಿ ಮನೆತನದ

ವಿಷಯ ಬಂದಾಗ ಈ ಕುಟುಂಬದ ಚರಿತ್ರೆ ಬರುತ್ತದೆ. ಬದುಕಿದ್ದವರಲ್ಲಿ ದೇವರಾಯ, ನರಸಿಂಹರಾಯ ಮತ್ತು ದೇವರಾಯನ ಹೆಂಡತಿ ರಿಂದಾಬಾಯಿ ಇವರಿಬ್ಬರಿಗೂ ಮಕ್ಕಳಿರುವುದಿಲ್ಲ. ತೀರಿಕೊಂಡಿದ್ದ ದತ್ತಾತ್ರೇಯರಾಯನ ಮಕ್ಕಳಾದ ಗೋಪಾಲರಾಯ, ಮುರಳೀಧರರಾಯ, ವಿಠೋಬರಾಯ ಈ ಮೂವರು ಅಲ್ಪಸ್ವಲ್ಪ ಓದಿಕೊಂಡು ನಿಜಾಮನ ಆಡಳಿತದಲ್ಲಿ ಸಣ್ಣ ನೌಕರಿ ಪಡೆದು ಕಲಬುರ್ಗಿ ಸೇರಿಕೊಂಡಿದ್ದರು. ಗೋಪಾಲರಾಯ ಮಾತ್ರ ಶಿಕ್ಷಕನಾಗಿ ನಿಜಾಂ ರಾಜ್ಯದ ಗಂಗಾವತಿಯಲ್ಲಿ, ನಂತರ ಇತರ ಹಳ್ಳಿಗಳಲ್ಲಿ ಕೆಲಸ ಮಾಡುತ್ತ ಕೊನೆಗೆ ಕಲಬುರ್ಗಿ ಸೇರಿ ಉಳಿದ ತಮ್ಮಂದಿರೊಂದಿಗೆ ಕೂಡಿ ಸಂಸಾರ ನಡೆಸಿದ್ದರು.

ಹೊಸೂರಿನಲ್ಲಿದ್ದ ದೇವರಾಯ-ನರಸಿಂಹರಾಯ ತೀರಿಕೊಂಡ ಮೇಲೆ, ದೇವರಾಯನ ಹೆಂಡತಿ ರಿಂದಾಬಾಯಿ ಒಂಟಿಯಾಗುತ್ತಾಳೆ. ಯಾವುದೇ ಹಳ್ಳಿಯಲ್ಲಿ ಇಂಥ ಸಂದರ್ಭದಲ್ಲಿಯೇ ರಾಜಕೀಯ ಶುರುವಾಗುವುದು. ರಿಂದಾಬಾಯಿಗೆ ಇರುವ ಆಸ್ತಿಯನ್ನು ನುಂಗಲು ಊರಿನ ಅನೇಕ ಶಕ್ತಿಗಳು ತಲೆ ಎತ್ತುತ್ತವೆ. ಊರಿನ ಗೌಡ ಮತ್ತು ರಿಂದಾಬಾಯಿಯ ದಾಯಾದಿ ಶ್ರೀಪತಿಯ ನಡುವೆ ತೀವ್ರ ಪೈಪೋಟಿ ನಡೆಯುತ್ತದೆ. ಈ ಸಂದರ್ಭದಲ್ಲಿ ರಿಂದಾಬಾಯಿ ಕಲಬುರ್ಗಿಯಲ್ಲಿರುವ ಗೋಪಾಲರಾಯ-ವಿಠೋಬರಾಯ-ಮುರಲೀಧರರಾಯ ಅವರನ್ನು ಸೇರಿಕೊಳ್ಳಬೇಕಾಗಿತ್ತು. ಆದರೆ ಅವರ ಕಡೆ ಹೋಗದಂತೆ ರಿಂದಾಬಾಯಿಯ ಮನಸ್ಸನ್ನು ಆವಳ ತಮ್ಮ ಕೆಡಿಸುತ್ತಾನೆ. ಆದರೆ ರಿಂದಾಬಾಯಿಯ ಆಸ್ತಿ ಸಹಜವಾಗಿ ಗೋಪಾಲರಾಯ ಹಾಗೂ ಅವನ ತಮ್ಮಂದಿರಿಗೆ ಬರಬೇಕಾದದ್ದು. ರಿಂದಾಬಾಯಿ ಮುನಿಸಿಕೊಂಡದ್ದರಿಂದ ಬರುವ ಆಸ್ತಿಗಾಗಿ ಗೋಪಾಲರಾಯ ಕೋರ್ಟಿಗೆ ಹೋಗುತ್ತಾನೆ. ಆದರೆ ಊರ ಗೌಡ ಮತ್ತು ಸ್ಥಿತಿವಂತ ರಿಂದಾಬಾಯಿಯ ದಾಯಾದಿ ಶ್ರೀಪತಿಯ ಮುಂದೆ ಗೋಪಾಲರಾಯನ ಶಕ್ತಿ ಕುಂದುತ್ತದೆ. ಕೋರ್ಟಿಗೆ ಹಣ ಖರ್ಚು ಮಾಡಲಾಗದೆ ಸೋತು ಆಸ್ತಿಯ ತಂಟೆಯನ್ನೇ ಮರೆತುಬಿಡುತ್ತಾನೆ. ಇವರ ನಡುವೆ ಅಸಹಾಯಕಳಾಗಿದ್ದ ರಿಂದಾಬಾಯಿಗೆ ಅಭಯ ನೀಡುವ ನಾಟಕವಾಡಿ ಮಧ್ಯ ತೂರಿದ ಜೋಳಗುಂಡ ಮಠದ ಸ್ವಾಮಿ ಏನೇನೋ ಹೇಳಿ ನಂಬಿಸಿ ಖಾಲಿ ಸ್ಟ್ಯಾಂಪ್ ಕಾಗದಗಳ ಮೇಲೆ ಸಹಿ ಮಾಡಿಸಿಕೊಂಡು ಇರುವ ಆಸ್ತಿಯನ್ನು ತನ್ನ ವಶಮಾಡಿಕೊಳ್ಳುತ್ತಾನೆ. ಬೇಸತ್ತ ರಿಂದಾಬಾಯಿ ಊರು ತೊರೆಯುತ್ತಾಳೆ. ಹೊಸೂರಿನಲ್ಲಿ ರಿಂದಾಬಾಯಿಯ ಆಸ್ತಿಗಾಗಿ ಊರಗೌಡ, ಶ್ರೀಪತಿ ಮತ್ತು ಮಠದ ಸ್ವಾಮಿಗಳ ನಡುವೆ ಜಗಳ, ಪೊಲೀಸ್ ಕೇಸು, ಕೋರ್ಟು ಕಛೇರಿಗೆ ಅಲೆದಾಟ ನಡೆದೇ ಇರುತ್ತದೆ. ಈ ಮೂರು ಶಕ್ತಿಗಳ ಪೈಪೋಟಿಯಲ್ಲಿ ಜನಸಾಮಾನ್ಯರು, ದುಡಿದು ತಿನ್ನುವ ಕೆಳವರ್ಗದವರು ನೆಮ್ಮದಿ ಕಳೆದುಕೊಳ್ಳುತ್ತ, ಅವರಿವರ ಪರವಾಗಿ ನಿಲ್ಲುವ ಅನಿವಾರ್ಯ ಸ್ಥಿತಿಯಲ್ಲಿ ಅಮಾಯಕರ ನೋವು ಸಾವುಗಳಿಗೆ ಯಾರೂ ಜವಾಬ್ದಾರರಾಗಿ ನಿಲ್ಲುವುದಿಲ್ಲ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಈ ಪ್ರದೇಶದ ಯಾವುದೇ ಹಳ್ಳಿಯ ಸ್ಥಿತಿ ಇದಾಗಿತ್ತು. ಸಾಮಾನ್ಯರಂತೂ ಸರಿ. ದೊಡ್ಡ ದೊಡ್ಡ ಮನೆತನಗಳು ತಮ್ಮ ತಮ್ಮ ಪ್ರತಿಷ್ಠೆಯನ್ನು ತೋರಿಸುವುದಕ್ಕಾಗಿ ಜಗಳ, ಕೊಲೆ, ಕೋರ್ಟು ಮುಂತಾದವುಗಳಿಗೆ ಹಣ ಖರ್ಚುಮಾಡಿ ದಿವಾಳಿಯಾಗಿ ಹೋಗಿವೆ. ಜೇಲು ಸೇರಿದವರೆಷ್ಟೋ ಜನರು ತಮ್ಮ ಸಂಸಾರ, ಕುಟುಂಬಗಳನ್ನು ಬೀದಿಪಾಲು ಮಾಡಿದ್ದಾರೆ. ಇದು ಗ್ರಾಮಾಂತರಗಳಲ್ಲಿ ಕಾಣುವ ವಾಸ್ತವ ಸಂಗತಿ. ರಿಂದಾಬಾಯಿಯಂಥವರು, ಗೋಪಾಲರಾಯನಂಥವರು ಅಸಹಾಯಕರಾಗಿ ಬದುಕಿಗೆ ಹೊಂದಲಿಲ್ಲ. ಗೌಡ, ಶ್ರೀಪತಿ, ಮಠದ ಸ್ವಾಮಿಗಳು ತಮ್ಮ ದರ್ಪ, ಅಹಂಕಾರ, ಸ್ವಾರ್ಥ ಮುಂತಾದ ಫ್ಯೂಡಲ್ ಗುಣಗಳಿಂದಲೂ ನಾಶವಾಗಿ ಹೋಗಿದ್ದಾರೆ. ಸ್ವಾತಂತ್ರ್ಯೋತ್ತರ ಕಾಲದ 'ಕೋರ್ಟು' ಎಂಬ ನ್ಯಾಯ ವ್ಯವಸ್ಥೆಗೆ ಸಿಕ್ಕು ನಾಶವಾದವರಿಗೆ ಲೆಕ್ಕವಿಲ್ಲ. ಕುತೂಹಲದ ವಿಷಯವೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಊರ ಪಂಚಾಯ್ತಿ ಎಂಬ ನ್ಯಾಯ ವ್ಯವಸ್ಥೆಯಲ್ಲಿ ಬಡವರಿಗೆ ಹೇಗೆ ನ್ಯಾಯ ಮರೀಚಿಕೆಯಾಗಿತ್ತೋ ಹಾಗೆ ಸ್ವಾತಂತ್ರ್ಯೋತ್ತರ ಕಾಲದ ಕೋರ್ಟು ಎಂಬ ನ್ಯಾಯ ವ್ಯವಸ್ಥೆಯಲ್ಲಿ 'ಹಣ' ಇದ್ದವನಿಗೆ ಮಾತ್ರ ನ್ಯಾಯ ಸಿಗುತ್ತಿದೆ. ಎರಡೂ ವ್ಯವಸ್ಥೆಗಳ ಸ್ವರೂಪ ಒಂದೇ ಎಂಬಂತೆ ಕಂಡರೂ, ಪಂಚಾಯ್ತಿ ನ್ಯಾಯ ವ್ಯವಸ್ಥೆಯಲ್ಲಿ ಬಡವರು ಅನ್ಯಾಯಕ್ಕೊಳಗಾಗುತ್ತಿದ್ದರೆ, ಕೋರ್ಟ್ ನ್ಯಾಯವ್ಯವಸ್ಥೆಯಲ್ಲಿ ಹಳ್ಳಿಯ ಶ್ರೀಮಂತರೂ ದಿವಾಳಿಯಾಗಿ ಹೋಗಿದ್ದಾರೆ. ಚೆನ್ನಣ್ಣ

ವಾಲೀಕಾರರ ಎಲ್ಲ ಕಾದಂಬರಿಗಳಲ್ಲಿ ಇದು ಪ್ರಧಾನವಾಗಿ ಕಾಣಿಸುತ್ತದೆ. ಇಂಥ ಅಪಾಯಗಳನ್ನು ಅರಿತ ಗೋಪಾಲರಾಯನ ಮಗ ರವೀಂದ್ರ ರಿಂದಾಬಾಯಿಯ ಆಸ್ತಿಯ ಸಲುವಾಗಿ ಕೋರ್ಟಿಗೆ ಹೋಗಬೇಕಾದ ಒತ್ತಡಗಳು ಬಂದಾಗ, ಸಂಪೂರ್ಣ ನಿರಾಕರಿಸುತ್ತಾನೆ. ಕೊನೆಗೆ ರಿಂದಾಬಾಯಿಯ ಆಸ್ತಿ ಯಾವ ವ್ಯಕ್ತಿಗಳಿಗೆ ಬೇಡವೆಂಬ ಅಭಿಪ್ರಾಯಕ್ಕೆ ಬಂದು ದೇವಸ್ಥಾನಕ್ಕೆ ಬಿಡಬೇಕೆಂದು ನಿರ್ಧರಿಸಿದಾಗಲೂ, ಯಾವ ದೇವಸ್ಥಾನಕ್ಕೆ ಬಿಡಬೇಕೆಂಬ ಪ್ರಶ್ನೆ ಬಂದು ಜಾತಿ ರಾಜಕಾರಣ ಪ್ರಾರಂಭವಾಗುತ್ತದೆ. ಲಿಂಗಾಯತರು ಸಿದ್ಧೇಶ್ವರ ದೇವಸ್ಥಾನಕ್ಕೆಂದರೆ, ಕುರುಬರು ಮಾಳಿಗಿರಾಯನ ದೇವಸ್ಥಾನಕ್ಕೆ ಎನ್ನುತ್ತಾರೆ. ಮತ್ತೊಂದು ಕಡೆ ಕೆಳವರ್ಗದ ದಲಿತರು ಮರಗಪ್ಪನ ದೇವಸ್ಥಾನಕ್ಕೆಂದು ಪಟ್ಟು ಹಿಡಿಯುತ್ತಾರೆ. ಈ ಸಂಬಂಧವಾಗಿ ಪುನಃ ಹೊಸೂರ ಜಾತಿ ಗುಂಪುಗಳು ರವೀಂದ್ರನ ಬೆನ್ನು ಹತ್ತುತ್ತಾರೆ. ರವೀಂದ್ರ ಮಾತ್ರ ಎಲ್ಲವನ್ನು ನಿರಾಕರಿಸಿ ಅವರಿಂದ ದೂರವಾಗಿ ಉಳಿಯಲು ನಿರ್ಧರಿಸುತ್ತಾನೆ. ಇದು ಹೊಸೂರಿಗೆ ಮತ್ತು ಮೊದಲ ತಲೆಮಾರಿಗೆ ಸಂಬಂಧಿಸಿದ ಸಂಗತಿ.

ನಿಜಾಂ ಪ್ರಭುತ್ವವಿದ್ದ ಈ ಪ್ರದೇಶದಲ್ಲಿ ಅನೇಕ ಬಿಕ್ಕಟ್ಟುಗಳನ್ನು ಜನ ಸಮುದಾಯಗಳು ಎದುರಿಸಿವೆ. ಮುಖ್ಯವಾಗಿ ಭಾಷೆಗೆ ಸಂಬಂಧಿಸಿದಂತೆ. ಆಡಳಿತ ಭಾಷೆಯಾಗಿ ಉರ್ದು ಚಾಲ್ತಿಯಲ್ಲಿತ್ತು. ಹೆಚ್ಚಿನ ಶಿಕ್ಷಣ ಪಡೆಯಬೇಕಾದರೆ ಈ ಪ್ರದೇಶದ ವಿದ್ಯಾರ್ಥಿಗಳು ಉರ್ದು ಭಾಷೆಯಲ್ಲೇ ಕಲಿಯಬೇಕಾಗಿತ್ತು. ಅಕ್ಷರ ಕಲಿಯುವವರ ಪ್ರಮಾಣವೇ ಅತ್ಯಲ್ಪ. ನಗರ ಪ್ರದೇಶದ ಮುಸ್ಲಿಮರು ಮಾತ್ರ ಉರ್ದುವಿನಲ್ಲಿ ಶಿಕ್ಷಣ ಪಡೆದು ನಿಜಾಂ ಆಡಳಿತದಲ್ಲಿ ಸರಕಾರಿ ನೌಕರಿಗಳನ್ನು ಪಡೆಯುತ್ತಿದ್ದರು. ಕುತೂಹಲದ ಸಂಗತಿಯೆಂದರೆ ಈ ಪ್ರದೇಶದ ಮುಸ್ಲಿಮರು ಹೆಚ್ಚಿನ ಶಿಕ್ಷಣ ಕಲಿತರೂ ಉನ್ನತ ಹುದ್ದೆಗಳಿಗೆ ಹೋಗುವ ಅವಕಾಶಗಳಿರಲಿಲ್ಲ. ಉನ್ನತ ಹುದ್ದೆಗಳಲ್ಲಿ ಉತ್ತರ ಭಾರತದ ಮೂಲದವರಿಗೆ ದಕ್ಕುತ್ತಿದ್ದವೆಂದು ಕಾಣುತ್ತದೆ. ಗ್ರಾಮಾಂತರ ಪ್ರದೇಶದ ಮುಸ್ಲಿಮರಿಗೆ ಈ ಹೊತ್ತಿನಲ್ಲಿಯೂ ಸರಿಯಾದ ಶಿಕ್ಷಣವನ್ನು ಕಲಿಯುವ ಅವಕಾಶಗಳನ್ನು ಉಪಯೋಗಿಸಿಕೊಂಡಿಲ್ಲ. ಇನ್ನು ಸ್ವಾತಂತ್ರ್ಯಪೂರ್ವದ ಪರಿಸ್ಥಿತಿಯಲ್ಲಿ ಹೇಗಿರಬಹುದೆಂದು ಗೊತ್ತಾಗುತ್ತದೆ. ಮುಸ್ಲಿಮರಿಗೆ ಸರಿಸಾಟಿಯಾಗಿ ಉರ್ದುವಿನಲ್ಲಿ ಶಿಕ್ಷಣ ಪಡೆದವರೆಂದರೆ ಬ್ರಾಹ್ಮಣರೇ. ಸರಕಾರಿ ನೌಕರಿಗಳನ್ನು ಪಡೆಯಲು ಅನಿವಾರ್ಯವಾಗಿ ಅನ್ನುವುದಕ್ಕಿಂತ ಸಹಜವಾಗಿಯೇ ಬ್ರಾಹ್ಮಣರು ಉರ್ದುವನ್ನು ಕಲಿತರು. ಇದರಿಂದ ಬ್ರಾಹ್ಮಣ ಕುಟುಂಬಗಳಲ್ಲಿ ಅರವತ್ತು ವರ್ಷಗಳ ಹಿಂದೆ ಕನ್ನಡ ಭಾಷೆಯ ಸುಳಿವಿರಲಿಲ್ಲ. ಆಗಮಿಕ ಪ್ರಯೋಜನಗಳಿಗೆ ಸಂಸ್ಕೃತವನ್ನು, ಲೌಕಿಕ ಪ್ರಯೋಜನಗಳಿಗಾಗಿ ಉರ್ದುವನ್ನು ಮಾತ್ರ ಬ್ರಾಹ್ಮಣರು ಕಲಿತರೆ ಹೊರತು ಕನ್ನಡದಿಂದ ಯಾವ ಪ್ರಯೋಜನವಿರಲಿಲ್ಲ. ಮಾತನಾಡಲೂ ಕನ್ನಡ ಗೊತ್ತಿರುತ್ತಿತ್ತು. ಸರಕಾರಿ ನೌಕರಿಯ ಅಗತ್ಯವಿರದ ಲಿಂಗಾಯತರು ಮಾತ್ರ ಮಠ-ಮಾನ್ಯಗಳಲ್ಲಿ ಕನ್ನಡ ಕಲಿತು, ವ್ಯವಹಾರಕ್ಕೆ ಬಳಸುತ್ತಿದ್ದರು. ನಿಜಾಂ ಆಡಳಿತದಲ್ಲಿ ಸರಕಾರಿ ನೌಕರಿಯನ್ನು ಪಡೆದವರು ಮುಸ್ಲಿಮರು, ಹೆಚ್ಚಿನ ಸಂಖ್ಯೆಯಲ್ಲಿದ್ದವರು ಬ್ರಾಹ್ಮಣರೇ ಹೊರತು ಲಿಂಗಾಯತರಲ್ಲ ಎಂಬುದು ನಿಜ. ಉಳಿದ ವರ್ಗದವರಿಗೆ ಅಕ್ಷರ ಕಲಿಕೆಯ ಅವಕಾಶಗಳೇ ಇರಲಿಲ್ಲ.

ಈ ಕಾದಂಬರಿಯಲ್ಲಿ ಗೋಪಾಲರಾಯರ ಮಗ ರವೀಂದ್ರನನ್ನು ಶಾಲೆಗೆ ಹಾಕುವಾಗ ಉರ್ದು ಕಲಿಯಲು ಕಳಿಸಬೇಕೆ ಅಥವಾ ಇಂಗ್ಲಿಷ್ ಕಲಿಯಲು ಕಳಿಸಬೇಕೆ ಎಂಬ ಪ್ರಶ್ನೆ ಎದುರಾಗುತ್ತದೆಯೇ ಹೊರತು ಕನ್ನಡ ಕಲಿಯಬೇಕಾದ ಪ್ರಶ್ನೆ ಎದುರಾಗುವುದಿಲ್ಲ. ನಿಜಾಮನ ಆಡಳಿತವಿದ್ದರೂ ಬ್ರಿಟಿಷರ ಸಹಮತದೊಂದಿಗೆ ಇತ್ತು. ಈ ಕಾರಣದಿಂದ ಈ ಪ್ರದೇಶದ ಶಾಲೆಗಳಲ್ಲಿ ಉರ್ದು ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳು ಚಾಲ್ತಿಯಲ್ಲಿದ್ದವು. 'ಮದ್ರಾಸ್ ಸೈಡ್' ಎಂದರೆ ಇಂಗ್ಲಿಷ್, 'ಉಸ್ಮಾನಿಯಾ ಸೈಡ್' ಎಂದರೆ ಉರ್ದು. ರವೀಂದ್ರನಿಗೆ ಮದ್ರಾಸ್ ಸೈಡಿನಲ್ಲಿ ಕಲಿಯುವ ಒಲವಿತ್ತೆಂದು ಕಾಣುತ್ತದೆ. ಈ ಸಂದರ್ಭದಲ್ಲಿ ತಂದೆ ಗೋಪಾಲರಾಯ ಹಾಗೂ ಚಿಕ್ಕಪ್ಪನವರು ಉರ್ದುವಿಗೆ ಕಳಿಸಲು ಸಹಜವಾಗಿಯೇ ಯೋಚಿಸುತ್ತಾರೆ ಮತ್ತು ಅವರಿಗೆ ನಿಜಾಮನ

ಬಗ್ಗೆ ಎಂಥ ಅಭಿಮಾನವಿತ್ತೆಂದರೆ, 'ಮಗಾ ನಮ್ಮ ಬಾದಶಾ ಅಂದ್ರೆ ಆಲಾ ಹಜರತ್ ಸಾಹೇಬ್ರು. ಈ ಸೂರ್ಯ ಚಂದ್ರ ಬೆಳಗೋದು ಅವರ ಪುಣ್ಯದಲಿಂದ. ಅವರ ರಾಜ್ಯ ಈ ಬ್ರಹ್ಮಾಂಡ ಇರೋತನಕ ಇರ್ತದ. ಅಂದಮ್ಯಾಲ ನಾವು ಈ ಕೆಂಪು ಮೋತಿ ಇಂಗ್ರೇಜರ ಭಾಷದೊಳ್ಗ ಓದಿ ಏನ್ಮಾಡದದ? ಆ ಅರಿಷ್ಟ ಬೊಕ್ಕತಲಿ ಮುದುಕ ಅವರ ಬೆನ್ನ ಬಿದ್ದಾನ. ದೇಶಕ್ಕ ಸ್ವಾತಂತ್ರ್ಯ ಬೇಕಂತ ಕೇಳಲಿಕತ್ಯಾನ.............. ಆ ಮುದುಕನಿಗೆ ಬುದ್ದಿ ಮಾತು ಹೇಳವರು ಯಾರು?...........ಬಾದಶಾಹನ ಭಾಷೆ ಬಿಟ್ಟು ಸಾತ ಸಮುದ್ರದಾಚೆಯಿಂದ ಬಂದವ್ರ ಭಾಷಾ ಬ್ಯಾಡ ಮಗನೆ"(ಪು.೩೦) ಎಂದು ಉಪದೇಶ ಮಾಡುತ್ತಾರೆ. ಬಹುತೇಕ ನಿಜಾಂ ಆಡಳಿತದಲ್ಲಿ ಸರಕಾರಿ ಕೆಲಸದಲ್ಲಿದ್ದವರೆಲ್ಲರೂ ಇದೇ ಬಗೆಯ ಅಭಿಪ್ರಾಯ ಹೊಂದಿದ್ದರು. ಇದು ಸಹಜ ಎಂಬುದಕ್ಕಿಂತ ಹೊಟ್ಟೆ ಪಾಡಿನ ಪ್ರಶ್ನೆಯಾಗಿತ್ತು. ಮುಂದೆ ರವೀಂದ್ರ ನಿಜಾಂ ಆಡಳಿತದ ವಿರುದ್ಧ ನಡೆದ ಹೋರಾಟದಲ್ಲಿ ಭಾಗವಹಿಸಿದಾಗ ಈ ಬ್ರಾಹ್ಮಣ ಕುಟುಂಬಕ್ಕೆ ಜೀವನ್ಮರಣದ ಪ್ರಶ್ನೆಯಾಗಿ ನಿಂತಿತು. 'ನಮ್ಗ ಅನ್ನಾ ಕೊಡಾಂವ ನಿಮ್ಮ ನೆಹರು ಅಲ್ಲ, ನಮ್ಮ ಆಲಾ ಹಜರತ್ ಕೊಡ್ತಾನ ತಿಳೀತಾ? ಉಪ್ಪುಂಡ ಮನಿ ಜಂತಿ ಎಣಿಸ್ತ್ಯಾ? ಉಂಡ ಎಡ್ಯಾಗ ಉಚ್ಚಿ ಹೊಯ್ತ್ಯಾ?'(ಪು.೪೪) ಎಂದು ನಿಯಂತ್ರಿಸಲು ಪ್ರಯತ್ನಿಸುತ್ತಾರೆ. ನಿಜಾಂ ಆಡಳಿತದ ವಿರುದ್ಧ ಹೋರಾಟ ನಡೆದಾಗ ಈ ಬಗೆಯ ಬ್ರಾಹ್ಮಣ ಮತ್ತು ಮುಸ್ಲಿಂ ಕುಟುಂಬಗಳು ಸಂದಿಗ್ಧತೆಯಲ್ಲಿ ನರಳಿವೆ.

ಹೈದರಾಬಾದ್ ಕರ್ನಾಟಕಕ್ಕೂ ಸ್ವಾತಂತ್ರ್ಯ ಸಿಕ್ಕಿತು. ಈ ಸಂದರ್ಭದಲ್ಲಿ ಆಡಳಿತಾತ್ಮಕ ಬಿಕ್ಕಟ್ಟುಗಳು ಕಾಣಿಸಿಕೊಂಡವು. ಸ್ವತಂತ್ರ ಭಾರತದ ಆಡಳಿತ ಭಾಷೆ ಇಂಗ್ಲಿಷ್‌ನಲ್ಲಿ ಪ್ರಾರಂಭವಾದ ಕಾರಣ, ನಿಜಾಂ ಆಡಳಿತದ ಕಾಲದಲ್ಲಿದ್ದ ಸರಕಾರಿ ನೌಕರರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಉರ್ದು ಭಾಷೆಯ ನೌಕರರಿಗೆ ಆತಂಕಗಳು ಸುರುವಾದವು. ರವೀಂದ್ರ ಮನೆತನದ ತಾಪತ್ರಯಗಳಿಗೆ ಹೆಚ್ಚಿನ ವ್ಯಾಸಂಗಕ್ಕೆ ಹೋಗದೆ ಸರಕಾರಿ ನೌಕರಿ ಹಿಡಿಯಬೇಕಾಗುತ್ತದೆ. ಶಿಕ್ಷಣ ಇಲಾಖೆಯಲ್ಲಿ ಗುಮಾಸ್ತನಾಗಿ ಸೇರಿದ ರವೀಂದ್ರನಿಗೆ, ಅಲ್ಲಿ ಮುಸ್ಲಿಮೇತರರೊಬ್ಬರೂ ಕೆಲಸದಲ್ಲಿರುವುದಿಲ್ಲ. ಉರ್ದುವಿನಲ್ಲಿದ್ದ ಎಲ್ಲ ಪತ್ರವ್ಯವಹಾರಗಳು, ನಿಜಾಂ ಆಡಳಿತ ಅಂತ್ಯಗೊಂಡದ್ದೇ ಇಂಗ್ಲೀಷಿಗೆ ತಿರುಗಿದವು. ಸರಕಾರಿ ಕಛೇರಿಯಲ್ಲಿದ್ದ ಬಹುತೇಕ ಮುಸ್ಲಿಮರಿಗೆ ಇಂಗ್ಲಿಷ್ ಬರದ ಕಾರಣವಾಗಿ, ಇಂಗ್ಲಿಷ್ ಭಾಷೆಯ ನೋಟೀಸುಗಳನ್ನು ಉರ್ದು ಭಾಷೆಗೆ ಅನುವಾದ ಮಾಡಿಕೊಡುವ ಕೆಲಸ ರವೀಂದ್ರನಿಗೆ ಬೀಳುತ್ತದೆ. ಈ ಸಂದರ್ಭದಲ್ಲಿ ಇಂಗ್ಲೀಷ್ ಬರದ ನೌಕರದಾರರನ್ನು ಕೆಲಸದಿಂದ ತೆಗೆದುಹಾಕಲು ಯೋಚಿಸಲಾಗುತ್ತದೆ. ಇಂಥವರು ಸಂಘಟಿತ ಹೋರಾಟದಿಂದ ಪುನಃ ಕೆಲಸದಲ್ಲಿ ಮುಂದುವರೆಯುವ ಆದೇಶವನ್ನು ಪಡೆಯುತ್ತಾರೆ.

ರವೀಂದ್ರನ ಇಬ್ಬರು ಚಿಕ್ಕಪ್ಪಂದಿರರಿಗೂ ಈ ಸಮಸ್ಯೆ ಎದುರಾಗುತ್ತದೆ. ವಿಠೋಬರಾಯ 'ಬೇಲೀಫ್' ಹುದ್ದೆಯಲ್ಲಿದ್ದು, ಮುರಳೀಧರರಾಯ 'ಕಾಪಿಯಿಸ್ಟ್ ' ಹುದ್ದೆಯಲ್ಲಿದ್ದು ಇಬ್ಬರಿಗೂ ತೊಂದರೆಯಾಗುತ್ತದೆ. ರವೀಂದ್ರ ಕೆಲವು ದಿನಗಳ ನಂತರ ಈ ಕೆಲಸ ಬಿಟ್ಟು ಶಿಕ್ಷಕನಾಗಿ ನೇಮಕವಾಗುತ್ತಾನೆ.

ಇದು ಆಡಳಿತಾತ್ಮಕ ಸಮಸ್ಯೆಯಾದರೆ, ಪ್ರಜಾರಾಜ್ಯ, ಪ್ರಜಾಪ್ರಭುತ್ವದ ಆಡಳಿತ ಸುರುವಾದ ಬೆನ್ನಲ್ಲಿಯೇ ಅದರ ಸ್ವರೂಪ ಮತ್ತು ಅಧಿಕಾರಸ್ಥರ ಅನೈತಿಕತೆ, ಅಪ್ರಾಮಾಣಿಕತೆ, ಸ್ವಾರ್ಥ, ಸಮಯ ಸಾಧಕತನದಿಂದ ಸಾಮಾಜಿಕ ಬದುಕು ನೆಮ್ಮದಿಯನ್ನು ಕಳೆದುಕೊಳ್ಳುತ್ತದೆ. 'ಸ್ವಾತಂತ್ರ್ಯ' ಮತ್ತು 'ಪ್ರಜಾರಾಜ್ಯ'ದ ಕನಸು ಬಹುಬೇಗ ಭ್ರಮನಿರಸನವಾಯಿತು. ಸಾಮಾನ್ಯನು ಆತಂಕಪಡುವಂತಾಯಿತು. ಟಾಂಗಾದ ನರಸಪ್ಪ, "ರಾವ ಸಾಹೇಬ್ರೆ, ಈ ದೇಶಕ್ಕೆ ಪ್ರಜಾಪ್ರಭುತ್ವ ಬಂತು. ದೇಶದೊಳಗೆ ಎಲ್ಲ ಮಂದಿ ಪ್ರಭುಗಳಾದರು. ಯಾರೂ ಪ್ರಜೆಗಳಾಗೇ ಉಳಿಲೇ ಇಲ್ಲ. ಆಳುವವರೇ ಎಲ್ಲರೂ. ಆಳಿಸಿಕೊಳ್ಳುವವರೇ ಯಾರಿಲ್ಲ ನೋಡ್ರಿ. ದರಿದ್ರ ಬಿಕನಾಸಿಗೇಡಿ, ಎದಿ ಸೀಳಿದರೂ ಒಂದಕ್ಷರ ಸಿಗಲಾರದವರು ರಾಜರಾದರು. ಹಿಂದ್ಕ ರಾಜ್ಯಕ್ಕೊಬ್ಬ ರಾಜನಿರತಿದ್ದ.

ಅಂವ ಒಬ್ಬ ಸೂಳೇಮಗ ಸುಲಿದರೂ, ಲೂಟಿ ಮಾಡಿದರೂ ಎಷ್ಟ ಸುಲೀತಿದ್ದ? ಎಷ್ಟ ಲೂಟಿ ಮಾಡತಿದ್ದ?..........ಆದ್ರ ಈಗ ಎಲ್ಲರೂ ರಾಜಕೀ.....ಎಲ್ಲರೂ ಸುಲಿಯುವವರೇ, ಲೂಟಿ ಮಾಡವರೇ...........ಈ ದೇಶಾ ಭಾಳ ಜಲ್ದಿ ನಾಶ ಆಗ್ತಾಯ್ತಿ........"(ಪು.೩೧,೩೨) ಎಂದು ಹೇಳುತ್ತಿದ್ದ. ರಾಜಕೀಯ ಸ್ಥಿತ್ಯಂತರದಿಂದ ಸಾಮಾಜಿಕ ಬದುಕಿನಲ್ಲಿ ಬಿಕ್ಕಟ್ಟುಗಳು ತಲೆದೋರುವುದು ಸಹಜವೇ. ಕಲಾವಿದನಾದ ಕಾದಂಬರಿಕಾರ ಇಂಥ ಅಭಿಪ್ರಾಯಕ್ಕೆ ಪ್ರತಿಕ್ರಿಯೆ ಎಂಬಂತೆ, ಹಜಾಮರ ಕುಬೇರನ ಬಾಯಿಯಿಂದ ಹೀಗೆ ವ್ಯಕ್ತಪಡಿಸುತ್ತಾನೆ. "ಇಲ್ಲೋ ನರಸಣ್ಣ, ದೇಶ ಸಾಯಂಗಿಲ್ಲ. ಈ ದೇಶದಾಗ ಬುದ್ಧ, ಬಸವಣ್ಣ, ಕಬೀರ, ರಾಮದಾಸ, ತುಳಸೀದಾಸ, ಪುರಂದರದಾಸ, ಕನಕದಾಸ, ಮೀರಾಬಾಯಿ, ಜನಾಬಾಯಿ, ಮುಕ್ತಾಯಕ್ಕ, ಚೈತನ್ಯ, ಜ್ಞಾನೇಶ್ವರ, ನಾನಕ ದೇವರಂಥವರು ಹುಟ್ಟಿ ಎಷ್ಟೊಂದು ಪುಣ್ಯಗಳಿಸಿ ಇಟ್ಟಾರಂದ್ರ, ಈ ದೇಶಭಕ್ತರಂತ ಹೇಳಿಕೊಂಡು ಸುಲಿಗಿ ಮಾಡೋ ಪಾಪಿ ಸೂಳೇ ಮಕ್ಕಳು, ತಿಪ್ಪರಲಾಗಾ ಹೊಡೆದ್ರೂ ದೇಶಕ್ಕೇನೂ ಆಗಾಂಗಿಲ್ಲ. ಈ ಹಲ್ಕಟ ಮಂದಿಲಿಂದ ದೇಶ ಸಾಯಲಿಕ್ಕೆ ಅದು ಅಷ್ಟೊಂದು ನಿತ್ರಾಣವಾಗಿಲ್ಲೋ ನರಸಣ್ಣ"(ಪು.೩೩)

ಈ ಕಾದಂಬರಿಯಲ್ಲಿ ಯಾವುದೇ ಸಮಸ್ಯೆಯನ್ನು ಸರಳವಾಗಿ ಗ್ರಹಿಸಲಾಗಿಲ್ಲ. ಸಮಸ್ಯೆಗಳ ಬಹುಮುಖತ್ವಗಳನ್ನು ಹಿಡಿದಿಡಲಾಗಿದೆ. ಭ್ರಷ್ಟತನ ಕೇವಲ ಪ್ರಜಾಪ್ರಭುತ್ವದ ಕೂಸಲ್ಲವೆಂಬುದನ್ನು ಒಪ್ಪುತ್ತದೆ. ನಿಜಾಂ ಆಡಳಿತದಲ್ಲಿಯೂ ಸರಕಾರಿ ಕಛೇರಿಗಳಲ್ಲಿ 'ಖುಷಿ' ಅಥವಾ 'ಭಕ್ಷೀಸು' ಎಂಬ ಹೆಸರಿನಲ್ಲಿ 'ಲಂಚ' ನಡೆಯುತ್ತಿತ್ತು. ಆದರೆ ಇದು ಕೊಡುವವನ, ಪಡೆಯುವವನ ಮಧ್ಯ ನಡೆಯುವ 'ಸಂತೋಷದ ವ್ಯವಹಾರ'ವಾಗಿತ್ತೇ ಹೊರತು ಇದರಲ್ಲಿ ಕೊಡಲೇಬೇಕು, ಪಡಯಲೇಬೇಕು ಎಂಬ ನಿಯಮವಿರಲಿಲ್ಲ ಎಂಬುದನ್ನು ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಪ್ರಜಾಪ್ರಭುತ್ವ ಬಂದತಕ್ಷಣವೇ ಭ್ರಷ್ಟತನ ಹಾಡುಹಗಲು ನಡೆಯಲಿಲ್ಲ. ರವೀಂದ್ರನ ಚಿಕ್ಕಪ್ಪ ಇಂಥ ಒಂದು ಪ್ರಸಂಗವನ್ನು ಎದುರಿಸಬೇಕಾಗುತ್ತದೆ. ಬೆಳೆ ಇದ್ದ ಹೊಲವೊಂದು ಮೂಲ ವಾರಸ್ದಾರನಿಗೆ ಹೋಗುವ ಸಂದರ್ಭ ಬರುತ್ತದೆ. ಈ ಸಂಬಂಧ ಕೋರ್ಟಿನಿಂದ ನೋಟೀಸ್ ಜಾರಿ ಮಾಡಬೇಕಾಗಿರುತ್ತದೆ. ಈ ನೋಟೀಸನ್ನು ವಾರ ಬಿಟ್ಟು ಜಾರಿ ಮಾಡಿಸಬೇಕೆಂದು ಹಾಲಿ ವಾರಸ್ದಾರ ಪ್ರಯತ್ನಿಸಿ ಲಂಚ ಕೊಡಲು ನೋಡುತ್ತಾನೆ. 'ಮೊಗಲಾಯಿ ಇತ್ತಂದ್ರ ಏನಾದರೂ ಮಾಡಬಹುದಿತ್ತು. ಈಗ ಕಾಂಗ್ರೆಸ್ ಮಂದಿಯ ಸರಕಾರ ಬಂದದ' ಎಂದು ನಿರಾಕರಿಸುತ್ತಾನೆ. ನಿಜಾಂ ಆಡಳಿತ ಚೆನ್ನಾಗಿತ್ತು ಎಂಬುದು, ಪ್ರಜಾಪ್ರಭುತ್ವದಲ್ಲಿ ಪ್ರಾಮಾಣಿಕತೆಯೇ ಇಲ್ಲ ಎಂಬುದು ವ್ಯಕ್ತಿಗತ ಅಭಿಪ್ರಾಯಗಳೇ ಹೊರತು ಒಟ್ಟಿನ ಅಭಿಪ್ರಾಯವಲ್ಲ. ರಾಜಕೀಯ ಸ್ಥಿತ್ಯಂತರಗಳಲ್ಲಿ ಹಳೆಯದರ ಬಗ್ಗೆ ಪ್ರೀತಿ, ಹೊಸದರ ಬಗ್ಗೆ ಅನುಮಾನವನ್ನು ಹಳಬರು ವ್ಯಕ್ತಪಡಿಸಿದರೆ, ಹೊಸಬರು ಇದಕ್ಕೆ ವಿರುದ್ಧದ ನಿಲುವನ್ನು ವ್ಯಕ್ತಪಡಿಸುತ್ತಾರೆ. ಇದು ಸಹಜವೆನಿಸುತ್ತದೆ. ವಾಸ್ತವ ಸಂಗತಿಯೆಂದರೆ ನಿಜಾಂ ರಾಜ್ಯವಿರಲಿ, ಪ್ರಜಾರಾಜ್ಯವಿರಲಿ ಸಮಯ ಸಾಧಕರು ಎರಡರ ನೆರಳಲ್ಲಿಯೂ ಆಶ್ರಯ ಪಡೆಯುತ್ತಾರೆ. ಈ ಕಾದಂಬರಿಯಲ್ಲಿ ಒಂದು ಕಡೆ, 'ಪೀರಮೊಹಮದ ಹಿಂದೂ ಮಹಾಸಭೆಯ ಸದಸ್ಯನಾಗುತ್ತಾನೆ. ಕೃಷ್ಣಾಚಾರಿ ಜಮಾತೇ ಇಸ್ಲಾಮಿನ ಮೆಂಬರ್ ಆಗುತ್ತಾನೆ' ಎಂದು ವ್ಯಕ್ತವಾಗಿದೆ.

'ಹೈದರಾಬಾದ್ ಕರ್ನಾಟಕ' ಪ್ರದೇಶದಲ್ಲಿ ದೀರ್ಘ ಕಾಲದಿಂದಲೂ 'ಹಿಂದೂ-ಮುಸ್ಲಿಂ' ಸಮುದಾಯಗಳು ಕೂಡಿ ಬಾಳಿವೆ. 'ಸಾಮರಸ್ಯ' ಏರ್ಪಟ್ಟಿದೆ ಎಂಬುದು ಎಷ್ಟು ಸತ್ಯವೋ, ಅಷ್ಟೇ ವಾಸ್ತವದ ಸಂಗತಿಯೆಂದರೆ 'ಹಿಂದು-ಮುಸ್ಲಿಂ ಗಲಭೆ'ಗಳಾಗಿರುವುದು. ಮುಸ್ಲಿಂ ಆಳ್ವಿಕೆ ಇರುವಾಗಲೂ ಇಲ್ಲಿ 'ಹಿಂದೂ'ಗಳಿಗೆ, ಹಿಂದೂಗಳ ಆಳ್ವಿಕೆ ಇರುವಾಗಲೂ 'ಮುಸ್ಲಿಮ'ರಿಗೆ ರಕ್ಷಣೆ ಮತ್ತು ಸಹಬಾಳ್ವೆ ಸಾಧ್ಯವಾಗಿದೆ. ಆದರೆ ಇದು ರಾಜಕೀಯದಿಂದ ಮಾತ್ರ ಸಾಧ್ಯವಾಗಿಲ್ಲ. ಸೂಫಿ, ಅನುಭಾವಿಗಳಿಂದಲೂ ಇಲ್ಲಿಯ ಜನಸಾಮಾನ್ಯರಿಂದಲೂ ಇದು ಸಾಧ್ಯವಾಗಿದೆ. ಆದರೆ ಈ ಶತಮಾನದಲ್ಲಿ ನಡೆದ ರಾಜಕೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ

ಮತ್ತು ಈ ಭಾಗದ ನಿಜಾಂ ಆಳ್ವಿಕೆಯ ವಿರುದ್ಧದ ಹೋರಾಟ, ಈ ನಡುವೆ ನಡೆದ ರಜಾಕಾರರ ದಾಳಿಯಿಂದಾಗಿ 'ಹಿಂದೂ-ಮುಸ್ಲಿಂ' ಬಾಂಧವ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪೆಟ್ಟುಬಿದ್ದು ಬಿರುಕಿಗೆ ಕಾರಣವಾಗಿದೆ. ಇಂಥ ಪ್ರಕ್ಷುಬ್ಧ ಕಾಲದಲ್ಲಿ ರಾಜಕೀಯ ಮತ್ತು ಸಮಯಸಾಧಕರ ಕೈವಾಡಗಳೂ ಸೇರಿ, ಸ್ವಾತಂತ್ರ್ಯಾನಂತರದ ರಾಜಕೀಯ ಸಂದರ್ಭದಲ್ಲಿ ಇದು ಒಡೆದು ಕಾಣುವ ಬಿರುಕಿಗೆ ಕಾರಣವಾಗಿದೆ. ಚರಿತ್ರೆಯೇ ದಾಖಲಿಸುವಂತೆ ಕಲ್ಬುರ್ಗಿ ನಗರದಲ್ಲಿ ಕೋಮು ಗಲಭೆಗಳು ನಿರಂತರವಾಗಿ ನಡೆಯುತ್ತಲೇ ಇವೆ. ಬಂದೇ ನವಾಜ್ -ಶರಣ ಬಸವೇಶ್ವರ ಸಂಸ್ಥೆಗಳು ಧಾರ್ಮಿಕ ಸಾಮರಸ್ಯದ ಸಂಕೇತ ಎಂಬುದು 'ರಾಜಕೀಯ' ಮಾತಾಗಿದೆ ಎಂಬುದನ್ನು ಈ ಕಾದಂಬರಿ ಧ್ವನಿಸುತ್ತದೆ.

ಒಂದು ಸನ್ನಿವೇಶ ಈ ಕಾದಂಬರಿಯಲ್ಲಿದೆ: ನೀರಿಗಾಗಿ ಎಲ್ಲರೂ ಮುಗಿಬಿದ್ದಿರುತ್ತಾರೆ. ಗದ್ದಲದಲ್ಲಿ ವೀರಭದ್ರನ ಕೊಡ ರಹಮತ್ ಬೀ ತಲೆಗೆ ಬಡಿಯುತ್ತದೆ. ಅವಳು ಅಸಮಾಧಾನ ವ್ಯಕ್ತಪಡಿಸುತ್ತಾಳೆ. ಈ ಅಸಮಾಧಾನ ಕೊಡ ತಲೆಗೆ ಬಡಿದದಕ್ಕಿಂತ ನೀರು ಸಿಗಲಾರದ್ದಕ್ಕೂ ಆಗಿರುತ್ತದೆ. ಅಷ್ಟೇ ಸಾಕು ಗದ್ದಲ ನಡೆಯುತ್ತದೆ. ಜಾತಿ ಮತ್ತು ರಾಜಕಾರಣ ಸೇರಿ ಸಂಚೆಯಾಗುವುದರಲ್ಲಿ ಮುಸ್ಲಿಮರ ಒಂದೆರಡು ಹೆಣಗಳು, ಮುಸ್ಲಿಮೇತರರ ಒಂದೆರಡು ಹೆಣಗಳು ಬಿದ್ದಿರುತ್ತವೆ. ನಗರದಲ್ಲಿ ಕೋಮು ಗಲಭೆ, ಕರ್ಫ್ಯೂ ಜಾರಿ, ಜನಸಮುದಾಯಗಳ ಬದುಕು ಅಸ್ತವ್ಯಸ್ತವಾಗುತ್ತದೆ. ಆದರೆ ಗಲಭೆಯಲ್ಲಿ ಸತ್ತ ಎರಡೂ ಕೋಮಿನವರು ಅಮಾಯಕರಾಗಿರುತ್ತಾರೆ. ಇದು ಸಾಮಾಜಿಕ ಸಂದರ್ಭದಲ್ಲಿ ನಡೆಯುತ್ತಿರುವ ವಾಸ್ತವ ಘಟನೆಗಳು ಕಾದಂಬರಿಯಲ್ಲಿ ಮೂಡಿವೆ.

ಈ ಕಾದಂಬರಿಯಲ್ಲಿ, ಹೊಸೂರಿನ ಹಳ್ಳಿ ರಾಜಕೀಯ, ರಾಜಕೀಯ ಸ್ಥಿತ್ಯಂತರ, ಇದರಿಂದ ಉಂಟಾದ ಆಡಳಿತಾತ್ಮಕ ಬಿಕ್ಕಟ್ಟುಗಳು, ಜಾತಿ ಗಲಭೆಯಿಂದ ಸಾಮಾಜಿಕ ಬದುಕಿನಲ್ಲಿ ಅಶಾಂತಿ ಮುಂತಾದ ಸಾಮಾಜಿಕ ಸಂದರ್ಭದಲ್ಲಿ ಘಟಿಸುವ ಅನೇಕ ವಾಸ್ತವ ಚಿತ್ರಣಗಳೊಂದಿಗೆ ಗೋಪಾಲರಾಯನ ಕೌಟುಂಬಿಕ ಸಮಸ್ಯೆಗಳು ಮತ್ತು ರವೀಂದ್ರನ ವೈಯಕ್ತಿಕ ಬಿಕ್ಕಟ್ಟುಗಳ ಚಿತ್ರಣವೂ ತುಂಬಿದೆ. ಸ್ವಾತಂತ್ರ್ಯಪೂರ್ವದಲ್ಲಿ ಮಧ್ಯಮ ವರ್ಗದ ಕುಟುಂಬಗಳ ಸ್ವರೂಪವನ್ನು ಇಲ್ಲಿ ಕಾಣಬಹುದು. ಗೋಪಾಲರಾಯ, ವಿಠೋಬರಾಯ, ಮುರಳೀಧರರಾಯ ಮೂರು ಜನ ತಮ್ಮ ತಮ್ಮ ಸಂಸಾರಗಳ ಜೊತೆಗೆ ಒಂದೇ ಮನೆಯಲ್ಲಿ ಬದುಕನ್ನು ಸಾಗಿಸುತ್ತಾರೆ. ನಂತರ ರವೀಂದ್ರನ ಸಂಸಾರವೂ ಅದೇ ಚಿಕ್ಕ ಮನೆಯಲ್ಲಿ ಸೇರಿಕೊಳ್ಳುತ್ತದೆ. ನಾಲ್ವರೂ ಸರಕಾರಿ ನೌಕರರು. ಆದರೆ ಅವರಿಗಿರುವ ಸಂಬಳದಿಂದ ಸಂಸಾರವನ್ನು ನೆಮ್ಮದಿಯಿಂದ ಸಾಗಿಸಲಾಗುವುದಿಲ್ಲ. ಇಡೀ ಮನೆಯ ಜವಾಬ್ದಾರಿ ರವೀಂದ್ರನ ಮೇಲೆ ಬೀಳುತ್ತದೆ. ತಿಂಗಳ ಖರ್ಚನ್ನು ಸಮನಾಗಿ ಹಂಚಿಕೊಂಡು ಜೀವನ ಸಾಗಿಸಬೇಕೆಂದರೂ ಅವರಿಗೆ ಹಣ ಸಾಲದಾಗುತ್ತದೆ. ಯಾರೂ ಅನಾವಶ್ಯಕವಾಗಿ ಖರ್ಚು ಮಾಡುವುದಿಲ್ಲ. ಗಂಟು ಮಾಡಿಕೊಳ್ಳುವ ಇಚ್ಛೆಯಿರುವುದಿಲ್ಲ. ಆದರೂ ಸಂಸಾರದಲ್ಲಿ ಬಿಕ್ಕಟ್ಟುಗಳು ಸಂಭವಿಸುತ್ತಲೇ ಇರುತ್ತವೆ. ಸಣ್ಣ ಪುಟ್ಟ ಆಸೆ-ಆಕಾಂಕ್ಷೆಗಳು, ಅವುಗಳ ಕೊರತೆಯಿಂದ ಮುನಿಸು, ಅಸಮಾಧಾನ, ಮಾನಸಿಕ ಹಿಂಸೆ, ನಿಟ್ಟುಸಿರುಗಳ ನಡುವೆ ಒಬ್ಬರಿಗೊಬ್ಬರು ಹಚ್ಚಿಕೊಂಡೇ ಬದುಕುತ್ತಾರೆ. ಆ ಕಾಲದಲ್ಲಿ ಎಲ್ಲರೂ ಸರಕಾರಿ ನೌಕರಸ್ಥರಾಗಿದ್ದರೂ ಅವಿಭಕ್ತ ಕುಟುಂಬದ ಮೇಲಿಟ್ಟಿದ್ದ ವಿಶ್ವಾಸ ಕುತೂಹಲ ಹುಟ್ಟಿಸುತ್ತದೆ. ಇರುವ ಚಿಕ್ಕ ಮನೆಯಲ್ಲಿ ನಾಲ್ಕೂ ಸಂಸಾರಗಳು ಒಂದೇ ಒಲೆಯ ಮೇಲೆ ಬದುಕುವ ಈ ಬ್ರಾಹ್ಮಣ ಕುಟುಂಬ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬೇರೆಬೇರೆಯಾಗುತ್ತವೆ. ಮೂರು ಕೋಣೆಯಲ್ಲಿ ಮೂರು ಸಂಸಾರಗಳು ನೆಲೆಗೊಂಡ ಸಂದರ್ಭದಲ್ಲಿಯೇ ರವೀಂದ್ರನ ಮದುವೆಯಾಗುತ್ತದೆ. ಅವನ ಹೆಂಡತಿ ಹಳ್ಳಿಯ ಬಡ ಕುಟುಂಬದಿಂದ ಬಂದಿದ್ದರಿಂದ ಅವಳಿಗೆ ಇಲ್ಲಿಯ ತೊಂದರೆಗಳು ತೊಂದರೆಗಳೆಂದು ಅನ್ನಿಸುವುದೇ ಇಲ್ಲ. ರಾತ್ರಿ ಪಡಸಾಲೆಯಲ್ಲಿ ಮಲಗುವ ಸಂದರ್ಭ ಬರುತ್ತದೆ. ತಂದೆ ಗೋಪಾಲರಾಯ ಇದನ್ನು ಅರಿತು ಮಗನಿಗೆ ತನ್ನ ಕೋಣೆಯನ್ನು ಬಿಟ್ಟುಕೊಡುವ ಔದಾರ್ಯ ತೋರಿಸುವುದಿಲ್ಲ. ಹೊಸದಾಗಿ ಮದುವೆಯಾದ ರವೀಂದ್ರ ಪಡಸಾಲೆಯಲ್ಲಿ ಮಲಗಬೇಕಾಗುತ್ತದೆ.

ಅವನ ಚಿಕ್ಕಪ್ಪಂದಿರೂ ಇದನ್ನು ಅರಿತುಕೊಳ್ಳುವುದಿಲ್ಲ. ಈ ಮೂರು ಜನರಿಗೆ ರವೀಂದ್ರನ ಮೇಲೆ ಆ ಹೊತ್ತಿನಲ್ಲಿ ಸಿಟ್ಟಿರಲು ಕಾರಣವಿರುತ್ತದೆ. ರಿಂದಾಬಾಯಿಯ ಆಸ್ತಿಯನ್ನು ತಮ್ಮದಾಗಿಸಿಕೊಳ್ಳಲು ಕೋರ್ಟಿಗೆ ಹೋಗಿ ಹಣ ಖರ್ಚು ಮಾಡಲು ರವೀಂದ್ರ ನಿರಾಕರಿಸಿಬಿಟ್ಟಿರುತ್ತಾನೆ. ಇದರಿಂದ ತಂದೆ ರವೀಂದ್ರನಿಗೆ ಕಿರುಕುಳ ಕೊಡುತ್ತಲೇ ಇರುತ್ತಾನೆ. ಅಸಹಾಯಕನಾಗಿ 'ದೇವರೆ ನನ್ನ ತಂದೆಯನ್ನು ಸಾಯಿಸು'-ಎಂದು ದೇವರನ್ನು ಪ್ರಾರ್ಥಿಸುವಷ್ಟು ಬೇಸರಪಡುತ್ತಾನೆಯೇ ಹೊರತು ಬೇರೆ ಮನೆ ಮಾಡಲು ಮನಸ್ಸು ಮಾಡುವುದಿಲ್ಲ. ಹೆಂಡತಿಯೂ ಒತ್ತಾಯಿಸುವುದಿಲ್ಲ. ಆದರೆ ಮನೆಯಲ್ಲಿ ಒಂದು ಚೂರು ನೆಮ್ಮದಿ ಇರುವುದಿಲ್ಲ. ಯಾರದೋ ಮಾತುಕೇಳಿ ತನ್ನ ಪಾಲಿಗೆ ಬಂದಿದ್ದ ದೇವರ ಕೋಣೆಯಲ್ಲಿ ಹಣವಿದೆಯೆಂದು ಮುರಲೀಧರರಾಯ ಹೆಂಡತಿಯೊಂದಿಗೆ ರಾತ್ರಿಯೆಲ್ಲ ಮನೆ ತೋಡಿ ವಿಕಾರಗೊಳಿಸುತ್ತಾನೆ. ಅದನ್ನು ಕಂಡು ಉಳಿದಿಬ್ಬರು ಅವನಿಗೆ ಹಣ ಸಿಕ್ಕಿದೆಯೆಂದು ಅದರಲ್ಲೂ ತಮಗೆ ಪಾಲಿದೆ ಎಂದು ಬಹಿರಂಗ ಜಗಳಕ್ಕೆ ನಿಲ್ಲುತ್ತಾರೆ. ಈ ನಡುವೆ ಉರ್ದು ಭಾಷೆ ಬಿಟ್ಟರೆ ಕನ್ನಡ ಮಾತನಾಡಲೂ ಬಾರದ ವಿಠೋಬರಾಯ ಇದ್ದಕ್ಕಿದ್ದ ಹಾಗೆ ವಚನಗಳನ್ನು ಹೇಳತೊಡಗುತ್ತಾನೆ. ಪರೀಕ್ಷಿಸಲಾಗಿ ಶರಭಯ್ಯನೆಂಬುವವನು ಸತ್ತು ದೆವ್ವವಾಗಿ ವಿಠೋಬನಿಗೆ ಬಡಿದುಕೊಂಡಿರುತ್ತಾನೆ. ದೆವ್ವ ಬಡಿದುಕೊಂಡ ಹಿಂದಿನ ದಿನ ವಿಠೋಬಾರಾಯ ಒಂದು ನ್ಯಾಯ ಬಗೆಹರಿಸಲು ಸರಕಾರಿ ಕೆಲಸದ ಮೇಲೆ ಕಪನೂರಿಗೆ ಹೋಗಿ ಬಂದಿದ್ದ. ಆ ಊರಿನ ಶರಬಯ್ಯ ಸತ್ತು ದೆವ್ವವಾಗಿದ್ದ. ಅದೇ ದೆವ್ವ ವಿಠೋಬಾನಿಗೆ ಹೊಕ್ಕಿತ್ತು. ಮಂತ್ರವಾದಿ ಶೇಷಪ್ಪನನ್ನು ಕರೆಸಿ ದೆವ್ವ ಬಿಡಿಸಲಾಗುತ್ತದೆ.

ವಿಚಿತ್ರವಾದರೂ ಈ ಘಟನೆ ನಡೆಯುತ್ತದೆ. ಈ ಬಗ್ಗೆ ಕಾದಂಬರಿಕಾರರೆ ವಿವರಣೆ ನೀಡಿದ್ದಾರೆ: 'ಇದು ನಿಜವಾದ ಕತೆ. ಇದರಲ್ಲಿ ಒಂದಕ್ಷರವೂ ಅತಿಶಯೋಕ್ತಿ ಇಲ್ಲ. ವಿಚಾರವಾದಿಗಳು ವಿಚಾರ ಮಾಡುವಂಥ ಘಟನೆ. ನಾನು ವಿಚಾರವಾದಿಗಳಂತೆ ಬಹಳಷ್ಟು ವಿಚಾರ ಮಾಡಿದ್ದೇನೆ. ಮನೋವಿಜ್ಞಾನ, ಪರಾಮನೋವಿಜ್ಞಾನ, ಹಾಲ್ಯೂಸಿನೇಷನ್ ಇತ್ಯಾದಿ ಬಗ್ಗೆ ತಿಳಿದುಕೊಂಡು ಈ ಘಟನೆಯನ್ನು ಪರೀಕ್ಷಿಸುವ ವಿಶ್ಲೇಷಿಸುವ ಪ್ರಯತ್ನ ಮಾಡಿ ಸೋತಿದ್ದೇನೆ.'

'ಈ ದೃಶ್ಯ ಜಗತ್ತಿನಿಂದ ಬೇರ್ಪಟ್ಟಿದ್ದು ಇನ್ನೊಂದು ಜಗತ್ತು ಇದೆಯಾ? ಅಲ್ಲಿದ್ದ ಜೀವರಾಶಿಗಳ ಜೀವನ ಕ್ರಮವೇನು? ತರ್ಕಕ್ಕೆ ನಿಲುಕಲಾರದಂಥ ಘಟನೆಗಳಿಗೆ, ಈ ಅದೃಶ್ಯ ಜಗತ್ತಿನ ಜೀವಗಳೇ ಕಾರಣವಾಗಿರುತ್ತವೇನು? ಇವುಗಳು ಅಭಿವ್ಯಕ್ತಗೊಳ್ಳಲು ಈ ದೃಶ್ಯ ಜಗತ್ತಿನ ಮಾಧ್ಯಮವನ್ನೇ ಬಯಸಲು ಕಾರಣವೇನು? ಈ ಜಗತ್ತು ಬಿಟ್ಟು ಹೋದರೂ ಇಲ್ಲಿಯೇ ಇರಬೇಕೆಂಬ ತಳಮಳ ಯಾಕೆ? ಈ ನೆಲದ, ಈ ಭೂಮಿಯ, ಈ ಜೀವನದ ಆಶೆ ಆಕರ್ಷಣೆ ಇಷ್ಟೊಂದು ಪ್ರಬಲವಾಗಿರುತ್ತದೆಯಾ? ತಾಮಸ ಜೀವರಾಶಿಗಳಂತೆ ಸಾತ್ವಿಕ ಜೀವರಾಶಿಗಳು ಇರಬಹುದಲ್ಲ! ಎಂಥ ವಿಚಿತ್ರವಲ್ಲವೆ? ನಮ್ಮ ಜೊತೆಗೆ, ಇನ್ನೊಂದು ವಿಶ್ವ, ಇನ್ನೊಂದು ಲೋಕ ಇದ್ದಿದ್ದು ಅದ್ಭುತವಲ್ಲವೇ? ನಿರಾಕರಿಸುವಂತಿಲ್ಲ, ಸ್ವೀಕರಿಸುವಂತಿಲ್ಲ. ಅಂಥದೊಂದು ವಿಚಿತ್ರ ವ್ಯಾಪಾರದ ಲೋಕ ನಮ್ಮಲ್ಲಿರುವುದನ್ನು ಅನುಭವಿಸಿ ಮೈ ರೋಮಾಂಚನಗೊಳ್ಳುತ್ತದೆ'(ಪು.೧೪೦-೧೪೧)

ಕಾದಂಬರಿಯಲ್ಲಿ ನಡೆಯುವ ಘಟನೆ ಮತ್ತು ಅದಕ್ಕೆ ನಿರೂಪಕ ಕೊಡುವ ವಿವರಗಳು ಭಯಾನಕವೆನಿಸುತ್ತವೆ. ಇದಕ್ಕೆ ವೈಜ್ಞಾನಿಕವಾಗಿ ಏನೇನೋ ವ್ಯಾಖ್ಯಾನಗಳಿದ್ದರೂ ಇದು ಇಂದಿಗೂ ಬಗೆಹರಿಯದ ಸಮಸ್ಯೆಯಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಭಾನಾಮತಿ, ದೆವ್ವ ಮುಂತಾದ ಜೀವವಿರೋಧಿ ಘಟನೆಗಳು ಅನೇಕ ಸಲ ಜನಸಮುದಾಯಗಳನ್ನು ತಲ್ಲಣಗೊಳಿಸುತ್ತವೆ. ಅನೇಕ ಪವಿತ್ರ ಸ್ಥಳಗಳು ದೆವ್ವ ಬಡಿದವರಿಗೆ ಬಿಡಿಸುವ ಕಾರ್ಯಮಾಡುತ್ತಿವೆ. ದರಗಾಗಳಲ್ಲಿ, ತಿಂತಿಣಿ ಮೌನೇಶ್ವರ ಮುಂತಾದ ಕ್ಷೇತ್ರಗಳಲ್ಲಿ ಈ ಭಯಾನಕ ದೃಶ್ಯಗಳನ್ನು ಈಗಲೂ ಕಾಣಬಹುದು. ಇದರ ಸತ್ಯಾಸತ್ಯತೆ ಮಾತ್ರ ಬಯಲು ಮಾಡಲಾಗಿಲ್ಲ. ಆದರೆ ಇದರ ದುರುಪಯೋಗಗಳೂ ನಡೆದು ಮನುಷ್ಯರ ಬದುಕು ಬರ್ಬರಗೊಂಡಿದೆ. ಅದರಲ್ಲೂ ಕೆಳವರ್ಗದಲ್ಲಿ ಬದುಕಿನ

ಅನೇಕ ತಾಪತ್ರಯಗಳಿಂದ ಮುಕ್ತರಾಗಲು ದೆವ್ವ ಬಡಿದಿದೆಯೆಂದು ನಟಿಸುವುದು ನಡೆದರೆ, ಇನ್ನೊಂದು ಕಡೆ ದೆವ್ವ ಬಡಿದಿದೆಯೆಂದು ನಿರಪರಾಧಿಗಳನ್ನು ಶಿಕ್ಷಿಸುವುದು, ದ್ವೇಷ-ಅಸೂಯೆಗಳು ಇಂಥ ಸಂದರ್ಭದಲ್ಲಿ ಹಿತ ಸಾಧಿಸಿಕೊಳ್ಳುತ್ತವೆ. ಇದಕ್ಕಾಗಿಯೇ ವೇಷಧಾರಿ ಪೂಜಾರಿಗಳು, ಕಪಟ ಮಂತ್ರವಾದಿಗಳು ಹುಟ್ಟಿಕೊಂಡು ಸಮಾಜದಲ್ಲಿ ಅಸ್ಥಿರತೆಯನ್ನುಂಟು ಮಾಡುತ್ತಿರುವುದು ಈ ಪ್ರದೇಶದಲ್ಲಿ ನಡೆಯುತ್ತಲೇ ಇದೆ.

ರವೀಂದ್ರನೇ ಇಂಥ ಮೋಸದ ಜಾಲಕ್ಕೆ ಒಳಗಾಗಿ ಬಿಡುತ್ತಾನೆ. ಚಿಕ್ಕಪ್ಪನಿಗೆ ಆದ ಘಟನೆಯಿಂದ ಮಾನಸಿಕ ನೆಮ್ಮದಿ ಕಳೆದುಕೊಂಡು ಬಳಲತೊಡಗಿದಾಗ ಮನೆಮಂದಿ, ರವೀಂದ್ರನಿಗೆ ದೆವ್ವ ಬಡಿದಿದೆಯೆಂದು ಮಂತ್ರವಾದಿಗಳ ಕೈಗೆ ಒಪ್ಪಿಸಿಬಿಡುತ್ತಾರೆ. ಇದರಿಂದ ರವೀಂದ್ರ ತಮಾಷೆಗೆ ಗುರಿಯಾದರೂ ನಂಬಿಕೆಗಳಿಂದ ಜರ್ಝರಿತನಾಗುತ್ತಾನೆ. ಇಂಥ ಘಟನೆಗಳು ನಂಬಿಕೆ, ಮೂಢನಂಬಿಕೆಗಳಿಗೆ ಎಡೆಮಾಡಿ ತಿಳುವಳಿಕೆಗೆ ನಿಲುಕದಂತಾಗಿ ಸತ್ಯವನ್ನು ಮೀರಿ ಮನುಷ್ಯನ ಬದುಕನ್ನು ಹದಗೆಡಿಸುತ್ತಿರುವುದು ಮಾತ್ರ ನಿಜ ಸಂಗತಿ.

ರವೀಂದ್ರನ ವೈಯಕ್ತಿಕ ಬದುಕಿನಲ್ಲಿ ಅನೇಕ ಘಟನೆಗಳು ಬಂದು ಹೋಗುತ್ತವೆ. ಬಡತನ, ಬಿಡದ ಸಂಪ್ರದಾಯ-ನಂಬಿಕೆಗಳಿಂದಲೂ ಅವಿಭಕ್ತ ಕುಟುಂಬದಿಂದಲೂ ಚಿಕ್ಕಪ್ಪನವರ ತಂದೆಯ ಸಣ್ಣತನಗಳಿಂದಲೂ ರವೀಂದ್ರನಿಗೆ ನೆಮ್ಮದಿ ತರುವುದಿಲ್ಲ. ಹೆಂಡತಿ ಸಾವಿತ್ರಿಯ ಮುಗ್ಧತೆ, ತಾಳ್ಮೆ ಅವನಿಗೆ ಸಹಾಯಕವಾದರೂ ಮನೆಯಲ್ಲಿದ್ದ ಅನೇಕ ಕಿರುಕುಳಗಳ ನಡುವೆ ತನ್ನ ಹಿರಿಯರನ್ನು ನಿಯಂತ್ರಿಸಿಕೊಂಡು ಬದುಕನ್ನು ನಡೆಸುತ್ತಾನೆ. ಬಾಲ್ಯದಲ್ಲಿ ಮನೆಯ ಪಕ್ಕದ ಚಂದ್ರಿ ಎಂಬ ಹುಡುಗಿ ಜೊತೆ ಬಾಲ್ಯದ ಸಹಜ ಸ್ನೇಹ ಬೆಳೆದಿರುತ್ತದೆ. ಕಾಲಾಂತರದಲ್ಲಿ ಆ ಚಂದ್ರಿ ಸೂಳೆಯಾಗಿ ಬೀದಿಯಲ್ಲಿ ಬಿದ್ದಿರುವುದನ್ನು ಕಾಣುತ್ತಾನೆ. ಆಕಸ್ಮಿಕವಾಗಿ ಸಂಧಿಸಬೇಕಾದ ಪ್ರಸಂಗ ಬಂದು ಚಂದ್ರಿಯನ್ನು ಕೂಡುತ್ತಾನೆ. ದೈಹಿಕ ಸುಖ ಪಡೆದರೂ ಚಂದ್ರಿಯನ್ನು ಬದುಕಿನ ದಾರಿಗೆ ಹೊಂದಿಸಲು ಅಸಹಾಯಕನಾಗುತ್ತಾನೆ. ಚಂದ್ರಿ ಬಾಂಬೇ ಸೇರಿಬಿಡುತ್ತಾಳೆ. ಗೋಹರಜಾನ್ ಎಂಬ ಸಂಗೀತಗಾರ್ತಿಯ ಪರಿಚಯವಾಗಿ, ಅವಳ ಸಂಗೀತದಿಂದ ನೆಮ್ಮದಿಯನ್ನು ಪಡೆಯುತ್ತಾನಾದರೂ, ಅವಳ ಬದುಕಿನಲ್ಲಿ ಬಂದ ಕಷ್ಟಗಳಲ್ಲಿ ಪಾಲ್ಗೊಳ್ಳಲು ಹೋಗಿ, ಅಸಹಾಯಕನೂ ಹಾಸ್ಯಾಸ್ಪದನೂ ಆಗಿಬಿಡಬೇಕಾಗುತ್ತದೆ. ಗೋಹರಜಾನ್ ಇರುವ ಮನೆಯನ್ನು ಶ್ರೀಮಂತನೊಬ್ಬ ತನ್ನ ಹಿತಕ್ಕಾಗಿ ವಶಪಡಿಸಿಕೊಳ್ಳಲು ತೊಂದರೆಕೊಡುತ್ತಾನೆ. ರವೀಂದ್ರ ಗೋಹರಜಾನಳ ಪರವಾಗಿ ಪೊಲೀಸ್ ಸಹಾಯ ಕೇಳುತ್ತಾನೆ. ಪೊಲೀಸರು ವ್ಯವಸ್ಥೆಯ ಪರವಾಗಿದ್ದು ತಮ್ಮ ಅಸಹಾಯಕತೆಯನ್ನು ಹೇಳಿ, ರವೀಂದ್ರನಿಗೆ ಇದರಲ್ಲಿ ಕೈಹಾಕದಿರಲು ಹೇಳುತ್ತಾರೆ. ಪೊಲೀಸರಿಗೆ ಗೋಹರಜಾನ ಮತ್ತು ರವೀಂದ್ರನ ನಿಜ ಪರಿಸ್ಥಿತಿ ಗೊತ್ತಿದ್ದರೂ, ರಾಜಕಾರಣದ ಒತ್ತಡದಿಂದ ರವೀಂದ್ರನಿಗೇ ಏಟು ಕೊಡಲು ನೋಡುತ್ತಾರೆ. ಬೇಸತ್ತ ಗೋಹರಜಾನ್ ಗ್ವಾಲಿಯರ್‌ಗೆ ಹೋಗುತ್ತಾಳೆ. ರವೀಂದ್ರ ಮಾನಸಿಕ ಅಸ್ವಸ್ಥತೆಯಲ್ಲಿ ಉಳಿಯುತ್ತಾನೆ.

ಈ ಕಾದಂಬರಿ ಹೈದರಾಬಾದ್ ಕರ್ನಾಟಕದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲದ ಸ್ಥಿತ್ಯಂತರದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ರಂಗದಲ್ಲಿ ಉಂಟಾದ ಬದಲಾವಣೆಗಳನ್ನು, ಈ ಬದಲಾವಣೆಗಳಿಗೆ ಸಿಕ್ಕ ಜನಸಮುದಾಯಗಳ ಬದುಕಿನ ಚಿತ್ರಗಳನ್ನೂ ನೈಜವಾಗಿ ಹಿಡಿದಿದೆ. ಹೊಸೂರಿನ ಬದುಕನ್ನು ಚಿತ್ರಿಸುವ ಮೂಲಕ ಅಂದಿನ ಗ್ರಾಮಾಂತರಗಳ ಬದುಕನ್ನು ವಿವರಿಸುತ್ತದೆ. ಕಲಬುರ್ಗಿ ನಗರದ ಜನಸಾಮಾನ್ಯರ ಬದುಕನ್ನು ತೋರಿಸುವ ಮೂಲಕ ನಗರ ಪ್ರದೇಶದ ಜನಸಾಮಾನ್ಯರ ಬವಣೆಗಳನ್ನು, ಜಾತೀಯತೆಯನ್ನು ಹಾಗೂ ಮಧ್ಯಮ ವರ್ಗದ ನೌಕರಸ್ಥರ ಬದುಕನ್ನು ಈ ಕಾದಂಬರಿ ಅನೇಕ ಘಟನೆ, ಸಂಗತಿಗಳ ಮೂಲಕ ವ್ಯಕ್ತಪಡಿಸಿದೆ. ಈ ಪ್ರದೇಶದ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಏಳು-ಬೀಳುಗಳನ್ನು ವರದಿಯ ರೂಪದಲ್ಲೂ ಹೇಳಲು ಪ್ರಯತ್ನಿಸಿದೆ. ಚಂದ್ರಕಾಂತ ಕುಸನೂರರ ಕಾದಂಬರಿಗಳು ಜನಸಾಮಾನ್ಯರ

ಬದುಕನ್ನು ತೋರಿಸಿದಂತೆ, ಇದೇ ಕಾಲದ, ಇದೇ ಪರಿಸರದ, ಇಂಥ ಪರಿಸ್ಥಿತಿಯ ಚಿತ್ರಣವನ್ನು 'ಹಾಲು ಜೇನು' ಕಾದಂಬರಿಯಲ್ಲೂ, ನಿಜಾಂ ಆಡಳಿತ ಅಂತ್ಯಗೊಂಡ ನಂತರ, ನವಾಬ ಮನೆತನಗಳು ಯಾವ ಸ್ಥಿತಿಯನ್ನು ತಲುಪಿದವು ಎಂಬ ಸಂಗತಿಯನ್ನು ಒಂದು ಕುಟುಂಬಕ್ಕೆ ಸಂಬಂಧಿಸಿ 'ಸುಳಿಗಾಳಿ' ಕಾದಂಬರಿಯಲ್ಲೂ ಚಿತ್ರಿಸಲು ಜಯತೀರ್ಥ ರಾಜಪುರೋಹಿತರು ಪ್ರಯತ್ನಿಸಿದ್ದಾರೆ.

ರಾಜಕೀಯ ಪಲ್ಲಟಗಳ ಪರಿಣಾಮಗಳು

ಚರಿತ್ರೆಯ ಉದ್ದಕ್ಕೂ ರಾಜಕೀಯ ಸ್ಥಿತ್ಯಂತರಗಳಿಂದ ಹೊಡೆತ ತಿಂದವರು ಜನಸಾಮಾನ್ಯರು, ಬಡವರು ಮತ್ತು ಕೆಳವರ್ಗದವರು. ಮತಾಂತರ ಪ್ರಕ್ರಿಯೆ ನಡೆದಾಗಲೆಲ್ಲ ಈ ಕ್ರಿಯೆಗೆ ಒಳಗಾದವರೂ ಕೂಡ ಇವರೇ. ಧಾರ್ಮಿಕ ಕಾರಣಕ್ಕೆ ಮತಾಂತರ ಹೊಂದಿದವರ ಪ್ರಶ್ನೆ ಬೇರೆ. ಬುದ್ಧ, ವೀರಶೈವ, ಮುಸ್ಲಿಂ, ಕ್ರೈಸ್ತ ಧರ್ಮಗಳ ಪ್ರಭಾವ ಹೆಚ್ಚಾಗಿದ್ದಾಗ ಸ್ವಪ್ರೇರಣೆಯಿಂದ ಮತಾಂತರ ಹೊಂದಿದವರ ನಿಲುವುಗಳು ಬೇರೆ. ಧರ್ಮದ ಜೊತೆಗೆ ರಾಜಕೀಯ ಉದ್ದೇಶವಿದ್ದಲ್ಲಿ ಆಮಿಷಗಳಿರುತ್ತವೆ, ಒತ್ತಡಗಳಿರುತ್ತವೆ. ಈ ಎರಡು ಅಂಶಗಳು ಕೆಳವರ್ಗದವರಿಗೆ ಅನಿವಾರ್ಯವಾಗಿ ಪ್ರೇರಕವಾಗುತ್ತವೆ. ರಾಜ ಯಾರೇ ಇರಲಿ ಜನಸಾಮಾನ್ಯರು ಮಾತ್ರ ಸ್ಥಳೀಯ ಜಮೀನ್ದಾರಿಗಳ ಅಧೀನದಲ್ಲಿದ್ದೇ ಬದುಕುತ್ತಿದ್ದರು. ರಾಜಕೀಯ ಸ್ಥಿತ್ಯಂತರಗಳಿಂದ ಒಬ್ಬ ರಾಜ ಹೋಗಿ ಮತ್ತೊಬ್ಬ ಬಂದರೂ ಜಮೀನ್ದಾರಿಗಳೂ ಆಳುವ ವರ್ಗದವರ ನೆರಳಿನಲ್ಲಿ ಬದುಕುತ್ತಿದ್ದರಿಂದ ನಿರಂತರವಾಗಿ ಸ್ಥಳೀಯ ದೊರೆಗಳಾಗಿಯೇ ಉಳಿಯುತ್ತಿದ್ದರು. ಇಂಥ ಸ್ಥಳೀಯ ದೊರೆಗಳಿಂದ ಕೆಳವರ್ಗದವರಿಗೆ ಬಿಡುಗಡೆ ಇರಲಿಲ್ಲ. ಇಂಥ ಸ್ಥಿತಿಯಲ್ಲಿ ಬಿಡುಗಡೆ ಹೊಂದಲು ಸಾಮಾನ್ಯರಿಗೆ ಮತಾಂತರವೇ ಮಾರ್ಗವಾಗಿತ್ತು. ಇಂಥ ದೌರ್ಬಲ್ಯವನ್ನು ಬಲ್ಲ ಆಳುವ ವ್ಯವಸ್ಥೆಯು ತನ್ನ ಸಮಯವನ್ನು ಸಾಧಿಸಿಕೊಂಡಿದೆ. ೧೯೪೭ರ ನಂತರವೂ ನಿಜಾಮನು ತನ್ನ ಸಂಸ್ಥಾನದೊಂದಿಗೆ ಸ್ವತಂತ್ರನಾಗಿ ಮುಂದುವರಿಯಲು ನಿರ್ಧರಿಸಿದ್ದರಿಂದ ಅವನಿಗೆ ತನ್ನ ಸಂಸ್ಥಾನದ ಜನರ ಬೆಂಬಲ ಬೇಕಾಗಿತ್ತು. ರಾಜಕೀಯ ಉದ್ದೇಶಕ್ಕಾಗಿ ಜನಬೆಂಬಲ ಪಡೆಯಲು ಅದರಲ್ಲೂ ಬಹುಸಂಖ್ಯಾತ ಮುಸ್ಲಿಮರ ಬೆಂಬಲ ಪಡೆಯಲು ಕೆಲವು ಆಮಿಷಗಳನ್ನು ಜನರ ಮುಂದಿಟ್ಟನು. ಮುಸ್ಲಿಮರು ಸಾಲ ಮಾಡಿದ್ದರೆ ಅದನ್ನು ಮರಳಿ ಕೊಡಬೇಕಾಗಿಲ್ಲ. ಮುಸ್ಲಿಮರ ಆಸ್ತಿಪಾಸ್ತಿಯನ್ನು ಅನ್ಯರು ಕೊಳ್ಳುವಂತಿಲ್ಲ ಮತ್ತು ಅಧೀನಪಡಿಸಿಕೊಂಡು ಭೋಗಿಸುವಂತೆಯೂ ಇಲ್ಲ. ಯಾರೇ ಮುಸ್ಲಿಮರಾದರೂ ಅವರಿಗೂ ಈ ನಿಯಮ ಅನ್ವಯವಾಗುತ್ತದೆ ಎಂಬ 'ಫರ್ಮಾನ' ಹೊರಡಿಸಿದನು. ಇದು ಕೆಳವರ್ಗದವರು ತಮ್ಮ ಸ್ಥಳೀಯ ಗೌಡ, ಸಾಹುಕಾರ, ದೇಸಾಯಿಗಳಲ್ಲಿ ಮಾಡಿದ ಸಾಲ, ಒತ್ತೆ ಹಾಕಿದ ಆಸ್ತಿಪಾಸ್ತಿಗಳನ್ನು ತಮ್ಮದಾಗಿಸಿಕೊಳ್ಳಲು ಮತಾಂತರಕ್ಕೆ ಪ್ರೇರಣೆಯಾಗುತ್ತದೆ. ಸಾಲದಿಂದ ಮುಕ್ತರಾಗುವುದು, ಒತ್ತಿ ಬಿದ್ದಿದ್ದ ಭೂಮಿ, ವಸ್ತು ಅನಾಯಾಸವಾಗಿ ಮರಳಿ ಪಡೆಯುವುದಕ್ಕೆ ಇದೊಂದು ಸರಳ ದಾರಿಯಾಗಿತ್ತು. ಅನೇಕ ದಲಿತರು ಮತಾಂತರವನ್ನು ಹೊಂದಿದರು.

'ಹಾಲು ಜೇನು' ಕಾದಂಬರಿಯಲ್ಲಿ ಇಂಥ ವಾಸ್ತವ ಸ್ಥಿತಿಯ ಚಿತ್ರಣವಿದೆ. ಮಾದರ ಕನಕ ಗೌಡರಲ್ಲಿ ಮಾಡಿದ ಅತ್ಯಲ್ಪ ಸಾಲಕ್ಕೆ ಬಹು ದೀರ್ಘಕಾಲ ದುಡಿಯುತ್ತಲೇ ಬಂದಿದ್ದರೂ ಸಾಲ ಮುಟ್ಟಿರುವುದಿಲ್ಲ. ಶೇಖಸಾಬ ಮಲ್ಲಣ್ಣ ಸಾಹುಕಾರನಲ್ಲಿ ಮಾಡಿದ ಐದುನೂರು ರೂಪಾಯಿ ಸಾಲಕ್ಕೆ ಹದಿನಾಲ್ಕು ವರ್ಷ ದುಡಿದಿದ್ದರೂ ಅರ್ಧ ಸಾಲ ತೀರಿಸಲಾಗಿರಲಿಲ್ಲ. ಹೇಮಗಿರಿಯಲ್ಲಿ ಇಂಥ ಸಾಲಗಾರರು ಮುಸ್ಲಿಮರಾಗಿರುತ್ತಾರೆ. ಇಂಥ ಸಂದರ್ಭದಲ್ಲಿ ಕೆಳವರ್ಗದವರಿಗೆ ಜಾತಿ, ಧರ್ಮ ಎಂಬುದು ಜೀವನ್ಮರಣದ ಪ್ರಶ್ನೆಯಾಗಿರುವುದಿಲ್ಲ. ನವ ಮುಸಲ್ಮಾನರಿಗೆ ಉರ್ದು ಬರುವುದಿರಲಿ, 'ಅಕ್ಷರ'ದ ಸ್ಪರ್ಶವೇ ಇರುವುದಿಲ್ಲ. ಮತಾಂತರಗೊಂಡರೂ ಆ ಧರ್ಮದ ಸಂಸ್ಕೃತಿಯ ಅರಿವಿರುವುದಿಲ್ಲ. ನಮಾಜು, ಮಸೀದೆ ಇದ್ಯಾವುದೂ ಗೊತ್ತಿರದ ಹೇಮಗಿರಿಯ ಹೊಸ ಮುಸ್ಲಿಮರು ತಮಾಷೆಗೆ ವಿತ್ರಚ ಗುರಿಯಾಗುವುದು, ಬವಣೆ ಪಡುವುದು ಈ ಕಾದಂಬರಿಯಲ್ಲಿದೆ.

ಶೇಖಸಾಬನು ತನ್ನ ಯಾವುದೇ ಕೆಲಸ ಕಾರ್ಯಗಳನ್ನು ಮಾಡುವ ಮುನ್ನ ಶೀನಪ್ಪಾಚಾರಿ ಜೋಯಿಸರನ್ನು ಕೇಳಿಯೇ ಮುಂದುವರಿಯುತ್ತಿದ್ದ. ಮಲ್ಲಣ್ಣ ಸಾಹುಕಾರನಲ್ಲಿ ಮಾಡಿದ ಐದುನೂರುಸಾಲಕ್ಕೆ ಹದಿನಾಲ್ಕು ವರ್ಷಗಳ ಕಾಲ ದುಡಿದರೂ ಅರ್ಧ ಸಾಲವೂ ತೀರದೆ ಬೇಸತ್ತಿದ್ದ. ಅದೇ ಸಂದರ್ಭದಲ್ಲಿ ನಿಜಾಮನ 'ಫರ್ಮಾನ'ದಿಂದ ಮುಸ್ಲಿಮರಿಗೆ ಸಿಗುವ ಸೌಲತ್ತುಗಳನ್ನು ಊರಿನ ಪೇಷಿಮಾಮ ಶೇಖಸಾಬನಿಗೆ ಸಾಲದಿಂದ ಮುಕ್ತನಾಗಲು ರಾಜಕೀಯ ಬೆಂಬಲದಿಂದ ಪ್ರೇರೇಪಿಸುತ್ತಾನೆ. ಇಂಥ ಪ್ರಚೋದನೆಯಿಂದ ಮಾದರ ಕನಕನಂಥವರೇ ಮುಸ್ಲಿಮರಾಗಿ ಹೋಗಿರುವಾಗ, ಮುಸ್ಲಿಮನಾದ ಶೇಖಸಾಬನಿಗೆ ದಾರಿ ಸುಲಭವಾಗಿತ್ತು. ಆದರೆ ಅವನು ಅನುಮಾನಿಸಿದ. ತನ್ನ ಗುರುವಿನಂತಿದ್ದ ಶೀನಪ್ಪಾಚಾರಿ ಜೋಯಿಸರ ಮುಂದೆ ವಿಷಯವಿಟ್ಟು ಸಲಹೆ ಕೇಳಿದ. 'ನಾಲ್ಕು ದಿನ ಬಾಳುವ ಕೆಲಸ ಮಾಡಬೇಕು ಶೇಖಣ್ಣ ಈಗೇನೋ ನಮ್ಮ ಪೇಷಿಮಾಮ, ಸರಕಾರ....ನಿನಗ ಹೊಲಾ ಕೊಡಿಸ್ಯಾರು. ಆದರೆ ನಿನಗ ಬಂದ ಸಂಭಾವಿತ ಅಂಬೋ ಹೆಸರಾಗಲೀ... ನಿನ್ನ ಬಗ್ಗೆ ಮುರಿಯುವ ಮಂದಿಯ ಮನಸ್ಸಾಗಲೀ ಸರಕಾರ ಕೊಡಿಸೋದಿಲ್ಲ ನೋಡು. ತಾಳಿದವನು ಬಾಳ್ಯಾನು ಅಂತ. ಸಾವುಕಾರನ್ನ ಕೇಳಿನೋಡು ಏನಂತಾನ....'(ಪುಟ-೨೧) ಮುಸ್ಲಿಮರ ಆಳ್ವಿಕೆ ಇರುವುದರಿಂದ ಮಲ್ಲಪ್ಪ ಸಾಹುಕಾರನೂ ತಗ್ಗುತ್ತಾನೆ. ಈ ಆಳ್ವಿಕೆ ಎಷ್ಟು ದಿನದ್ದು ಎಂದು ಶೇಖಸಾಬ ಯೋಚಿಸುತ್ತಾನೆ. ಇಬ್ಬರ ನಡುವೆ ಒಪ್ಪಂದವಾಗಿ, ಇಬ್ಬರೂ ಉಳಿದುಕೊಳ್ಳುವಂತೆ ನಡೆದುಕೊಳ್ಳುತ್ತಾರೆ.

ಪೇಷಿಮಾಮನ ಪ್ರಚೋದನೆಗೆ ಶೇಖಸಾಬ ಒಳಗಾಗುವುದಿಲ್ಲ. ಶೀನಪ್ಪಾಚಾರಿಯ ಮಾತುಗಳಿಂದ ಎಚ್ಚತ್ತು, ಮಲ್ಲಣ್ಣ ಸಾಹುಕಾರನ ಜತೆ ಹೊಂದಾಣಿಕೆ ಮಾಡಿಕೊಂಡ ಶೇಖಸಾಬನ ವಿವೇಕ ಯಾರ ಮನಸ್ತಾಪಕ್ಕೂ ಕಾರಣವಾಗುವುದಿಲ್ಲ. 'ಹಾಲು ಜೇನು' ಕಾದಂಬರಿಯಲ್ಲಿ ಬರುವ ಈ ಪ್ರಸಂಗವೇ ಅದರ ಆಶಯವಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅದೂ ಹಳ್ಳಿಗಳಲ್ಲಿ 'ಹಿಂದೂ-ಮುಸ್ಲಿಮ'ರು ಅನ್ಯೋನ್ಯವಾಗಿದ್ದರು. ಆಳುವ ರಾಜಕೀಯ ಶಕ್ತಿಯೇ ಇಂಥ ಅನ್ಯೋನ್ಯ ಸಂಬಂಧಗಳನ್ನು ಮುರಿದು ಮತೀಯ ಪ್ರಚೋದನೆಗೆ ಕಾರಣವಾಗಿದೆ ಎಂದು ನಿರೂಪಿಸಲು ಪ್ರಯತ್ನಿಸಿದೆ.

ಶೇಖಸಾಬನ ಕುಟುಂಬವನ್ನೇ ಕೇಂದ್ರವಾಗಿಟ್ಟುಕೊಂಡು ಕಾದಂಬರಿ ಬೆಳೆಯುತ್ತದೆಯಾದರೂ ಹೇಮಗಿರಿಯ ಇತರ ಪ್ರಮುಖ ಕುಟುಂಬಗಳ ಸ್ವರೂಪವನ್ನು ಚಿತ್ರಿಸುವ ಮೂಲಕ ಇಡೀ ಹಳ್ಳಿಯ ಬದುಕನ್ನು ಮತ್ತು ಜನರ ಮನಸ್ಥಿತಿಯನ್ನು ಬಿಚ್ಚಿಡುತ್ತದೆ. ಗೌಡನ ಗೌಡಿಕೆ, ಶೀನಪ್ಪಾಚಾರಿಯ ಪೌರೋಹಿತ್ಯ ಎರಡೂ ಒಂದೊಂದು ವ್ಯವಸ್ಥೆಯಾಗಿ ಊರನ್ನು ನಿಯಂತ್ರಿಸುತ್ತವೆ. ಪಂಚಾಂಗ ಕೇಳುವುದಕ್ಕೆ, ಅಂತ್ರಮಂತ್ರ ಕಟ್ಟಿಸಿಕೊಳ್ಳುವುದಕ್ಕೆ ಶೀನಪ್ಪಾಚಾರಿ ಜೋಯಿಸರನ್ನು ಅವಲಂಬಿಸಿದರೆ, ಬಡವರು ಹೊಟ್ಟೆಪಾಡಿಗಾಗಿ ಗೌಡನ ಅಧೀನದಲ್ಲಿರುವುದು, ಅಲ್ಪಸ್ವಲ್ಪ ಭೂಮಿಯಿದ್ದವರು ವ್ಯವಸಾಯಕ್ಕೆ ಬೇಕಾಗುವ ಅನೇಕ ವಿಷಯಗಳಿಗೆ ಗೌಡನನ್ನು ಅವಲಂಬಿಸಿರುವುದು ಇಂಥ ಊರ ವಿದ್ಯಮಾನಗಳ ವಾಸ್ತವ ಚಿತ್ರಣವಿದೆ. ಇದೊಂದು ಮುಖವಾದರೆ, ಶೇಖಸಾಬನ ದೊಡ್ಡಮಗ ಪೀರ ಹೆಚ್ಚಿಗೆ ಓದಲಾಗದೆ ವ್ಯವಸಾಯಕ್ಕೆ ನಿಲ್ಲುವುದು, ಅವನ ತಮ್ಮ ಜಲಾಲ ಹೆಚ್ಚಿನ ಶಿಕ್ಷಣಕ್ಕೆ ಮನೆಯವರ ಬೆಂಬಲದಿಂದ ಹೋಗುವುದು, ಅವನ ಸರೀಕರಾದ ಶೀನಪ್ಪಾಚಾರಿಯ ಮಗ ದ್ವೈಪಾಯನ, ಗೌಡರ ಮಗ ನಾಗನಗೌಡ, ಮುಲ್ಲಾರ ಕಾಶೀಂ ಸಾಬನ ಮಗ ಖಾದರ್, ಪುರೋಹಿತನ ಮಗ ರಾಜಣ್ಣ ಇವರೆಲ್ಲ ಪ್ರಾಥಮಿಕ ಮತ್ತು ಹೈಸ್ಕೂಲ್‌ವರೆಗೆ ಉರ್ದು ಶಿಕ್ಷಣ ಪಡೆಯುವುದು, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೈದರಾಬಾದಿಗೆ ಹೋಗಬೇಕಾದ ಸಂದರ್ಭದಲ್ಲಿ ಅನೇಕ ಕಾರಣಗಳಿಂದ ದ್ವೈಪಾಯನ ಊರಲ್ಲಿ ಉಳಿದು ತಂದೆಯ ಪೌರೋಹಿತ್ಯವನ್ನು ಮುಂದುವರೆಸುವುದು, ವಿದ್ಯೆ ಹತ್ತದೆ ಗೌಡನ ಮಗ ನಾಗನಗೌಡ ಊರಲ್ಲಿ ಗೌಡಿಕೆ ಮುಂದುವರೆಸುವುದು, ನಿಜಾಂ ಆಡಳಿತವಿರುವುದರಿಂದ ಖಾದರ್ ಮತ್ತು ಜಲಾಲ ಕೆಲ ಸೌಲಭ್ಯ ಪಡೆದು ಹೆಚ್ಚಿನ ಶಿಕ್ಷಣಕ್ಕಾಗಿ ಹೈದರಾಬಾದ್ ಸೇರುವುದು ಮತ್ತೊಂದು ಮುಖವಾಗಿದೆ.

ಪೀರಸಾಬ ತನ್ನ ಮನೆಯ ಬದುಕು ಮತ್ತು ವ್ಯವಸಾಯದೊಂದಿಗೆ ಊರಲ್ಲಿ ಅನೇಕರೊಂದಿಗೆ ಒಳ್ಳೆಯ ಸಂಬಂಧವನ್ನಿಟ್ಟು ಕೊಂಡಿರುತ್ತಾನೆ. ಮದುವೆಯಾಗದ ಪೀರ ಚಿಕ್ಕ ವಯಸ್ಸಿನಲ್ಲಿ ಬಸವಿ ಹನುಮವ್ವನ ಮಗಳು ಹಂಪವ್ವನೊಂದಿಗೆ ಆಟವಾಡುತ್ತ ಬಾಲ್ಯ ಸಹಜ ಕ್ರಿಯೆಗಳಲ್ಲಿ ಬೆಳೆದು ವಿವರಿಸಲಾಗದ ಅನ್ಯೋನ್ಯತೆ ಏರ್ಪಡುತ್ತದೆ. ಊರಲ್ಲಿ ಪ್ಲೇಗ್ ಬಂದು ಊರ ಹೊರಗೆ ಗುಡಿಸಲು ಹಾಕಿಕೊಂಡಾಗ, ಹನುಮವ್ವನ ಗುಡಿಸಲು ಪೀರನ ಗುಡಿಸಿಲಿನ ಪಕ್ಕದಲ್ಲಿರುತ್ತದೆ. ಇದರಿಂದ ಅವರಿಬ್ಬರ ನಡುವಿನ ಸಂಬಂಧ ಗಟ್ಟಿಗೊಳ್ಳುವ ಹೊತ್ತಿಗೆ, ಹಂಪಿ ತನ್ನ ಅವ್ವನ ಕಸುಬಿಗೆ ಬಲಿಯಾಗಿ ಅಧಿಕಾರಿಯೊಬ್ಬನ ಕಣ್ಣಿಗೆ ಬಿದ್ದು ಅವನ ಹಿಂದೆ ಹೋಗಿಬಿಡುತ್ತಾಳೆ. ಪೀರ ಒಂಟಿಯಾಗುತ್ತಾನೆ. ಅವನ ಒಂಟಿತನ ಕಂಡ ತಾಯಿ ಹಸೀನವ್ವ ಮಗನಿಗೆ ಫಾತಿಮಾಳನ್ನು ತಂದು ಮದುವೆ ಮಾಡುತ್ತಾಳೆ. ದ್ವೈಪಾಯನ, ಪೀರನ ಗೆಳೆತನ, ಅವರ ತಂದೆಯರ ಸಂಬಂಧದಂತೆ ಮುಂದುವರೆದಿರುತ್ತದೆ. ನಾಗನಗೌಡ ತನ್ನ ದರ್ಪ, ಅಹಂಕಾರದಿಂದ ತನ್ನ ಸರೀಕರಾದ ದ್ವೈಪಾಯನ, ಪೀರ ಮುಂತಾದವರ ಜೊತೆ ಅಷ್ಟಷ್ಟಕ್ಕೆ ಇರುತ್ತಾನೆ. ಪೀರ ಮಾತ್ರ ಊರಲ್ಲಿ ಎಲ್ಲರ ಜೊತೆ ಸ್ನೇಹದಿಂದಿದ್ದು ಒಳ್ಳೆಯವನೆನಿಸಿಕೊಂಡಿರುತ್ತಾನೆ.

ಹಂಪಿ ಪುನಃ ಊರಿಗೆ ಬಂದಿದ್ದರಿಂದ ಪೀರನ ಸಂಸಾರಿಕ ತಾಪತ್ರಯಗಳು ಉದ್ಭವವಾಗುತ್ತವೆ. ಫಾತಿಮಾ ಜಗಳ ತೆಗೆದು ತವರ ಮನೆಗೆ ಹೋಗುತ್ತಾಳೆ. ಪೀರ ಹಂಪಿಯ ಜೊತೆಗೆ ಇರತೊಡಗುತ್ತಾನೆ. ಈ ವಿಷಯದಲ್ಲಿ ಊರಿನ ಹಲವರ ದೃಷ್ಟಿಯಲ್ಲಿ ಪೀರ ಸಣ್ಣವನಾಗಿ ಕಂಡರೂ, ಅವನನ್ನು ಬಲ್ಲವರು ಅವನ ಬಗ್ಗೆ ಪ್ರೀತಿಯಿಟ್ಟುಕೊಂಡೇ ಇರುತ್ತಾರೆ. ಹೈದರಾಬಾದ್ ಸೇರಿದ್ದ ಜಲಾಲ ಆಗಾಗ ಊರಿಗೆ ಬಂದು ಹೋಗುತ್ತಿರುತ್ತಾನೆ. ಪೀರ ಹೆಂಡತಿಯನ್ನು ಬಿಟ್ಟು ತಮ್ಮ ಕುಲದವಳಲ್ಲದ ಹಂಪಿಯ ಜತೆಗಿದ್ದುದನ್ನು ಕಂಡು ಅಸಮಾಧಾನಗೊಳ್ಳುತ್ತಾನೆ. ಪೀರನ ತಾಯಿ ಹಸೀನವ್ವ ಕೂಡ ಪೀರನ ಮೇಲೆ ಸಿಟ್ಟುಗೊಂಡು, ಜಲಾಲನಿಗೂ ಮದುವೆ ಮಾಡಿ, ಮಕ್ಕಳಿಬ್ಬರನ್ನು ಬೇರೆ ಬೇರೆ ಮಾಡುತ್ತಾಳೆ ಮತ್ತು ಪೀರನನ್ನು ಬಿಟ್ಟು ಜಲಾಲನ ಜತೆ ಇರುತ್ತಾಳೆ. ಜಲಾಲ ಊರಲ್ಲಿರದೆ ಊರೂರು ತಿರುಗುತ್ತಾ ರಾಜಕೀಯ ಚಟುವಟಿಕೆಗಳಲ್ಲಿ ತೊಡಗುತ್ತಾನೆ. ಅವನ ದುಡಿಯದ ಹೆಂಡತಿ ಜುಲೇಖಾಗಳ ಜತೆ ಹಸೀನವ್ವ ಬೇಸತ್ತರೂ ಅನಿವಾರ್ಯವಾಗಿ ಇರುತ್ತಾಳೆ. ಪೀರನ ಗೆಳೆಯ ದ್ವೈಪಾಯನ ಪೀರನ ಬಗ್ಗೆ ಮರುಗಿ, ಅವನ ಸಂಸಾರವನ್ನು ಕೂಡಿಸಲು ಫಾತಿಮಾಳ ಊರಿಗೆ ಹೋಗಿ ಬರುತ್ತಾನೆ. ಆದರೂ ಪುನಃ ಸಂಸಾರ ಹೊಂದುವುದಿಲ್ಲ.

ಹೇಮಗಿರಿಯಲ್ಲಿ ಇಂಥ ಹಲವು ಬದುಕಿನ ಚಟುವಟಿಕೆಗಳು ನಡೆಯುತ್ತಿದ್ದಂತೆ, ದೇಶಾದ್ಯಂತ ಸ್ವಾತಂತ್ರ್ಯ ಹೋರಾಟ ಬಿರುಸಿನಿಂದ ಸುರುವಾಗುತ್ತದೆ. ನಂತರ ಭಾರತಕ್ಕೆ ಸ್ವಾತಂತ್ರ್ಯ ಬಂದರೂ, ನಿಜಾಮ ಹೈದರಾಬಾದ್ ಸಂಸ್ಥಾನವನ್ನು ಬಿಡುವುದಿಲ್ಲ. ಈ ಸಂದರ್ಭದಲ್ಲಿಯೇ ನಿಜಾಮನ ಬೆಂಬಲಿಗರೆಂದು ಕರೆಸಿಕೊಂಡ ರಜಾಕಾರರ ಹಾವಳಿ ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚಾಗುತ್ತದೆ. 'ಇಸ್ಲಾಂ ಖತರೆಮೇ ಹೈ' ಎಂದು ಪ್ರಚೋದಕ ಘೋಷಣೆಗಳ ಮೂಲಕ ಮುಸ್ಲಿಮರನ್ನು ಉದ್ರೇಕಗೊಳಿಸಲು ಪ್ರಯತ್ನಿಸುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಸಮಯ ಸಾಧಕರಿಗೆ ಒಳ್ಳೆಯ ಅವಕಾಶ ಸಿಕ್ಕಿತು. ಲೂಟಿ, ದಂಗೆ, ಅತ್ಯಾಚಾರಗಳನ್ನು ಬಹಿರಂಗವಾಗಿ ಮಾಡತೊಡಗಿದರು. ಹೈದರಾಬಾದಿನಲ್ಲಿರುತ್ತಿದ್ದ ಜಲಾಲ ಮತ್ತು ಖಾದರ್ ಹೇಮಗಿರಿಗೆ ಬಂದು ಮುಸ್ಲಿಮರನ್ನು ಪ್ರಚೋದಿಸಿ ಊರಲ್ಲಿ ದೌರ್ಜನ್ಯ ಸುರುಮಾಡುತ್ತಾರೆ. ಇವರ ಜತೆ ಗುಪ್ತವಾಗಿ ನಾಗನಗೌಡ ಸೇರಿಕೊಳ್ಳುತ್ತಾನೆ. ಮುಗ್ಧನಂತಿದ್ದ ಪೀರ ಅಣ್ಣನ ಜಾತೀಯತೆಯನ್ನು ಕಂಡು ಖಂಡಿಸುತ್ತಾನೆ. ಆದರೆ ಅವನನ್ನು ಹತ್ತಿಕ್ಕಲಾಗುತ್ತದೆ. ಊರಲ್ಲಿ ಕಳ್ಳತನ, ಅತ್ಯಾಚಾರಗಳು ಸುರುವಾದಾಗ ಹೇಮಗಿರಿಯ ಬದುಕು ಅಸ್ತವ್ಯಸ್ತವಾಗುತ್ತದೆ. ಅಷ್ಟರಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ನಡೆದ ಕ್ರೌರ್ಯ, ಹಿಂಸೆ, ಅತ್ಯಾಚಾರ ಕಂಡು, ಸ್ವತಂತ್ರ ಭಾರತದ ಸೈನ್ಯ ಬಂದು ರಜಾಕಾರರನ್ನು, ಪಠಾಣರನ್ನು, ಇವರ ಜತೆಗೆ ಸೇರಿದ ಅನೇಕರನ್ನು ಬಗ್ಗುಬಡಿದು ವಾತಾವರಣವನ್ನು ಶಾಂತಗೊಳಿಸುತ್ತದೆ. ಈ ಹೋರಾಟದಲ್ಲಿ ಖಾದರ್ ಸತ್ತು ಹೋಗುತ್ತಾನೆ. ಜಲಾಲ ಜೇಲಿಗೆ ಹೋಗುತ್ತಾನೆ.

ಇದನ್ನು ಕಂಡ ನಾಗನಗೌಡ ಜುಲೇಖಾಳ ಮೇಲೆ ಕಣ್ಣಿಟ್ಟದ್ದರಿಂದ ಪೀರ, ದ್ವೈಪಾಯನ ಕೂಡಿ ಜುಲೇಖಾಳನ್ನು ಗಂಗಾವತಿಯಲ್ಲಿದ್ದ ದ್ವೈಪಾಯನನ ಮಾಮ ಜಮಾಬಂದಿ ರಾಘವೇಂದ್ರರಾವ್ ಅವರ ಮನೆಯಲ್ಲಿಟ್ಟು ರಕ್ಷಿಸುತ್ತಾರೆ.

'ಹೈದರಾಬಾದ್ ಕರ್ನಾಟಕ' ವಿಮೋಚನಕ್ಕಾಗಿ ನಡೆದ ಹೋರಾಟದ ಸ್ವರೂಪ ಸಂಕೀರ್ಣ ಸ್ವರೂಪದ್ದು. ಹಳ್ಳಿಗಳಲ್ಲಿ ನಡೆದುದೇನು? ಇದು ಕೇವಲ 'ಹಿಂದೂ ಮತ್ತು ಮುಸ್ಲಿಮ'ರ ನಡುವೆ ಮಾತ್ರ ನಡೆದ ಹೋರಾಟವೇ? ಉತ್ತರ ಸರಳವಾಗಿಲ್ಲ. **'ಹಾಲು-ಜೇನು'** ಕಾದಂಬರಿ ಇಂಥ ಸಮಸ್ಯೆಯನ್ನು ತಕ್ಕಮಟ್ಟಿಗೆ ಉತ್ತರಿಸಲು ಪ್ರಯತ್ನಿಸಿದೆ. ಶಿಕ್ಷಣ ಪಡೆಯದ ಪೀರ, ದ್ವೈಪಾಯನರಿಂದ ಮತೀಯ ಪ್ರಶ್ನೆ ಏಳಲಿಲ್ಲ. ಶಿಕ್ಷಣ ಪಡೆದ ಜಲಾಲ ಮತ್ತು ಖಾದರ್‌ನಿಂದ ಜಾತೀಯತೆ ಬೆಳೆಯಿತು. ಇದರಿಂದ ಹೇಮಗಿರಿಯಲ್ಲಿ ಮತೀಯ ವೈಷಮ್ಯ ಬೆಳೆದು ಸಾಮಾಜಿಕ ಬದುಕಿನಲ್ಲಿ ನೆಮ್ಮದಿ ಕದಡಿತು ಎಂದು ಕಾದಂಬರಿ ನಿರೂಪಿಸುತ್ತದೆ.

ಸ್ಥಳೀಯ ವೈಷಮ್ಯಗಳಿಗೆ ರಜಾಕಾರರ ಹಾವಳಿಯೂ ನೆಪವಾಯಿತು. ಸಮಯ ಸಾಧಕರು ತಮ್ಮ ತಮ್ಮ ಹಿತಕ್ಕಾಗಿ ಸಮ್ಮತವಲ್ಲದ ಕೃತ್ಯಗಳಲ್ಲಿ ತೊಡಗಿದರು. ಎಲ್ಲರ ಜತೆ ಅನ್ಯೋನ್ಯನಾಗಿದ್ದ ಖಾಸೀಂ ಸಾಬ ರಜಾಕಾರರ ಹಾವಳಿಯಲ್ಲಿ ಇದ್ದಕ್ಕಿದ್ದ ಹಾಗೆ ಎದ್ದು ನಿಂತು ತನಗೆ ಬೇಕಾದದ್ದನ್ನು ಸಾಧಿಸಿಕೊಳ್ಳಲು ನೋಡುತ್ತಾನೆ. ಇವನಿಗಿಂತ ಭಿನ್ನವಲ್ಲದ ನಾಗನಗೌಡ ಜುಲೇಖಾಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಜುಲೇಖಾ ರಾಘವೇಂದ್ರರಾವ್ ಮನೆಯಲ್ಲಿ ರಕ್ಷಣೆ ಪಡೆಯುತ್ತಾಳೆ. ಒಂದೇ ಕುಲದವರಲ್ಲದ ಪೀರ-ಹಂಪಿ ಅನ್ಯೋನ್ಯವಾಗಿರುತ್ತಾರೆ. ಅದೇ ಫಾತೀಮಾ ಪೀರನ ಜತೆ ಹೊಂದಿಕೊಂಡು ಇರಲು ಸಾಧ್ಯವಾಗುವುದಿಲ್ಲ. ವ್ಯಕ್ತಿಗಳ ಈ ವರ್ತನೆಗೆ ಸಾಮಾಜಿಕ ಸನ್ನಿವೇಶಗಳೂ ಕಾರಣವಾಗುತ್ತವೆ.

ಪೀರ-ಹಂಪಿ ಕೂಡಿ ಬಾಳುವುದು 'ಹಿಂದೂ-ಮುಸ್ಲಿಂ' ಸಾಮರಸ್ಯದ ಸಂಕೇತವೆಂದು ಸರಳವಾಗಿ ಭಾವಿಸಬಹುದು. ಆದರೆ ಈ ಸಮಸ್ಯೆಯೇ ಬೇರೆ. ಮೂಲತಃ ಹಂಪಿ ಬಸವಿಯ ಮಗಳು. ಈಗಾಗಲೇ ಒಬ್ಬ ಅಧಿಕಾರಿಯ ಜೊತೆ ಬಾಳ್ವೆ ಮಾಡಿ ಬಂದವಳು. ಅವಳಿಗೆ ಯಾವ ಜಾತಿಯಿದೆ? ಪೀರ ಪುನಃ ಹಂಪಿಯನ್ನು ಕೂಡಿಕೊಂಡರೂ 'ಹೆಂಡತಿ'ಯನ್ನಾಗಿ ಮಾಡಿಕೊಳ್ಳಲು ಸಾಧ್ಯವೇ? ಬಿಟ್ಟು ಹೋಗಿದ್ದ ಫಾತಿಮಾ ಬಂದು ಪೀರನ ಹೆಂಡತಿಯಾಗಿರುತ್ತಾಳೆಯೇ ಹೊರತು ಹಂಪಿಗೆ ಆ ಸ್ಥಾನವಿಲ್ಲ. ಪೀರನ ಸ್ನೇಹಿತ ದ್ವೈಪಾಯನ ಫಾತಿಮಾಳನ್ನೇ ಕರೆತಂದು ಪೀರನಿಗೆ ಜೊತೆ ಮಾಡಲು ನೋಡುತ್ತಾನೆಯೇ ಹೊರತು ಹಂಪಿಯ ಜೊತೆಗಿದ್ದಾನೆಂದು ಸುಮ್ಮನಿರುವುದಿಲ್ಲ. ಕೆಳವರ್ಗದವರಲ್ಲಿ ಜಾತಿಯ ಕಟ್ಟುಪಾಡುಗಳು ಸಡಿಲವಾಗಿರುವದರಿಂದ ಹಂಪಿ-ಪೀರರಂಥ ಸಂಬಂಧಗಳು ಏರ್ಪಡುವುದು ಸಹಜ. ಸಮಾಜ ಕೂಡ ಸಹಿಸಿಕೊಳ್ಳುತ್ತದೆ.

ನಿಜಾಂ ಆಳ್ವಿಕೆ ಹೋಗಿ ಪ್ರಜಾಪ್ರಭುತ್ವ ಬಂದ ನಂತರ ಸಮಾಜದಲ್ಲಾದ ಬದಲಾವಣೆಗಳನ್ನು ಕುರಿತ ಚಿತ್ರಣ **'ಸುಳಿಗಾಳಿ'** ಕಾದಂಬರಿಯಲ್ಲೂ ಮುಂದುವರಿಯುತ್ತದೆ. 'ಪೊಲೀಸ್ ಕಾರ್ಯಾಚರಣೆ' ನಡೆದು ಸಮಾಜದಲ್ಲಿ ತಾತ್ಕಾಲಿಕವಾಗಿ ನೆಮ್ಮದಿ ಕಾಣಿಸಿದಂತಾಯಿತು. ಹೈದರಾಬಾದ್ ಕರ್ನಾಟಕ ವಿಮೋಚನದ ಹೋರಾಟದಲ್ಲಿ ರಕ್ತ ಹರಿದು ಸಾವುಗಳ ಮೂಲಕ ಕೊನೆಗೊಂಡಿತ್ತು. ಸ್ವಾತಂತ್ರ್ಯಾನಂತರ ದಿನಗಳಲ್ಲಿ ರಕ್ತ ಹರಿಯದೆ ಸಾವುಗಳಿಲ್ಲದೆ ಜೀವಂತವಾಗಿದ್ದೂ ಸಾವಿನ ರುಚಿ ಅನುಭವಿಸುವಂಥ ವಾತಾವರಣ ಸೃಷ್ಟಿಯಾಯಿತು. ಜನಸಾಮಾನ್ಯರ ಗೋಳು ನಿರಂತರವಾದದ್ದು ಎಂಬುದನ್ನೂ ಈ ಕಾದಂಬರಿಗಳು ಧ್ವನಿಸುತ್ತವೆ. ಹೇಮಗಿರಿಯಲ್ಲಿ ರಜಾಕಾರರ ದಾಳಿಯಲ್ಲಿ ತಮ್ಮ ಹಿತಾಸಕ್ತಿಯನ್ನು ನೋಡಿಕೊಂಡ ನಾಗನಗೌಡನಾಗಲಿ, ತಾತ್ಕಾಲಿಕವಾಗಿ ತೊಂದರೆ ಅನುಭವಿಸಿದ ಜಲಾಲ, ಮಸ್ತಾನ, ಕಾಶಿಂ ಆಗಲಿ ಪ್ರಜಾಪ್ರಭುತ್ವ ಬಂದ ಬೆನ್ನಲ್ಲೇ ಪುನಃ ಮುನ್ನೆಲೆಗೆ ಬಂದುಬಿಡುತ್ತಾರೆ. ಕಾಂಗ್ರೆಸ್‌ನಲ್ಲಿ ಸೇರಿ ದುಡಿದ ಜನರಿಗೆ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಗೌರವವು ನಂತರವೂ ಮುಂದುವರಿಯುತ್ತದೆ. ಸಮಯ ಸಾಧಕರೂ, ಕೊಲೆಗಡುಕರು, ರಜಾಕಾರರ ಹಾವಳಿಯಲ್ಲಿ ಅವರಂತೆ ವರ್ತಿಸಿದವರೆಲ್ಲ ಕಾಂಗ್ರೆಸ್ ಸೇರಿ 'ದೇಶಭಕ್ತ' ವೇಷ ಧರಿಸಿ ಬಿಡುತ್ತಾರೆ. ಆದರೆ ಅವರ

ಮೂಲಭೂತ ಗುಣ ಸ್ವಭಾವಗಳು ಅಲ್ಲಿಯೂ ಕೆಲಸಮಾಡುತ್ತವೆ. ಇಂಥವರ ಸೇರ್ಪಡೆಯಿಂದ ಕಾಂಗ್ರೆಸ್ ತನ್ನ ಗೌರವವನ್ನು ಮತ್ತಷ್ಟು ಕಳೆದುಕೊಳ್ಳುತ್ತಾ ಬಂದಿತು. ಸ್ವಾತಂತ್ರ್ಯಕ್ಕಾಗಿ ನಿಜವಾಗಿ ದುಡಿದ ಜನ ಹಿನ್ನೆಲೆಗೆ ಸರಿದು, ದುಡಿಯಲಾರದ ತಮ್ಮ ಸ್ವಾರ್ಥಕ್ಕಾಗಿ ಬದುಕುವವರೆಲ್ಲ ಸ್ವತಂತ್ರ ಭಾರತದ ರಾಜಕೀಯ ರಂಗ ಸೇರಿ ದೇಶ ಆಳುವ ಪ್ರಭುಗಳಾಗಿಬಿಟ್ಟರು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹೇಮಗಿರಿಯಲ್ಲಿ ಅದೇ ಪೀರ, ದ್ವೈಪಾಯನ ಮುಂತಾದವರು ಹಿಂದಿನದನ್ನೂ, ನಂತರದ ಪರಿವರ್ತನೆಯನ್ನು ಕುರಿತು ಮಾತನಾಡುತ್ತಿರುತ್ತಾರೆ. 'ಆಗ ರೋಮಿ ಟೊಪ್ಪಿಗೆ ಹಾಕಿಕೊಂಡು ಸರಕಾರಕ್ಕೂ ನಮ್ಮ ಚಳುವಳಿಯ ಸುದ್ದಿ ಗೌಪ್ಯವಾಗಿಕೊಟ್ಟ ನಾಗನಗೌಡರು, ನರಸಿಂಗರಾಯನಂಥೋರು ಇವತ್ತು ಒಮ್ಮೆಲೆ ದೇಶಭಕ್ತರಾಗಿ, ಗಾಂಧಿ ಟೋಪಿ ಹಾಕಿಕೊಂಡಾರ.'(ಪು.೧೭) ಸ್ವಾತಂತ್ರ್ಯಾನಂತರ 'ರಾಜಕೀಯ'ವೇ ಹಳ್ಳಿಗಳಲ್ಲೂ 'ಹಿಂದೂ-ಮುಸ್ಲಿಂ' ಬಾಂಧವ್ಯವನ್ನು ಮುರಿಯುವ ಕೆಲಸ ಮಾಡಿತೆಂದು ಹೇಮಗಿರಿಯ ಪೀರಸಾಬ ಮರಗುತ್ತಾನೆ. 'ದೇಶದ ಎರಡು ದೊಡ್ಡ ಮತಗಳ ಜನ ಒಂದೇ ಬಂದೂಕಿನ ಚೋಡುನಳಿಗೆಯಂತಿದ್ದರೆ ಎಷ್ಟು ಚೆನ್ನ? ಯಾವ ಆಕ್ರಮಣಕಾರಿ ಬೇಟೆ ಈ ಬಂದೂಕಿನ ಎದುರಿಗೆ ನಿಂತೀತು?'(ಪು.೨೨) ಅದೇ ಪೀರಸಾಬನ ಅಣ್ಣ, 'ಇತಿಹಾಸ ಸ್ವಲ್ಪ ಜಾಡು ಬದಲಿಸದಿದ್ದರೆ? ಈ ಹಿಂದೂಗಳು ಹಾರಾಡುವುದುನ್ನು ನೋಡುತ್ತಿದ್ದೆ. ಯಾವುದೋ ಕಾಲದ ದೇವಾಲಯವೆಂಬ ನೆಪ.......ಮಸೀದೆ ಮಾರ್ಪಾಟಾಗಿ ನಮಾಜು ಮಾಡಲು ಸ್ಥಳವಿಲ್ಲದ ದುರವಸ್ಥೆ ಈ ಜನಾಂಗಕ್ಕೆ. ಎಡಗೈಯಲ್ಲಿ ಕುರಾನ್, ಬಲಗೈಯಲ್ಲಿ ಕತ್ತಿ ಝಳಪಿಸಿ ಬೆಳೆಯಿಸಿದ ಧರ್ಮಕ್ಕೆ ಈ ದುರವಸ್ಥೆ. ಏನು ಮಾಡುವುದು? ತಾಳಬೇಕು, ನೋಡಬೇಕು, ದಾರಿ ನೋಡಬೇಕು, ಸಮಯ ನೋಡಬೇಕು.........' (ಪು.೨೨) ಜಲಾಲಸಾಬನ ಅಭಿಪ್ರಾಯವಿದು. ಪೀರಸಾಬ ಮತ್ತು ಜಲಾಲನ ಗ್ರಹಿಕೆಯ ಆಚೆ ಕೂಡ ವಾಸ್ತವವಿದೆ ಎಂದು ಕಾಣುತ್ತದೆ.

ನಿಜಾಮನ ಆಳ್ವಿಕೆ ಕೊನೆಗೊಂಡು 'ಪ್ರಜಾಪ್ರಭುತ್ವ' ಬಂದರೂ ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಲಿಲ್ಲ. ಯಾಕೆಂದರೆ ಭೂ ಸಂಬಂಧಗಳು ಬದಲಿಸಲಾಗಲಿಲ್ಲ. ಯಥಾಸ್ಥಿತಿಯಲ್ಲೇ ಸಮಾಜ ಮುಂದುವರಿಯಿತು. ಸ್ವಾತಂತ್ರ್ಯಪೂರ್ವದಲ್ಲಿ ಹೇಮಗಿರಿಯಲ್ಲಿ ಗೌಡನ ಗೌಡಿಕೆಯ ಗತ್ತು, ದರ್ಪ ಆಳ್ವಿಕೆ ಚಾಲ್ತಿಯಲ್ಲಿತ್ತು. ಸ್ವಾತಂತ್ರ್ಯಾನಂತರ ರಾಜಕಾರಣಿಯಾಗಿ ನಾಗನಗೌಡ ಅದೇ ಸ್ಥಿತಿಯಲ್ಲಿದ್ದಾನೆ. ಜತೆಗೆ ಜಲಾಲನೂ ಸೇರಿಕೊಂಡಿದ್ದ. ಹೇಮಗಿರಿ ಜಡಜನರಿಗೆ, ರೈತರಿಗೆ ಸಿಗುವ ಸರಕಾರಿ ಸೌಲಭ್ಯಗಳನ್ನು ಕೊಡಿಸುವ ನೆವದಲ್ಲಿ ನಾಗನಗೌಡ, ಜಲಾಲ, ಮಸ್ತಾನ, ನರಸಿಂಗರಾಯ ಎಲ್ಲರೂ ದಲ್ಲಾಳಿಗಳಾಗಿ ಹರಿದು ತಿನ್ನುತ್ತಿದ್ದಾರೆ. ಪೀರ, ದ್ವೈಪಾಯನ ಅಂಥವರಿಗೆ ಯಾವ ಕಾಲದಲ್ಲೂ ತೊಡಕುಗಳು ಇದ್ದದ್ದೆ. 'ಒಂದು ನಮೂನಿಯ ವತನ್ ದಾರ್ರ್ಯ, ಜಾಗಿರದಾರ್ರ್ಯ ಹೋದರು. ಇಂದು ಇನ್ನೊಂದು ನಮೂನಿ ವತನ್‌ದಾರಿ ಬೆಳೀಲಿಕ್ಕೆ ಹತ್ತೇದ. ಇದಕ್ಕೂ ಒಂದು ಪೊಲೀಸ್ ಎಕ್ಷನ್ ಆಗೋತನಕ ಹೀಗನೋಡಿ'(ಪು.೧೩೬) ಎಂಬ ಅಭಿಪ್ರಾಯ ಹುಟ್ಟಿಕೊಳ್ಳುತ್ತದೆ. ಇಂದು ಭಾರತದಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಭಾರತಕ್ಕೆ ಬಂದ ವಸಾಹತುಶಾಹಿ ಶಕ್ತಿಯ ವಿರುದ್ಧ ಹೋರಾಡಿ 'ಸ್ವಾತಂತ್ರ್ಯ'ಪಡೆಯಲಾಗಿತ್ತು. ಆದರೆ ಇಂದು ನವ ವಸಾಹತುಶಾಹಿ 'ಶಕ್ತಿ'ಗಳು ಭಾರತವನ್ನು ತುಂಬಿವೆ. ಅಂದು ಒಂದೇ ಶಕ್ತಿಯ ವಿರುದ್ಧ ಹೋರಾಡಲಾಗಿತ್ತು. ಆದರೆ ಇಂದು ಅನೇಕ 'ಶಕ್ತಿಗಳ' ವಿರುದ್ಧ ಹೋರಾಡಬೇಕಾದ ಪ್ರಮೇಯ ಬಂದಿದೆ. ಭಾರತವು 'ಎರಡನೆಯ ಸ್ವಾತಂತ್ರ್ಯ ಹೋರಾಟ'ವನ್ನು ಪ್ರಾರಂಭಿಸಬೇಕಾಗಿದೆ ಎಂಬ ದನಿಗಳೂ ಈಗ ಕೇಳಿ ಬರುತ್ತಿವೆ. ಈ ಬಿಕ್ಕಟ್ಟು ಸರಳವಾಗಿಲ್ಲ. ನಿಜಾಮನನ್ನು ಓಡಿಸಬಹುದು, ಹೇಮಗಿರಿಯ ನಾಗನಗೌಡ, ಜಲಾಲನನ್ನು ಓಡಿಸಲಾಗುವುದಿಲ್ಲ. ಬ್ರಿಟಿಷರನ್ನು ಓಡಿಸಬಹುದು, ನವವಸಾಹತುಶಾಹಿ ಶಕ್ತಿಗಳನ್ನು ಓಡಿಸುವುದು ಸುಲಭವಲ್ಲ.

ನವಾಬ್ ಮನೆತನದ ಅವನತಿಯ ಚಿತ್ರಣ

'ಸುಳಿಗಾಳಿ' ಕಾದಂಬರಿಯಲ್ಲಿ ಇನ್ನೊಂದು ಮುಖದ ಚಿತ್ರಣವಿದೆ. ನಿಜಾಂ ಪ್ರಭುತ್ವ ಅಂತ್ಯಗೊಂಡ ಬೆನ್ನಲ್ಲೇ

ಜಾಗೀರುದಾರರು ಎದುರಿಸಿದ ಬಿಕ್ಕಟ್ಟುಗಳು ಮತ್ತು ಅದರ ಪರಿಣಾಮಗಳು ದುರಂತದಲ್ಲಿ ಕೊನೆಗೊಂಡಿವೆ. ನವಾಬ ಮನೆತನಕ್ಕೆ ಸೇರಿದ ಜಮರದ್ ಬೇಗಂ ಏರ್ಪಡಿಸಿದ್ದ ಒಂದು ಭವ್ಯ ಪಾರ್ಟಿಯಲ್ಲಿ, ಹಿಂದೂ ಜಾಗೀರುದಾರ ದೇವೇಂದ್ರರಾಯ ಮತ್ತು ಆಷ್ಫಾಕ್ ನಡುವೆ ನಡೆದ ಸಂಭಾಷಣೆ ಹೀಗಿದೆ: 'ನಾವೆಲ್ಲ ಒಂದು ರೀತಿಯಿಂದ ನಿಜಾಮನ ಉಪಕಾರ ಸ್ಮರಿಸಬೇಕು. ಸಕಾಲದಲ್ಲಿ ಶರಣಾಗತನಾಗಿ ಹೈದರಾಬಾದ್ ನಗರ ಹಾಳಾಗುವುದನ್ನು ಉಳಿಸಿದ.........'(ಪು.೧೨). 'ಹೌದು, ನಿಜಾಮನದೊಂದು ಜಾಣತನವಾದರೆ ಜಿನ್ನಾ ಸಕಾಲಕ್ಕೆ ಸತ್ತು ನಮ್ಮ ಮೇಲೆ ಮತ್ತೊಂದು ಉಪಕಾರ ಮಾಡಿದ. ಸಮಸ್ಯೆ ಬೇಗ ಮುಗಿದಾದರೂ ಮುಗಿಯಿತು.' ಈ ಮಾತುಗಳಿಂದ ಎರಡು ಅಂಶಗಳು ವ್ಯಕ್ತವಾಗುತ್ತವೆ. ಒಂದು, ನಿಜಾಮನಿಗೆ ಸ್ವಾತಂತ್ರ್ಯಾನಂತರವೂ ತನ್ನ 'ಹೈದರಾಬಾದ್ ಸಂಸ್ಥಾನ'ವನ್ನು ಸ್ವತಂತ್ರವಾಗಿ ಆಳಲು ಪಾಕಿಸ್ತಾನ ನಿದರ್ಶನವಾಗಿತ್ತು ಮತ್ತು ಅದರ ಬೆಂಬಲವಿತ್ತು. ಇನ್ನೊಂದು, ನಿಜಾಮ ಶರಣಾಗತನಾಗಲು ವಿಳಂಬ ಮಾಡಿದಂತೆ, ಹೋರಾಟಗಾರರ ಆಕ್ರೋಶಕ್ಕೆ ಹೈದರಾಬಾದ್ ನಗರ(ಅಂದರೆ ನವಾಬ ಮತ್ತು ಜಾಗೀರುದಾರರು) ಮತ್ತಷ್ಟು ತುತ್ತಾಗುತ್ತಿತ್ತು ಎಂಬುದು.

ನವಾಬನ ವಂಶಸ್ಥರು ಮತ್ತು ಜಾಗೀರುದಾರರು ನಿಜಾಮನ ಆಳ್ವಿಕೆಯಲ್ಲಿ ಸುರಕ್ಷಿತವಾಗಿದ್ದರು ಮತ್ತು ಜನಸಾಮಾನ್ಯರ ದುಡಿತದ ಮೇಲೆ ಭೋಗ ಜೀವಿಗಳಾಗಿದ್ದರು. ಪೊಲೀಸ್ ಕಾರ್ಯಾಚರಣೆಯ ಕಾಲದಲ್ಲಿ, ಅಲ್ಲಿಯವರೆಗೆ ನೋವು-ಸಾವುಗಳಿಗೆ ಗುರಿಯಾಗಿದ್ದ ಸಾಮಾನ್ಯ ಜನರ ಆಕ್ರೋಶ ಒಮ್ಮೆಲೆ ಪುಟಿದು ನವಾಬ ಮತ್ತು ಜಾಗೀರುದಾರರ ಮೇಲೆ ತಿರುಗಿ ಸೇಡನ್ನು ತೀರಿಸಿಕೊಳ್ಳಲು ನಿಂತರು. ಸಾಮಾನ್ಯರ ಆಕ್ರೋಶಕ್ಕೆ ಒಳಗಾಗಿ ವತನ್‌ದಾರರು ಅಪಾರ ನಷ್ಟಕ್ಕೆ ಒಳಗಾದರು. ಪ್ರಜಾಪ್ರಭುತ್ವ ಬಂದು ಅದರ ನೀತಿಯಿಂದ ಇನ್ನೊಂದು ರೀತಿಯ ನಷ್ಟಕ್ಕೆ ಗುರಿಯಾದರು. ಚರಿತ್ರೆಯ ಉದ್ದಕ್ಕೂ ಇದು ನಡೆದಿದೆ. ಇದರ ಇನ್ನೊಂದು ಮುಖವೂ ಇದೆ. ಇಂಥ ರಾಜಮನೆತನದವರು ಪ್ರಜಾಪ್ರಭುತ್ವದಲ್ಲಿಯೂ ರಾಜಕೀಯ ಸೇರಿ, ಆಳುವ ಪ್ರಭುತ್ವ ಪುನಃ ಪಡೆದುಕೊಂಡಿದ್ದು ಆ ಮುಖವಾಗಿದೆ.

ಜಮರುದ್ ಬೇಗಂ ಏರ್ಪಡಿಸಿದ್ದ ಅದೇ ಪಾರ್ಟಿಯಲ್ಲಿ, 'ನಾನು ಹಿಂದೂ ಜಾಗೀರದಾರ, ನೀನು ಮುಸ್ಲಿಂ ಜಾಗೀರುದಾರ ಅಷ್ಟೇ. ಹೋಗುವಾಗ ನನ್ನದೂ ನಿನ್ನದೂ ಕೂಡಿಯೇ ಹೋಗುತ್ತವೆ'(ಪು.೧೧) ಎನ್ನುತ್ತಾನೆ ದೇವೇಂದ್ರರಾಯ. ಇಂಥ ಆತಂಕಗಳು ಕೇವಲ ಆಸ್ತಿಪಾಸ್ತಿ ಉಳಿವಿನ ಪ್ರಶ್ನೆ ಮಾತ್ರವಾಗಿರುವುದಿಲ್ಲ. ಅಲ್ಲಿಯವರೆಗೆ ನಿಜಾಮನ ಆಡಳಿತದಲ್ಲಿ ಉನ್ನತ ಹುದ್ದೆಗಳೆಲ್ಲ ಇದೇ ನವಾಬ ಮತ್ತು ಜಾಗೀರುದಾರರ ಕುಟುಂಬಗಳಲ್ಲಿ ವಿದ್ಯೆ ಕಲಿತವರಿಗೆ ಮೀಸಲಿದ್ದವೆಂದು ಕಾಣುತ್ತದೆ. ಹೊಸ ಸರಕಾರದ ನೀತಿಯಿಂದ ಇದು ಕೈತಪ್ಪಿದಂತೆ ಕಾಣುತ್ತದೆ. ನವಾಬ್ ಜಮರುದ್ ಬೇಗಮ್‌ಗಳ ಆತಂಕ ಅದೇ ಪಾರ್ಟಿಯಲ್ಲಿ ವ್ಯಕ್ತವಾಗುತ್ತದೆ: 'ಮೊನ್ನೆ ಮೊನ್ನೆ ತಹಸೀಲ್‌ದಾರರ ಸೆಲೆಕ್ಷನ್ ಆಗಿದೆ. ಆಯ್ಕೆಗೊಂಡ ನಲವತ್ತು ಅಧಿಕಾರಿಗಳಲ್ಲಿ ಒಬ್ಬ ಜಾಗೀರದಾರನಾದರೂ ಇದ್ದಾನೆಯೇ?' ಬೇಗಮಾಳ ತಮ್ಮ ಆರೀಫ್ ನವಾಬ್ 'ಎಂದೂ ಇಂಥ ಕನಸು ಸಹ ಕಾಣಲಾರದಂಥ ಮಧ್ಯಮ ವರ್ಗದವರಿಗೆ ಮಾತ್ರ ಈ ಅವಕಾಶ ಸಿಕ್ಕಿದೆ' ಎಂದು ಆತಂಕ ಮತ್ತು ಆಶ್ಚರ್ಯಪಡುತ್ತಾನೆ. ಇದರ ಪರಿಣಾಮವಾಗಿಯೇ ಇರಬೇಕು ಹೇಮಗಿರಿಯ ಪುರಾಣಿಕರ ಮಗ ರಾಜಣ್ಣ ತಹಸೀಲ್ದಾರನಾಗುತ್ತಾನೆ. ರಾಜಕೀಯ ಸ್ಥಿತ್ಯಂತರದಿಂದ ಉಂಟಾದ ಬದಲಾವಣೆಯಿದು.

ಪ್ರಜಾಪ್ರಭುತ್ವ ಬಂದ ನಂತರ, ಅದರ ನೀತಿ-ನಿಯಮಗಳಿಂದ, ಜಾಗೀರುದಾರ, ನವಾಬ ಮನೆತನಗಳಿಗೆ ಅಲ್ಲಿಯವರೆಗಿದ್ದ ರಾಜಕೀಯ ಬೆಂಬಲ ನಿಂತುಹೋಗುತ್ತದೆ. ಉತ್ಪನ್ನದ ಮೂಲಗಳು ಕಮ್ಮಿಯಾಗುತ್ತವೆ. ಅಂಥ ಮನೆತನದ ಯುವಕರು ವಿದ್ಯೆ ಕಲಿಕೆಯಲ್ಲಿ ಹಿಂದುಳಿದು ಸರಕಾರಿ ಹುದ್ದೆಗಳೂ ಕೈತಪ್ಪುತ್ತವೆ. ಆದರೆ ಅಂಥ ಮನೆತನದವರ ವೈಭವಯುತ ಭೋಗಜೀವನದ ದಾಹ ಮಾತ್ರ ಕಡಿಮೆಯಾಗುವುದಿಲ್ಲ. ಚೋಟೆನವಾಬನಿಗೆ ದಿನಕ್ಕೊಬ್ಬ 'ಲೌಂಡಿ' ಬೇಕು. ಬೆಲೆಬಾಳುವ ಕುಡಿತಬೇಕು. ನವಾಬ

ಜಮರುದ್ ಬೇಗಮಳಿಗೆ ದಿನಕ್ಕೊಂದು ಪಾರ್ಟಿ, ಕ್ಲಬ್ ಬೇಕು. ತನ್ನ ಪ್ರತಿಷ್ಠೆ ಕಮ್ಮಿಯಾಗಿಲ್ಲವೆಂಬುದನ್ನು ತೋರಿಸಲು ಆಕೆ ಪಾರ್ಟಿ ಏರ್ಪಡಿಸಿ, ದೊಡ್ಡ ದೊಡ್ಡ ಅಧಿಕಾರಸ್ಥರನ್ನು ಆಹ್ವಾನಿಸಿ ತನ್ನ ವರ್ಚಸ್ಸನ್ನು ಪ್ರದರ್ಶಿಸುತ್ತಾಳೆ. ಮಗಳು ಪಿರೀನ್, ಮಗ ದಿಲಾವರ್ ತಾಯಿಯ ದಾರಿಯಲ್ಲಿಯೇ ಇರುತ್ತಾರೆ. ಜಮರುದ್ ಬೇಗಂ ಇಂಥ ಪ್ರದರ್ಶನದಿಂದ, ಪ್ರಜಾಪ್ರಭುತ್ವದ ಸರಕಾರದಲ್ಲಿದ್ದ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಬಯಸುತ್ತಾಳೆ. ಆದರೆ ಅವಳಲ್ಲಿ ಹಿಂದಿನ ಯಾವ ಆಕರ್ಷಣೆಯೂ ಇರುವುದಿಲ್ಲ. ಅಧಿಕಾರಿಗಳು ಅವಳ ಮುಲಾಜಿಗೆ ಬೀಳುವುದಿಲ್ಲ. ಬೇಗಂ ಇದರಿಂದ ತನ್ನ ಇದ್ದ ಆಸ್ತಿಯನ್ನು ದಿನಕಳೆದಂತೆ ಒಂದೊಂದೇ ಕಳೆದುಕೊಳ್ಳುತ್ತಾಳೆ. ಮಗಳು ಪಿರೀನ್‌ಳನ್ನು ಮದುವೆ ಮಾಡಿಕೊಟ್ಟರೂ, ತನ್ನ ಸ್ವೇಚ್ಛಾಚಾರ, ಅನೈತಿಕ ನಡವಳಿಕೆಯಿಂದ ಬದುಕನ್ನು ಹದಗೆಡಿಸಿಕೊಳ್ಳುತ್ತಾಳೆ. ಅರಮನೆಯಂತಿದ್ದ 'ಕರಾಮತ್ ಮಂಜಿಲ್' ಅನ್ನು ಒತ್ತೆ ಹಾಕುವ ಕಾಲ ಬಂದು ಬೇಗಂ ಬೀದಿಪಾಲಾಗುತ್ತಾಳೆ. ಅವಳ ಸಂಬಂಧಿಕರು ಯಾರೂ ಸಹಾಯ ಮಾಡುವುದಿಲ್ಲ. ಚೋಟೆ ನವಾಬ ತನ್ನ ಅರಮನೆ ಬಿಡುವಾಗ ಹುಚ್ಚನಂತೆ ಕೂಗುತ್ತಾನೆ. ಬೇಗಂಳ ಮತ್ತು ಮಗಳು ಪಿರೀನ್ ಕೊನೆಗೆ ಕ್ಷುಲ್ಲಕ ಗಂಡಸರಿಗೆ ಮೈಮಾರಿಕೊಳ್ಳುವ ಹಂತಕ್ಕೆ ತಲುಪುತ್ತಾರೆ.

ಈ ಕಾದಂಬರಿಯಲ್ಲಿ, ನವಾಬ್ ಮನೆತನಗಳು ನಾಶವಾಗುವ ವಾಸ್ತವ ಚಿತ್ರಣವನ್ನು ಕಾಣುವಂತೆ, ಹೈದರಾಬಾದ್ ವಿಮೋಚನಾ ಹೋರಾಟ, ರಜಾಕಾರರ ದಾಳಿ, ದಂಗೆಗಳಲ್ಲಿ ಜರುಗಿದ ಅನೇಕ ಪ್ರಸಂಗಗಳ ಪ್ರಸ್ತಾಪವಿದೆ. ಲಂಪಟರು ಹೆಂಗಸರ ಮೇಲೆ ಅತ್ಯಾಚಾರ ಮಾಡಿ, ದ್ವೇಷವಿದ್ದವರು ಕೊಲೆ ಮಾಡಿ, ಕಳ್ಳರು ಕಳ್ಳತನ ಮಾಡಿ ಪರಿಸ್ಥಿತಿಯ ಲಾಭ ಪಡೆಯುತ್ತಾರೆ. ಕಳ್ಳತನ ಮಾಡಿದವರು ಪೊಲೀಸ್ ಕಾರ್ಯಾಚರಣೆಯಲ್ಲಿ ಜೀವ ಉಳಿದರೆ ಸಾಕೆಂದು ತಮ್ಮ ಕಳ್ಳಮಾಲನ್ನು ನಂಬಿಕೆ ಕಂಡವರಲ್ಲಿಟ್ಟು ಜೀವಭಯದಿಂದ ಓಡಿಹೋಗುತ್ತಾರೆ. ಕೆಲವರು ಮರಳಿ ಬರದೆ ಗಲಭೆಯಲ್ಲಿ ಸತ್ತರೆ, ಅವರಿಟ್ಟ ಹಣ, ಒಡವೆಗಳು ಯಾರಲ್ಲಿಟ್ಟಿದ್ದರೋ ಅವರಿಗೆ ದಕ್ಕುತ್ತವೆ. ಕೆಲವರು ಮರಳಿ ಬಂದು ಕೇಳಿದರೂ ಇಟ್ಟುಕೊಂಡವರು ಕೊಡಲಿಲ್ಲ. ಕೇಳುವುದಕ್ಕೆ ನೈತಿಕ ಧೈರ್ಯ ಇರಲಿಲ್ಲ. ಇಟ್ಟಿದ್ದಕ್ಕೆ ಸಾಕ್ಷಿ ಇಲ್ಲ. ಇಂಥ ಸಾಮಾಜಿಕ ಸನ್ನಿವೇಶದಲ್ಲಿ ನಡೆದ ಘಟನೆಗಳ ಚಿತ್ರಣವಿದೆ. ಸೌದಾಗರ್ ಎಂಬ ವ್ಯಕ್ತಿ ಒಂದು ರಾತ್ರಿ ಓಡಿ ಬಂದು ಅಪಾರ ವಸ್ತು-ಒಡವೆಗಳ ಚೀಲವನ್ನು ದೇವೇಂದ್ರರಾಯರಿಗೆ ಒಪ್ಪಿಸಿ ಕಣ್ಮರೆಯಾಗುತ್ತಾನೆ. ಗಲಭೆ ನಿಂತ ಮೇಲೆಯೂ ಸೌದಾಗರ್ ಬಂದು ಕೇಳುವುದಿಲ್ಲ. ನಂತರ ದೇವೇಂದ್ರರಾಯ್ ಅವನನ್ನು ಹೈದರಾಬಾದ್ ನಗರವನ್ನೆಲ್ಲಾ ಹುಡುಕಿ ಅವನಿಗೆ ಅವನ ಗಂಟನ್ನು ಮರಳಿಸುತ್ತಾನೆ. ಇಂಥ ಘಟನೆಗಳೂ ನಡೆದಿವೆ. ಗಲಭೆಯಲ್ಲಿ ಲೂಟಿಯಾದ ವಸ್ತುಗಳು ಸಿಕ್ಕಸಿಕ್ಕಂತೆಲ್ಲ ಸರಕಾರ ವಶಪಡಿಸಿಕೊಂಡು, ನಂತರ ಜನರಿಗೆ ಒಪ್ಪಿಸುವ ಯೋಜನೆ ಕೈಗೊಂಡರೂ ಅದು ಪ್ರಯೋಜನವಾಗುವುದಿಲ್ಲ. ಹೊಸ ಸರಕಾರದ ಅಧಿಕಾರಿಗಳೇ ಅಂಥ ವಸ್ತುವನ್ನು ನುಂಗತೊಡಗುತ್ತಾರೆ.

ಹೊಸ ಸರಕಾರ ಬಂದ ಪರಿಣಾಮವಾಗಿ ಮಧ್ಯಮ ವರ್ಗದ ರಾಜಣ್ಣ, ವಸಂತ ಉನ್ನತ ಹುದ್ದೆ ಪಡೆಯುವುದು, ಬೇಗಂ ಮಗ ದಿಲಾವರ್ ಅನಿವಾರ್ಯವಾಗಿ ಸಣ್ಣ ನೌಕರಿ ಹಿಡಿಯುವುದು, ಪ್ರೀತಿ ಸೆಹಗಲ್ ಜತೆ ದೇವೇಂದ್ರರಾಯ್ ಸಂಗೀತ ಕಛೇರಿ, ಭೇಟಿ, ಪಾರ್ಟಿಯಲ್ಲಿ ಕಾಲಕಳೆಯುವುದು ಮುಂತಾದ ವಿಷಯಗಳನ್ನು ಈ ಕಾದಂಬರಿಯು ಕಾಣಿಸಿದೆ. ಹೈದರಾಬಾದ್ ಕರ್ನಾಟಕ ವಿಮೋಚನೆಯಾದ ಮೇಲೆ, ಸಾಮಾಜಿಕ ಬದುಕಿನಲ್ಲಿ ಆದ ಬದಲಾವಣೆ, ಈ ಬದಲಾವಣೆಗೆ ಜನಸಮುದಾಯಗಳು ಅನುಭವಿಸಿದ ಬಿಕ್ಕಟ್ಟುಗಳನ್ನು ಮತ್ತು ನಿಜಾಂ ಪ್ರಭುತ್ವ ಹೋಗಿ, ಪ್ರಜಾಪ್ರಭುತ್ವ ಬಂದರೂ ಸ್ವಾತಂತ್ರ್ಯ ಎಂಬುದು ಕೇವಲ ರಾಜಕೀಯ ಸ್ವಾತಂತ್ರ್ಯವಾಗಿ ಪರಿಣಮಿಸಿದ್ದು, ಜನಸಾಮಾನ್ಯರ ಬವಣೆಗಳು ನಿರಂತರವಾಗಿ ಹಾಗೆ ಮುಂದುವರೆದಿದ್ದು ಮುಂತಾದ ವಾಸ್ತವ ಸಂಗತಿಗಳನ್ನು ಈ ಕಾದಂಬರಿ ಬಿಂಬಿಸಿದೆ.

ಆಡು ನುಡಿಗಟ್ಟಿನ 'ಬೆಳ್ಳ'ದ ಸುತ್ತಮುತ್ತ

೧೯೭೫ರಲ್ಲಿ 'ಬೆಳ್ಳ' (ಚನ್ನಣ್ಣ ವಾಲೀಕಾರ) ಕಾದಂಬರಿ ಪ್ರಕಟವಾದಾಗ ಕನ್ನಡ ಸಾಹಿತ್ಯ ವಲಯದಲ್ಲಿ ಅಲ್ಪಸ್ವಲ್ಪ ಚರ್ಚೆ ನಡೆಯಿತು. ಈ ಕಾದಂಬರಿಯಲ್ಲಿ ಪ್ರಯೋಗವಾದ ಭಾಷೆ, ಅದು ಉಂಟುಮಾಡಿದ ಸಂವಹನದ ತೊಡಕಿಗಾಗಿ ಮಾತ್ರ ಚರ್ಚೆಗೆ ಕಾರಣವಾಯಿತು. ಹಳೆಗನ್ನಡ ಕಾವ್ಯ ಕೃತಿಗಳಲ್ಲಿ ಚಂಪೂವಿನ ಭಾಷಾ ಪ್ರಯೋಗದ ಮಾದರಿಯಂತೆ, ಆಡುನುಡಿಯನ್ನು ಬಳಸಿಕೊಂಡು ಚನ್ನಣ್ಣ ವಾಲೀಕಾರರು 'ಬೆಳ್ಳ' ಕಾದಂಬರಿಯನ್ನು ಬರೆದಿದ್ದರು. ಕಲ್ಬುರ್ಗಿ ಭಾಗದ ಜನರ ನಿತ್ಯದ ಆಡುನುಡಿಯನ್ನು ಒಂದರೊಳಗೊಂದು ಪೋಣಿಸಿ ಬರೆದದ್ದರಿಂದ, ಈ ಭಾಷೆ ಮತ್ತು ಅದರ ಲಯವನ್ನು ಅರಿಯದ ಸಾಹಿತ್ಯದ ವಿದ್ಯಾರ್ಥಿಗಳು ಅದನ್ನು ಓದಲು ಪ್ರಯತ್ನಿಸಿ ಸಾಧ್ಯವಾಗದೆ ಬಿಟ್ಟುಬಿಟ್ಟರು. ಕಾದಂಬರಿಕಾರರು ಅದನ್ನೊಂದು ಪ್ರಯೋಗವೆಂಬಂತೆ ಮಾಡಿದ್ದರೆಂದು ಕಾಣುತ್ತದೆ. ಓದುಗರಿಂದ ಒಳ್ಳೆಯ ಪ್ರತಿಕ್ರಿಯೆಗಳು ಬರದ್ದಕ್ಕೋ ಮಾಡಿದ ಪ್ರಯೋಗ ಯಶಸ್ವಿಯಾಗಲಿಲ್ಲವೆಂದು ಸುಮ್ಮನಾಗಿರಬೇಕು. ಕನ್ನಡ ಕಾದಂಬರಿಗಳ ಪರಂಪರೆಯಲ್ಲಿ 'ಬೆಳ್ಳ'ನಂಥ ಪ್ರಯೋಗಗಳು ನಡೆದಿರಲಿಲ್ಲ. ಪ್ರಾರಂಭದಲ್ಲಿ ಕಾದಂಬರಿಗೆ ಬಳಸುವ ಭಾಷೆ ಗ್ರಾಂಥಿಕವಾಗಿತ್ತು. ಎಲ್ಲರಿಗೂ ಪರಿಚಿತವಾದ ಮತ್ತು ಓದಿ ಅರಿಯಲು ಸುಲಭವಾಗುವ ಭಾಷೆ ಅದಾಗಿತ್ತು. ಆದರೂ ಪ್ರಾದೇಶಿಕ ಭಿನ್ನತೆ ಎದ್ದು ಕಾಣುತ್ತಿತ್ತು. ಭೌಗೋಳಿಕ ಪರಿಸರ, ಅಲ್ಲಿಯ ಜನರ ಬದುಕು, ಜೀವನಕ್ರಮ, ಸಂಸ್ಕೃತಿಗಳಿಗೆ ಅನುಗುಣವಾಗಿ ಕಾದಂಬರಿಗಳು ಸೃಷ್ಟಿಯಾಗತೊಡಗಿದಾಗಲೂ ಸಂದರ್ಭಕ್ಕೆ ಹೊಂದುವಂತೆ, ನೈಜವಾಗಿ ಕಾಣುವಂತೆ ಭಾಷೆ ಬಳಕೆಯಾಗತೊಡಗಿತ್ತು. ಪಾತ್ರಗಳಿಗೆ ತಕ್ಕಂತೆ ಸಂಭಾಷಣೆಗಳು ಬಂದಾಗ ಆಡುನುಡಿಯನ್ನು ಮತ್ತು ವಿವರಗಳಿಗೆ ಗ್ರಾಂಥಿಕ ಭಾಷೆಯನ್ನು ಬಳಸುತ್ತ ಬಂದರು. 'ನವೋದಯ' ಕಾಲದಲ್ಲಿ ಹುಟ್ಟಿಕೊಂಡ ಕಾದಂಬರಿಗಳು ಇದೇ ಮಾದರಿಯಲ್ಲಿ ಬಂದವು. 'ನವ್ಯ' ಕಾಲದಲ್ಲಿ ಬೇರೆ ಮಾದರಿ ಪ್ರಾರಂಭವಾಯಿತು. ಅದಕ್ಕೆ ನವ್ಯದ ಮನೋಭಾವ, ವಸ್ತು, ಪಾತ್ರ ಮತ್ತು ಸ್ಥಳಗಳಿಗೆ ಹೊಂದುವಂತೆ ಹೊಸ ಆಯಾಮ ಕಾಣಿಸಿತು. ಎಪ್ಪತ್ತರ ದಶಕ ಕಳೆಯುತ್ತಿದ್ದಂತೆ 'ಬಂಡಾಯ-ದಲಿತ' ಸಾಹಿತ್ಯ ಚಳುವಳಿ ಸುರುವಾಯಿತು. ಅನೇಕ ಕೆಳವರ್ಗದವರು ಬರವಣಿಗೆ ಪ್ರಾರಂಭಿಸಿದರು. ಅಲ್ಲಿಯವರೆಗೆ ಕತ್ತಲಲ್ಲಿದ್ದ ಬದುಕಿಗೆ ಅಕ್ಷರದ ಮೂಲಕ ಬೆಳಕನ್ನು ನೀಡಿ ಹೊರ ತಂದರು. ಆಡು ನುಡಿ ಸಹಜವಾಗಿ ಸಾಹಿತ್ಯ ಕೃತಿಗಳಲ್ಲಿ ಕಾಣಿಸಿಕೊಂಡಿತು. ಚದುರಂಗರ 'ವೈಶಾಖ' ಕಾದಂಬರಿಯ ಪ್ರಯೋಗ ಸ್ವಲ್ಪ ಭಿನ್ನವಾಗಿ ಕಂಡರೂ, ಅದರ ಸ್ವರೂಪ ಭಿನ್ನವಾಗಿರಲಿಲ್ಲ. ದಲಿತ ಪಾತ್ರಗಳು, ಕೇರಿ ಬಂದಾಗ ಮಾತ್ರ ಅದರ ಸಂಸ್ಕೃತಿಯನ್ನು ಬಿಂಬಿಸುವ ಭಾಷೆ ಬಳಕೆಯಾಗಿತ್ತು. ದೇವನೂರು ಮಹಾದೇವರು ಕಥೆಗಳನ್ನು ಅವರ ಭಾಗದ ಜನಸಾಮಾನ್ಯರ ಆಡುನುಡಿಯನ್ನೇ ಬಳಸಿದರು. 'ಕುಸುಮಬಾಲೆ' ಬಂದಾಗ, ಅದರ ಸಂವಹನದ ತೊಡಕಿನ ಪ್ರಶ್ನೆ ಪುನಃ ಹುಟ್ಟಿಕೊಂಡಿತು. ಲಂಕೇಶ್, ತೇಜಸ್ವಿ, ಚಂಪಾ ಅವರಂಥ ಪ್ರತಿಭಾವಂತರು 'ಕುಸುಮಬಾಲೆ'ಯ ಭಾಷಾ ಪ್ರಯೋಗವನ್ನು, ಅದರ ಸಂವಹನದ ಕ್ಲಿಷ್ಟತೆಯನ್ನು ಗುಮಾನಿಯಿಂದ ನೋಡಿದರು. ಆದರೆ ಅನೇಕ ವಿಮರ್ಶಕರು ಅದನ್ನು ಸಮರ್ಥಿಸಿದರು. ಕಾದಂಬರಿಯ ಮೌಲ್ಯ ಸತ್ವ ಮತ್ತು ಹೊಸತನದ ಅಂಶಗಳನ್ನು ಮುಂದುಮಾಡಿ ಕನ್ನಡ ಕಾದಂಬರಿ ಪರಂಪರೆಯಲ್ಲಿ ಒಂದು ಮೈಲಿಗಲ್ಲು ಎಂಬಂತೆ ಚರ್ಚಿಸಿದರು. ಇದೇ ಸಂದರ್ಭದಲ್ಲಿ ಚಂಪಾ ಪುನಃ 'ಕುಸುಮಬಾಲೆ'ಯನ್ನು ಅರ್ಥೈಸುವ ಜನ 'ಬೆಳ್ಳ' ಕಾದಂಬರಿಯನ್ನು ಅರ್ಥೈಸಲು ಯಾಕೆ ಹಿಂದೇಟು ಹಾಕಿದರೆಂದು ಪ್ರಶ್ನಿಸಿ, ಸಾಹಿತ್ಯ ವಲಯದಲ್ಲಿ ಬಿಸಿ ಮೂಡಿಸಿದರೂ 'ಬೆಳ್ಳ' ಓದುಗರಿಂದ ಪುನಃ ಚರ್ಚೆಗೆ ಒಳಗಾಗಲಿಲ್ಲ. ಇದು ಕನ್ನಡ ಸಾಹಿತ್ಯ ವಲಯದಲ್ಲಿ ನಡೆದ ಒಂದು ಸಂಗತಿ.

ಚೆನ್ನಣ್ಣವಾಲೀಕಾರರೇ 'ಬೆಳ್ಳ' ಕಾದಂಬರಿಯಲ್ಲಿ, ಇಂಥ ಭಾಷಾ ಪ್ರಯೋಗವನ್ನು ಮಾಡುವುದಕ್ಕೆ ಇರುವ ಒತ್ತಡಗಳು ಯಾವವು ಎಂದು ಕಾದಂಬರಿಯ ಮುನ್ನುಡಿಯಲ್ಲಿ ಹೇಳಿಕೊಂಡಿಲ್ಲ. ಆದರೆ ೧೯೮೬ರಲ್ಲಿ ಬರೆದರೆಂದು ಕಾಣುವ ಅವರ 'ಗ್ರಾಮಭಾರತ' ಎಂಬ ಕಾದಂಬರಿಯ ಮುನ್ನುಡಿಯಲ್ಲಿ 'ಬೆಳ್ಳ' ಕಾದಂಬರಿಯನ್ನು ಪ್ರಸ್ತಾಪಿಸಿದ್ದಾರೆ. 'ಎಂ.ಎ.ದಲ್ಲಿ ಭಾಷಾಶಾಸ್ತ್ರ

ಓದುವಾಗ ಆಡದಂತೆ, ಬಾಯಿ ಹೊರಳಿದಂತೆ ಬರೆಯಬೇಕೆಂದು ಒಂದು ಕುರುಬ ಜನಾಂಗದ ಕಥೆಯಾಧರಿಸಿಕೊಂಡು 'ಬೆಳ್ಳ' ಕಾದಂಬರಿ ಬರೆದೆ......ಚಂಪೂಕ್ಕಿಂತಲೂ ಇದರ ಓದು ಕಠಿಣವೆಂದು ಹಾ.ಮಾ.ನಾಯಕ, ಜಿ.ಎಸ್.ಸದಾಶಿವ ನುಡಿದರು. ಈಗ ದೇವನೂರ ಮಹಾದೇವರ 'ಕುಸುಮಬಾಲೆ'ಗೆ ಅರ್ಥೈಸುವ ಜನ ಚಂಪಾ ತಮ್ಮ ಸಂಕ್ರಮಣದಲ್ಲಿ ಬರೆದಂತೆ(೯೧ರ ಫೆಬ್ರವರಿ)ನನ್ನ 'ಬೆಳ್ಳ'ನಿಗೇಕೆ ಅರ್ಥೈಸಲಿಲ್ಲವೋ? ಓದುವ ಪ್ರಯತ್ನ ಮಾಡಲಿಲ್ಲವೋ?' ಎಂದು ಪ್ರಶ್ನಿಸಿದ್ದಾರೆ.

'ಬೆಳ್ಳ' ಬರೆದು, ಅದರ ಸಂವಹನದ ತೊಡಕಿನ ಮೇಲೆ ಚರ್ಚೆಯಾಗಿ, ಪುನಃ ಹದಿನೈದು ವರ್ಷಗಳ ನಂತರ ಚರ್ಚೆಗೆ ಬಂದರೂ 'ಬೆಳ್ಳ'ದ ಅವಗಣನೆಗೆ ಏನು ಕಾರಣವಿರಬಹುದು ಎಂದು ಕಾದಂಬರಿಕಾರರೆ ಪ್ರಶ್ನಿಸಿಕೊಂಡು ಉತ್ತರಿಸಲು ಪ್ರಯತ್ನಿಸಲಿಲ್ಲ. ಬದಲಾಗಿ ಓದುವ ಪ್ರಯತ್ನ ಮಾಡಲಿಲ್ಲ ಯಾಕೆ ಎಂದು ಓದುಗ ವರ್ಗವನ್ನೇ ಪ್ರಶ್ನಿಸಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದವನೆಂದು ಉಪೇಕ್ಷಿಸಿದರೋ ಮಹತ್ವದ ಲೇಖಕ ಅಥವಾ ಕೃತಿಯಲ್ಲವೆಂದು ಪೂರ್ವಗ್ರಹಪೀಡಿತರಾದರೋ ಎಂಬ ಸಂಶಯವೇ ಕೃತಿಕಾರರಲ್ಲಿ ಉಳಿದಿರುವಂತೆ ಕಾಣುತ್ತದೆ. ಇಂಥ ಮಾದರಿಯ ಪ್ರಯೋಗಗಳು ನಡೆಯದಿರುವ ಕಾಲದಲ್ಲಿ ಈ ಕಾದಂಬರಿ ಬಂದ ಕಾರಣಕ್ಕೋ ಮತ್ತು ಅದರ ಸಂವಹನಕ್ಕೆ ಶ್ರಮ ಪಡದೆ ಇರುವುದಕ್ಕೋ ಆಗ ಉಪೇಕ್ಷೆಗೆ ಒಳಗಾಗಿರಬಹುದು. ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಕಾಲದಲ್ಲಿ ಇಂಥ ಮಾದರಿಯ ಪ್ರಯೋಗಗಳಿಗೆ ಮಾನ್ಯತೆ ಸಿಕ್ಕಮೇಲೆಯೂ 'ಬೆಳ್ಳ' ಕಾದಂಬರಿಯ ಚರ್ಚೆ ಮುನ್ನೆಲೆಗೆ ಬರಬೇಕಾಗಿತ್ತು. ಕೇವಲ ನೆಪಕ್ಕೆ ಎಂಬಂತೆ ಚರ್ಚೆಗೆ ಬಂತೆ ಹೊರತು ನಿಜವಾದ ಅರ್ಥದಲ್ಲಿ ಚರ್ಚೆಗೆ ಬರಲಿಲ್ಲ ಯಾಕೆ? ಎಂಬ ಪ್ರಶ್ನೆ ನಿಲ್ಲುತ್ತದೆ.

ಸಾಹಿತ್ಯದ ವಿದ್ಯಾರ್ಥಿಯಾದ ವಾಲೀಕಾರರು, ಹಳೆಗನ್ನಡ ಕಾವ್ಯಗಳ ಅಧ್ಯಯನಕ್ಕೆ ವಿಶೇಷ ಆದ್ಯತೆ ಇರುವ ಕಾಲದಲ್ಲಿ ಚಂಪೂ ಕಾವ್ಯಗಳ ಭಾಷಾ ಪ್ರಯೋಗಕ್ಕೆ ಮಾರು ಹೋಗಿರಬೇಕು. ಆದರೆ ಅಂಥ ಕಾವ್ಯಗಳ ಸೃಷ್ಟಿಯ ಕಾಲ ನಿಂತು ಹೋದದ್ದಕ್ಕೋ, ಅವರು ಹೊಸಗನ್ನಡ ಕಾಲದಲ್ಲಿ ಇದ್ದದ್ದು ಮತ್ತು ಕಥೆ-ಕಾದಂಬರಿಯ ಕಾಲವಿದು ಎಂದು ಗ್ರಹಿಸಿ, ಮತ್ತು ಚಂಪೂ ಕಾವ್ಯದ ಮೇಲಿನ ಪ್ರೀತಿಗೆ ಅಂಥ ಮಾದರಿಗಾಗಿ ಆಡುನುಡಿಯ ಭಾಷೆಯನ್ನು ಬಳಸಿಕೊಂಡು, ಅದನ್ನೇ ಒಂದು ಶೈಲಿಯಾಗಿ ರೂಪಿಸಿಕೊಂಡು ಪ್ರಯೋಗ ಮಾಡಿರಬೇಕು ಎನ್ನಿಸುತ್ತದೆ. ಮೇಲಾಗಿ ಅವರ ಹುಟ್ಟು ಬೆಳೆದ ಪರಿಸರ, ಸಂಸ್ಕಾರವೂ ಅದಕ್ಕೆ ಪೂರಕವಾಗಿರಬೇಕು. ಆಡುನುಡಿಯನ್ನೇ ಪ್ರಯೋಗಿಸಲು ಇನ್ನೊಂದು ಕಾರಣವೆಂದರೆ, ಈ ಪ್ರದೇಶದಲ್ಲಿ ತೊಂಡಿ ಸಂಪ್ರದಾಯವೇ ಪ್ರಧಾನವಾಗಿತ್ತು ಎಂಬುದು. ಈ ಪ್ರದೇಶದಲ್ಲಿ ಸ್ವಾತಂತ್ರ್ಯೋತ್ತರದವರೆಗೆ ಲಿಖಿತ ಸಾಹಿತ್ಯ ಪರಂಪರೆಗಿಂತ, ಮೌಖಿಕ ಪರಂಪರೆಯೇ ಪ್ರಧಾನವಾಗಿತ್ತು. ಇವೆಲ್ಲವೂ 'ಬೆಳ್ಳ' ಕಾದಂಬರಿಯ ಹುಟ್ಟಿಗೆ ಕಾರಣವಾಗಿರಬೇಕು.

'ಕುಸುಮಬಾಲೆ'ಯಲ್ಲಿ ಆಡುನುಡಿಯನ್ನೇ ಬಳಸಿದ್ದರೂ ಅದು ಮರುಹುಟ್ಟು ಪಡೆದು ಕಾವ್ಯಾತ್ಮಕ ರೂಪ ಪಡೆದಿದೆ. 'ಬೆಳ್ಳ'ದಲ್ಲಿ ಕಾವ್ಯಾತ್ಮಕತೆ ಇಲ್ಲ. ಆಡುನುಡಿಯನ್ನು ಮರುಸೃಷ್ಟಿಸಲಾಗಿಲ್ಲ. ಇದು ಪ್ರತಿಭೆಗೆ ಸಂಬಂಧಿಸಿದ್ದು. ಆದರೆ ನಿಜ ಸಂಗತಿಯೆಂದರೆ, 'ಬೆಳ್ಳ' ಕಾದಂಬರಿಯಲ್ಲಿ ಬಳಸಿದ ಆಡುನುಡಿ ಎಂದು ಕರೆಯುವ ಆ ಭಾಷೆ ಜನಸಾಮಾನ್ಯರ ದಿನಬಳಕೆಯಲ್ಲಿಯಂತೂ ಸಾಧ್ಯವಾಗುವುದಿಲ್ಲ. ಯಾಕೆಂದರೆ ಕಾದಂಬರಿಕಾರರು ಸೃಷ್ಟಿಸಿಕೊಂಡ ಕೃತಿಕ ಶೈಲಿಯಾಗಿದೆ. ಈ ಕಾದಂಬರಿಯಲ್ಲಿ ಜನರಾಡುವ ಭಾಷೆಯ ಶೈಲಿಯೂ ಇದೆ. ಕಾದಂಬರಿಕಾರರು ಸೃಷ್ಟಿಸಿಕೊಂಡ ಶೈಲಿಯೂ ಇದ್ದು, ಎರಡರ ವ್ಯತ್ಯಾಸ ಒಡೆದು ಕಾಣುತ್ತದೆ.

'ಎಲೆ ತಾಯ್ಗಂಡಾ ಏನ್ಸಗಾ ಮಾಡ್ಡೆಲೆ ಕುರ್ಸಾಲ್ಯಾ'
'ಸಂಕ್ರಮವ್ವ, ಹಣ್ಮಂತ್ಯಾಕಾ, ದ್ಯಾದ್ಪಿಂಗ್ಳು ಜಡಾ ಆಗ್ಯ ಮಕ್ಕಂಡಿದ್ರಂತ ಸುದ್ದಿ ಕೇಳಿದ್ಯಾ ಈಗ ಚಲೋ ಆಗೆದಾ ಹ್ಯಾಂಗ್'

'ಸ್ವಾದರತ್ತೆಂತ ಸ್ವಾದರತ್ತಿ ಆಕಿ ಸ್ವಾದರತ್ಯಾಗಿದ್ರ ಹೀಂಗ್ಯಾಕ್ಪತ್ತಿ ವರ್ಸತಿದ್ಯೆ ಎವ್ವಾ'
ಇದು ಸಂಭಾಷಣೆಯ ಶೈಲಿ. ಸಾಮಾನ್ಯವಾಗಿ ಜನರಾಡುವ ಭಾಷೆ.

ಕಾದಂಬರಿಯ ನಿರೂಪಣೆಯಲ್ಲಿ ವಿವರಗಳಿಗಾಗಿ ಬಳಸುವ ಭಾಷೆ ಹೀಗಿದೆ: "ಆ ಮಾತ್ಸಂಗ್ಯಾಗ್ಹಣ್ಮೆಣ್ಸಿನ್ಕಾಯಿಟ್ಟರ್ದಂಗಾಗ್ಯ ಆ ಕುನ್ನಮನ್ನಾಗಿಟ್ಹೊತ್ಬಂದಾಗ್ನೋಡ್ಕೊಂಡ್ರೈತಂತ್ವೊಳ್ಗೊಳ್ಗ ಹಲ್ಮಸಿತಿದ್ದ ಮುಂದದರಾಗ್ಹಂತಚಂದುಳ್ಳೆಲುವಿಹೆಣ್ಣೆಟ್ಟಿಗ್ಹುಟ್ಟಿದ್ಹಡ್ಡಿಮಗ ಬೆಳ್ಳ್ಯಾನ್ವಾಲೀಗ್ಹೋಗ್ ತನಗ್ಮಸಿ ಹಂಚಿದ್ ಮುಕುದ್ಮೊಗಿಂದ್ ಹೆಣ್ತಿ ಸಿಕ್ಕಿದ್ಕ ಸಂಗ್ಯಾಗ್ಹೊಟ್ಟಿಗ್ಹಾಕ್ಕಲ್ಸದಂಗಾಗಿತ" (ಒಂದು ವಾಕ್ಯವನ್ನು ಹೀಗೆ ಬಿಡಿಸಬಹುದು: ಆ ಮಾತು ಸಂಗ್ಯಾಗ ಹಣ್ಣು ಮೆಣಸಿನ ಕಾಯಿ ಇಟ್ಟು ಹರಿದಂತೆ ಆಗಿ ಆ ಕುನ್ನ(ಸೇಡು) ಮನದಲ್ಲಿಟ್ಟು ಹೊತ್ತು ಬಂದಾಗ ನೋಡಿಕೊಂಡರೆ ಆಯಿತೆಂದು ಒಳ ಒಳಗೆ ಹಲ್ಲು ಮಸೀತಿದ್ದ)

ಈ ಪ್ರದೇಶದ ಭಾಷೆಯ ಶೈಲಿ ಮತ್ತು ಅದರ ಲಯ ತಿಳಿಯದ ಅನ್ಯ ಪ್ರದೇಶದವರಿಗೆ ಸಂವಹನದ ತೊಂದರೆಯಾಗಿರುವುದು ಸಹಜ. ಆದರೆ ಈ ಭಾಗದ ಸಾಹಿತ್ಯದ ವಿದ್ಯಾರ್ಥಿಗಳೂ ಇದನ್ನು ಸುಲಭವಾಗಿ ಓದಲು ಸಾಧ್ಯವಾಗುವುದಿಲ್ಲ. ಇದು ಸಂವಹನದ ತೊಡಕಿನ ಪ್ರಶ್ನೆಯಾಯಿತು. ಆದರೆ ಶ್ರಮವಹಿಸಿ ಈ 'ಬೆಳ್ಳ' ಕಾದಂಬರಿಯನ್ನು ಓದಿದರೆ ನಿರಾಶೆಯಾಗುತ್ತದೆ ಎಂದೇ ಹೇಳಬೇಕಾಗುತ್ತದೆ. ವಸ್ತುವಾಗಲಿ, ಪಾತ್ರ ಸೃಷ್ಟಿಯಾಗಲಿ, ಪರಿಸರವಾಗಲಿ, ಬದುಕಿನ ದರ್ಶನವಾಗಲಿ ಯಾವ ಅಂಶದಲ್ಲೂ ಅನನ್ಯತೆ ಅನ್ನಿಸುವುದಿಲ್ಲ. ಕುವೆಂಪು, ಕಾರಂತ, ರಾವ್ ಬಹದ್ದೂರ್, ಪುಣೇಕರ್, ಅನಂತಮೂರ್ತಿ ಅವರ ಕಾದಂಬರಿಗಳಿಗೆ ಹೋಲಿಸುವುದಕ್ಕೆ ಆಗುವುದಿಲ್ಲ. ಈ ಹೋಲಿಕೆ ಯಾಕೆಂದರೆ, ವಾಲೀಕಾರರೆ ತಮ್ಮ 'ಗ್ರಾಮಭಾರತ' ಕಾದಂಬರಿಯ ಪ್ರಸ್ತಾವನೆಯಲ್ಲಿ, ಈಗಾಗಲೇ ಕನ್ನಡ ಕಾದಂಬರಿ ಪರಂಪರೆಯಲ್ಲಿ 'ಮೈಲುಗಲ್ಲಾಗಿ' ನಿಂತಿರುವ ಕಾದಂಬರಿಗಳ ಹೆಸರುಗಳನ್ನು ಹೆಸರಿಸಿ(ಜೊತೆಗೆ ಪಾಶ್ಚಾತ್ಯರ ಕಾದಂಬರಿಗಳನ್ನೂ) ಅಂಥ ಕಾದಂಬರಿಗಳನ್ನು ಬರೆಯಲು ಪ್ರಯತ್ನಿಸುವುದಾಗಿ ಹೇಳಿಕೊಂಡಿದ್ದಾರೆ. ಓದುಗರಿಗೆ 'ಬೆಳ್ಳ' ಓದುವುದಾಗಿರಲಿಕ್ಕಿಲ್ಲ. ಆದರೆ ವಾಲೀಕಾರರ 'ಗ್ರಾಮಭಾರತ' 'ಕೋಟೆ ಬಾಗಿಲು', 'ಹುಲಿಗೆಮ್ಮ' 'ಒಂದು ಹೆಣ್ಣಿನ ಒಳಜಗತ್ತು' ಕಾದಂಬರಿಗಳು 'ಬೆಳ್ಳ' ಕಾದಂಬರಿಯ ಮರುರೂಪಗಳು. 'ಬೆಳ್ಳ' ಕೃತಿಯ ಆಶಯವೇ, ಅವರ ಎಲ್ಲ ಕೃತಿಯಲ್ಲಿ ಒಂದೇ ಬಗೆಯಲ್ಲಿ ಮುಂದುವರೆದಿದೆ.

ಜಾತಿ, ಹಣ, ಹಾದರ, ಕೊಲೆ ಮುಂತಾದ ಗ್ರಾಮೀಣ ರಾಜಕಾರಣದ ಚಿತ್ರಣಗಳು

ಯಾವುದೋ ಒಂದನ್ನು ಕೇಂದ್ರವಾಗಿಟ್ಟುಕೊಂಡು, ಅದರ ಆಳ ಅಗಲ ಅಥವಾ ಸುತ್ತಮುತ್ತ ಚಾಚುತ್ತ ವಿಷಯ, ವಸ್ತು, ವ್ಯಕ್ತಿ ಬೆಳೆಯುತ್ತ ಅದರದರ ಮಿತಿಯಲ್ಲಿ ಇಡಿ ಬದುಕನ್ನು ಕಟ್ಟಿಕೊಡುವ ಕೆಲಸವನ್ನು ವಾಲೀಕಾರರ ಕಾದಂಬರಿಗಳು ಮಾಡುವುದಿಲ್ಲ. ಆದರೂ ಒಂದು ಹಳ್ಳಿಯಿರುತ್ತದೆ. ಅನೇಕ ಜಾತಿಯ, ಅನೇಕ ಸ್ವಭಾವದ ಹೆಣ್ಣು ಗಂಡುಗಳಿರುತ್ತಾರೆ. ಒಂದು ಬದುಕು, ಒಂದು ಪರಿಸರ, ಒಂದು ಜೀವನ ಕ್ರಮ, ದರ್ಶನ ಇದ್ಯಾವುದೂ ಕಾದಂಬರಿಯಿಂದ ಎದ್ದು ಕಾಣುವುದಿಲ್ಲ. ಸಾಹಿತ್ಯ ಕೃತಿ ಇದನ್ನು ಬಯಸುತ್ತದೆ ಎಂದು ಕಾಣುತ್ತದೆ. ವಾಲೀಕಾರರು ತುಂಡು ತುಂಡು ಬದುಕಿನ ಚಿತ್ರಗಳನ್ನು ಕಾಣಿಸುತ್ತಾರೆ. ಅವುಗಳ ಒಳಗೆ ಒಂದು ಸೂತ್ರದ ದಾರ ಇರುವಂತೆ ಅನ್ನಿಸುವುದಿಲ್ಲ. ಬದುಕನ್ನು ಕಲೆಯಂತೆ ರೂಪಿಸಿ ತೋರಿಸುವುದಿಲ್ಲ.

ಮನುಷ್ಯ ಮನುಷ್ಯನ ನಡುವೆ ಹುಟ್ಟುವ ಸಣ್ಣ ಘರ್ಷಣೆಗಳು ಅವು ಅಲ್ಲೇ ಮಾಯವಾಗದೆ, ಬಲಿತು ದ್ವೇಷಕ್ಕೆ ತಿರುಗಿ ಸೇಡಿಗಾಗಿ ಕಾಯುತ್ತವೆ. ಅದರ ಪರಿಣಾಮಗಳು ಕೊಲೆ ಮತ್ತು ಜೇಲು. ಅಪರಾಧ ಮತ್ತು ಶಿಕ್ಷೆ ಈ ಎರಡು ಅಂಶಗಳು ವಾಲೀಕಾರರ ಎಲ್ಲ ಕಾದಂಬರಿಗಳಲ್ಲಿ ಅತಿ ಎನ್ನುವಷ್ಟು ತುಂಬಿವೆ. ಗಂಡು-ಗಂಡಿನ ನಡುವೆ ಏರ್ಪಟ್ಟ ದ್ವೇಷ ಕೊಲೆಯಲ್ಲಿ ಸಮಾಪ್ತಿಯಾಗುತ್ತದೆ.

ಯಾರಿಗೋ ಶಿಕ್ಷೆಯಾಗುತ್ತದೆ. ಗಂಡು ಹೆಣ್ಣಿನ ನಡುವೆ ನಡೆದ ಘರ್ಷಣೆ ಅತ್ಯಾಚಾರದಲ್ಲಿ ಕೊನೆಗೊಳ್ಳುತ್ತದೆ. ಶಿಕ್ಷೆ ವ್ಯಕ್ತಿಗತವಾಗುತ್ತದೆ. ಅಂದರೆ ಗಂಡು ಹೆಣ್ಣಿನ ಮೇಲೆ ಸೇಡು ತೀರಿಸಿಕೊಳ್ಳುವುದೆಂದರೆ ಅವಳನ್ನು ಅತ್ಯಾಚಾರ ಮಾಡುವುದು, ಗಂಡಿಗೆ ಶಿಕ್ಷೆಯಿಲ್ಲ. ಇಂಥದ್ದು ಬರೀ ಹೆಂಗಸಿಗೆ ಮಾತ್ರ ಸೀಮಿತವಲ್ಲ. ಗಂಡಸಿನ ವಿಷಯದಲ್ಲೂ ಹೌದು. 'ಬೆಳ್ಳ' ಕಾದಂಬರಿಯಲ್ಲಿ, ಸಂಗ್ಯಾ ಬಸಮ್ಮನನ್ನು ಹೆಂಡೆ ಎತ್ತುವಾಗ ಕರೆದು ಉಗಿಸಿಕೊಳ್ಳುತ್ತಾನೆ. ಇದು 'ಅನೈತಿಕ' ಸಂಗತಿಯಾಗಿದ್ದರೂ, ಬಸಮ್ಮನ ಸಹಜ ಗುಣವನ್ನು, ಸಂಗ್ಯಾನ ಲಂಪಟತನವನ್ನು ತೋರಿಸುತ್ತದೆ. ಆದರೆ ಈ ಘರ್ಷಣೆ ಬಲಿಯುತ್ತದೆ. ಊರ ಜಗಳ ಒಂದರಲ್ಲಿ ಬಸಮ್ಮನ ಗಂಡ ಬೆಳ್ಳನನ್ನು ಅನಾವಶ್ಯಕವಾಗಿ ಸಿಕ್ಕಿಸಿ ಅವನನ್ನು ಜೇಲಿಗೆ ಕಳಿಸಿ, ಬಸಮ್ಮನನ್ನು ಒಂಟಿಯನ್ನಾಗಿ ಮಾಡಿ, ಅವಳನ್ನು ಬಲವಂತವಾಗಿ ಸಂಗ್ಯಾ ಕೂಡುತ್ತಾನೆ. ಅಪರಾಧಿ ಸಂಗ್ಯಾನಿಗೆ ಶಿಕ್ಷೆಯಿಲ್ಲ. ನಿರಪರಾಧಿ ಬಸಮ್ಮ ಅತ್ಯಾಚಾರಕ್ಕೆ ಬಲಿಯಾದದ್ದೂ ಅಲ್ಲದೆ ಶಿಕ್ಷೆ ಅನುಭವಿಸುತ್ತಾಳೆ, ಬದುಕನ್ನು ಕೆಡಿಸಿಕೊಳ್ಳುತ್ತಾಳೆ. ಇದು ಅನಾವಶ್ಯಕವಾಗಿ ನಡೆದ ಘಟನೆ ಎನ್ನಬೇಕೆ? ಇದಕ್ಕೆ ವಿರುದ್ಧವಾದ ಘಟನೆ ಇನ್ನೊಂದಿದೆ. ಬಯಲಾಟದಲ್ಲಿ ಬೆಳ್ಳ ಮಾಡಿದ ಪಾತ್ರವನ್ನು ಮೆಚ್ಚಿಕೊಂಡ ರಾಮಾಬಾಯಿ, ಬೆಳ್ಳನ ಸಂಗಡ ಮಲಗಿ ಸುಖ ಪಡಬೇಕು ಎಂದು ಮನಸ್ಸು ಮಾಡುತ್ತಾಳೆ. ಅವನು ಅದನ್ನು ನಿರಾಕರಿಸುತ್ತಾನೆ. ರಮಾಬಾಯಿಯಲ್ಲಿ ಸೇಡು ಮೂಡುತ್ತದೆ. ಬದುಕಿನಲ್ಲಿ ಬಿದ್ದ ಪೆಟ್ಟುಗಳನ್ನು ಅನುಭವಿಸಿ ಸೋತು ಬಳಲಿದ ಹೊತ್ತಿನಲ್ಲಿ ರಮಾಬಾಯಿ ಅವನಿಗೆ ತಾತ್ಕಾಲಿಕವಾಗಿ ಆಶ್ರಯ ನೀಡಿ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾಳೆ. ಇದರಲ್ಲಿ ತಪ್ಪು ಯಾರದು? ಶಿಕ್ಷೆ ಯಾರಿಗೆ? ಇದು ಹೆಣ್ಣು-ಗಂಡುಗಳ ನಡುವೆ ನಡೆಯುವ ಸೇಡು ಮತ್ತು ಶಿಕ್ಷೆಯ ಸಂಗತಿ. ಗಂಡು-ಗಂಡುಗಳ ನಡುವೆ ನಡೆದ ಘರ್ಷಣೆ ಅದು ಸೇಡಾಗಿ ಕೊಲೆಯಲ್ಲಿ ಮುಕ್ತಾಯವಾಗುತ್ತದೆ. ತಪ್ಪಿತಸ್ಥರೆಂದು ಗುರುತಿಸಲಾಗುವವರಿಗೆ ಶಿಕ್ಷೆಯಾಗಿ ಜೈಲು ಸೇರುತ್ತಾರೆ. ಇದು ಬಹಿರಂಗವಾಗಿ ಕಾಣುವ ಶಿಕ್ಷೆ.

ಹಳ್ಳಿಗಳಲ್ಲಿ ನಿತ್ಯ ಘಟಿಸುವ ಅನೇಕ ಸಂಗತಿಗಳು 'ಬೆಳ್ಳ' ಕಾದಂಬರಿಯಲ್ಲಿ ಜೀವ ಪಡೆದು ನಿಂತಿವೆ. ಸಂಗ್ಯಾನಿಗೆ ಬಸಮ್ಮನ ಮೇಲೆ ಮನಸ್ಸಾಯಿತು. ಕರೆದು ನೋಡಿದ. ಅವಳು ತಿರಸ್ಕರಿಸಿದಳು. ಸಂಗ್ಯಾನಲ್ಲಿ ಸೇಡು ಮೂಡಿತು. ನಿರಪರಾಧಿ ಬೆಳ್ಳನನ್ನು ಅಪರಾಧಿಯನ್ನಾಗಿ ಮಾಡಿ ಜೈಲಿಗೆ ಕಳಿಸಿದ ಸಂಗ್ಯಾ, ಬಸಮ್ಮನನ್ನು ಬಲವಂತವಾಗಿ ಕೂಡಿ ಸೇಡು ತೀರಿಸಿಕೊಂಡ. ಹಳ್ಳಿಗಳಲ್ಲಿ ನಡೆಯುವ ಸಾಮಾನ್ಯ ಘಟನೆಯಿದು. ಸಂಗ್ಯಾನದೇ ತಪ್ಪು ಎಂದರೆ ಅವನಿಗೆ ಶಿಕ್ಷೆಯಾಗಿಲ್ಲ. ನಿರಪರಾಧಿಗಳಾದ ಬೆಳ್ಳ, ಬಸಮ್ಮನಿಗೆ ಶಿಕ್ಷೆಯಾಯಿತು. ಬೆಳ್ಳಾನಿಗೆ ಬಹಿರಂಗ ಶಿಕ್ಷೆಯಾದರೆ ಬಸಮ್ಮನದು ವ್ಯಕ್ತಿಗತವಾಯಿತು. ರಮಾಬಾಯಿ ಬೆಳ್ಳನನ್ನು ಬಯಸಿದಳು. ಅವನು ಒಪ್ಪಲಿಲ್ಲ. ಮಧ್ಯವರ್ತಿಯನ್ನು ಬಿಟ್ಟು ನೋಡಿದಳು. ಬೆಳ್ಳ ಮದ್ಯವರ್ತಿಗೆ ಹೊಡೆದದ್ದಕ್ಕೆ ರಮಾಬಾಯಿಯಲ್ಲಿ ಸೇಡು ಇಮ್ಮಡಿಸಿತು. ಆದರೆ ಸಂಗ್ಯಾನಂತೆ ರಮಾಬಾಯಿಗೆ ಮಾಡಲು ಸಾಧ್ಯವಾಗುವುದಿಲ್ಲ. ಅವಳು ಹೆಂಗಸಾಗಿ ಉಪಾಯದಿಂದಲೇ ಸೇಡು ತೀರಿಸಿಕೊಳ್ಳಬೇಕಾಗಿತ್ತು. ಹೆಂಗಸಿನ ಈ ಸೇಡಿಗೆ ಬೆಳ್ಳನೇನು ಕೊಲೆಯಾಗುವುದಿಲ್ಲ. ರಮಾಬಾಯಿಯ ಸೇಡಿನ ಉದ್ದೇಶ ತನ್ನನ್ನು ತಿರಸ್ಕರಿಸಿದ ಬೆಳ್ಳನ ಜತೆಗೆ ಮಲಗಬೇಕಾಗಿತ್ತು. ಇದರಲ್ಲಿ ಯಾರದು ತಪ್ಪು? ಶಿಕ್ಷೆ ಯಾರಿಗೆ?

ಇಂಥ ಪ್ರಸಂಗಗಳಲ್ಲಿ ಊರ 'ಪಂಚಾಯ್ತಿ' ಸೇರಿದರೂ, ಜನ ಸಮುದಾಯ ಕೂಡಿದರೂ, ಎಲ್ಲ ಜಾತಿ, ವರ್ಗದವರು ಅಲ್ಲಿದ್ದರೂ ಒಂದು ಘಟನೆಯ ಸರಿ-ತಪ್ಪುಗಳ ಬಗ್ಗೆ ಸಾರ್ವಜನಿಕರ ಅಭಿಪ್ರಾಯಗಳು ನ್ಯಾಯವನ್ನು ನಿರ್ಣಯಿಸುವ ಶಕ್ತಿಯನ್ನು ಪಡೆದಿರುವುದಿಲ್ಲ. ಅಂತಿಮವಾಗಿ ಆ ಶಕ್ತಿ ಊರ ಫ್ಯೂಡಲ್‌ಗೆ ಇರುತ್ತದೆ. ಸ್ವಾತಂತ್ರ್ಯಾನಂತರ ಸರಕಾರಿ ಕೋರ್ಟುಗಳ ಮೊರೆ ಹೊಕ್ಕರೂ ಕೆಳವರ್ಗದವರಿಗೆ ನ್ಯಾಯ ಮರೀಚಿಕೆಯೇ ಅನ್ನಬಹುದು. 'ಪಂಚಾಯ್ತಿ' ಬದಲು 'ಕೋರ್ಟು' ಬಂದಿತು ಅಷ್ಟೇ. ಆದರೆ 'ಪಂಚಾಯ್ತಿ'ಯಿಂದ ಫ್ಯೂಡಲ್‌ಗಳಿಗೆ ಲಾಭವಿತ್ತು. ಕೋರ್ಟ್ ಬಂದಮೇಲೆ ಫ್ಯೂಡಲ್‌ಗಳಿಗೆ ಹಣ ಖರ್ಚುಮಾಡುವ ಪ್ರಮೇಯ ಬಂತು. ಹಣ ಖರ್ಚು ಮಾಡಿದ ಮೇಲೆ ನ್ಯಾಯ ಸಿಗುವ ಸಾಧ್ಯತೆಗಳಿರುತ್ತವೆ. ವಾಲೀಕಾರರ ಕಾದಂಬರಿಗಳು ಇಂಥದ್ದನ್ನು ನೈಜವಾಗಿ ಬಿಂಬಿಸಿವೆ.

ಸಂಗ್ಯಾ-ಬಸಮ್ಮ, ರಮಾಬಾಯಿ-ಬೆಳ್ಳ ಇವರ ನಡುವೆ ಏರ್ಪಟ್ಟಂಥ ಘಟನೆಗಳಿಗೆ 'ಬೆಳ್ಳ' ಕಾದಂಬರಿಯಲ್ಲಿ ಕೊರತೆಯಿಲ್ಲ. ಕಟ್ಯಾಕಲ್ಯಾನ ದುರಂತ ಹೀಗಿದೆ: ಕೋಳೂರು ಭೀಮವ್ವನ ಮಗಳು ದುರ್ಗವ್ವ ಚಿತ್ತಾಸಾಬಿಗೆ ಬಸುರಾಗಿರುತ್ತಾಳೆ. ಮಗಳ ಮಾನ ಉಳಿಸಲು ತಾಯಿ, ಕಟ್ಯಾಕಲ್ಯಾನನ್ನು ಹಿಡಿದು ಇವನೇ ತನ್ನ ಮಗಳನ್ನು ಕೆಡಿಸಿ ಬಸುರು ಮಾಡಿದ್ದಾನೆಂದು ಸುದ್ದಿ ಹಬ್ಬಿಸಿ, ಅವನನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ಬಿಡುತ್ತಾಳೆ. ಅವನ ಹೆಂಡತಿ ಮಕ್ಕಳು ಅತ್ತರೂ ಏನೂ ಸಾಧ್ಯವಾಗುವುದಿಲ್ಲ. ಆದರೆ ತಾಯಿ-ಮಗಳು ಇಬ್ಬರೂ ಕೂಡಿಯೇ ಅನ್ಯರ ಸಂಗ ಮಾಡತೊಡಗಿದ್ದನ್ನು ಕಟ್ಯಾಕಾಲ್ಯಾ ವಿರೋಧಿಸಿದ. ಅದಕ್ಕಾಗಿ ಅವನನ್ನು ಮನೆಯಲ್ಲಿ ಕೂಡಿಹಾಕಿ, ಉಪವಾಸ ಕೆಡವಿ, ಅವನ ಎದುರೇ ಬೇರೆ ಮಿಂಡಗಾರರನ್ನು ಕರೆದುಕೊಂಡು ಮಲಗುತ್ತಾರೆ. ಇದನ್ನು ನೋಡಿ ತಡೆದುಕೊಳ್ಳದೆ ತಾಯಿ-ಮಗಳು ಇಬ್ಬರನ್ನೂ ಕೊಲೆ ಮಾಡಿ ತಾನೂ ಸಾಯುತ್ತಾನೆ. ಚಿತ್ತಾಸಾಬಿ ತನ್ನ ಜಾತಿಯವನಲ್ಲ ಎಂಬ ಕಾರಣಕ್ಕೆ ಮಗಳನ್ನು ಅವನಿಗೆ ಗಂಟು ಹಾಕಲು ಸಾಧ್ಯವಾಗಲಿಲ್ಲ. ಆದರೆ ಮಗಳ ಬಸುರಿಗೆ ಒಬ್ಬ ಬೇಕಾಗಿದ್ದ. ಭೀಮವ್ವನಿಗೆ ನಿಪರಾಧಿ ಕಲ್ಯಾ ಸಿಕ್ಕ. ಅವನನ್ನು ಹೆಂಡತಿ-ಮಕ್ಕಳು-ಸಂಸಾರದಿಂದ ಕಿತ್ತುಕೊಂಡು, ತನ್ನ ಮನೆಯಲ್ಲಿಟ್ಟುಕೊಂಡು, ನಂತರ ಅವನ ಮುಂದೆ ಸ್ವೇಚ್ಛಾಚಾರ ನಡೆಸಿ ಸಾವಿಗೆ ತುತ್ತಾದರು. ಕಲ್ಯಾನೂ ಸೇಡು ತೀರಿಸಿಕೊಳ್ಳುವುದು ಅನಿವಾರ್ಯವಾಯಿತು. ಮತ್ತು ಹದಗೆಟ್ಟ ಬದುಕಿಗೆ ಕೊನೆ ಕಾಣಿಸಬೇಕಿತ್ತು. ಈ ಘಟನೆಯನ್ನು ಹೇಗೆ ಅರ್ಥೈಸಬೇಕು? ಭೀಮವ್ವನ ಸ್ವಾರ್ಥ ಕಲ್ಯಾನನ್ನು ಅಪರಾಧಿಯನ್ನಾಗಿ ಮಾಡಿತು. ಅವಳ ತಪ್ಪು ಅವಳಿಗೇ ಮುಳುವಾಗಿ ಸಾವಿನಲ್ಲಿ ಕೊನೆಯಾಯಿತು.

ಗೌಡರ ಆಳುಮಗ ಕುರುಬರ ಮಲ್ಯಾ ಬಯಲಾಟದಲ್ಲಿ ರಾಣಿ ಪಾರ್ಟು ಮಾಡಿದ್ದ. ಅದು ಗೌಡನ ಹೆಂಡತಿಗೆ ಮೆಚ್ಚಿಗೆಯಾಗಿತ್ತು. ಮೆಚ್ಚಿಗೆಯನ್ನು ವ್ಯಕ್ತಪಡಿಸಲು ಗೌಡತಿ ಮಲ್ಯಾನನ್ನು ಯಾರೂ ಇಲ್ಲದ ಹೊತ್ತಿನಲ್ಲಿ ಕರೆದು ಉಣಿಸಿದಳು. ಇದು ಬಯಲಾದದ್ದೇ ತಡ, ಮಲ್ಯಾನನ್ನು ಹಿಡಿದು ಹೊಳೆಯಲ್ಲಿ ಹಾಕಿ ಮುಗಿಸಲಾಯಿತು. ಸಾವ್ಕಾರ ಸಿದ್ದಪ್ಪ ಒಳ್ಳೆಯ ಹಾಡುಗಾರ. ನಿಂಗವ್ವ ಹಾಡಿಗೆ ಮೆಚ್ಚಿ ಅವನ ಜತೆ ಸಂಬಂಧವನ್ನೇ ಬೆಳೆಸಿಬಿಟ್ಟಳು. ಈ ಸಂಬಂಧ ತಿಳಿದದ್ದೇ ತಡ ಅವನನ್ನು ನಿಂಗವ್ವನ ಗಂಡ-ಭಾವಂದಿರು ಕೂಡಿ ಬಣವಿಯಲ್ಲಿ ಹಾಕಿ ಸುಟ್ಟರು.

ಬ್ಯಾಡರ ಸಾಬ್ಯಾನ ತಂಗಿ ಎಲ್ಲಿ ಕಾಸಿಂಸಾಬಿಯ ತೋಟದಲ್ಲಿ ಮೆಣಸಿನ ಕಾಯಿ ಹರಿದುಕೊಂಡಳು. ಕಾಶಿಂಸಾಬ 'ಬ್ಯಾಡ ತಂಗಿ' ಎಂದು ಹೇಳಿದರೂ ಎಲ್ಲಿ ಹರಿದಿದ್ದಕ್ಕೆ ಅವನು ಹೊರ ನೂಕಿದ. ಆ ಘಟನೆಯಿಂದ ಎಲ್ಲಿಗೆ ಅವಮಾನವಾಗಿ ಅದು ಸೇಡಿಗೆ ತಿರುಗಿತು. ನಿಂತಲ್ಲೇ ಸೀರೆ, ಕುಪ್ಪಸ ಹರಿದುಕೊಂಡು ಅಸ್ತವ್ಯಸ್ತಳಾಗಿ ಕೆಡಿಸಲು ಬಂದಿದ್ದ ಎಂದು ಕೂಗುತ್ತ ಊರಿಗೆ ಬಂದಳು. ಬ್ಯಾಡರ ಜನ ಸೇರಿ ಮುಲ್ಲಾ ಕಾಸಿಂಸಾಬಿಗೆ ಹೊಡೆದು ಇಡೀ ರಾತ್ರಿ ಕಂಬಕ್ಕೆ ಕಟ್ಟಿದರು. ಮನುಷ್ಯನ ಆಳದ ಗುಣಗಳು ಹೇಗೆ ಪ್ರಕಟವಾಗುತ್ತವೆ ಮತ್ತು ಅವುಗಳ ಪರಿಣಾಮ ಯಾವ ಹಂತವನ್ನು ತಲುಪುತ್ತವೆ ಎಂಬುದನ್ನು ಇಂಥ ಘಟನೆಗಳು ತಿಳಿಸುತ್ತವೆ. 'ಬೆಳ್ಳ' ಕಾದಂಬರಿಯಲ್ಲಿ ಇಂಥ ಘಟನೆಗಳು ಕಿಕ್ಕಿರಿದಿವೆ. ಊರು ಮತ್ತು ಊರ ಜನ ಸಮುದಾಯಗಳ ಒಳಗೆ ಇಂಥ ಘಟನೆಗಳು ತಣ್ಣಗೆ ಸಂಭವಿಸುತ್ತಲೇ ಇರುತ್ತವೆ. ಶಿಕ್ಷೆ ಮತ್ತು ಸಾವುಗಳಿಂದ ಜನಸಮುದಾಯಗಳು ಪಾಠ ಕಲಿತಂತೇ ಕಾಣುವುದಿಲ್ಲ. ತಪ್ಪು-ಸರಿ ಎಂಬ ವಿವೇಚನೆಯನ್ನು ಕ್ಷಣಕಾಲ ಕೂಡ ಯೋಚಿಸುವುದಿಲ್ಲ. ಆಗುವ ದುರಂತದ ಬಗ್ಗೆ ಕಿಂಚಿತ್ ಯೋಚನೆಯಾಗಲಿ, ಭಯವಾಗಲಿ, ಜನರಲ್ಲಿ ಕಾಣಿಸುವುದಿಲ್ಲ. ಸಾವುಗಳು ಮತ್ತು ಜೀವಂತ ಸಾವುಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ.

'ಬೆಳ್ಳ' ಕಾದಂಬರಿಯಲ್ಲಿ ನಡೆಯುವ ಮುಖ್ಯ ಘಟನೆ ಹೀಗಿದೆ: ಸ್ಯಾಣಪ್ಪಗೌಡನ ಮಗ ಮನೆಯಾಳುತನಕ್ಕೆ ಹೋಗಿದ್ದ. ಅವನನ್ನು ಹೊಡೆದು ಭಂಕೂರ ಚಾಲಿಯಲ್ಲಿ ತೂಗು ಹಾಕಲಾಗಿತ್ತು. ಇದರಲ್ಲಿ ಪೊಲೀಸ್ಗೌಡನ ಕೈವಾಡವಿತ್ತು. ಈ ಸೇಡನ್ನು ತೀರಿಸಿಕೊಳ್ಳಲು ಸ್ಯಾಣಪ್ಪಗೌಡ ಸೇಸಪ್ಪ ಕುಲ್ಕರ್ಣಿ ಮತ್ತು ಸಂಕ್ರಪ್ಪಗೌಡರನ್ನು ತನ್ನ ಬೆಂಬಲಕ್ಕೆ ಕರೆದುಕೊಂಡ. ಜೊಜ್ಜ ಹನುಮಂತ

ಪೊಲೀಸಗೌಡನ ಜೀತದಾಳು. ಈತ ಕುಂಟ ಸಂಕ್ರಪ್ಪನ ಗಂಡ. ಇವನಿಗೂ ಬೆಳ್ಳನ ಮಾವ ಬೀರಪ್ಪನಿಗೂ ಭೂಮಿಯ ಸಂಬಂಧದಲ್ಲಿ ವೈಮನಸ್ಸಿತ್ತು. ಇದರಿಂದ ಸ್ಯಾಣಪ್ಪಗೌಡ ಬೀರನನ್ನೂ ಸೇರಿಸಿಕೊಂಡ. ಭೂಮಿಗೆ ಸಂಬಂಧಿಸಿದ ಜಗಳ ಊರಲ್ಲಿ ನಿರ್ಣಯವಾಗದೆ ಕೋರ್ಟಿಗೆ ಹೋಯಿತು. ಪೋಲೀಸ್ಗೌಡನ ಕಡೆಯಿಂದ ಬೀರನ ಕೊಲೆಯಾಯಿತು. ಈ ಸೇಡಿನಿಂದ ಸೇಸಪ್ಪ ಕುಲ್ಕರ್ಣಿಪಾರ್ಟಿಯು ಪೊಲೀಸ್ಗೌಡನನ್ನು ಕೊಲೆ ಮಾಡಿತು. ಇದರಿಂದಾಗಿ ಕುಲ್ಕರ್ಣಿ ಮತ್ತು ಸ್ಯಾಣಪ್ಪಗೌಡರು ಜೈಲು ಸೇರಿದರು. ಪೊಲೀಸ್ ಗೌಡ ಬದುಕಿದ್ದಾಗ ಅಮೀನನಿಗೆ ಯಾವುದೋ ವಿಷಯದಲ್ಲಿ ಮೆಟ್ಟಿನಿಂದ ಹೊಡೆದಿದ್ದನಂತೆ. ಆ ಸೇಡು ಅಮೀನನಲ್ಲಿ ಹಾಗೇ ಮುಂದುವರೆದಿತ್ತು. ಮುಂದೆ ಜೈಲಿಗೆ ಸೇರಿದ್ದ ಕುಲ್ಕರ್ಣಿಯನ್ನು ಮತ್ತು ಸ್ಯಾಣಪ್ಪಗೌಡನನ್ನು ಬುಡ್ಡಪ್ಪ ಚಾದ್ರಿಯ ಮೂಲಕ ಜಾಮೀನು ಕೊಡಿಸಿ ಹೊರತಂದರು.

ಪೊಲೀಸ್ ಗೌಡನ ಕೊಲೆಯಾದದ್ದಕ್ಕೆ ಒಬ್ಬನೇ ಒಬ್ಬ ಸಾಕ್ಷಿ ಜೊಜ್ಜ ಹನುಮಂತ ಇದ್ದು, ಆತನನ್ನು ಕುಲ್ಕರ್ಣಿ ಪಾರ್ಟಿಯವರು ಕೊಲೆ ಮಾಡಿದರು. ಪೊಲೀಸ್ ಗೌಡನ ಹೆಂಡತಿ ಭಾಗೀರಥಮ್ಮ ತನ್ನ ಗಂಡನ ಕೊಲೆಯ ನಂತರ ಪಟೇಲಿಕೆ ಕೈಬಿಡಬಾರದೆಂದು ತನ್ನ ತಮ್ಮನಾದ ಸಿವಣ್ಣಗೌಡನನ್ನು ಕರೆಸಿಕೊಂಡಳು. ಈತ ಮುಂಬೈಯಲ್ಲಿದ್ದು ಪಳಗಿದ್ದ. ಊರಿನ ಸಾಮಾನ್ಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡ. ಜನರಿಗೆ ಉಣಿಸಿ-ತಿನಿಸಿ-ಕುಡಿಸಿ ನಂತರ ಕುಲ್ಕರ್ಣಿ ಮತ್ತು ಸ್ಯಾಣಪ್ಪಗೌಡರನ್ನು ಕೊಲೆ ಮಾಡಿಸಿದ. ಬೆಳ್ಳ ಮತ್ತು ಕುಂಟ ಸಂಕ್ರಪ್ಪರ ಭೂಮಿಯ ಸಂಬಂಧ ಇದ್ದ ತಕರಾರನ್ನು ಬಗೆಹರಿಸಿದ. ಇದರಿಂದ ಬೆಳ್ಳ ಸಿವಣ್ಣಗೌಡನ ಕಡೆ ಸೇರಿಕೊಂಡ. ಇದರ ಪರಿಣಾಮವಾಗಿ ಸ್ಯಾಣಪ್ಪಗೌಡನ ಮಗ ಸ್ಯಾಮರಾಯಗೌಡ ಬೆಳ್ಳನ ಮೇಲೆ ಸೇಡು ಹುಟ್ಟಿತು. ಭಂಕೂರ ಜಾತ್ರೆಯಲ್ಲಿ ಬಸಮ್ಮ ಮತ್ತು ಅವಳ ಮಗ ಸಣ್ಣಬೀರಪ್ಪನನ್ನು ಸ್ಯಾಮರಾಯಗೌಡ ಅಪಹರಿಸಿದ. ಈ ತಪ್ಪಿಗಾಗಿ ಸ್ಯಾಮರಾಯಗೌಡನನ್ನು ಸಿವಣ್ಣಗೌಡ ಹಿಡಿಸಿ ತರಿಸಿದ. ಅವರ ಬಗ್ಗೆ ಜನರ ಅಭಿಪ್ರಾಯವೇನೆಂದು ತಿಳಿದುಕೊಂಡ. ಊರವರೆಲ್ಲರು ಶಿಕ್ಷೆ ಆಗಬೇಕೆಂದರು. ಸ್ಯಾಮರಾಯಗೌಡನ ತಲೆ ಹಾರಿಸಲು ಕೋಣ ಕಡಿಯುವ ಕತ್ತಿಯನ್ನು ತರಿಸಿ ಬೆಳ್ಳಾನ ಕೈಗೆ ಕೊಟ್ಟು ತಲೆ ಹಾರಿಸಲು ಸಿವಣ್ಣ ಗೌಡ ಹೇಳಿದ. 'ಜೀವದ ಹತ್ಯಾ ಪಾಪ ಬ್ಯಾಡ' ಎಂದು ಬೆಳ್ಳಾ ನಿರಾಕರಿಸಿ ಬೇಡಿಕೊಂಡ. ಜನರ ಆವೇಶ ಸ್ಯಾಮರಾಯನ ಮೇಲಿತ್ತು. ಬೆಳ್ಳಾನ 'ಹೆಣ್ತನ'ಕ್ಕೆ ಕರಗುವುದಿರಲಿ, ಕೇಳುವುದಕ್ಕೆ ಸಿದ್ಧರಿರಲಿಲ್ಲ. ಆದರೆ ಅದನ್ನು ಸಹಿಸದ ಸಿವಣ್ಣಗೌಡ 'ಹಾಕ್ರಲೇ ಇವಂಗ' ಎಂದು ಬೆಳ್ಳಾನನ್ನು ತೋರಿಸಿಬಿಟ್ಟ. ತಕ್ಷಣ ಕುಂಟ ಸಂಕ್ರಪ್ಪನ ಮಗ ನಿಂಗ್ಯಾ ಕೊಡಲಿಯಿಂದ ಬೆಳ್ಳಾನಿಗೆ ಹೊಡೆದುಬಿಟ್ಟ. ತಕ್ಷಣ ಜನರ ಆವೇಶ ಇಳಿದು ಬೆಳ್ಳನ ಸ್ಥಿತಿಯ ಕಡೆ ವಾಲಿತು. ಕುಂಟ ಸಂಕ್ರಪ್ಪನ ಮಗ ನಿಂಗ್ಯಾನ ಸೇಡು ತಕ್ಷಣ ಜಾಗೃತವಾಗಿ ಬೆಳ್ಳನನ್ನು ಹೊಡೆಯುವಂತೆ ಮಾಡಿತ್ತು.

ಇಷ್ಟು ವಿಸ್ತಾರವಾಗಿ ಕಥೆ ಹೇಳಲು ಕಾರಣವೆಂದರೆ, 'ಬೆಳ್ಳ' ಕಾದಂಬರಿಯಲ್ಲಿ ಮೂಡಿನಿಂತ ಈ ಬಗೆಯ ವಸ್ತು **'ಗ್ರಾಮಭಾರತ', 'ಕೋಟೆ ಬಾಗಿಲು', 'ಹುಲಿಗೆಮ್ಮ'** (ಚನ್ನಣ್ಣ ವಾಲೀಕಾರ) ಕಾದಂಬರಿಗಳಲ್ಲಿ ಮುಂದುವರೆದಿದೆ. ಅಷ್ಟೇ ಅಲ್ಲ ಅವರು ಹೆಣ್ಣಿನ ಮೇಲೆ ಬರೆದ **'ಒಂದು ಹೆಣ್ಣಿನ ಒಳಜಗತ್ತು'** ಕಾದಂಬರಿಯಲ್ಲೂ ಇದೇ ಚಿತ್ರಣವಿದೆ. ಊರ ಜನಸಮುದಾಯದ ಒಳಗೆ ನಡೆಯುವ ಇಂಥ ಘಟನೆಗಳು, ಇದರ ಪರಿಣಾಮಗಳು ಸೇಡು-ಕೊಲೆ-ಶಿಕ್ಷೆ ಇವುಗಳ ನೆಲೆಗೆ ತಲುಪುತ್ತವೆ. ಇದು ಈ ಪ್ರದೇಶಗಳಲ್ಲಿ ಎಪ್ಪತ್ತರ ದಶಕದತನಕ ನಿರಂತರವಾಗಿ ನಡೆದು, ನಂತರ ಕಮ್ಮಿಯಾಗಿದ್ದರೂ ಅದರ ಸ್ವರೂಪಗಳು ಬೇರೆಬೇರೆ ರೀತಿಯಲ್ಲಿ ಪ್ರಕಟವಾಗುತ್ತಿವೆ. ಈ ಬಗೆಯ ಜೀವನಕ್ರಮದಲ್ಲಿ, ಗಂಡು ಹೆಣ್ಣಿನ ಮೇಲೆ, ಹೆಣ್ಣು ಗಂಡಿನ ಮೇಲೆ ಸೇಡು ದ್ವೇಷ ನಡೆದರೆ ಅದರ ಪರಿಣಾಮ ಅತ್ಯಾಚಾರದಲ್ಲಿ ಕೊನೆಗೊಂಡರೆ, ಅಪರಾಧ ಮತ್ತು ಶಿಕ್ಷೆ ವ್ಯಕ್ತಿಗತವಾಗಿ ನಿಲ್ಲುತ್ತವೆ. ಈ ಮೊದಲೇ ಪ್ರಸ್ತಾಪಿಸಿದಂತೆ, ಸಂಗ್ಯಾ ಬಸಮ್ಮನನ್ನು ಅತ್ಯಾಚಾರ ಮಾಡಿದ. ನಿರಪರಾಧಿ ಬಸಮ್ಮ ಅತ್ಯಾಚಾರಕ್ಕೂ ಒಳಗಾಗಿ ಇಮ್ಮಡಿ ಶಿಕ್ಷೆ

ಅನುಭವಿಸುವಂತಾಯಿತು. ಹಾಗೆ ರಮಾಬಾಯಿಯ ವಿಷಯದಲ್ಲಿ ಬೆಳ್ಳನದು. ಗಂಡಸರ ಮಧ್ಯ ನಡೆದರೆ ಕೊಲೆಯಲ್ಲಿ ಸಮಾಪ್ತಿಯಾಗುತ್ತದೆ. ರಾಣಿ ಪಾರ್ಟಿ ಮಾಡಿದ ಮಲ್ಯಾನ ಸಾವಿಗೆ, ಒಳ್ಳೆಯ ಹಾಡುಗಾರ ಸಿದ್ದಪ್ಪನ ಸಾವಿಗೆ ಕಾರಣರಾದ ಗೌಡನ ಹೆಂಡತಿಯಾಗಲಿ, ನಿಂಗವ್ವನಾಗಲಿ ನಿಪರಾಧಿಗಳೇ(?) ಆದರೆ ಮಲ್ಯಾ ಮತ್ತು ಸಿದ್ದಪ್ಪರಂತವರು ಸಂಪೂರ್ಣ ನಿರಪರಾಧಿಗಳು. ಆದರೂ ಕೊಲೆಯ ಶಿಕ್ಷೆ ಅನುಭವಿಸಿದರು. ಇವರನ್ನು ಕೊಲೆ ಮಾಡಿದ ಜನ ಮಾತ್ರ ಯಾವ ಶಿಕ್ಷೆಗೂ ಗುರಿಯಾಗಲಿಲ್ಲ. ಈ ಪ್ರಸಂಗಗಳಲ್ಲಿ ಊರ 'ಪಂಚಾಯ್ತಿ'ಯೂ ತಟಸ್ಥ. ಒಂದು ವೇಳೆ ಊರ ಪಂಚಾಯ್ತಿಗೆ ಪ್ರಕರಣ ಹೋದರೂ 'ನ್ಯಾಯ' ಯಾರ ಪರವಾಗಿರುತ್ತದೆಂದು ಊಹಿಸುವುದು ಸುಲಭ. ಹಾಗೆ 'ಕೋರ್ಟಿ'ನ ವಿಷಯದಲ್ಲಿಯೂ ಕೂಡ. ಇಂಥ ಒಟ್ಟು ಸನ್ನಿವೇಶವನ್ನು ಹೀಗೆ ಎಂದು ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಇಂಥ ಸಮಸ್ಯೆಗಳ ಸ್ವರೂಪ ಸಂಕೀರ್ಣವಾಗಿದೆ. ಆದರೆ ಸಾಮಾಜಿಕ ಬದುಕಿನಲ್ಲಿ ನಡೆಯುವ ಇಂಥ ಬದುಕನ್ನು ಕಾದಂಬರಿಕಾರರು ಬಿಡಿಬಿಡಿಯಾಗಿ ಹಿಡಿದು ನೈಜವಾಗಿ ಚಿತ್ರಿಸಿದ್ದಾರೆ. ಈ ಕಾದಂಬರಿಯಲ್ಲಿ, ಇಂಥ ಒಟ್ಟು ಸನ್ನಿವೇಶದಲ್ಲಿ ಊರಿಗೆ ಊರೇ ಭಾಗಿಯಾಗಿರುತ್ತವೆ. ಸಾವು-ನೋವು-ಶಿಕ್ಷೆಗೆ ಗುರಿಯಾಗುವುದು ಕೂಡಾ ಜಾತಿ, ಪಕ್ಷ, ವರ್ಗಕ್ಕೆ ಸೀಮಿತವಾಗದೆ ಎಲ್ಲರನ್ನೂ ಸುತ್ತಿಕೊಂಡಿದೆ. ಈ ಮಾತನ್ನು ಯಾಕೆ ಹೇಳಬೇಕಾಯಿತು ಎಂದರೆ, ಇದು ಕಾದಂಬರಿಕಾರರ ಮನೋಭಾವ ಮತ್ತು ಧೋರಣೆಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ೧೯೭೫ರಲ್ಲಿ ಬರೆದಿರುವುದರಿಂದ ಈ ಕಾದಂಬರಿಯಲ್ಲಿ ಲೇಖಕರ ರಾಜಕೀಯ ನಿಲುವು ಜಾಗೃತವಾಗಿರಲಿಲ್ಲವೆಂದು ಕಾಣಿಸುತ್ತದೆ. ನಂತರ ಬಂದ ಕಾದಂಬರಿಗಳಲ್ಲಿ ಇದು ಜಾಗೃತವಾಗುತ್ತಾ ನಡೆದಿದೆ. **'ಗ್ರಾಮಭಾರತ'** ಕಾದಂಬರಿ ಕೂಡ 'ಬೆಳ್ಳ' ಕಾದಂಬರಿಯಂತೆ ನಡೆಯುತ್ತದೆ. ಅಲ್ಲಿ ಗೌಡರ ಪ್ರತಿಷ್ಠೆಯ ಪ್ರದರ್ಶನಕ್ಕೆ ಬಲಿಯಾಗುವವರು ಕೆಳವರ್ಗದವರೇ. ಲಿಂಗಾಯತ ಹೆಂಗಸೊಬ್ಬಳನ್ನು (ಬಸಮ್ಮ ಗೌಡ್ತಿ) ಮುಸ್ಲಿಮರ ಖಾಸೀಮ ಪಾಟೀಲ್ ಇಟ್ಟುಕೊಂಡಿದ್ದ. ಅವನಿಂದ ಬಿಡಿಸಿಕೊಂಡು ತರಲು ದೊಡ್ಡನಗೌಡ ಮನಸ್ಸು ಮಾಡಿದ. ಅವನ ಈ ಸಾಹಸಕ್ಕೆ ಧೂಳ, ಸಾಬು, ಗಂಗು, ಸಂಕ ಮುಂತಾದವರು ಸೇರಿದರು. ಇವರೆಲ್ಲ ಕೆಳವರ್ಗದವರೆ. ಗೌಡನ ಅಧೀನದಲ್ಲಿದ್ದು ದುಡಿದು ತಿನ್ನುವವರೆ. ಗೌಡನ ಮಾತಿಗೆ ಬಸಮ್ಮಗೌಡ್ತಿಯನ್ನು ತರುವ ಸಾಹಸದಲ್ಲಿ ನಡೆದ ಹೊಡೆದಾಟ, ಜಗಳ, ಕೊಲೆಗೆ ಜೈಲು ಕಂಡರು. ಅವರ ಸಂಗಾತಿಗಳ ಗತಿ? ಇಂಥ ಸಂಸಾರಗಳನ್ನು ಮುನ್ನಡೆಸುವವರು ಯಾರು? ಬದುಕನ್ನು ಯಾರ ಸಲುವಾಗಿ ಈ ಸಂಸಾರಗಳು ಕೆಡಿಸಿಕೊಂಡವು? ಎಂಬ ಬಿಕ್ಕಟ್ಟಿನ ಸಮಸ್ಯೆಗಳ ಚಿತ್ರಣ 'ಗ್ರಾಮಭಾರತ' ಕಾದಂಬರಿಯಲ್ಲಿದೆ. ಹಳ್ಳಿಗಳಲ್ಲಿ ಯಾವ ಯಾವುದಕ್ಕೋ ನಡೆಯುವ ಇಂಥ ಘಟನೆಗಳಿಗೆ ಕೊನೆ ಎಂದು? ಎಂಬ ಪ್ರಶ್ನೆಯನ್ನು ವಾಲೀಕಾರರು 'ಕೋಟೆ ಬಾಗಿಲು' ಕಾದಂಬರಿಯಲ್ಲಿ ಯೋಚಿಸಿದ್ದಾರೆ. 'ಗೊಂಡ' ಮನೆತನದ ಹೊಸ ತಲೆಮಾರಿನ ಓದಿದ ಶಿವಗೊಂಡನೆಂಬ ಯುವಕ, ಅಲ್ಲಿಯವರೆಗೆ ತನ್ನ ಮನೆತನದವರೂ ಸೇರಿದಂತೆ ಊರಿನ ಇತರ ಶಕ್ತಿಗಳ ನಡುವೆ ಇದ್ದ ದ್ವೇಷ, ಸೇಡುಗಳ ಪರಿಣಾಮವಾಗಿ ನಡೆಯುವ ಕೊಲೆಗಳಿಗೆ ಬೇಸತ್ತು, ಕೊನೆಗೆ ತನ್ನ ತಂದೆಯ ಕೊಲೆ ಮಾಡಿದವರ ಮೇಲೆ ದ್ವೇಷಕ್ಕೆ ಬದಲು ಪ್ರೀತಿ ತೋರಿಸಬೇಕೆಂದು ಮನಸ್ಸು ಮಾಡುತ್ತಾನೆ. ಅದನ್ನು ಕಂಡ ಪ್ರತಿಪಕ್ಷದವರೂ ತಣ್ಣಗಾಗಿ, 'ಈ ಜಗಳಾ ಇಲ್ಲಿಗೆ ಮುಗಿತಂತ ತಿಳಕೋರಿ. ನಮಗಾನಾ ಈ ಜಗಳಾ ಎಲ್ಲಿ ಬೇಕಾಗಿತ್ತು ರಾಮಗೊಂಡಪ್ಪ, ದ್ಯಾವಗೊಂಡಪ್ಪ ಗೌಡಕಿ ಉರಿಹಚ್ಚಿ ಕುಂತರು. ಆರಿಸಲಾಕ ಹೊಂಟಾಗ ಮತ್ತಷ್ಟು ಗದ್ದಲವಾಯಿತು...... ಇಲ್ಲಿತನಕ ಯಾರ್‍ಯಾರು ಮಾಡ್ಡರು ಅವರವರುಂಡರು. ಇನ್ನು ನಾವೆಲ್ಲರೂ ಸೇರಿ ಊರು ತಣ್ಣಗಿಡಾಮು.' (ಪು.೮೫) ಎಂದು ಹೊಸ ಭವಿಷ್ಯದ ಆಶಯವನ್ನು ವ್ಯಕ್ತಪಡಿಸುತ್ತಾರೆ.

'ಹುಲಿಗೆಮ್ಮ' ಕಾದಂಬರಿಯಲ್ಲಿ, ಕೆಳವರ್ಗದ ಕುಟುಂಬದಲ್ಲಿ ಹುಟ್ಟಿದ ಹುಲಿಗೆಮ್ಮನನ್ನು ಊರಗೌಡನ ಮಗ ಸಿದ್ದರೆಡ್ಡೆಪ್ಪ ಬಲವಂತದಿಂದ ವಶಪಡಿಸಿಕೊಂಡು ಭೋಗಿಸುತ್ತಾನೆ. ಹುಲಿಗೆಮ್ಮ ಬಸುರಾಗುತ್ತಾಳೆ. 'ಪಂಚಾಯ್ತಿ' ನಡೆಯುತ್ತದೆ. ಪಂಚಾಯ್ತಿಯಲ್ಲಿ ಯಾರಿಗೆ ನ್ಯಾಯ ಸಿಗುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ತಪ್ಪು ಸಿದ್ದರೆಡ್ಡೆಪ್ಪನದಾದರೂ 'ನ್ಯಾಯ' ಅವನ ಪರವಾಗಿರುತ್ತದೆ.

ಹೊಟ್ಟೆ ತೆಗೆಸಿ ಹುಲಿಗೆಮ್ಮನಿಗೆ ಬೇರೆ ಮದುವೆ ಮಾಡಿಕೊಡಬೇಕೆಂದು, ಈ ವ್ಯವಸ್ಥೆಗಾಗಿ ಹಣವನ್ನು ಗೌಡರ ಕಡೆಯಿಂದ ಕೊಡಿಸಲಾಗುತ್ತದೆ. ಹುಲಿಗೆಮ್ಮನ ನರಕ ಇಲ್ಲಿಂದ ಸುರುವಾಗುತ್ತದೆ. ದೂರದ ಊರಿಗೆ ಮದುವೆ ಮಾಡಿಕೊಡುತ್ತಾರೆ. ಹೊಟ್ಟೆ ತೆಗೆಸಿಕೊಂಡು ನಂತರ ಮದುವೆ ಮಾಡಿಕೊಂಡು ಸೋಬಾನದ ದಿನ ಗಂಡ ಭೀಮಣ್ಣನ ಬದಲು ಮೈದುನ ರಾಮಣ್ಣ ಹಾಸಿಗೆಗೆ ಬಂದು ಕುಳಿತಿದ್ದ. ಅವನ ಮನೆಮಂದಿಯೇ ಆ ವ್ಯವಸ್ಥೆ ಮಾಡಿದ್ದರಿಂದ ಅನಿವಾರ್ಯವಾಗಿ ಮೈದುನನ ಜತೆ ಸಂಸಾರ ಹೂಡಿದರೂ ಯಾಕೋ ಜಿಗುಪ್ಸೆ ಬಂದು ಓಡಿದಳು. ಗಂಡನೇ ತನ್ನ ಒಡೆಯ ಶಾಮರಾಯನಿಗೆ ಹೇಳಿ ಹುಲಿಗೆಮ್ಮನನ್ನು ಹಿಡಿದು ತರಿಸಿದರೂ, ಹುಲಿಗೆಮ್ಮ ಶಾಮರಾಯನ ಪಾಲಾದಳು. ಇದು ಕಂಡು ಊರಿನ ಶೇಷಪ್ಪ ಕುಲಕರ್ಣಿ, ಧರೆಪ್ಪಗೌಡ ಕೂಡಿ ಶಾಮರಾಯನನ್ನು ಕೊಲೆ ಮಾಡಿಸಿದರು. ಈ ಕೊಲೆಯಲ್ಲಿ ಕೆಲವು ಜೀತದಾಳುಗಳು ಜತೆಗೆ ಧರೆಪ್ಪಗೌಡ ಜೈಲಿಗೆ ಹೋದರು. ಹುಲಿಗೆಮ್ಮ ಶೇಷಪ್ಪಕುಲಕರ್ಣಿ ಕೈವಶವಾದಳು. ಜೈಲಿನಿಂದ ಬಂದ ಧರೆಪ್ಪಗೌಡ ಕುಲಕರ್ಣಿಯನ್ನು ಕೊಲ್ಲಿಸಿ, ಹುಲಿಗೆಮ್ಮನನ್ನು ಹಿಡಿದುಕೊಂಡ. ಕಾಳ್ಯಾನೆಂಬ ಜೀತದಾಳನ್ನು ಹುಲಿಗೆಮ್ಮನ ಕಾವಲಿಗೆ ಮತ್ತು ಕಾಳಜಿಗೆ ನೇಮಿಸಿದ. ಶ್ರೀಮಂತರ ಜಗಳ, ಕೊಲೆ ನೋಡಿದ ಹುಲಿಗೆಮ್ಮ ಕಾಳ್ಯಾನನ್ನು ಒಲಿಸಿಕೊಂಡು ಓಡಿ ವಾಡಿಯಲ್ಲಿ ನೆಲೆಸಿದಳು. ಧರೆಪ್ಪಗೌಡ ಕಾಳ್ಯಾನನ್ನು ಹುಡುಕಿಸಿ ಕೊಲ್ಲಿಸಿದ. ಒಂಟಿಯಾದ ಹುಲಿಗೆಮ್ಮ ಆರು ಜನರ ಭೋಗದ ವಸ್ತುವಾಗಿ ನಂತರ ಕಾಳ್ಯಾನನ್ನೂ ಕಳೆದುಕೊಂಡ ಮೇಲೆ ಅನಿವಾರ್ಯವಾಗಿ ಸೂಳೆಯಾಗಿ ಬದುಕಬೇಕಾಗುತ್ತದೆ.

ಇದು ಮೇಲು ನೋಟಕ್ಕೆ ಮಹಿಳೆಯನ್ನು ಕುರಿತದ್ದು ಎಂದು ಕಾಣಿಸಿದರೂ, ಇಲ್ಲಿಯೂ ಸೇಡು, ಕೊಲೆ ಮತ್ತು ಶಿಕ್ಷೆ ಕಾಣಿಸಿದೆ. ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಸೇರುವ ಹುಲಿಗೆಮ್ಮ ಭೋಗದ ವಸ್ತುವಿನಂತೆ ಕಾಣುತ್ತಾಳೆ. ಹುಲಿಗೆಮ್ಮನಿಗಾಗಿ ಶಾಮರಾಯರು, ಶೇಷಪ್ಪ, ಕುಲಕರ್ಣಿ, ಕಾಳ್ಯಾ ಮತ್ತು ಅನೇಕ ಜೀತದಾಳುಗಳು ಸಾವಿಗೀಡಾಗುತ್ತಾರೆ. ಧರೆಪ್ಪಗೌಡ ಮತ್ತು ಅನೇಕ ಜೀತದಾಳುಗಳು ಜೈಲು ಶಿಕ್ಷೆ ಅನುಭವಿಸುತ್ತಾರೆ.

'ಒಂದು ಹೆಣ್ಣಿನ ಒಳಜಗತ್ತು' ಕಾದಂಬರಿಯಲ್ಲಿ, ರತ್ನಮ್ಮ ಚಿಕ್ಕವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡವಳು. ಮದುವೆಯಾದ ಹೊಸದರಲ್ಲಿ ಅವಳ ಗಂಡ ಭೀಮನಗೌಡ, ಅಣ್ಣ ರಾಮನಗೌಡನನ್ನು ಪಾಲು ಕೇಳಿದ. ಆಸ್ತಿಯ ಪಾಲಾಗುವ ಹೊತ್ತಿನಲ್ಲಿ ಜಗಳವಾಗಿ ರಾಮನಗೌಡ ತಮ್ಮನನ್ನು ಕಲ್ಲಿನಿಂದ ಹೊಡೆದು ಕೊಂದು ಜೈಲಿಗೆ ಹೋದ. ವಿಧವೆಯಾದ ರತ್ನಮ್ಮ ತವರು ಮನೆಗೆ ಬಂದು ಅಣ್ಣ ಸಂಗಣ್ಣಗೌಡನ ಆಶ್ರಯಕ್ಕೆ ಬಂದರೂ ಅತ್ತಿಗೆ ಜತೆ ಜಗಳವಾಡಿ ಬೇರೆ ಇರತೊಡಗಿದಳು. ಅದಕ್ಕೆ ಅಣ್ಣ ಇರಲು ವ್ಯವಸ್ಥೆ ಮಾಡಿದ. ವಯಸ್ಸು ಚಿಕ್ಕದು. ಗಂಡ ಸತ್ತಿದ್ದ. ಅಣ್ಣನ ಮನೆಯ ಜೀತದಾಳು ಮಲ್ಯಾನನ್ನು ಗುಪ್ತವಾಗಿ ಒಲಿಸಿಕೊಂಡು ಕೂಡಿದಳು. ಸ್ವಲ್ಪದಿನದಲ್ಲಿ ಅಣ್ಣನ ಕೈಗೆ ಸಿಕ್ಕಳು. ಮಲ್ಯಾನನ್ನು ಸಂಗಣ್ಣ ಉಪಾಯವಾಗಿ ಕರೆದುಕೊಂಡು ಹೋಗಿ ಹೊಳೆಗೆ ಎಸೆದು ಬಂದ. ಮದುವೆಯಾಗಿರದ ಮಲ್ಯ ಸತ್ತ ಸುದ್ದಿ ಕೇಳಿ ಅವನ ತಾಯಿ ಒಂಟಿಯಾದಳು. ಅದೇ ಆಶಯ ಇಲ್ಲಿದೆ. ಮಲ್ಯಾನ ತಪ್ಪಿರದಿದ್ದರೂ ಅವನಿಗೆ ಸಾವಿನ ಶಿಕ್ಷೆಯಾಯಿತು. ಆದರೆ ತಂಗಿಯನ್ನು ಸಂಗಣ್ಣಗೌಡ ಏನೂ ಮಾಡಲಿಲ್ಲ.

ಚೆನ್ನಣ್ಣ ವಾಲೀಕಾರರ ಕಾದಂಬರಿಗಳು, ಹೈದರಾಬಾದ್ ಕರ್ನಾಟಕ ಪ್ರದೇಶದ ಹಳ್ಳಿಗಳಲ್ಲಿರುವ ಸಾಮಾಜಿಕ, ರಾಜಕೀಯ ವ್ಯವಸ್ಥೆಯ ವಾಸ್ತವ ಚಿತ್ರಣವನ್ನು ಹಿಡಿದಿವೆ. ಸ್ವಾತಂತ್ರ್ಯಾನಂತರದಲ್ಲೂ ಈ ವ್ಯವಸ್ಥೆ ಮುಂದುವರೆದಿದೆ. ಸ್ವಾತಂತ್ರ್ಯಪೂರ್ವದ ಹಳ್ಳಿಗಳಲ್ಲಿ, ಉಳ್ಳವರು ಇಡೀ ಜನಸಮುದಾಯವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಊರ ಜನಸಾಮಾನ್ಯರ ನಡುವೆ ನಡೆದ ಸಣ್ಣಪುಟ್ಟ ಘರ್ಷಣೆಗಳು ಉಳ್ಳವರ ಅಧೀನದಲ್ಲೇ ನಿರ್ಣಯಗೊಳ್ಳುತ್ತಿದ್ದವು. ಉಳ್ಳವರಿಗೆ ಬೇಕಾದವರು ಮತ್ತು ಹಣ ನೀಡಿದವರು ನ್ಯಾಯ ಪಡೆದುಕೊಳ್ಳುತ್ತಿದ್ದರು. ಸ್ವಾತಂತ್ರ್ಯಾನಂತರ ಬಂದ ಕೋರ್ಟಿನ ವ್ಯವಸ್ಥೆ ಇದಕ್ಕಿಂತ ಭಿನ್ನವಾಗಿಲ್ಲ ಎನ್ನಿಸುತ್ತದೆ.

ಒಂದೇ ಊರಲ್ಲಿ, ಉಳ್ಳವರ ಕುಟುಂಬಗಳು ಒಂದಕ್ಕಿಂತ ಹೆಚ್ಚಿದ್ದರೆ ಅಂಥ ಊರುಗಳಲ್ಲಿಯೂ ಒಂದು ವ್ಯವಸ್ಥೆ ರೂಪಗೊಂಡಿರುತ್ತದೆ. ಆದರೆ ಈ ವ್ಯವಸ್ಥೆಯ ಸ್ವರೂಪ ಒಂದೇ ಬಗೆಯಲ್ಲಿರುತ್ತಿರಲಿಲ್ಲ. ಗೌಡ, ಸಾಹುಕಾರ, ಕುಲಕರ್ಣಿ, ನಾಯಕ ಎಂಬ ಫ್ಯೂಡಲ್‌ಗಳು ಒಂದೇ ಊರಲ್ಲಿದ್ದರೆ, ಕೆಳವರ್ಗದವರಿಗೆ ಹೆಚ್ಚಿನ ಶೋಷಣೆ ಇರುತ್ತದೆ ಎಂದು ಕಾಣುತ್ತದೆ. ಈ ನಾಲ್ಕೂ ಜಮೀನ್ದಾರಿ ಶಕ್ತಿಗಳು ಯಾವಾಗಲೂ ಒಂದಾಗಿರುತ್ತವೆಯೇ? ಯಾವಾಗಲೂ ಕೂಡಿ ಇರುವುದಿಲ್ಲವೆ? ಎಂದರೆ ಇಲ್ಲ ಎಂದೇ ಹೇಳಬೇಕಾಗುತ್ತದೆ. ಈ ಶಕ್ತಿಗಳೂ ಕೂಡಿಯೂ ಇರುವುದಿಲ್ಲ, ಬೇರೆಯಾಗಿಯೂ ಇರುವುದಿಲ್ಲ. ಆದರೂ ಈ ಶಕ್ತಿಗಳು ತಮ್ಮ ತಮ್ಮ ಹಣ, ಪ್ರತಿಷ್ಠೆಯ ಪ್ರತ್ಯೇಕತೆಯನ್ನು ಪ್ರದರ್ಶಿಸುವ ಗುಣವನ್ನು ಹೊಂದಿರುತ್ತವೆ. ಸ್ವಾರ್ಥ, ಸಮಯಸಾಧಕತನದಿಂದ ಕೂಡಿರುತ್ತವೆ. ಹಳ್ಳಿಯ ಇತರ ಜಾತಿ ವರ್ಗಗಳ ಬಡವರು, ಸಾಮಾನ್ಯರು, ದಲಿತರು ತಮ್ಮ ಪಾಡಿಗೆ ತಾವು ಒಂದು ಬದುಕಿನ ಕ್ರಮವನ್ನು ರೂಪಿಸಿಕೊಂಡು ರಕ್ಷಣೆಯಲ್ಲಿ ಇರಲು ಸಾಧ್ಯವಾಗುವುದಿಲ್ಲ. ಅಂಥ ಸಾಧ್ಯತೆಯನ್ನು ಊರ 'ಶಕ್ತಿ'ಗಳು ರೂಪಿಸಿಕೊಳ್ಳಲು ಬಿಡುವುದಿಲ್ಲ. ಊರ ಸಾಮಾನ್ಯರು ಗೌಡ, ಕುಲಕರ್ಣಿ, ಸಾಹುಕಾರ, ನಾಯಕ ಈ ಜಮೀನ್ದಾರಿ ಶಕ್ತಿಗಳ ನೆರಳಿನಲ್ಲಿ ಆಶ್ರಯ ಪಡೆಯುವ ಅನಿವಾರ್ಯ ಸ್ಥಿತಿಗೆ ಹೊಂದಿಕೊಂಡಿರುತ್ತವೆ. ಹೀಗೆ ಒಂದು ನೆರಳಿನ ಆಯ್ಕೆಯಲ್ಲಿ ಈ ಸಾಮಾನ್ಯರಿಗೆ ರಕ್ಷಣೆ, ನೆಮ್ಮದಿ ಸಾಧ್ಯವೇ? ಎಂದರೆ ಇಲ್ಲವೆಂದೇ ಹೇಳಬೇಕಾಗುತ್ತದೆ. ಯಾವುದೇ ನೆರಳಿನಲ್ಲಿ ಆಶ್ರಯ ಪಡೆದರೂ ಅಲ್ಲಿ ಸಾಮಾನ್ಯರ ಶೋಷಣೆ ನಡೆದಿರುತ್ತದೆ. ಆದರೂ ಒಂದು ಬಗೆಯ ರಕ್ಷಣೆ ಇರುತ್ತದೆ. ತಮ್ಮ ತಮ್ಮ ಆಯ್ಕೆಯ ನೆರಳಿನಲ್ಲಿ ಕಾಳು, ಕಡಿ, ಸಾಲ ಮುಂತಾದ ಸೌಲಭ್ಯಗಳು ಸಿಗುತ್ತಿರುತ್ತವೆ. ಆದರೆ ಇಂಥ ವ್ಯವಸ್ಥೆ ಕೂಡ ಕ್ರಮಬದ್ಧವಾಗಿರುವುದಿಲ್ಲ. ಮನುಷ್ಯ, ಅವನ ಗುಣಗಳು, ಅವನ ಆಸೆ ಆಕಾಂಕ್ಷೆಗಳು ಯಾವಾಗ ಹೇಗೆ ಯಾವ ಸ್ವರೂಪದಲ್ಲಿ ಪ್ರಕಟವಾಗುತ್ತವೆ ಎಂದು ಅವನಿಗೇ ತಿಳಿದಿರುವುದಿಲ್ಲ. ತಾನು ಪಡೆದ ನೆರಳಿನಲ್ಲಿ ತನಗೆ ಬೇಕಾದ ಸೌಲಭ್ಯ ದೊರೆಯದಿದ್ದಾಗ, ಅಸಮಾಧಾನದಿಂದ ಇನ್ನೊಂದು ನೆರಳಿನ ಆಶ್ರಯಕ್ಕೆ ಜಿಗಿಯಬೇಕಾಗುತ್ತದೆ. ಜಿಗಿದರೆ ಮೊದಲ ನೆರಳಿನ ವ್ಯವಸ್ಥೆಯ ಕೋಪಕ್ಕೆ ತುತ್ತಾಗಬೇಕಾಗುತ್ತದೆ. ಈ ಕೋಪ ಕೇವಲ ಜಿಗಿದು ಹೋದವನ ಬಗ್ಗೆ ಮಾತ್ರ ಇರುವುದಿಲ್ಲ. ಅವನು ಪಡೆದ ಇನ್ನೊಂದು ನೆರಳಿನ ವ್ಯವಸ್ಥೆ ಮೇಲೆಯೂ ವಿಸ್ತರಿಸುತ್ತದೆ. ಆಗ ಸಹಜವಾಗಿಯೇ ಎರಡು ಶಕ್ತಿ(ನೆರಳು)ಗಳ ನಡುವೆ ಘರ್ಷಣೆಗೆ ಕಾರಣವಾಗುತ್ತದೆ. ಈ ಎರಡು ಶಕ್ತಿಗಳ ನಡುವೆ ಘರ್ಷಣೆ ಉಂಟಾದರೆ ಅದರ ಪರಿಣಾಮ ಹೆಚ್ಚಾಗಿ ಆಶ್ರಯಿಸಿದ ಸಾಮಾನ್ಯರ ಮೇಲೆ ಉಂಟಾಗುತ್ತದೆ. ಇಂಥದ್ದರ ಸ್ವರೂಪ ಸರಳವಾಗಿರುವುದಿಲ್ಲ. ಸಮಸ್ಯೆ ಹಾಸುಹೊಕ್ಕಾಗಿರುವುದರಿಂದ ಇದರ ಸ್ವರೂಪವನ್ನು ವಿವರಿಸುವುದೇ ಕಷ್ಟವಾಗುತ್ತದೆ.

ಚನ್ನಣ್ಣ ವಾಲೀಕಾರರ ಕಾದಂಬರಿಗಳು ಇಂಥ ಸ್ವರೂಪದ ಸಾಮಾಜಿಕ ಬದುಕಿನ ಚಿತ್ರಣವನ್ನು ಒಳಗೊಂಡಿವೆ. ಆದರೆ ಬದುಕಿನ ಇಂಥ ವ್ಯವಸ್ಥೆಯಲ್ಲಿ ಬರೀ ಹಾದರ, ಸೇಡು, ಕೊಲೆ, ಶಿಕ್ಷೆಗಳಿಂದ ಮಾತ್ರ ತುಂಬಿಲ್ಲವೆಂಬುದು ವಾಸ್ತವ ಸಂಗತಿ. ಪ್ರೀತಿ ಮತ್ತು ದ್ವೇಷಗಳು ಒಂದು ನಾಣ್ಯದ ಎರಡು ಮುಖಗಳು. ಹಗೆತನದಲ್ಲೂ ಪ್ರೀತಿಯನ್ನು ಹಂಚಿಕೊಳ್ಳುವ ಬದುಕು ಸಮಾಜದಲ್ಲಿದೆ ಎಂಬ ಸತ್ಯವನ್ನು ಕಾದಂಬರಿಕಾರರು ಮರೆತಂತಿದೆ. ಕುತೂಹಲವೆಂದರೆ ಬಂಡಾಯ-ದಲಿತ ಲೇಖಕರಾಗಿ ಚನ್ನಣ್ಣ ವಾಲೀಕಾರರ ಕಾದಂಬರಿಗಳಲ್ಲಿ ಫ್ಯೂಡಲ್ ಶಕ್ತಿ ವಿರುದ್ಧ ಪ್ರತಿ ಶಕ್ತಿಗಳನ್ನು ಸೃಷ್ಟಿಸಿದ್ದಾರೆಯೇ? ಪ್ರತಿಶಕ್ತಿಯನ್ನು ತಾತ್ವಿಕವಾಗಿ ಬೆಳೆಸಲು ಪ್ರಯತ್ನಿಸಿದ್ದಾರೆಯೇ? ಎಂದು ಕೇಳಿಕೊಂಡರೆ ಹುಡುಕುವುದು ಕಷ್ಟವಾಗುತ್ತದೆ. ಫ್ಯೂಡಲ್ ಶಕ್ತಿಯನ್ನು ತೋರಿಸಿದ್ದಾರೆ. ಈ ಶಕ್ತಿಗೆ ಬಲಿಯಾಗುವ ಸಾಮಾನ್ಯರನ್ನೂ ತೋರಿಸುತ್ತಾರೆ. ಆದರೆ ಇಂಥದ್ದರಲ್ಲಿ ಜಾತಿ, ವರ್ಗದ ಪಕ್ಷಪಾತಿಯಾಗಿ ಕಾಣಿಸುವುದಿಲ್ಲ.

'ಹೈದರಾಬಾದ್ ಕರ್ನಾಟಕ'ಕ್ಕೆ ಸಂಬಂಧಿಸಿದ ಬರಹಗಾರರಲ್ಲಿ ಹೆಚ್ಚು ಕಥೆ-ಕಾದಂಬರಿಗಳನ್ನು ಬರೆದವರು ಗೀತಾನಾಗಭೂಷಣ ಎಂದು ಕಾಣುತ್ತದೆ. 'ಜನಪ್ರಿಯ' ಮಾದರಿಯ ಬರಹಗಾರ್ತಿ ಎಂದು ಕರೆಸಿಕೊಂಡಿದ್ದರೂ, 'ಜನಪ್ರಿಯ' ಸಾಹಿತ್ಯ ಮಾದರಿಗೆ

ಹೋಲಿಸಿದರೆ ಸರಿ. ಆದರೆ ಕಾದಂಬರಿಗಳು ವಸ್ತು-ಭಾಷೆಯ ದೃಷ್ಟಿಯಿಂದ ಭಿನ್ನವಾಗಿ ನಿಲ್ಲುತ್ತವೆ. ಕನ್ನಡ ಸಾಹಿತ್ಯದಲ್ಲಿ ಕಾಣಿಸುವ ಅನೇಕ ಮಹಿಳಾ 'ಜನಪ್ರಿಯ' ಕಾದಂಬರಿಗಾರರಿಗಿಂತ, ತಮ್ಮ ಕಾಳಜಿಯಿಂದ ಹೊಸ ಸಾಂಸ್ಕೃತಿಕ ಪರಿಸರ, ಬದುಕು ಮತ್ತು ತಾತ್ವಿಕತೆಯಿಂದ ಗೀತಾನಾಗಭೂಷಣ, ಬಾನು ಮುಸ್ತಾಕ, ಸಾರಾ ಅಬೂಬಕರ್, ವೀಣಾ ಶಾಂತೇಶ್ವರ, ವೈದೇಹಿ, ನೇಮಿಚಂದ್ರ ಮುಂತಾದವರು ಭಿನ್ನವಾಗಿ ಬರೆಯಲು ಪ್ರಯತ್ನಿಸಿದವರು. ಇವರಲ್ಲಿ ಕೆಲವರಿಗೆ ಈ ಬಗೆಯ ಭಿನ್ನತೆಯನ್ನು ಪ್ರಕಟಿಸಲು ಸಾಧ್ಯವಾದದ್ದು ಬಂಡಾಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ. ಆದರೆ ಪ್ರಾರಂಭದ ಬರವಣಿಗೆಯಲ್ಲಿ ಭಿನ್ನತೆಯಿಂದ ಭರವಸೆ ತೋರಿಸಿದರೂ ತದನಂತರದ ಬರವಣಿಗೆಯಲ್ಲಿ ವಸ್ತು, ಪಾತ್ರ, ಪರಿಸರ ಮತ್ತು ತಾತ್ವಿಕತೆಯಲ್ಲಿ ಸರಳತೆಯನ್ನು ರೂಢಿಸಿಕೊಂಡು ಏಕತಾನತೆಯಿಂದ 'ಜನಪ್ರಿಯ' ಮಾದರಿಯ ಕಡೆ ವಾಲಿದ್ದು ಕಾಣಿಸುತ್ತದೆ. ಇದಕ್ಕೆ ಕೇವಲ ಮಹಿಳಾ ಸಾಹಿತಿಗಳು ಮಾತ್ರವಲ್ಲ. ಈ ವಾಲಿಕೆಗೆ ಸಮೂಹ ಮಾಧ್ಯಮಗಳು ಕಾರಣವಾಗಿರಬೇಕು. ಅದರಲ್ಲೂ ಪತ್ರಿಕೆ ಮತ್ತು ಸಿನಿಮಾ ಮಾಧ್ಯಮಗಳು ಇಂಥ ಮಾದರಿಯ ಸೃಷ್ಟಿಗೆ ಪ್ರಚೋದಿಸಿವೆ.

ಗೀತಾ ನಾಗಭೂಷಣ ಅವರ ಕಾದಂಬರಿಗಳ ಜಗತ್ತು ಕೆಳವರ್ಗದ ಜನಸಮುದಾಯದ್ದು. ಹಳ್ಳಿಯಿದ್ದರೆ ಕೇರಿ, ನಗರವಿದ್ದರೆ ಕೊಳೆಗೇರಿ. ಹಳ್ಳಿಗಳಲ್ಲಿ ಭೂಮಾಲಿಕರ ಜೀತದಾಳುಗಳಾಗಿ ದುಡಿಯುವ ಗಂಡಸರು-ಹೆಂಗಸರು, ನಗರಕ್ಕೆ ಸಂಬಂಧಿಸಿದರೆ ನಾನಾ ದಂಧೆ ಮಾಡುವ ಕೂಲಿಗಳು, ರಿಕ್ಷಾ, ಲಾರಿ ಚಾಲಕರು, ಕಟ್ಟಡ ಕಟ್ಟುವ, ಮನೆಗೆಲಸ ಮಾಡುವ ಹೆಂಗಸರು ಇಂಥವರೇ ಇವರ ಕಾದಂಬರಿಯ ನಾಯಕ-ನಾಯಕಿಯರು. ಬಡತನ, ದಾರಿದ್ರ್ಯದಿಂದ ಮೂಢನಂಬಿಕೆ ಸಂಪ್ರದಾಯಗಳ ದಾಸರಾಗಿ ಬಳಲುವ ಕೆಳವರ್ಗದಲ್ಲಿ ಗಂಡಸರು ಜೀತದಾಳುಗಳಾಗಿ, ನಿಯತ್ತಿನ ಕೊರತೆಯಿಂದ ಅಸಹಾಯಕರಾದರೆ, ಹೆಂಗಸರು ಬಲಿಷ್ಠರಾಗಿಯೂ ನಿಯತ್ತಿನಿಂದಿದ್ದರೂ ಉಳ್ಳವರ ಕ್ರೌರ್ಯಕ್ಕೆ ಬಲಿಯಾಗಿ ಬಾಳು ಕೆಡಿಸಿಕೊಂಡು ನರಳುವವರು. ಕೆಳವರ್ಗದ ಹೆಂಗಸರು-ಗಂಡಸರು ಫ್ಯೂಡಲ್ ವ್ಯವಸ್ಥೆಗೆ ಬಲಿಯಾಗುವವರೆ ಇವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಆದರೆ ಕೆಳವರ್ಗದವರಲ್ಲಿ ಕಾಣಬಹುದಾದ ಸಾಂಸ್ಕೃತಿಕ ಶಕ್ತಿಯಿಂದ ಎಂಥ ಹೊಡೆತಗಳನ್ನು ಎದುರಿಸಿ ನಿಲ್ಲುವ ಅಂತಃಶಕ್ತಿಯನ್ನು ಗುರುತಿಸಲು ಇವರ ಕಾದಂಬರಿಗಳಿಗೆ ಶಕ್ತವಾಗಿಲ್ಲ. ಇದರಿಂದಾಗಿ ಬಹುತೇಕ ಕಾದಂಬರಿಗಳು ಏಕತಾನತೆಯಿಂದ ಕೂಡಿವೆ.

ಕೆಳವರ್ಗದ ಮಹಿಳೆಯ ಕಥನಗಳು

ಇವರ ಕಾದಂಬರಿಗಳಲ್ಲಿ ಬರುವ ನೀಲಗಂಗಾ (ನೀಲಗಂಗಾ), ಸಿಂಗಾರಿ(ಮಾಪುರ ತಾಯಿ ಮಕ್ಕಳು),ಲಚ್ಚಿ (ಹಸಿ ಮಾಂಸ ಮತ್ತು ಹದ್ದುಗಳು), ಸೋನಿ (ಧುಮ್ಮಸು), ಚಿಕ್ಕಿ (ಚಿಕ್ಕಿಯ ಹರೆಯದ ದಿನಗಳು) ಇವರೆಲ್ಲ ಕೆಳವರ್ಗದ ಹೆಂಗಸರು. ಕೇರಿಯಲ್ಲಿಯೇ ಹುಟ್ಟಿ ಅರಳಿದವರು. ತಮ್ಮ ಬಾಲ್ಯದಿಂದ ಹರೆಯಕ್ಕೆ ಕಾಲಿಡುವ ಅವಧಿಯಲ್ಲಿ ಜೀವನೋತ್ಸಾಹದಿಂದ ತುಂಬಿ ತುಳುಕಿದವರು. ಮುಗ್ಧರು, ಚುರುಕು ಸ್ವಭಾವದವರು, ಕಪಟವರಿಯದವರು, ತುಂಟತನದಿಂದ ಹಕ್ಕಿಯಂತೆ ಹಾಡುವ, ಚಿಟ್ಟೆಯಂತೆ ಹಾರುವ, ಮೀನಿನಂತೆ ಈಜುವ ಅದಮ್ಯ ಚೇತನ ಪಡೆದವರು. ಬಡತನ, ಹಸಿವು, ಉಪವಾಸಗಳಿಗೆ ಮರುಗಿದವರಲ್ಲ, ಕೊರಗಿದವರಲ್ಲ, ದುಡಿದು ಬದುಕುವವರು. ಸಿಕ್ಕಾಗ ತಿಂದು-ಕುಡಿದು ನಲಿದವರು. ತಮ್ಮ ಲವಲವಿಕೆಯಿಂದ ಕೇರಿಗೆ ಜೀವ ಮೂಡಿಸುವವರು. ಹರೆಯಕ್ಕೆ ಬರುತ್ತಿದ್ದಂತೆ ಹಲವು ಕಾರಣಗಳಿಂದಾಗಿ ದುರಂತವನ್ನು ಅನುಭವಿಸುವವರು. ಕನಸು ಕಾಣುವ ಹೊತ್ತಿನಲ್ಲಿ ಕಮರಿ ಹೋಗುವವರು. ಮಲ್ಲೇಶಿ (ನೀಲಗಂಗಾ), ಶಿವರುದ್ರ (ಮಾಪುರ ತಾಯಿ ಮಕ್ಕಳು), ಕಾಶೀನಾಥ (ಹಸಿಮಾಂಸ ಮತ್ತು ಹದ್ದುಗಳು), ಮಲ್ಲೇಶಿ (ಧುಮ್ಮಸ್ಸು), ಚಂದ್ರು, ಚಿನ್ನ (ಚಿಕ್ಕಿಯ ಹರೆಯದ ದಿನಗಳು) ಮುಂತಾದ ಗಂಡಸರದು ಕೂಡ, ಹೆಂಗಸರ ಸ್ಥಿತಿಗಿಂತ ಭಿನ್ನವಾಗಿಲ್ಲ. ಬಾಲ್ಯದಿಂದಲೇ ಉಳ್ಳವರ ಜೀತದಾಳುಗಳಾಗಿಯೋ, ಹೊಟ್ಟೆಪಾಡಿಗಾಗಿ ಯಾವುದೋ ದಂದೆಯನ್ನು ಮಾಡುತ್ತಾ,

ದುಡಿದು ಉಣ್ಣುತ್ತಾ, ತಮ್ಮ ಭಾವಿ ಬದುಕಿಗೆ ಮೇಲಿನಂಥ ಹುಡುಗಿಯರ ಕನಸು ಕಾಣುತ್ತಿದ್ದಂತೆ ದುರಂತವನ್ನು ಅನುಭವಿಸುವವರು. ಇವರೆಲ್ಲರ ದುರಂತಕ್ಕೆ ಎರಡು ಕಾರಣಗಳಿವೆ. ಒಂದು, ಉಳ್ಳವರ ವ್ಯವಸ್ಥೆ ಮತ್ತು ಇವರ ಬಡತನ. ಇನ್ನೊಂದು, ತಾವು ನಂಬಿಕೊಂಡಿರುವ ಮೂಢನಂಬಿಕೆಗಳು, ರೀತಿನೀತಿಗಳು ಮತ್ತು ಪದ್ಧತಿಗಳು. ಉಳ್ಳವರ ವ್ಯವಸ್ಥೆಯೆಂದರೆ, ಕೇರಿಯಲ್ಲಿ ಹರೆಯಕ್ಕೆ ಬಂದ ಹೆಣ್ಣನ್ನು ಭೋಗಿಸುವುದು. ಅದಕ್ಕಾಗಿ ತಮ್ಮ ಬಲವನ್ನು ಉಪಯೋಗಿಸುತ್ತಾರೆ. ಊರ ದೇವತೆಗೆ ಕೇರಿಯವರೇ ತಮ್ಮ ಹೆಣ್ಣು ಮಕ್ಕಳನ್ನೂ, ಎಂಥದೋ ಭಯ, ನಂಬಿಕೆಗೆ ಶರಣಾಗಿ ಜೋಗಿಣಿಯನ್ನಾಗಿ ಅರ್ಪಿಸುವುದು. ಇದರಲ್ಲಿ ಉಳ್ಳವರ ಕೈವಾಡವೂ ಮುಖ್ಯವಾಗಿರುತ್ತದೆ. ಹೀಗೆ ಜೋಗಿಣಿಯಾದವರನ್ನು ಭೋಗಿಸಿ ನಂತರ ಬೀಸಿ ಬೀದಿಗೆ ಎಸೆಯುತ್ತಾರೆ. ಹೀಗೆ ಬೀದಿಗೆ ಬಿದ್ದ ಇಂಥ ಹೆಂಗಸರೇ ಗೀತಾನಾಗಭೂಷಣ ಅವರ ಕಾದಂಬರಿಯ ನಾಯಕಿಯರು. ಇಂಥ ಹೆಂಗಸರನ್ನೂ, ಉಳ್ಳವರು ಭೋಗಿಸುವ ಮುನ್ನ, ತಮ್ಮ ಜೀವಕ್ಕೆ ಜೋಡಿ ಮಾಡಿಕೊಳ್ಳಲು ಯತ್ನಿಸಿ ಉಳ್ಳವರ ಕ್ರೌರ್ಯಕ್ಕೆ ಬಲಿಯಾದ ಗಂಡಸರೇ ನಾಯಕರು.

ಇವರ ಕಾದಂಬರಿಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುವ ಕೆಳವರ್ಗದ ಹೆಣ್ಣು ಮೊದಲು ತನ್ನ ಮನೆಮಂದಿಯಿಂದಲೇ ಪೆಟ್ಟು ತಿನ್ನತೊಡಗುತ್ತಾಳೆ. ನಂತರ ಊರ ಉಳ್ಳವರ ಕಾಮಕ್ಕೆ ಬಲಿಯಾಗಿ ನೆಲೆಯಿಲ್ಲದಂತಾಗುತ್ತಾಳೆ. ಹೆಣ್ಣು ಬದುಕನ್ನು ಕಟ್ಟಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸುತ್ತಾಳೆ. ಗಂಡ-ಮಕ್ಕಳು-ಮನೆ ಒಂದು ಸಂಸಾರದೊಂದಿಗೆ ನೆಲೆ ನಿಲ್ಲಬೇಕೆಂದು ಹೆಣಗಾಡುತ್ತಾಳೆ. ಆದರೆ ಅಂಥ ಕನಸು ಕಾಣುವ ಹೊತ್ತಿಗೆ ಉಳ್ಳವರ ಕಾಮಕ್ಕೆ ಬಲಿಯಾಗಿ ಅತಂತ್ರಳಾಗುತ್ತಾಳೆ. ಮುಖ್ಯವಾಗಿ ಗಂಡಸಿನ ಕಾಮಕ್ಕೆ ಬಲಿಯಾಗುತ್ತಾಳೆ. ಅಪಾವಿತ್ರ್ಯ ಹೊಂದುವ ಹೆಂಗಸರ ಚಿತ್ರಣ ಬಿಟ್ಟರೆ ಇವರ ಕಾದಂಬರಿಗಳಲ್ಲಿ ಹೆಂಗಸಿಗೆ ಇರಬಹುದಾದ ಅನೇಕ ಸಾಧ್ಯತೆಗಳೇ ಇಲ್ಲವಾಗಿವೆ. ಹೀಗಾಗಿ ಇದುವರೆಗೆ ಗೀತಾ ಒಂದೇ ಹೆಣ್ಣನ್ನು ಸೃಷ್ಟಿಸಿದ್ದಾರೆ. ನೀಲಗಂಗಾ(ನೀಲಗಂಗಾ), ಸಿಂಗಾರಿ(ಮಾಪುರ ತಾಯಿ ಮಕ್ಕಳು), ಲಚ್ಚಿ(ಹಸಿಮಾಂಸ ಮತ್ತು ಹದ್ದುಗಳು), ಸೋನಿ(ಧುಮ್ಮಸು), ಚಿಕ್ಕಿ(ಚಿಕ್ಕಿಯ ಹರೆಯದ ದಿನಗಳು), ದುರುಗವ್ವ(ದಂಗೆ), ತಾಳಿ(ಆಸರೆಗಳು) ಮುಂತಾದವರ ಬದುಕು ಒಂದೇ ತೆರನಾದದ್ದು. ಇವರ ತಂದೆ ಅಥವಾ ತಾಯಿಗಳ ಸ್ಥಿತಿಯೂ ಒಂದೇ ಬಗೆಯದ್ದು. ಉಳ್ಳವರ ಪ್ರತಿನಿಧಿಯಾಗಿ ಬರುವ ಗೌಡ, ಕುಲಕರ್ಣಿ, ಸಾಹುಕಾರ ಏರುಪೇರಿಲ್ಲದ ಕ್ರೂರಿಗಳು. ಮಲ್ಲೇಶಿ, ಶಿವರುದ್ರ, ಕಾಶೀನಾಥ, ಚಂದ್ರ, ಚೆನ್ನ ಮುಂತಾದ ಯುವಕರು ಮೇಲಿನ ಹೆಣ್ಣುಗಳನ್ನು ತಮ್ಮ ಸಂಗಾತಿಗಳನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿ ವಿಫಲರಾಗುವವರು. ಕೆಳವರ್ಗದ ಹೆಣ್ಣುಗಳು ಜಗತ್ತಿನ ಚೆಲುವನ್ನು ಹೊತ್ತವರು, ಫ್ಯೂಡಲ್‌ಗಳೆಲ್ಲ ಜಗತ್ತಿನ ಕ್ರೌರ್ಯವನ್ನು ಹೊಂದಿದವರು ಎಂಬ ಸರಳ ತೀರ್ಮಾನಗಳು ಇವರ ಕಾದಂಬರಿಗಳಲ್ಲಿ ಕಾಣಸುತ್ತವೆ. ಜನ ಸಮುದಾಯದ ಸಮಾಜದಲ್ಲಿ ಸೇಡು, ಕೊಲೆ ಮತ್ತು ಶಿಕ್ಷೆ ಇವು ಮಾತ್ರ ಇವೆ ಎಂದು ತೋರಿಸುವ ವಾಲೀಕಾರದೊಂದು ಅತಿಯಾದರೆ, ಗೀತಾ ನಾಗಭೂಷರದೊಂದು ಇಂಥ ಅತಿ. ಆದರೂ ಕೇರಿಯಾಗಲೀ ಕೊಳಗೇರಿಯಾಗಲೀ ಅಲ್ಲಿಯ ಬದುಕಿನ ಲಯ, ಗಂಡಸರದೊಂದು ಜಗತ್ತು, ಹೆಂಗಸರದೊಂದು ಜಗತ್ತು. ಇಲ್ಲಿನ ನಿತ್ಯದ ಹಾಡು-ಪಾಡಿನ, ಸಂದರ್ಭದಲ್ಲಿ ಕಾಣಿಸುವ ವಾಸ್ತವ ಚಿತ್ರಣವು ಈ ಪ್ರದೇಶದ ಕೆಳವರ್ಗದವರ ಸಾಮಾಜಿಕ ಬದುಕಿಗೆ ಹಿಡಿದ ಕನ್ನಡಿಯಂತಿದೆ.

'ನೀಲಗಂಗಾ' ಕಾದಂಬರಿಯಲ್ಲಿ, ನೀಲಗಂಗಾ ಕಾಳಿಂಗ ಸಾಹುಕಾರನ ಜೀತದಾಳು ಮಲ್ಲೇಶಿಯನ್ನು ಮದುವೆಯಾಗುತ್ತಾಳೆ. ಮದುವೆಯಾದ ಮೇಲೆ ಮಲ್ಲೇಶಿಯ ಜತೆ ಸಂಸಾರಕ್ಕೆ ನಿಲ್ಲುತ್ತಿದ್ದಂತೆ ಸಾಹುಕಾರ ನೀಳಗಂಗಾಳನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುತ್ತಾನೆ. ಮಲ್ಲೇಶಿಯನ್ನು ಯಾವುದೋ ನೆಪದಲ್ಲಿ ಊರಿಗೆ ಕಳಿಸಿ ನೀಲಗಂಗಾಳ ತೆಕ್ಕೆಯಲ್ಲಿ ಸುಖಿಸುವುದು ನಡೆಸುತ್ತಾನೆ. ನೀಲಗಂಗಾಳಿಗೆ ಕಿಂಚಿತ್ ಮನಸ್ಸಿರುವುದಿಲ್ಲ. ನೇರವಾಗಿ ಹೇಳುತ್ತಲೇ ಅಸಹಾಯಕಳಾಗಿ ಉಳಿಯುತ್ತಾಳೆ. ಇದು ಗೊತ್ತಾಗಿಯೋ ಅಥವಾ ಕಾಳಿಂಗ ಸಾಹುಕಾರನ ಕೈವಾಡವೋ ಮಲ್ಲೇಶಿ ಸಾಯುತ್ತಾನೆ. ನೀಲಗಂಗಾ ಹುಚ್ಚಿಯಾಗಿ ಬೀದಿಪಾಲಾಗುತ್ತಾಳೆ. ಕಾದಂಬರಿಯ

ಕೊನೆಗೆ ನೀಲಗಂಗಾಳ ತಮ್ಮ ಈರ ಸಾಹುಕಾರನನ್ನು ಕೊಂದು, ಅವನ ಮಗಳು ಸಂಗವ್ವಳನ್ನು ಹಾರಿಸಿಕೊಂಡು ಓಡಿಹೋಗುತ್ತಾನೆ. ನೀಲಗಂಗಾ ಸಾಹುಕಾರನ ವಶವಾಗಿ ಅವನಿಂದ ಮುಕ್ತವಾಗಲು ಪ್ರಯತ್ನಿಸಿದರೂ ವ್ಯರ್ಥವಾಗುತ್ತದೆ. 'ನಾಳಿ ಹೊತ್ತ ಹೊಂಟ್ರ ನಿನ್ ಮಲ್ಲೂನ ಹೆಣಾ ನೋಡ್ಬೇಕಾದೀತು. ಸುಮ್ನ ಮಾನದಿಂದ ನನ್ ಬಳಿ ಮಲಗು. ನಿನ ಗಂಡನ ಜೀಂವಾ ನಿನ್ ಕೈಯಾಗದ......' (ಪು.೩೭) ಎಂದು ಸಾಹುಕಾರ ಹೆದರಿಸುತ್ತಾನೆ. ಕೇರಿಯಲ್ಲಿ ಅವಳ ಗೆಳತಿ ಲಚ್ಚಿಯನ್ನು ಕುಲಕರ್ಣಿ, ಹೊಲದಲ್ಲಿ ಕೆಡಿಸಿದ್ದನ್ನು ಲಚ್ಚಿಯ ಗಂಡ ಕಣ್ಣಾರೆ ನೋಡಿ ಮರುದಿನ 'ಪಂಚಾಯ್ತಿ' ಸೇರಿಸುತ್ತಾನೆ. ಕಾಳಿಂಗ ಸಾಹುಕಾರನೇ ಮುಖ್ಯ ಪಂಚ. ಇಂಥ ಸಂದರ್ಭಗಳಲ್ಲಿ ಸಾಹುಕಾರ, ಕುಲಕರ್ಣಿ ಒಂದಾಗಿರುತ್ತಾರೆ. ಲಚ್ಚಿಗೆ ಮತ್ತು ಅವನ ಗಂಡನಿಗೆ ಸಮಸ್ತರೆದುರು ಬಯ್ದು ಏನೂ ನಡೆದಿಲ್ಲವೆಂಬಂತೆ, ಅದು ಲಚ್ಚಿಯ ಸುಳ್ಳು 'ದೂರು' ಎಂದು, 'ಇದು ನಮ್ ಹಳ್ಳಿ ಇಜ್ಜತ ಕಳ್ಯಾ. ಕೆಲ್ಸಾ ನಾಳಿಗಿ ಸುದ್ದಿ ಸುತ್ತಿನ ಹಳ್ಳಿಗಳಿಗಿ ತಿಳದ್ರ ನಮ್ಮ ಮಾನ ಮಾರು ದುಡ್ಡಿಗಿ ಹರಜಾಗ್ತದ' ಎಂದು ನ್ಯಾಯತೀರ್ಮಾನಿಸಿದ್ದುದ್ದನ್ನು ನೀಲಗಂಗಾ ಕಂಡಿರುತ್ತಾಳೆ.

ಕೆಳವರ್ಗದ ಹೆಣ್ಣು ತನ್ನನ್ನು ಊರ ಗೌಡ ಕೆಡಿಸಿದ ಎಂದು ಗಂಡನಿಗೆ ಹೇಳಿದರೆ, ಗಂಡ ಏನು ಮಾಡಬಲ್ಲ? ಕೆಡಿಸಿದ ಗೌಡನನ್ನು ವಿರೋಧಿಸುವುದು ಸಾಧ್ಯವಾಗುವುದಿಲ್ಲ. ಹೆಚ್ಚೆಂದರೆ ಅವನು ಅಸಮಾಧಾನದಿಂದ ನರಳಬೇಕು. ಇಲ್ಲ ಹೆಂಡತಿಯನ್ನು ಬಿಡಬೇಕು. ಹೆಂಡತಿಯನ್ನು ಬಿಟ್ಟರೆ ಅದೂ ಅವನಿಗೆ ಹಾನಿಯಾಗುತ್ತದೆ. ಕೆಡಿಸಿದವನಿಗೆ ಮುಕ್ತವಾಗಿ ಆ ಹೆಣ್ಣಿನ ಜತೆ ಇರಲು ಅನುಕೂಲವಾಗುತ್ತದೆ. ವಾಸ್ತವ ಸಂಗತಿಯೆಂದರೆ ಹಳ್ಳಿಯಲ್ಲಿ ಸಾಮಾನ್ಯವಾಗಿ ಗೌಡ, ಸಾಹುಕಾರನ ಜತೆಗಿರುವ ಹೆಂಡತಿಯ ಜತೆಗೆ ಗಂಡನೂ ನಿರುಮ್ಮಳವಾಗಿರುತ್ತಾನೆ. ಒಂದು ವೇಳೆ ಗಂಡನಾದವನು ಪ್ರತಿಭಟಿಸಿದರೆ ಅದರಿಂದ ಪೆಟ್ಟು ತಿನ್ನುವವನು ಗಂಡನೇ ಆಗಿರುತ್ತಾನೆ. ನೀಲಗಂಗಾ ಸಾಹುಕಾರನ ವಶವಾದದ್ದು ತಿಳಿದ ಮಲ್ಲೇಶಿ, ಪ್ರತಿಭಟಿಸಲೂ ಆಗದೆ ತಾಳಿಕೊಳ್ಳುವುದೂ ಆಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇಂಥ ಗಂಡಸರ ಬಗ್ಗೆ ಹೆಂಗಸರೇ ಜಿಗುಪ್ಸೆ ಪಡುತ್ತಾರೆ. ಲಚ್ಚಿಗೆ 'ನ್ಯಾಯ' ಸಿಗದೇ ಹೋದಾಗ, 'ನಮ್ಮ ಜಾತಿ ಗಂಡಸರು ಬರೇ ಹೆಸರಿಗೆ ಗಂಡಸರು. ನಮ್ ಗಂಡಸರ ಮೀಸಿ ಅಂದ್ರ ಆಡಿನ ಕುತಗ್ಯಾಗ ಮಲಿ ಇದ್ದಂಗ. ಹೊಲಗೇರ್ಯಾಗ, ಕಬ್ಬಲಗೇರ್ಯಾಗ ಗಂಡಸಾಗಿ ಹುಟ್ಟಿದಕ್ಕಿನ್ನಾ ಅಡವ್ಯಾಗ ಉಡ ಆಗಿ ಹುಟ್ಯಾದು ಬೇಸಿ. ಊರಾಗ ನಾಯಿಗೋಳಿಗಿ ಬೆಲಿ ಅದಾ.........ಮೈಯಾಗ ಸೊಕ್ಕ, ಹಲ್ಲಾಗ ನಾಲ್ಗಿ ಇದ್ದೂ ನಮ್ ಗಂಡಗೋಳು ಗೋರ್ಯಾನ ಹೆಣಗೋಳ್ಹಂಗ ಬದಕತಾವ. ದೊಡ್ಡ ಕುಲದವರ ಕಾಲಾನ ಕೆರು ಆಗಿ ಸಂವ್ಯಾದೇ ಇವುದರ ಬಾಳ್ಯಾ' (ಪು.೪೨) ವ್ಯಕ್ತಪಡಿಸಿ ಮರುದಿನ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾಳೆ. ಲಚ್ಚಿಯ ಸಾವು ಮತ್ತು ಮಲ್ಲೇಶಿಯ ಸಾವು ಒಂದೇ ಬಗೆಯವು. ಇಂಥ ಸಂದರ್ಭದಲ್ಲಿ ಮಾನಕ್ಕೆ ಅಂಜಿ ಸಾಯಬೇಕು. ಪ್ರತಿಭಟಿಸಿದರೂ ಸಾವೇ.

'ಮಾಪುರ ತಾಯಿಯ ಮಕ್ಕಳು' ಕಾದಂಬರಿಯಲ್ಲಿ ಕೆಳವರ್ಗದ ಸಿಂಗಾರಿ, ಶಿವರುದ್ರನನ್ನು ಮೆಚ್ಚಿಕೊಂಡು ಮದುವೆಯಾಗುವ ಕನಸು ಕಾಣುತ್ತಾಳೆ. ಶಿವರುದ್ರನೂ ಕನಸು ಕಾಣುತ್ತಾನೆ. ಆದರೆ ಅದು ಸಾಧ್ಯವಾಗುವುದಿಲ್ಲ. ಆ ಊರಿನ 'ಮಾಪುರ ತಾಯಿ'ಗೆ ಕೆಳವರ್ಗದವರು, ತಮ್ಮ ಹೆಣ್ಣು ಮಗಳನ್ನು ಅರ್ಪಿಸಿ ಜೋಗಿಣಿಗೆ ಬಿಡುವುದು ಸಂಪ್ರದಾಯ. ಈ ಪದ್ಧತಿಯನ್ನು ತಪ್ಪಿಸಿದರೆ, ಮುರಿದರೆ, 'ತಾಯಿ'ಯಿಂದ ತೊಂದರೆ ಅನುಭವಿಸಿ ಸಾವು-ನೋವಿಗೆ ಗುರಿಯಾಗಬೇಕಾಗುತ್ತದೆ. ಅಷ್ಟೇ ಅಲ್ಲ ಅಂಥವರು ಮಾಡುವ ತಪ್ಪಿನಿಂದ ಊರು ಶಾಪಕ್ಕೆ ಗುರಿಯಾಗುತ್ತದೆ. ಊರ ಗೌಡ, ಕುಲಕರ್ಣಿ, ಸಾಹುಕಾರ ಇಂಥ ವ್ಯವಸ್ಥೆಯನ್ನು ಹಿಂದಿನಿಂದ ರೂಪಿಸಿರುತ್ತಾರೆ. ಕೆಳವರ್ಗದವರು ಅನುಸರಿಸುತ್ತ ಬಂದಿದ್ದಾರೆ. ಪ್ರತಿವರ್ಷ ಕೆಳವರ್ಗದವರಲ್ಲಿ 'ತಾಯಿಗೆ' ಅರ್ಪಿಸಿ ಬಿಟ್ಟ ಹರೆಯದ ಜೋಗಿಣಿಯನ್ನು ಊರ ಉಳ್ಳವರು ಮೊದಲು ಮತ್ತು ಸಾಕಾಗುವವರೆಗೆ ಭೋಗಿಸಿ ಬಿಡುತ್ತಾರೆ. ನಂತರ ಈ ಜೋಗಿಣಿಯರು 'ತಾಯಿ'ಯ ಹೆಸರಿನಲ್ಲಿ ಮೈ ಮಾರಿಕೊಳ್ಳುತ್ತ 'ತಾಯಿಸೇವೆ'ಯಲ್ಲಿ ಬದುಕುತ್ತಾರೆ. ಕೆಳವರ್ಗದ ಕುಟುಂಬಗಳಲ್ಲಿ ಒಬ್ಬರಾದರೂ ತಪ್ಪದೆ 'ತಾಯಿ'ಗೆ ಅರ್ಪಣೆಯಾಗಲೇಬೇಕು.

ಚಂದಪ್ಪ-ದುರ್ಗವ್ವರ ಮಗಳು ಸಿಂಗಾರಿಯನ್ನು ನೋಡಿದ ಕುಲಕರ್ಣಿಗೆ ನಿದ್ದೆ ಬರಲಿಲ್ಲ. ಅವಳನ್ನು ತನ್ನ ಹಾಸಿಗೆಗೆ ಎಳೆದುಕೊಳ್ಳಬೇಕಾದರೆ, ಮಾಪುರ ತಾಯಿಯ ಜಾತ್ರೆ ಬರಬೇಕು. ಜಾತ್ರೆಯಲ್ಲಿ ಸಿಂಗಾರಿ 'ತಾಯಿ'ಗೆ ಅರ್ಪಣೆಯಾಗಿ ಜೋಗಿಣಿಯಾಗಬೇಕು. ಮರುಕ್ಷಣ ಸಿಂಗಾರಿ ತನ್ನ ತೋಳ ತೆಕ್ಕೆಯಲ್ಲಿರಬೇಕು. ಆದರೆ ಸಿಂಗಾರಿ ಜೋಗಿಣಿಯಾಗುವುದನ್ನು ನಿರಾಕರಿಸಿ ಶಿವರುದ್ರನನ್ನು ಮದುವೆಯಾಗುವ ತೀರ್ಮಾನ, ಊರ ವ್ಯವಸ್ಥೆಗೆ ವಿರುದ್ಧವಾದುದಾಗಿತ್ತು. ಜೋಗಿಣಿಯನ್ನಾಗಿ ಬಿಡುವ ಅನಿವಾರ್ಯ ಸ್ಥಿತಿಯನ್ನು ಸಿಂಗಾರಿಯ ತಂದೆ-ತಾಯಿಗೆ ತರುತ್ತಾರೆ. ಸಿಂಗಾರಿ ಅಸಹಾಯಕಳಾಗುತ್ತಾಳೆ. ಶಿವರುದ್ರನ ಆಕ್ರೋಶ ಹೆಚ್ಚಾಗುತ್ತದೆ. ಸೋತ ಸಿಂಗಾರಿ 'ಒಂದೇ ರಾತರಿ ಆಟೇ........ಒಂದೇ ರಾತರಿ ರುದ್ರಾ........ ಆ ಮ್ಯಾಲ ನಾ ಯಾರ ಬಲ್ಲಿನೂ ಹೋಗಂಗಿಲ್ಲ. ನಿನ್ ಬಲ್ಲೇ ಇರ್ತಿನೆಂತ ಹೇಣ್ತಿಕಿನ್ನಾ ಹೆಚ್ಚಾಗಿ ಇರ್ತೀನೋ' ಎನ್ನುತ್ತಾಳೆ. ಶಿವರುದ್ರನಂಥವರು ಎಷ್ಟೇ ಅಸಹಾಯಕರಾದರೂ, ಸಿಂಗಾರಿಯ ಮಾತನ್ನು ಒಪ್ಪುವುದಿರಲಿ, ಕೇಳುವುದಕ್ಕೇ ಸ್ವಾಭಿಮಾನಿಯಾದ ಯಾರೂ ತಯಾರಿರುವುದಿಲ್ಲ. ಸಿಂಗಾರಿ ಜೋಗಿಣಿಯಾಗಿ, ಕುಲಕರ್ಣಿ ಹಾಸಿಗೆಗೆ ಹೋಗುವುದನ್ನು ತಡೆಯಲು ಶಿವರುದ್ರ ತನ್ನ ಗೆಳೆಯರೊಂದಿಗೆ, ಜಾತ್ರೆಯ ದಿನ ಹೋರಾಟಕ್ಕೆ ನಿಲ್ಲುತ್ತಾನೆ. ಇದನ್ನು ಊಹಿಸಿದ್ದ ಕುಲಕರ್ಣಿ ಮತ್ತು ಅವನ ಬೆಂಬಲಿಗರಾದ ಗೌಡ, ಸಾಹುಕಾರ ಕೂಡಿ ಜೀತದಾಳುಗಳಿಂದ ಶಿವರುದ್ರನನ್ನು ಸಾಯಿಸುತ್ತಾರೆ. ಸಿಂಗಾರಿ ಕುಲಕರ್ಣಿಗೆ ವಶವಾಗುತ್ತಾಳೆ. ನಂತರ ವಂಚಕರ ಜಾಲಕ್ಕೆ ಸಿಕ್ಕು ಸಿಂಗಾರಿ ಬಾಂಬೇ ಸೇರುತ್ತಾಳೆ. ಒಬ್ಬ ಶೇಠ್ ಅವಳನ್ನು ಕೊಂಡುಕೊಳ್ಳುತ್ತಾನೆ. ನೋವಿನಲ್ಲೂ ಸಿಂಗಾರಿ ಶ್ರೀಮಂತ ಬದುಕಿನಲ್ಲಿ ಒಂದಾಗುತ್ತಾಳೆ. ಮುಂದೆ ಶೇಠ್ ಸಾಯಲು ಆಸ್ತಿಯೆಲ್ಲ ಸಿಂಗಾರಿಗೆ ಬರುತ್ತದೆ. ಪುನಃ ಹೊಸ ಅವತಾರದಲ್ಲಿ ತನ್ನ ಹಳ್ಳಿ ಸೇರುತ್ತಾಳೆ. ಅಲ್ಲಿ ನಡೆಯುವ 'ಮಾಪೂರತಾಯಿ ಜಾತ್ರೆ'ಯಲ್ಲಿ ಜೋಗಿಣಿಯಾಗುವ ವ್ಯವಸ್ಥೆಯನ್ನು ಪೋಲೀಸರ ಸಹಾಯದಿಂದ ತಪ್ಪಿಸುತ್ತಾಳೆ. ಮಾದೇವಿ-ಶಂಕ್ರ ಎಂಬ ಜೋಡಿಗೆ (ತನ್ನ ಶಿವರುದ್ರನಂತೆ ಇರುವ) ಮದುವೆ ಮಾಡಿಸುತ್ತಾಳೆ. ಆದರೆ ಜೋಗಿಣಿಗೆ ಬಿಟ್ಟ ಹುಡುಗಿಯರನ್ನು ಬಾಂಬೆಗೆ ಸಾಗಿಸುವ ಒಂದು ಗ್ಯಾಂಗ್, ಸಿಂಗಾರಿಯ ಇಂಥ ಕೆಲಸದಿಂದ ಹಾನಿಯಾಗುವುದನ್ನು ಕಂಡು ಕೊಲ್ಲುತ್ತಾರೆ. ಸಿನಿಮಾದಲ್ಲಿ ನಡೆಯುವಂತೆ ಕಾದಂಬರಿಯಲ್ಲಿ ಕೊನೆಗೊಳ್ಳುತ್ತದೆ.

ಕೇರಿಯಲ್ಲೇ ಹುಟ್ಟಿ ಬೆಳೆದು ಹುಡುಗಿಯರನ್ನು ಜೋಗಿಣಿಯನ್ನಾಗಿ ಮಾಡಿ ನಂತರ ಭೋಗಿಸುವ 'ಉಳ್ಳವರು', ತಮ್ಮ ಜೀತದಾಳುಗಳಿಗೆ ಹೆಂಡತಿಯರಾಗಿ ಕೇರಿಗೆ ಬರುವ ಹೆಂಗಸರನ್ನು ಭೋಗಿಸುವುದಕ್ಕೂ ಒಂದು 'ವ್ಯವಸ್ಥೆ'ಯನ್ನು ರೂಪಿಸಿಕೊಂಡಿದ್ದಾರೆ. **'ಹಸಿಮಾಂಸ ಮತ್ತು ಹದ್ದುಗಳು'** ಕಾದಂಬರಿಯಲ್ಲಿ ಇದು ಕಾಣಿಸಿದೆ. 'ಏ ಹಾದರಕ ಹುಟ್ಟಿದವ್ನೇ.........ನಿನ್ ಹೇಣ್ತಿಗೆ ಕರ್ಕೊಂಡು ಬಾರ್ಲೆ........ಗೌಡ ಕುಲಕರ್ಣಿಯರು ರುಚಿ ನೋಡ್ದ ಮ್ಯಾಲೇ ನೀ ಸೋಬಾನ ಮಾಡ್ಕೋಮಾದು. ಇದು ಈ ಹಳ್ಳಿ ರೀತಿ ರಿವಾಜು ಅಂತ ಗೊತ್ತಿಲ್ಲೇನೋ ಸೂಳ್ಯಾಮಗನೆ?' 'ಅದು ಹಿನಾ ಸಣ್ಣದದಾರಿಯಪ್ಪಾ..........ಮೈನೆರೆದಿಲ್ಲ. ಮೈನರದ ಮ್ಯಾಲಿನ ಮಾತು ಹಿಂದಾಗಡಿ.' (ಪು.೧೬) ಕುಲಕರ್ಣಿ ಮತ್ತು ಅವನ ಜೀತದಾಳು ಫಕೀರಪ್ಪನ ನಡುವೆ ನಡೆದ ಮಾತುಗಳಿವು. ಈ ಮಾತುಗಳನ್ನು ಕೇಳಿ ಫಕೀರಪ್ಪನಿಗೆ ಕುಲಕರ್ಣಿಯನ್ನು ಕಡಿದುಹಾಕುವಷ್ಟು ಸಿಟ್ಟು ಬಂದರೂ ತೋರಗೊಡದೆ ತಣ್ಣಗಿರಬೇಕಾಗುತ್ತದೆ. ಫಕೀರಪ್ಪ ಇದನ್ನು ಎದುರಿಸುವ ಬಿಕ್ಕಟ್ಟು ಬಂದಾಗ ಹೆಂಡತಿಯೊಂದಿಗೆ ಊರು ಬಿಟ್ಟು ಹೋಗಿ ಕುಲಕರ್ಣಿ ಸತ್ತ ಮೇಲೆ ಊರಿಗೆ ಬರುತ್ತಾನೆ. ಬಂದಾಗಲೂ ಉಳ್ಳವರ ವ್ಯವಸ್ಥೆಯಲ್ಲಿ ಬದಲಾವಣೆ ಏನೂ ಕಾಣಿಸುವುದಿಲ್ಲ. ಅವನ ಮಗಳು ಲಚ್ಚಿಯೂ ಅಂಥದೇ ವ್ಯವಸ್ಥೆಗೆ ಬಲಿಯಾಗುತ್ತಾಳೆ.

ಲಚ್ಚಿಯೂ ಕಾಶಿನಾಥನೆಂಬ ಹುಡುಗನನ್ನು ಪ್ರೀತಿಸುತ್ತಾಳೆ. ಕಾಶಿನಾಥ ಕುಲಕರ್ಣಿಯ ಹೊಲದಲ್ಲಿ ದುಡಿಯುವ ಜೀತದಾಳು. ಗೀತಾ ನಾಗಭೂಷಣರ ಇತರ ಕಾದಂಬರಿಗಳಲ್ಲಿ ಘಟಿಸುವಂತೆ ಲಚ್ಚಿ-ಕಾಶೀನಾಥ ಮದುವೆಯಾಗಿ ಸುಂದರ ಬದುಕನ್ನು

ಕಟ್ಟಿಕೊಳ್ಳಬೇಕೆಂದು ಕನಸು ಕಾಣುತ್ತಾರೆ. ಅವರ ಕನಸನ್ನು ಮುರಿಯಲು ಕುಲಕರ್ಣಿ ಬೆನ್ನ ಹಿಂದೆ ನಿಂತಿರುತ್ತಾನೆ. ಲಚ್ಚಿಯನ್ನು ಬಯಸಿದ ಕುಲಕರ್ಣಿ, ಅವಳನ್ನು ಭೋಗಿಸಲು ಸಮಯ ಕಾಯುತ್ತಾನೆ. ಕಾಶೀನಾಥನನ್ನೂ ಭೇಟಿಯಾಗಲು ಹೋದ ಲಚ್ಚಿಗೆ ಪ್ರೀತಿಯಿಂದ ಕಾಶೀನಾಥನೆ ಒಂದು ಕುಂಬಳಕಾಯಿ ಕೊಡುತ್ತಾನೆ. ಅದನ್ನು ಉಡಿಯಲ್ಲಿಟ್ಟುಕೊಂಡು ಹೊಲದಿಂದ ಹೊರ ಬರುತ್ತಿದ್ದಂತೆ ಕುಲಕರ್ಣಿಯ ಕೈಗೆ ಸಿಕ್ಕಿಬೀಳುತ್ತಾಳೆ. 'ಇರ್ಲ ಬಿಡು ಇವತ್ತು ರಾತರಿ ನಮ್ಮ ತ್ವಾಟದ ಮನಿಗೆ ಬಾ' ಎಂದು ಆಹ್ವಾನಿಸುತ್ತಾನೆ. ನಿರಾಕರಿಸಿದ ಲಚ್ಚಿಯನ್ನು ಕಳ್ಳತನದ ಆರೋಪದ ಮೇಲೆ ಪೊಲೀಸರಿಗೆ ಒಪ್ಪಿಸುತ್ತಾನೆ. ಸ್ಟೇಷನ್‌ನಲ್ಲಿ ಪೊಲೀಸರ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಅಲ್ಲಿಂದ ಬಿಡುಗಡೆಯಾಗುವ ಮುನ್ನ ಕಾಶೀನಾಥ ಬಂದು ಅವಳ ಸ್ಥಿತಿಯನ್ನು ನೋಡಿ ಮರುಗಿದರೂ ಲಚ್ಚಿಯನ್ನು ನಿರಾಕರಿಸುತ್ತಾನೆ. ಲಚ್ಚಿಗೆ ಅವನ ಬಗ್ಗೆ ಜಿಗುಪ್ಸೆ ಬರುತ್ತದೆ. ಅವನೇ ಕೊಟ್ಟ ಕುಂಬಳಕಾಯಿಯಿಂದ ಅವಳಿಗೆ ಆ ಅವಸ್ಥೆ ಬಂದಿರುತ್ತದೆ. ಹಿಂದೆ ಕುಲಕರ್ಣಿ ತನ್ನ ಮೇಲೆ ಕಣ್ಣಿಟ್ಟಿದ್ದಾನೆ ಎಂದು ಲಚ್ಚಿಯೇ ಕಾಶೀನಾಥನಿಗೆ ಹೇಳಿದಾಗ 'ಲಚ್ಚೀ........ಅವನವ್ವನ ರಂಡಿ ಮಗನಿಗಿ ಜೆಂವಾ ಇಟ್ಟೇ ಹೂಳಿಬಿಡ್ತೀನಿ ನನ್ ಹುಡುಗೀ ತಂಟ್ಯಾಕ ಬರ್ತದ ಆ ಮುದಿ ನಾಯಿ, ಅವನ ಗಂಡಸ್ತನ ಏಟದಾ ಅಂತ ಒಂದು ಕೈ ನೋಡಿ ಬಿಡ್ತೀನಿ. ನೀ ಬಿಡು ಜರಾ......' (ಪು.೩೬) ಎಂದ ಅವನೇ ಇಂದು ಮುಖ ತಿರುಗಿಸಿ ಹೋಗಿಬಿಡುತ್ತಾನೆ.

ಮುಂದೆ ಲಚ್ಚಿಗೆ ಊರಲ್ಲಿ ತಂದೆಯಿರಲಿಲ್ಲ. ಕಾಶೀನಾಥ ಬೆನ್ನು ತಿರುಗಿಸಿದ್ದ. ಊರಿಗೆ ಹೋಗದೆ, ಪೊಲೀಸರೇ ತೋರಿಸಿದ 'ಸ್ತ್ರೀನಿಕೇತನ' ಎಂಬ ಸಂಘ ಸೇರುತ್ತಾಳೆ. ಇಂಥ ಹೆಂಗಸರಿಗೆ ಪುನಃ ಬದುಕನ್ನು ಕೊಡುವ ಹೆಸರಿನ ಸಂಸ್ಥೆ ಅದಾಗಿರುತ್ತದೆ. ಆದರೆ ಅದರ ಅಧಿಕಾರಿಣಿ ಲಚ್ಚಿಯನ್ನು 'ದೊಡ್ಡ ಅಧಿಕಾರಿಗಳ' ಹಾಸಿಗೆಗೆ ಕಳಿಸಿಕೊಡುತ್ತಾಳೆ. ಕೊನೆಗೆ ಬಸವಣ್ಣಿ ಎಂಬುವವನು ಬಂದು ಲಚ್ಚಿಯನ್ನು ಆಯ್ಕೆ ಮಾಡಿಕೊಂಡು ಮದುವೆ ಮಾಡಿಕೊಳ್ಳುತ್ತಾನೆ. ಲಚ್ಚಿ ಬಸಿರಾಗುತ್ತಾಳೆ. ಅಷ್ಟರಲ್ಲೇ ಬಸವಣ್ಣಿ ಬೇರೆ ಮದುವೆ ಮಾಡಿಕೊಂಡು ಲಚ್ಚಿಯನ್ನು ಹೊರಹಾಕುತ್ತಾನೆ. ಲಚ್ಚಿ ಸರಕಾರಿ ದವಾಖಾನೆ ಸೇರಿ ಹಡೆದು ಪುನಃ ಮಗುವಿನೊಂದಿಗೆ ಬಸವಣ್ಣಿ ಮನೆಗೆ ಬಂದು, 'ಇದು ನಿನ್ನ ಕೂಸು' ಎಂದು ಬೇಡಿಕೊಂಡರೂ ಅವಳನ್ನು ಅನುಮಾನಿಸಿ ನಿರಾಕರಿಸಿ ಬಿಡುತ್ತಾನೆ. ಮಗುವಿನೊಂದಿಗೆ ಸಾಯಲು ಪ್ರಯತ್ನಿಸುತ್ತಾಳೆ. ಆದರೆ ಆ ಪ್ರಯತ್ನದಲ್ಲಿ ಮಗು ಸತ್ತು ಲಚ್ಚಿ ಉಳಿಯುತ್ತಾಳೆ. ಮಗುವನ್ನು ಕೊಂದ ಅಪರಾಧದ ಮೇಲೆ ಪುನಃ ಜೈಲಿಗೆ ಹೋಗುತ್ತಾಳೆ. ಲಚ್ಚಿಯ ಬದುಕು ನಿರಂತರವಾಗಿ ದಮನಕ್ಕೆ ಒಳಗಾಗುತ್ತಲೇ ಹೋಗುತ್ತದೆ.

ಸಿಂಗಾರಿಗೆ ಶಿವರುದ್ರ ದಕ್ಕಲಿಲ್ಲ. ಲಚ್ಚಿಗೆ ಕಾಶೀನಾಥ ದಕ್ಕಲಿಲ್ಲ, ನೀಲಗಂಗಾಳಿಗೆ ಮಲ್ಲೇಶಿ ಗಂಡನಾಗಿ ಸಿಕ್ಕರೂ ದಕ್ಕಲಿಲ್ಲ. ಸೋನಿಗೆ ಮಲ್ಲೇಶಿ ದಕ್ಕುವುದಿಲ್ಲ (**'ಧುಮ್ಮಸು'**). ಸೀನಿಂಗನ ಮಗಳು ಸೋನಿ ತಾಯಿಯನ್ನು ಬೇಗ ಕಳೆದುಕೊಂಡರೂ (ಬಹುತೇಕ ಹೆಣ್ಣುಗಳ ಸ್ಥಿತಿಯಿದು) ತಂದೆಯ ಆಶ್ರಯದಲ್ಲಿ ಹಿಗ್ಗಿನಿಂದ ಬೆಳೆಯುತ್ತಾಳೆ. ಊರಿಗೆ ಬರುವ ಸರಕಾರಿ ಬಸ್ಸಿನ ಡ್ರೈವರ್ ಮಲ್ಲೇಶಿಯನ್ನು ಪ್ರೀತಿಸುತ್ತಾಳೆ. ಅವರ ಭೇಟಿ, ಪರಿಚಯ, ಮಾತುಕತೆ, ಎಲ್ಲವೂ ಸರಳವಾಗಿ ಸರಾಗವಾಗಿ ನಡೆಯುತ್ತವೆ. ಉಳಿದವರಂತೆ ಸೋನಿಯ ಮೇಲೆ ಯಾರ 'ದೊಡ್ಡ' ಕಣ್ಣುಗಳು ಬೀಳುವುದೇ ಇಲ್ಲ. ಬಿದ್ದರೂ ದುರಂತದ ಹಾದಿ ಹಿಡಿಯುವಂಥ ಸ್ಥಿತಿ ಉಂಟಾಗಲಿಲ್ಲ. ಸೋನಿಯ ತಂದೆಯೂ ಮಲ್ಲೇಶಿಯನ್ನು ಒಪ್ಪುತ್ತಾನೆ. ಮದುವೆಗೆ ಭರದಿಂದ ತಯಾರಿ ನಡೆಯುತ್ತದೆ. ಮದುವೆಗೆ ಮುನ್ನವೇ ಬಸ್ ಅಪಘಾತಕ್ಕೆ ಸಿಲುಕು ಮಲ್ಲೇಶಿ ಸಾಯುತ್ತಾನೆ. ಅತ್ತು ಕರೆದು ಸಮಾಧಾನ ಹೊಂದುವ ಹೊತ್ತಿಗೆ ಸೋನಿ ಬಸರಾಗಿರುವುದು ಬಯಲಿಗೆ ಬೀಳುತ್ತದೆ. ಮದುವೆಗೆ ಮುನ್ನ ಬಸಿರಾದ ಸೋನಿಯನ್ನು 'ಪಂಚಾಯ್ತಿ'ಗೆ ಕರೆದು, ಅದನ್ನು ತೆಗೆಸಬೇಕು. ಅದು ಸಮ್ಮೂರ ಮರ್ಯಾದೆಯ ಪ್ರಶ್ನೆ. ಇಲ್ಲದಿದ್ದರೆ ಅನ್ನ, ನೀರು, ಬೆಂಕಿ ನೀಡದೆ ಬಹಿಷ್ಕಾರ ಹಾಕಲು ನಿರ್ಧರಿಸುತ್ತದೆ. ಸೋನಿ, ಅದು ನಾನು ಪ್ರೀತಿಸಿದ ಮಲ್ಲೇಶಿಗೆ ಹುಟ್ಟುವಂಥದ್ದು. ಅದರ ಮೇಲೆ ತನಗೆ ಪ್ರೀತಿ, ಅಧಿಕಾರ, ಹಕ್ಕು ಇದೆಯೆಂದು

'ಪಂಚಾಯ್ತಿ' ನಿರ್ಧಾರವನ್ನು ತಿರಸ್ಕರಿಸಿ, ಮಲ್ಲೇಶಿಯ ಬಸ್ಸಿನ ಗೆಳೆಯರ ಸಹಾಯದಿಂದ ಸೋನಿ ಊರು ಬಿಟ್ಟು ಕಲಬುರ್ಗಿ ಸೇರುತ್ತಾಳೆ. ಕರೆದುಕೊಂಡು ಬಂದಿದ್ದ ಸಲೀಮನೆಂಬುವವನು ಪಾಂಶುಮಿಯಾ ಎಂಬ ಗುಂಡಾನಲ್ಲಿಗೆ ಬಂದು, 'ನೋಡು ದೋಸ್ತ್ ನಿನ್ನ ಭರೋಸಾದ ಮ್ಯಾಲೇ ನಾ ಸೋನಿಗಿ ಇಲ್ಲಿಗೆ ಕರ್ಕೊಂಡು ಬಂದೇನಿ. ಹಳ್ಯಾಗ ಇಕಿಗಿ ಬದುಕಲಿಕ್ಕಿ ಬಿಡಲಿಲ್ಲ ಆ ಬದ್ಮಾಶ್ ಮಂದಿ. ಈಕಿನ ಹೊಟ್ಯಾಗ ನಮ್ಮ ದೋಸ್ತ ಮಲ್ಲೇಶಿದು ನಿಶಾನಿ ಅದಾ. ಇಕಿಗಿ ಹ್ಯಾಂಗರೆ ಮಾಡಿ ಒಂದು ಲೇಬರ ಕೆಲ್ಸಾ ಕುಡ್ಸು. ಹಂಗೇ ಇಲ್ಲೇ ಇರ್ಲಿಕ್ಕ ಒಂದು ಝೋಪಡಿ ಕುಡು. ದುಡದು ಬದಕತಾಳ..........ಇದೀಟ ಮಾಡ್ಬೇಕು ದೋಸ್ತ್' (ಪು.೨೦೭) ಎಂದು ಒಪ್ಪಿಸುತ್ತಾನೆ. ಪಾಂಶುಮಿಯಾ ಸೋನಿಗೆ ಪ್ರೀತಿಯಿಂದ ಆಶ್ರಯ ನೀಡುತ್ತಾನೆ. ಅವನು ಬಾಹ್ಯ ಪರಿಸರದಲ್ಲಿ ಗುಂಡಾ. ಅವನ ಅಂತರಂಗ ಸೋನಿಗೆ ಆಶ್ರಯ ನೀಡುವ ಕರುಣೆ ಉಳ್ಳದ್ದು. ಅವನ ವಿಚಿತ್ರ ಪರಿಸರದಲ್ಲಿ ಸೋನಿ ಹಡೆಯುತ್ತಾಳೆ. ನಂತರ ಪಾಂಶುಮಿಯಾ ತೋರಿಸಿದ ಕೆಲಸ ಮಾಡುತ್ತ, ಅವನು ಹಾಕಿಕೊಟ್ಟ ಗುಡಿಸಿಲಿನಲ್ಲಿ ಜೀವಿಸುತ್ತ ನಡೆಯುತ್ತಾಳೆ. 'ಧುಮ್ಮಸು' ಎಂದರೆ ಮೆತ್ತು ಹಾಕುವುದು, ಚತ್ತು ಹಾಕುವುದು ಎಂದರ್ಥ. ಕಟ್ಟಿಕೊಳ್ಳುವುದು ಎಂದರ್ಥ. ಸೋನಿಗೆ ಬದುಕಿನಲ್ಲಿ ಮೇಲಿಂದ ಮೇಲೆ ಪೆಟ್ಟು ಬೀಳುತ್ತಲೇ ಇರುತ್ತವೆ. ಅವಳು ಬದುಕನ್ನು ಕಟ್ಟಿಕೊಳ್ಳುತ್ತಲೇ ಇರುತ್ತಾಳೆ.

'ಚಿಕ್ಕಿಯ ಹರೆಯದ ದಿನಗಳು' ಕಾದಂಬರಿಯಲ್ಲಿ ಬರುವ ಚಿಕ್ಕಿ ಕೂಡಾ ಝೋಪಡಾ ಪಟ್ಟಿಯಲ್ಲಿ ಹುಟ್ಟಿ ಬೆಳೆದವಳು. ತಂದೆ-ತಾಯಿಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡು ತಾತನಲ್ಲಿ ಬೆಳೆಯುತ್ತಾಳೆ. ತಾತ ಕೇರಿಯಲ್ಲಿ ಸ್ವಲ್ಪ ಪರಿಣಾಮಸ್ಥ. ಚಿಕ್ಕಿ ಬಾಲ್ಯದಿಂದ ಹರೆಯಕ್ಕೆ ಬರುವ ಅವಧಿಯಲ್ಲಿ ಮುಗ್ಧ ನಡವಳಿಕೆಯವಳು. ಕಪಟವರಿಯದ ಹರಿತವಾದ ಮಾತು, ನಗು, ಎಲ್ಲರೊಂದಿಗೆ ಬೆರೆಯುವ ಸರಳತನ, ತಮಾಷೆ-ಹರಟೆ ಅವಳಿಗೆ ತುಂಬ ಸಹಜವಾಗಿ ಬಂದಂಥ ಗುಣಗಳು. ಅದರಿಂದ ಅವಳನ್ನು ತಪ್ಪು ತಿಳಿದು ಕೆಣಕಿದರೆ ಸ್ವಾಭಿಮಾನಿಯಾಗಿ ನಿಂತು ಬೆಂಕಿಯಾಗುತ್ತಿದ್ದಳು. ಗೀತಾ ನಾಗಭೂಷಣ ಅವರ ಕಾದಂಬರಿಯ ಹೆಂಗಸರೆಲ್ಲರ ಸ್ವಭಾವಗಳು ಇಂಥವು. ಲಾರಿ ಡ್ರೈವರ್ ಚೆನ್ನನಿಗೆ ಹಾಲು ಮಾರಲು ಹೋದಾಗಲೆಲ್ಲ ಅವನಿಗೆ ದಿಗ್ ಭ್ರಮೆಯಾಗುವಂತೆ, ಹುಚ್ಚು ಹಿಡಿಯುವಂತೆ ಮಾತನಾಡಿ, ನಕ್ಕು ತಮಾಷೆ ಮಾಡಿ ಬರುತ್ತಿದ್ದಳು. ಅವನಿಗೆ ಅವಳನ್ನು ಕಂಡರೆ ಸಾಕು, ಬೇರೆ ಪ್ರಪಂಚವೇ ಇಲ್ಲದಂತೆ ಮೈಮರೆಯುತ್ತಿದ್ದ. ಆದರೆ ಸಭ್ಯನಾಗಿದ್ದ. ಅವರಿಬ್ಬರ ಮಧ್ಯ ಒಂದು ಬಗೆಯ ಅಂತರ, ಒಂದು ಬಗೆಯ ಆತ್ಮೀಯತೆ ಬೆಳೆದಿತ್ತು. ಅಂತರ ಮತ್ತು ಆತ್ಮೀಯತೆ ಅಳಿಸಿ, ಇನ್ನೇನೋ ಆಗುವ ಹೊತ್ತಿಗೆ ಚಿಕ್ಕಿಯ ತಾತ ಚಿಕ್ಕಿಗೆ ಚಂದ್ರುನನ್ನು ಮದುವೆ ಮಾಡುತ್ತಾನೆ. ಅವಳು ಸಂತೋಷದಿಂದ ಮದುವೆ ಮಾಡಿಕೊಂಡು ಸಂಸಾರಕ್ಕೆ ಕಾಲಿಟ್ಟು ಬದುಕು ಎಂಬುದನ್ನು ಕಟ್ಟುವ ಸಮಯದಲ್ಲಿ ಚಂದ್ರು ತುಳಜಾಪುರ ಅಂಬಾಭಾನಿಗೆ ಅರ್ಪಿಸಿಕೊಳ್ಳುವ 'ಭೂತ್ಯಾ'ಗಳಿಂದ ಓಡಿಹೋಗಿಬಿಡುತ್ತಾನೆ. ಚಿಕ್ಕಿಯನ್ನು ಮದುವೆಯಾಗಿ ಸಂಸಾರ ನಡೆಸುತ್ತಿದ್ದಂತೆ ಪುರುಷತ್ವ ಕಳೆದುಕೊಂಡ ಕಾರಣ ಭೂತ್ಯಾನಾಗಿ ಓಡಿರುತ್ತಾನೆ. ಚಿಕ್ಕಿ ಹುಡುಕಿದರೂ ಸಿಗುವುದಿಲ್ಲ. ಪುನಃ ತಾತನಲ್ಲಿಗೆ ಬಂದು ಆಶ್ರಯಿಸುತ್ತಾಳೆ. ಪುನಃ ಮೊದಲಿನ ದಿನಗಳು ಪ್ರಾರಂಭವಾಗುತ್ತವೆ. ಅದೇ ಲಾರಿ ಡ್ರೈವರ್ ಚೆನ್ನನೊಡನೆ ಹರಟೆ. ಆದರೆ ಬರೀ ಹರಟೆಗೆ ನಿಲ್ಲುವುದಿಲ್ಲ. ಮದುವೆಯಾಗುತ್ತಾರೆ. ಮಗುವಾಗುತ್ತದೆ. ಚೆನ್ನ ಸಾಯುತ್ತಾನೆ. ಪುನಃ ಚಿಕ್ಕಿಗೆ ಜಿಗುಪ್ಸೆ ಬರುತ್ತದೆ. ಚಂದ್ರ ನೆನಪಾಗುತ್ತಾನೆ. ತುಳಜಾಪುರಕ್ಕೆ ಹೋಗಿ ಹುಡುಕುತ್ತಾಳೆ. ಚೆನ್ನನಿಗೆ ಹುಟ್ಟಿದ ಮಗುವಿನೊಂದಿಗೆ ಚಂದ್ರ, ಚಿಕ್ಕಿಯ ಜತೆಗೆ ಪುನಃ ಬದುಕಿಗೆ ಹೊಂದುತ್ತಾನೆ. ಪರಿಸರ, ಭಾಷೆ ಬದಲಿಸಿದರೆ, ನಗರದಲ್ಲಿ ನಡೆಯಬಹುದಾದ, ಸಿನಿಮಾ ಮಾದರಿಯ ಸೆಂಟಿಮೆಂಟಲ್‌ನಿಂದ ಕೂಡಿದ ಪ್ರೇಮ ಕಥೆ. ಈ ಕಾದಂಬರಿಯಲ್ಲಿ ಮುಕ್ಕಾಲು ಪಾಲು ಬರಿ ಸಂಭಾಷಣೆಗಳಿವೆ.

ಈಚೆಗೆ ಬಂದ **'ದಂಗೆ'** ಕಾದಂಬರಿ ಸ್ವಲ್ಪ ಭಿನ್ನವಾಗಿದೆ. ಆದರೂ ದುರುಗವ್ವನ ಬಾಲ್ಯ ಮತ್ತು ಹರೆಯಕ್ಕೆ ಕಾಲಿಡುವವರೆಗೆ ಉಳಿದ ಕಾದಂಬರಿಗಳಲ್ಲಿ ಘಟಿಸುವಂತೆ ಹೆಣ್ಣಿನ ವಿಷಯದಲ್ಲಿ ಇಲ್ಲೂ ಘಟಿಸುತ್ತವೆ. ಅದೇ ತಂದೆ-ತಾಯಿಯನ್ನು ಕಳೆದುಕೊಂಡ

ದುರುಗವ್ವ, ತನ್ನ ಮಲ ಅಕ್ಕನಲ್ಲಿ ಬೆಳೆಯುತ್ತಾಳೆ. ಕೂಲಿನಾಲಿ ಮಾಡಿ ಅಕ್ಕನಿಗೂ ನೆರವಾಗುತ್ತಾಳೆ. ಹರೆಯದ ದುರುಗವ್ವನನ್ನು ಭಾವ ಹನುಮಂತ ನೋಡುತ್ತ ತಡೆಯದೆ ಕೆಡಿಸುತ್ತಾನೆ. ಅದನ್ನು ಅಕ್ಕನಿಗೆ ಹೇಳಿದರೆ ತನಗೆ ಆಶ್ರಯವೆಲ್ಲಿ ತಪ್ಪುತ್ತದೆಂದು ಅಸಹಾಯಕಳಾಗಿ ಉಳಿಯುತ್ತಾಳೆ. ಕೊನೆಗೆ ಮಾಳಪ್ಪನನ್ನು ಮದುವೆಯಾಗುತ್ತಾಳೆ. ಯುವಕನೊಬ್ಬ ಮೈಗಳ್ಳ ಜವಾಬ್ದಾರಿಯೇ ಇಲ್ಲದಂತಿರುವ, ಬದುಕಿನ ರೀತಿ ನೀತಿಗಳನ್ನು ಅರಿಯದವನಿದ್ದರೆ ಅಂಥವನಿಗೆ ಮದುವೆ ಮಾಡಿದರೆ ಸರಿ ಹೋಗುತ್ತಾನೆ ಎಂಬ ಸಮಾಜದ ತಿಳುವಳಿಕೆಗಳೂ ಕೂಡ ಹೆಂಗಸರಿಗೆ ಮಾರಕವಾಗಿ ಪರಿಣಮಿಸುತ್ತವೆ ಎಂಬುದನ್ನು ಈ ಕಾಂಬರಿಯ ದುರುಗವ್ವ ಅನುಭವಿಸುತ್ತಾಳೆ. ಆದರೆ ಅಂಥ ಯುವಕನನ್ನು ಮದುವೆಯಾದ ಹೆಣ್ಣಿನ ಗತಿಯೇನು ಎಂದು ಸಮಾಜ ಯೋಚಿಸುವುದಿಲ್ಲ. ಮಾಡಿಕೊಂಡವಳು ಅಂಥ ಗಂಡನನ್ನು ಸರಿ ದಾರಿಗೆ ತರುವ ಜವಾಬ್ದಾರಿಯನ್ನೂ ಹೆಣ್ಣಿಗೆ ಹೋರಿಸಲಾಗುತ್ತದೆ. ದುರುಗವ್ವನನ್ನು ಮದುವೆಯಾದ ಮಾಳಪ್ಪ ಅಂಥ ಮನುಷ್ಯ. ಅವನು ಹೆಂಡತಿ ದುಡಿದು ಹಾಕಿದ ಕೂಳು ತಿಂದು ಪುನಃ ಮನೆಯಲ್ಲಿದ್ದ ರೊಟ್ಟಿಗಳನ್ನು ಕದ್ದು ಒಯ್ದು ಸೇಂದಿ ಅಂಗಡಿಯ ಕುಡುಕರಿಗೆ ಮಾರುತ್ತಿದ್ದ.

ಕೊನೆಗೆ ಇರುವ ಮಗಳನ್ನು ಕಟ್ಟಿಕೊಂಡು ದುರುಗವ್ವ ಕುಲಕರ್ಣಿ ಗೋವಿಂದಪ್ಪ ಎಂಬ ಶ್ರೀಮಂತನನ್ನು ಕೂಡಿಕೊಂಡು ನೆಲೆ ಪಡೆಯುತ್ತಾಳೆ. ಆದರೆ ಗೋವಿಂದಪ್ಪನ ಮಗ ದುರುಗವ್ವನ ಮಗಳ ನಡುವೆ ಸ್ನೇಹ ಬೆಳೆದು ಅವರಿಬ್ಬರು ಮದುವೆಗೆ ಸಿದ್ಧವಾಗುತ್ತಾರೆ. ಇದನ್ನು ಸಹಿಸದ ಗೋವಿಂದಪ್ಪ ಹೆಂಡತಿಯಂತಿದ್ದ ದುರುಗವ್ವನ ಮಗಳನ್ನೇ ಕೊಲೆ ಮಾಡಿಸಲು ಪ್ರಯತ್ನಿಸುತ್ತಾನೆ. ಅದನ್ನು ಅರಿತ ದುರುಗವ್ವ ಗಂಡನಂತಿದ್ದ ಗೋವಿಂದಪ್ಪನನ್ನೇ ಮುಗಿಸಿಬಿಡುತ್ತಾಳೆ.

ಗೀತಾನಾಗಭೂಷಣ ಅವರ ಕಾದಂಬರಿಗಳು ಕಲಬುರ್ಗಿ ಪ್ರದೇಶದ ಅನೇಕ ಹಳ್ಳಿಗಳ ಸಾಮಾಜಿಕ, ರಾಜಕೀಯ ಜೀವನದ ಅನೇಕ ಮುಖಗಳನ್ನು ತೋರಿಸಲು ಸಾಧ್ಯವಾಗಿಲ್ಲವಾದರೂ ಮಿತಿಯಲ್ಲಿ ಸಾಮಾಜಿಕ ಸಂದರ್ಭದ ವಿದ್ಯಮಾನಗಳ ನೈಜ ಚಿತ್ರಗಳನ್ನೊಳಗೊಂಡಿವೆ. ಈ ಪ್ರದೇಶದ ಪರಿಸರವೊಂದು ಒಡೆದು ಕಾಣುವಂತೆ ಚಿತ್ರಿಸಿದ್ದಾರೆ. ಹೆಣ್ಣನ್ನೆ ಕೇಂದ್ರವಾಗಿಟ್ಟುಕೊಂಡರೂ, ಕೆಳವರ್ಗದ ಗಂಡಸರ ವ್ಯಕ್ತಿತ್ವಗಳನ್ನು ತೋರಿಸಿದ್ದಾರೆ. ಫ್ಯೂಡಲ್ ವ್ಯವಸ್ಥೆಯ ಕ್ರೂರತನವನ್ನು, ಕೆಳವರ್ಗದವರ ಅತಂತ್ರ ಸ್ಥಿತಿಯನ್ನು ಅನೇಕ ಘಟನೆಗಳಿಂದ ನಿರೂಪಿಸಿದ್ದಾರೆ. 'ಮಾಪೂರತಾಯಿ' ಎಂಬ ಗ್ರಾಮ ದೇವತೆಯನ್ನೂ ಫ್ಯೂಡಲ್‌ಗಳು ತಮ್ಮ ಹಿಡಿತದಲ್ಲಿಟ್ಟುಕೊಂಡು, ಸಂಪ್ರದಾಯ, ನಂಬಿಕೆಗಳ ಹೆಸರಿನಲ್ಲಿ ಹೆಣ್ಣುಗಳನ್ನು ಜೋಗಿಣಿಯರನ್ನಾಗಿ ಮಾಡಿ, ಅಂಥ ಜೋಗಿಣಿಯರನ್ನು ತಾವು ಭೋಗಿಸಿ ಬಿಡುವ ಅಮಾನವೀಯ ವ್ಯವಸ್ಥೆಯ ಚಿತ್ರಣ ಇವರ ಕಾದಂಬರಿಗಳಲ್ಲಿ ನೈಜವಾಗಿ ಮೂಡಿದೆ. ಬದುಕಿನುದ್ದಕ್ಕೂ ಜೋಗಿಣಿಯರು 'ತಾಯಿಯ ಸೇವೆ' ಎಂದು ಕಂಡ ಕಂಡವರಿಗೆ ಮೈ ನೀಡುತ್ತ ಬಾಳುವ ಬದುಕಿನ ಕ್ರಮ ಭಯಾನಕವೆನಿಸುತ್ತದೆ. 'ಧುಮ್ಮಸು' ಕಾದಂಬರಿಯಲ್ಲಿ ಸೋನಿಯ ತಂದೆ, ಸೀನಿಂಗ ಹೆಂಡತಿಯನ್ನು ಕಳೆದುಕೊಂಡು ಕೆಂಚಿಯೆಂಬ ಜೋಗಿಣಿಯನ್ನು ಕೂಡಿರುತ್ತಾನೆ. ದೈಹಿಕ ಹಸಿವು ಕಾಣಿಸಿದಾಗಲೆಲ್ಲ ಆ ಜೋಗಿಣಿಯ ಹತ್ತಿರ ಹೋಗಿ ಬರುತ್ತಾನೆ. ಇದು ಎಷ್ಟು ಸುಲಭವಾಗಿ ನಡೆಯುತ್ತಿತ್ತೆಂದರೆ ಹಸಿವಾದಾಗ ಉಂಡು ಹೊಟ್ಟೆ ತುಂಬಿಕೊಂಡಷ್ಟೇ ಸಲೀಸಾಗಿ ನಡೆಯತ್ತಿತ್ತು. ಇಂಥ ಸಂಬಂಧಗಳು ತೀರಾ ತಾತ್ಕಲಿಕ ಅನ್ನಿಸುತ್ತವೆ. ಯಾಕೆಂದರೆ ನೆಲೆಯಿಲ್ಲದ ಸೀನಿಂಗನ ಬದುಕಿನಲ್ಲಿ ಇಂಥ ಸಂಬಂಧಗಳಿಗೂ ನೆಲೆ ಇಲ್ಲದಿರುವುದು ಸಹಜ. ಅಸ್ತಿತ್ವ ಎಂಬುದನ್ನೇ ಅರಿಯದ ಕೆಳವರ್ಗದ ಬದುಕಿನ ಕ್ರಮವನ್ನು ಗೀತಾ ನಾಗಭೂಷಣರ ಕಾದಂಬರಿಗಳು ಹಿಡಿದಿವೆ. ಬದುಕನ್ನು ಕಟ್ಟಿಕೊಳ್ಳುವ ಕೆಳವರ್ಗದವರ ಎಲ್ಲ ಪ್ರಯತ್ನಗಳನ್ನು ವ್ಯವಸ್ಥಿತವಾಗಿ ಮುರಿಯುವ ಕೆಲಸವನ್ನು ವ್ಯವಸ್ಥೆ ನಿರಂತರವಾಗಿ ಮಾಡುತ್ತಲೆ ಇರುತ್ತದೆ. ನಿರಂತರ ಶೋಷಣೆಗೆ ಒಳಗಾಗುತ್ತ ಸಂಘರ್ಷದ ಒಡಲಲ್ಲೇ ಕೆಳವರ್ಗದವರು ಬದುಕಿನ ಸುಖವನ್ನೂ ಕಾಣುತ್ತಾರೆ.

ಈ ಕಾದಂಬರಿಗಳಲ್ಲಿ ಬರುವ ಹೆಣ್ಣುಗಳು ಬದುಕಿನಲ್ಲಿ ಎಷ್ಟೇ ನೋವುಂಡರೂ, ಅದರ ನಡುವೆ ಈ ನೆಲದ ಸುಖವನ್ನು ಅನುಭವಿಸಿದವರು. ತಾಯಿಯನ್ನು ಕಳೆದುಕೊಂಡ ಸೋನಿ ತಂದೆಯ ಒಡಲಲ್ಲಿ ಬೆಚ್ಚನೆಯ ಸುಖವನ್ನು ಅನುಭವಿಸಿದವಳು. ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡ ಚಿಕ್ಕಿ ತಾತನ ಮಡಿಲಲ್ಲಿ ಅರಳಿದವಳು. ಯಾರೂ ಇಲ್ಲದ ದುರುಗವ್ವ ತನ್ನ ಗೆಳತಿ ಚಂದ್ರಭಾಗಳ ಜತೆ ನೆಮ್ಮದಿಯುನ್ನು ಅನುಭವಿಸಿದವಳು. ಕೆಲವರು ಪಕ್ಕದ ಗುಡಿಸಲಲ್ಲಿರುವ ಮುದುಕ-ಮುದುಕಿಯ ಪ್ರೀತಿಯಲ್ಲಿ ಬದುಕುವ ಆಶೆಯನ್ನು ಹೆಚ್ಚಿಸಿಕೊಂಡವರು. ಈ ಹೆಂಗಸರು 'ಬದುಕು' ಮತ್ತು 'ಚಾರಿತ್ರ್ಯ' ಎರಡನ್ನು ಸಮಾನವಾಗಿ ನೆಚ್ಚಿಕೊಂಡು ಬಾಳಲು ಪ್ರಯತ್ನಿಸುತ್ತಾರೆ. ಉಳ್ಳವರ ಕಾಮಕ್ಕೆ ಬಲಿಯಾದಾಗ 'ಚಾರಿತ್ರ್ಯ'ವನ್ನು ಕಳೆದುಕೊಂಡರೂ, ಅದರಿಂದ ನೊಂದರೂ ಕೂಡ ಬದುಕನ್ನು ದೊಡ್ಡದೆಂದು ತಿಳಿದು ಪುನಃ ಅದನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾರೆ. ಇಂಥ ಹೆಂಗಸರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ತುಂಬಿದ್ದಾರೆ.ಇಂಥವರ ಚರಿತ್ರೆಯನ್ನೇ ಈ ಭಾಗದ ಕಥೆ-ಕಾದಂಬರಿಗಳು ಬಿಂಬಿಸಿವೆ. ಒಂಥರ್ಥದಲ್ಲಿ ಹೈದರಾಬಾದ್ ಕರ್ನಾಟಕದ fiction ಎಂದರೆ ಸ್ತ್ರೀಯರ ಕಥನಗಳು. ನಿರಂತರವಾಗಿ ಸಂಘರ್ಷದ ನೆರಳಿನಲ್ಲೆ ಬದುಕುವ ಹೆಣ್ಣಿನ ಗಾಥೆಯನ್ನೆ ಈ ಭಾಗದ ಲೇಖಕರು ಕಳೆದ ಐವತ್ತು ವರ್ಷಗಳಿಂದ ಬರೆಯುತ್ತಲೇ ಬಂದಿದ್ದಾರೆ. ಹಳೆ ಪೀಳಿಗೆಯ ಜತೆ ಹೊಸ ಪೀಳಿಗೆಯವರೂ ಮುಂದುವರೆಸಿದ್ದಾರೆ. ಸಮಾಜದ ಬೇರೆ ಬೇರೆ ವರ್ಗದಿಂದ ಬಂದ, ಬೇರೆ ಬೇರೆ ಸಿದ್ಧಾಂತ, ಚಳುವಳಿ, ಕಾಲಮಾನಗಳಿಗೆ ಸಂಬಂಧಿಸಿದ ಲೇಖಕರು ಕೂಡಾ ಹೆಚ್ಚು ಕಡಿಮೆ ಈ ವಾಸ್ತವ ಕಥೆಯ ಎಳೆ ಬಿಡಿಸುತ್ತ ಹೋಗಿದ್ದಾರೆ.

ಕೊರವರ ಸಮುದಾಯ ಎಂಬ ಲೋಕ

'ಕುರುಮಯ್ಯ ಮತ್ತು ಅಂಕುಶದೊಡ್ಡಿ' (ಜಂಬಣ್ಣ ಅಮರಚಿಂತ) ಕಾದಂಬರಿ, ಬುಡಕಟ್ಟಿಗೆ ಸೇರಿದ ಕೊರವ ಜನಾಂಗದ ಬದುಕನ್ನು ಕುರಿತದ್ದು. ಊರ ಹೊರಗೆ ತನ್ನ ಬದುಕನ್ನು ಕಟ್ಟಿಕೊಂಡು ಬದುಕುವ ಈ ಜನಾಂಗವು ಇಂದಿನ 'ಆಧುನಿಕ' ಯುಗದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಬಲವಾದ ವ್ಯವಸ್ಥೆಯಾಗಿರುವ ಫ್ಯೂಡಲಿಸಂ ಹಾಗೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸುರುವಾಗಿರುವ ರಾಜಕಾರಣದಲ್ಲಿ ತನ್ನ ಅಸ್ತಿತ್ವವನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬ ಬಿಕ್ಕಟ್ಟನ್ನು ಎದುರಿಸುತ್ತಿದೆ. ಬಹುತೇಕ ಬುಡಕಟ್ಟುಗಳ ಸ್ಥಿತಿ ಇದೇ ಆಗಿದೆ. ಯಾವುದೇ ಬುಡಕಟ್ಟು ತನ್ನದೇ ಆದ ಸಂಸ್ಕೃತಿಯನ್ನು ರೂಪಿಸಿಕೊಂಡಿರುತ್ತದೆ. ಅದರದೇ ಆದ ರೀತಿ-ನೀತಿ, ಸಂಪ್ರದಾಯ, ನಂಬಿಕೆಗಳನ್ನು ಒಳಗೊಂಡ ಜೀವನ ಕ್ರಮವನ್ನು ನಂಬಿಕೊಂಡಿರುವ ಅನೇಕ ಬುಡಕಟ್ಟುಗಳಿಗೆ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಈ ಹೊತ್ತಿನ ಸಮಾಜದಲ್ಲಿ ಅದರ ವಾಹಿನಿಗೆ ಹೊಂದಿಕೊಳ್ಳಲು ಹೆಣಗಾಡುತ್ತಿದೆ. ಬಹುದೀರ್ಘಕಾಲದಿಂದ ಎಲ್ಲೋ ಮರೆಯಾಗಿ ತಮ್ಮದೇ ಜೀವನಕ್ರಮವನ್ನು ಕಟ್ಟಿಕೊಂಡಿರುವ ಇವರಿಗೆ ನಾಗರಿಕತೆಯ ಗಾಳಿಯಿಂದ ಬದುಕಲು, ಅವರೇ ನಿರ್ಮಿಸಿಕೊಂಡ ಸಂಸ್ಕೃತಿಯಿಂದ ತೊಡಕಾಗಿದೆ. ಇದರಿಂದ ಈ ಬುಡಕಟ್ಟುಗಳು ಇಂದು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಜೀವಿಸಲು ಅಸಾಧ್ಯವಾಗಿದೆ. 'ನಾಗರಿಕ' ಬದುಕಿನ ಕ್ರಮಕ್ಕೆ ದಿನಕಳೆದಂತೆ ಹೊಂದಿಕೊಳ್ಳಲೇ ಬೇಕಾಗಿರುವುದರಿಂದ ಅನಿವಾರ್ಯವಾಗಿ ಅನೇಕ ಬುಡಕಟ್ಟು ಜನಾಂಗದವರು ತಮ್ಮ ಬದುಕಿನ 'ವ್ಯವಸ್ಥೆ'ಯ ಜತೆಗೇ ತಾತ್ವಿಕ ಸಂಘರ್ಷವನ್ನುಂಟು ಮಾಡಿಕೊಂಡಿವೆ. ಸಾಂಸ್ಕೃತಿಕ ಅನನ್ಯತೆ ಉಳಿಸಿಕೊಳ್ಳುವ ಜನಾಂಗಗಳು ಇಂದು ಸಂಕಷ್ಟದಲ್ಲಿವೆ. ಬೆಳೆಯುತ್ತಿರುವ ವೈಜ್ಞಾನಿಕತೆ, ಆಧುನಿಕತೆಯಿಂದ ಜಗತ್ತೆ ಒಂದು ಎನ್ನುವ 'ಜಾಗತೀಕರಣ' ಪ್ರಕ್ರಿಯೆಯಿಂದ ಏಕಮುಖ ಸಂಸ್ಕೃತಿ ರೂಪುಗೊಳ್ಳುತ್ತಿರುವ ಈ ಹೊತ್ತಿನ ಸ್ಥಿತಿಯಲ್ಲಿ ಮನುಷ್ಯ ಅನಿವಾರ್ಯವಾಗಿ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾದ ಅವಸ್ಥೆಯಲ್ಲಿದ್ದಾನೆಂದು ಅನ್ನಿಸುತ್ತದೆ. ಆದರೆ ಯಾವುದೂ ಸರಳವಾಗಿಲ್ಲ. ಭಾರತದಂಥ ಮೂರನೆಯ ಜಗತ್ತಿನ ದೇಶದಲ್ಲಿ ಬಂಡಿ ಮತ್ತು ವಿಮಾನ, ಬಳಪ ಮತ್ತು ಕಂಪ್ಯೂಟರ್ ಎರಡೂ ಅಸ್ತಿತ್ವದಲ್ಲಿವೆ. ಜಾಗತೀಕರಣಕ್ಕೆ ಹೊಂದಿಕೊಳ್ಳುವ ಕುಟುಂಬಗಳಿದ್ದಂತೆ, ಕುರುಮಯ್ಯನ ಗುಡಿಸಲುಗಳೂ ಜೀವಂತವಾಗಿವೆ.

ಮಾರೆಪ್ಪ ಕ್ಷಯರೋಗಿ. ನಿಶ್ಯಕ್ತಿಯಿಂದ ಬಳಲುವವನು. ಅವನಿಗೆ ಬುಡ್ಡಮ್ಮನೆಂಬ ಹರೆಯದ ಹೆಂಡತಿಯಿದ್ದಾಳೆ. ಅವಳಿಗೆ ದೈಹಿಕ ಸುಖ ಬೇಕು. ಅದನ್ನು ಪೂರೈಸುವ ಕಿಂಚಿತ್ ಶಕ್ತಿ ಮಾರೆಪ್ಪನಿಗಿಲ್ಲ. ಬುಡ್ಡಮ್ಮನಿಗೆ ದೈಹಿಕ ಸುಖ ನೀಡುವ ಜಂಬಯ್ಯನನ್ನು ಕೂಡುತ್ತಾಳೆ. ಇದು ಅವರ ಮಂದಿಗೆ ಸರಿಬರುವುದಿಲ್ಲ. ಹಿಡಿದು ತಂದು, ಅವರ ಹಿರಿಯನಾದ ಕುರುಮಯ್ಯನ ಮುಂದೆ ನಿಲ್ಲಿಸುತ್ತಾರೆ. ಕುರುಮಯ್ಯ ಅವರಿಬ್ಬರ 'ಅನೈತಿಕತೆ' ಬಗ್ಗೆ ನ್ಯಾಯ ನಿರ್ಣಯಿಸಲು ಯೋಚಿಸುತ್ತಾನೆ. ಈ ಕಾದಂಬರಿಯಲ್ಲಿ ಅಂಥ ಪ್ರಸಂಗವೊಂದಿದೆ. ಕೊರವರ ಜನಾಂಗದಲ್ಲಿ ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಕುರುಮಯ್ಯ ನ್ಯಾಯ ಬಗೆಹರಿಸಲು 'ಪಂಚಾಯ್ತಿ' ಸೇರಿಸುತ್ತಾನೆ.

ವಾಸ್ತವ ಸಂಗತಿಯೆಂದರೆ ಕೊರವರಿಗೆ ಈ ಪ್ರಸಂಗದಲ್ಲಿ ಯಾರದು ಸರಿ ಯಾರದು ತಪ್ಪು ಎಂಬುವುದು ಗೊತ್ತಿದ್ದರೂ ಅವರೇ ಕಟ್ಟಿಕೊಂಡಿರುವ 'ವ್ಯವಸ್ಥೆ'ಗೆ ಅನುಗುಣವಾಗಿ ನಡೆದುಕೊಳ್ಳುವುದು ಧರ್ಮದ ಪ್ರಶ್ನೆಯಾಗಿದೆ. ಅಶಕ್ತ ಮಾರೆಪ್ಪನಿಂದ ಬುಡ್ಡಮ್ಮನಿಗೆ ಮೂಲಭೂತವಾದ ದೈಹಿಕ ಸುಖವನ್ನು ನೀಡಲಾಗದ ಕಾರಣ ಅವಳು ಜಂಬಯ್ಯನನ್ನು ಆಶ್ರಯಿಸಿದ್ದಳೆಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಆದರೆ ಅದು ಅನೈತಿಕತೆ. ಅದನ್ನು ಗಂಡನಾದ ಮಾರೆಪ್ಪನಿಗೆ ಸಹಿಸಲು ಅಸಾಧ್ಯವಾಗುತ್ತದೆ. ಇದು ಕೊರವರ ಮುಖಂಡ ಕುರುಮಯ್ಯನನ್ನು ಧರ್ಮಸಂಕಟಕ್ಕೆ ತಳ್ಳುತ್ತದೆ. ಯಾಕೆಂದರೆ ಇಂಥದೇ ಪ್ರಸಂಗವೊಂದು ತನ್ನ ಬದುಕಿನಲ್ಲೇ ಕಂಡು ಅನುಭವಿಸಿದ್ದ. ಕುರುಮಯ್ಯನಿಂದ ಕೇವಲ ಇನ್ನೂರು ರೂಪಾಯಿ ಸಾಲ ಪಡೆದ ಬಡಣ್ಣನಿಗೆ ಮರಳಿ ಸಾಲ ತೀರಿಸಲಾಗದ್ದಕ್ಕೆ, ಸಾಲದ ಬದಲು ತನ್ನ ಹೆಂಡತಿಯನ್ನೇ ಕುರುಮಯ್ಯನಿಗೆ ಮಾರಿ ಹೋಗಿದ್ದ. ವಯಸ್ಸಾದ ಕುರುಮಯ್ಯನಿಗೆ ಬಂದವಳನ್ನು ನಿಭಾಯಿಸಲಾಗುವುದಿಲ್ಲ. ಅವಳು ನಿಭಾಯಿಸುವವನನ್ನು ಹುಡುಕಿಕೊಂಡು ಹೋಗಿಬಿಟ್ಟಿದ್ದಳು. ಈಗ ಕುರುಮಯ್ಯ ಯಾರ ಪರ ನ್ಯಾಯ ನಿರ್ಣಯಿಸಬೇಕು? ಎಂಬ ಪ್ರಶ್ನೆ ಉದ್ಭವಿಸಿದರೂ ಅದು ವ್ಯಕ್ತಿಗತವಾಗಿತ್ತೇ ಹೊರತು 'ಪಂಚಾಯ್ತಿ'ಗಲ್ಲ. ಕೂಡಿದ 'ಪಂಚಾಯ್ತಿ' ಕೊರವರ 'ವ್ಯವಸ್ಥೆ'ಯ ಪ್ರಕಾರ, ಬುಡ್ಡಮ್ಮನನ್ನು ಜಂಬಯ್ಯನಿಗೆ ಇನ್ನೂರು ರೂಪಾಯಿಗೆ ಮಾರಲಾಗುತ್ತದೆ. ಕೊಂಡುಕೊಂಡ ಜಂಬಯ್ಯ, ಮಾರೆಪ್ಪನಿಗೆ ಇನ್ನೂರು ರೂಪಾಯಿ ಕೊಡಬೇಕು. ನೆರೆದ 'ಪಂಚಾಯ್ತಿ'ಗೆ ನಾಷ್ಟ ಮತ್ತು ಹೆಂಡ ಒದಗಿಸಬೇಕು.

ಕೊರವರ ಜನಾಂಗದಲ್ಲಿ ಬೇಡವಾದ ಹೆಂಡತಿಯನ್ನು ಗಂಡ ಮಾರಬಹುದು. ಈ ಪದ್ಧತಿ ಅವರ ಸಂಸ್ಕೃತಿಯಲ್ಲಿದೆ. ಇಂಥ ವಾಸ್ತವ ಸಂಗತಿ ಈ ಕಾದಂಬರಿಯಲ್ಲಿ ಮೂಡಿ ನಿಂತಿದೆ. ಈ ಹೊತ್ತಿನ ಸಂದರ್ಭದಲ್ಲಿ ಹೊರ ಜಗತ್ತಿನ ಅರಿವನ್ನು ಬಲ್ಲವರಾದ ಕೊರವರು ಇಂಥ 'ಭಯಾನಕ' ಪದ್ಧತಿಯನ್ನು ಉಳಿಸಿಕೊಂಡು ಬಂದಿದ್ದಾರೆ! ಹೆಂಗಸಿಗೆ ಈ ಬಗೆಯ ಶೋಷಣೆ, ಇದು ಜೀವ ವಿರೋಧಿ ನಿಲುವು ಎಂಬುದನ್ನು ತನ್ನದೇ ಆದ ನಿಲುವಿನಲ್ಲಿ ಚಿಂತಿಸುವ ಕುರುಮಯ್ಯನಿಗೆ ದುಃಖವಿದೆ. ಆದರೆ ತನ್ನ ಸಂಸ್ಕೃತಿಯಲ್ಲಿರುವ ಈ ವ್ಯವಸ್ಥೆಯನ್ನು ಮುರಿಯಲು ಅವನಿಗಾಗಲಿ, ಅವನ ಮಂದಿಗಾಗಲಿ ಸಾಧ್ಯವಾಗಿಲ್ಲ. ಅವನ ಹೆಂಡತಿ ಹನುಮವ್ವ, 'ಹೆಂಗಸಾಗಿ ಹುಟ್ಟಬಾರ್ದು, ಹುಟ್ಟಿದ್ರೆ ಸೈತ ಕೊರವರ ಮಂದ್ಯಾಗ ಹುಟ್ಟಬಾರದು' ಎಂಬ ಅರಿವನ್ನು ಪಡೆದಿದ್ದಾಳೆ. ಅವಳ ಈ ಮಾತಿನಲ್ಲಿ ಕೊರವರ ಹೆಂಗಸಿನ ಚರಿತ್ರೆಯೇ ಅಡಗಿದೆ. ಮಾರೆಪ್ಪ ಬುಡ್ಡಮ್ಮನಿಗೆ ದೈಹಿಕ ಸುಖವನ್ನು ನೀಡದೇ ಅಸಮಾಧಾನ ಮಾಡಿರುತ್ತಾನೆ. ಅವಳನ್ನು ಮಾರಿ ನೋವು ನೀಡುತ್ತಾನೆ. ಹಾಲು ಕುಡಿವ ಮಗುವನ್ನು ಅವಳಿಂದ ಕಿತ್ತುಕೊಂಡು ಸಂಕಟಕ್ಕೀಡುಮಾಡುತ್ತಾನೆ. ಜಂಬಯ್ಯ ಅವಳನ್ನು ಕೊಂಡುಕೊಂಡ ಮೇಲೆ ತನ್ನ ಬೇಜವಾಬ್ದಾರಿಯಿಂದ ಮಾಡಿದ ಸಾಲಗಳಿಗೆ, ಅವಳ ಕಾಲಗುಣ ಚೆನ್ನಾಗಿಲ್ಲವೆಂದು ಹೊಡೆದು ಕಿರುಕುಳ ಕೊಟ್ಟು ಕೊನೆಗೆ ಮತ್ತೊಬ್ಬ ಮುದುಕ ತಾಯಪ್ಪನಿಗೆ ಮಾರಿಬಿಡುತ್ತಾನೆ. ಅವನು ಕೊಡುವ ಕಷ್ಟಗಳನ್ನು ತಡೆದುಕೊಳ್ಳಲು ಬಯಸುತ್ತಾಳೆಯೇ ಹೊರತು ಬುಡ್ಡಮ್ಮ ಮತ್ತೊಬ್ಬನ ಹೆಂಡತಿಯಾಗಿ ಹೋಗಲು

ಬಯಸುವುದಿಲ್ಲ. ಅಸ್ತಿತ್ವವಿಲ್ಲದ ತನ್ನ ಬದುಕನ್ನು ತಾನೇ ಬಯ್ದುಕೊಂಡು, ಮೊದಲ ಗಂಡನಲ್ಲಿದ್ದ ತನ್ನ ಮಗುವನ್ನು ಕದ್ದುಕೊಂಡು ಅದರ ಜತೆಗೆ ಸಾಯುತ್ತಾಳೆ. ಇದು ಕೊರವರ ಹೆಂಗಸಿನ ಬವಣೆ. ಬುಡ್ನಮ್ಮನ ಹೆಣ ಬಿದ್ದಿರುತ್ತದೆ. ಆದರೆ ಅದಕ್ಕೆ ಯಾರು ವಾರಸುದಾರರು? ಮೊದಲ ಗಂಡ ಮಾರೆಪ್ಪನಲ್ಲ. ಎರಡನೆಯ ಗಂಡ ಜಂಬಯ್ಯನಲ್ಲ. ಯಾಕೆಂದರೆ ಅವನು ಅವಳನ್ನು ತಾಯಪ್ಪನಿಗೆ ಮಾರಿಬಿಟ್ಟಿದ್ದಾನೆ. ಕೊಂಡುಕೊಂಡಿದ್ದರೂ ತನ್ನ ಕೈಯಿಗೆ ಬಾರದ ಅವಳಿಗೆ ತಾಯಪ್ಪನೂ ಜವಾಬ್ದಾರನಲ್ಲ. ದುರಂತವೆಂದರೆ ಬುಡ್ನಮ್ಮ ಸತ್ತದ್ದಕ್ಕೆ ಯಾರೂ ಪಶ್ಚಾತ್ತಾಪ ಪಡುವುದಿಲ್ಲ. ಮೂರು ಜನ ಗಂಡಂದಿರು ತಮ್ಮ ವೈಯಕ್ತಿಕ ತೊಡಕುಗಳ ಬಗ್ಗೆ ಚಿಂತೆಗೀಡಾಗಿದ್ದರು. ಆದರೆ ಬುಡ್ನಮ್ಮ ಬದುಕಿದ್ದಾಗ, ಜಂಬಯ್ಯನ ಹೆಂಡತಿಯಾಗಿದ್ದುಕೊಂಡೇ, ಮಾರೆಪ್ಪನ ಒಂಟಿ ಬದುಕಿನ ಬಗ್ಗೆ ಮಿಡುಕಿದ್ದಳು. ಅವನು ಹಸಿವು ತಾಳದೆ ಮಾದರ ಕೇರಿಯಲ್ಲಿ ಭಿಕ್ಷೆ ಬೇಡಿದ್ದಕ್ಕೆ ಕೊರವರು 'ಪಂಚಾಯ್ತಿ' ಸೇರಿ ಅವನಿಗೆ ಬಹಿಷ್ಕಾರ ಹಾಕುವ ನಿಲುವಿಗೆ ಬಂದಾಗ ಕಣ್ಣೀರು ಸುರಿಸಿದ್ದಳು. ತನ್ನ ಮಗು ಅವನಲ್ಲಿದ್ದರೂ ಕದ್ದು ಹೋಗಿ ಮೊಲೆ ಉಣಿಸಿ ಬರುತ್ತಿದ್ದಳು. ಎರಡನೆಯ ಗಂಡ ಜಂಬಯ್ಯ ಸಾಲ ಮಾಡಿ ತೊಂದರೆಪಡುವುದನ್ನು ಕೇಳಿ ಮರುಗುತ್ತಿದ್ದಳು. ದುಡಿದು ಸಂಸಾರಕ್ಕೆ ನೆರವಾಗುತ್ತಿದ್ದಳು. ಇಂಥ ಹೆಂಗಸಿನ ಶೋಷಣೆಯು ಕೇವಲ ಕೊರವ ಜನಾಂಗದಲ್ಲಿ ಮಾತ್ರವಿಲ್ಲ. ಬೇರೆ ಬೇರೆ ಸ್ವರೂಪದಲ್ಲಿರುತ್ತದೆ.

ಕುರುಮಯ್ಯನಿಗೆ ತನ್ನ ಸಮುದಾಯದಲ್ಲಿ ಇಂಥ ಪದ್ಧತಿ ಇರುವ ಬಗ್ಗೆ ಅಸಮಾಧಾನ ಇದೆ. ಆದರೆ ಅದನ್ನು ಧಿಕ್ಕರಿಸುವ ನಿಲುವಿಗೆ ಬರಲು ಆಗದೆ ಸಂದಿಗ್ಧತೆಯಲ್ಲಿ ನರಳುತ್ತಾನೆ. ಬುಡ್ನಮ್ಮ ತನ್ನ ಬದುಕಿನ ಬಗ್ಗೆ ಜಿಗುಪ್ಸೆ ಪಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡು ಸತ್ತರೆ, ಅದೇ ಮಂದಿಯ ತಾಯೇರಿ ಎಂಬ ಹೆಂಗಸು ಧೈರ್ಯದಿಂದ ಪ್ರತಿಭಟಿಸುತ್ತಾಳೆ. ಮುದುಕನೊಬ್ಬನಿಗೆ ಮದುವೆ ಮಾಡಿಕೊಡಲು ನಿಂತಾಗ, ಅದೇ ಕೇರಿಯ ಕಳ್ಳತನ ಮಾಡುತ್ತಿದ್ದ ಹುಡುಗನೊಂದಿಗೆ ಓಡಿಹೋಗುತ್ತಾಳೆ. ಕೊರವರೆಲ್ಲ ಅವನನ್ನು ಬಹಿಷ್ಕರಿಸಿ ಬಿಟ್ಟಿದ್ದರೂ ಅವನನ್ನೇ ಪ್ರೀತಿಸಿ, ಕೇರೆಯ ಮಂದಿಯ ಜತೆ ಹೋರಾಡಿ ತಪ್ಪಿಸಿಕೊಂಡು ಹೋಗಿರುತ್ತಾಳೆ. ಇದನ್ನು ಕಂಡ ಕುರುಮಯ್ಯ ಚಿಂತಿಸುತ್ತಾನೆ. ತಾಯೇರಿ ಮಾಡಿದ್ದು ಸರಿ ಎಂದು ಒಳಗೊಳಗೆ ಸಮಾಧಾನ ಪಡುತ್ತಾನೆ. ಇತ್ತ ಬುಡ್ನಮ್ಮ ಸತ್ತಾಗಲೂ ಮರುಗುತ್ತಾನೆ. ಅತ್ತ ಮಾರೆಪ್ಪನ ಕಷ್ಟವನ್ನು ಕಂಡು ಹಲಬುತ್ತಾನೆ. ಸ್ವತ: ತನ್ನ ಮಗ ಓದಲು ಹೋಗಿ ಮರಳಿ ಹಟ್ಟಿಗೆ ಬರದೆ ಪಾದ್ರಿಯ ಹುಡುಗಿಯನ್ನು ಮದುವೆಯಾದ ಸುದ್ದಿ ಕೇಳಿ ಮಕ್ಕಳಂತೆ ಅಳುತ್ತಾನೆ. ಆದರೆ ಹೆಂಡತಿ ಸಮಾಧಾನಿಯಾಗಿ ಗಂಡನಿಗೆ ಧೈರ್ಯ ಹೇಳುತ್ತಾಳೆ. ತನ್ನ ಕಣ್ಣಮುಂದೆ ತನ್ನ ಕುಲದವರು 'ವ್ಯವಸ್ಥೆ' ಯನ್ನು ಮೀರಿ ಹೋದಾಗ ದು:ಖದಿಂದಲೂ, ಬೆರಗಿನಿಂದಲೂ ನೋಡುತ್ತಾನೆ. ಬುಡ್ನಮ್ಮ ಸತ್ತಮೇಲೆ ಅವಳ ಎರಡನೆಯ ಗಂಡ ಜಂಬಯ್ಯ ಒಂಟಿಯಾದದ್ದನ್ನು ನೋಡಿ, ಕೇರಿಯ ಮಂಗಮ್ಮಳನ್ನು ಅವನಿಗೆ ಕೊಟ್ಟು ಮದುವೆ ಮಾಡಿಕೊಳ್ಳಲು ಹೇಳಿ, ಅವಳನ್ನು ಮಾರಬಾರದೆಂದು ನಿರ್ಬಂಧ ಹಾಕುತ್ತಾನೆ. ಆದರೆ ಮದುವೆಗೆ ಮುನ್ನವೇ ಮಂಗಮ್ಮ ತನ್ನನ್ನು ಅನ್ಯರಿಗೆ ಮಾರಿಕೊಳ್ಳಲು ನಿಂತುಬಿಡುತ್ತಾಳೆ. ತನ್ನವರ ಬದುಕನ್ನು ಕಟ್ಟಲು ನೋಡಿದಂತೆ ಅದು ಕಾಲದ ಹೊಡೆತಕ್ಕೆ ಒಡೆದು ಹೋಗುತ್ತಲೇ ಇರುತ್ತದೆ.

ಕೊರವರು ತಮ್ಮ ಬದುಕಿಗೆ ಸಂಬಂಧಿಸಿದಂತೆ ಎರಡು ಬಗೆಯಲ್ಲಿ ಸಂಘರ್ಷಕ್ಕೆ ಒಳಗಾದಂತೆ ಕಾಣುತ್ತದೆ. ಒಂದು, ತಮ್ಮ ಬದುಕಿನ ರೀತಿ-ನೀತಿ ಸಂಪ್ರದಾಯ ಸಂಸ್ಕೃತಿಗಳ ಜತೆ ಒಂದು ಬಗೆಯಲ್ಲಿ ತಾತ್ವಿಕ ಸಂಘರ್ಷಕ್ಕೆ ಒಳಗಾದರೆ, ಇನ್ನೊಂದು ಬಗೆಯಲ್ಲಿ ತಮ್ಮ ಹೊಟ್ಟೆಪಾಡಿಗಾಗಿ ಅನ್ಯರನ್ನು ಅವಲಂಬಿಸಿರುವದರಿಂದ ಹೊರ ಜಗತ್ತಿನ ಶಕ್ತಿಗಳ ಜತೆ ಸಂಘರ್ಷಕ್ಕೆ ನಿಂತಿರುವುದು ಕಾಣುತ್ತದೆ. ಕುರುಮಯ್ಯನ ಮಗ ಮತ್ತು ಕೇರಿಯ ತಾಯೇರಿ ತಮ್ಮ ವ್ಯವಸ್ಥೆಯನ್ನು ಮೀರಿ ಹೋದರು. ಆದರೆ ಕೊರವರನ್ನು ಅಧೀನ ಪಡಿಸಿಕೊಂಡ ಕುಶಾಲಪ್ಪನಂಥ ಹೊರ ಶಕ್ತಿಯನ್ನು ಮೀರಿ ಹೋಗಲು ಉಳಿದವರಿಗೆ ಅಸಾಧ್ಯವಾಗಿದೆ. ಈ ಹೊರಗಿನ ಶಕ್ತಿಗಳನ್ನು ಗೆಲ್ಲಬೇಕಾದರೆ ಕೊರವರಿಗೆ 'ಅಕ್ಷರ ಶಕ್ತಿ' ಬೇಕೆನಿಸುತ್ತದೆ. ಅಲ್ಪಸ್ವಲ್ಪ ಕಲಿತ ಮಗ ಕೇರಿಗೆ ಮರಳಿ ಬರಲಿಲ್ಲ.

ಉಳಿದಂತೆ ಕೇರಿಯಲ್ಲಿರುವವರೆಲ್ಲ 'ಅಕ್ಷರ' ಕ್ಕೆ ಸಾವಿರ ಮೈಲು ದೂರದಲ್ಲಿದ್ದಾರೆ. ಆದರೂ ಸಮಾಜದಲ್ಲಿ ಬದುಕುವ ಅನಿವಾರ್ಯತೆಯನ್ನು ಉಳಿಸಿಕೊಂಡಿದ್ದಾರೆ.

ಕುಶಾಲಪ್ಪನ ತಂದೆ ರಜಾಕಾರರ ದಾಳಿಗೆ ಸಿಕ್ಕ ಸಮಯದಲ್ಲಿ ಕುರುಮಯ್ಯ ಮತ್ತು ಅವನ ಮಂದಿಯೆಲ್ಲ ಕೂಡಿ ಅಡಗಿಸಿಟ್ಟು ಉಳಿಸಿರುತ್ತಾರೆ. ಈ ಉಪಕಾರಕ್ಕೆ ಪ್ರತಿಯಾಗಿ ಆತ ಕೊರವರಿಗೆ ಇರಲು ಅನುಕೂಲವಾದ ಸ್ಥಳ ಮತ್ತು ನೀರಿಗಾಗಿ ಝರಿಬಾವಿ ಕೊಟ್ಟಿರುತ್ತಾನೆ. ಈ ಸಂಬಂಧದ ಮೇಲೆ ಕುಶಾಲಪ್ಪನ ಜತೆಯೂ ಕೊರವರ ಕೊಡು-ಕೊಳೆ ನಡೆದಿರುತ್ತದೆ. ಕೊರವರ ಮೂಲ ಕಸಬು ಹಂದಿ ಸಾಕುವುದು, ಬುಟ್ಟಿ ಹೆಣೆಯುವುದು. ಇದರ ಮೇಲೆ ಅವರ ಜೀವನ ಸಾಗಿದ್ದರೂ, ಕಾಲದ ವೈಪರೀತ್ಯದಿಂದ ಹಲವಾರು ಸಲ ಬೇರೆ ಕೆಲಸಗಳನ್ನು ಮಾಡಿ ಹೊಟ್ಟೆಹೊರೆಯ ಬೇಕಾಗುತ್ತಿತ್ತು. ಇಂಥ ಪ್ರಸಂಗದಲ್ಲಿ ಕೊರವರು ಕುಶಾಲಪ್ಪನನ್ನು ಅವಲಂಬಿಸಿದ್ದರು. ಕುಶಾಲಪ್ಪನಿಗೆ ಕೊರವರಿಂದ ಸಾಕಷ್ಟು ಲಾಭವಿತ್ತು. ಕೊರವರಿಂದ ಹಂದಿ ಗೊಬ್ಬರವನ್ನು ಕಡಿಮೆ ಬೆಲೆಗೆ ಕೊಂಡು, ಅದನ್ನು ಆಂಧ್ರದ ರೈತರಿಗೆ ಬಹಳ ಬೆಲೆಗೆ ಮಾರುತ್ತಿದ್ದ. ಇದನ್ನು ಕುಶಾಲಪ್ಪನು ಒಂದು ವ್ಯಾಪಾರದಂತೆ ಮಾಡಿಕೊಂಡಿದ್ದ. ಅವನು ಲಾಭಗಳಿಸುವುದು ಕುರುಮಯ್ಯನಿಗೆ ಗೊತ್ತಿದ್ದರೂ, ತಾವಿರುವ ಸ್ಥಳ ಮತ್ತು ಜೀವನಾಧಾರವಾದ ಝರಿಬಾವಿ ಕುಶಾಲಪ್ಪನದೇ ಆಗಿರುವುದರಿಂದ ಸುಮ್ಮನಿರುತ್ತಿದ್ದರು. ಆದರೂ ಕುಶಾಲಪ್ಪನ ನೀತಿಯಿಂದ ಕೊರವರು ಬೇಸತ್ತಿದ್ದರು. ಕುಶಾಲಪ್ಪನ ದಾಯಾದಿಯಾದ ಸಂಶಾಲಪ್ಪನಿಗೆ ಕುಶಾಲಪ್ಪನನ್ನು ಬಗ್ಗು ಬಡಿಯಲು ಕೊರವರೇ ಅಸ್ತ್ರಗಳಾದರು. ಅವರ ಹಂದಿ ಗೊಬ್ಬರದ ಬೆಲೆ ಏರಿಸಿ ಸಂಶಾಲಪ್ಪ ಕೇಳಿದ. ಕೊರವರು ಸಂದಿಗ್ಧದಲ್ಲಿ ಬಿದ್ದರು. ಧೈರ್ಯ ಮಾಡಿ ಸಂಸಾಲಪ್ಪನಿಗೆ ಹಂದಿಗೊಬ್ಬರ ಮಾರಿದರು. ಕುಶಾಲಪ್ಪನ ಬಾಡಿಗೆ ಗೂಂಡಾಗಳಿಂದ ಹಲ್ಲೆಗೆ ಒಳಗಾಗಿ ಬದುಕನ್ನು ಅಸ್ತವ್ಯಸ್ತ ಮಾಡಿಕೊಂಡರು. ಇಲ್ಲಿಂದ ಉಳ್ಳವರ ಪೈಪೋಟಿ ನಡುವೆ ಕೊರವರು ದಾಳಗಳಾಗಿ ಹೋದರು. ಕುಶಾಲಪ್ಪನನ್ನು ಬಗ್ಗು ಬಡಿಯಲು ನಿಂತ ಸಂಶಾಲಪ್ಪನಿಗೆ ಯಂಕನಗೌಡ ಬೆಂಬಲ ನೀಡಿದ. ಕೊರವರನ್ನು ಕುಶಾಲಪ್ಪನ ಮೇಲೆ ಪೊಲೀಸ್ ಕೇಸ್ ಮಾಡಿಸಿ, ಕೋರ್ಟ್‌ಗೆ ಎಳಸಿ ಕುಶಾಲಪ್ಪನನ್ನು ಹತ್ತಿಕ್ಕಿದರು. ಇದರಿಂದ ಕುರುಮಯ್ಯನೇ ದಣಿದಿದ್ದ. ಯಂಕನಗೌಡನಿಗೆ ಕುರುಮಯ್ಯನಿರುವ ಸ್ಥಳದ ಮೇಲೆ ಕಣ್ಣಿತ್ತು. ಅದನ್ನು ಪಡೆಯಲು ಉಪಾಯ ಮಾಡಿ, ಹಂದಿಗಳಿಂದ ರೋಗ ಹರಡುತ್ತದೆಯೆಂದು ಸುದ್ದಿ ಹಬ್ಬಿಸಿ, ಹಂದಿಗಳನ್ನು ಕೊಲ್ಲಿಸಲು ತೊಡಗಿದ. ಜೊತೆಗೆ ಹಂದಿಗಳಿರುವ ಹಟ್ಟಿಯಿಂದ ಕುರುಮಯ್ಯನನ್ನು ಓಡಿಸಲು ಪ್ರಯತ್ನಿಸಿ ಯಶಸ್ವಿಯಾದರು. ಕುರುಮಯ್ಯನಿರುವ ಸ್ಥಳದಲ್ಲಿ ಹೆಂಡದ ಡಿಪೋ ಮಾಡಿಕೊಂಡ ಯಂಕನಗೌಡ ನಗರದ ದೊಡ್ಡ ರಾಜಕಾರಣಿಯಾಗಿ ಮಾರ್ಪಟ್ಟ. ಹೀಗೆ ಕುರುಮಯ್ಯ ಮತ್ತು ಅವನ ಮಂದಿ ಉಳ್ಳವರ ಸ್ವಾರ್ಥಕ್ಕೆ ಬಲಿಯಾಗಿ ಬದುಕನ್ನು ಕೆಡಿಸಿಕೊಂಡರು. ಹೊಟ್ಟೆಪಾಡಿಗಾಗಿ ಅವನ ಮಂದಿಯೇ ಕೆಲವರು ಪಿತೂರಿ ಮಾಡಿ ಅವನಿಗೆ ಮುಳುವಾದರು. ಒಟ್ಟಾಗಿ ಸಮಸ್ಯೆಯನ್ನು ಎದುರಿಸಲು ದುರ್ಬಲರಾಗುತ್ತಾರೆ.

ಕುಶಾಲಪ್ಪ ಯಂಕನಗೌಡನ ದೌರ್ಜನ್ಯಕ್ಕೆ ಒಳಗಾದ ಸಮಯದಲ್ಲೇ ಕುರುಮಯ್ಯ ಮತ್ತು ಅವನ ಮಂದಿ ಒಮ್ಮೆ ಮಳೆಗೆ ಸಿಕ್ಕು ಆಶ್ರಯ ಪಡೆಯಲು ಪಕ್ಕದ ಬೆಟ್ಟದ ಮೇಲಿರುವ ಗುಡಿ ಸೇರುತ್ತಾರೆ.ಅಲ್ಲೇ ಮಾರೆಪ್ಪ ಸಾಯುತ್ತಾನೆ. ಅನಿವಾರ್ಯದಿಂದ ಅಲ್ಲೇ ಉಳುತ್ತಾರೆ. ಗುಡಿಯಲ್ಲಿ ಅನುಭಾವಿಯಂತಿದ್ದ ಒಬ್ಬ ಸಾಧು ಅವರಿಗೆ ಆಶ್ರಯ ನೀಡುತ್ತಾನೆ. ಅದನ್ನು ಕಂಡ ಪೂಜಾರಿ ಊರಲ್ಲಿ ಗುಡಿ ಮೈಲಿಗೆಯಾದದ್ದನ್ನು ದೊಡ್ಡ ಸುದ್ದಿಯನ್ನಾಗಿ ಮಾಡಿ, ಊರ ಜನರಿಂದ ಕೊರವರಿಗೆ ಆಪತ್ತು ಒದಗುವಂತೆ ಮಾಡುತ್ತಾನೆ. ಈ ಸಂದರ್ಭದಲ್ಲಿ ಕುರುಮಯ್ಯ, 'ಅಲೇ ಬೆಟ್ಟದ ಮ್ಯಾಗಿನ ಈಶ್ವರ ದ್ಯಾವ್ರೇ ಮೇಲ್ಜಾತಿ ಮುಂದೆಲ್ಲ ನಿನ್ನ ಹೇಣ್ತಿ ಮಕ್ಕಳೇನು? ನಾವೆಲ್ಲ ಮಿಂಡ್ರಗುಟ್ಟಿದ ಮಕ್ಕಳೇನು?' ಎಂದು ಆಕ್ರೋಶಗೊಂಡು ಕಲ್ಲು ತೂರುತ್ತಾನೆ. ಮೇಲ್ವರ್ಗದ ವ್ಯವಸ್ಥೆಯನ್ನು ಎದುರಿಸಲಾರದೆ ಕುರುಮಯ್ಯ ಅಸಹಾಯಕನಾಗಿ ಉಳಿಯುತ್ತಾನೆ. ಕಾದಂಬರಿಯಲ್ಲಿ ಕೊನೆಗೆ ಅವರ ಕಸುಬಾದ ಬಿಜಲಿ ಹೊರುವ

ದೃಶ್ಯ ಬರುತ್ತದೆ. ಕೊರವರನ್ನು ಶೋಷಣೆ ಮಾಡಿದ ಯಂಕನಗೌಡನ ಮೆರವಣಿಗೆಯಲ್ಲಿ ಬಿಜಲಿ ಹೊರುವ ದೃಶ್ಯವದು. ಬೆಳಕು ಹೊತ್ತು ಅನ್ಯರಿಗೆ ದಾರಿ ಮಾಡಿಕೊಡುವ ಕೊರವರು ಮಾತ್ರ, ಹೊತ್ತ ಬಿಜಲಿಯ ಅಡಿಯಲ್ಲಿದ್ದ ಕತ್ತಲಲ್ಲಿ ಕತ್ತಲಾಗಿ ನಡೆಯುವ ಸ್ಥಿತಿ ಅವರಿಗೆ ಒದಗುತ್ತದೆ. ಕೊರವರ ಅವಸ್ಥೆಯ ವಾಸ್ತವ ಚಿತ್ರಣ ಈ ಕಾದಂಬರಿಯಲ್ಲಿದೆ. ಈ ಹೊತ್ತಿನ ಸಾಮಾಜಿಕ ಸಂದರ್ಭದಲ್ಲಿ ಇಂಥ ಬುಡಕಟ್ಟು ಜನಾಂಗದವರು ಉದ್ಭವಿಸಿದ ಬಿಕ್ಕಟ್ಟುಗಳನ್ನು ಎದುರಿಸಿ ಬದುಕುವ ತಮ್ಮದೇ ಆದ ನೆಲೆಯನ್ನು ಕಂಡುಕೊಳ್ಳುತ್ತಿವೆ. ಬಹುದೀರ್ಘಕಾಲ ಯಾವುದನ್ನು ನಂಬಿಕೊಂಡಿದ್ದರೋ ಅದು ಬದಲಾದ ಸಂದರ್ಭದಲ್ಲಿ ಉಳಿಸಿಕೊಳ್ಳಲು ಅಸಹಾಯಕರಾದರೂ ಬದಲಾದ ಸಂದರ್ಭಕ್ಕೆ ಹೊಂದಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಿದ್ದಾರೆ.

ಲಮಾಣಿ ಸಮುದಾಯದ ಅವಸ್ಥೆ

'ಗತಿ' (ಬಿ.ಟಿ.ಲಲಿತಾನಾಯಕ) ಕಾದಂಬರಿ ಕೂಡ ಲಮಾಣಿ ಬುಡಕಟ್ಟು ಜನಾಂಗದವರನ್ನು ಕುರಿತದ್ದು. ಲಮಾಣಿ ಜನರು ಕೂಡ ಊರ ಹೊರಗೆ ಬದುಕುವವರು. ನಿರ್ದಿಷ್ಟವಾದ ಕುಲದ ಕಸುಬು ಯಾವುದೆಂದು ತಿಳಿಯದಿದ್ದರೂ ಈಗ ಕಟ್ಟಿಗೆ ತಂದು ಮಾರುವುದು ಮತ್ತು ಇತರರಂತೆ ಕೂಲಿ ಮಾಡಿ ಬದುಕುವುದು ಕಾಣುತ್ತದೆ. ಹೆಣ್ಣಿನ ಸ್ಥಾನಮಾನದ ವಿಷಯದಲ್ಲಿ ಕೊರವರ ಜನಾಂಗದವರಿಗಿಂತ ಭಿನ್ನವಿಲ್ಲ ಎನ್ನಿಸುತ್ತದೆ. ಲಂಬಾಣಿ ಜನಾಂಗದಲ್ಲಿ ಗಂಡಸರಿಗೆ ಮನೆ, ಹೆಂಡತಿ, ಮಕ್ಕಳು ಸಂಸಾರದ ಯಾವ ಜವಾಬ್ದಾರಿಯೇ ಇಲ್ಲವೆಂದು ಕಾಣುತ್ತದೆ. ಅದೆಲ್ಲವನ್ನು ಹೆಂಗಸಿಗೆ ಬಿಟ್ಟುಕೊಟ್ಟದ್ದೂ ಅಲ್ಲದೆ ಅವಳ ಮೇಲೆ ಅಧಿಕಾರ ಸ್ಥಾಪಿಸಿಕೊಂಡಿರುವುದು ಮಾತ್ರ ಎದ್ದುಕಾಣುತ್ತದೆ. ಗಂಡಸರ ಕ್ರೌರ್ಯ, ಹೆಂಗಸರ ಅಸಹಾಯಕತೆಯನ್ನು ತೋರಿಸುವ ಚಿತ್ರಣವೇ ಈ ಕಾದಂಬರಿಯಲ್ಲಿ ಮೊದಲು ಕಾಣಿಸಿಕೊಂಡಿದೆ.

ಸೋನಿ ಎಂಬ ಹೆಂಗಸು ತನ್ನೆರಡು ಮಕ್ಕಳನ್ನು ಕಟ್ಟಿಕೊಂಡು ಬೆಳಿಗ್ಗೆಯಿಂದ ಕಣ್ಮರೆಯಾದ ತನ್ನ ಕೋಳಿಯನ್ನು ಹುಡುಕಿ, ಸಿಗದೆ ಬೇಸತ್ತು ಗೋಳಾಡುತ್ತಾಳೆ. ಕಟ್ಟಿಗೆ ಮಾರಿ ಉಳಿಸಿದ ದುಡ್ಡಿನಲ್ಲಿ ಕೋಳಿಯನ್ನು ಕೊಂಡು, ಅದನ್ನು ಬೆಳೆಸಿ, ನಂತರ ಮಾರಿ, ಬಂದ ದುಡ್ಡಿನಲ್ಲಿ ಮಕ್ಕಳಿಗೆ ಲಂಗ, ಚಡ್ಡಿ ತರಬೇಕೆಂದು ಕನಸು ಕಂಡಿದ್ದಳು. ಯಾರೋ ಕದ್ದು ತಿಂದಿರಬೇಕೆಂದು ಸಂಕಟ ತಡೆಯದೆ, ಕದ್ದವರ ಮೇಲೆ ಆಕ್ರೋಶದಿಂದ ಬಯ್ದು ಗೋಳಾಡಿ ಸುಸ್ತಾಗುತ್ತಾಳೆ. ಅಂದಿನ ದುಡಿಮೆ ಕೂಡ ಇದರಿಂದ ನಿಂತಿರುತ್ತದೆ. ಆದರೆ ಕೋಳಿ ಎಲ್ಲೂ ಓಡಿ ಹೋಗಿರುವುದಿಲ್ಲ. ಅನ್ಯರು ಕದ್ದು ತಿಂದಿರುವುದಿಲ್ಲ. ಅವಳ ಗಂಡ ಮಾನ್ಯಾ ಕದ್ದುಕೊಂಡು ಹೋಗಿರುವುದು ಗೊತ್ತಾಗುತ್ತದೆ. ಕೋಳಿ ಕದ್ದದ್ದು ಗಂಡನೆಂದು ಮೊದಲೇ ಗೊತ್ತಾಗಿದ್ದರೆ ಸೋನಿ ಕೆಲಸಬಿಟ್ಟು ಹುಡುಕುತ್ತಿರಲಿಲ್ಲ. ತನ್ನ ಕೇಳಿ ಯಾಕೆ ಒಯ್ಯಲಿಲ್ಲ ಎಂದು ಗಂಡನನ್ನು ಕೇಳುತ್ತಾಳೆ. ಹೆಂಡತಿಗೆ ಕೇಳುವ ಹಕ್ಕನ್ನೆ ಒಪ್ಪದ ಗಂಡ ಸೋನಿಗೆ ಗಾಯವಾಗುವಂತೆ ಹೊಡೆಯುತ್ತಾನೆ. ಈ ಸಂಗತಿಯನ್ನು ಅರ್ಥಮಾಡಿಕೊಂಡರೂ ನೆರೆಹೊರೆಯ ಜನ, 'ಹೆಣ್ಣುಮಕ್ಕಳು ತಗ್ಗಿ ಬಗ್ಗಿ ಇರಬೇಕೆಂದು ತಿಳಿದಿಲ್ಲೇನು............' ಎಂದು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ.

ಈ ಪ್ರಕರಣ ಇಲ್ಲಿಗೆ ನಿಲ್ಲುವುದಿಲ್ಲ. ಸೋನಿಯ ಮಾವ ಅಂದರೆ ಮಾನ್ಯಾನ ತಂದೆ ಹರಸಿಂಗ್ ಗುಡಿಸಿಲಿಗೆ ಬಂದು ನೋಡಿದರೂ ಸೋನಿಯ ಸಂಕಟ ಅವನ ಮನಸ್ಸನ್ನು ತಟ್ಟುವುದಿಲ್ಲ. ಅವನು ತಾನಿಟ್ಟುಕೊಂಡಿದ್ದ ಹೆಂಗಸಿಗೆ ಕಾಳುಕಡಿ ಕೊಡಬೇಕಾಗಿರುತ್ತದೆ. ಒಯ್ಯಲು ಬಂದಿರುತ್ತಾನೆ. ಎಂದೋ ತಂದ ಸ್ವಲ್ಪ ಕಾಳಿನಲ್ಲಿ ಸೋನಿ ದಿನದ ಎಲ್ಲರ ಹೊಟ್ಟೆಯನ್ನು ತುಂಬಿಸಿರುತ್ತಾಳೆ. ಬೀಡಿಗೆ, ಹೆಂಡಕ್ಕೆ ಅದೇ ಕಾಳನ್ನು ಒಯ್ದು ಮಾರಿರುತ್ತಾನೆ. ಈಗ ಕಾಳು ಯಾಕೆ ಕಮ್ಮಿಯಾದವೆಂದು ಸೋನಿಗೆ ಜಬರಿಸುತ್ತಾನೆ. ವಸ್ತು ಸ್ಥಿತಿಯನ್ನು ಸೋನಿ ಹೇಳಿದ್ದೇ ತಪ್ಪಾಯಿತು. ತನ್ನ ತಂದೆಗೆ ಎದುರಾಡುತ್ತಾಳೆಂದು ಗಂಡ ಪುನಃ ಒದೆಯುತ್ತಾನೆ. ತಾಸಿನ ಹಿಂದೆ ಬಿದ್ದ ಪೆಟ್ಟಿಗೆ ಪುನಃ ಪೆಟ್ಟು ಬಿದ್ದು ನೆಲಹಿಡಿಯುತ್ತಾಳೆ.

ಹೆಂಗಸಿನ ನೋವು ಹೆಂಗಸಿಗೆ ಗೊತ್ತು ಎಂಬಂತೆ ನೆರೆಯ ಲಚ್ಚಿ ಸೋನಿಯನ್ನು, ಅವಳ ಮಾವನನ್ನು ಒತ್ತಾಯದಿಂದ ಬಂಡಿ ಕಟ್ಟಿಸಿ ದೂರದ ಸರಕಾರಿ ದವಾಖಾನೆಗೆ ಸಾಗಿಸಿ ಚಿಕಿತ್ಸೆ ಕೊಡಿಸುತ್ತಾಳೆ. ಮೇಲಿನ ಖರ್ಚನ್ನು ಲಚ್ಚಿಯೇ ಕೊಡುತ್ತಾಳೆ. ಹೆಚ್ಚಿಗೆ ಖರ್ಚು ಮಾಡಬೇಕಾದ ಪ್ರಸಂಗ ಬಂದ ಕೂಡಲೇ ಬಕ್ಕಣದಲ್ಲಿ ಹಣವಿದ್ದರೂ ಸೊಸೆಯನ್ನು, ನೆರವಿಗೆ ಬಂದಿದ್ದ ಲಚ್ಚಿಯನ್ನು ಅದೇ ಸ್ಥಿತಿಯಲ್ಲಿ ಬಿಟ್ಟು ಹರಸಿಂಗ್ ಬಂಡಿಯನ್ನು ಊರಿಗೆ ಓಡಿಸುತ್ತಾನೆ. ಆಕ್ರೋಶಗೊಂಡ ಲಚ್ಚಿ ಓಡಿ ಬಂಡಿಯನ್ನು ನಿಲ್ಲಿಸಿ, ಹರಸಿಂಗ್‌ನಿಗೆ ಬಂಡಿಗೂಟದಿಂದ ಹೊಡೆದು, ಅದೇ ಬಂಡಿಯಲ್ಲಿ ಹರಸಿಂಗ್‌ನನ್ನು, ಸೋನಿಯನ್ನು ಹಾಕಿಕೊಂಡು ತಾಂಡ್ಯಾಕ್ಕೆ ಬರುತ್ತಾಳೆ. ಲಚ್ಚಿಯ ಜವಾಬ್ದಾರಿಯನ್ನು, ಸೋನಿಯ ನೋವನ್ನು ತಂದೆ-ಮಗ ಯಾವ ನೆಲೆಯಿಂದಲೂ ಅರಿಯಲಾರದಷ್ಟು ಕ್ರೂರಿಗಳಾಗಿ ವರ್ತಿಸುತ್ತಾರೆ. ಅಷ್ಟೇ ಅಲ್ಲ, ಹರಸಿಂಗ್‌ನು ಲಚ್ಚಿ ತನಗೆ ಹೊಡೆದಳೆಂದು, ತನ್ನ ಕುಲಬಾಂಧವರಲ್ಲಿ ದೂರು ನೀಡಿ 'ಪಂಚಾಯ್ತಿ' ಸೇರುವಂತೆ ಮಾಡುತ್ತಾನೆ. ಲಚ್ಚಿಯ ಜವಾಬ್ದಾರಿಯು ಲೆಕ್ಕಕ್ಕೆ ಬರುವುದಿಲ್ಲ. ಸೋನಿಯ ಜೀವನ್ಮರಣದ ಸ್ಥಿತಿಯ ಪ್ರಶ್ನೆ ಏಳುವುದಿಲ್ಲ. ಹರಸಿಂಗ್ ಅಮಾನವೀಯತೆಯಿಂದ ವರ್ತಿಸಿದ್ದು ಪರಿಗಣನೆಗೆ ಬರುವುದಿಲ್ಲ. ಗಂಡಸಾದ ಹರಸಿಂಗ್‌ನಿಗೆ ಹೆಂಗಸಾದ ಲಚ್ಚಿ ಹೊಡೆದದ್ದು ಮಾತ್ರ ಅಕ್ಷಮ್ಯ ಅಪರಾಧವೆಂದು 'ಪಂಚಾಯ್ತಿ' ನ್ಯಾಯ ನಿರ್ಣಯಿಸುತ್ತದೆ. ನಡೆದ ಪ್ರಸಂಗದ ಎಲ್ಲ ವಿವರಗಳನ್ನು ಲಚ್ಚಿ ಹೇಳಿದರೂ ಅದು ಗಂಡ-ಮಾವ-ಸೊಸೆಗೆ ಸಂಬಂಧಿಸಿದ್ದು. ಅವರ ಮಧ್ಯ ಲಚ್ಚಿ ಹೋದದ್ದು ತಪ್ಪು. ಹೆಂಗಸಾಗಿ ಗಂಡಸಾದ ಹರಸಿಂಗ್‌ನಿಗೆ ಹೊಡೆದದ್ದಕ್ಕೆ ದಂಡ ವಿಧಿಸುತ್ತದೆ. ಶಿಕ್ಷೆಗೆ ಮರುಗುವುದಿಲ್ಲ ಬದಲಾಗಿ ಲಚ್ಚಿ ಗಂಡಸರ ನ್ಯಾಯಕ್ಕೆ ಧಿಕ್ಕಾರ ಹಾಕುತ್ತಾಳೆ. ಧಿಕ್ಕರಿಸಿ ಇಮ್ಮಡಿ ಶಿಕ್ಷೆಗೆ ಒಳಗಾಗುತ್ತಾಳೆ.

'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯಲ್ಲಿ, ಕೊರವರ ಪಂಚಾಯ್ತಿಯಲ್ಲಿ ಬುಡ್ಡಮ್ಮನಿಗೆ ಹೇಗೆ ನ್ಯಾಯ ಸಿಗುವುದಿಲ್ಲವೋ, ಲಂಬಾಣಿ 'ಪಂಚಾಯ್ತಿ'ಯಲ್ಲಿಯೂ ಲಚ್ಚಿಗೆ ನ್ಯಾಯ ಸಿಗುವುದಿಲ್ಲ. ಗಂಡನಿಂದ ಬುಡ್ಡಮ್ಮನಿಗೆ ಸಿಗಲಾರದ ದೈಹಿಕ ಸುಖವನ್ನು ಜಂಬಯ್ಯನಿಂದ ಪಡೆದದ್ದು ಸಹಜ ಅನ್ನಿಸಿದರೂ ಅದು 'ಅನೈತಿಕತೆ'ಯಾಗಿ ಕಂಡು ಅವಳಿಗೆ ಶಿಕ್ಷೆ ವಿಧಿಸುತ್ತದೆ. 'ಗತಿ' ಕಾದಂಬರಿಯಲ್ಲಿ, ಮಾನ್ಯಾ, ಹರಸಿಂಗರ ಬೇಜವಾಬ್ದಾರಿತನ, ಅಮಾನವೀಯತೆ ಅಪರಾಧಕ್ಕೆ ಗುರಿಯಾಗುವುದಿಲ್ಲ. ಲಚ್ಚಿಯ ಜವಾಬ್ದಾರಿಯೇ ಅಪರಾಧಕ್ಕೆ ಗುರಿಯಾಗುತ್ತದೆ. ಈ ಎರಡು ಬುಡಕಟ್ಟು ಜನಾಂಗದಲ್ಲಿ ಹೆಣ್ಣಿನ ಸ್ಥಾನಮಾನದ ಅವಸ್ಥೆಯ ವಾಸ್ತವ ಚಿತ್ರಣ ಇದು.

ಹೆಂಗಸಿಗೆ ಗಂಡಸಿನ ಆಶ್ರಯಬೇಕು. ಆದರೆ ಅದರಿಂದ ಹೆಂಗಸಿಗೆ ಹಿಂಸೆಯಾದರೆ ಅವಳು ಬೇರೆಯಿದ್ದೂ ಬದುಕಲು ಗಂಡಸು ಬಿಡುವುದಿಲ್ಲ. ಅದೇ ನರಕ ಅನುಭವಿಸಬೇಕು. ಇಲ್ಲ ಬುಡ್ಡಮ್ಮನಂತೆ ಸಾಯಬೇಕು. ಸೋನಿ ಗಂಡ, ಮಾವನಿಂದ ಬೇಸತ್ತು ಬೇರೆ ಬದುಕಲು ನೋಡಿದಾಗ ಅವರು ಸಮ್ಮತಿಸುವುದಿಲ್ಲ. ಲಚ್ಚಿಯ ಸಹಾಯದಿಂದ ಸೋನಿ ಬೇರೆ ಗುಡಿಸಲು ಹಾಕಿಕೊಂಡು ಮಕ್ಕಳ ಜತೆ ದುಡಿದು ಬದುಕಲು ನಿಲ್ಲುತ್ತಾಳೆ. ಅದೇ ಅವಳಿಗೆ ನೆಮ್ಮದಿ ಎನಿಸುತ್ತದೆ. ಹೆಂಗಸು ಗಂಡಿನ ಆಶ್ರಯವಿರದಿದ್ದರೂ ಬದುಕುವ ಛಾತಿ ಉಳ್ಳವಳೇ ಅನ್ನಿಸುತ್ತದೆ. ಆದರೆ ಗಂಡಸಿಗೆ ಅದು ಸಾಧ್ಯವೇ? ಮಾನ್ಯಾನಾಗಲಿ, ಹರಸಿಂಗ್ ಆಗಲಿ ದುಡಿದು ಬದುಕುವ ಮರ್ಯಾದೆಯನ್ನು ಎಂದೂ ಅನುಭವಿಸಿದವರಲ್ಲ. ಕಳ್ಳತನ ಮಾಡುವುದು, ಅದರಿಂದ ಅವರೇ ತತ್ಕಾಲ ಸುಖಿಸುವುದು. ಹೆಂಡತಿ-ಮನೆ ನೆನಪಾಗುವುದು ಅವರಿಗೆ ಕಳ್ಳತನ ಏನೂ ಸಿಗದಿದ್ದಾಗ ಮಾತ್ರ. ಸಮಾಜದ ನಡವಳಿಕೆಗಳೂ ಕೂಡ ಗಂಡಸಿನ ಪರವಾಗಿರುವುದೇ ಹೆಚ್ಚು. ಸೋನಿ ಗಂಡನಿಂದ ಬೇರೆಯಾಗಿ ತನ್ನ ರಟ್ಟೆಯ ಶಕ್ತಿಯನ್ನು ನಂಬಿ ಬದುಕಲು ನಿಂತರೆ, ಒಂಟಿ ಹೆಂಗಸಿನ ಮೇಲೆ ಅನ್ಯ ಗಂಡಸರ ಕಣ್ಣು. ಅದನ್ನು ಸೋನಿ ಧೈರ್ಯದಿಂದ ಎದುರಿಸಿದರೂ, ಕೆಲ ಪ್ರಸಂಗದಲ್ಲಿ ಅನ್ಯ ಗಂಡಸರ ಕಿರುಕುಳ ತಡೆಯದೇ ಎಂಥವನೋ ಒಬ್ಬ ಗಂಡಸು ಬೇಕು ಎನ್ನಿಸುತ್ತದೆ. ರಕ್ಷಣೆ ಇಲ್ಲದಂತಹ ಪ್ರಸಂಗದಲ್ಲಿ ಲಚ್ಚಿಯೇ ಸಹಾಯಕ್ಕೆ

ಬರುತ್ತಾಳೆ. ಗಂಡ ಮಾನ್ಯಾ ಬೇರೊಬ್ಬ ಹೆಂಗಸನ್ನು ತಂದು ಇಟ್ಟುಕೊಂಡಿರುತ್ತಾನೆ. ಇಟ್ಟುಕೊಂಡವಳ ಸೇವೆ ಮಾಡಲು ಸೋನಿಯನ್ನು ಬಲವಂತವಾಗಿ ಎಳೆದೊಯ್ಯಲು ನೋಡುತ್ತಾನೆ. ಆಗಲೂ ನೆರೆಹೊರೆಯವರು ಗಂಡನ ಜತೆಗಿರುವುದು ಹೆಂಗಸಿನ ಧರ್ಮ ಎಂದು ಮಾನ್ಯಾನಿಗೇ ಬೆಂಬಲ ನೀಡುತ್ತಾರೆ. ಸೋನಿಗೆ ಗಂಡನಿಂದ ಬಿಡುಗಡೆ ಎಂಬುದೇ ಇಲ್ಲ. ಗಂಡನಿಂದ ನರಕ ಅನುಭವಿಸಬೇಕು ಇಲ್ಲ ಸಾವಿಗೆ ಮೊರೆ ಹೋಗಬೇಕು. ಇದು ಹೆಣ್ಣಿನ ಅವಸ್ಥೆ.

ಬಂಡಾಯ ಮನೋಧರ್ಮವೊಂದು ಈ ಕಾದಂಬರಿಯಲ್ಲಿ ದುಡಿದಿದೆ. ಕೆಳವರ್ಗದವರ ಅಕ್ಷರ ಕಲಿಕೆಯನ್ನು, ಮೇಲ್ವರ್ಗದವರು ಸಹಿಸುವುದಿಲ್ಲ. ಇದಕ್ಕಿಂತ ಭಯಾನಕವೆಂದರೆ ಕೆಳವರ್ಗದವರ ಪ್ರಗತಿಯನ್ನು ಕೆಳವರ್ಗದವರೆ ಅನುಮಾನಿಸಿ ನೋಡುವುದು, ವಿರೋಧಿಸುವುದು ನಡೆಯುತ್ತದೆ. ಇದು ತಿಳುವಳಿಕೆಯ ಕೊರತೆಯಿಂದ ಅವರವರ ಬದುಕಿನ ಪರಿಸರ ಮತ್ತು ಅವರ ನಂಬಿಕೆ, ಜೀವನ ವ್ಯವಸ್ಥೆಗಳೂ ಕಾರಣವಾಗಿರುತ್ತವೆ. ಪರಿವರ್ತನಶೀಲ ಸಮಾಜದಲ್ಲಿ ಆಂತರಿಕ ವೈರುದ್ಧ್ಯಗಳು, ತಾತ್ವಿಕ ಸಂಘರ್ಷಗಳು ನಡೆದಿರುತ್ತವೆ. 'ಗತಿ' ಕಾದಂಬರಿ ಇಂಥ ಚಲನಶೀಲ ಸಮಾಜದಲ್ಲಿ ಉಂಟಾಗುವ ತಲ್ಲಣಗಳ ವಾಸ್ತವ ಚಿತ್ರಣವಿದೆ. ಲಮಾಣಿ ಗಂಡಸರ ಮನೋಭಾವ, ಹೆಂಗಸರ ತಾಳ್ಮೆಯ ಪ್ರಸಂಗಗಳು ಜೀವಂತವಾಗಿ ಮೂಡಿ ನಿಂತಿವೆ.

ಜಾತಿಗೇರ ಮಾಬಮ್ಮನ ಕಥೆ

'ಸಣ್ಣ ಗೌಡಸಾನಿ' (ಶಾಂತರಸ) ಕಾದಂಬರಿಯಲ್ಲಿ ಬರುವ ಮಾಬಿ (ಮೆಹಬೂಬ ಜಾನ್) ಎಂಬ ಮಹಿಳೆ ಕೂಡ 'ಜಾತಿಗೇರ' ಬುಡಕಟ್ಟಿಗೆ ಸೇರಿದವಳು. ಜಾತಿಗೇರ ಜನಾಂಗದವರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಾಗಿರುವಂತೆ ಕಾಣುತ್ತದೆ. ಒಂದು ಕಡೆ ನೆಲೆ ನಿಲ್ಲದ ಅಲೆಮಾರಿಗಳು. ಈ ಜನಾಂಗದ ಚರಿತ್ರೆಯೇ ನಿಗೂಢ ಎನ್ನಿಸುವಂತಿದೆ. ಮುಸ್ಲಿಂ ಕುಲದಲ್ಲಿರುವ ಅನೇಕ ಉಪಪಂಗಡಗಳಲ್ಲಿ ಒಂದಕ್ಕೆ ಸೇರಿದವರು. ಉರ್ದು ಭಾಷೆಯನ್ನು ಮಾತಾಡಿದರೂ ಪ್ರಾದೇಶಿಕ ಭಾಷೆಯನ್ನು ಕರಗತ ಮಾಡಿಕೊಂಡಿರುತ್ತಾರೆ. ಮೂಲ ಕಸುಬು ಸಂಗೀತ-ಗಾಯನ ಮತ್ತು ಅಭಿನಯ. ಊರಿಂದ ಊರಿಗೆ ಅಲೆಯುತ್ತ ಸಣ್ಣಾಟ(ಬಯಲಾಟ)ಗಳ ಪ್ರದರ್ಶನ ನೀಡುತ್ತಾರೆ. ಹೆಂಗಸರು, ಗಂಡಸರು ಕೂಡಿಯೇ ಅಭಿನಯಿಸುತ್ತಾರೆ. ಪ್ರಧಾನವಾಗಿ ಈ ಕಲೆಯನ್ನು ನಂಬಿಕೊಂಡಿರುವ ಈ ಜನಾಂಗದ ಮಹಿಳೆಯರು ಕಾಲಾಂತರದಲ್ಲಿ ಮೈಮಾರಿಕೊಳ್ಳುವ ವೃತ್ತಿಗೆ ಇಳಿದಿರಬೇಕು. ಗಾನಾ ಪಾರ್ಟಿಗಳನ್ನು ನಡೆಸಿಕೊಡುತ್ತ ರಸಿಕರ ಮನ ತಣಿಸುವ ಈ ಜನಾಂಗ, ಉಳಿದ ಬುಡಕಟ್ಟು ಜನಾಂಗದವರಂತೆ ಕಾಲದ ಹೊಡೆತಕ್ಕೆ ಸಿಕ್ಕು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿದ್ದಾರೆಂದು ಕಾಣಿಸುತ್ತದೆ.

ಹೈದರಾಬಾದ್ ಕರ್ನಾಟಕ ಪ್ರದೇಶದ ಅನೇಕ ಹಳ್ಳಿಗಳಲ್ಲಿ, ಅರವತ್ತು-ಎಪ್ಪತ್ತರ ದಶಕದವರೆಗೆ ಊರ ಗೌಡ, ಸಾಹುಕಾರ, ದೇಸಾಯಿ ಮತ್ತು ಹಣ ಇರುವ ವ್ಯಕ್ತಿಗಳ ಮನೆಯಲ್ಲಿ ಜಾತಿಗೇರ ಜನಾಂಗಕ್ಕೆ ಸೇರಿದ ಹೆಂಗಸರಿರುತ್ತಿದ್ದುದು ಸಾಮಾನ್ಯವಾಗಿತ್ತು. ಹಣ ಮತ್ತು ಪ್ರತಿಷ್ಠೆ ಪ್ರದರ್ಶನದ ಸಂಕೇತ ಎಂಬಂತೆ ಫ್ಯೂಡಲ್‌ಗಳು ಜಾತಿಗೇರ ಹೆಂಗಸರನ್ನು ಖಾಯಂ ಆಗಿ ಇಟ್ಟುಕೊಳ್ಳುತ್ತಿದ್ದರು. ಮೂಲತಃ ಈ ಜನಾಂಗದವರು ಹಳ್ಳಿ ಹಳ್ಳಿಗೆ ಗಾನಾ ಪಾರ್ಟಿ ಮತ್ತು ನಾಟಕಗಳನ್ನು ಏರ್ಪಡಿಸಲು ಅಲೆಯುತ್ತಿರುವವರು. ಉಪಜೀವನಕ್ಕೆ ಇದೇ ಉದ್ಯೋಗವಾಗಿದೆ. ಈ ಜನಾಂಗದ ಹೆಂಗಸರಿಗೆ ಅವರವರ ಜಾತಿಗಳಲ್ಲಿ ಮದುವೆಗಳು ನಡೆದು ಹೆಂಗಸರಿಗೆ ಗಂಡಂದಿರಿದ್ದರೂ ಅವರು ಮೈ ಮಾರಿಕೊಳ್ಳುವುದು ವೃತ್ತಿಯೇ ಆಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ರಸಿಕರಿಗೆ ತಮ್ಮ ಕಲೆಯಿಂದ ಮಾನಸಿಕವಾಗಿ ರಂಜನೆಯನ್ನು, ದೈಹಿಕವಾಗಿ ಮೈ ಸುಖವನ್ನು ನೀಡುವುದರಿಂದ ಹಳ್ಳಿಹಳ್ಳಿಗಳಲ್ಲಿ ಈ ಜನಾಂಗದವರಿಗೆ ಬೇಡಿಕೆಯಿರುತ್ತದೆ.

ಈ ಜನಾಂಗದವರಲ್ಲಿ ಸುಂದರ ಹೆಂಗಸಿದ್ದರೆ ಅಂಥವರನ್ನು ಹಣ ಇರುವವರು ಖಾಯಂ ಆಗಿ ಇಟ್ಟುಕೊಳ್ಳುವುದು ರೂಢಿಯಲ್ಲಿದೆ. ಗೌಡ, ದೇಸಾಯಿ, ಸಾಹುಕಾರ, ಶೆಟ್ಟಿ ಮುಂತಾದ ಫ್ಯೂಡಲ್ ಗುಣ ಹೊಂದಿದ ವ್ಯಕ್ತಿಗಳು ಒಮ್ಮೆ ತಾವು ಭೋಗಿಸಿದ ಹೆಣ್ಣು ಪುನಃ ಅನ್ಯರ ಭೋಗದ ವಸ್ತುವನ್ನಾಗಿ ಬಿಡಲು ಒಪ್ಪುತ್ತಿರಲಿಲ್ಲ. ಒಮ್ಮೆ ತಮ್ಮ ವಶವಾದರೆ ಅಂಥ ಹೆಣ್ಣನ್ನು 'ಹೆಂಡತಿ'ಯಂತೆ ಖಾಯಂ ಆಗಿ ಉಳಿಸಿಕೊಂಡು ತಮ್ಮ ಪ್ರತಿಷ್ಠೆಯನ್ನು ಪ್ರದರ್ಶಿಸುತ್ತಿದ್ದರು. ಇದರಿಂದ ಈ ಜನಾಂಗದಲ್ಲಿ ಹೆಣ್ಣಿನ ಮಾರಾಟವಿದೆ ಎಂದೇ ಕಾಣುತ್ತದೆ. ಖಾಯಂ ಆಗಿ ಹೋದ ಹೆಣ್ಣಿನ ಗತಿ, ಸ್ಥಾನ-ಮಾನ ಎಂಥದ್ದು? ಎಂಬ ಪ್ರಶ್ನೆಗೆ ಒಬ್ಬೊಬ್ಬರುದು ಒಂದೊಂದು ಕಥೆ. ಈ ಜನಾಂಗದಲ್ಲಿ ಹೆಂಗಸರೇ ಒಬ್ಬನ ಸೊತ್ತಾಗಿ ಇರಲು ಬಯಸುತ್ತಾರೆ. ಈ ಜನಾಂಗದ ಗಂಡಸರು ಹೇಗೋ ಏನೋ ಬದುಕುತ್ತಾರೆ. ಹೆಂಗಸರಿಗೆ ಯೌವನ ಇರುವವರೆಗೆ ಮಾತ್ರ ಬೆಲೆ ಇರುತ್ತದೆ. ರಸಿಕರಿಗೆ ಯೌವನ ಇರುವ ಹೆಂಗಸಿನ ಗಾನ ಅಭಿನಯದ ದೇಹ ರುಚಿಸುತ್ತದೆ. ವಯಸ್ಸಾದಂತೆ ಈ ಹೆಂಗಸರಿಗೆ ಅತಂತ್ರ ಸ್ಥಿತಿ ಒದಗುತ್ತದೆ. ಎಲ್ಲ ರೀತಿಯ ದುಡಿಮೆ ಕಡಿಮೆಯಾದಂತೆ ಈ ಜನಾಂಗದ ಹೆಂಗಸರ ಗೋಳು ಹೆಚ್ಚಾಗುತ್ತದೆ. ಇದನ್ನು ಅರಿತ ಹೆಂಗಸು ತಮ್ಮ ಅಸ್ತಿತ್ವದ ಪ್ರಶ್ನೆಯಿಂದಾಗಿ ಒಬ್ಬ ವ್ಯಕ್ತಿಯಲ್ಲಿ ನೆಲೆ ಪಡೆಯಲು ಬಯಸುತ್ತಾರೆ. ಆದರೂ ಈ ಹೆಂಗಸರಿಗೆ ಸಮಾಜದಲ್ಲಿ ಎರಡನೆಯ ಸ್ಥಾನ ಮಾತ್ರ ಸಿಗುತ್ತದೆ. ಒಬ್ಬ ವ್ಯಕ್ತಿಯಲ್ಲಿ ನೆಲೆ ಪಡೆದ ಹೆಂಗಸು ಸುಖವಾಗಿರುತ್ತಾಳೆಯೇ? ಎಂಬ ಪ್ರಶ್ನೆಗೆ ಉತ್ತರ ಸರಳವಾಗಿಲ್ಲ. ಈ ಹಿಂದೆ ಹೇಳಿದಂತೆ ಒಬ್ಬೊಬ್ಬರದು ಒಂದೊಂದು ಕಥೆ. ಈ ಕಾದಂಬರಿಯಲ್ಲಿ ಬರುವ ಮಾಬಿಯದೂ ಒಂದು ಕಥೆ.

ಮಾಬಿ ಅಥವಾ ಮಾಬಮ್ಮ(ಮೆಹಬೂಬ್ ಜಾನ್) ತನ್ನ ದೊಡ್ಡಮ್ಮ ಮಾಣಿಕಸಾನಿ ಜತೆ ಗಂಗನಹಳ್ಳಿಗೆ ಬಯಲಾಟ ಆಡಲು ಬಂದು ಊರ ಸೂಗನಗೌಡನ ಖಾಯಂ ಹೆಣ್ಣಾಗಿ ಆತನ ಮನೆಯನ್ನು ಅನಿವಾರ್ಯವಾಗಿ ಸೇರುತ್ತಾಳೆ. ಇತರ ಹೆಂಗಸರು ಬಯಸಿ ಸೇರಿಕೊಳ್ಳುವಂತೆ ಮಾಬಿ ಬಯಸಿ ಸೇರದೆ ಅನಿವಾರ್ಯ ಸ್ಥಿತಿಯಿಂದಾಗಿ ಸೇರುತ್ತಾಳೆ. ಮಾಬಿಯ ತಾಯಿ ಬಹಳ ವರ್ಷಗಳ ಹಿಂದೆ ಸುಸಂಸ್ಕೃತ ವ್ಯಕ್ತಿ ಮಹಾದೇವಪ್ಪನನ್ನು ಕೂಡಿ ಅವನಲ್ಲಿಯೇ ಖಾಯಂ ಆಗಿದ್ದು ಜೀವನ ನಡೆಸಿ ಮಾಬಿಯನ್ನು ಹಡೆದು ಸತ್ತು ಹೋಗಿದ್ದಳು. ಮಾಬಿ ಮಹಾದೇವಪ್ಪನ ಪ್ರೀತಿಯ ಮಗಳಾಗಿ ಬೆಳೆಯುತ್ತಾಳೆ. ತಂದೆಯ ಅನುಭಾವಿ ಗುಣಗಳನ್ನು ಮಾಬಿ ಸಹಜವಾಗಿಯೇ ದಕ್ಕಿಸಿಕೊಂಡಿರುತ್ತಾಳೆ. ಆದರೆ ಸಮಾಜ ಅವಳನ್ನು ಎರಡನೆಯ ದರ್ಜೆಯ ಹೆಂಗಸನ್ನಾಗಿಯೇ ಕಾಣುತ್ತದೆ. ಮಾಬಿ ಎಲ್ಲರಂತೆ ಮದುವೆ ಮಾಡಿಕೊಂಡು ಬಾಳಬೇಕೆಂದು ಬಯಸಿದರೂ ಸಮಾಜ ಅದಕ್ಕೆ ದಾರಿಮಾಡಿಕೊಡುವುದಿಲ್ಲ. ತಂದೆ ಬದುಕಿರುವಾಗಲೇ, ಮಾಬಿ ಒಬ್ಬ ಸೂಳೆಯ ಮಗಳೆಂದು ಊರ ಕಾಮುಕರ ಕಣ್ಣಿಗೆ ಒತ್ತಿ ನಿಲ್ಲುತ್ತಾಳೆ. ತಂದೆಗೆ ಸಂಕಟವಾದರೂ ಅಸಹಾಯಕನಾಗುತ್ತಾನೆ. ಅವನು ಸಾಯಲು ಅಲ್ಲಿ ಮಾಬಿಗೆ ನೆಲೆಯಿಲ್ಲದೆ ಅನಿವಾರ್ಯವಾಗಿ ದೊಡ್ಡಮ್ಮ ಮಾಣಿಕಸಾನಿಯ ಆಶ್ರಯಪಡೆಯುತ್ತಾಳೆ. ದೊಡ್ಡಮ್ಮನದು ಒಂದು ತಂಡವೇ ಇರುತ್ತದೆ. ಅದರಲ್ಲಿ ಮಾಬಿ ಸಹಜವಾಗಿ ಸಂಗೀತ, ಅಭಿನಯವನ್ನು ಹೊಟ್ಟೆಪಾಡಿಗಾಗಿ ಕಲಿಯುತ್ತಾಳೆ. ಊರೂರು ಅಲೆಯುವ ಮಾಣಿಕಸಾನಿಗೆ ಮಾಬಿ ಭಾರವಾಗುತ್ತಾಳೆ. ಮಾಬಿಯನ್ನು ನೋಡಿದ ಹಣವುಳ್ಳವರು ಕೊಳ್ಳಲು ಕಿರಿಕಿರಿ ಕೊಡುತ್ತಾರೆ. ಅನಿವಾರ್ಯವಾಗಿ ಸಂಗೀತ, ಅಭಿನಯ ಕಲಿತು ತನ್ನ ಕಲೆಯಿಂದ ರಸಿಕರನ್ನು ರಂಜಿಸಿದ್ದು ನಿಜ. ಆದರೆ ಅವಳು ಕಂಡಕಂಡವರಿಗೆ ಮೈ ನೀಡುವುದಕ್ಕೆ ನಿರಾಕರಿಸಿ, ಮದುವೆ ಮಾಡಿಕೊಂಡು ಬಾಳಲು ಅದಮ್ಯ ಬಯಕೆಯನ್ನು ಹೊತ್ತಿರುತ್ತಾಳೆ. ಕಟುಕರ ಮನೆಯಲ್ಲಿದ್ದು ಅಹಿಂಸೆಯ ವ್ರತ ಹಿಡಿದಂತಾಗುತ್ತದೆ. ಮಾಣಿಕಸಾನಿಗೆ ಮಾಬಿಯಿಂದ ಅನೇಕ ಬಿಕ್ಕಟ್ಟುಗಳು ಎದುರಾಗುತ್ತವೆ. ಅದನ್ನರಿತ ಮಾಬಿಯೇ ಗಂಗನಹಳ್ಳಿಯ ಸೂಗನಗೌಡನ ಸ್ವಭಾವಕ್ಕೆ ಮೆಚ್ಚಿ ಅವನ ಮನೆ ಸೇರಿ ಮಾಬಮ್ಮನಾಗುತ್ತಾಳೆ.

ಯಾವುದೇ ಹಳ್ಳಿಯಲ್ಲಿ ನಡೆಯುವಂತೆ, ಗಂಗನಹಳ್ಳಿಯಲ್ಲಿಯೂ ಚಾತಿಗೇರರು ಬಂದ ಗಳಿಗೆಯಿಂದಲೇ ರಾಜಕೀಯ ಸುರುವಾಗುತ್ತದೆ. ಅವರ ಸಂಗೀತ, ಅಭಿನಯಕ್ಕಾಗಿ ಕೆಲವರು ಹಾತೊರೆದರೆ, ಕೆಲವರು ಚಾತಿಗೇರ ಹೆಂಗಸರ ಮೈ ರುಚಿಗೆ

ರೋಮಾಂಚನಗೊಳ್ಳುತ್ತಾರೆ. ಹಣವಂತರಾದ ಸೂಗನಗೌಡ ಮತ್ತು ಗಂಗಪ್ಪ ಸಾಹುಕಾರರು ಮಾಬಿಯನ್ನು ಕಂಡು ಪುಳಕಗೊಂಡು ತಮ್ಮ ತಮ್ಮ ಪ್ರತಿಷ್ಠೆಯನ್ನು ಪಣಕ್ಕೊಡ್ಡಿ ಮಾಬಿಯನ್ನು ದಕ್ಕಿಸಿಕೊಳ್ಳಲು ಹಗಲಿರುಳು ರಾಜಕೀಯ ಮಾಡುತ್ತಾರೆ. ಮಾಬಿಯ ಆಯ್ಕೆ ಇಬ್ಬರಲ್ಲಿ ಯಾರು ಎನ್ನುವುದಕ್ಕಿಂತ ಆಕೆಗೆ ತನ್ನ ನೆಮ್ಮದಿ ಮತ್ತು ಅಸ್ತಿತ್ವದ ಪ್ರಶ್ನೆಯಾಗಿತ್ತು. ಮಾಬಿಯ ದೊಡ್ಡಮ್ಮನ ಸಮಸ್ಯೆ ಬೇರೆಯಾಗಿತ್ತು. ಇಬ್ಬರಲ್ಲಿ ಯಾರು ಹೆಚ್ಚು ಹಣ ಕೊಡುತ್ತಾರೆ ಎಂಬ ಸಮಸ್ಯೆ. ಆದರೆ ಮಾಬಿ ಸೂಗನಗೌಡನನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ತನ್ನನ್ನು ತಿರಸ್ಕರಿಸಿದ ಮಾಬಿಯ ಮೇಲೆ ಗಂಗಪ್ಪನಲ್ಲಿ ದ್ವೇಷ ಸಹಜವಾಗಿಯೇ ಮೂಡಿತು. ತನ್ನನ್ನು ಒಲಿದ ಮಾಬಿಯ ಮೇಲೆ ಅಪಾರ ಪ್ರೀತಿ ತೋರಿಸುವ ಸಂಕೇತ ಎಂಬಂತೆ ಸೂಗನಗೌಡ ಊರಿಗೇ ಊಟ ಹಾಕಿಸಿದ. ಕುಂಟಲಗಿತ್ತಿ ಕಾಳವ್ವ ಗಂಗಪ್ಪ ಸಾಹುಕಾರನ ಬಳಿ, 'ಆ ಸೊಟ್ ಮೋತಿ ಸಾಹುಕಾರನ ಕೂಡದಕಿಂತ ಹೊಲೆ ಮಾದಿಗರ ಜತೆ ಮಲಗುವುದು ಬೇಸು' ಎಂದು, ಮಾಬಿ ಅಂದಳೆಂದು ಹೇಳಿದಳು. ಇದು ಹಳ್ಳಿಯ ರಾಜಕೀಯ. ಗಂಗಪ್ಪ ಸಾಹುಕಾರನ ದ್ವೇಷ ಬೆಳೆಯುತ್ತ ಹೋಗುತ್ತದೆ. ಮನೆತನದ ಹಳೆಯ ಸಿಟ್ಟುಗಳೆಲ್ಲ ಎದ್ದು ನಿಂತವು. ಸಣ್ಣ ಪುಟ್ಟ ನೆವಗಳನ್ನು ಮುಂದೊಡ್ಡಿ ಸೂಗನಗೌಡನ ಮೇಲೆ ಸಿಟ್ಟು ತೀರಿಸಿಕೊಳ್ಳಲು ತೊಡಗುತ್ತಾನೆ. ಸಂಗನಗೌಡನೂ ಅದಕ್ಕೆ ಪ್ರತಿಯಾಗಿ ನಿಲ್ಲುತ್ತಾನೆ. ಆದರೆ ಇವರಿಬ್ಬರ ಮಧ್ಯ ಊರ ನೆಮ್ಮದಿ ಕೆಡುತ್ತದೆ. ಅವರಿಬ್ಬರ ಹಣ ವ್ಯರ್ಥವಾದರೆ ಅದನ್ನು ಗಳಿಸಿಕೊಳ್ಳಬಹುದು. ಕದಡುವ ಊರ ನೆಮ್ಮದಿಯನ್ನು ಸರಿಮಾಡುವುದು ಅಸಾಧ್ಯವಾಗಿತ್ತು. ಇಂಥ ಸಂದರ್ಭದಲ್ಲಿ ಜಗಳ, ಕೊಲೆಗಳಾದರೆ, ಅದರ ಸಾವು ನೋವಿನ ರುಚಿ ಅನುಭವಿಸುವವರು ಕೆಳವರ್ಗದವರೆ. ದುಡಿದು ತಿನ್ನುವ ಜನರು ಅನಿವಾರ್ಯವಾಗಿಯೋ, ಸಣ್ಣ ಪುಟ್ಟ ಆಮಿಷಗಳಿಗಾಗಿಯೋ ಗೌಡನ, ಸಾಹುಕಾರನ ಮಾತುಗಳನ್ನು ಕೇಳಿ ಅದರ ಪರಿಣಾಮವಾಗಿ ಆದ ಹಾನಿಯನ್ನು ಉಣ್ಣಬೇಕು. ಇಂಥ ಘಟನೆಗಳಿಗೆ ಊರನ್ನು ಪ್ರವೇಶಿಸುವ ಪೋಲೀಸರು ನಡೆಸುವ ತ್ರನಿಖೆ, ದೌರ್ಜನ್ಯಕ್ಕೆ ಒಳಗಾಗುವವರು ಕೂಡ ಉಳ್ಳವರ ಮಾತು ಕೇಳುವ ದುಡಿದು ತಿನ್ನುವ ಜನರೆ. ಗಂಗಪ್ಪನ ದ್ವೇಷ ಎಲ್ಲಿಯವರೆಗೆ ಮುಂದುವರಿಯುತ್ತದೆ ಎಂದರೆ, ಸೂಗನಗೌಡನ ಮಗ ಭೀಮನಗೌಡನನ್ನು ತನ್ನ ಕಡೆ ಒಲಿಸಿಕೊಂಡು, ಮಾಬಿಯನ್ನು ಮನೆಯಿಂದ ಹೊರಗೆ ಹಾಕುವವರೆಗೆ.

ಮಾಬಿ ಸೂಗನಗೌಡನ ಮನೆಯನ್ನು ಸೇರಿ ಮಾಬಮ್ಮಳಾಗಿ ಎಲ್ಲರಿಗೂ ಬೇಕಾಗುತ್ತಾಳೆ. ಮಾಬಮ್ಮನಿಗೆ ಬೇಕಾದದ್ದು ಬದುಕಿನಲ್ಲಿ ನೆಲೆ ಮತ್ತು ಗೌರವಯುತ ಜೀವನ. ಅವಳಿಗೆ ಹಣ, ಅಂತಸ್ತು, ಪ್ರತಿಷ್ಠೆ ಯಾವುದೂ ಬೇಕಾಗಿರುವುದಿಲ್ಲ. ಸೂಗನಗೌಡನ ಹೆಂಡತಿಯೇ ಮಾಬಮ್ಮನನ್ನು ಸವತಿಯ ಹಾಗೆ ಕಾಣದೆ ತಂಗಿಯಂತೆ ಕಾಣಲು ಸುರುಮಾಡುತ್ತಾಳೆ. ಅನುಭಾವಿಯಂತಿದ್ದ ಮಹಾದೇವಪ್ಪನ ಮಗಳಾಗಿ ಬೆಳೆದಿದ್ದ ಮಾಬಮ್ಮನಿಗೆ ಲಿಂಗಾಯತರ ರೀತಿ, ನೀತಿ, ಸಂಪ್ರದಾಯಗಳ ಅರಿವಿದ್ದರಿಂದ ಸೂಗನಗೌಡನ ಮನೆಯ ಜಂಗಮರಿಗೂ ಮಾಬಮ್ಮ ಬೇಕಾಗುತ್ತಾಳೆ. ಹುಟ್ಟಿನಿಂದ ದಲಿತರ ಕಷ್ಟ ಗೊತ್ತಿದ್ದರಿಂದ, ಊರಿನ ಕೆಳವರ್ಗದವರಿಗೆ ಅನೇಕ ರೀತಿಯಲ್ಲಿ ನೆರವಾಗಿ, ಅವರ ಕಣ್ಣಿನಲ್ಲಿ 'ಸಣ್ಣಗೌಡಸಾನಿ'ಯಾಗಿ ಬೆಳೆಯುತ್ತಾಳೆ. ಅವಳು ಇದೆಲ್ಲವನ್ನು ತೋರಿಕೆಗಾಗಿ ಮಾಡುವುದಿಲ್ಲ. ಸೂಗನಗೌಡನಿಗೆ ಹುಟ್ಟಿದ ಮಗ ಭೀಮನಗೌಡನನ್ನು ತನ್ನ ಮಗನೆಂದೇ ತಿಳಿದು ಬೆಳೆಸುತ್ತಾಳೆ. ಗಂಗಪ್ಪ ಸಾಹುಕಾರನ ಹೆಂಡತಿಯೂ ಮಾಬಮ್ಮನ ಗುಣಕ್ಕೆ ಮಾರುಹೋಗಿ, ತನ್ನ ಗಂಡನಿಂದ ಒದಗುವ ತೊಂದರೆಗಳನ್ನು ಹೇಳಿ ಎಚ್ಚರಿಕೆಯಿಂದಿರಲು ತಿಳಿಸುತ್ತಾಳೆ. ಬಹಳ ದಿನದ ಮೇಲೆ ಮಾಬಮ್ಮನಿಗೂ ಮಗುವಾಗುತ್ತದೆ. ಗಂಗಪ್ಪ ಸಾಹುಕಾರ ಸೂಗಪ್ಪಗೌಡನ ಮಗನನ್ನು ಒಲಿಸಿಕೊಂಡು, ಮಾಬಮ್ಮನ ವೃತ್ತಾಂತವನ್ನು ಹೇಳುತ್ತ, ವಿಕೃತವಾಗಿ ಅವಳ ಮಗನಿಗೂ ಆಸ್ತಿ ಹೋಗುವ ಭಯ ಹುಟ್ಟಿಸಿ, ಅನಾವಶ್ಯಕವಾಗಿ ಮಾಬಮ್ಮನ ಜತೆ ಜಗಳಕ್ಕೆ ನಿಲ್ಲುವಂತೆ ಮಾಡಿಸುತ್ತಾನೆ. ಈ ಚಿಂತೆಯಲ್ಲಿ ಸೂಗನಗೌಡ ಸಾಯುತ್ತಾನೆ. ಮಗ ಭೀಮನಗೌಡ ಮಾಬಮ್ಮನಿಗೆ ಕೇವಲ ಉಪಜೀವನಕ್ಕೆ ಆಧಾರ ಒದಗಿಸಿ ಊರ ಹೊಲದ ಮನೆಗೆ ಕಳಿಸುತ್ತಾನೆ. ಅಲ್ಲಿಂದ ಹೋಗುವಾಗ ದಾರಿಯ ಹಳ್ಳ ತುಂಬಿ ಬಂದು ಅದರಲ್ಲಿ 'ಸಣ್ಣಗೌಡಸಾನಿ' ಮಾಬಮ್ಮ ಮಗನೊಂದಿಗೆ ನೀರುಪಾಲಾಗಿ ಹೋಗುತ್ತಾಳೆ.

ಈ ಪ್ರದೇಶಕ್ಕೆ ಸಂಬಂಧಿಸಿದ ಕಥೆ-ಕಾದಂಬರಿಗಳನ್ನು ಗಮನಿಸಿದರೆ, ಜಮೀನ್ದಾರರ ಮಕ್ಕಳು ವಿದ್ಯಾವಂತರಾಗಿರುವುದಿಲ್ಲ. **'ಹಾಲು-ಜೇನು'** ಕಾದಂಬರಿಯಲ್ಲಿ, ಹೇಮಗಿರಿಯ ಗೌಡನ ಮಗ ನಾಗನಗೌಡ ಓದಲು ಹೋಗಿ ವಿದ್ಯೆ ಕಲಿಯದೆ ಬರಿ ಹಣ ಖರ್ಚು ಮಾಡಿ, ಓದು ಅರ್ಧಕ್ಕೆ ನಿಲ್ಲಿಸಿಬರುತ್ತಾನೆ. ಈ ಕಾದಂಬರಿಯಲ್ಲಿ ಬರುವ ಗಂಗಪ್ಪ ಸಾಹುಕಾರನ ಮಗನು, ಸೂಗನಗೌಡನ ಮಗನು ಓದಲು ಕಲ್ಬುರ್ಗಿ, ರಾಯಚೂರು ನಗರಗಳಲ್ಲಿದ್ದರೂ ಅಲ್ಪಸ್ವಲ್ಪ ಬೇಕೋಬೇಡೋ ಓದಿ ಅರ್ಧಕ್ಕೆ ಮರಳಿ ಊರಿಗೆ ಬರುತ್ತಾರೆ. ಗೀತಾ ನಾಗಭೂಷಣ, ಚೆನ್ನಣ್ಣ ವಾಲೀಕಾರರ ಕಾದಂಬರಿಗಳಲ್ಲಿಯೂ ಇಂಥವರು ಸಿಗುತ್ತಾರೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಉಳ್ಳವರ ಮಕ್ಕಳು ವ್ಯವಸ್ಥಿತವಾಗಿ ಓದಿದವರ ಸಂಖ್ಯೆ ಕಮ್ಮಿ. ಓದದೇ ಇರುವುದಕ್ಕೆ ಹಣ ಮತ್ತು ಸಂಸ್ಕಾರ ಕಾರಣವಾದರೆ, ಓದಿ ಸರಕಾರಿ ನೌಕರಿ ಮಾಡುವುದೆಂದರೆ ಅದು ಗುಲಾಮಗಿರಿ ಎಂದೇ ತಿಳಿದಿದ್ದರು. ಸರಕಾರಿ ನೌಕರಿಯಿಂದ ಸಿಗುವ 'ಸಂಬಳ' ಅವರ ದೃಷ್ಟಿಯಲ್ಲಿ ಹಾಸ್ಯಾಸ್ಪದವೇ ಆಗಿತ್ತು ಎಂದು ಕಾಣುತ್ತದೆ. ಉಳ್ಳವರು ಒಂದು ವೇಳೆ ಮಕ್ಕಳನ್ನು ಓದಿಸಿದರೆ ವಕೀಲರನ್ನಾಗಿ ಮಾಡಬೇಕೆಂಬ ಗುರಿ ಹೊಂದಿರುತ್ತಿದ್ದರು. ಊರಲ್ಲಿ ತಾವು ಮಾಡುವ ಅನೇಕ ಕೊಲೆ, ಜಗಳಗಳಿಂದ ಮುಕ್ತರನ್ನಾಗಿ ಮಾಡಿಸಿಕೊಳ್ಳಲು ಬರುತ್ತಿತ್ತು. ಬ್ರಾಹ್ಮಣರು ಅದರಲ್ಲೂ ಜಮೀನ್ದಾರಿ ದೇಸಾಯಿ, ಕುಲಕರ್ಣಿಯರು ತಮ್ಮ ಮಕ್ಕಳನ್ನು ಓದಿಸಿ ಉನ್ನತ ಸ್ಥಾನವೆಂದೇ ಪರಿಗಣಿತವಾಗಿರುವ ಜಿಲ್ಲಾಧಿಕಾರಿ ತಾಲೂಕಾಧಿಕಾರಿಗಳನ್ನಾಗಿ ಮಾಡಿಸುವ ಗುರಿ ಹೊಂದಿರುತ್ತಿದ್ದರು. ಬಡ ಬ್ರಾಹ್ಮಣರೂ ಮಕ್ಕಳನ್ನು ಓದಿಸಿ ಸಣ್ಣಪುಟ್ಟ ಸರಕಾರಿ ನೌಕರಿಗೆ ಸೇರಿಸಿಬಿಡುತ್ತಿದ್ದರು. ಇದಕ್ಕೆ ಸಾಹಿತ್ಯ ಕೃತಿಗಳಲ್ಲಿ ಉದಾಹರಣೆ ಸಿಗುತ್ತವೆ.

'ಸಣ್ಣಗೌಡಸಾನಿ' ಕಾದಂಬರಿಯಲ್ಲಿ, ಜಾತಿಗೇರ ಜನಾಂಗಕ್ಕೆ ಸೇರಿದ ಮಾಬಿಯ ಕಥೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ಸ್ವಾತಂತ್ರ್ಯಪೂರ್ವದಲ್ಲಿ ಹಳ್ಳಿಯ ಸಾಮಾಜಿಕ, ರಾಜಕೀಯ ವ್ಯವಸ್ಥೆಯ ಸ್ವರೂಪವನ್ನು ಬಿಚ್ಚಿ ತೋರಿಸಲಾಗಿದೆ. ಕೆಳವರ್ಗದ ಜನರು ಮಾಬಮ್ಮನನ್ನು 'ಸಣ್ಣ ಗೌಡಸಾನಿ'ಯಂತೆ ಕಾಣುವುದು, ಸೂಗನಗೌಡನ ಮನೆಗೆ ಬರುವ ಜಂಗಮರಿಗೆ ಮಾಬಮ್ಮ 'ಶರಣೆ'ಯಂತೆ ಕಾಣುವುದು ಒಂದಕ್ಕೊಂದು ಪೂರಕವಾಗಿವೆ. ಇಡೀ ಮನೆತನದ ವ್ಯವಹಾರವನ್ನು ಸೂಗನಗೌಡ ಮಾಬಮ್ಮನಿಗೆ ಒಪ್ಪಿಸುವುದು ಗೌಡನ ನಂಬಿಕೆ ಮತ್ತು ಮಾಬಮ್ಮನ ಗುಣವನ್ನವಲಂಬಿಸಿದೆ. ಗಂಗಪ್ಪನ ದ್ವೇಷ ಬಹುಕಾಲ ಮುಂದುವರೆಯುವುದು, ತಾಯಿಯಂತೆ ತಿಳಿದ ಭೀಮನಗೌಡ ಹೇಳಿಕೆ ಮಾತುಕೇಳಿ ಅದು ಮಲ ತಮ್ಮನಿಗೆ ಆಸ್ತಿಯಲ್ಲಿ ಪಾಲು ಕೊಡಬೇಕಾಗುವ ಸ್ಥಿತಿಯನ್ನು ಅರಿತು ಭಯಗೊಳ್ಳುವುದು ಸಹಜ ಎನ್ನಿಸಿದರೂ, ಮಾಬಮ್ಮನನ್ನು ದ್ವೇಷಿಸುವ ಗಂಗಪ್ಪ ಸಾಹುಕಾರನನ್ನು ಇಡೀ ಊರೇ ಮೆಚ್ಚದಿರುವಾಗ, ಭೀಮನಗೌಡ ಅಲ್ಲಿ ಸೇರುವುದು ಮತ್ತು ಊರಿಗೇ ಬೇಕಾದ ಮಾಬಮ್ಮನನ್ನು ಬೇರೆ ಮಾಡುವುದು ವಿಚಿತ್ರವೆನಿಸುತ್ತದೆ. 'ತಂದೆಯ ವೈರಿ ಮಗನಿಗೆ ಸ್ನೇಹಿತನಲ್ಲ' ಎಂಬ ಹಳ್ಳಿ ಗೌಡರುಗಳ ವೇದವಾಕ್ಯ ಇಲ್ಲಿ ತಿರುವು ಮುರುವಾಗಿದೆ. ಕೊರವರ ಬುಡ್ಡಮ್ಮ, ಲಂಬಾಣಿಯ ಸೋನಿ, ಜಾತಿಗೇರ ಮಾಬಿ ಮೂರು ಬುಡಕಟ್ಟುಗಳಿಗೆ ಸೇರಿದ ಈ ಹೆಂಗಸರ ಬದುಕಿನ ಸ್ಥಿತಿ ಮತ್ತು ಗತಿ ಒಂದೇ ಬಗೆಯದ್ದು. ಮಾಬಿ ಒಳ್ಳೆಯ ಜೀವನ ಸಾಗಿಸಿದಳೆಂಬಂತೆ ಕಂಡರೂ ಅಂತಿಮವಾಗಿ ಆಕೆ ತಲುಪುವ ದಾರಿ ಬೇರೆಯಾಗಿಲ್ಲ.

ಅಧ್ಯಾಯ ಒಂಬತ್ತು: ಕಾವ್ಯ ಸಾಹಿತ್ಯ

ಬಿ.ಎಂ.ಶ್ರೀ. ಅವರಿಗೆ ಸ್ವಾಗತ

ಅನೇಕ ಬಗೆಯ ತಲ್ಲಣಗಳು

ನವ್ಯ ಸಾಹಿತ್ಯದ ಬೆನ್ನುಹತ್ತಿ

ಬಂಡಾಯ-ದಲಿತ ಸಾಹಿತ್ಯ ಚಳುವಳಿ ಜತೆಯಲ್ಲಿ

ಪ್ರತಿಭಟನೆಗಳು: ವ್ಯವಸ್ಥೆಯ ವಿರುದ್ಧ

ಪುರೋಹಿತ ಶಾಹಿಗಳ ವಿರುದ್ಧ

ಕೆಳವರ್ಗದವರ ಜತೆಯಲ್ಲಿ

ಸ್ತ್ರೀ ಸ್ವಾತಂತ್ರ್ಯ

ಮಹಾಪುರುಷರ ನೆನಪುಗಳ ಮೂಲಕ

ಜನಪದ ಕಾವ್ಯ ರೂಪಗಳಲ್ಲಿ ಬಂಡಾಯ ದಲಿತ ಕಾವ್ಯದ ಆಶಯಗಳು

ಅಧ್ಯಾಯ ಒಂಬತ್ತು: ಕಾವ್ಯ ಸಾಹಿತ್ಯ

ಬಿ.ಎಂ.ಶ್ರೀ. ಅವರಿಗೆ ಸ್ವಾಗತ

ಈ ನಮ್ಮ ನಾಡಿಂಗೆ ಓಡಿ ಬನ್ನಿ
ನಿಮ್ಮವರ ನೋಡ ಬನ್ನಿ
ಕಕ್ಕುಲತೆಯಿಂದ ಮಾತಾಡ ಬನ್ನಿ
ಎಮ್ಮೊಡನೆ ಕೂಡ ಬನ್ನಿ

'ತುಂಗ'ನಾಳಿದ ತಿರುಳುಗನ್ನಡದ ನಾಡು
ದಾಸರಿಂ ಪಾವನತೆಯೊಂದಿದೀ ನಾಡು
ಇಕ್ಕೆಲದ ಸೆಳೆತಕ್ಕೆ ಶೀಳಾಗಿ ಪಾಡು
ಎಂಗಡಿಸಿ ಹೇಗಾಗಿ ಹೋಗಿಹುದು ನೋಡು

ಕಳೆದುದಕೆ ಅಳುತಳುತ ಕುಳಿತು ಫಲವೇನು?
ಮೊಳೆತಿರಲು ತನ್ನರಿಹು ಸಾಲದೇನು?
ಮೊಳಕೆ ಕಮರದ ತೆರದಿ ಮಳೆಗರೆದು ನೀನು
ಪಾಲಿಸೈ, ಲಾಲಿಸೈ, ಕೇಳಲಿನ್ನೇನು?

ಬಿಸಿಲ ಬೇಗೆಗೆ ಬೆಂದು ಬಾಡುತಿದೆ ನಾಡು
'ಆಚಾರ್ಯ' ನಿನಗೆ ಮೊರೆ ಹೊಗುತಲಿದೆ ಕಾಡು
ಬೇಗ ಬಾ, ಬೇಗ ಬಾ ಬಂದು ಕಾಪಾಡು
ಶುಷ್ಕ ಹೃದಯಕ್ಕೆ ತಂಪ-ಕಂಪ-ನೀಡು

ಮಂದ ಮಾರುತವಾಗಿ ತೇಲಿ ಬಾರೈ
ಹರಿವ ಹೊಳೆಯಾಗಿ ನೀ ಸಾಗಿ ಬಾರೈ
ಭೋರ್ಗರೆವ ಮಳೆಯಾಗಿ ಮೊರೆದು ಬಾರೈ
ಸುಸ್ವಾಗತವು ನಿನಗೆ 'ಶ್ರೀ'ಯೆ ಬಾರೈ.

೧೯೩೭ರಲ್ಲಿ ಪ್ರಕಟವಾದ 'ಮೊಗ್ಗಿನ ಮಾಲೆ' ಎಂಬ ಚಿಕ್ಕ ಕವನ ಸಂಕಲನದಲ್ಲಿ 'ಸ್ವಾಗತ'ಎಂಬ ಈ ಕವಿತೆಯನ್ನು ಜೆ.ಕೆ.ಪಿ. (ಜೆ.ಕೆ.ಪ್ರಾಣೇಶಾಚಾರ್ಯ) ಬರೆದಿದ್ದಾರೆ. ಇದೊಂದು ಆ್ಯಂಥಾಲಜಿ. ಹೈದರಾಬಾದ್ ತರುಣ ಕನ್ನಡಿಗರ ತಂಡವು ಈ ಕೃತಿಯನ್ನು ಪ್ರಕಟಿಸಿದೆ. ಈ ತರುಣರ ತಂಡ ತಾವು ಆಚರಿಸಿದ ನಾಡಹಬ್ಬಕ್ಕೆ ಬಿ.ಎಂ.ಶ್ರೀ. ಅವರನ್ನು ಹೈದರಾಬಾದಿಗೆ ಆಹ್ವಾನಿಸಿ ಆ ಸಂದರ್ಭದಲ್ಲಿ 'ಮೊಗ್ಗಿನ ಮಾಲೆ' ಯನ್ನು ಪ್ರಕಟಿಸಿ 'ಶ್ರೀ' ಅವರಿಗೆ ಅರ್ಪಿಸಿತು. 'ಸ್ವಾಗತ' ಎಂಬ ಮೇಲಿನ ಗೀತೆಯಲ್ಲಿ ಹೈದರಾಬಾದ್ ಕರ್ನಾಟಕದ ಸಾಂಸ್ಕೃತಿಕ ಕಥೆಯೇ ಅಡಗಿದಂತಿದೆ. ಈ ಪ್ರದೇಶದಲ್ಲಿ ನಿಜಾಮನ ಆಳ್ವಿಕೆಯಿತ್ತು. ಉರ್ದು ಆಡಳಿತ ಭಾಷಾಯಾಗಿದ್ದರಿಂದ ಕನ್ನಡ ವಾತಾವರಣವೇ ಇಲ್ಲದಂತಾಗಿತ್ತು. ಈ ಪ್ರದೇಶವು ಆಂಧ್ರ ಮತ್ತು ಮಹಾರಾಷ್ಟ್ರಗಡಿ ಭಾಗದಲ್ಲಿ ಇರುವುದರಿಂದ ತೆಲುಗು, ಮರಾಠಿ ಭಾಷೆಗಳೂ ಜನ ಸಾಮಾನ್ಯರ ವ್ಯವಹಾರದಲ್ಲಿ ಒತ್ತರಿಸಿದ್ದವು. ಇದರಿಂದ ಉರ್ದು ಮತ್ತು ಗಡಿ ಭಾಗದ ತೆಲುಗು,

ಮರಾಠಿ ಭಾಷೆಗಳ ನಡುವೆ ಕನ್ನಡ ಸೊರಗಿದಂತಾಗಿ ಹೋಗಿತ್ತು. ಕಳೆದ ಎರಡು ಶತಮಾನಗಳಿಂದ ಲಿಖಿತ ರೂಪದ ಸಾಹಿತ್ಯ ಸೃಷ್ಟಿಗೆ ವಾತಾವರಣವೇ ಇರಲಿಲ್ಲ. ಆದ್ದರಿಂದಲೇ ಏನೋ ಮೌಖಿಕ ಸಾಹಿತ್ಯ ಜೀವಂತವಾಗಿತ್ತು. ೨೦ನೆಯ ಶತಮಾನ ಬಂದು ಕಾಲು ಭಾಗ ಕಳೆಯುತ್ತಿದ್ದಂತೆ ಬೇರೆ ಪ್ರದೇಶಗಳಲ್ಲಿ ನವೋದಯ ಕಾವ್ಯ ಉತ್ಸಾಹದಿಂದ ಸೃಷ್ಟಿಯಾಗುತ್ತಿದ್ದುದನ್ನು ಗಮನಿಸುತ್ತಿದ್ದ ಈ ಭಾಗದ ಕನ್ನಡ ಭಾಷೆ, ಸಾಹಿತ್ಯಾಭಿಮಾನಿಗಳಲ್ಲಿ ಸ್ಫೂರ್ತಿ ಮೈ ತುಂಬುತ್ತಿತ್ತು. ಆದರೆ ಸಾಂಸ್ಕೃತಿಕ ವಾತಾವರಣವೇ ಇಲ್ಲದಂಥ ಈ ಪ್ರದೇಶದಲ್ಲಿ, ಸಾಹಿತ್ಯಾಭಿಮಾನಿಗಳ ತಲ್ಲಣ ಶುರುವಾಗಿತ್ತು. ಇಂಥ ಸಂದರ್ಭದಲ್ಲಿ ಕನ್ನಡದ ಬಗ್ಗೆ ಸ್ವಾಭಿಮಾನದಿಂದ ಮಾತಾಡುವ ಮತ್ತು ತಮ್ಮ 'ಇಂಗ್ಲಿಶ್ ಗೀತಗಳು' ಕೃತಿಯ ಮೂಲಕ ನವೋದಯ ಕಾವ್ಯಕ್ಕೆ ಆದಿಯಾದ ಬಿ.ಎಂ.ಶ್ರೀ ಅವರು ಈ ಭಾಗದ ಕನ್ನಡ ಭಾಷಾಭಿಮಾನಿಯೊಬ್ಬನ ಉತ್ಕಟ ಪ್ರೇಮ ಅದು ಈ ಭಾಗದ ಕನ್ನಡಿಗರ ಪ್ರೇಮವೇ ಆಗಿತ್ತು ಎನ್ನಿಸುತ್ತದೆ. ಮೊದಲು ನಾಲ್ಕು ಸಾಲುಗಳಲ್ಲಿ 'ಶ್ರೀ' ಅವರನ್ನು ಕರೆಯುವ ದನಿಯಲ್ಲಿ ಆರ್ತತೆ ಇದೆ. ನಮ್ಮ ನಾಡಿಗೆ ಓಡಿ ಬನ್ನಿರಿ 'ನಿಮ್ಮವರ' ನೋಡಲು ಬನ್ನಿರಿ, 'ಕಕ್ಕುಲತೆ'ಯಿಂದ ಮಾತಾಡಲು ಬನ್ನಿರಿ ಎಂಬ ಕರೆಯಲ್ಲಿ ಉತ್ಕಟತೆಯ ತುದಿ ಕಾಣುತ್ತದೆ. 'ಕಕ್ಕುಲತೆ'ಎಂಬ ಶಬ್ದದಲ್ಲಿ ಎಲ್ಲವನ್ನೂ ಕಳೆದುಕೊಂಡು ಬರ್ಬರ ಬದುಕಿನ ಸ್ಥಿತಿ ತಲುಪಿದ ವ್ಯಕ್ತಿಗೆ ಉಂಟಾದ ಅನಾಥ ಅವಸ್ಥೆಯನ್ನು ಹೇಳುತ್ತದೆ. ಇಂಥ ಅನಾಥ ವ್ಯಕ್ತಿ 'ಕಕ್ಕುಲತೆಯಿಂದ ಮಾತಾಡಿ ಬನ್ನಿ' ಎಂದು ಮೊರೆಯಿಡುವುದರ ಹಿಂದೆ ಶತಮಾನಗಳ ಪ್ರೀತಿಯ ಕೊರತೆ ಕಾಣಿಸುತ್ತದೆ. ಕವಿರಾಜ ಮಾರ್ಗಕಾರ ಹುಟ್ಟಿದ, ಶರಣರು, ದಾಸರು, ಸೂಫಿಗಳು, ತತ್ವಪದಕಾರರು ಬಾಳಿ ಬದುಕಿದ ನಾಡಿನಲ್ಲಿ, ಸಾಹಿತ್ಯದ 'ಸುವರ್ಣಯುಗ'ವೇ ಇದ್ದಂಥ ನಾಡಿನಲ್ಲಿ ಈಗ ಭಾಷೆ ಮತ್ತು ಸಾಹಿತ್ಯ ಎಂಬ ಸಂಪತ್ತು ದರೋಡೆಕೋರರ ಪಾಲಾದಂತೆ ಕಾಣತೊಡಗಿತ್ತು. ತಿರುಳುಗನ್ನಡದ ನಾಡು 'ಇಕ್ಕೆಲದ ಸೆಳೆತಕ್ಕೆ ಶೀಳಾಗಿ' ಹೋಗಿದೆ. ಆದರೆ ಈ ಕವಿಗೆ ಹಿಂದೆ ಆಗಿ ಹೋದದ್ದರ 'ಅರಿವು' ಇರುವುದರಿಂದಲೇ ಆಶಾವಾದಿಯಾಗಿದ್ದಾನೆ. ಈ ಅರಿವಿನಿಂದಲೇ ಪುನಃ ಸಂಪದ್ಭರಿತ ನಾಡನ್ನು ಕಟ್ಟಬಹುದೆಂಬ ಅದಮ್ಯ ಬಯಕೆಯಿದೆ. ಅದಕ್ಕೆ ಕನ್ನಡದ ಕಟ್ಟಾಳು 'ಶ್ರೀ' ಅವರನ್ನು 'ಮೊಳಕೆ ಕಮರದ ತೆರದಿ ಮಳೆಗರೆದು' ನೀನು ಬಾ ಎಂದು ಹಂಬಲಿಸುತ್ತಾನೆ. ವೈಭವದ ನಾಡು ಬಿಸಿಲಿಗೆ ಒಣಗಿದ ಕಾಡಾಗಿದೆ. ಈ ಕಾಡಿಗೆ ಮಂದ ಮಾರುತವಾಗಿ, ಹರಿವ ಹೊಳೆಯಾಗಿ, ಭೋರ್ಗರೆಯುವ ಮಳೆಯಾಗಿ ಬಾ ಎಂದು ಈ ಕವಿ ಆಹ್ವಾನಿಸಿದ್ದಾನೆ.

ಹೈದರಾಬಾದ್ ಕರ್ನಾಟಕ ಪ್ರದೇಶದ ಕನ್ನಡ ಭಾಷೆ ಮತ್ತು ಸಾಹಿತ್ಯಾಭಿಮಾನಿಗಳಿಗೆ ಎರಡು ಕಾರಣಗಳಿಂದ ಬಿ.ಎಂ.ಶ್ರೀ ಮುಖ್ಯರಾಗಿದ್ದಾರೆ. ಒಂದು, ಕನ್ನಡ ಸಂಸ್ಕೃತಿಯ ಬಗ್ಗೆ ಸ್ವಾಭಿಮಾನದಿಂದ ಮಾತಾಡುವ ಮತ್ತು ಅದನ್ನು ಕಟ್ಟುವ ಕಾರಣಕ್ಕೆ. ಇನ್ನೊಂದು ನವೋದಯ ಕಾವ್ಯದ ಹರಿಕಾರರು ಆದುದಕ್ಕೆ. ಗದ್ಯ ಬರವಣಿಗೆ ಅಷ್ಟಾಗಿ ಈ ಪ್ರದೇಶದಲ್ಲಿ ಇರಲಿಲ್ಲ ಎನಿಸುತ್ತದೆ. ಹೇರಳವಾಗಿ ತತ್ವಪದ ಸಾಹಿತ್ಯ ಬಾಯಿ ಮಾತಿನಲ್ಲಿ ಕಾವ್ಯ ರೂಪದಲ್ಲಿತ್ತು. ಕಾವ್ಯ ಪ್ರಕಾರ ಎಷ್ಟು ಜನಪ್ರಿಯವಾಗಿತ್ತೆಂದರೆ 'ಮೊಗ್ಗಿನ ಮಾಲೆ' ಕವನ ಸಂಕಲನದ 'ಓಂ'(ಪ್ರಸ್ತಾವನೆ) ಭಾಗ ಕಾವ್ಯ ರೂಪದಲ್ಲಿದೆ. 'ಅರ್ಪಣೆ' ಕಾವ್ಯ ರೂಪದಲ್ಲಿದೆ. ಬಿ.ಎಂ.ಶ್ರೀ ಅವರೂ ಈ ಕೃತಿಗೆ ಮುನ್ನುಡಿಯನ್ನು ಕಾವ್ಯದಲ್ಲಿ ಬರೆದಿದ್ದಾರೆ. 'ಸ್ವಾಗತ' ಕೂಡ ಕಾವ್ಯದಲ್ಲಿದೆ. (ಈ ಕೃತಿಯ ಬೆನ್ನು ಪುಟಕ್ಕಿರುವ ಕಬ್ಬಿಣದ ವಸ್ತುಗಳನ್ನು ಮಾರುವ ಒಂದು ಜಾಹೀರಾತು ಕೂಡ ಕಾವ್ಯದಲ್ಲಿದೆ). ಪಂಚಾಕ್ಷರಿ ಹಿರೇಮಠರ 'ಚೈತಾಕ್ಷಿ' ಕವನ ಸಂಕಲನಕ್ಕೆ ಜಯದೇವಿ ತಾಯಿ ಲಿಗಾಡೆ, ಈಶ್ವರ ಸಣಕಲ್ಲ ಮುಂತಾದವರು ಪ್ರತಿಕ್ರಿಯೆಯನ್ನು ಕಾವ್ಯ ರೂಪದಲ್ಲಿ ಬರೆದಿದ್ದಾರೆ. ಕಾವ್ಯ ಹಲವು ಕ್ರಿಯೆಯಗಳಲ್ಲಿ ಕಾಣಿಸಿರುವುದನ್ನು ನೋಡಿದರೆ ಸಾಹಿತಿಗಳಿಗೆ ಕನ್ನಡ ಭಾಷೆ ಮತ್ತು ಕಾವ್ಯ ಬದುಕಿನ ಭಾಗವಾಗಿತ್ತು.

೧೯೨೧ರಲ್ಲಿ ಬಿ.ಎಂ.ಶ್ರೀ ಅವರು 'ಇಂಗ್ಲಿಷ್ ಗೀತಗಳು' ಪ್ರಕಟಿಸುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೊಸಗನ್ನಡ ಸಾಹಿತ್ಯಕ್ಕೆ ಅದರಲ್ಲೂ ನವೋದಯ ಕಾವ್ಯಕ್ಕೆ ದಾರಿ ತೆರೆದರು. ಉರ್ದು ಪರಿಸರದ ಈ ಭಾಗದಲ್ಲಿ ತಡವಾಗಿಯಾದರೂ 'ಇಂಗ್ಲಿಷ್

ಗೀತಗಳು' ಕೃತಿಯಿಂದ ಸ್ಫೂರ್ತಿ ಪಡೆದು ಕಾವ್ಯ ರಚನೆಯಾಗ ತೊಡಗಿತು. 'ಮೊಗ್ಗಿನ ಮಾಲೆ' ೧೯೩೦ರಲ್ಲಿ ಹೊರ ಬಂದದ್ದು. ಅದರಲ್ಲೂ ಹೈದರಾಬಾದಿನ ತರುಣರ ತಂಡ ಈ ಸಂಕಲನವನ್ನು ಪ್ರಕಟಿಸಿದ್ದು ಗಮನಿಸಿದರೆ ಇನ್ನು ಹೆಚ್ಚಿನ ವಿಷಯಗಳು ಗಮನಕ್ಕೆ ಬರುತ್ತವೆ. 'ಹೈದರಾಬಾದ್ ಕರ್ನಾಟಕ' ಪ್ರದೇಶದ ವಿದ್ಯಾರ್ಥಿಗಳೆಲ್ಲ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೈದರಾಬಾದ್ ನಗರಕ್ಕೆ ಹೋಗಬೇಕಾಗಿತ್ತು. ಅಲ್ಲಿ ಉರ್ದು-ಇಂಗ್ಲಿಷ್ ನಲ್ಲಿ ವಿದ್ಯಾಭ್ಯಾಸ ಮಾಡಿದರೂ ಕೂಡ, ಕನ್ನಡದಲ್ಲಿ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಉರ್ದು ಪರಿಸರದಲ್ಲಿ ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ಉತ್ಸಾಹದಿಂದ ಸ್ವಾಭಿಮಾನದಿಂದ ಮಾಡಲು ಹೋರಾಟ ನಡೆಸಬೇಕಾಗಿತ್ತು. ಹಾಗೆಯೇ 'ಹೈದರಾಬಾದ್ ಕರ್ನಾಟಕ'ವನ್ನು ನಿಜಾಮನ ಆಳ್ವಿಕೆಯಿಂದ ಮುಕ್ತಿಗೊಳಿಸಿ, ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಲು ಹೋರಾಟ ನಡೆಸಬೇಕಾಗಿತ್ತು. ಈ ಎರಡು ಚಟುವಟಿಕೆಗಳನ್ನು ಈ ಪ್ರದೇಶದ ಕನ್ನಡ ವಿದ್ಯಾರ್ಥಿಗಳು ಮಾಡುವುದು ಅನಿವಾರ್ಯವಾಗಿತ್ತು ಎನಿಸುತ್ತದೆ. ಈ ದಶಕದ ಪ್ರಾರಂಭದಲ್ಲಿ ಈ ಪ್ರದೇಶದ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಚಟುವಟಿಕೆಗಳನ್ನು ಸುರುಮಾಡಿದ್ದು ಹೈದರಾಬಾದ್ ನಗರದಲ್ಲಿಯೇ. ಕನ್ನಡ ಸಾಂಸ್ಕೃತಿಕ ಕೇಂದ್ರವಾಗಿ ಹೈದರಾಬಾದ್ ನಗರ ಪರಿಣಮಿಸಿತ್ತು. ಹೈದರಾಬಾದಿನಲ್ಲಿದ್ದ ತರುಣ ತಂಡದವರೆಲ್ಲ ಈ ಪ್ರದೇಶದ ವಿದ್ಯಾರ್ಥಿಗಳೇ. ಹೆಚ್ಚಾಗಿ ಬ್ರಾಹ್ಮಣರು ಈ ಸಂಕಲನದ ಕವನಗಳ ಮೇಲೆ 'ಇಂಗ್ಲಿಷ್ ಗೀತಗಳು'ಪ್ರಭಾವವಿದೆ. ನವೋದಯ ಕಾವ್ಯದ ಆಶಯಗಳಾದ ಆದರ್ಶ, ಕನಸು, ಆತ್ಮನಿವೇದನೆ, ಔದಾರ್ಯ, ಪ್ರಕೃತಿಯ ಆರಾಧನೆ ಎಲ್ಲ ಅಂಶಗಳಿವೆ. 'ಮೊಗ್ಗಿನ ಮಾಲೆ'ಎಂಬ ಶೀರ್ಷಿಕೆಯೇ ಸೂಚಿಸುವಂತೆ ಈ ಕವನಗಳು ಈ ಕವಿಗಳ ಪ್ರಾರಂಭದ ಪ್ರಯತ್ನಗಳಾಗಿವೆ. ಜೆ.ಕೆ.ಪಿ., ರಾಘವೇಂದ್ರಾಚಾರ್ಯ, ಮಲಕ ಸಮುದ್ರ ಸ್ವಾಮಿ, ವೆಂಕಟೇಶ, ಶಿ.ಭಾ., ಅ.ಕೃ.ಕಟ್ಟಿ, ಹ.ಕೃ.ಕಮತಗಿ, ಮಾನ್ವಿ ಜಾಗಿರದಾರ, ನಾಡಿಗ ಇವರ ಕವಿತೆಗಳಿವೆ. ಇವರಲ್ಲಿ ಯಾರೂ ಈ ಭಾಗದಿಂದ ಹೆಚ್ಚಿನ ಕಾವ್ಯಕೃಷಿ ಮಾಡಿದ್ದು ಕಾಣುವುದಿಲ್ಲ. ಸ್ವತಂತ್ರ ಕೃತಿಗಳೂ ಹೊರ ಬಂದದ್ದು ಇಲ್ಲ. ಆದರೆ ಇವರೆಲ್ಲ ಮುಂದಿನ ಕವಿಗಳಿಗೆ ಸ್ಫೂರ್ತಿ, ಮಾರ್ಗದರ್ಶನ ಮಾಡಿರುವುದು ಕಂಡುಬರುತ್ತದೆ.

ಮೂವತ್ತರ ದಶಕದಲ್ಲಿ ಈ ಪ್ರದೇಶದ ಸಾಹಿತ್ಯಾಭಿಮಾನಿ ವಿದ್ಯಾರ್ಥಿಗಳು ಹೈದರಾಬಾದ್ ನಗರವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿಕೊಂಡು ಹಲವು ರೀತಿಯಲ್ಲಿ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದಂತೆ, ನಲವತ್ತರ ದಶಕದಲ್ಲಿ ಲಿಂಗಾಯತರೇ ಹೆಚ್ಚಾಗಿದ್ದ 'ಸಂಗಡಿಗರ ಸಮಿತಿ' (ರಾಯಚೂರು) **'ಮುಸುಕು ತೆರೆ'** (೧೯೪೭) ಎಂಬ ಸಂಕೀರ್ಣ ಕೃತಿಯನ್ನು ಹೊರ ತರುವುದರ ಮೂಲಕ ರಾಯಚೂರು ನಗರವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿತು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಶಾಂತರಸರ ಸಂಪಾದಕತ್ವದಲ್ಲಿ 'ಮುಸುಕು ತೆರೆ' ಕೃತಿ ಹೊರಬಂದಿತು. ಕಾವ್ಯಾನಂದ, ಕಲಾನಂದ, ಅಮರಾನಂದ, ಶಾಂತರಸ, ಶಿವಲೆಂಕ, ಎಂ.ಶಿವಯ್ಯ, ವಿ.ಎಂ.ಗುಂಡಾರಾಧ್ಯ, ಮಲ್ಲಿಕಾರ್ಜುನ ಮಸ್ಕಿ ಇವರ ಕವಿತೆಗಳು ಈ ಕೃತಿಯಲ್ಲಿವೆ. ಕವನ, ಕಥೆ, ಅನುವಾದ, ಹರಟೆ ಈ ಪ್ರಕಾರಗಳು ಇದರಲ್ಲಿವೆ. ಇವರೆಲ್ಲರೂ ಕೂಡ ಹೈದರಾಬಾದ್ ನಗರದಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದವರು. ಅದರ ಸ್ವರೂಪವನ್ನು ಬಲ್ಲವರಾಗಿದ್ದವರು. 'ಮೊಗ್ಗಿನ ಮಾಲೆ'ಕೃತಿಯ ಕವಿತೆಗಳನ್ನು ಗಮನಿಸಿದರೆ, ಕೇವಲ ನವೋದಯ ಸಾಹಿತ್ಯದ ಆಶಯಗಳಿಗೆ ಮಾತ್ರ ಸೀಮಿತವಾಗಿತ್ತು. ಅಂದರೆ ಆದರ್ಶ, ಕನಸು, ಪ್ರಕೃತಿ ಆರಾಧನೆ ಮುಂತಾದ ಭಾವನೆಗಳ ಅಭಿವ್ಯಕ್ತಿ ಇತ್ತು. ಹೈದರಾಬಾದ್ ಕರ್ನಾಟಕ ಪ್ರದೇಶದ ತಲ್ಲಣಗಳಿಗೆ ಕಾವ್ಯದಲ್ಲಿ ಸ್ಥಾನವಿರಲಿಲ್ಲ. ಆದರೆ 'ಮುಸುಕು ತೆರೆ'ಕೃತಿಯ ಕವನಗಳಲ್ಲಿ ನವೋದಯ ಕಾವ್ಯದ ರೂಪ, ಶೈಲಿಯ ಒಡಲೊಳಗೆ ಈ ಪ್ರದೇಶದ ಬಿಕ್ಕಟ್ಟುಗಳ ಬಗ್ಗೆ ಆತಂಕಗಳಿವೆ. ಕಲಾನಂದರ **'ಸ್ವರ್ಗ'**, **'ಪರಮಾಣು ಬಾಂಬ್'** ಶಿವಲೆಂಕರ **'ಮುಸುಕು ತೆಗೆ'**, ವಿ.ಎಂ. ಗುಂಡಾರಾಧ್ಯರ **'ಲೋಕ ಶಾಂತಿ'**, ಶಾಂತರಸರ **'ಬೇಗಂ ಪಾಕಿಸ್ತಾನ'**, ಕಾವ್ಯಾನಂದರ **'ಸಲಾಮ್ ಸಾಬ್'** ಎಂಬ ಕವಿತೆಗಳು ಕುತೂಹಲಕಾರಿಯಾಗಿವೆ.

ಅನೇಕ ಬಗೆಯ ತಲ್ಲಣಗಳು

೧೯೫೭, ಏಪ್ರಿಲ್ ನಲ್ಲಿ **'ಮುಸುಕು ತೆರೆ'** ಬಿಡುಗಡೆಯಾಗಿದೆ. ಈ ಕೃತಿಯ ರಚನೆಗಳು ನಲವತ್ತರ ದಶಕದಲ್ಲಿ ಆಗಿರಬಹುದು. ಈ ಅವಧಿಯಲ್ಲಿ ಸ್ವಾತಂತ್ರ್ಯ ಹೋರಾಟವು ತೀವ್ರ ಸ್ವರೂಪದಲ್ಲಿತ್ತು. ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಗುವ ಗಳಿಗೆಗಳು ಸಮೀಪಿಸಿದ್ದವು. ಆದರೆ 'ಹೈದರಾಬಾದ್ ಕರ್ನಾಟಕ'ಕ್ಕೆ ಸ್ವಾತಂತ್ರ್ಯ ಸಿಗುವ ಸಾಧ್ಯತೆಗಳಿಲ್ಲ ಎಂಬ ಆತಂಕದ ವಾತಾವರಣ ಮೂಡಿತ್ತು. ನಿಜಾಮನ ಆಡಳಿತದಿಂದಲೂ ಮುಕ್ತರಾಗಬೇಕೆಂಬ ಕನಸು ತೀವ್ರವಾಗಿ ಕಾಡುತ್ತಿತ್ತು. ಇಂತ ಸಂದರ್ಭದಲ್ಲಿ ಈ 'ಮುಸುಕು ತೆರೆ' ಕೃತಿ ಹೊರಬಂದಿದೆ. ಸಾಹಿತ್ಯಕವಾಗಿ ನವೋದಯ ಸಾಹಿತ್ಯ ಚಳುವಳಿಯ ಕಾವು ಕಮ್ಮಿಯಾಗ ತೊಡಗಿತ್ತು. ಆದರೆ ಅದು ತನ್ನ ಸಾಧನೆಯನ್ನು ಸಮರ್ಥವಾಗಿಯೇ ದಾಖಲಿಸಿತ್ತು. ಬಿ.ಎಂ.ಶ್ರೀ., ತೀ.ನಂ.ಶ್ರೀ., ಡಿ.ವಿ.ಜಿ., ಗೋವಿಂದ ಪೈ, ಮಾಸ್ತಿ, ಪಂಜೆ ಮುಂತಾದವರು ಮೊದಲ ಪೀಳಿಗೆಯ ನವೋದಯ ಕವಿಗಳು ಹಾಗೂ ನಂತರದ ಬೇಂದ್ರೆ, ಕಾರಂತ, ಕುವೆಂಪು, ಪು.ತಿ.ನ. ಅವರಿಂದ ಈ ಕಾಲದಲ್ಲಿ ಸಾಹಿತ್ಯ ಸಮೃದ್ಧವಾಯಿತು. ಇವರ ಹಾದಿಯಲ್ಲೇ ಸಾಗಿದ ಅಡಿಗ, ಗೋಕಾಕ್, ಕೆ.ಎಸ್.ನ., ಕಣವಿ, ಶಿವರುದ್ರಪ್ಪ ಮುಂತಾದವರು. ನಂತರ ನವ್ಯ ಸಾಹಿತ್ಯಕ್ಕೆ ಒಲಿದು ಹೊಸ ಆಯಾಮಗಳನ್ನು ಸೇರಿಸಿಕೊಂಡರು. ಇವರೆಲ್ಲರೂ ತಮ್ಮ ಕಾವ್ಯ ರಚನೆಯಲ್ಲಿ ಭಿನ್ನತೆಯನ್ನು, ವೈಶಿಷ್ಟ್ಯವನ್ನು ಸಾಧಿಸಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಕವಿಗಳ ಮೇಲೆ ಇವರೆಲ್ಲರೂ ಪ್ರಭಾವ ಬೀರಿರುವುದು ನಿಜ. ಆದರೆ ಎಲ್ಲವೂ ಮೇಲ್ಪದರಿನ ಅನುಕರಣೆ ಮತ್ತು ತಾತ್ಕಾಲಿಕ ಪ್ರಭಾವ ಆದಂತೆ ಕಾಣುತ್ತದೆ. ಪ್ರಭಾವವನ್ನು ಅರಗಿಸಿಕೊಂಡು ವೈಶಿಷ್ಟ್ಯವನ್ನು ತೋರಿಸುವ ಗುಣ ಈ ಭಾಗದ ಕವಿಗಳಲ್ಲಿ ಕಾಣುವುದಿಲ್ಲ. ಇದಕ್ಕೆ ಅನೇಕ ಸಾಂಸ್ಕೃತಿಕ ತೊಡಕುಗಳಿವೆ. ಆದರೆ ಇದರಿಂದಾಗಿ ಸ್ಪಷ್ಟವಾದ ಧೋರಣೆ ಕಾಣುವುದಿಲ್ಲ. ಈ ಭಾಗದ ತಲ್ಲಣಗಳಿಗೂ, ಈ ಕವಿಗಳ ತಲ್ಲಣಗಳಿಗೂ ಸಂಬಂಧ ಕಲ್ಪಿಸಲು ಕಷ್ಟವಾಗುತ್ತದೆ. ರಜಾಕಾರರ ಆಕ್ರಮಣಕ್ಕೆ, ಭೂಮಾಲೀಕರ ಅಧೀನದಲ್ಲಿ ಜನ ಸಾಮಾನ್ಯರು ನೋವು ಉಣ್ಣುತ್ತಿದ್ದರೆ, 'ಮೊದಲು ಮಾನವನಾಗು' ಎಂಬ ಆದರ್ಶದ ಕನಸುಗಳು ಈ ನೆಲದಲ್ಲಿ ಬಿತ್ತಿ ಬೆಳೆಯಲು ಸಾಧ್ಯವೇ? ಅಥವಾ ಉಚಿತವೇ? ನವೋದಯ ಕಾಲದ ಕವಿಗಳಿಗೆ ಮಾನವತಾವಾದ, ಆದರ್ಶ, ಕನಸುಗಳು ಮುಖ್ಯವಾಗಿದ್ದವು, ರಾಷ್ಟ್ರೀಯವಾದವನ್ನು ಎತ್ತಿ ಹಿಡಿಯುವುದು ಅನಿವಾರ್ಯವಾಯಿತು. ದೇಶಾಭಿಮಾನ, ಭಾಷಾಭಿಮಾನಗಳಲ್ಲಿ ಆಯ್ಕೆಗಳಿರಲಿಲ್ಲ. ಅವೆರೆಡು ಒಂದೇ ನಾಣ್ಯದ ಎರಡು ಮುಖಗಳಾಗಿ ಪರಿಣಮಿಸಿದವು. ಇದರಿಂದಾಗಿ ರಾಷ್ಟ್ರೀಯತೆಯ ವೈಭವದಲ್ಲಿ ಸ್ಥಳೀಯತೆಯನ್ನು ಮರೆಯುವುದು ಅಥವಾ ಬದಿಗಿರಿಸುವುದು ಅನಿವಾರ್ಯವಾಯಿತು. ಸ್ವಾತಂತ್ರ್ಯ ಪಡೆಯುವ ಒಂದೇ ಗುರಿಯನ್ನು ಹೊಂದಿದ್ದರಿಂದ, ಒಟ್ಟು ಮನುಷ್ಯರನ್ನು 'ಭಾರತೀಯ'ನನ್ನಾಗಿ ಗ್ರಹಿಸುವುದು ಸದ್ಯದ ತುರ್ತಾಗಿತ್ತು. ಇದರಿಂದ ನವೋದಯ ಸಾಹಿತಿಗಳ ಸಾಮಾಜಿಕ ಕಾಳಜಿ ಎಂದರೆ ಮಾನವೀಯತೆ, ಉದಾರವಾದಿತನವೇ ಆಗಿತ್ತು. ಆರ್ಥಿಕ ಸ್ಥಿತಿಗಳ ಮೇಲೆ ವರ್ಗ, ವರ್ಗಗಳ ನಡುವಿನ ವ್ಯತ್ಯಾಸವನ್ನು ಅರಿಯದೆ ವಿಶ್ವಮಾನವತ್ವದ ಕಲ್ಪನೆ ರೂಪಿಸಿಕೊಂಡಿದ್ದರು. ಇದರಿಂದ ನವೋದಯ ಕವಿಗಳಲ್ಲಿ ಕುವೆಂಪು ಅವರನ್ನು ಹೊರತು ಪಡಿಸಿದರೆ ಬಡತನ, ಜಾತೀಯತೆ, ವರ್ಣವ್ಯವಸ್ಥೆ, ಮೂಢನಂಬಿಕೆ, ಸಂಪ್ರದಾಯಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿರುವ ಗುಣ ಕಂಡು ಬರುವುದಿಲ್ಲ. ಬದಲಾಗಿ ಸುಧಾರಣವಾದಿ ಗುಣ ಕಂಡು ಬರುತ್ತದೆ. ಇದು ಉದಾರವಾದಿ ನಿಲವು ಎನಿಸುತ್ತದೆ.

ನವೋದಯ ಕಾಲದ ಎಲ್ಲ ಲಕ್ಷಣಗಳನ್ನು ಹೈದರಾಬಾದ್ ಪ್ರದೇಶದ ಕವಿಗಳು ಅನುಸರಿಸಿದರು. ಆದರೆ ಅವು ಈ ಭಾಗದ ರಾಜಕೀಯ, ಸಾಮಾಜಿಕ ಸಂದರ್ಭದ ತಲ್ಲಣಗಳಿಗೆ ನಂಟು ಮಾಡುವುದನ್ನು ಅಷ್ಟಾಗಿ ಯೋಚಿಸಿದಂತೆ ಕಾಣುವುದಿಲ್ಲ. ನಾಡು ಬ್ರಿಟಿಷರ ಕೈಯಲ್ಲಿ, ನಿಜಾಮರ ಕೈಯಲ್ಲಿದ್ದರೂ ಜನಸಾಮಾನ್ಯರು ಧಾರ್ಮಿಕವಾಗಿ ಪುರೋಹಿತ ಶಾಹಿಗಳ, ಸಾಮಾಜಿಕವಾಗಿ ಭೂಮಾಲಿಕರ ಅಧೀನದಲ್ಲಿದ್ದರು. ಜನಸಾಮಾನ್ಯರು ಸ್ವಾತಂತ್ರ್ಯಕ್ಕಾಗಿ ಯಾರ ವಿರುದ್ಧ ಹೋರಾಟ ನಡೆಸಬೇಕು?ಯಾರ ಸಲವಾಗಿ ಮಾಡಬೇಕು?

ಉದರ ಪೋಷಣೆಗೆಂದು
ಕಡಲಿನಾಚೆಯ ಜನರು
ಬಂದು ನೆಲೆ ಊರಿದರು
ನಿನ್ನ ಮನೆಯಂಗಣದಿ
ನಾಡು ಕಾಡಾಯಿತ್ತು
ಒಡುಕುಗಳ ಬೀಡಾಯಿತ್ತು
ಬಡತನಕ್ಕೆ ತವರಾಯ್ತು
ಪರತಂತ್ರ ಸ್ಥಿರವಾಯಿತ್ತು!
ಸ್ವಾತಂತ್ರ್ಯ ಕನಸಾಯ್ತು!! **(ಮುಸುಕ ತೆಗೆ:ಶಿವಲೆಂಕ)**

ಈ ಕವಿಗೆ ಅಕ್ಕ ಪಕ್ಕದ, ಸುತ್ತ ಮುತ್ತಿನ ನಿಜಾಮನಾಗಲಿ, ರಜಾಕಾರರಾಗಲಿ, ಊರ ಮಠಾಧೀಶನಾಗಲಿ, ಊರ ಗೌಡ, ಕುಲಕರ್ಣಿಗಳು ಜನಸಾಮಾನ್ಯರಿಗೆ ನೀಡುವ ನೋವು ಕಾಣುವುದಿಲ್ಲ. ಬ್ರಿಟಿಷರು ಕಾಣಿಸುತ್ತಾರೆ. ಅವರನ್ನು ಹೊಡೆದೊಡಿಸಿ 'ಭಾರತಿ'ಗೆ ಮುಸುಕು ತೆರೆಯಲು ನಿವೇದಿಸಿಕೊಳ್ಳುತ್ತಾನೆ. ಸ್ಥಳೀಯ ವಿದ್ಯಮಾನಗಳು ಗೌಣವಾಗಿ ರಾಷ್ಟ್ರೀಯ ವಿದ್ಯಮಾನಗಳು ಮುಖ್ಯ ಎನಿಸುತ್ತವೆ.ಇದು ವೈರುಧ್ಯವೂ ಹೌದು. ವಾಸ್ತವವೂ ಹೌದು. ಬ್ರಿಟಿಷರ ದಾಸ್ಯದಿಂದ ಭಾರತವನ್ನು ಬಿಡುಗಡೆ ಮಾಡಲು ಹಂಬಲಿಸಿರುವುದೂ ವಾಸ್ತವ ಸಂಗತಿಯೇ.

ಕರ್ನಾಟಕದಲ್ಲಿ ಅದರಲ್ಲೂ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಬಹು ದೀರ್ಘಕಾಲದಿಂದ 'ಹಿಂದು-ಮುಸ್ಲಿಂ' ಸಮುದಾಯಗಳು ಕೂಡಿ ಬಾಳುತ್ತ ಬಂದಿವೆ. ನಲವತ್ತರ ದಶಕದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದಕ್ಕುವ ಸಮಯದಲ್ಲಿ ಮುಸ್ಲಿಂ ಸಮುದಾಯ 'ಪಾಕ್ತಿಸ್ಥಾನ'ವನ್ನು ಪ್ರತ್ಯೇಕವಾಗಿ ಮಾಡಿ 'ಮುಸ್ಲಿಂ ದೇಶ'ವನ್ನು ಕಟ್ಟಿಕೊಳ್ಳಬೇಕೆಂಬ ಪ್ರಯತ್ನವನ್ನು ತೀವ್ರಗೊಳಿಸಿತು. ದೇಶ ವಿಭಜನೆಯ ವಿಷಯ ರಾಜಕೀಯವಾದದ್ದು. ಆದರೆ ದೇಶ ಒಡೆಯುವ ಸಂಗತಿ ಪ್ರಜ್ಞಾವಂತರಿಗೆ ವ್ಯಥೆಯ ಸಂಗತಿಯಾಗಿ ಕಂಡಿದೆ.

ಮೃಗಜಲವ ಬೆನ್ನಟ್ಟಿ ಬಳಲುತಿಹೆಯೇಕೆ?
ಗಗನ ಕುಸುಮಕ್ಕೆ ನೆಗೆದು ಸೋಲುತಿರುವೇಕೆ?
ಮನೆದೀಪ ಮುದ್ದಿಸಿ ಮುಖ ಸುಡುವಿಯೇಕೆ?
ಬಾಳ ಬಟ್ಟಲಿನಲ್ಲಿ ವಿಷವೆರೆಯುವೇಕೆ?
ನಾವಿರುವದೊಂದೆ ಮನೆ ತಿಳಿದುನೋಡೆ
ಎಲ್ಲರೊಡನೊಡಗೂಡೆ ದೊರಕುವದು ಜಯಮಾಲೆ
ಇಲ್ಲದಿರೆ ಇಹುದೆಂದೆಂದಿಗೂ ನರಕ ನೆಲೆ **(ಬೇಗಂ ಪಾಕಿಸ್ತಾನ:ಶಾಂತರಸ)**

ಈ ಕವಿತೆಯಲ್ಲಿ ವಿಚಿತ್ರವಾದ ಆತಂಕ ಕಾಣುತ್ತದೆ. ದೇಶ ಒಗ್ಗಟ್ಟಿದ್ದರೆ ಎಲ್ಲ ರೀತಿಯಿಂದ ಶಕ್ತವಾಗಿರುತ್ತದೆ. 'ಒಡೆಯುವ' ಮನಸ್ಸೆ ಕೆಡುಕಿನದು ಎಂಬ ಆತಂಕ ಎದ್ದು ಕಾಣುತ್ತದೆ. ಈ ಆತಂಕಕ್ಕೆ ಯಾವ ಕಾರಣವಿರಬಹುದು? 'ಪಾಕಿಸ್ತಾನ' ಪ್ರತ್ಯೇಕವಾಗುವ ವಿಷಯ ಹೈದರಾಬಾದ್ ಕರ್ನಾಟಕ ನೆಲದಲ್ಲಿದ್ದವರಿಗೆ ದಿಗಿಲನ್ನುಂಟು ಮಾಡಿರುವುದರ ಹಿಂದೆ ಬಲವಾದ ಕಾರಣವಿದೆ. 'ಪಾಕಿಸ್ತಾನ' ಇಬ್ಭಾಗವಾಗುವ ವಿಷಯವು 'ಹೈದರಾಬಾದ್ ಸಂಸ್ಥಾನ'ವನ್ನು ಆಳುವ ನಿಜಾಮನಿಗೆ ಹೊಸ ಆಸೆ ಚಿಗುರಿಸುತ್ತದೆ. 'ಪಾಕಿಸ್ತಾನ' ಪ್ರತ್ಯೇಕವಾಗುವುದಾದರೆ, 'ಹೈದರಾಬಾದ್ ಸಂಸ್ಥಾನ'ವೂ ಪ್ರತ್ಯೇಕವಾಗಿ ಉಳಿಯುವ ಕನಸು ಕಾಣುತ್ತದೆ. 'ಮುಸ್ಲಿಂ ಸಂಸ್ಥಾನ'ವಾಗಿ

ರೂಪುಗೊಳ್ಳುವ ಪ್ರಯತ್ನಗಳು ನಡೆಯ ತೊಡಗಿದವು.ಹೈದರಾಬಾದ್ ಕರ್ನಾಟಕ ಪ್ರದೇಶದ ಕನ್ನಡ ಕವಿಗೆ, ತಾನು ನಿಂತ ನೆಲವೇ 'ಮುಸ್ಲಿಂ ರಾಜ್ಯ'ವಾದರೆ, ಅಂಥ ರಾಜ್ಯದಲ್ಲಿ ನೆಲೆಗೊಳ್ಳುವ ಸ್ಥಿತಿ ಕಲ್ಪನೆಗೂ ಮೀರಿದ್ದು ಎನಿಸುತ್ತದೆ.

ಭಾರತ ವಿಭಜನೆಯಾಗಿ'ಪಾಕಿಸ್ತಾನ'ಪ್ರತ್ಯೇಕ ದೇಶವಾಗಿ ನಿಲ್ಲುವ ಸಂದರ್ಭವು ಇಲ್ಲಿಯ ಕವಿಗಳಿಗೆ ವಿಚಿತ್ರ ರೀತಿಯ ಸಂಕಟವನ್ನು ತಂದಿದೆ. 'ಪಾಕಿಸ್ತಾನ' ಕೇಳುವವರು ಮುಸ್ಲಿಮರು. ಹೈದರಾಬಾದ್ ಪ್ರದೇಶವನ್ನು ಆಳುವ ನಿಜಾಮ ಮುಸ್ಲಿಮರವನು. ಅವನಿಂದ ಈ ಪ್ರದೇಶದ ಕನ್ನಡಿಗರಿಗೆ ಅನೇಕ ಬಿಕ್ಕಟ್ಟುಗಳು ಎದುರಾಗಿವೆ. ದೇಶವನ್ನು ಒಡೆಯುವ ಮನಸ್ಸು ಮುಸ್ಲಿಮರದ್ದೆ ಎಂಬ ಸಿಟ್ಟು, ಆತಂಕ ಇಲ್ಲಿಯ ಕವಿಗಳಿಗಿದ್ದಂತೆ ಕಾಣುತ್ತದೆ. **'ಸಲಾಂ ಸಾಬ್'** ಕವಿತೆಯಲ್ಲಿ ಇದು ವ್ಯಕ್ತವಾಗಿದೆ.

ಇವ ತುರುಕ, ಭಾರತದ ಅರಮನೆಯ ಮುರುಕ!
ಇವ ಮ್ಲೇಂಛ-ಭಾರತವ ಹಂಚಿ ಮಾಡಿಹ ಹೊಂಚ!
ಕರೆದು ನೆರವನು ಕೊಟ್ಟ ಜನರಿವಗೆ ಕಾಫರರು?
ಸ್ವಸ್ತ್ರೀಯ ಬಚ್ಚಿಟ್ಟು ಪರಸ್ತ್ರೀಯರನು ಕಂಡು
ಕೆರಳುವುದು ಕಾಮೇಚ್ಛೆ! ಹಿಂದುಗಳ ಕಂಡೊಡನೆ
ಎಂದಿವರ ನುಂಗುವೆನು' ಎಂದು ತಳಮಳಿಸುವನು
ಭಾರತದ ವೈರಿಯಿವ! ಹಾವ್ಗೆ ಹಾಲೆರೆಯದಿರು **(ಸಲಾಮ್ ಸಾಬ್:ಸಿದ್ಧಯ್ಯ ಪುರಾಣಿಕ)**

'ಸಲಾಮ್ ಸಾಬ್' ಎಂದು ಕವಿಗೆ ಬಡ ವ್ಯಕ್ತಿಯೊಬ್ಬ ಭಿಕ್ಷೆ ಬೇಡುತ್ತಾನೆ. ಅವನ ಸ್ಥಿತಿಯನ್ನು ನೋಡಿ ಕವಿಗೆ ಮೊದಲು ಕನಿಕರ ಮೂಡುತ್ತದೆ. ಆದರೆ ಭಿಕ್ಷೆ ಬೇಡಿದ ವ್ಯಕ್ತಿ ಮುಸ್ಲಿಮ ವ್ಯಕ್ತಿಯಾದ್ದರಿಂದ ಮನಸ್ಸು ಆಕ್ರೋಶಗೊಳ್ಳುತ್ತದೆ. 'ಇವ ತುರುಕ, ಭಾರತದ ಅರಮನೆಯ ಮುರುಕ'ಎಂದು ಮನಸ್ಸು ಯೋಚಿಸಲು ಹಲವು ಕಾರಣಗಳಿವೆ. ಕವಿ ನಿಂತ ನೆಲವನ್ನು ಆಳುವವ ಮುಸ್ಲಿಂ ರಾಜ. ಅವರ ಪ್ರಭುತ್ವದಲ್ಲಿ 'ಹಿಂದೂ'ಗಳಿಗೆ ಕಿರುಕುಳವಿದೆ. ನಾನಾ ರೀತಿಯ ಕೃತ್ಯಗಳನ್ನು ಮುಸ್ಲಿಮರು ಎಸಗುತ್ತಾರೆ ಎಂಬುವ ಸಿಟ್ಟಿದೆ. ಈಗ 'ಪಾಕಿಸ್ತಾನ'ವನ್ನು ಬೇಡುತ್ತಿದ್ದಾರೆ. ಇಂಥವರೇ ದೇಶವನ್ನು ಒಡೆಯುವ ದುಷ್ಟಶಕ್ತಿಗಳು ಎಂಬುದೇ ಕವಿಗೆ ಆತಂಕವಾಗಿದೆ. ದೇಶದ ದುರಂತ ಕವಿಯ ಮನಸ್ಸಿಗೆ ಹೊಳೆದಿದೆ. ಆದರೆ ಅದೇ ಕವಿ ನಿಂತು ವಿವೇಚಿಸಿದಾಗ, ಬೇರೆ ನಿಲುವು ತಾಳುವಂತಾಗುತ್ತದೆ:

ಭಾರತದ ವೈರಿಗಳು ಬಡ ತುರುಕರಲ್ಲ! ಸಿರಿ
ತಲೆಗೇರಿ ಕುಣಿಯುತಿಹ ಸ್ವಾರ್ಥಿಗಳು ಕೆಲವು ಜನ
ಬಡ ತುರುಕ ಬೇಡುವುದು ಅನ್ನ-ಅಲ್ಲ ಪಾಕಿಸ್ತಾನ

ಚರಿತ್ರೆಯ ಉದ್ದಕ್ಕೂ ಈ ಪ್ರದೇಶ ಅನ್ಯರ ದಾಳಿಗೆ ಸಿಕ್ಕು ಹಲವು ಬಗೆಯಲ್ಲಿ ತೊಂದರೆಗಳನ್ನು ಎದುರಿಸಿದೆ. ಜನ ಸಮುದಾಯಗಳಿಗೆ ಈ ಪ್ರದೇಶದಲ್ಲಿ ನಡೆಯುವ ಯುದ್ಧಗಳಿಂದ ನೆಲೆಯೆಂಬುದೇ ಇರಲಿಲ್ಲ. ಪರಕೀಯರ ಆಡಳಿತವಂತೂ ಸರಿಯೇ. ಸ್ಥಳೀಯ ಫ್ಯೂಡಲ್ ದೊರೆಗಳಿಂದಲೂ ಜನಸಾಮಾನ್ಯರು ದಬ್ಬಾಳಿಕೆಗೆ ಒಳಗಾಗಿದ್ದಾರೆ. ಒಂದು ಬಗೆಯಲ್ಲಿ ನಿರಂತರ ಸಂಘರ್ಷವನ್ನು ಈ ಪ್ರದೇಶದ ಜನ ಎದುರಿಸುತ್ತಲೇ ಬಂದಿದ್ದಾರೆ. ಅದರಲ್ಲೂ ನಿಜಾಂ ಆಳ್ವಿಕೆಯನ್ನು ಸ್ಥಿರಗೊಳಿಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ನಿಜಾಮನ ಬೆಂಬಲಿಗರಾದ ರಜಾಕಾರರ ದಾಳಿಯಲ್ಲಿ ಈ ಪ್ರದೇಶದ ಜನ ಅಪಾರ ಸಾವು ನೋವಿಗೆ ತುತ್ತಾದರು. ಈ ಸಂದರ್ಭವು ವಿಚಿತ್ರವಾಗಿತ್ತು. ವೈರಿಗಳಾರು? ತಮ್ಮವರಾರು? ಎಂಬುದೇ ಪ್ರಶ್ನೆಯಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಶಕ್ತಿಯುಳ್ಳವನು ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳುವ ಅನಿವಾರ್ಯ ಸ್ಥಿತಿ ನಿರ್ಮಾಣವಾಯಿತು. ಅಹಿಂಸೆಯ ತತ್ವವೇ ಈ ಪ್ರದೇಶದ ಜನರಿಗೆ

ದೊಡ್ಡ ಸವಾಲಾಯಿತು. ರಕ್ತಪಾತ ಒಂದು ಕಡೆ ನಡೆಯುತ್ತಿದ್ದರೆ, ರಕ್ತರಹಿತ ಯುದ್ಧಗಳು ನಿರಂತರವಾಗಿ ಒಳಗೆ ನಡೆಯುತ್ತಿದ್ದವು. ಗಾಂಧಿ, ತಿಲಕ್, ಸುಭಾಷ್ ಚಂದ್ರಬೋಸ್ ಇವರಲ್ಲಿ ಯಾರನ್ನು ಆಯ್ಕೆಮಾಡಿಕೊಳ್ಳಬೇಕು ಎಂಬ ಗೊಂದಲ, ದ್ವಂದ್ವದಲ್ಲಿ ಇಲ್ಲಿಯ ಜನನಾಯಕರು ಮುಳುಗಿದರು. ಜನಸಾಮಾನ್ಯರಿಗೆ ದಾರಿ ಯಾವುದು?

ಹೋರಾಟ, ಹೋರಾಟ, ಎತ್ತೆತ್ತ ಹೋರಾಟ
ಹೋರಾಟವೇ ಬಾಳ ರಚಿಪ ಪಗಡೆಯಾಟ
ಮೈಗಲಿಗೆ ಗೆಲುವಿಲ್ಲ, ಪುಕ್ಕನಿಗೆ ಸಾವೆ ಶಮ!
ಮುನ್ನುಗ್ಗೆ ಜಯಮಾಲೆ, ಹಿನ್ನುಳಿಯೆ ನರಕನೆಲೆ
ಮುಂದುವರಿದವ ಉಳಿವ, ಹಿಂದೆಸರಿದವ ಅಳಿವ
ಇದುವೆ ಬಾಳಿನ ತಿರುಳು, ಇದುವೆ ಬದುಕಿನ ಮಂತ್ರ

ಇಡೀ ಕವಿತೆಯಲ್ಲಿ ತನ್ನ ಎದುರಾಳಿಯನ್ನು ಮುನ್ನುಗ್ಗಿ ಸೆದೆ ಬಡಿಯುವುದೇ ವ್ಯಕ್ತಿಯ ನೀತಿಯಾಗಬೇಕೆಂದು ಕವಿ ಆಶಿಸಿದಂತಿದೆ. ತನ್ನವರಾರು, ಪರರು ಯಾರು ಎಂಬ ಭೇದವೇ ತಿಳಿಯದಾಗಿತ್ತು, ಆದರೆ ಆಕ್ರಮಣವಂತೂ ನಡೆದೇ ಇತ್ತು. ಈ ಪ್ರದೇಶದ ಜನಸಮುದಾಯಗಳಿಗೆ ನೆಲೆಯೇ ಇಲ್ಲದಂಥ ಸಂದರ್ಭದಲ್ಲಿ ತನ್ನ ಉಳಿವಿಗಾಗಿ ವ್ಯಕ್ತಿಗತ ಹೋರಾಟವೇ ಮುಖ್ಯವಾಗಿತ್ತು, ಹೊರತು ನಾಡು-ನುಡಿ ಕಟ್ಟಲು ಅಲ್ಲ ಎಂಬ ಸ್ಥಿತಿಯಿತ್ತು.

ಶಾಂತಿ ಭ್ರಾಂತಿಗೆ ದಾರಿ, ಸೈರಣೆಯು ಕೊರಳುರುಳು
ದಯೆಯು ನಮ್ಮನು ದಹಿಪ ಧಗಧಗಿಪ ದಾವಾಗ್ನಿ
ಸುಡು ಅಹಿಂಸಾ ನೀತಿ (ಸ್ವರ್ಗ:ಕಲಾನಂದ ಗೂಗಲ್ಲು)

ಇದು ಕವಿಯ ನಿಲುವು. ಸ್ಥಳೀಯ ಪರಿಸ್ಥಿತಿಯನ್ನು ಕಂಡ ಕವಿಗೆ ಹೀಗೆ ಅನ್ನಿಸಿರುವುದರಲ್ಲಿ ತಪ್ಪಿಲ್ಲ ಅನ್ನಿಸುತ್ತದೆ. ಚರಿತ್ರೆಯ ಹಲವು ಸಂದರ್ಭಗಳಲ್ಲಿ ಎದುರಾಳಿಯನ್ನು ಹೇಗೆ ಎದುರಿಸಬೇಕು ಎಂಬ ಪ್ರಶ್ನೆ ಎದ್ದಿದೆ. ಶಾಂತಿಯಿಂದಲೋ ಅಹಿಂಸೆಯಿಂದಲೋ ಅಥವಾ ಹೋರಾಟದಿಂದಲೋ, ಹಿಂಸೆಗೆ ಹಿಂಸೆಯೇ ದಾರಿ ಎಂಬ ನೀತಿಯಿಂದಲೋ ಎಂಬುದು. ಎರಡೂ ಪ್ರಯೋಗಗಳಾಗಿವೆ. ಈ ಪ್ರದೇಶದ ಸಂದರ್ಭವನ್ನು ಕಂಡ ಕವಿಗೆ ಹೋರಾಟವೇ ಮುಖ್ಯವಾಗಿ ಕಂಡಿದೆ. ಅಹಿಂಸೆಯ ಹೋರಾಟವನ್ನು ಕವಿ ನಿರಾಕರಿಸಿದ್ದಾನೆ. ಆದರೆ ಇದೇ ಕವಿ ಯುದ್ಧವನ್ನು, ಅದರ ಅಪಾಯಕಾರಿ ನೀತಿಯನ್ನು ಕಂಡು ಮರುಗಿದ್ದಾನೆ. ಮಾನವೀಯತೆ ಜಾಗೃತವಾಗಿದೆ 'ಪರಮಾಣು ಬಾಂಬು'ಎಂಬ ಕವಿತೆಯಲ್ಲಿ 'ಏಕಿದೆ ನಿನ್ನವತಾರವು' ಎಂದು ಭಯದಿಂದ ಪ್ರಶ್ನಿಸಿದ್ದಾನೆ.

ನಿನ್ನಾಟಕೆ ಕೊನೆಯಂದೋ!
ಯಾರ್ಯಾರದು ಬಲಿಯಂದೋ
ಇದರಿಂಗಿತ ತಿಳಿದಿಲ್ಲವು
ಇದರರ್ಥವು ಹೊಳೆದಿಲ್ಲವು
ಭವಿಷ್ಯದ ಫಲವೇನಿಹುದೋ?
ಸಿಹಿಯೋ, ಕಹಿಯೋ ತಿಳಿವುದೆಂತು? (ಪರಮಾಣು ಬಾಂಬು:ಕಲಾನಂದ ಕೂಗಲ್ಲು)

ಮನುಕುಲ ನಾಶವಾಗುವುದನ್ನು ವ್ಯಥೆಯಿಂದ ಕಾಣುವ ಈ ಕವಿ 'ನಿನ್ನಾಟಕೆ ಕೊನೆಯಂದೋ' ಎಂದು ಕೇಳಿರುವುದನ್ನು ನೋಡಿದರೆ, ಅದಕ್ಕೆ ಕೊನೆಯೇ ಇಲ್ಲ ಎಂಬ ವಿಷಾದ ತುಂಬಿದೆ. ಪರಮಾಣು ಬಾಂಬುಗಳನ್ನು ಈ ಹೊತ್ತಿನಲ್ಲಿ ಸ್ಫೋಟಿಸಿರುವ ಭಾರತ-ಪಾಕಿಸ್ತಾನಗಳನ್ನು ಗಮನಿಸಿದರೆ ಈ ಕವಿಯ ಆತಂಕ ಅರ್ಥವಾಗುತ್ತದೆ. ಈ ಕವಿಯ 'ಸ್ವರ್ಗ' ಮತ್ತು 'ಪರಮಾಣು ಬಾಂಬು'

ಎರಡು ಕವಿತೆಗಳಲ್ಲಿರುವ ವೈರುಧ್ಯ ವಾಸ್ತವವೇ ಆಗಿದೆ. ಒಂದು ಸ್ಥಳೀಯ ಸಂದರ್ಭ, ಇನ್ನೊಂದು ಜಾಗತಿಕ ಸಂದರ್ಭದ ವಾಸ್ತವ ಸ್ಥಿತಿ ಬೇರೆ ಬೇರೆಯಾಗಿವೆ ಎನ್ನಿಸುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತವನ್ನು ದಾಸ್ಯದಿಂದ ಬಿಡುಗಡೆ ಮಾಡಿ 'ಸ್ವಾತಂತ್ರ್ಯ'ವನ್ನು ಗಳಿಸಬೇಕೆಂಬ ಏಕೈಕ ಹಂಬಲವನ್ನು ರಾಷ್ಟ್ರದ ನಾಯಕರು ಹೊಂದಿದ್ದರು. ಅವರಿಗೆ ಹೆಗಲು ಕೊಟ್ಟು ದುಡಿಯುವ ಜನರಿಗೆ ಸ್ಫೂರ್ತಿ ತುಂಬಲು ಕವಿಗಳೂ ಅನೇಕ ರಾಷ್ಟ್ರಾಭಿಮಾನದ ಕವಿತೆಗಳನ್ನು ಬರೆದರು. ಈ ಕವಿತೆಗಳಲ್ಲಿ ದೇಶಪ್ರೇಮ ತುಂಬಿ ತುಳುಕುತ್ತಿತ್ತು. ನಾಡು-ನುಡಿ ಸಂಸ್ಕೃತಿಯ ವೈಭವವನ್ನು ಉತ್ಸಾಹದಿಂದ ಬಣ್ಣಿಸುವ ಮೂಲಕ ಜನತೆಯಲ್ಲಿ ಸ್ವಾಭಿಮಾನ, ಆತ್ಮಪ್ರತಿಷ್ಠೆ, ತ್ಯಾಗದ ಮನೋಭಾವವನ್ನು ಬೆಳೆಸುವುದು ಕವಿಗಳ ಜವಾಬ್ದಾರಿಯೇ ಆಗಿ ಪರಿಣಮಿಸಿತ್ತು. ಆದರೆ ಸ್ವಾತಂತ್ರ್ಯದ ಹೋರಾಟಕ್ಕಾಗಿ ನಡೆದ ಈ ಬಗೆಯ ಸಿದ್ಧತೆಗಳು ಹೈದರಾಬಾದ್ ಕರ್ನಾಟಕದ ಕವಿಗಳಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಉಳಿದು ಅವು ಪರಕೀಯರ ದಾಳಿಗಳನ್ನು ಎದುರಿಸಲು ಬಳಕೆಯಾಗ ತೊಡಗಿದವು.

ಏಳಿ ವೀರರೆ ಏಳಿ
ವಿಶ್ವ ಚಾಲಕರೇಳಿ
ವಿಶ್ವಚಾಲಕರು

ಎಂದು ಕರೆದಿರುವುದನ್ನು ಗಮನಿಸಬೇಕು. ಸಾಮಾನ್ಯಜನತೆಯನ್ನು ಎಚ್ಚರಿಸಲು, ಅವರನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಹುರಿದುಂಬಿಸುವ ಉತ್ಸಾಹ ಈ ಕವಿತೆಯಲ್ಲಿದೆ. ಸ್ವಾತಂತ್ರ್ಯದ ಕನಸಿನ ಮುಂದೆ,

ಪ್ರೇಮ ಮಾಯೆಯ ಮುಸುಕು
ತಪವು ತಿಳಿಗೇಡಿತನ
ಸೌಂದರ್ಯ ಬರಿ ಹೊಳಪು
ಕಲೆ ಹೇಡಿತನವಿಹುದು
ಕಾವ್ಯಕಲೆ ಸಂಗೀತ
ವರ್ಣಕಲೆ ನೃತ್ಯವೊ
ಬಾಳ ಹಾವಾಡಿಗನ
ಬಿಕ್ಕೆ ಮಂತ್ರಗಳು

ಎನ್ನಿಸಿವೆ. ಆತ್ಮೋನ್ನತಿಗಾಗಿ ಯೋಗಿಯಾಗುವುದಾಗಲಿ, ಮೋಕ್ಷಗಳಿಕೆಗೆ ತಪಸ್ಸಾಗಲಿ, ಬರೀ ಭ್ರಮೆಗಳು. ಸೌಂದರ್ಯ, ಕಲೆ, ಸಂಗೀತ ಮುಂತಾದವುಗಳು ಕೂಡ ಅಪ್ರಯೋಜಕ ಎನಿಸಿವೆ.

ಶಸ್ತ್ರವಿದ್ಯೆಯೆ ಜ್ಞಾನ
ಮಿಕ್ಕೆಲ್ಲವಪಮಾನ
ಸ್ವಾತಂತ್ರ್ಯವೇ ಸ್ವರ್ಗ
ಸ್ವಾತಂತ್ರ್ಯವೇ ಮೋಕ್ಷ (ರಣಕಾಳಿ:ಸತ್ಯಾನಂದ)

ಎಂಬ ನಿಲುವಿಗೆ ಕವಿ ಬಂದಿದ್ದಾನೆ. ಈ ಕವಿತೆ ವೈರುಧ್ಯದಿಂದ ಕೂಡಿದೆ ಎನ್ನಿಸುತ್ತದೆ. ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು ಒಂದರ್ಥದಲ್ಲಿ ಅಹಿಂಸೆಯಿಂದ ಕೂಡಿತ್ತು. ಅಹಿಂಸೆ, ಶಾಂತಿ, ಸಹನೆ ತ್ಯಾಗ ಮುಂತಾದ ಮೌಲ್ಯಗಳಿಂದ ಸ್ವಾತಂತ್ರ್ಯಗಳಿಸಬೇಕೆಂಬ

ಕನಸಿತ್ತು. ಆದರೆ ಈ ಕವಿ 'ಶಸ್ತ್ರವಿದ್ಯೆಯೆ ಜ್ಞಾನ' ಎಂದಿದ್ದಾನೆ. ಬಹುಶಃ ಈ ಕವಿತೆ ಅರವತ್ತರ ದಶಕದಲ್ಲಿ ರಚನೆಯಾಗಿರಬೇಕು. ಹೈದರಾಬಾದ್ ಕರ್ನಾಟಕ ಚರಿತ್ರೆ ಮತ್ತು ಭಾರತದೇಶ ಎದುರಿಸಿದ ಯುದ್ಧಗಳು ಈ ಕವಿಯ ಮನಸ್ಸಿನಲ್ಲಿವೆ. ಇದು ಈ ಕವಿಗೆ ಮಾತ್ರ ಅನ್ವಯಿಸುವುದಿಲ್ಲ. ಈ ಭಾಗದ ಇತರ ಕವಿಗಳಲ್ಲಿಯೂ ಇದು ಕಾಣಿಸಿದೆ. ನವೋದಯ ಕಾವ್ಯದ ರಾಷ್ಟ್ರಾಭಿಮಾನ. ಈ ಕವಿಗಳಲ್ಲಿ ಕೆಲಸ ಮಾಡಿದೆ. ನಿಜಾಂ ಆಳ್ವಿಕೆಯನ್ನು ಮುಂದುವರಿಸಬೇಕೆಂಬ ರಜಾಕಾರರ ನಿಲುವು, ಅದಕ್ಕಾಗಿ ಅವರು ನಡೆಸಿದ ಕ್ರೌರ್ಯ, ಈ ಕ್ರೌರ್ಯವನ್ನು ಹತ್ತಿಕ್ಕಲು ಈ ಪ್ರದೇಶದ ಜನರು ಸಂಘಟಿತರಾಗಿ ಶಸ್ತ್ರಗಳನ್ನೇ ಬಳಸಿ ಯುದ್ಧವನ್ನೇ ನಡೆಸಿದ್ದಾರೆ. ಈ ಯುದ್ಧವನ್ನು ಈ ಕವಿಗಳು ಕಣ್ಣಾರೆ ಕಂಡಿದ್ದು, ಅನುಭವಿಸಿ, ಭಾಗಿಗಳೂ ಆಗಿದ್ದಾರೆ. ರಜಾಕಾರರ ದಾಳಿ ಎಂದರೆ ಅದು 'ಪರಕೀಯರ' ದಾಳಿಯೆಂದೇ ತಿಳಿಯಲಾಗಿತ್ತು. ಅವರೊಡನೆ ಶಸ್ತ್ರಧಾರಿಗಳಾಗಿಯೇ ಈ ಭಾಗದ ಜನ ಯುದ್ಧದ ರೀತಿಯಲ್ಲಿಯೇ ಹೋರಾಡಿದ್ದಾರೆ. ಈ ಹೋರಾಟಕ್ಕಾಗಿಯೂ ಈ ಭಾಗದ ಜನತೆಯಲ್ಲಿ ನಾಡು-ನುಡಿಯ ಬಗ್ಗೆ ಸ್ವಾಭಿಮಾನ, ಆತ್ಮಾಭಿಮಾನ, ತ್ಯಾಗ-ಬಲಿದಾನ ಮುಂತಾದ ಮೌಲ್ಯಗಳಲ್ಲಿ ವಿಶ್ವಾಸ ಮೂಡಿಸಲು ಹುರಿದುಂಬಿಸುವ ಜವಾಬ್ದಾರಿಯೂ ಈ ಕವಿಗಳ ಮೇಲಿತ್ತು. ಈ ಧೋರಣೆ ಗಡಿ ಸಮಸ್ಯೆಯಿಂದ ಉಂಟಾದ ಭಾರತ-ಚೀನಾದ ನಡುವೆ ನಡೆದ ಯುದ್ಧದ ಸಂದರ್ಭದಲ್ಲೂ ಕೆಲಸ ಮಾಡಿದೆ. ರಜಾಕಾರರ ದಾಳಿಯ ವಿರುದ್ಧ ನಡೆದ ಯುದ್ಧಕ್ಕೂ, ಭಾರತ-ಚೀನಾ ನಡುವೆ ನಡೆದ ಯುದ್ಧಕ್ಕು ಯಾವ ವ್ಯತ್ಯಾಸವನ್ನು ಈ ಕವಿಗಳು ಕಾಣುವುದಿಲ್ಲ. ಪರಕೀಯರಂತೆ ಕಂಡ ರಜಾಕಾರರನ್ನು ನಾಶಮಾಡಬೇಕೆಂಬ ಅದಮ್ಯ ಕೋಪವು, ಭಾರತದ ಮೇಲೆ ಚೀನಿಯರು ಮಾಡಿದ ದಾಳಿಗೂ ಕೆರಳಿದೆ. ಪಂಚಾಕ್ಷರಿ ಹಿರೇಮಠರು 'ನೀ ರುದ್ರನಾಗು' ಎಂಬ ಕವನ ಸಂಕಲನದಲ್ಲಿ, ಚೀನಿಯರು ಯುದ್ಧ ಸಾರಿದ ಬಗ್ಗೆ ಎಲ್ಲಿಲ್ಲದ ರೋಷದಿಂದ ಹತ್ತಾರು ಪದ್ಯಗಳನ್ನು ಬರೆದಿದ್ದಾರೆ. 'ನೀ ರುದ್ರನಾಗು' ಎಂಬ ಹೆಸರಿನಲ್ಲೇ ಅದು ವ್ಯಕ್ತವಾಗಿದೆ.

ಓ ಭಾರತೀಯನೆ ಏಳು! ಎದ್ದೇಳು!
ದೌರ್ಜನ್ಯ ಕ್ಷುದ್ರತೆಯ ಮೆಟ್ಟಲೇಳು
ಸಾಕಿನ್ನು-
ಸ್ವರಗೈವ ನಾಗಸ್ವರ, ಕೊಳಲು, ಶಹನಾಯಿ ನಾದ
ಉದಿನ್ನು-
ಕೂಗಿಡುವ ಕಹಳೆ, ಹೆಗ್ಗಾಳೆ, ಕಂಸಾಳೆ, ಮದ್ದಳೆಯ ನಾದ!

ಎಂದು ಕರೆ ನೀಡುವ ಕವಿ ಚೀನಿಯರ ದಾಳಿಯನ್ನು ಬಗ್ಗು ಬಡಿಯಲು ಭಾರತೀಯರಿಗೆ ಎಲ್ಲಿಲ್ಲದ ಉತ್ಸಾಹವನ್ನು ತುಂಬಿದ್ದಾರೆ. ಕವಿಯ ರೊಚ್ಚು ಎಂಥದೆಂದರೆ,

ಓ! ಹಿಮ, ಭುಗಿಲೆಂದುರಿದು ಬಿಡು
ಸುಟ್ಟು ಹೋಗಲಿ ಒಮ್ಮೆ
ಮತ್ತೆ ಚಿಗಿಯದಂತೆ, ಚೀನಿವೃಕ್ಷ!
'ಆಗಿ ಹೋಗಲಿ ಒಮ್ಮೆ ನಿಃಸಂತಾನ
ಈ ಹೊಣ ಸಂತಾನ (ನೀ ರುದ್ರನಾಗು:ಪಂಚಾಕ್ಷರಿ ಹಿರೇಮಠ)

ಭಾರತದ ಗಡಿ ಸಮಸ್ಯೆಯಿಂದ ಉಂಟಾದ ಈ ಭಾರತ-ಚೀನಾ ಯುದ್ಧದ ಬಗ್ಗೆ ಈ ಬಗೆಯ ರೋಷ ವ್ಯಕ್ತವಾಗಲು ಈ ಕವಿಗೆ ಯಾವುದೋ ಬಗೆಯ ಒತ್ತಡವಿರಬೇಕು? ಕವಿ ಪಂಚಾಕ್ಷರಿ ಹಿರೇಮಠರು ನಿಜಾಂ ಸರಕಾರದ ವಿರುದ್ಧ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ರಜಾಕಾರರ ವಿರುದ್ಧ ಶಸ್ತ್ರಾಸ್ತ್ರ ಹಿಡಿದು ಸೈನಿಕರಂತೆ ಹೋರಾಡಿದವರು. 'ನಿಜಾಮರ-ರಜಾಕಾರರ

ದೌರ್ಜನ್ಯದ ದಬ್ಬಾಳಿಕೆಯೆದುರು ಜೀವ ಹಂಗು ದೊರೆದು ಹೋರಾಡಿದ ಆ ಯುವಕನಲ್ಲಿ ಅಂದಿನಿಂದಲೇ ಜಾಗೃತವಾಗಿರುವ ಅತುಲ ದೇಶಭಕ್ತಿ, ರಾಷ್ಟ್ರಾಭಿಮಾನಗಳು ಪ್ರಸ್ತುತ ಕಾವ್ಯದಲ್ಲಿ ಹೊರಹೊಮ್ಮಿವೆ'[೨೧] ಎಂಬ ಅಭಿಪ್ರಾಯವೇ ಉತ್ತರದಂತಿದೆ. ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಮುಖಂಡರಾಗಿದ್ದ ಶ್ರೀ ಶಿವಮೂರ್ತಿಸ್ವಾಮಿ ಅಳವಂಡಿ ಅವರಿಗೆ 'ನೀ ರುದ್ರನಾಗು' ಸಂಕಲನವನ್ನು ಅರ್ಪಿಸಲಾಗಿದೆ. ನಿಜಾಮನ-ರಜಾಕಾರರ ವಿರುದ್ಧ ಹೋರಾಡಿದ ಅನುಭವಗಳು ನೇರವಾಗಿ ಅವರ ಕಾವ್ಯದಲ್ಲಿ ವ್ಯಕ್ತವಾಗದೆ ಗಡಿಯ ಜಗಳದಿಂದ ಉಂಟಾದ ಬಹುದೂರದ ಚೀನಾ-ಭಾರತದ ಯುದ್ಧ ಇವರ ಮೇಲೆ ಅಗಾಧ ಪ್ರಭಾವ ಬೀರಿರುವುದು ಮೇಲು ನೋಟಕ್ಕೆ ಆಶ್ಚರ್ಯವೆನಿಸುತ್ತದೆ. ಇದಕ್ಕೆ ಆಂತರಿಕ ಕಾರಣವೂ ಇದೆ ಎನಿಸುತ್ತದೆ. ಅಂದಿನ ಸಾಹಿತ್ಯಿಕ, ರಾಜಕೀಯ ವಾತಾವರಣದಲ್ಲಿ 'ರಾಷ್ಟ್ರಾಭಿಮಾನ', 'ಭಾರತೀಯ' ಮುಂತಾದ ಕಲ್ಪನೆಗಳಲ್ಲಿ ಸ್ಥಳೀಯ ವಿದ್ಯಮಾನಗಳು ಹಿನ್ನೆಲೆಗೆ ಸರಿದಿದ್ದವು. ಹೀಗಾಗಿ ಸ್ಥಳೀಯ ಹೋರಾಟಗಳು ಲೆಕ್ಕಕ್ಕೆ ಬರದೆ ಗೌಣವಾದವು. ಆದರೆ ಅದರ ಅನುಭವಗಳನ್ನೇ ರಾಷ್ಟ್ರೀಯವಾದಿ ನೆಲೆಗೆ ಹೊಂದಿಸಿ ಈ ಸಂದರ್ಭವನ್ನು ಬಳಸಿಕೊಂಡು ಬರೆದಿರುವುದು ವಾಸ್ತವ ಸಂಗತಿಯಾಗಿದೆ. ದೇವೇಂದ್ರ ಕುಮಾರ ಹಕಾರಿ ಅವರ **'ನಾವು ಭಾರತ ಯೋಧರು', 'ಯೋಧ-ಬಂಧು', 'ಯೋಧ', 'ಸ್ವಾತಂತ್ರ್ಯ ಯೋಧರನ್ನು ನೆನೆದು', 'ರಣಭೇರಿ'** ಮುಂತಾದ ಕವಿತೆಗಳೂ ಇದಕ್ಕೆ ನಿದರ್ಶನವಾಗಿವೆ.

ನಿಜಾಮನ-ರಜಾಕಾರರ ವಿರುದ್ಧ ಈ ಪ್ರದೇಶದ ಜನರು ಹೋರಾಡುವುದು ಅನಿವಾರ್ಯವಾಗಿತ್ತು. ಅದರಲ್ಲೂ ರಜಾಕಾರರ ದಾಳಿಯನ್ನು ಎದುರಿಸುವುದು ಜೀವನ್ಮರಣದ ಪ್ರಶ್ನೆಯಾಗಿತ್ತು. ನಿಜಾಮನ-ರಜಾಕಾರರ ವಿರುದ್ಧ ಹೋರಾಡಲು ಈ ಪ್ರದೇಶದ ಜನರು ಸಂಘಟಿತರಾಗಿ ಸಾಮೂಹಿಕವಾಗಿ ಯುದ್ಧವನ್ನೇ ಹೂಡಬೇಕಾದ ಅನಿವಾರ್ಯತೆ ಒದಗಿಬಂತು. ಈ ಸಂದರ್ಭದಲ್ಲಿ ಹುಟ್ಟಿದ ಜನತೆಯ ಸಂಘಟನೆಯಾಗಿದ್ದ 'ಹೈದರಾಬಾದ್ ರಾಜಕೀಯ ಪರಿಷತ್' ಮೂರನೆಯ ಅಧಿವೇಶನದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಪಾಲ್ಗೊಂಡು ಹೋರಾಟಕ್ಕೆ ಸ್ಫೂರ್ತಿ ನೀಡಿದ್ದರು. ಅಷ್ಟೇ ಅಲ್ಲ ಈ ಪ್ರದೇಶದ ಯುವಕರಿಗೆ ಹೋರಾಡಲು ಸೈನಿಕ ತರಬೇತಿ ಬೇಕಾದ ಸಂದರ್ಭದಲ್ಲಿ ಅಜಾದ್ ಹಿಂದ್ ಸೈನ್ಯದಲ್ಲಿದ್ದ ಸೈನಿಕರೇ ಬಂದು ನೀಡಿದ್ದರು. ಹೀಗಾಗಿ ನಿಜಾಮನ-ರಜಾಕಾರರ ವಿರುದ್ಧ ಯುದ್ಧ ಹೂಡಲು ಬೋಸ್‌ರ ಪ್ರೇರಣೆ ಈ ಭಾಗದ ಜನರಲ್ಲಿ ತೀವ್ರವಾಗಿತ್ತು. 'ನೀವು ಕೊಡಿ ರಕ್ತ, ನಾ ಕೊಡುವೆ ಸ್ವಾತಂತ್ರ್ಯ' ಎಂಬ ಬೋಸ್‌ರ ಘೋಷಣೆ ಈ ಹೋರಾಟದಲ್ಲಿ ಮಂತ್ರದಂತೆ ಪರಿಣಮಿಸಿದೆ. ದೇವೇಂದ್ರಕುಮಾರ ಹಕಾರಿ ಅವರ **'ಸ್ಮರಣೆ'** ಕವಿತೆ ಬೋಸ್‌ರನ್ನು ಕುರಿತು ಇರುವುದಕ್ಕೆ ಇದೇ ಸಾಕ್ಷಿಯಾಗಿದೆ. ಈ ಪ್ರದೇಶದ ಕವಿಗಳು 'ಯುದ್ಧಗಳ' ಬಗ್ಗೆ ವಿರಾವೇಶದಿಂದ ಬರೆದಿರುವುದಕ್ಕೆ ಅವರ ಸ್ವಂತ ಅನುಭವಗಳೇ ಕಾರಣವಾಗಿವೆ.

'ಬಿರುಗಾಳಿ' (ಸಗರ ಕೃಷ್ಣಾಚಾರ್ಯ) ಎಂಬ ಕವನ ಎರಡು ಮಹಾಯುದ್ಧಗಳನ್ನು ಕುರಿತಿದೆ. **'ಒಂದು ರಣಗೀತೆ'** (ಎಂ.ಲಕ್ಷ್ಮಣ) ಪಾಕಿಸ್ತಾನದ ದಾಳಿಯನ್ನು **'ಸತ್ಯಮೇವ ಜಯತೆ'** (ಶಿವಶರಣ ಚಾವಳಿ) ಚೀನಾದ ದಾಳಿಯನ್ನು ಕುರಿತಿದೆ. ಯುದ್ಧವೆಂದರೆ ಭಯ ಮತ್ತು ವಿಚಿತ್ರ ಧೈರ್ಯ ಈ ಕವಿಗಳಲ್ಲಿ ಕಾಣುತ್ತದೆ.

ಇದರ ಕೊಬ್ಬು ಮುರಿಯುತ
ಅಸುರಕಾಂಕ್ಷೆ ತರಿಯುತ
ಹೋರುತಿಹುದು ಬಲಯುತ
ಸನ್ನದ್ಧವೀ ಭಾರತ **(ಯುದ್ಧ ಬಂದರೆ ಮತ್ತೆ:ರಾಘವೇಂದ್ರ ಇಟಗಿ)**

'ಬಾಧಿಪ್ಪ ಕಲಿಯು' ಎಂಥವನೆ ಇರಲಿ
ಆ ಕಲಿಗೆ 'ಕಲಿ'ಯು ನಾವು

ಒಳ್ಳಿದವಗೆ ಒಲಿದು ಬಾಗುವೆವು ಮಣಿದು
'ಸಾಧುವಿಗೆ ಸಾಧು' ನಾವು (ಸತ್ಯಮೇವ ಜಯತೇಃ)

ಭಾರತವು ಬ್ರಿಟಿಷರ ದಾಸ್ಯದಿಂದ ಬಿಡುಗಡೆಯಾದ ಮೇಲೆ 'ಸ್ವತಂತ್ರ ಭಾರತವು' ಹೇಗೆ ರೂಪಗೊಳ್ಳಬೇಕು? ಮುಂದಿನ ಭವಿಷ್ಯದಲ್ಲಿ ಭಾರತ ಹೇಗೆ ಪ್ರಗತಿ ಸಾಧಿಸಬೇಕು? ಜನತೆ ಕೂಡ 'ಆಧುನಿಕ ಭಾರತ'ವನ್ನು ಕಟ್ಟಲು ಶ್ರಮಿಸಬೇಕು ಎಂಬ ಕನಸುಗಳನ್ನು ಈ ಭಾಗದ ಕವಿಗಳು ಕಂಡಿದ್ದಾರೆ. ಸ್ವಾತಂತ್ರ್ಯದ ಸಂಭ್ರಮ ಮತ್ತು ಭಾರತದ ಮುಂದಿನ ದಾರಿಯ ಬಗ್ಗೆ ಉತ್ಸಾಹದಿಂದ ಭರವಸೆಯ ಕನಸುಗಳನ್ನು ಕಂಡ ಕವಿಗಳಲ್ಲಿ ಹನುಮಂತಾಚಾರ್ಯ ಉಪಾಧ್ಯಾಯ ಮುಖ್ಯರು. ಐವತ್ತರ ದಶಕದಲ್ಲಿ ಅವರು ಕಂಡ ಕನಸುಗಳನ್ನು **'ಶುಭೋದಯ' 'ನವಭಾರತ'** ಎಂಬ ಕವಿತೆಗಳಲ್ಲಿ, ಆಧ್ಯಾತ್ಮದಿಂದ, ಯೋಗದಿಂದ, ವಿಜ್ಞಾನದಿಂದ, ಕೈಗಾರಿಕೆಯಿಂದ, ಹಸಿರು ಕ್ರಾಂತಿಯಿಂದ ಪ್ರಾಕೃತಿಕ ಸಂಪತ್ತಿನಿಂದ, ಸಾಹಿತ್ಯ, ಕಲೆ, ಸಂಗೀತದಿಂದ, ನಾಗರಿಕ ಸೌಲಭ್ಯಗಳಿಂದ ಒಟ್ಟಿನಲ್ಲಿ ಸಮಗ್ರ ಕ್ರಾಂತಿಯಾಗಿ ಭಾರತ ತಲೆ ಎತ್ತಿ ನಿಲ್ಲಬೇಕು ಎಂಬ ಅವರ ಅದಮ್ಯ ಬಯಕೆಯನ್ನು ವ್ಯಕ್ತಗೊಳಿಸಲು ದೀರ್ಘ ಕವನವನ್ನೇ ಬರೆದಿದ್ದಾರೆ. ಇಂಥ ಭವ್ಯ ಭಾರತದ ನಿರ್ಮಾಣದಲ್ಲಿ ಎಲ್ಲರೂ ದುಡಿಯಬೇಕು ಎಂದು ಹೇಳುತ್ತ

ಬೇಡ ಕಪಟ ಕುಟಿಲ ರಾಜಕಾರಕ್ಕೆ ಮನ್ನಣೆ
ಸತ್ಯ, ಸಮತೆ, ಸ್ನೇಹ, ಶಾಂತಿ ರಾಷ್ಟ್ರ ಕಾರ್ಯಪ್ರೇರಣೆ
ಒಳಿತುಕೊಂಡು ಒಳಿತುಕೊಟ್ಟು ಒಳಿತು ಬೆಳೆವ ಧೋರಣೆ
ಜಗದಿ ಒಳಿತಿಗಾಗಿ ಬೇಕು ಸಹಜೀವನ ಭಾವನೆ

ಇಡೀ ಕವಿತೆಯಲ್ಲಿ ಆದರ್ಶ ತುಂಬಿದೆ. ಕವಿಯ ಮುಗ್ಧತೆಯಿದೆ. ಆದರೆ ಕವಿಯ ಕನಸಿನ 'ನವಭಾರತ' ಸೃಷ್ಟಿಯಲ್ಲಿ ಮನುಷ್ಯನ ಪಾಲು ಮುಖ್ಯ ಎಂಬ ಅರಿವು ಇದೆ. ಈ ಅರಿವಿನಿಂದಲೇ ಮನುಷ್ಯನ ಬಗ್ಗೆ ಅನುಮಾನವೂ ಕವಿಗಿದೆ. ಮನುಷ್ಯನ ಸಣ್ಣತನ, ಸ್ವಾರ್ಥದಿಂದ ನವಭಾರತ ಕಟ್ಟಲು ಸಾಧ್ಯವೇ ಎಂಬ ಅನುಮಾನವೂ ಇದೆ. ಅದಕ್ಕಾಗಿ ಸ್ವಾತಂತ್ರ್ಯ ಪಡೆಯಲು ಕ್ರಾಂತಿಯಾದಂತೆ ಮನುಷ್ಯರಲ್ಲಿ 'ಸಹಜೀವನ', 'ಸಹಬಾಳ್ವೆ' ಬೆಳೆಯಲು ಮೊದಲು ಕ್ರಾಂತಿಯಾಗಬೇಕೆಂದು **'ಕ್ರಾಂತಿಗೆ ಆಹ್ವಾನ'** ಎಂಬ ಕವಿತೆಯಲ್ಲಿ ಕವಿ ವ್ಯಕ್ತಪಡಿಸಿದ್ದಾನೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಿನಕಳೆದಂತೆ ಉದ್ಭವಿಸಿದ ಸಮಸ್ಯೆಗಳು ಈ ಆದರ್ಶವಾದಿ, ಮುಗ್ಧ ಕವಿಗೆ ದಿಗಿಲು ಹುಟ್ಟಿಸಿದೆ. 'ಸಹಜೀವನ', 'ಸಹಬಾಳ್ವೆ'ಯ ಕನಸು ಒಡೆದು ಹೋದಂತೆ ಬೆಚ್ಚಿಬಿದ್ದಿದ್ದಾನೆ. ಮನುಷ್ಯ-ಮನುಷ್ಯನ ನಡುವೆ ಏರ್ಪಟ ಕಂದರ ಮುಚ್ಚಲಾರದಂಥದ್ದು ಎಂಬ ವಾಸ್ತವ ಸತ್ಯ ಗೋಚರಿಸಿದೆ.

ಸಾಸಿರದ ಜನುಮಗಳು ಶ್ರೀಮಂತರ ಸೇವೆಯಲಿ
ಸವೆದರೂ ಬಡತನವು ಸವೆದುದಿಲ್ಲ
ಜೀತಕ್ಕೆ ಆಳಾಗಿ ಬಾಳೆಲ್ಲ ದುಡಿದರೂ
ಮಧ್ಯಮರ ಬಾಳ ಬವಣೆ ಮುಗಿದುದಿಲ್ಲ
ಆಯಾಸವಿಲ್ಲದಲೆ ಆಗರ್ಭಶ್ರೀಯುತರ
ಮಹಲಿಗೇರುವುವು ಉಪ್ಪರಿಗೆ ಏಳು
ಕಲ್ಲುಗಳ ಕಟೆಕಟೆದು ಗಟ್ಟು-ಗಾರೆಯ ಹೊತ್ತು
ಬಳಲಿದರು ತಲೆಗಿರದು ಮನೆಯ ನೆರಳು'
ರಚನೆಗೊಳ್ಳಲಿ ನಾಡು ಅರ್ಥ ಸಮತೆಯ ಹದಕ್ಕೆ
ಹಸನುಗೊಳ್ಳಲಿ ನಾಡ ಬಡಜನರ ಬದುಕು

ಅಸನ-ವಸನದ ಚಿಂತೆ ಹರಿದೊಮ್ಮೆ ನಾಡಿನಲಿ
ಸಂತೃಪ್ತಿ-ಸಂವೃದ್ಧಿಗಳು ನೆಲಸಬೇಕು (ಕ್ರಾಂತಿಗೆ ಆಹ್ವಾನ:ಹನುಮಂತಾಚಾರ್ಯ ಉಪಾಧ್ಯಾಯ)

ಈ ಕವಿಯ ವೈರುಧ್ಯಗಳಿಗೆ ಅರ್ಥವಿದೆ. ಅದು ವಾಸ್ತವ ಸಂಗತಿಯೂ ಹೌದು. ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು ಕೇವಲ ರಾಜಕೀಯ ಸ್ವಾತಂತ್ರ್ಯ ಎಂಬುದು, ಶ್ರೀಮಂತರಿಗೆ, ಅಧಿಕಾರಿಗಳಿಗೆ ಮಾತ್ರ ಸ್ವಾತಂತ್ರ್ಯ ಬಂದಿದೆ ಎಂಬುದು, ಬಡವನ ಗೋಳು ನಿರಂತರವಾದದ್ದು ಎಂಬುದು ಕವಿಗೆ ಅರಿವಾಗಿದೆ. ಕವಿಯ ಆಶಾವಾದಿತನದ ಮತ್ತು ಭ್ರಮನಿರಸನಗಳು ಈ ಎರಡು ವೈರುಧ್ಯಗಳಿಗೆ ಸಮಾಜದ ಚಲನೆಯಲ್ಲಿ ಕಂಡ ವಿದ್ಯಮಾನಗಳೇ ಕಾರಣವಾಗಿವೆ.

ಹನುಮಂತಾಚಾರ್ಯ ಉಪಾಧ್ಯಾಯ, ಸಗರ ಕೃಷ್ಣಾಚಾರ್ಯ, ಸಿದ್ದಯ್ಯ ಪುರಾಣಿಕ ಮುಂತಾದ ಈ ಭಾಗದ ಕವಿಗಳು ಮೂಲತಃ ನವೋದಯ ಮಾರ್ಗದ ಅನುಯಾಯಿಗಳು. ವಿಶ್ವಮಾನವತ್ವದ ಕಲ್ಪನೆ, ಆದರ್ಶವಾದ ಮಾನವತಾವಾದ, ರಾಷ್ಟ್ರೀಯವಾದ ಈ ಅಂಶಗಳು ಈ ಕವಿಗಳಲ್ಲಿ ಮನೆ ಮಾಡಿದ್ದವು. ಭಾರತದ ಪರಿಸ್ಥಿತಿ, ಇಲ್ಲಿಯ ಬಡತನ, ಶೋಷಣೆ ಮುಂತಾದವುಗಳ ಅರಿವಿದ್ದರೂ ಮನುಷ್ಯನನ್ನು ಔನ್ನತ್ಯಕ್ಕೇರಿಸುವ ಪ್ರಯತ್ನ ಮಾಡಿದರು. ಬಡವ ಬಲ್ಲಿದವರ ನಡುವಿನ ವ್ಯತ್ಯಾಸಗಳನ್ನು, ಅದಕ್ಕಿರುವ ಕಾರಣಗಳನ್ನು ಗಂಭೀರವಾಗಿ ಪರಿಶೀಲಿಸಲು ಹೋಗಲಿಲ್ಲ. 'ಸ್ವತಂತ್ರ್ಯ ಭಾರತದ ನಾಯಕ'ರಾದ ನೆಹರೂ ಅವರ 'ಸಮತಾವಾದ'ವನ್ನು ಈ ಕವಿಗಳು ಮನಸ್ಸಿನಲ್ಲಿಟ್ಟುಕೊಂಡಿದ್ದರು ಎನ್ನಿಸುತ್ತದೆ. ದೇಶದ ಪ್ರಗತಿಯಲ್ಲಿ ಮನುಷ್ಯರ ಬಾಳು ಸುಧಾರಿಸುತ್ತದೆ. ಸಮಪಾಲು, ಸಮಬಾಳು ಭಾರತೀಯನದಾಗುತ್ತವೆ ಎಂಬ ಆದರ್ಶದ ನೆಲೆಯಲ್ಲಿ ಸಮಾಜ ಮತ್ತು ಮನುಷ್ಯನನ್ನು ಗ್ರಹಿಸಲಾಯಿತು. ಜೊತೆಗೆ ಆಧ್ಯಾತ್ಮ ಸೇರಿಕೊಂಡು ಮನುಷ್ಯನನ್ನು ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡದೆ ವೈಭವಿಕರಿಸಲಾಯಿತು. ಸಗರ ಕೃಷ್ಣಾಚಾರ್ಯರ 'ರಾಷ್ಟ್ರೀಯ ಭಾವೈಕ್ಯತೆ' ಕವಿತೆಯನ್ನು ನೋಡಿದರೆ ಈ ಕಾಲದ ಕವಿಗಳ ಆದರ್ಶ ಯಾವ ಹಂತವನ್ನು ತಲುಪಿತ್ತು ಎಂಬುದು ಅರ್ಥವಾಗುತ್ತದೆ. ಜತೆಗೆ ಭ್ರಮನಿರಸನ ಕೂಡ.

ಆರ್ಯ ದ್ರಾವಿಡರೆಂಬ ಹಿಂದು ಮುಸ್ಲಿಮರೆಂಬ
ಸೀಖ್ ಜೈನರು ಬೌದ್ಧ ಕ್ರೈಸ್ತರೆಂಬ
ಭೇದ ಭಾವವನಳಿಸಿ ಹಾಲು ಜೇನಲಿ ಬೆರೆಸಿ
ಕೂಡಿ ಬಾಳುತಲೊಲವ ತೋರಣ ಬನ್ನಿ
ಹರಿಜನರು ಗಿರಿಜನರು ಪಂಚಾಳ ಕ್ಷತ್ರಿಯರು
ವೀರಶೈವರು ದ್ವಿಜರು ಶೂದ್ರ ಕುಲದವರು
ಎಂಬ ಭೇದದ ಮರೆತು ಭ್ರಾತೃ ಭಾವದಿ ಬೆರೆತು
ತುಂಬು ಜೀವನ ನಡೆಸಿ ಬಾಳೋಣ ಬನ್ನಿ (ರಾಷ್ಟ್ರೀಯ ಭಾವೈಕ್ಯತೆ:)

ಮೇಲ್ನೋಟಕ್ಕೆ ಮಂದಾನಿಲ ಸುಳಿಸುಳಿಯುತಲಿಹುದು
ಕೀಳ್ನಾಟಕ ಅದರಡಿಯಲಿ ಕುಣಿಕುಣಿಯುತಲಿಹುದು
ತಂಗಾಳಿಯ ಶೀತಲತೆಯ ಈ ಭ್ರಾಮಕ ಅರಿವು
ಮುಂಗಾಣದ ಕುರಿ ಮಂದೆಗೆ ಬಿಸಿಯುಸಿರಿನ ಝಳವು
ಹಣದುಬ್ಬರ ಋಣದಬ್ಬರ ತಬ್ಬಿಬ್ಬಾಗಿದೆ ಜನತೆ
ಒಣಮಬ್ಬರ ಛಲ-ಬರ್ಬರ ಗಬ್ಬೆದ್ದೋಗಿದೆ ಘನತೆ (ಮಂದಾನಿಲ:ಸಗರ ಕೃಷ್ಣಾಚಾರ್ಯ)

ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಮುನ್ನಿನ ಕನಸುಗಳು ಸ್ವಾತಂತ್ರ್ಯಾನಂತರ ಒಡೆದು ಹೋದದ್ದು ಕವಿಗಳ ವಿಷಾದಕ್ಕೆ ಕಾರಣವಾಗಿದೆ.

ದೇಶ, ಭಾಷೆ, ಜನ, ಸಮಾಜ ಸಂಸ್ಕೃತಿಯ ಬಗ್ಗೆ ಎಷ್ಟು ಆಶಾವಾದಿಯಾಗಿದ್ದರೋ ಅವರ ಕಣ್ಣಮುಂದೆಯೇ ಅವು ವಿಕೃತಗೊಂಡಂತೆ ಕಂಡವು. ಅದರಿಂದಾಗಿ ಅವರಿಗೆ ಅದು ವ್ಯಥೆಯ ಸಂಗತಿಯಾಗಿ ಪರಿಣಮಿಸಿತು. ಯಾವುದನ್ನು ಕುರಿತು ಹಾಡಿ ಹೊಗಳಿದರೋ ಅದರ ಬಗ್ಗೆಯೇ ಆಕ್ರೋಶಗೊಳ್ಳುವಂತಾಯಿತು. ಈ ವೈರುಧ್ಯವೇ ವಾಸ್ತವ ಸಂಗತಿಯಾಗಿದೆ. ಈ ಭಾಗದ ಪ್ರಮುಖ ನವೋದಯ ಮಾರ್ಗದ ಕವಿ 'ಆಧುನಿಕ ವಚನಕಾರ' ಎಂದು ಹೆಸರಾದ ಸಿದ್ಧಯ್ಯ ಪುರಾಣಿಕರಲ್ಲಿ ಇದು ಹೆಚ್ಚಾಗಿ ಕಾಣಿಸಿದೆ. ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಬಂದರೂ, ಪ್ರಜಾರಾಜ್ಯ ಕೇವಲ ಹೆಸರಿಗೆ ಆಯಿತೇ ಹೊರತು ನಿಜವಾದ ಅರ್ಥದಲ್ಲಿ ಆಗಲಿಲ್ಲ. ದೇಶವನ್ನಾಳುವ ಸರಕಾರದ ನೀತಿ-ನಿಯಮಗಳು ದೇಶವನ್ನು, ದೇಶದ ಪ್ರಜೆಗಳನ್ನು ಸುವ್ಯವಸ್ಥಿತ ಸ್ಥಿತಿಗೆ ತರಲಾಗಲಿಲ್ಲ.

ಬಿಡುಗಡೆಗೆ ಬಲಿಯಾದ ಗಂಡುಗಲಿಗಳ ಗಟ್ಟಿ
ಗುಂಡಿಗೆಯ ರಕ್ತದಲಿ ರಾಷ್ಟ್ರಭಕ್ತಿಯ ಮಣ್ಣ
ಬೆರೆಸಿ ಇಟ್ಟಿಗೆ ಮಾಡಿ ತ್ಯಾಗಾಗ್ನಿಯಲಿಸುಟ್ಟು
ಕಟ್ಟಿದೀ ಕಟ್ಟಡವು ಇಷ್ಟು ಬೇಗನೆ ಬಿರಿಯೇ
ದೇಶದಾಶೋತ್ತರಕೆ ನೆಲೆಯಲ್ಲಿ? **(ಏಕೆ ಮನೆಯೆ ಬೇಗ ಬಿರುಕು ಬಿಟ್ಟೆ:)**

ಬಸವಣ್ಣನವರ ವಚನವೊಂದರ ಆಶಯವನ್ನು ಈ ಕವಿತೆಯ ಬೆಳವಣಿಗೆಯಲ್ಲಿ ಕಾಣಬಹುದು. ಭಾರತವೆಂಬ ಮನೆಯಲ್ಲಿ ಮನೆಯೊಡೆಯರಿದ್ದೂ ಮನೆಯಲ್ಲಿ ಧೂಳು ತುಂಬಿದೆ. ಜಂತೆಯಲ್ಲಿ ಇಲ್ಲಾಣ ತುಂಬಿದೆ. ಸೊಳ್ಳೆ, ಇಲಿ-ಹೆಗ್ಗಣಗಳ ಬೀಡಾಗಿದೆ. ಮನೆ ಸೋರಿ ಶಾಂತಿಯೇ ಇಲ್ಲದಂತಾಗಿರುವುದು, ಇಡೀ ಮನೆಯಲ್ಲಿ ಕೇಡಿನ, ಕೀಳಿನ ದನಿ ಕೇಳಿ ಬರುತ್ತದೆ. ಇಂಥ ಮನೆಯಲ್ಲಿ ಬದುಕು ಸಾಧ್ಯವೆ? ಎಂಬ ಚಿಂತೆ ವ್ಯಕ್ತವಾಗಿದೆ. ಅನ್ನ, ನೀರು, ಬಟ್ಟೆಗಾಗಿ ಜನ ಪರಿದಾಡುವ ಸ್ಥಿತಿಗೆ ತಂದ ಸ್ವಾರ್ಥಿಗಳನ್ನು ಮೆಟ್ಟಿ ನಿಲ್ಲುವ ಶಕ್ತಿಗಾಗಿ ಹಂಬಲಿಸಲಾಗಿದೆ.

ಮನೆ ಬೀಳುವ ಮೊದಲೇ
ಅದರ ರಿಪೇರಿಗೆ
ಟೊಂಕವ ಕಟ್ಟೋ

ಎಂದು ಕರೆ ನೀಡಲಾಗಿದೆ.

ಇಂಥ ಸಂದರ್ಭದ ವಸ್ತುಸ್ಥಿತಿಯನ್ನು **'ಹದಿನೈದು ಆಗಸ್ಟು'**(ಶಾಂತರಸ) ಕವಿತೆಯಲ್ಲಿ ಕಾಣಬಹುದು. ೧೯೪೭ರ ಆಗಸ್ಟ್-೧೫ರ ದಿನ ಭಾರತೀಯರಿಗೆ ರೋಮಾಂಚನದ ದಿನವಾಗಿತ್ತು. 'ಸ್ವಾತಂತ್ರ್ಯ' ಸಿಕ್ಕ ಸಂಭ್ರಮ. ದಾಸ್ಯದಿಂದ ಬಿಡುಗಡೆಯಾದ ಸಂತೋಷ. ಬ್ರಿಟಿಷರ ಜತೆ ಹೋರಾಡಿದ್ದಕ್ಕೆ ಸಿಕ್ಕ ಫಲವನ್ನು ಅನುಭವಿಸುವುದೇ ಪರಮಾನಂದ ಎನ್ನಿಸಿತು. ಧ್ವಜಾರೋಹಣ ಮಾಡುವುದರ ಮೂಲಕ ಅಂದಿನವರೆಗೆ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ, ಅದರಿಂದ ಅನುಭವಿಸಿದ ನೋವು ಎಲ್ಲವೂ ಹೆರಿಗೆಯ ನಂತರ ಮರೆಯುವಂತೆ ಭಾರತೀಯ ಹೋರಾಟಗಾರನ ಸ್ಥಿತಿಯಾಗಿತ್ತು. ಆದರೆ ಹೈದರಾಬಾದ್ ಕರ್ನಾಟಕಕ್ಕೆ ಆ ಭಾಗ್ಯವಿರಲಿಲ್ಲ. 'ಹೈದರಾಬಾದ್ ಸಂಸ್ಥಾನ'ವನ್ನು ನಿಜಾಮ ಸ್ವತಂತ್ರವಾಗಿ ಆಳುವ ನಿರ್ಧಾರ ತೆಗೆದುಕೊಂಡಿದ್ದರಿಂದ, ೧೯೪೭ರ ಆಗಸ್ಟ್ -೧೫ರಂದು ನಿಜಾಮನ ರಾಜ್ಯದಲ್ಲಿ ತ್ರಿವರ್ಣ ಧ್ವಜವನ್ನು ಯಾರೂ ಹಾರಿಸುವಂತಿರಲಿಲ್ಲ. ಆದರೆ ಸ್ವಾತಂತ್ರ್ಯದ ಕನಸು ಕಂಡ ಜನರಿಗೆ ಧ್ವಜಾರೋಹಣ ಮಾಡುವ ಉತ್ಸಾಹ ತುಂಬಿತ್ತು. ನಿಜಾಮನ ಆಜ್ಞೆಯನ್ನು ಮೀರಿ ಧ್ವಜರೋಹಣ ಮಾಡಿದವರಿಗೆಲ್ಲ ನಿಜಾಮ್ ಸರಕಾರದ ಪೋಲೀಸರ ಒದೆ, ಸೆರೆಮನೆ ವಾಸ ಕಾದಿತ್ತು. ಈ ಕವಿತೆಯಲ್ಲಿ ಇಂಥ ಸನ್ನಿವೇಶದ ಅರಿವಿದೆ. ಸ್ವಾತಂತ್ರ್ಯದ ಕನಸು ಕಂಡು ಹೋರಾಡಿದ ಸಾಹಸಿಗರಿಗೆ ಅಂದಿನ ದಿನ ಎಲ್ಲ ನಿರ್ಬಂಧಗಳನ್ನು ಎದುರಿಸಿ ಧ್ವಜಹಾರಿಸಿ, ಪೊಲೀಸರಿಂದ ಬೂಟುಗಾಲಿನಿಂದ

ಒದೆ ತಿಂದರೂ ಅದು ನೋವಿನ ವಿಷಯವಾಗಿರಲಿಲ್ಲ. ಹರ್ಷ, ರೋಮಾಂಚನದ ವಿಷಯವಾಗಿತ್ತು. ನೋವಿನ ಪ್ರಶ್ನೆ ಇರಲಿಲ್ಲ.

ಆ ಒದೆಯ ನೋವಿನಾಳದಲಿ ನೂರು
ಸುಂದರ ಹೊಂಗನಸುಗಳು ಮೈ ಮುರಿಯುತ್ತಿದ್ದುವು
ಆ ನರಳಿಕೆಯ ಜಿಂಪ್ಹೆಯಲಿ ಭವ್ಯ ಭಾರತದ
ಹಾಡುಗಳು ಗುಣುಗುಣಿಸುತಿದ್ದುವು.
ಸುಡುಸುಡುವ ಸುರಿವ ನೆತ್ತರಲಿ ಮೂಡಿತ್ತು
ಸಸ್ಯಶಾಮಲೆಯ ನಿತ್ಯ ನಿರ್ಮಲೆಯ ತನರೂಪು

ಆದರೆ ಸ್ವಾತಂತ್ರ್ಯ ನಂತರದ ಭಾರತದ ಪರಸ್ಥಿತಿಯನ್ನು ನೆನೆದು, ಹಿಂದೆ ಅನುಭವಿಸಿದ ನೋವಿನಲ್ಲಿ ಅರಳಿದ ಸಂತಸ ಮಾಯವಾಗಿ, ಹಳೆಯ ಪೆಟ್ಟು ಮರುಕೊಳಿಸುವಂತೆ ಮರುಕೊಳಿಸಿ ಮೂಕ ನೋವು ಕಾಣಿಸತೊಡಗಿತು. ಅಂದು ಸ್ವಾತಂತ್ರ್ಯಕ್ಕಾಗಿ, ದಾಸ್ಯದ ಬಿಡುಗಡೆಗಾಗಿ ಹೋರಾಡಿದ ಜೀವಗಳಿಗೆ ಇಂದಿನ ದೇಶದ ಸ್ಥಿತಿಯನ್ನು ಕಂಡು ಮೂಕ ನೋವು ಅನುಭವಿಸುವ ಸ್ಥಿತಿ ಒದಗಿದೆ.

ಕನಸು ಒಡೆಯಿತ್ತು, ನೋವು ಮರುಕಳಿಸಿತ್ತು
ತಾಯ ವಸ್ತ್ರಾಪಹರಣ ನಡೆಯಿತ್ತು
ಉರುಳುತಿಹ ಕಾಲವೇ ಹೆಬ್ಬಾವಾಗಿ
ಈ ನೆಲದ ಧಮನಿಗಳ ಕಚ್ಚಿತ್ತು
ನಾಯಿ ಮುಟ್ಟಿದ ಗಡಿಗೆ ಈ ಬಾಳು
ಇರುಳಿನಲ್ಲಿ ಕೊಡೆ ಹಿಡಿಸಿಕೊಂಬವರೆ ಮುಂದಾಳು
ಪ್ರಜರ ಕುತ್ತಿಗೆ ಹಿಚುಕಿ ನಲಿವ ಹೆಡೆ ಹಸ್ತಗಳು
ಹಾರಿಸಿ ಧ್ವಜಗಳು
ನಮ್ಮ ಆಶೋತ್ತರದ ಹೆಣಗಳು **(ಹದಿನೈದು ಆಗಸ್ಟ್:ಶಾಂತರಸ)**

ಅಸಹಾಯಕತೆ ಮಾತ್ರ ಉಳಿದಂತಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ತ್ಯಾಗಿಗಳಿಗೆ ಇಂದಿನ ರಾಜಕೀಯವನ್ನು, ರಾಜಕಾರಣವನ್ನು, ದೇಶವನ್ನು, ಜನತೆಯನ್ನು ಕಂಡು ಯಾರಿಗಾಗಿ ಸ್ವಾತಂತ್ರ್ಯವನ್ನು ತಂದು ಕೊಟ್ಟೆವು ಎಂಬ ವ್ಯಥೆ ತುಂಬಿಕೊಂಡಿದೆ.

ಸಿದ್ಧಯ್ಯ ಪುರಾಣಿಕರು ಪ್ರಕೃತಿ ಸೌಂದರ್ಯಾರಾಧಕರು. ಮಾನವತಾವಾದಿಗಳು. ಅವರ ಕಾವ್ಯ-ವಚನಗಳು ಆದರ್ಶ-ಮಾನವೀಯತೆ ಮತ್ತು ಬೋಧನೆಯಿಂದ ತುಂಬಿ ತುಳುಕಿದೆ. ಸಮಾಜದ ಅಸಮಾನತೆಯ ಬಗ್ಗೆ ಮರುಕ, ಅಸ್ತವ್ಯಸ್ಥ ರಾಜಕಾರಣದ ಬಗ್ಗೆ ನೈತಿಕ ಸಿಟ್ಟು, ಅನ್ಯಾಯ, ಶೋಷಣೆ ಕಂಡು ವ್ಯಂಗ್ಯ ಇದೆ. ವಚನ ಪರಂಪರೆಯಿಂದ ಪ್ರಭಾವಿತರಾದ ಅವರ ಕಾವ್ಯ-ವಚನಗಳಲ್ಲಿ ಶರಣರ ಆಶಯಗಳ ಮರು ಮಂಡನೆಯಿದೆ.

ಅನ್ಯಾಯವು ಸಿಂಹಾಸನವೇರಿರುವಲ್ಲಿ
ನ್ಯಾಯದ ಮಾತನ್ನಾಡುವವನೇ ನಾಯಿ ಕಂಡಯ್ಯ!
ಅಜ್ಞಾನವು ಆಡಳಿತ ನಡೆಸುತ್ತಿರುವಲ್ಲಿ
ಜ್ಞಾನದ ಸುದ್ದಿ ಎತ್ತುವವನೇ ಪೆದ್ದ ಕಂಡಯ್ಯ!
ಅನಾಚಾರದ ಅರಸೊತ್ತಿಗೆಯಿರುವಲ್ಲಿ
ಸದಾಚಾರದ ಬಗ್ಗೆ ಪ್ರಸ್ತಾಪಿಸುವವನೇ ಮೊದ್ದ ಕಂಡಯ್ಯ!

ನಗ್ನತೆಯೇ ನಾಗರಿಕತೆಯಾಗಿರುವಲ್ಲಿ
ಬಟ್ಟೆಯ ಬಗ್ಗೆ ನುಡಿವವನೇ ಮಡ್ಡ ಕಂಡಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ, ಶೋಷಣೆಯೇ ಶಾಸ್ತ್ರವಾಗಿರುವಲ್ಲಿ
ಶೋಷಿತರ ಪಕ್ಷ ವಹಿಸುವವನೇ ಹಸಿದಡ್ಡ ಕಂಡಯ್ಯ

ಸರಕಾರ ದರೋಡೆಕಾರನಾದಾಗ
ನೌಕರರು ನರಭಕ್ಷಕರಾಗದಿರುವರೇನಯ್ಯ?
ಸಚಿವರೇ ಸುಲಿಗೆಗಾರರಾದಗ
ಆಪ್ತ ಸಹಾಯಕರು ಡಕಾಯಿತರಾಗರೇನಯ್ಯ?
ಪೋಷಕರೇ ಶೋಷಕರಾದಾಗ
ಆಶ್ರಿತರು ಜೀವನ್ಮೃತರಾಗರೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ

ಸಮಾಜವೇ ಸಮಾಜವಾದಾಗ
ವ್ಯಕ್ತಿ ಪಶುವಾದರೆ ಆಶ್ಚರ್ಯವೇನಯ್ಯ?

ಆಶ್ವಾಸನಗಳನ್ನೇ ಉಟ್ಟು, ಆಶ್ವಾಸನಗಳನ್ನೇ ತೊಟ್ಟಿಹ
ರೊಟ್ಟಿ ಬೇಡಿದವರ ಕೈಗೆ ಕಲ್ಲು ಕೊಟ್ಟಿಹ
ಸುಖೀರಾಜ್ಯ ದುಃಖಿರಾಜ್ಯವಾಗಿ ಮಾರ್ಪಟ್ಟರೆ
ಆಶ್ಚರ್ಯವಾವುದಯ್ಯ- ಸ್ವತಂತ್ರಧೀರ ಸಿದ್ಧೇಶ್ವರಾ?

ನಿರುದ್ಯೋಗ ಹಣದುಬ್ಬರಗಳು ಹಸೆಗೆ ನಿಂತರೆ ಹೇಗಯ್ಯ?
ಕೊರತೆ ಕಲಬೆರಕೆಗಳು ಉಡುಕಿ ಮಾಡಿಕೊಂಡರೆ ಹೇಗಯ್ಯ?
ಲಂಚ-ಕಾಳಸಂತೆಗಳು ಕೈಕುಲುಕಿದರೆ ಹೇಗಯ್ಯ?
ಧರ್ಮಗುರು- ಅಧಿಕಾರಿಗಳು ದುರ್ವ್ಯವಹಾರಕ್ಕಿಳಿದರೆ ದಾರಿ ಯಾವುದಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ

ಕಂಬಿ ತಪ್ಪಿದ ಈ ಉಗಿ ಬಂಡಿಯನ್ನು
ದೀಪಸ್ತಂಬ ದಿಕ್ಸೂಚಿ ಕಳೆದುಕೊಂಡ ಈ ಹಡಗನ್ನು
ನಿಯಂತ್ರಕಯಂತ್ರ ನಷ್ಟವಾದ ಈ ಕ್ಷಿಪಣಿಯನ್ನು
ನೀನೆ ಕಾಯಿ, ನೀನೆ ಕಾಯಿ, ನೀನೆ ಕಾಯಿ!

ದೇಶದ ಅಧೋಗತಿಯನ್ನು ಎತ್ತಿ ಹೇಳುವ ಸತ್ಯಸಂಗತಿಗಳು ಈ ವಚನಗಳಲ್ಲಿವೆ. ಸಾಮಾಜಿಕ, ರಾಜಕೀಯ, ಆರ್ಥಿಕ ಬದುಕಿನ ವಾಸ್ತವ ವಿದ್ಯಮಾನಗಳು ಮನುಷ್ಯನ ಬಾಳನ್ನು ದಿಕ್ಕುಗೆಡಿಸಿವೆ ಎಂಬ ಚಿತ್ರಗಳು ಇಲ್ಲಿ ಕಾಣಿಸುತ್ತವೆ. 'ಏನಾದರಾಗು ಮೊದಲು ಮಾನವನಾಗು' ಎಂಬ ಈ ಕವಿಯ ಆದರ್ಶ, ಮಾನವತಾವಾದ ಒಂದು ಸವಾಲಾಗಿ ಪರಿಣಮಿಸಿದೆ. ಈ ವಚನಗಳ ಸಮಸ್ಯೆಯೆಂದರೆ, ನೈತಿಕವಾಗಿ ಪ್ರತಿಕ್ರಿಯಿಸುವುದು. ಯಾವತ್ತೂ ನೈತಿಕ ಪ್ರತಿಕ್ರಿಯೆಗಳು ಬದಲಾವಣೆಗಳನ್ನು ರಾಜಕೀಯ ಪ್ರಜ್ಞೆಯಿಂದ ಅರ್ಥಮಾಡಿಕೊಳ್ಳುವುದಕ್ಕೆ ಬದಲಾಗಿ ಸರಿತಪ್ಪುಗಳ ನೆಲೆಯಲ್ಲಿ ವಿವರಿಸಿಕೊಳ್ಳುತ್ತವೆ.

ನವೋದಯ ಮಾರ್ಗದ ಕವಿಗಳು ವಿಶ್ವಮಾನವತ್ವದ ಕಲ್ಪನೆ, ಆದರ್ಶ, ಕನಸು, ರಾಷ್ಟ್ರೀಯತೆ ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸಲು ಪ್ರಯತ್ನಿಸಿರುವುದು ನಿಜವಾದರೂ ಇದನ್ನು ಮೀರಿ ವಾಸ್ತವವನ್ನು ಗ್ರಹಿಸಲು ಕೆಲವರು ಪ್ರಯತ್ನಿಸಿದ್ದಾರೆ. ಕರಸಿದ್ದ, ಚೋಮ, ವೆಂಕಟಿಗ, ಮೊಸರಿನ ಮಂಗಮ್ಮ ಮುಂತಾದವರ ಅಸಹಾಯಕತೆಯನ್ನು ಗುರುತಿಸಲಾಯಿತು. ಈ ಸಾಧ್ಯತೆಗಳೂ ಈ ಭಾಗದ ಕವಿಗಳಲ್ಲಿ ಕಾಣಿಸಿದೆ. 'ಅಲ್ಲಮ್ಮ' ಹಾಗೂ 'ಅಮಲವ್ವ'(ಸಗರ ಕೃಷ್ಣಾಚಾರ್ಯ) ಕವಿತೆಗಳಲ್ಲಿ ಕಾಯಿಪಲ್ಯ ಮಾರುವವಳ ಮತ್ತು ಬಡ ಶೂದ್ರ ಹೆಂಗಸೊಬ್ಬಳ ಅಸಹಾಯಕತೆಯಲ್ಲಿಯೂ ಬದುಕನ್ನು ಕಟ್ಟಿಕೊಳ್ಳಲು ಈ ಇಬ್ಬರು ಹೆಂಗಸರು ಪಡುವ ಬವಣೆಗಳ ಚಿತ್ರಣವಿದೆ. ಸಿದ್ಧಯ್ಯ ಪುರಾಣಿಕರ 'ಹೆಗಲು' ಕವಿತೆ ಬಡವನ ಶತಶತಮಾನದ ಚರಿತ್ರೆಯನ್ನು ಹೇಳುತ್ತದೆ.

ಹೌದು ಬುದ್ಧಿ
ಇದು ನನ್ನ ಹೆಗಲಲ್ಲ
ನಿಮ್ಮ ಹೆಗಲು
ಇದು ನಿಮ್ಮನ್ನು
ಹೊರಲೆಂದೇ ಹುಟ್ಟಿದೆ
ಇರುಳು ಹಗಲು
ಇದು ಮೆತ್ತಗಿಲ್ಲ
ಮೆತ್ತೆ ಹಾಕಿ ಹತ್ತಿರಿ
ಇಲ್ಲಿ ಉಳಿದಿರುವುದು
ಬರೀ ಎಲುವು ತೊಗಲು

ಇಂಥ ಕವಿತೆಗಳನ್ನು ಗಮನಿಸಿದಾಗ ನವೋದಯ ಕವಿಗಳ ಸಾಮಾಜಿಕ ಅಸಮಾನತೆಯ ಬಗೆಗಿನ ಕಾಳಜಿಗಳು ಮಾನವೀಯತೆಯ ನೆಲೆಗಳಿಂದ ಪ್ರೇರಿತವಾಗಿದ್ದವೋ ಅಥವಾ ಕೆಳವರ್ಗದವರ ಅಸಹಾಯಕ ಸ್ಥಿತಿಯ ನಿಜವಾದ ಅರಿವಿನಿಂದ ಕಾಣಿಸಿವೆಯೋ? ಎಂಬ ಪ್ರಶ್ನೆ ಮಾತ್ರ ಏಳುತ್ತದೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅರವತ್ತರ ದಶಕದವರೆಗಿನ ಕಾವ್ಯವನ್ನು ಗಮನಿಸಿದಾಗ ರಾಷ್ಟ್ರೀಯ ಪ್ರಜ್ಞೆ, ಆದರ್ಶವಾದ, ಮಾನವೀಯತೆ, ಭಾಷಾಭಿಮಾನ ಪ್ರಧಾನವಾಗಿ ಕಾಣುತ್ತವೆ. ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತೆಗಳು' ಪ್ರಕಟಣೆಯೊಂದಿಗೆ ನವೋದಯ ಕಾವ್ಯ ಸುರುವಾಯಿತಷ್ಟೆ. ಇದನ್ನೇ ಅನುಸರಿಸಿ ಈ ಭಾಗದಲ್ಲೂ ನವೋದಯ ಕಾವ್ಯ ಕಾಣಿಸಿಕೊಂಡಿತು. ಈ ಕಾವ್ಯದ ಮುಖ್ಯ ಆಶಯಗಳೆಲ್ಲ ಈ ಭಾಗದ ಕಾವ್ಯದಲ್ಲಿ ಮೂಡಿಬಂದಿತು. ಇದರಿಂದ ಸ್ಥಳೀಯ ವಿದ್ಯಮಾನಗಳು ಸಾಮಾಜಿಕ ಬದುಕಿನ ವಿವರಗಳು ಹಿನ್ನೆಲೆಗೆ ಸರಿದು, ರಾಷ್ಟ್ರೀಯವಾದಿ ನಿಲುವಿನಲ್ಲಿ ಈ ಕವಿಗಳು ಬರೆದರು. ಸ್ಥಳೀಯ ಸಮಸ್ಯೆಗಳು ರಾಷ್ಟ್ರೀಯ ಸಮಸ್ಯೆಗಳಿಗೆ ಪರಿವರ್ತಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಅಣಿಗೊಳಿಸುವ ಧ್ಯೇಯವೂ ಇದರಲ್ಲಿತ್ತು. ಸ್ಥಳೀಯವಾಗಿ ಆಳ್ವಿಕೆ ನಿಜಾಮನದಿದ್ದರೂ ಬ್ರಿಟಿಷರನ್ನು ಹೊಡದೋಡಿಸುವಂತೆ ಕಾವ್ಯದಲ್ಲಿ ಕರೆಕೊಟ್ಟರು. ನಿಜಾಮನ-ರಜಾಕಾರರ ವಿರುದ್ಧ ಯುದ್ಧದ ರೀತಿಯಲ್ಲಿಯೇ ಹೋರಾಡಿದ ಕವಿಗಳು ಅದರ ಅನುಭವವನ್ನು ಕಾವ್ಯದಲ್ಲಿ ಪಡಿಮೂಡಿಸುವ ಬದಲು, ಅಂಥ ಅನುಭವದ ಒಳಗಿರುವ ಧೈರ್ಯ, ಸಾಹಸ, ಆಕ್ರೋಶಗಳೆಲ್ಲ ಚೀನಾ, ಪಾಕಿಸ್ತಾನ ಯುದ್ಧಗಳ ಸಂದರ್ಭದಲ್ಲಿ ವ್ಯಕ್ತಪಡಿಸಿದರು. ಇದನ್ನೆಲ್ಲ ಗಮನಿಸಿದಾಗ ನವೋದಯ ಕಾವ್ಯದ ಒಳಗೇ ಇರುವ ಸಾಮಾಜಿಕ ವಾಸ್ತವವನ್ನು ಮೀರುವ ಗುಣವನ್ನು ಅನುಸರಿಸಿದರು. 'ಮನುಷ್ಯ' ಈ ಭಾಗದಲ್ಲಿ ದಮನಕ್ಕೆ ಒಳಗಾಗುತ್ತಿದ್ದರೂ ಮನುಷ್ಯನ ವ್ಯಕ್ತಿತ್ವದ ಘನತೆಯನ್ನು ಎತ್ತಿ ಹಿಡಿಯುವಂತೆ 'ದಿವ್ಯ ದಾರ್ಶಿಕನು', 'ಚಾರು ಚರಿತನು', 'ಧೀರ ಪುರುಷನು'(ಸಗರ ಕೃಷ್ಣಾಚಾರ್ಯ ಮುಂತಾದವರು) ಎಂದು ಬರೆದರು. ಅರವಿಂದ,

ವಿವೇಕಾನಂದ, ಪರಮಹಂಸರ ಪ್ರಭಾವದಿಂದ ಆಧ್ಯಾತ್ಮದ ಹಿನ್ನೆಲೆಯಲ್ಲಿ ಮನುಷ್ಯನ ಆತ್ಮೋನ್ನತಿಯನ್ನು ಎತ್ತಿ ಹಿಡಿದರು. ಇದರಿಂದಾಗಿ ಸಾಮಾಜಿಕ ಕಾಳಜಿ ಕೇವಲ ಮಾನವೀಯ, ಉದಾರವಾದಿ ನೆಲೆಯಿಂದ ಪ್ರೇರಿತವಾಗಿತ್ತು. ಜಾತಿ, ವರ್ಗ, ಬಡತನ, ಶೋಷಣೆ ಇವುಗಳನ್ನು ಅನುಕಂಪದ ನಿಲವಿನಿಂದಲೇ ನೋಡಲಾಯಿತು. ಈ ಎಲ್ಲ ಹಿನ್ನೆಲೆಯಿಂದ ನೋಡಿದಾಗ ಕುವೆಂಪು, ಬೇಂದ್ರೆ, ಮಧುರಚೆನ್ನ ಮುಂತಾದವರು ನವೋದಯ ಕಾಲದ ಎಲ್ಲ ಮೌಲ್ಯಗಳ ಜೊತೆಗೆ ಅದನ್ನು ಮೀರಿ ತಮ್ಮ ಅನನ್ಯತೆಯನ್ನು ಸಾಧಿಸಿದಂತೆ, ಈ ಭಾಗದ ಕವಿಗಳು ಇರುವ ಎಲ್ಲ ಮಿತಿಗಳ ನಡುವೆ ತಮ್ಮ ಅನನ್ಯತೆಯನ್ನು ಸಾಧಿಸಿರುವ ಪ್ರಯತ್ನಗಳು ಕಾಣುವುದಿಲ್ಲ. ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯ ಜತೆ ಮುಖಾಮುಖಿಯಾಗಲು ಪ್ರಯತ್ನಿಸಲಿಲ್ಲ. ಸಿದ್ಧಯ್ಯ ಪುರಾಣಿಕರ ಆದಿಯಾಗಿ ಸೌಂದರ್ಯ ಆರಾಧಕರಾಗಲು ಬಯಸಿದಂತೆ ಕಾಣುತ್ತದೆ. 'ಕಾವ್ಯಾನಂದ', 'ಕಲಾನಂದ', 'ಸತ್ಯಾನಂದ', 'ಅಮರಾನಂದ' ಈ ಎಲ್ಲ ಕಾವ್ಯನಾಮಗಳಲ್ಲಿ ಕಾಣುವ 'ಆನಂದ'ದ ಕಲ್ಪನೆಯನ್ನು ಗಮನಿಸಿದರೆ ಇವರಿಗೆ ಆದರ್ಶ, ಕನಸು, ಮಾನವೀಯತೆಗಳು ಮುಖ್ಯವಾಗಿರುವುದು ಕಂಡುಬರುತ್ತದೆ. ಬದುಕು ಸುಂದರ, ಸ್ವೀಕಾರಾರ್ಹ. ಬಾಳಿನಲ್ಲಿ ಆನಂದ ಕಾಣುವುದು ಮುಖ್ಯ ಎಂದು ಭಾವಿಸಲಾಯಿತು. ಇದು ಸ್ವಾತಂತ್ರ್ಯ ಪೂರ್ವ ಕಾಲದ ಸಾಹಿತ್ಯದ ವಲಯದಲ್ಲಿದ್ದ ಪ್ರಧಾನ ಧ್ಯೇಯವಾಗಿತ್ತು ಎಂಬುದು ವಾಸ್ತವ ಸಂಗತಿಯೇ. ಆದರೆ ಈ ಭಾಗದ ಚರಿತ್ರೆಯ ಒಳಗೆ ಇದು ಇದೆಯೇ ಎಂಬ ಪ್ರಶ್ನೆ ಮಾತ್ರ ಎದುರಾಗುತ್ತದೆ.

ನವ್ಯ ಸಾಹಿತ್ಯದ ಬೆನ್ನುಹತ್ತಿ

ಸುಮಾರು ೧೯೬೫ ರಿಂದ ೧೯೭೫ರ ಈ ದಶಕದಲ್ಲಿ ಶಾಂತರಸ ದೇವೇಂದ್ರ ಕುಮಾರ ಹಕಾರಿ, ರಾಘವೇಂದ್ರ ಇಟಗಿ, ಚಂದ್ರಕಾಂತ ಕುಸನೂರು, ಶೈಲಜಾ ಉಡಚಣ, ಶಿವಶರಣ ಜಾವಳಿ, ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಪ್ರಭುರಾಜ ಅರಣಕಲ್, ವಸಂತ ಕುಷ್ಟಗಿ, ಮಲ್ಲಿಕಾರ್ಜುನ ಹಿರೇಮಠ, ಜಿ.ಕೃಷ್ಣರಾವ್, ಲಿಂಗಣ್ಣ ಸತ್ಯಂಪೇಟೆ, ಗುರುಬಸಯ್ಯ ಅಮ್ಮಾಪುರ, ಎಂ.ಲಕ್ಷ್ಮಣ ಮುಂತಾದವರು ಕಾವ್ಯ ರಚನೆಯಲ್ಲಿ ತೊಡಗಿದ್ದರು. ಈ ಅವಧಿಯ ಮುನ್ನವೇ ಕೆಲವರು ಕಾವ್ಯ ರಚನೆಗೆ ತೊಡಗಿದ್ದರೂ ಬೆಳಕಿಗೆ ಬಂದದ್ದು ಈ ಅವಧಿಯಲ್ಲೇ. ಕನ್ನಡ ಸಾಹಿತ್ಯದಲ್ಲಿ ಈ ಅವಧಿಯಲ್ಲಿ ನವ್ಯಸಾಹಿತ್ಯ ತನ್ನೆಲ್ಲ ಉತ್ಸಾಹವನ್ನು ತೋರಿಸಿ ಮೆಲ್ಲಗೆ ದನಿ ಕಳೆದುಕೊಳ್ಳುತ್ತಿದ್ದ ಕಾಲ. ಇಪ್ಪತ್ತರ ದಶಕದಲ್ಲಿ ನವೋದಯ ಕಾವ್ಯ ಭರದಿಂದ ಪ್ರಾರಂಭವಾಗಿದ್ದರೂ ಈ ಭಾಗದಲ್ಲಿ ನವೋದಯ ಕಾವ್ಯ ಮೂವ್ವತ್ತರ ದಶಕದ ಕೊನೆಯಲ್ಲಿ ಕಾಣಿಸಿಕೊಂಡಿತು. ಈ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿ ಕವಿಗಳ ಕೊರತೆ ಎದ್ದು ಕಾಣುತ್ತಿತ್ತು. ನಲವತ್ತು ಐವತ್ತರ ದಶಕದಲ್ಲಿ ಕೂಡ ಬೆರಳೆಣಿಕೆಗೆ ಸಿಗುವಷ್ಟು ಮಾತ್ರ ಕವಿಗಳು ಕಾವ್ಯ ರಚನೆಯಲ್ಲಿ ತೊಡಗಿದ್ದರು. ಅದೇ ಸಿದ್ಧಯ್ಯ ಪುರಾಣಿಕ, ಕಲಾನಂದ ಗೂಗಲ್, ಹನುಮಂತಾಚಾರ್ಯ ಉಪಾಧ್ಯಾಯ ಮುಂತಾದವರು. ನವೋದಯ ಕಾವ್ಯ ಮಾರ್ಗದಲ್ಲಿ ತಕ್ಕಮಟ್ಟಿಗೆ ತೊಡಗಿಕೊಂಡವರು ಇವರೇ. ಆದರೆ ಪುರಾಣಿಕರನ್ನು ಬಿಟ್ಟರೆ ಬೇರೆ ಯಾರೂ ಮುಂದುವರಿಯುವ ಸಾಮರ್ಥ್ಯ ತೋರಿಸಿದಂತೆ ಕಾಣುವುದಿಲ್ಲ. ಐವತ್ತರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಕಾವ್ಯದಲ್ಲಿ ಹೊಸ ಮನೋಧರ್ಮ ಕಾಣಿಸಕೊಂಡಿತು. ಅದು ನವ್ಯ ಮಾರ್ಗವಾಗಿ ಮುಂದುವರಿಯಿತು. ನವ್ಯದ ಮನೋಧರ್ಮ ಈ ನೆಲಕ್ಕೆ ಅಪರಿಚಿತವಾಗಿ, ಹೊಸದಾಗಿ ಕಾಣಿಸಿತು. ಪಾಶ್ಚಾತ್ಯ ದೇಶಗಳಿಗೆ ಹೋಗಿ ಬಂದ ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಗಳು ಪ್ರಾರಂಭಿಸಿದರು. ಈ ನವ್ಯದ ಧೋರಣೆ ಹೈದರಾಬಾದ್ ಕರ್ನಾಟಕ ಪ್ರದೇಶದ ಕವಿಗಳಿಗೆ ದಕ್ಕಲಿಲ್ಲ. ಅದರ ನಾಡಿ ಮಿಡಿತವನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಇದಕ್ಕೆ ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯಲ್ಲಿ ಉತ್ತರಗಳಿವೆ.

ನವೋದಯ ಸಾಹಿತ್ಯದಲ್ಲಿ ಮನುಷ್ಯ ಸಮಾಜದ ಭಾಗವೆಂದು, ಸಾಮಾಜಿಕ ಜೀವನ, ಸಮಾಜಿಕ ಸಮಸ್ಯೆಗಳೇ ಮುಖ್ಯವಾಗಿ ಪರಿಣಮಿಸಿದ್ದವು. ಮನುಷ್ಯನನ್ನು ಅರ್ಥೈಸುವುದು ಕೂಡ ಸಾಮಾಜಿಕ ಚೌಕಟ್ಟಿನಲ್ಲೇ. ಆದ್ದರಿಂದಲೇ ಮನುಷ್ಯನ ಸಾಮಾಜಿಕ

ವರ್ತನೆಗಳು ಆತನ ವ್ಯಕ್ತಿತ್ವವನ್ನು, ಮನಸ್ಸನ್ನು ತಿಳಿಸುತ್ತವೆ ಎಂದು ಗ್ರಹಿಸಲಾಯಿತು. ಆದರೆ ನವ್ಯ ಸಾಹಿತ್ಯ ಇದಕ್ಕೆ ವಿರುದ್ಧವಾಗಿ ಗ್ರಹಿಸತೊಡಗಿತ್ತು. ಸಾಮಾಜಿಕ ಚೌಕಟ್ಟಿನಿಂದ ಆಚೆಗೂ ಮನುಷ್ಯನ ಸಮಸ್ಯೆಗಳಿಗೆ ಅರ್ಥವಿದೆ. ಮನುಷ್ಯನ ಹೊರ ಜಗತ್ತಿನಂತೆ ಒಳಜಗತ್ತಿಗೂ ಅಸ್ತಿತ್ವವಿದೆ. ಅನುಭವದ ಮೂಲಕವೇ ಜೀವನವನ್ನು ಅರ್ಥೈಸುವ ಕ್ರಿಯೆ ನಡೆಯಬೇಕು ಎಂಬ ಧೋರಣೆಯಿಂದ ನವ್ಯ ಸಾಹಿತ್ಯ ಹುಟ್ಟಿಕೊಂಡಿತು. ಪ್ರಾರಂಭದಲ್ಲಿ ನವ್ಯದ ಧೋರಣೆ ಈ ನೆಲಕ್ಕೆ ತೀರಾ ಹೊಸದೆಂದು ಕಂಡರೂ ಬರುಬರುತ್ತ ಅದನ್ನು ಈ ನೆಲದ ಅಗತ್ಯಕ್ಕೆ ಬಳಸಿಕೊಳ್ಳಲು ಲಂಕೇಶ, ತೇಜಸ್ವಿ, ಮಹಾದೇವ, ಆಲನಹಳ್ಳಿ ಪ್ರಯತ್ನಿಸಿದರು. ನವ್ಯದ ಹ್ಯಾಂಗೋವರ್ ನಲ್ಲೇ ಉಳಿದ ಸಾಹಿತಿಗಳೂ ಇದ್ದಾರೆ. ಇಂಥ ಸಂದರ್ಭದಲ್ಲಿ ನವ್ಯ ಸಾಹಿತ್ಯದ ಗುಣಗಳನ್ನು ಗ್ರಹಿಸುವುದು ಹೈದರಾಬಾದ್ ಕರ್ನಾಟಕ ಪ್ರದೇಶದ ಕವಿಗಳಿಗೆ ಸಾಧ್ಯವಾಗಲಿಲ್ಲ ಎಂದೇ ಹೇಳಬೇಕಾಗುತ್ತದೆ. ಅಪ್ಪಟ ಹಳ್ಳಿಯ ಮೂಲಗಳಿಂದ ಬಂದ ಈ ಬರಹಗಾರರಿಗೆ ಆಧುನಿಕ ಜ್ಞಾನ ಶಾಖೆಗಳು, ಆಧುನಿಕ ಸಂವೇದನೆ ಅಪರಿಚಿತವಾಗಿ ಕಂಡವು. ಮೂಲ ಪಾಶ್ಚಾತ್ಯರಲ್ಲಿ ಬೆಳೆದಿದ್ದ ನವ್ಯ ಸಾಹಿತ್ಯವನ್ನು ಓದಿನಿಂದ ಗ್ರಹಿಸಲು ಸಾಧ್ಯವಾಗಲಿಲ್ಲ. ಮೇಲಾಗಿ ಕನ್ನಡದಲ್ಲೇ ನವ್ಯ ಸಾಹಿತ್ಯ ಎರಡು ವಿಧದಲ್ಲಿ ಬೆಳೆಯ ತೊಡಗಿತು. ಅಡಿಗರ ನವ್ಯ,ಗೋಕಾಕರ ನವ್ಯ ಮಾರ್ಗಗಳೆಂದು ಗೊಂದಲ ಹುಟ್ಟಿಸಿದವು. ಮೌಲ್ಯಗಳ ಶೋಧನೆ, ಅನುಭವದ ಮೂಲಕವೇ ಜೀವನದ ಅರ್ಥದ ಹುಡುಕಾಟ, ವ್ಯಕ್ತಿಯ ಅನಾಥ ಪ್ರಜ್ಞೆ, ಅಂತರ್‌ಮುಖಿ, ವಿಕ್ಷಿಪ್ತತೆ, ಸೂಕ್ಷ್ಮ ಸಂವೇದನಾಶೀಲತೆ, ಅಸ್ಪಸ್ಥತೆ ಮುಂತಾದ ವ್ಯಕ್ತಿಯ ಅಂತಃಸ್ಥಿತಿಯನ್ನು ಗ್ರಹಿಸುವುದೇ ಈ ಭಾಗದ ಕವಿಗಳಿಗೆ ತೊಡಕಾದವು. ಆಧುನಿಕ ಸಂವೇದನೆಯೇ ಇಲ್ಲದ ಈ ಭಾಗದ ಬದುಕು-ವ್ಯಕ್ತಿಗಳಲ್ಲಿ ನವ್ಯದ ನಾಯಕನ ಮನಸ್ಥಿತಿಯನ್ನು ಅನುಭವಕ್ಕೆ ತಂದುಕೊಳ್ಳುವುದಿರಲಿ ಅದನ್ನು ಪ್ರವೇಶಿಸುವುದೇ ಅಸಾಧ್ಯವಾಯಿತು ಎಂದು ಕಾಣುತ್ತದೆ. ಸಮಾಜ ಬಿಟ್ಟರೆ ಮನುಷ್ಯನಿಗೆ ಅಸ್ತಿತ್ವವೇ ಇಲ್ಲ ಎಂಬಂತಿರುವ ಈ ಭಾಗದ ಕವಿಗಳಿಗೆ ಸಮಾಜ ಮುಖ್ಯವಾಗಿತ್ತು. ಜಾನಪದವನ್ನೇ ಉಸಿರಾಡಿದ ಹಕಾರಿ, ವಾಲೀಕಾರ, ಅಮ್ಮಾಪುರ, ಸತ್ಯಂಪೇಟೆ, ಅಮರಚಿಂತ, ಎಂ.ಲಕ್ಷ್ಮಣ, ಜಾವಳಿ, ಉಡಚಣ, ಅರಣಕಲ್ ಮುಂತಾದವರಿಗೆ ಹೊರಜಗತ್ತು ಪರಿಚಯವಿದ್ದಂತೆ ಮನುಷ್ಯನ ಒಳಜಗತ್ತು ಒಂದಿದ್ದು ಅದಕ್ಕೂ ಅಸ್ತಿತ್ವವಿದೆ ಎಂದು ಅರಿಯುವುದು ತೊಡಕಿನ ವಿಷಯವಾಯಿತು. ಇದರಿಂದಾಗಿ ಅರವತ್ತರ ದಶಕದಲ್ಲಿ ಈ ಪ್ರದೇಶದಲ್ಲಿ ಬೆಳೆಯಲು ಸಾಧ್ಯವಿದ್ದ ಕವಿಗಳಿಗೆ ನವ್ಯ ಸಾಹಿತ್ಯ ಗೋಡೆಯಂತೆ ಪರಿಣಮಿಸಿತು. ನವೋದಯ ಮಾರ್ಗದಲ್ಲಿ ಮುಂದುವರಿಯಲು ಹಿಂಜರಿಯಬೇಕಾಯಿತು. ಯಾಕೆಂದರೆ ಅದು ಹಳೆಯದಾಗಿ ಕಂಡಿತು. ನವ್ಯದಲ್ಲಿ ಪ್ರವೇಶಿಸಲು ಬೌದ್ಧಿಕತೆ ಸಾಲದಾಯಿತು. ಇದರಿಂದ ಬೆಳೆಯಬಹುದಾಗಿದ್ದ ಕವಿಗಳು ಮುರುಟಿ ಹೋದಂತಾಯಿತು. ಆದರೆ ಕಾಲದ ಒತ್ತಡಕ್ಕೆ ಮಣಿದು ನವ್ಯ ಕವಿತೆಗಳನ್ನು ಹಲವಾರು ಕವಿಗಳು ಬರೆಯಲು ಪ್ರಯತ್ನಿಸಿದರು. ನವ್ಯದೊಡನೆ ಹೆಚ್ಚು ಹೊತ್ತು ಉಸಿರಾಡಲು ಈ ಕವಿಗಳಿಗೆ ಸಾಧ್ಯವಾಗಲಿಲ್ಲ. ಚಂದ್ರಕಾಂತ ಕುಸನೂರು ಮಾತ್ರ ಸ್ವಲ್ಪ ಹೊತ್ತು ಉಸಿರಾಡಲು ಪ್ರಯತ್ನಿಸಿದರು (ಅವರೂ ಮುಂದೆ ಕಥೆ, ಕಾದಂಬರಿಗಳನ್ನು ವಾಸ್ತವ ಮಾರ್ಗದಲ್ಲಿ ಬರೆದರು). ಕುತೂಹಲದ ಸಂಗತಿಯೆಂದರೆ, ನವ್ಯದ ನಾಯಕರು 'ಸಂಪ್ರದಾಯ'ದ ವಿರುದ್ಧ ಮತ್ತು ಉಸಿರುಗಟ್ಟುವಿಕೆಯ ವಾತಾವರಣದ ವಿರುದ್ಧ ಹೋರಾಟ ನಡೆಸಿರುವುದು, ಈ ಹೋರಾಟ ವ್ಯಕ್ತಿಯ ವ್ಯಕ್ತಿಗತ ಅಸ್ಥಿತ್ವದ ಪ್ರಶ್ನೆ ಬಂದಾಗ ನಡೆಸಿದ್ದಾಗಿತ್ತು ಎಂಬುದು ನಿಜ. ಆದರೆ ಈ ನವ್ಯದ ಹೋರಾಟದ ಮನೋಭಾವ ಈ ಭಾಗದ ಕವಿಗಳಿಗೆ ಬೇರೊಂದು ರೀತಿಯಲ್ಲಿ ಪ್ರೇರಣೆ ನೀಡಿರಬೇಕು ಎನ್ನಿಸುತ್ತದೆ. ಇದಕ್ಕೆ ಈ ಹೊತ್ತಿನಲ್ಲಾದ ಬದಲಾವಣೆಗಳು ಒತ್ತಡ ತಂದಿರಬೇಕು. ಸಂಪ್ರದಾಯದ ವಿರುದ್ಧ, ಅಸ್ಥಿತ್ವಕ್ಕಾಗಿ ವ್ಯಕ್ತಿಗತ ಹೋರಾಟವನ್ನು ಸಾಮಾಜಿಕ ಸನ್ನಿವೇಶದಲ್ಲಿ ಕಾಣುವ ಅಸಾಮಾನ್ಯತೆಯ ವಿರುದ್ಧ ಸಾಮೂಹಿಕ ಹೋರಾಟವನ್ನಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಾಯಿತೇನೋ ಎಂದು ಕಾಣುತ್ತದೆ. ಬಂಡಾಯ ಸಾಹಿತ್ಯ ಚಳುವಳಿ ಸುರುವಾಗುವುದಕ್ಕೆ ಈ ಭಾಗದ ಕವಿಗಳೂ ಕಾರಣರಾಗಿದ್ದಾರೆಂದು ಮರೆಯುವಂತಿಲ್ಲ. ನವ್ಯದ ನಾಯಕರ ಹೋರಾಟ ಬೇರೆ. ಬಂಡಾಯದ ನಾಯಕರ ಹೋರಾಟ ಬೇರೆ. ಆದರೆ ಇದು ವಿಚಿತ್ರ ರೀತಿಯಲ್ಲಿ ಈ ಭಾಗದ

ಕವಿಗಳಲ್ಲಿ ಬೆರೆತಂತೆ ಕಾಣುತ್ತದೆ. ಈ ಸಂದರ್ಭದ ಕವಿಗಳ ಒಟ್ಟು ಮನಸ್ಥಿತಿಯನ್ನು ಶಾಂತರಸರು ಸಂಪಾದಿಸಿದ 'ಬೆನ್ನ ಹಿಂದಿನ ಬೆಳಕು'ಎಂಬ ಆ್ಯಂಥಾಲಜಿಯ ಕವಿತೆಗಳಲ್ಲಿ ಕಾಣಬಹುದು.

'ಬೆನ್ನ ಹಿಂದಿನ ಬೆಳಕು' ಪ್ರಧಾನವಾಗಿ ಎರಡು ಕಾರಣಕ್ಕಾಗಿ ಮುಖ್ಯ ಎನಿಸುತ್ತದೆ. ಒಂದು ಅರವತ್ತರ ದಶಕ ದಾಟುತ್ತಿದ್ದಂತೆ ಎಪ್ಪತ್ತರ ದಶಕ ಕಾಲಿಡುತ್ತಿದ್ದ ಅವಧಿಯಲ್ಲಿ (೧೯೬೫-೭೫) ಈ ಭಾಗದ ಕವಿಗಳು ಕಾವ್ಯ ರಚನೆಯ ಸಂದರ್ಭದಲ್ಲಿ ತೊಡಕಾದ ಮನೋಧರ್ಮದ ಪ್ರಶ್ನೆ. ಎರಡು: ಈ ಭಾಗದ ಕವಿಗಳ ಅಸ್ತಿತ್ವದ ಪ್ರಶ್ನೆ. ಮೊದಲನೆಯದು ವ್ಯಕ್ತಿಗತ ಸಮಸ್ಯೆಯಾದರೆ, ಎರಡನೆಯದು ಸಾಹಿತ್ಯಿಕ ವಲಯದಲ್ಲಿ ಈ ಭಾಗದ 'ಕಾವ್ಯ ಸತ್ವ'ದ ಸಮಸ್ಯೆಯಾಗಿತ್ತು. 'ಬೆನ್ನ ಹಿಂದಿನ ಬೆಳಕು' ಆ್ಯಂಥಾಲಜಿಯ ಸಂಪಾದಕರ ಪ್ರಸ್ತಾವನೆಯನ್ನು ಗಮನಿಸಿದರೆ, ಹೈದರಾಬಾದ್ ಕರ್ನಾಟಕ ಪ್ರದೇಶದ ಕವಿಗಳಿಗೆ ನವ್ಯಕಾವ್ಯ ಹುಟ್ಟಿಸಿದ ಗೊಂದಲ ಎದ್ದು ಕಾಣುತ್ತದೆ. ಯಾವುದು ಒಳ್ಳೆಯ ಕಾವ್ಯ? ಯಾರು ಒಳ್ಳೆಯ ಕವಿ? ಎಂದು ತೋರಿಸುವಲ್ಲಿ ವಿಮರ್ಶಕರು ಪಕ್ಷಪಾತ ಮಾಡುತ್ತಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಕಾವ್ಯವನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಈ ಭಾಗದಲ್ಲಿಯೂ ಈ ಶತಮಾನದ ಪ್ರಾರಂಭದಿಂದಲೂ ಹೊಸಗನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ ಎಂದು ಉದಾಹರಣೆ ಸಹಿತ ತೋರಿಸಲಾಗಿದೆ. ನಮ್ಮಲ್ಲೂ ಸಾಹಿತ್ಯ ಇದೆ ಎಂದು ಅದು 'ಬೆನ್ನ ಹಿಂದಿನ ಬೆಳಕಿ'ನಂತಿದೆ ಎಂದು ತೋರಿಸಲು ಈ ಆ್ಯಂಥಾಲಜಿಯನ್ನು ಸಂಪಾದಿಸಲಾಯಿತು. ಕಾವ್ಯವೇ ಪ್ರಧಾನ ಪ್ರಕಾರವಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದರಿಂದ, ಅಂದಂದಿನ ಕಾವ್ಯವನ್ನು ದಾಖಲಿಸುವ ಆ್ಯಂಥಾಲಜಿಗಳು ಹೊರಬಂದಿವೆ. ಬಿ.ಎಂ.ಶ್ರೀ ಸಂಪಾದಿಸಿದ 'ಕನ್ನಡ ಬಾವುಟ' (೧೯೩೮), ರಂ.ಶ್ರೀ. ಮುಗಳಿ ಸಂಪಾದಿಸಿದ 'ಕನ್ನಡ ಕಾವ್ಯ ಸಂಚಯ'(೧೯೭೦). ಈ ಎರಡು ಕೃತಿಗಳಲ್ಲಿ ಸಮಗ್ರ ಕನ್ನಡ ಕಾವ್ಯ ಪರಂಪರೆಯ ದಾಖಲೆಯಿದೆ. ನಂತರ ಬಂದ 'ನವ್ಯಧ್ವನಿ', 'ಸಂಕ್ರಮಣ ಕಾವ್ಯ', 'ಅಕ್ಷರ ಹೊಸ ಕಾವ್ಯ', 'ಹೊಸ ಜನಾಂಗದ ಕವಿತೆಗಳು' ಮುಂತಾದ ಆ್ಯಂಥಾಲಜಿಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಕವಿಗಳಿಗೆ ಸ್ಥಾನ ಸಿಕ್ಕಿರಲಿಲ್ಲ. ಇದೆಲ್ಲವನ್ನು ಗಮನಿಸಿ ಈ 'ಪಕ್ಷಪಾತ'ವನ್ನು ವಿರೋಧಿಸುವ ದೃಷ್ಟಿಯಿಂದ 'ಬೆನ್ನ ಹಿಂದಿನ ಬೆಳಕು'(೧೯೭೨) ಹೊರ ಬಂದಿದೆ. ಇದರ ಇತಿಮಿತಿಯ ಬಗ್ಗೆ ಕನ್ನಡ ಸಾಹಿತ್ಯದ ವಲಯದಲ್ಲಿ ತಕ್ಕಮಟ್ಟಿಗೆ ಚರ್ಚೆಯೂ ಆಗಿದೆ.

'ಬೆನ್ನ ಹಿಂದಿನ ಬೆಳಕು'(೧೯೭೨) ಆ್ಯಂಥಾಲಜಿಯಲ್ಲಿರುವ ಕವಿತೆಗಳನ್ನು ಗಮನಿಸಬಹುದು:

ನಾನು ಕಟ್ಟಿದ ಮಹಲಿನ ಸುತ್ತ ಕಂಟಿ ಕಮರಿ
ಮುಳ್ಳು ಜಾಲಿ, ಕಳ್ಳಿ ಬೆಳೆಯುತ್ತ
ಬೆಳೆಯುತ್ತ
ಹಾವುಗಳ ಹುತ್ತ ಹುಲಿಗಳ ಗುಹೆ
ನರಿಗಳ ಬಿಲ ಇರುವೆ ಬರದಂತೆ
ಮೆತ್ತಿಕೊಂಡಾಗ
ನನ್ನ ಉಸಿರು
ಮಹಲಿನ ಒಂದೊಂದು ಕಲ್ಲು ಕೆಡವಿ
ನೆಲಸಮ ಮಾಡಿ ಕಾಡಾಗಿ
ಬದುಕಬೇಕೆನ್ನುತ್ತದೆ. **(ಉರಿ: ಚೆನ್ನಣ್ಣ ವಾಲೀಕಾರ)**

ನಾವು ಹೆಣ್ಣಾಗಳು ಸಾರ್, ನಾವು ಹೆಣ್ಣಾಗಳು
ಮಾಡೇವು, ತೋರಿಸೇವು, ಮುಗಿಸೇವೆನುವಂತಿಲ್ಲ

ಓಡಿದ ದಾರಿ ತುಳಿದೇವು, ತುಳಿದು ದೂರ ಸೇರೇವಂತಿಲ್ಲ
ಗಟ್ಟಿಲ್ಲ, ತಾಕತ್ತಿಲ್ಲ. (ನಾವು ಸತ್ತ ಹಾವು ಸಾರ್:ಮಲ್ಲಿಕಾರ್ಜುನ ಹಿರೇಮಠ)

ಹಾಡಿದ್ದೆ ಹಾಡಿ
ಬಗೆದದ್ದೆ ಬಗೆದು
ಬಾಳು ಸೀಳಿ-ಕೂದಲು ಮಾಡಿ
ಸಾಕಾಗಿದೆ
ಏಕಾಂತ ಹೊದ್ದು
ಲೋಕಾಂತ ಒದ್ದು
ಶೂನ್ಯಕ್ಕೆ ತೆಕ್ಕೆಬಿದ್ದು
ಗೆದ್ದೇನೆಂದು ಎದ್ದದ್ದು
ಸಾಕಾಗಿದೆ (ಕಳೆ:ಲಿಂಗಣ್ಣ ಸತ್ಯಂಪೇಟೆ)

ಹುಟ್ಟಿದಾಕ್ಷಣವೇ ಸ್ವಂತ ಅತ್ತ ನಾನು
ಅರವತ್ತಾಗಿ ಸತ್ತರೂ ಇದಕಾಗಿ ಪರಾವಲಂಬಿಯಾಗಬೇಕಾಗುವುದಲ್ಲ?
ಖುದ್ ಎಷ್ಟೋ ಹೆಣ ಹೊತ್ತ ನಾನು
ಸ್ವತಃ ಸತ್ತಾಗ ಎರಡನೆಯವರಿಂದ ಹೊರಿಸಿಕೊಳ್ಳಬೇಕಾಗುವದಲ್ಲ?
ಅದಕಾಗಿ
ಒಮ್ಮೆ ಎಂದರೆ ಒಮ್ಮೆಯೇ
ಸ್ವತಃ ನಾನೇ ಸತ್ತು, ನಾನೇ ಹೊತ್ತು, ನಾನೇ ಅತ್ತು ನೋಡುವ
ಸ್ವಾವಲಂಬನಕ್ಕೆ ನಾನು ಪ್ರಯತ್ನಿಸುತ್ತಿದ್ದೇನೆ (ಸ್ವಾವಲಂಬನೆ:ಗುರುಬಸಯ್ಯ ಅಮ್ಮಾಪುರ)

ಸದ್ದಿಲ್ಲದೆ ಕಟ್ಟುತ್ತಿದೆ ಹುತ್ತ ಕಟ್ಟಿರುವೆ ದಂಡು
ನೆನಪಿನ ಜೋಗಕ್ಕೆ ಹೃದಯ ಗಿಮ್ಮೆಂದು
ತಿರುಗಿ
ನರ-ನರಕ್ಕೆ ವಿದ್ಯುತ್ ಪ್ರವಾಹ
ಹರಿದಾಗ ನನ್ನ ನಾ ಮರೆತು
ನಿನ್ನೆಗಳ ಗುಂಡಿಯಲಿ
ಒದ್ದಾಡುತ್ತಿದ್ದೇನೆ
ಕೊಳೆತ ನೀರಿನ ಹೊಂಡ
ಬಟ್ಟೆ ಸುಡುವ ಕಮಟು ವಾಸನೆ
ಮರೆತಷ್ಟು ಎದೆ ತುಂಬ ಹೆಡೆ ಬಿಚ್ಚುವ ತಕ್ಷಕ
ಈ ಆಣೆ-ಕಟ್ಟು ಒಡೆದು ಕೊಳೆತ
ನೀರನ್ನು ಹೊರಬಿಡಬೇಕು
ಹರಿವ ನೀರು ಹರಿಯಗೊಡಬೇಕು (ಹರಿಯುವ ನೀರು: ಜಂಬಣ್ಣ ಅಮರಚಿಂತ)

ಸಭ್ಯತೆ ಸಂಸ್ಕೃತಿ ಇತಿಹಾಸ
ಮತ್ತು
ಪರಂಪರೆಯ ಪರೆ
ನನ್ನ ತಲೆಯ ಮೇಲೆ
ಹೊರಿಸಬೇಡ ನಾನು
ನೀ ಹೇರಿದ ಹೊರೆ
ಹೊತ್ತು ಕೊಳ್ಳುವ ಕತ್ತೆ ಅಲ್ಲ
ನಾ
ಮನುಷ್ಯ
ಗಾಳಿ ಬಿಸಿಲುಗಳಲ್ಲಿ ಬೆಳೆಯಬೇಕೆಂಬಾಶೆ
ನನಗಿದೆ
ತಿಳಿಯತೆ?
ಕತ್ತೆ (ಹೊರೆ:ಚಂದ್ರಕಾಂತ ಕುಸನೂರು)

ಈ ಎಲ್ಲ ಕವಿತೆಗಳನ್ನು ನೋಡಿದರೆ ವ್ಯಕ್ತಿಯ ಅಸ್ತಿತ್ವಕ್ಕಾಗಿ, ಉಸಿರುಗಟ್ಟುವ ವಾತಾವರಣದ ವಿರುದ್ಧ ಬಂಡು ಹೂಡುವುದು ಕಾಣುತ್ತದೆ. ಡಿ.ಆರ್.ನಾಗರಾಜ್ ಹೇಳುವಂತೆ 'ನವ್ಯದಲ್ಲಿ ಸಾಮಾಜಿಕ ವಾಸ್ತವ ಎಂದರೆ ಉಸಿರು ಕಟ್ಟುವಿಕೆಯ ಸ್ಥಿತಿಯ ವಿರುದ್ಧ ದಂಗೆಯೇಳುವಿಕೆ'[೨೨] ಎಂಬ ಮಾತು ಸರಿ ಎನಿಸುತ್ತದೆ.

ನವ್ಯ ಕಾವ್ಯಕ್ಕೆ ಸ್ಪಂದಿಸಿದ್ದರೂ ದೇವೇಂದ್ರ ಕುಮಾರ ಹಕಾರಿ, ರಾಘವೇಂದ್ರ ಇಟಗಿ, ವಸಂತ ಕುಷ್ಟಗಿ, ಜಿ.ಕೃಷ್ಣರಾವ್ ಮುಂತಾದವರು ಗೋಕಾಕರ ಕಾವ್ಯ ಮಾರ್ಗವನ್ನು ಅನುಸರಿಸಿದರೆಂದೇ ಹೇಳಬೇಕು. ಶಿವಶರಣ ಚಾವಳಿ ನವ್ಯ ಕಾವ್ಯಕ್ಕೆ ಸ್ಪಂದಿಸಿದಂತೆ ಕಂಡರೂ ಅದರಲ್ಲಿ ದಾರಿ ಸವೆಸುವುದು ಕಷ್ಟವೆಂದು ಹೊರಬಂದು ತಮ್ಮದೇ ಹಾದಿಯನ್ನು ಕಂಡುಕೊಂಡರು. ಸಮಾಜದಲ್ಲಿ ನಡೆಯುವ ಅನ್ಯಾಯ, ಅಸಮಾನತೆ, ಶೋಷಣೆಗಳ ಬಗ್ಗೆ ಅಸಹನೆ, ವ್ಯಂಗ್ಯ ವ್ಯಕ್ತವಾಗಿದೆ. ಪ್ರಾಮಾಣಿಕತೆ, ನಿಷ್ಠೆ, ಜವಾಬ್ದಾರಿಗಳ ಬಗ್ಗೆ ಅಪಾರ ಕಾಳಜಿ ವ್ಯಕ್ತವಾಗಿದೆ. ಆದರೆ ಅವರ ಕಾವ್ಯ 'ಸತ್ವ'ದ ದೃಷ್ಟಿಯಿಂದ ಎತ್ತರಕ್ಕೆ ಬೆಳೆಯದೆ ಒಂದೇ ಪಾತಳಿಯಲ್ಲಿ ಉಳಿದಿದೆ. ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಎಂ.ಲಕ್ಷ್ಮಣ ಮುಂತಾದವರು ಬಂಡಾಯ ಸಾಹಿತ್ಯ ಚಳುವಳಿಗೆ ಧುಮಿಕಿದರು. ಶಾಂತರಸರು ನವೋದಯ, ನವ್ಯ, ಬಂಡಾಯ ಈ ಮೂರು ಕಾವ್ಯ ಮಾರ್ಗದಲ್ಲಿ ನಡೆದಿದ್ದಾರೆ. ಇದೆಲ್ಲವನ್ನು ಗಮನಿಸಿದರೆ ನವ್ಯಕಾವ್ಯ ಮಾರ್ಗದಲ್ಲಿ ಈ ಭಾಗದ ಕವಿಗಳು ಬಲು ದೂರ ನಡೆಯಲಾಗಿಲ್ಲ. ಚಂದ್ರಕಾಂತ ಕುಸನೂರು **'ನಂದಿಕೋಲು'**, ಚೆನ್ನಣ್ಣ ವಾಲೀಕಾರ **'ಮರದ ಮೇಲಿನ ಗಾಳಿ'** ಮಲ್ಲಿಕಾರ್ಜುನ ಹಿರೇಮಠ **'ಅಕ್ವೇರಿಯಮ್ ಮೀನು'**, ಅಮರಚಿಂತರ **'ಮುಂಜಾವಿನ ಕೊರಳು'** ಹೀಗೆ ಒಂದೊಂದೇ ಸಂಕಲನ ತರುವಷ್ಟು ಸ್ಪಂದಿಸಿದರು. ಶಾಂತರಸರು ತಮ್ಮ ಮೊದಲ ಕವನ ಸಂಕಲನದಲ್ಲಿ **(ಮಾನಸ ಗಳ್ಳಿ)** ನವ್ಯ ಅನ್ನಬಹುದಾದ ಕವಿತೆಗಳಿದ್ದರೂ ಅವುಗಳ ಒಡಲಲ್ಲಿ ಕವಿಯ ಬದುಕಿನ ಅನುಭವಗಳು ತುಂಬಿವೆ. ಈ ಅನುಭವಗಳಲ್ಲಿ ಹಳ್ಳಿತನವಿದೆ. 'ಚಿಮಣಿ', 'ಕಾದಿ', 'ನನ್ನದೇ ಮನೆಯಿದು', 'ಸಹವಾಸ' ಮುಂತಾದ ಕವಿತೆಗಳಲ್ಲಿ ಭಿನ್ನತೆ ಇದೆ ಎನ್ನಿಸಿದರೂ ಕಾವ್ಯಮಾರ್ಗಗಳ 'ಸಮನ್ವಯ' ಕಾಣುತ್ತದೆ. ಚಿಮಣಿಯನ್ನು ಅದರ ಉಪಯುಕ್ತತೆಯ ನೆಲೆಯಲ್ಲಿ ಗ್ರಹಿಸಿ ಅದರ ಸಾರ್ಥಕತೆಯನ್ನು ಹೇಳಲು ಪ್ರಯತ್ನಿಸಿದ್ದಾರೆ.

ಒಲೆ ಹಚ್ಚಲೂ ಬೇಕು
ಅಟ್ಟುಣ್ಣಲೂ ಬೇಕು

ಕೊಟ್ಟಿಗೆಯ ದಿನಗಳಿಗೆ
ಮೇವು ಹಾಕಲುಬೇಕು
ಕುಟ್ಟಲೂ ಬೇಕು
ಬೀಸಲೂ ಬೇಕು **(ಚಿಮಣಿ:ಶಾಂತರಸ)**

ಮನುಷ್ಯನಿಗೆ ಚಿಮಣಿಯಿಂದ ಆಗುವ ಲೌಕಿಕ ಪ್ರಯೋಜನಗಳ ವಾಸ್ತವ ಚಿತ್ರವಿದೆ. ಹಳ್ಳಿಯ ಪರಿಸರದಲ್ಲಿ ಕತ್ತಲಾಗುತ್ತಿದ್ದಂತೆ ಜನರಿಗೆ ಚಿಮಣಿ ಕಣ್ಣಾಗಿ ಪರಿಣಮಿಸುತ್ತದೆ ಎಂಬ ಭಾವನೆಯಲ್ಲಿ ಸತ್ಯದ ದರ್ಶನವಿದೆ. ಆದರೂ ಈ ಕವಿತೆಯಲ್ಲಿ ಚಿಮಣಿಯ ಕೇವಲ ಲೌಕಿಕ ಪ್ರಯೋಜನಗಳ ಮಟ್ಟದಲ್ಲಿ ನಿಲ್ಲುತ್ತದೆಯೇ ಹೊರತು ಅದು 'ದರ್ಶನ'ದ ಎತ್ತರಕ್ಕೆ ಬೆಳೆಯುವುದಿಲ್ಲ. ಜಿ.ಎಸ್.ಶಿವರುದ್ರಪ್ಪನವರ **'ಜಡೆ'** ಕವಿತೆಯಂತೆ ಮೂರ್ತದಿಂದ ಅಮೂರ್ತದ ಕಡೆಗೆ ಚಲಿಸಿ ಬೆಳೆಯುವುದಿಲ್ಲ. **'ಕೌದಿ'** ಕವಿತೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಕೌದಿಯ ಭೌತಿಕ ಕ್ರಿಯೆಗಳ ಮಟ್ಟದಲ್ಲಿ ವಾಸ್ತವ ಚಿತ್ರಣವನ್ನು ತೋರಿಸುತ್ತದೆ. ಹಳೆಯ, ಹರಿದ ತುಂಡು ತುಂಡು ಬಟ್ಟೆಗಳಿಂದ ಹೊಲಿದ ಕೌದಿ ಒಂದರ್ಥದಲ್ಲಿ ಬಡವರ ಹಾಸಿಗೆ. ಮನೆ ಮಂದಿ ತೊಟ್ಟು ಬಿಟ್ಟು ಹಳೆಯದಾದ ಬಟ್ಟೆಗಳು, ಎಲ್ಲ ನದಿಗಳು ಸಮುದ್ರ ಸೇರುವಂತೆ ಕೌದಿಗೆ ಸೇರುತ್ತವೆ.

ನೂರಾರು ಆಸೆ ಆಕಾಂಕ್ಷೆಗಳ
ಗೋರಿಗಳು
ಇದರ ಉದ್ದಗಲಕ್ಕೆ ಅಂಟಿಹವು
ಆಕಾರ ಕಳಕೊಂಡ ಏಸೋ ಬಿಂಬಗಳ
ಪ್ರತಿಬಿಂಬ

ಇದು ಕೌದಿಯ ಭೌತಿಕ ರೂಪ. ನವ್ಯದ ನೆರಳಿದೆ, ನವೋದಯ ಕಾವ್ಯದ ಛಾಯೆಯೂ ಇದೆ. ಇಂಥ ಕವಿತೆಗಳನ್ನು ಪ್ರಾರಂಭದಲ್ಲಿ ಶಿವಶರಣ ಜಾವಳಿ ಅವರೂ ಬರೆದಿದ್ದಾರೆ. ಎಪ್ಪತ್ತರ ದಶಕದ ಕೊನೆಗೆ ಬರುತ್ತಿದ್ದಂತೆ ವಾಲೀಕಾರ, ಅಮರಚಿಂತ, ಜಾವಳಿ, ಶಾಂತರಸ, ಎಂ.ಲಕ್ಷ್ಮಣ, ಗುರುಬಸಯ್ಯ ಅಮ್ಮಾಪುರ ಮುಂತಾದವರು ಬಂಡಾಯ ಸಾಹಿತ್ಯ ಚಳುವಳಿಯ ಪ್ರಭಾವಕ್ಕೆ ಒಳಗಾದರು. ಕೆಲವರಂತೂ ಇದರಲ್ಲಿಯೇ ತಮ್ಮ ಪ್ರತಿಭೆಯನ್ನು ತೋರಿಸತೊಡಗಿದರು. ಆದರೆ ಇಟಗಿ, ಹಕಾರಿ, ಉಡಚಣ, ಕುಷ್ಟಗಿ, ಕೃಷ್ಣರಾವ್, ಕುಸನೂರು ಮುಂತಾದವರು ಈ ಸಾಹಿತ್ಯ ಚಳುವಳಿಯ ಪ್ರಭಾವಕ್ಕೆ ಒಳಗಾಗಲಿಲ್ಲ. ಗೋಕಾಕರ ಕಾವ್ಯಮಾರ್ಗ ಅನುಸರಿಸಿದರೂ ಬಹು ದೀರ್ಘಕಾಲ ಬರೆಯುವ ಉತ್ಸಾಹವನ್ನು ಅನೇಕರು ಉಳಿಸಿಕೊಳ್ಳಲಿಲ್ಲ. ಇಲ್ಲೂ ಶಾಂತರಸರು ಬಂಡಾಯ ಸಾಹಿತ್ಯ ಚಳುವಳಿಯ ಪ್ರಭಾವಕ್ಕೆ ಒಲಿದರೂ, ಅದನ್ನು ಹೊರಗಿನಿಂದ ನೋಡಿದರು ಮತ್ತು ಅದರ ಧ್ಯೇಯ ಧೋರಣೆಯನ್ನು ಅನುಮಾನಿಸಿದಂತೆ ಕಾಣುವ ಹಾಗೆ,

ಗೆಳೆಯಾ, ನಾನು ಕವಿತೆ ಬರೆಯಲಾರೆ
ಬರೆಯುವುದಿಲ್ಲ
ಕಾವ್ಯ ಬರೆಯಲು ಇದು ಸಮಯವೂ ಅಲ್ಲ
- - - - - - - - - - - - - -
ಕಾಗದ ಮಸಿ ಪೆನ್ನು ಪುಸ್ತಕ
ಅಲ್ಲಿರಲಿ,
ಬಾ, ಗೆಳೆಯಾ

ಹೊರಗೆ ಬಾ
ಏನಾದರೂ ಮಾಡೋಣ

ಎಂದು ಕವಿತೆ ಬರೆದರು. ಕವಿತೆಯಲ್ಲಿ ಮಾತ್ರ ಪ್ರತಿಭಟನೆ ಮಾಡುವುದರಿಂದ 'ಶೋಷಕ ವ್ಯವಸ್ಥೆ' ಬಗ್ಗುವುದಿಲ್ಲ. ಬೀದಿಗೆ ಬಂದು ಹೋರಾಡಬೇಕು ಎಂಬ ಕವಿಯ ನಿಲುವು ಇದರಲ್ಲಿದೆ, ನಿಜ. ವಚನ ಚಳುವಳಿಯ ಕಾಲದಲ್ಲಿ ಪ್ರತಿಭಟನೆ ಮತ್ತು ಕಾವ್ಯ ಒಂದಕ್ಕೊಂದು ಪೂರಕವಾಗಿದ್ದವೇ ಹೊರತು ಎರಡು ಕ್ರಿಯೆಗಳು ಬೇರೆ ಬೇರೆಯಾಗಿರಲಿಲ್ಲ. ಈ ಧೋರಣೆಯೇ ಬಂಡಾಯ ಸಾಹಿತ್ಯ ಚಳುವಳಿ ಅನುಸರಿಸಿದೆ. ಬೀದಿಗೆ ಬಂದು ಹೋರಾಡುವುದು, ಯಾವುದಕ್ಕಾಗಿ ಹೋರಾಡಲಾಯಿತೋ ಆ ಸಂದರ್ಭವನ್ನು ಕುರಿತು ಕವಿತೆಯ ಮೂಲಕವೂ ವ್ಯಕ್ತಪಡಿಸಲಾಗಿದೆ. ಬಂಡಾಯ ಸಾಹಿತ್ಯ ಚಳುವಳಿ ಸಮಾಜದಲ್ಲಿ ಜರುಗಿದ ಅನೇಕ ಅನ್ಯಾಯದ ಘಟನೆಗಳ ವಿರುದ್ಧ ಬೀದಿಯ ಚಳುವಳಿ ನಡೆಸಿದೆ. ಆ ಸಂದರ್ಭವನ್ನು ಕವಿತೆಗಳ ಮೂಲಕವೂ ಪ್ರತಿಭಟಿಸಿದ್ದಕ್ಕೆ ಅನೇಕ ಉದಾಹರಣೆಗಳಿವೆ.

ಬಂಡಾಯ ಸಾಹಿತ್ಯ ಚಳುವಳಿ ಜೊತೆಯಲ್ಲಿ

ಹೈದರಾಬಾದ್ ಕರ್ನಾಟಕ ಪ್ರದೇಶದ ಬರಹಗಾರರಿಗೆ ನೇರವಾಗಿ ನವೋದಯ ಮತ್ತು ನವ್ಯ ಸಾಹಿತ್ಯ ಚಳುವಳಿಯ ಸಂಬಂಧ ಏರ್ಪಟ್ಟಿರಲಿಲ್ಲ. ನಿಜಾಂ ಆಡಳಿತಕ್ಕೆ ಸೇರಿದ ಈ ಪ್ರದೇಶದ ಬರಹಗಾರರು ಪ್ರಾರಂಭದಲ್ಲಿ ಹೈದರಾಬಾದ್ ನಗರವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ೧೮-೧೯ನೇ ಶತಮಾನದಿಂದಲೇ ಈ ಪ್ರದೇಶದಲ್ಲಿ ಕನ್ನಡ ಭಾಷೆ ಸಾಹಿತ್ಯಕವಾಗಿ ಹಿನ್ನೆಲೆಗೆ ಸರಿದಿತ್ತು. ವ್ಯವಹಾರಿಕವಾಗಿ ಕನ್ನಡ ಜನಸಾಮಾನ್ಯರಲ್ಲಿ ಉಳಿದಿದ್ದರೂ, ಅದರ ಜತೆಗೆ ತೆಲುಗು, ಮರಾಠಿ, ಉರ್ದು ಭಾಷೆಗಳು ಒತ್ತಿಕೊಂಡಿದ್ದವು. ಇದರಿಂದ ಜನಸಾಮಾನ್ಯರಲ್ಲಿಯೂ ವ್ಯವಹಾರಿಕವಾಗಿ ಕೇವಲ ಕನ್ನಡ ಭಾಷೆ ಮಾತ್ರ ಇರದೆ ನೆರೆಯ ಭಾಷೆಗಳೂ ಮುತ್ತಿಕೊಂಡಿದ್ದವು. ಮಠಮಾನ್ಯಗಳಲ್ಲಿ ವ್ಯವಹಾರೇತರವಾಗಿ ಕನ್ನಡ ಭಾಷೆ ಚಲನೆಯಲ್ಲಿತ್ತು. ೨೦ನೇ ಶತಮಾನದಲ್ಲಿ ಹೈದರಾಬಾದ್ ಕರ್ನಾಟಕೇತರ ಪ್ರದೇಶದಲ್ಲಿ ಆಧುನಿಕ ಶಿಕ್ಷಣವನ್ನು ಪಡೆಯುವ ಸಾಧ್ಯತೆಯನ್ನು ದಕ್ಕಿಸಿಕೊಂಡಂತೆ ಈ ಭಾಗದಲ್ಲಿ ಅದು ಸಾಧ್ಯವಿರಲಿಲ್ಲ. ನಿಜಾಂ ರಾಜ್ಯಾಡಳಿತ ಭಾಷೆಯಾಗಿ ಉರ್ದು ಪ್ರಭುತ್ವದಲ್ಲಿದ್ದರಿಂದ ಅಕ್ಷರ ಕಲಿಯಲು ಅವಕಾಶ ಪಡೆಯುವ ವಿದ್ಯಾರ್ಥಿಗಳಿಗೆ ಉರ್ದು ಭಾಷೆಯೇ ಗತಿಯಾಯಿತು. ಇದರಿಂದ ಅಕ್ಷರ ಕಲಿಯಲು ಸಾಧ್ಯವಾಗುವ ಅತ್ಯಲ್ಪ ಸಂಖ್ಯೆಯ ವಿದ್ಯಾರ್ಥಿಗಳು ಉರ್ದು ಮಾಧ್ಯಮದ ಮೂಲಕ ಪ್ರವೇಶಿಸಿ ಹೆಚ್ಚಿನ ಶಿಕ್ಷಣವನ್ನು ಅದರಲ್ಲೇ ಪಡಯುವತ್ತ ಸಾಗಿದರು. ಇದರಿಂದ ಲೌಕಿಕ ಪ್ರಯೋಜನಗಳೂ ಇದ್ದುದರಿಂದ ವಿದ್ಯಾವಂತರು ಪರಿಸ್ಥಿತಿಗೆ ಹೊಂದಿಕೊಂಡರು. ಕನ್ನಡ ಭಾಷೆ ಮತ್ತು ಸಾಹಿತ್ಯಾಭಿಮಾನಿಗಳು ಇದೇ ಹಾದಿಯ ಜತೆಗೆ ಸಾಹಿತ್ಯಕ ಚಟುವಟಿಕೆಗಳಿಗೆ ಗಮನಕೊಟ್ಟರೂ ವಾತಾವರಣ ಆರೋಗ್ಯಕರವಾಗಿರಲಿಲ್ಲ. ಬೆಂಗಳೂರು, ಮೈಸೂರು, ಧಾರವಾಡ ನಗರಗಳಲ್ಲಿದ್ದ ಸಾಂಸ್ಕೃತಿಕ ವಾತಾವರಣ ಹೈದರಾಬಾದ್ ನಗರದಲ್ಲಿ ಇರಲು ಸಾಧ್ಯವಿರಲಿಲ್ಲ. ಹೀಗಾಗಿ ಎಷ್ಟೇ ಸಾಹಿತ್ಯಕವಾಗಿ ಅಭಿಮಾನ, ಉತ್ಸಾಹವಿದ್ದರೂ ಸಂಪರ್ಕದ ಕೊರೆಯಿಂದ ಮತ್ತು ಆಧುನಿಕ ವಿದ್ಯಾಭ್ಯಾಸದಿಂದ ಸಿಗುವ ಜ್ಞಾನವು ಬಹುಬೇಗ ದೊರೆಯಲಿಲ್ಲ, ದಕ್ಕಲಿಲ್ಲ. ಇದರಿಂದ ಹೈದರಾಬಾದ್ ಕರ್ನಾಟಕ ಪ್ರದೇಶವು ಉಳಿದ ಪ್ರದೇಶಗಳಿಗಿಂತ ಎರಡು ದಶಕಗಳ ಕಾಲ ಸಾಂಸ್ಕೃತಿಕವಾಗಿ ಹಿಂದಿರುತ್ತಿತ್ತು. ಈ ಕಾರಣದಿಂದಲೇ ನವೋದಯ, ನವ್ಯ ಸಾಹಿತ್ಯವು ಅದರ ಪ್ರಾರಂಭಿಕ ಅವಸ್ಥೆಯ ಜತೆಜತೆಗೆ ಬೆಳೆಯಲು ಈ ಭಾಗದ ಬರಹಗಾರರಿಗೆ ಸಾಧ್ಯವಾಗಲಿಲ್ಲ. ಈ ತೊಡಕಿನಿಂದಾಗಿಯೂ ಸಾಹಿತ್ಯ ಹೇಳಿಕೊಳ್ಳುವ ಎತ್ತರಕ್ಕೆ ಬೆಳೆಯಲಿಲ್ಲ. ಇದೆಲ್ಲ ರಾಜಕೀಯ ಸ್ಥಿತ್ಯಂತರಗಳ ಕಾರಣದಿಂದ ಆದದ್ದು ಎಂಬ ಮಾತು ನಿಜ. ಆದರೆ ಬಂಡಾಯ ಸಾಹಿತ್ಯ ಚಳುವಳಿಯ ಜತೆಜತೆಗೆ ಬೆಳೆಯುವ ಅವಕಾಶ ಈ ಭಾಗದ ಬರಹಗಾರರಿಗೆ ನೇರವಾಗಿ ದಕ್ಕಿತು. ಈ ಹೊತ್ತಿಗಾಗಲೇ ಈ ಪ್ರದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಕಾಲು ಶತಮಾನ ದಾಟಿತ್ತು. ಸ್ವಾತಂತ್ರ್ಯ ಸಿಗುವ ಸಮಯದಲ್ಲಿ ಜನ್ಮ ಪಡೆದವರಿಗೆ, ಅಕ್ಷರ ಕಲಿಯಲು

ಅವಕಾಶ ಇರುವವರಿಗೆ ಒಂದರ್ಥದಲ್ಲಿ ಆಧುನಿಕ ಶಿಕ್ಷಣ ಲಭ್ಯವಾಯಿತು. ಸ್ವಾತಂತ್ರ್ಯನಂತರ ದೇಶದ ಬೆಳವಣಿಗೆಯ ಎಲ್ಲ ವಿದ್ಯಮಾನಗಳ ಅರಿವು ದೊರೆಯಲು ಸಾಧ್ಯವಿತ್ತು. ರಾಜಕೀಯವಾಗಿ, ವೈಜ್ಞಾನಿಕವಾಗಿ ದೇಶದಲ್ಲಿ ಉಂಟಾಗುವ ಬದಲಾವಣೆಗಳನ್ನು ಗ್ರಹಿಸಲು ಅವಕಾಶಗಳು ಸಿಕ್ಕವು. ಎಲ್ಲ ಬಗೆಯ ಸ್ಥಿತ್ಯಂತರಗಳ ಜತೆ ಇರಲು ಇವರಿಗೆ ಸಾಧ್ಯವಾಗಿದೆ. ಇದರಿಂದಾಗಿ ಈ ಭಾಗದ ಬರಹಗಾರರಿಗೆ ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಹುಟ್ಟಿಗೆ ಕಾರಣವಾಗಿರುವ (ಸಾಂಸ್ಕೃತಿಕ ಒತ್ತಡಗಳು) ಎಲ್ಲ ಸಾಧ್ಯತೆಗಳ ಜತೆಗೆ ಸಾಗಿ ಬಂದಿದ್ದಾರೆ. ಈ ಅವಕಾಶವು ಈ ಭಾಗದ ಮೂರನೆ ತಲೆಮಾರಿನ ಬರಹಗಾರರಿಗೆ ಸಿಕ್ಕಿರುವುದರಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಬರಹಗಾರರು ಈ ಅವಧಿಯಲ್ಲಿ ಬೆಳಕಿಗೆ ಬಂದು ಅಭಿವ್ಯಕ್ತಿಸಲು ಸಾಧ್ಯವಾಗಿದೆ.

ಬಂಡಾಯ-ದಲಿತ ಸಾಹಿತ್ಯ ಚಳುವಳಿ ರೂಪಗೊಳ್ಳುವುದಕ್ಕೆ, ಅದರ ಹಿಂದಿನ ಒತ್ತಡಗಳ ಬಗ್ಗೆ ಕನ್ನಡ ಸಾಹಿತ್ಯದಲ್ಲಿ ಈಗಾಗಲೇ ಬಹಳಷ್ಟು ಚರ್ಚೆಯಾಗಿದೆ. ಈ ಸಾಹಿತ್ಯ ಚಳುವಳಿಯ ಸಾಧನೆ ಸಿದ್ಧಿಗಳನ್ನು ಕುರಿತು ಉತ್ಸಾಹದಿಂದ ಬೆಲೆ ಕಟ್ಟುವ ಚರ್ಚೆಯ ಜೊತೆಗೆ ಅದರ ಕುಗ್ಗಿದ ದನಿಯ ಬಗ್ಗೆ, ಅದಕ್ಕಿರುವ ಸಾಧಕ ಬಾಧಕಗಳ ಚರ್ಚೆಯೂ ನಡೆದು, ಈಗ ಒಂದು ರೀತಿಯ ಸ್ಥಗಿತತೆ ಕಾಣಿಸಿಕೊಂಡಿದೆ.

ರಾಜಕೀಯವಾಗಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜರುಗಿದ ಘಟನೆಗಳು ಸಾಮಾಜಿಕ-ಸಾಂಸ್ಕೃತಿಕ ವಲಯಗಳಲ್ಲಿ ಆದ ಸ್ಥಿತ್ಯಂತರಗಳು ಹೊಸ ಸಮಾಜದ ನಿರ್ಮಾಣಕ್ಕೆ ದಾರಿಯಾದವು. ರಾಜಾರಾಂ ಮೋಹನರಾಯ್, ದಯಾನಂದ ಸರಸ್ವತಿ, ವಿವೇಕಾನಂದ, ಈಶ್ವರಚಂದ್ರ ವಿದ್ಯಾಸಾಗರ, ರವೀಂದ್ರನಾಥ ಠಾಕೂರ್, ಬಂಕಿಮಚಂದ್ರ ಮುಂತಾದ ಬಂಗಾಳದ ವಿಚಾರವಂತರು ತಮ್ಮ ವೈಚಾರಿಕತೆಯಿಂದ ಸಾಮಾಜಿಕ ರಂಗದಲ್ಲಿ ತಂದ ಬದಲಾವಣೆಗಳು ಮುಖ್ಯವಾದವು. ರಾಜಾರಾಂ ಮೋಹನರಾಯರು ಅಂಧಶ್ರದ್ಧೆಯಲ್ಲಿದ್ದ ಭಾರತೀಯ ಸಂಸ್ಕೃತಿಯನ್ನು ಪರಿವರ್ತನೆಗೊಳ್ಳಲು ಅನೇಕ ರೀತಿಯಲ್ಲಿ ಶ್ರಮಿಸಿದರು. 'ಸತಿಪದ್ಧತಿ'ಯಂಥ ಕ್ರೂರ ನಿಯಮವನ್ನು ರದ್ದುಗೊಳಿಸಲು ಬ್ರಿಟಿಷರ ಅಧಿಕಾರವನ್ನು ಕಾನೂನು ಬದ್ಧವಾಗಿ ಬಳಸಿಕೊಂಡು ಪ್ರತಿಬಂಧಿಸಲು ಪ್ರಯತ್ನಿಸಿದರು. ಸ್ತ್ರೀಯರಿಗೆ ಅನೇಕ ವಿಷಯಗಳಲ್ಲಿ ಹೆಚ್ಚಿನ ಸ್ಥಾನಮಾನವನ್ನು ಕಲ್ಪಿಸಲು ಹೆಣಗಿದರು. ವಿವೇಕಾನಂದರು ಹಿಂದೂ ಧರ್ಮದ ಪರವಾಗಿದ್ದರೂ ಅದರಲ್ಲಿಯೂ ಅನೇಕ ಅಮಾನವೀಯ ವಿಷಯಗಳನ್ನು ಖಂಡಿಸಿದರು. ದೀನದಲಿತರ ಪರವಾಗಿ ನಿಂತರು. ಇಂಥ ಸುಧಾರಣೆಗಳಲ್ಲಿ ಮಾನವೀಯತೆ, ಉದಾರವಾದಿ ನಿಲುವು ಕಂಡರೂ ಇದು ಮುಂದಿನವರಿಗೆ ಇನ್ನಷ್ಟು ಒಳ ಹೊಕ್ಕು ಸುಧಾರಿಸಲು ದಾರಿಯಾಯಿತು. ಮಾರ್ಕ್ಸ್‌ವಾದವು ತನ್ನ ಪ್ರಭಾವದಿಂದ ಭಾರತೀಯ ಸಮಾಜದಲ್ಲಿ ಹೊಸ ವಿಚಾರವೊಂದನ್ನು ಹುಟ್ಟು ಹಾಕಿತು. ಆರ್ಥಿಕ ಸಮಾನತೆಯನ್ನು ತರಲು ಪ್ರೇರಣೆ ನೀಡಿತು. ಲೋಹಿಯಾ ಅವರು ರಾಜಕೀಯ ಚಳುವಳಿಯ ಮೇಲೆ ಪರಿಣಾಮ ಬೀರಿದರು. ಭಾರತೀಯ ಬ್ರಾಹ್ಮಣೇತರ ಬರಹಗಾರರಿಗೆ ಮುಖ್ಯ ಪ್ರೇರಣೆಯಾದರು. ಅವರು ಇಂಗ್ಲಿಷಿನ ಬಗೆಗೆ, ಜಾತಿಪದ್ಧತಿ ಬಗೆಗೆ, ಅಂತರರಾಷ್ಟ್ರೀಯ ತಾರತಮ್ಯಗಳ ಬಗೆಗೆ, ಭಾರತೀಯ ಅನೇಕ ಭಾಷೆಗಳ ಬಗೆಗೆ ಹೇಳಿದ ಮಾತುಗಳು ಕನ್ನಡ ಬರಹಗಾರರ ಮೇಲೆ ಸಾಕಷ್ಟು ಪ್ರಭಾವ ಬೀರಿದವು. ಗಾಂಧೀಜಿಯವರ ಅಹಿಂಸಾ ಹೋರಾಟ, ದಲಿತೋದ್ಧಾರ, ದೇಶವಸ್ತುಗಳ ಬಳಕೆ ಮತ್ತು ಅವರ ಸರಳ ವ್ಯಕ್ತಿತ್ವವು ಭಾರತೀಯರ ಮೇಲೆ ತುಂಬ ಪರಿಣಾಮವನ್ನುಂಟು ಮಾಡಿದವು. ದಲಿತರ ಸ್ವಾಭಿಮಾನದ ಸಂಕೇತವಾದ ಅಂಬೇಡ್ಕರ ಅವರು ಭಾರತೀಯ ದಲಿತರ ಮೇಲೆ ಗಾಢವಾಗಿ ಪ್ರಭಾವ ಮಾಡಿದರು. ಪ್ರಜ್ಞಾವಂತ ದಲಿತೇತರರಿಗೂ ಅವರ ವಿಚಾರಗಳು ಚಿಂತನೆಗೆ ಗುರಿ ಮಾಡಿದವು. ದಲಿತ ಬರಹಗಾರರಿಗಂತೂ ಅವರು ಅಚ್ಚಳಿಯದ ಪ್ರೇರಕರಾಗಿದ್ದಾರೆ. ಹಿಂದೂ ಧರ್ಮದ ಅನಿಷ್ಟಗಳನ್ನು ಅಮಾನವೀಯತೆಯನ್ನು ಸ್ವತಃ ಅನುಭವಿಸಿದ್ದ ಅವರು, ಅದೆಲ್ಲವನ್ನು ಉಗ್ರವಾಗಿ ತಿರಸ್ಕರಿಸುತ್ತ ಭಾರತದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಚಳುವಳಿಯನ್ನೇ ನಡೆಸಿ ಬ್ರಾಹ್ಮಣ್ಯದ ಸಾಂಸ್ಕೃತಿಕ

ಪ್ರಭುತ್ವವನ್ನು ಅಲುಗಾಡಿಸಲು ಕಾರಣರಾದರು. ಚರಿತ್ರೆಯ ಉದ್ದಕ್ಕು ಬ್ರಾಹ್ಮಣರು ಅಸಮಾನತೆಯನ್ನು ಕಾಯ್ದುಕೊಂಡು ದಲಿತರನ್ನು ನಿಷ್ಕ್ರಿಯರನ್ನಾಗಿ ಮಾಡಿದ್ದರು. ಅವರಿಗೆ ಯಾವ ಬಗೆಯ ಅಧಿಕಾರ ದೊರೆಯದಂತೆ ಎಚ್ಚರವಹಿಸಿದ್ದರು. ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದ್ದರು. ಇಂಥ ವಿಚಾರಗಳನ್ನು ಬಯಲು ಮಾಡಿ ಅಂಬೇಡ್ಕರ್ ಸಮಾಜದಲ್ಲಿ ಹೊಸಯುಗ ಆರಂಭವಾಗಲು ಚಳುವಳಿಯನ್ನೇ ಹೂಡಿದರು.

ಇಂಥ ಅನೇಕರ ವಿಚಾರಗಳು, ಚಳುವಳಿಗಳು, ರಾಜಕೀಯ, ಸಾಮಾಜಿಕ ಗತಿಯನ್ನು ಬದಲಿಸಿದವು. ಇದರಿಂದಾಗಿ ಈ ಶತಮಾನದಲ್ಲಿ ಶೂದ್ರರಿಗೂ ಶಿಕ್ಷಣ ಕಲಿಯುವ ಅವಕಾಶ ದೊರೆತು ಅನೇಕ ಚಳುವಳಿಗಳು ತೀವ್ರಗೊಳ್ಳಲು ಕಾರಣವಾದವು. ಹಿಂದೂಧರ್ಮದ ವ್ಯವಸ್ಥೆಯಲ್ಲಿ ಶೂದ್ರರಿಗೆ ಕನಿಷ್ಠ ಸ್ಥಾನಮಾನಗಳೂ ಇರಲಿಲ್ಲ. ಬದಲಿಗೆ ದಬ್ಬಾಳಿಕೆ, ಶೋಷಣೆಗೆ ಒಳಗಾಗುತ್ತಲೇ ಇದುದ್ದನ್ನು ಅರಿತು ಅನೇಕ ಬಗೆಯ ಚಳುವಳಿಗೆ, ಸಂಘಟನೆಗಳಿಗೆ ಶೂದ್ರರು ಕಲಿತ ಶಿಕ್ಷಣವೇ ಕಾರಣವಾಯಿತು. ಸಾಮಾಜಿಕ ಪರಿವರ್ತನೆಯ ಸಂದರ್ಭದೊಡನೆ ಸಾಹಿತ್ಯವು ತನ್ನನ್ನು ಗುರುತಿಸಿಕೊಳ್ಳುತ್ತ ಹೋಗುವಂತಾಯಿತು. ಅಷ್ಟೇ ಅಲ್ಲ ಬದಲಾದ ಕಾಲದ ವಿಶಿಷ್ಟ ವಿಚಾರಗಳನ್ನು ಸಾಹಿತ್ಯವು ಮರುಸೃಷ್ಟಿಸುತ್ತ, ಮರುಮೌಲ್ಯಮಾಪನಗೊಳಿಸುತ್ತ ನಡೆಯುವಂತಾಯಿತು.

ಈ ಶತಮಾನದ ಕೊನೆಯ ಕಾಲು ಶತಮಾನದಲ್ಲಿ ನಡೆದ ಅನೇಕ ಘಟನೆಗಳು. ಹೊಸ ಸಾಹಿತ್ಯ ಸೃಷ್ಟಿಗೆ ಕಾರಣವಾದವು. ಹಾವನೂರು ವರದಿ, ಬಸಲಿಂಗಪ್ಪನವರ ಬೂಸಾ ಪ್ರಕರಣ, ದೇವರಾಜ ಅರಸರ ಕ್ರಾಂತಿ ಮಲಹೊರುವದನ್ನು ನಿಲ್ಲಿಸಿದ್ದು, ಭೂ ಸುಧಾರಣೆ ಕಾಯ್ದೆ ಜಾರಿ ಮುಂತಾದವು ಸಮಾಜದಲ್ಲಿ ಕೋಲಾಹಲವನ್ನುಂಟು ಮಾಡಿದವು. 'ಜಾತಿವಿನಾಶ ಸಮ್ಮೇಳನ'ವು ಹಲವು ಲೇಖಕರನ್ನು ಒಂದುಗೂಡಿಸಿತು ಮತ್ತು ಹಲವರಿಗೆ ಬರೆಯಲು ಪ್ರೇರಣೆ ನೀಡಿತು. ಇದರ ಹಿಂದೆ ಲೋಹಿಯಾ ಅವರ ಚಿಂತನೆಯಿತ್ತು ಇದು 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ಕ್ಕೆ ದಾರಿ ಮಾಡಿತು. ಇವು ದಲಿತರನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಳ್ಳಲಾರದ್ದಕ್ಕೆ ದಲಿತರ ಪ್ರಗತಿಗೆ ಅನೇಕ ದಲಿತ ನಾಯಕರು ಪ್ರತ್ಯೇಕ ಆಂದೋಲನಕ್ಕೆ ನಿಂತರು. 'ಸತ್ಯ ಶೋಧಕ'ಎಂಬ ಸಂಘಟನೆ ಹಿಂದುಳಿದವರ ಪ್ರಗತಿಗೆ ಅನೇಕ ಹೋರಾಟಗಳನ್ನು ರೂಪಿಸಿತು. 'ದಲಿತ ಸಂಘರ್ಷಸ ಸಮಿತಿ', 'ದಲಿತ ವಿದ್ಯಾರ್ಥಿ ಒಕ್ಕೂಟ', 'ಸಮುದಾಯ', 'ದಲಿತ ಮಹಿಳಾ ಒಕ್ಕೂಟ', 'ದಲಿತ ಕಲಾ ಮಂಡಳಿ', 'ದಲಿತ ಬರಹಗಾರರ ಯುವ ಸಂಘಟನೆ' ಮುಂತಾದ ದಲಿತ ಸಂಘಟನೆಗಳು ಶೋಷಣೆ ರಹಿತ ಸಮಾಜದ ನಿರ್ಮಾಣಕ್ಕೆ ಹೋರಾಡಲು ಪ್ರಯತ್ನಿಸಿದವು.

ಸಾಮಾಜಿಕವಾಗಿ ನಡೆಯುವ ಇಂಥ ಚಳುವಳಿಗಳನ್ನು ಬೆಂಬಲಿಸಲು 'ಸಂಕ್ರಮಣ', 'ಅನ್ವೇಷಣೆ', 'ಮುಂಗಾರು', 'ಬಂಡಾಯ ಸಾಹಿತ್ಯ', 'ಪಂಚಮ', 'ಹೊಸದಿಕ್ಕು', 'ಕೆಂಬಾವುಟ', 'ಐಕ್ಯರಂಗ' ಮುಂತಾದ ಪತ್ರಿಕೆಗಳು ಹುಟ್ಟಿಕೊಂಡವು. ಇವು ನೇರವಾಗಿ ಪ್ರಗತಿಪರ ಚಳುವಳಿಗಳಿಗೆ ಬೆಂಬಲವಿತ್ತು ಮುನ್ನಡೆಸಿದವು. ಶೋಷಣೆ ಎಂಬುದು ಈ ದೇಶದಲ್ಲಿ ಸಾವಿರಾರು ವರ್ಷಗಳಿಂದಲೂ ಇತ್ತು. ಬುದ್ಧ, ೧೨ನೇ ಶತಮಾನದ ಶರಣರು ಈ ಶೋಷಣೆಯ ವಿರುದ್ಧ ದನಿಯೆತ್ತಿ ಹೋರಾಡಿದ್ದರು. ಆ ಶತಮಾನದ ನಂತರ ಇಪ್ಪತ್ತನೆಯ ಶತಮಾನದಲ್ಲಿ ಪುನಃ ಸಾಹಿತ್ಯದಲ್ಲಿ ಒಂದು ಶಕ್ತಿಯಾಗಿ, ಸತ್ವವಾಗಿ ಪ್ರತಿಭಟನೆ ಕಾಣಿಸಿತು.

ಇಂಥ ವಿದ್ಯಮಾನಗಳ ಜತೆಜತೆಗೆ ಬಂಡಾಯ-ದಲಿತ ಸಾಹಿತ್ಯ ಚಳುವಳಿಯೂ ಬೆಳೆದು ಬಂದಿದೆ. ಇದರ ಮುಖ್ಯ ಉದ್ದೇಶಗಳು ಏನು? ಮತ್ತು ಇನ್ನೊಂದು ಸಂಘಟನೆಯಾದ್ದರಿಂದ ಇದರ ಚಟುವಟಿಕೆಗಳ ಸ್ವರೂಪ ಯಾವ ಬಗೆಯದ್ದು? ಇದರ ತಾತ್ವಿಕ ನೆಲೆಯನ್ನು ತಿಳಿಸುವ ಪ್ರನಾಳಿಕೆಯಲ್ಲಿ ಹೀಗಿದೆ:'.....ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯ ಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು. ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧವುಳ್ಳವು ಎಂಬ ನಿಲುವಿನಿಂದ ಹೊರಟದ್ದು.

ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆ, ಲಿಂಗಭೇದ ಮತ್ತು ವರ್ಗಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದು. ಎಲ್ಲ ಜನಪರ ನಿಲವುಗಳಿಗೆ ನಮ್ಮ ಬೆಂಬಲ; ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ; ಇಂಥ ಒಲವಿನ ಸಾಹಿತ್ಯ ಸೃಷ್ಟಿ ನಮ್ಮ ಹೋರಾಟದ ಮುಖ್ಯ ದಾಖಲೆ'[೨] ಈ ವಿವರಣೆಗೆ ಅನುಗುಣವಾಗಿ ಬಂಡಾಯ ಸಾಹಿತ್ಯ ಚಳುವಳಿ ಮತ್ತು ಸಂಘಟನೆ ನಡೆಯಲು ಯತ್ನಿಸಿತು. ಸಾಮಾನ್ಯವಾಗಿ ಇದರಲ್ಲಿ ಪಾಲ್ಗೊಂಡ ಬರಹಗಾರರೆಲ್ಲ ಇಂಥ ಆಶಯಗಳನ್ನು ಪ್ರತಿನಿಧಿಸುವ ಕಾವ್ಯ ರಚಿಸಿದ್ದಾರೆ. ಬಂಡಾಯ-ದಲಿತ ಸಾಹಿತ್ಯವು ಸಮೃದ್ಧವಾಗಿ ಆದರೆಲ್ಲ ಕಾವಿನೊಂದಿಗೆ 'ಹೈದರಾಬಾದ್ ಕರ್ನಾಟಕ' ಪ್ರದೇಶದಿಂದಲೇ ಸೃಷ್ಟಿಯಾಗಬೇಕಾಗಿತ್ತು. ಬಂಡಾಯ ಸಾಹಿತ್ಯದ ಪ್ರಮುಖ ಸಾಮಾಜಿಕ ರಾಜಕೀಯ ಕಾಳಜಿಯಾದ ಶೋಷಕ-ಶೋಷಿತ ವರ್ಗ ಈ ಪ್ರದೇಶದಲ್ಲಿ ಎದ್ದು ಕಾಣುತ್ತದೆ. ಭೂಮಾಲಿಕರ ದಬ್ಬಾಳಿಕೆ, ಪುರೋಹಿತಶಾಹಿಗಳ ವಂಚನೆ, ರಾಜಕಾರಣಿಗಳ ನಿರ್ಲಕ್ಷ್ಯದಿಂದಾಗಿ ಜನಸಾಮಾನ್ಯರ ಬದುಕು ಕನಿಷ್ಠವಾಗಿ ಹೋಗಿರುವ ಈ ಪ್ರದೇಶದಲ್ಲಿ ಊಳಿಗಮಾನ್ಯ ಪದ್ಧತಿ ಇನ್ನು ಜೀವಂತವಾಗಿದೆ. ಕೆಳವರ್ಗದ ಸ್ತ್ರೀ ಶೋಷಣೆಯೂ ಮುಂದುವರಿದಿದೆ. ದೇವರ ಹೆಸರಿನಲ್ಲಿ ಮಹಿಳೆಯರು ಜೋಗಿಣಿಯರಾಗಿ, ಬಸವಿಯರಾಗಿ ಬದುಕಿನ ನೆಲೆಯನ್ನು ಕಾಣದೆ ಉಳಿದಿದ್ದಾರೆ. ಯಾವುದೇ ರೀತಿಯ ಕೈಗಾರಿಕೆಗಳು, ಉದ್ದಿಮೆಗಳು ಈ ಪ್ರದೇಶದಲ್ಲಿ ಬೆಳೆದು ಉದ್ಯೋಗಗಳನ್ನು ಸೃಷ್ಟಿಸಲಿಲ್ಲ. ವಿದ್ಯಾಭ್ಯಾಸಕ್ಕೆ ಕನಿಷ್ಠ ಸೌಲಭ್ಯಗಳು ಬಹುಬೇಗ ಒದಗಲಿಲ್ಲ. ಚರಿತ್ರೆಯ ಉದ್ದಕ್ಕು ಪರಕೀಯರ ದಾಳಿಗೆ ಈ ಪ್ರದೇಶ ಮೇಲಿಂದ ಮೇಲೆ ಸಿಕ್ಕು ಜನ ಸಮುದಾಯಗಳು ಅತಂತ್ರ ಸ್ಥಿತಿಯನ್ನು ಅನುಭವಿಸುತ್ತಲೇ ಬಂದಿವೆ. ಸ್ವಾತಂತ್ರ್ಯ ಸಿಕ್ಕು ಐವತ್ತು ವರ್ಷಗಳ ತರುವಾಯದ ಈ ಹೊತ್ತಿನಲ್ಲೂ ಈ ಪ್ರದೇಶದಲ್ಲಿ ಕೆಳವರ್ಗದವರ ಬದುಕು ನೆಮ್ಮದಿಯಾಗಿಲ್ಲ. ಇಂಥ ಸಾಮಾಜಿಕ ಬದುಕಿನ ವಾಸ್ತವವನ್ನು ಈ ಪ್ರದೇಶದ ಕಥೆ- ಕಾದಂಬರಿಗಳು ಚಿತ್ರಿಸಿವೆ. ಕಾವ್ಯವೂ ತನ್ನದೇ ಇತಿಮಿತಿಯಲ್ಲಿ ಗ್ರಹಿಸಲು ಪ್ರಯತ್ನಿಸಿದೆ. ಕಥೆ-ಕಾದಂಬರಿಗಳಲ್ಲಿ ವಾಸ್ತವದ ವಿವರಗಳನ್ನು, ಬಿಡಿಬಿಡಿ ಚಿತ್ರಗಳನ್ನು ಕಟ್ಟಿಕೊಡಲು ಸಾಧ್ಯವಾದಂತೆ ಕಾವ್ಯದಲ್ಲಿ ಅದು ಸಾಧ್ಯವಾಗುವುದಿಲ್ಲ. ಆದರೆ ಒಟ್ಟು ಸನ್ನಿವೇಶವನ್ನು ಗ್ರಹಿಸಿ ಕಾವ್ಯ ಮಾಧ್ಯಮಕ್ಕಿರುವ ಮಿತಿ ಮತ್ತು ಸಾಧ್ಯತೆಯಲ್ಲಿ ವಾಸ್ತವವನ್ನು ಹಿಡಿದಿಡುತ್ತದೆ.

ಹೈದರಾಬಾದ್ ಕರ್ನಾಟಕದ ಈ ಹೊತ್ತಿನ ಕಾವ್ಯವೆಂದರೆ ಅದು ಈ ಹೊತ್ತಿನ ಕನ್ನಡ ಕಾವ್ಯದ ಭಾಗವಾಗಿಯೇ ಇದೆ. ಇದರಿಂದ ಈ ಪ್ರದೇಶದ ಅನನ್ಯತೆಯನ್ನು ಅಥವಾ ಸಾಮಾಜಿಕ ವಾಸ್ತವವನ್ನು ಕಥೆ-ಕಾದಂಬರಿಗಳಲ್ಲಿ ಗುರುತಿಸಿದಂತೆ ಕಾವ್ಯದಲ್ಲಿ ಗುರುತಿಸುವುದು ಸುಲಭವಾಗಲಾರದು. ಬದುಕು, ಭಾಷೆ, ಸಂಸ್ಕೃತಿಯನ್ನು ಅದರ ವಿವರಗಳಲ್ಲಿ ಕಟ್ಟಿಕೊಡುವುದು ಗದ್ಯಕ್ಕೆ ಇರುವ ಸಾಮರ್ಥ್ಯ ಆಧುನಿಕ ಕಾವ್ಯಕ್ಕಿಲ್ಲ ಎನಿಸುತ್ತದೆ. ಕಾವ್ಯದ ಸಾಮರ್ಥ್ಯ ಬೇರೆ ರೀತಿಯದ್ದು. ಕಾವ್ಯದ ಅನನ್ಯತೆ ಇರುವುದು ಅದು ಕವಿಯ ಶೈಲಿ, ರಚನೆ ಮತ್ತು ಯಾವುದೇ ಸನ್ನಿವೇಶವನ್ನು ಗ್ರಹಿಸುವ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ದಲಿತ-ಬಂಡಾಯ ಕಾವ್ಯ ಸಂದರ್ಭದಲ್ಲಿ ಸಿದ್ಧಲಿಂಗಯ್ಯ, ಕೆ.ಬಿ.ಸಿದ್ದಯ್ಯ, ಜಂಬಣ್ಣ ಅಮರಚಿಂತ ಇವರು ಭಿನ್ನವಾಗುವುದು ಅಥವಾ ಅನನ್ಯರಾಗುವುದು ಈ ಕಾರಣದಿಂದಾಗಿಯೇ.

ಎಪ್ಪತ್ತರ ದಶಕದ ಉತ್ತರಾರ್ಧದಿಂದ ಈ ಹೊತ್ತಿನವರೆಗೆ ಈ ಪ್ರದೇಶದಲ್ಲಿ ಸೃಷ್ಟಿಯಾದ ಬಂಡಾಯ-ದಲಿತ ಕಾವ್ಯವನ್ನು ಗಮನಿಸಿದರೆ ಕೆಲವು ಸಮಾನ ಗುಣಲಕ್ಷಣಗಳು ಕಾಣಿಸುತ್ತವೆ. ಇದಕ್ಕೆ ಈ ಸಾಹಿತ್ಯ ಚಳುವಳಿಯ ಧೋರಣೆಯೇ ಕಾರಣವಾಗಿದೆ. ಸಮಾನ ಗುಣಗಳೆಂದರೆ, ಈ ಕಾವ್ಯವು ಸಮಾಜದಲ್ಲಿ ಕಾಣುವ ಎಲ್ಲ ಬಗೆಯ ಶೋಷಣೆಯನ್ನು ವಿರೋಧಿಸುತ್ತದೆ. ಶೋಷಣೆ ಎಂಬುದು ಕೇವಲ ಈ ಕಾಲದ ಗುಣವಲ್ಲ. ಅದು ಚರಿತ್ರೆಯ ಉದ್ದಕ್ಕು ಕಾಣಿಸುತ್ತದೆ. ಅದನ್ನು ಹೆಕ್ಕಿ ಬಿಡಿಸಿ ತೋರಿಸುತ್ತ ಶೋಷಿತ ವ್ಯವಸ್ಥೆಯ ಇತಿಹಾಸವನ್ನು ಬಯಲಿಗೆ ಹಾಕುತ್ತದೆ. ಹಿಂದೂಧರ್ಮ, ಅದನ್ನು ಪ್ರತಿಪಾದಿಸುವ ಧರ್ಮಗ್ರಂಥಗಳನ್ನು

ವಿರೋಧಿಸುತ್ತದೆ. ಹಿಂದೂಧರ್ಮದ ವರ್ಣವ್ಯವಸ್ಥೆ, ಸ್ತ್ರೀಯರಿಗೆ ಸ್ವಾತಂತ್ರ್ಯದ ನಿರಾಕರಣೆ, ದಲಿತರಿಗೆ ಯಾವ ಬಗೆಯ ಕಿಂಚತ್ ಅಧಿಕಾರವನ್ನು ಕೊಡದಿರುವುದು, ಧರ್ಮ-ದೇವರ ಹೆಸರಿನಲ್ಲಿ ಜನರನ್ನು ವಂಚಿಸುವುದು ಮುಂತಾದ ನಿಯಮಗಳನ್ನು ಹೊಂದಿರುವುದನ್ನು ಖಂಡಿಸುತ್ತದೆ. ಪುರಾಣ, ಮಹಾಭಾರತ, ರಾಮಾಯಣ ಮತ್ತು ಇತಿಹಾಸ ಕಾಲದಲ್ಲಿ ಪುರೋಹಿತಶಾಹಿ-ರಾಜಶಾಹಿಗಳ ಕುತಂತ್ರಕ್ಕೆ ಬಲಿಯಾದ ವ್ಯಕ್ತಿಗಳನ್ನು ಗೌರವಿಸುತ್ತದೆ (ಏಕಲವ್ಯ, ಶಂಬೂಕ, ಕರ್ಣ, ಅಕ್ಕ, ಅಹಲ್ಯ, ಸೀತೆ, ರೇಣುಕ). ಚರಿತ್ರೆಯಲ್ಲಿ 'ಜೀವಪರ' ನಿಲುವುಗಳನ್ನು ಪ್ರತಿಪಾದಿಸುತ್ತ, ದಮನಕ್ಕೆ ಒಳಗಾದವರನ್ನು ಸಮಾಜದಲ್ಲಿ ಆತ್ಮಗೌರವದಿಂದ ಬಾಳುವಂತೆ ಮಾಡಲು ಶ್ರಮಿಸಿದವರನ್ನು (ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್) ಗೌರವಿಸುತ್ತದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ 'ಜನಪರ'ಕಾರ್ಯಗಳನ್ನು ಮಾಡಿದ ರಾಜಕಾರಣಿಯಿರಲಿ, ಸಾಹಿತಿ-ಕಲಾವಿದರಿರಲಿ, ಚಿಂತಕರಿರಲಿ, ಸಂತರಿರಲಿ (ಜೆ.ಪಿ., ಲೋಹಿಯಾ, ಅರಸ್, ಪೆರಿಯಾರ್, ವಿವೇಕಾನಂದ) ಅವರ ಚಿಂತನೆಗಳನ್ನು ಎತ್ತಿ ಹಿಡಿಯುತ್ತದೆ. ಮೂಢನಂಬಿಕೆ, ಸಂಪ್ರದಾಯಗಳ ಆಚರಣೆ ಮುಂತಾದ ಜೀವವಿರೋಧಿ ಧಾರ್ಮಿಕಾಚರಣೆಗಳನ್ನು ಖಂಡಿಸುತ್ತದೆ. ಪುರುಷ ಪ್ರಧಾನತೆಯನ್ನು ವಿರೋಧಿಸಿ, ಸ್ತ್ರೀ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತದೆ. ಸಮಾಜದಲ್ಲಿ ಸಮಾನತೆಯನ್ನು ಬಯಸುತ್ತದೆ. ದೇಶದ ಸಂಪತ್ತನ್ನು ದೋಚುವ-ಹಾಳುಮಾಡುವ ಬಹುರಾಷ್ಟ್ರೀಯ ಕಂಪನಿಗಳನ್ನು, ಇಂಥದ್ದಕ್ಕೆ ಅವಕಾಶ ಮಾಡಿಕೊಡುವ ರಾಜಕೀಯ ವ್ಯವಸ್ಥೆಯನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಶೋಷಣೆ, ದಬ್ಬಾಳಿಕೆ ಎಲ್ಲಿಯೇ ನಡೆದಿರಲಿ, ಯಾರ ಮೇಲೆಯೇ ನಡೆದಿರಲಿ ಅದನ್ನು ಜವಾಬ್ದಾರಿಯಿಂದ ವಿರೋಧಿಸುತ್ತದೆ (ದಕ್ಷಿಣ ಆಫ್ರಿಕಾ, ಕಪ್ಪುಜನ, ನೆಲ್ಸನ್ ಮಂಡೇಲಾ, ಮೊಲಾಯಿಸ್, ರೂಪಾ ಕನ್ವರ್). ಸಮಾಜದಲ್ಲಿ ಸಂಭವಿಸುವ ಕ್ರೂರ ಕೃತ್ಯಗಳನ್ನು ಖಂಡಿಸುತ್ತದೆ (ಕುದುರೆ ಮೋತಿ ಪ್ರಕರಣ, ದಲಿತರನ್ನು ಅವಮಾನಿಸುವಂಥ ಪ್ರಕರಣ) ಸಮಾಜದಲ್ಲಿ ನಿರ್ಭೀತಿಯನ್ನು, ಜನಸಾಮಾನ್ಯರಲ್ಲಿ ಧೈರ್ಯ-ಪ್ರೀತಿಯನ್ನು ತುಂಬುವುದು ಜತೆಗೆ ಶೋಷಕರನ್ನು ಮನುಷ್ಯರನ್ನಾಗಿ ಮಾಡಲು ಪ್ರಯತ್ನಿಸುತ್ತದೆ. ಅನೇಕ ಕವಿಗಳ ಕಾವ್ಯದಲ್ಲಿ ಸಾಮಾನ್ಯವಾಗಿ ಕಾಣುವ ಧೋರಣೆಗಳಿವು.

ಅಲ್ಲಿ ಪಾಂಡವರೇ ಇರುವುದಿಲ್ಲ
ಆ ಕಡೆ ಈ ಕಡೆ ಎಲ್ಲ ಕೌರವರೇ ನೆರೆಯುತ್ತಾರೆ
ಅವರವರಲ್ಲೇ ಭೀಕರ ಕದನ ನಡೆಯುತ್ತದೆ
ಗದೆಯೆತ್ತಿ ದುರ್ಯೋಧನ ದುಶ್ಯಾಸನನಿಗೆ ಇಕ್ಕುತ್ತಾನೆ
ದುಶ್ಯಾಸನ ದುರ್ಯೋಧನನಿಗೆ ಇಕ್ಕುತ್ತಾನೆ
ಹೀಗೆ ಎಲ್ಲ ಬಂಧುಗಳು ಪರಸ್ಪರ ಹೊಡೆದಾಡಿ
ಸರ್ವ ನಾಶಗೊಳಿಸುತ್ತ ಸರ್ವರೂ ನಾಶವಾಗಿ ಹೋಗುತ್ತಾರೆ

(ಕಾಲಜ್ಞಾನದ ಕವಿತೆ: ಶಿವಶರಣ ಜಾವಳಿ)

ಈ ದೇಶದ ಮುಂದಿನ ದಿನಗಳನ್ನು ಕುರಿತು ಈ ಕವಿತೆಯಲ್ಲಿ 'ಕಾಲಜ್ಞಾನ' ನುಡಿಯಲಾಗಿದೆ. ಆದರೆ ಕಾಲಜ್ಞಾನದ ಮಾತು ನಿಜವಾಗಿ ಹೋಗಿ ಬಿಟ್ಟಿದೆ. ಇಂಥ ಪರಿಸ್ಥಿತಿ ಈ ದೇಶದಲ್ಲಿ ಜ್ವಲಂತವಾಗಿ ನಡೆಯುತ್ತಿದೆ. ಇಲ್ಲಿ ನಡೆಯುವ ಕೊಲೆ-ಸುಲಿಗೆ ದರೋಡೆಗಳು, ಸರಕಾರದ ನೀತಿ-ನಿಯಮಗಳು, ರಾಜಕಾರಣಿಗಳ ಸ್ವೇಚ್ಛಾಚಾರ, ಶ್ರೀಮಂತರ ಆಳ್ವಿಕೆ, ಬಹುರಾಷ್ಟ್ರೀಯ ಕಂಪೆನಿಗಳು ಇಲ್ಲಿಯ ಎಲ್ಲ ಬಗೆಯ ಸಂಪತ್ತನ್ನು ದೋಚುವ ನೀತಿ, ಜನಸಾಮಾನ್ಯರ ಬವಣೆಗಳು ಇವೆಲ್ಲ ನೋಡಿದರೆ ಈ ದೇಶದ ಪರಿಸ್ಥಿತಿ ಏನಾಗಿದೆ? ಮನುಷ್ಯನ ಮನಸ್ಥಿತಿ ಎಲ್ಲಿಗೆ ಬಂದಿದೆ? ಎಂಬುದು ಅರಿವಿಗೆ ಬರುತ್ತದೆ. ಒಂದು ಗಳಿಗೆ ಮನುಷ್ಯ ನೈತಿಕವಾಗಿ ಬದುಕಲು ಅಸಾಧ್ಯವಾದಂತ ಸ್ಥಿತಿ ಈ ದೇಶದಲ್ಲಿ ನಿರ್ಮಾಣವಾಗಿದೆ. 'ಏನಾಗಿದೆ ಈ ದೇಶಕ್ಕೆ? ಎತ್ತ ಸಾಗುತ್ತಿದೆ ಈ ದೇಶ' ಎಂಬ

ಹತಾಶೆಯ ಉದ್ಗಾರಗಳು ಪ್ರಜ್ಞಾವಂತರಿಂದ ಕೇಳಿ ಬರುತ್ತಿವೆ. ಮನುಷ್ಯ-ಮನುಷ್ಯನ ನಡುವೆ ಪ್ರೀತಿ-ವಿಶ್ವಾಸವೇ ಇಲ್ಲ ಎಂಬುವಷ್ಟು ಸ್ವಾರ್ಥ, ಹಿತಸಾಧನೆಗಾಗಿ ಒಬ್ಬರನ್ನು ಒಬ್ಬರು ಬಲಿ ತೆಗೆದುಕೊಳ್ಳುತ್ತಿದ್ದಾರೆ. ಇಂಥ ಭಾರತದ ಪರಿಸ್ಥಿತಿಯನ್ನು ವಿಷಾದದಿಂದ, ವ್ಯಂಗ್ಯದಿಂದ, ಬೆರಗಿನಿಂದ ವ್ಯಕ್ತಪಡಿಸಿದ ಹತ್ತಾರು ಕವನಗಳಿವೆ. ದೇಶವನ್ನು ಆಳಲು ಹುಟ್ಟಿಕೊಳ್ಳುವ ರಾಜಕೀಯ ಪಕ್ಷಗಳು ಮತ್ತು ಅದರ ಮುಖಂಡರು ಅಧಿಕಾರದ ಸೂತ್ರಗಳನ್ನು ಹಿಡಿದು ದೇಶವನ್ನು ಉದ್ಧಾರ ಮಾಡುವ ಪ್ರಯತ್ನಗಳೆಲ್ಲ ವಿಫಲವಾಗಿ ಹೋಗುತ್ತಿವೆ. ರಾಜಕೀಯ ಇಚ್ಛಾಶಕ್ತಿಯ ಕೊರತೆ, ದೇಶಸೇವೆಯ ಮನೋಭಾವವಿಲ್ಲದ ಕಾರಣ ಜನಸಾಮಾನ್ಯರ ಬಗ್ಗೆ ಕನಿಷ್ಠ ಕಾಳಜಿಗಳನ್ನು ತೋರಿಸದೆ ಜನರ ಬದುಕನ್ನು ಅಧೋಗತಿಗೆ ತಂದಿದ್ದಾರೆ. ಇದುವರೆಗೆ ಈ ದೇಶದ ಅಧಿಕಾರವನ್ನು ಹಿಡಿದ ಯಾವ ರಾಜಕೀಯ ಪಕ್ಷವೂ ದೇಶವನ್ನು ಸುವ್ಯವಸ್ಥಿತವಾಗಿ ಮುನ್ನಡೆಸಲು ಸಾಧ್ಯವಾಗಿಲ್ಲ. 'ಜನಪರ ಸರಕಾರ'ವೆಂದು ಅಧಿಕಾರ ಹಿಡಿಯುವ ಮುನ್ನ ಜನಬೆಂಬಲ ಗಳಿಸಿ, ಅಧಿಕಾರ ಹಿಡಿದ ನಂತರ ದೇಶದ ಕಾಳಜಿಯ ಬಗ್ಗೆ ನಿರ್ಲಕ್ಷ್ಯವನ್ನು ತೋರಿಸಿ, ತಮ್ಮ ಹಿತಸಾಧನೆಗೆ ನಿಂತ ಸರಕಾರಗಳೂ ಬಂದು ಹೋದವು. ರಾಜಕೀಯ ವ್ಯವಸ್ಥೆ ಎಷ್ಟು ಕೆಟ್ಟು ಹೋಗಿದೆ ಎಂದರೆ, ಯಾವ ಸರಕಾರ ಬಂದರೂ ಜನರಲ್ಲಿ ಆಶಾಭಾವನೆ ಉಳಿದಿಲ್ಲ. ಯಾವ ರಾಜಕೀಯ ಪಕ್ಷಗಳ ಮೇಲೆ ನಂಬಿಕೆ ಇಲ್ಲದಂತ ವಾತಾವರಣವಿದೆ ಎಂಬುದು **'ಈ ದೇಶದ ಕಥೆ'** (ಶಿವಶರಣ ಚಾವಳಿ) ಕವನದಲ್ಲಿ ವ್ಯಕ್ತವಾಗಿದೆ.

ಕುಡಗೋಲು ಕುತ್ತಿಗೆ ಕೊಯ್ಯುತ್ತಿದೆ
ಅಧಿಕಾರದ ಆಸನದ ಮೇಲೆ
ಅಮಲು ಹಿಡಿಯುತ್ತದೆ

ಈ ದೇಶದ ಶ್ರೀಮಂತರು, ಉದ್ದಿಮೆದಾರರು, ಯಾವುದೇ ರಾಜಕೀಯ ವ್ಯವಸ್ಥೆಯನ್ನು ಅದಲುಬದಲು ಮಾಡುವಷ್ಟು ಶಕ್ತರಾಗಿದ್ದಾರೆ. ಹೀಗಾಗಿ ದೇಶವನ್ನು ಆಳುವವರು ಅಂತಿಮವಾಗಿ ಈ ದೇಶದ ಬಂಡವಾಳಗಾರರೇ ಹೊರತು ರಾಜಕೀಯ ಪಕ್ಷಗಳಲ್ಲ ಎಂಬುದು ನಿಜ ಸಂಗತಿಯಾಗಿದೆ.

'ಭೂಮಿಕಂಡ ದುಃಸ್ವಪ್ನ' (ಜಂಬಣ್ಣ ಅಮರಚಿಂತ) ಈ ಕವಿತೆ ಇಂದಿನ ಇಂಡಿಯಾದ ವಾಸ್ತವ ಬದುಕಿಗೆ ಹಿಡಿದ ಕನ್ನಡಿಯಾಗಿದೆ.

ಮೆಟ್ಟಿಲಾಗುತ್ತಿದೆ ಗದ್ದುಗೆಗಳೆರಲು ಮುಗ್ಧರ ಶವಗಳು
ಆಳುವ ಭೋಗಿಗೆ ಅತಿಥಿಗೃಹವಾಗಿ ಭೂಮಿ

ನಂಬಿಕೆ, ರಕ್ಷಣೆ ಎಂಬುದೇ ಈ ದೇಶದಲ್ಲಿ ಮಾಯವಾಗಿದೆ. ಹೂವಿನಲ್ಲೂ ಬಾಂಬು ಎಂಬ ದಿಗ್ಭ್ರಮೆಯನ್ನು ಈ ಕವಿತೆ ವ್ಯಕ್ತಪಡಿಸುತ್ತದೆ. ಗುಟುಕು ನೀರು, ತುತ್ತು ಅನ್ನ, ತುಂಡುಬಟ್ಟೆ ಇಲ್ಲದ ಜನರು ಈ ದೇಶದಲ್ಲಿ ಅಸಂಖ್ಯಾತರಿದ್ದಾರೆ. ವಿಪರ್ಯಾಸವೆಂದರೆ ತಿಂದರೂ ಸವೆಯದಷ್ಟು ಗಳಿಸಿಕೊಂಡ ಜನರಿದ್ದಾರೆ. ಈ ಅಸಮಾನತೆಯೇ ಈ ದೇಶದ ಬಹುದೊಡ್ಡ ದುರಂತವಾಗಿದೆ. 'ನೀರು ಸಿಗದ ಊರಿನೊಳಗೆ ಬೀರು ದಾರು ಹರಿತಾವ' (ಸೂಗಯ್ಯ ಹಿರೇಮಠ) ಎಂಬುದು ವಾಸ್ತವ ಸಂಗತಿ.

ಈ ಪವಿತ್ರ ದೇಶದ ಉದ್ದಗಲಕ್ಕು
ಪಾಪದ ಮಡುವುಗಳು
ಹರಿಯುತ್ತಿರುವ ನದಿ-ನಾಲೆಗಳ ತುಂಬ
ಕರ್ಮದ ಸೆಳುವು-ಟಿಸಿಲಿ **(ಈ ಪವಿತ್ರ ದೇಶದ ಉದ್ದಗಲಕ್ಕು:ಭಗತ್‌ರಾಜ್ ನಿಜಾಮಕರ್)**

ಧರ್ಮ ಮತ್ತು ಆಳುವ ವ್ಯವಸ್ಥೆಗಳು ಈ ದೇಶವನ್ನು ಪವಿತ್ರವೆಂದೇ ಹೇಳುತ್ತದೆ. ಅದನ್ನು ಚರಿತ್ರೆಯಲ್ಲಿ ದಾಖಲಿಸುತ್ತ ಬಂದಿದ್ದರಿಂದ ಈ ದೇಶದ ಸಂಸ್ಕೃತಿಯನ್ನು ಭವ್ಯ, ದಿವ್ಯವೆಂದೇ ಪ್ರಚಾರ ಮಾಡಿ ನಂಬಿಸುತ್ತಿದೆ. ಆದರೆ ಒಳ ಹೊಕ್ಕು ನೋಡಿದರೆ ಧರ್ಮ ಮತ್ತು ಪ್ರಭುತ್ವ ಈ ಎರಡು ವ್ಯವಸ್ಥೆಗಳು ಈ ದೇಶದಲ್ಲಿ ಮಾಡಿದ ಶೋಷಣೆ, ನಡೆಸಿದ ದಬ್ಬಳಿಕೆಗೆ ದಲಿತರು ನರಕವನ್ನು ಅನುಭವಿಸಿದ್ದಾರೆ. ಈ ಹೊತ್ತಿನ ಸಂದರ್ಭಕ್ಕೆ ಅನ್ವಯಿಸಿದರೆ ಲೂಟಿಯಾಗುವ ಪ್ರಕೃತಿ ಸಂಪತ್ತಿನಿಂದ ದೇಶ ಬರ್ಬರವಾಗುತ್ತಿದೆ. ಉದ್ದಿಮೆ, ಕೈಗಾರಿಕೆಗಳಿಂದ ನದಿಗಳು ಮಲಿನವಾಗುತ್ತಿವೆ ಎಂಬುದನ್ನು ಈ ಕವಿತೆ ಹೇಳುತ್ತದೆ. **'ಇಂಡಿಯಾದ ತುಂಬ ಖಗ್ರಾಸ ಗ್ರಹಣ'**, (ಎಂ.ಲಕ್ಷ್ಮಣ) **'ಇದು ನನ್ನ ಭಾರತ'** (ಕಾಶೀನಾಥ ಅಂಬಲಿಗೆ) **'ಭಾರತಾಂಬೆ'** (ಗವಿಸಿದ್ಧ ಎನ್.ಬಳ್ಳಾರಿ), **'ಭಾರತ ಮಾತಾಕಿ ಜೈ'** (ವಿಜಯಶ್ರೀ ಸಬರದ), **'ಹೀಗೆ ಸುಡುತ್ತಿದೆ ನನ್ನ ದೇಶ'** (ಪ್ರಭುದೇವ ಹಾದಿಮನಿ), **'ಈ ಪವಿತ್ರದೇಶದ ಉದ್ದಗಲಕ್ಕೂ'** (ಈರಪ್ಪ ಎಂ. ಕಂಬಳಿ) **'ಉಂಡು ಮಲಗಿದವರು'** (ಸೂಗಯ್ಯ ಹಿರೇಮಠ), **'ಯಾರಿಗಿದೆ ಸ್ವಾತಂತ್ರ್ಯ'** (ಶಂಕರಯ್ಯ ಘಂಟಿ), **'ಎಲ್ಲಿ ಹುಡುಕಲಿ ಹೇಳಿ'** (ಮಹಾಂತೇಶ ಮಸ್ಕಿ) ಮುಂತಾದ ಕವಿತೆಗಳಲ್ಲಿ ಈ ದೇಶದಲ್ಲಿ ನಡೆಯುವ ಕಾಣುವ ದುರಂತ ಸಂಗತಿಗಳ ವಾಸ್ತವ ಚಿತ್ರಗಳಿವೆ.

ಪ್ರತಿಭಟನೆಗಳು: ವ್ಯವಸ್ಥೆ ವಿರುದ್ಧ

ಬಂಡಾಯ ಕಾವ್ಯದಲ್ಲಿ ಮುಖ್ಯವಾಗಿ ಕಾಣುವ ಗುಣವೇ ಪ್ರತಿಭಟನೆ. ಎಲ್ಲ ನಮೂನೆಯ ದಬ್ಬಾಳಿಕೆಗಳ ವಿರುದ್ಧ ಪ್ರತಿಭಟಿಸುತ್ತದೆ. ಶೋಷಕ ಮತ್ತು ಶೋಷಿತ ಎಂಬ ಎರಡು ವರ್ಗಗಳನ್ನು ಮಾಡಿ ಶೋಷಕರ ವಿರುದ್ಧವಾಗಿ ಮತ್ತು ಶೋಷಿತರ ಪರವಾಗಿ ದನಿ ಎತ್ತುತ್ತದೆ. ಬಹುತೇಕ ಬಂಡಾಯ ಮನೋಧರ್ಮದ ಕವಿತೆಗಳಲ್ಲಿ ದಲಿತರ ನೋವುಗಳಿಗೆ ಮಿಡಿಯುವುದು, ನೋವಿಗೆ ಕಾರಣವಾದವರ ವಿರುದ್ಧ ಸಿಡಿಯುವುದು ಕಾಣುತ್ತದೆ. ಅನ್ನ, ಬಟ್ಟೆ, ಸೂರಿಗಾಗಿ ಸಾಮಾನ್ಯ ಜನರು ಉಳ್ಳವರನ್ನು ಆಶ್ರಯಿಸುವುದು ಅನಿವಾರ್ಯ. ಇಂಥವರ ಅಸಹಾಯಕತೆಯನ್ನು ಬಲ್ಲ ಉಳ್ಳವರು ಎಲ್ಲರೀತಿಯಿಂದ ಬಳಸಿಕೊಂಡು ತಮ್ಮ ಅಸ್ತಿತ್ವವನ್ನೇ ಬಲಪಡಿಸಿಕೊಂಡು ದುಡಿದವರನ್ನು ಅತಂತ್ರ ಸ್ಥಿತಿಯಲ್ಲೇ ಇಡುತ್ತ ಬಂದಿದ್ದಾರೆ. ಇದು ಸಮಾಜದ ಅಸಮಾನತೆಗೆ ಮತ್ತು ಮನುಷ್ಯ-ಮನುಷ್ಯನ ನಡುವೆ ಕಂದರವನ್ನುಂಟು ಮಾಡಿದೆ. ಬಡವರ ದುಡಿತದ ಶಕ್ತಿಯಿಂದ ಮೇಲ್ವರ್ಗದವರು ಆರ್ಥಿಕವಾಗಿ ಬಲಗೊಳ್ಳುತ್ತ ಹೋಗುವುದು, ಬಡವರ ಸ್ಥಿತಿ ದಿನದಿನೆ ನರಕವಾಗುವುದು ಈ ಸಮಾಜದಲ್ಲಿ ನಡೆಯುತ್ತದೆ. ಇಂಥವರು ಈ ಸ್ಥಿತಿಯಲ್ಲಿರುವಾಗಲೂ ಧಾರ್ಮಿಕವಾಗಿ ಬಡವರಿಗಾಗಿ ಅನೇಕ ಸಂಪ್ರದಾಯಗಳು, ಮೂಢನಂಬಿಕೆಗಳು, ಬಲಿ ಮುಂತಾದವುಗಳನ್ನು ಸೃಷ್ಟಿಸಿ ಅಜ್ಞಾನದಲ್ಲಿಡುವಂತೆ ಮಾಡಲಾಗಿದೆ. ಇಂಥ ಶೋಷಿತರ ಸ್ಥಿತಿಯನ್ನೇ ಕಂಡು 'ಯಾವ ಅಕ್ಷರದಿಂದ ಬರೆದು ತೋರಿಸಲಯ್ಯ ನನ್ನ ಜನಗಳಿಗಾದ ಎದೆಯ ಬ್ಯಾನಿ' (ಚೆನ್ನಣ್ಣ ವಾಲೀಕಾರ) ಎಂದು ಹಾಡುತ್ತಾರೆ. ಬಡವನ, ದಲಿತನ ಈ ಸ್ಥಿತಿ ಎಲ್ಲಿಯವರೆಗೆ? ಅದಕ್ಕೆ ಕೊನೆಯೊಂಬುದನ್ನು ತೋರಿಸಲು,

> ನಮ್ಮ ಶಾಂತಿಗೆ ಬೆಂಕಿ ನಮ್ಮ ಪ್ರೀತಿಗೆ ಬೆಂಕಿ ನಮ್ಮ ಶಕ್ತಿಗೆ
> ಬೆಂಕಿ ಇಟ್ಟವರ್‍ಯಾರೋ ನಮ್ಮ ಒಡಲಿಗೆ ಬೆಂಕಿ ಇಟ್ಟ ಭಂಡರ
> ನೆಲ್ಲ ಸುಟ್ಟು ಹಾಕಲು ಒಡಲ ಬೆಂಕಿ ತರ್‍ರ್‍ರೋ....... **(ವಚನ: ವಾಲಿಕಾರ)**

ಎಂದು ಆಕ್ರೋಶ ವ್ಯಕ್ತವಾಗುತ್ತದೆ. ಬರೀ ಆಕ್ರೋಶ ಪ್ರತಿಹಿಂಸೆಯ ಆಶಯದಲ್ಲಿ ಮುಂದುವರೆಯುತ್ತದೆ.

> ಈಗ
> ನಿಮ್ಮ

ರಕ್ತ
ಎಲೂನ
ಸಂಗಟ
ಥಟ್ಟ್ಯಾ
ಆಡ್ದೇಕ ಅಂತ
ನಮ್ಮ
ಮನ್ಸು
ಆಗ್ಯಾದ
ಸುಮ್ಮನ
ಇರ್ರಿ? (ಥಟ್ಟ್ಯಾ:ಕಾಶೀನಾಥ ಅಂಬಲಿಗೆ)

ಮರು ಹೊಡೆತ, ಸೇಡಿಗೆ ಸೇಡು ಇಲ್ಲಿ ವ್ಯಕ್ತವಾಗಿದೆ. ಬಂಡಾಯ ಕಾವ್ಯದಲ್ಲಿ ಆಕ್ರೋಶ ಎಷ್ಟರ ಮಟ್ಟಿಗೆ ವ್ಯಕ್ತವಾಗಿದೆ ಎನ್ನುವುದಕ್ಕೆ ಈ ಕವನ ಉದಾಹರಣೆಯಾಗಿದೆ. ಪಟ್ಟಭದ್ರ ಹಿತಾಶಕ್ತಿಗಳಿಗೆ, ಸಾಮ್ರಾಜ್ಯಶಾಹಿಗಳಿಗೆ, ಸಮರದಾಹಿಗಳಿಗೆ, ಪ್ರಜಾಪೀಡಕರಿಗೆ ಅವರು ಮಾಡಿದ ಕೃತ್ಯಗಳಿಗೆ ಕ್ಷಮೆಯೇ ಇಲ್ಲವೆಂದು, ಇವರೆಲ್ಲ ಸೈತಾನರೆಂದು ಕರೆಯಲಾಗಿದೆ.

ಬಂದೂಕದ ನಳಿಗೆಯನ್ನು
ತಿರುಗಿಸುವರೋ ಜನ ನಿಮ್ಮ ಗುಂಡಿಗೆಗೆ
ಉರುಳಿಸುವರೋ ನಿಮ್ಮ ದೇಹಗಳ (ಏಕತೆಯ ಕೂಗು:ಬಿ.ಟಿ.ಲಲಿತಾನಾಯಕ)

ಹೊಟ್ಟೆಯ ಸಿಟ್ಟು ರಟ್ಟೆಗೆ ಬಂದು
ನಾವೆಲ್ಲ
ಕೈಕಾಲು ಜಾಡಿಸಿ ನಿಂತರೆ
ನಿಮ್ಮ ಬದುಕೆಲ್ಲ ನುಚ್ಚುನೂರು (ಉದ್ಘೋಷ:ಮೇಟಿ ಮುನಿಯಪ್ಪ)

ನಿರಂತರವಾಗಿ ದಮನಕ್ಕೆ ಒಳಗಾದ ಜನಕ್ಕೆ ಬದಲಾದ ಪರಿಸರದಲ್ಲಿ ಮಾತನಾಡುವ ಶಕ್ತಿಯನ್ನು ಪಡೆದು ಕೊಂಡದ್ದೇ ಸಾಧನೆಯಾಗುತ್ತದೆ. ಶೋಷಿತನಿಗೆ ತಾನು ಶೋಷಿತನೆಂಬ ಪ್ರಜ್ಞೆಯನ್ನು ಮೂಡದಂತೆ ಅಜ್ಞಾನದಲ್ಲಿ ಇಟ್ಟಿದ್ದರು. ಬದಲಾಗಿ ಅಂಥವರಿಗೆ, ಅಂಥ ಸ್ಥಿತಿಯಲ್ಲಿರುವುದಕ್ಕೆ ಅವರ ಕರ್ಮಗಳು ಕಾರಣವಾಗಿವೆ ಎಂಬ ಪಾಪಪ್ರಜ್ಞೆಯನ್ನು, ಕೀಳರಿಮೆಯನ್ನು ಸೃಷ್ಟಿಸಿದ್ದರು. ಇಂಥ ಪರಿಸ್ಥಿತಿಯಲ್ಲಿ ಶೋಷಕನಿಗೆ ತಾನು ಶೋಷಣೆಗೆ ಒಳಗಾದವನು ಎಂಬ ಪ್ರಜ್ಞೆ ಮೂಡುವುದೇ ಸಾಧನೆಯಾಗಿದೆ. ಅದರ ಮುಂದಿನ ಹೆಜ್ಜೆಯೇ ಪ್ರಶ್ನೆಯನ್ನು ಹಾಕುವುದು.

'ಚವರಿನವರು' (ಕಾಶೀನಾಥ ಅಂಬಲಿಗೆ), 'ಏಕತೆಯ ಕೂಗು', 'ಒಂದೇ ಒಂದು ಬಾರಿ ಹೊರಬನ್ನಿ', 'ಜೀವಧ್ವನಿ ಮೊಳಗುವಾಸೆ' (ಬಿ.ಟಿ.ಲಲಿತಾ ನಾಯಕ), 'ಪಲ್ಲವಿ' (ವಿಜಯಶ್ರೀ ಸಬರದ) 'ಆ ಶೋಕ' (ಪ್ರಭುದೇವ ಹಾದಿಮನಿ) 'ಕೆಂಡಕಾವ್ಯ' (ಶಂಕ್ರಯ್ಯ ಘಂಟಿ) ಅಂದು-ಇಂದು (ಸರಸ್ವತಿ ಚಿಮ್ಮಲಗಿ) ಮುಂತಾದ ಕವಿತೆಗಳಲ್ಲಿ ಕೆಳವರ್ಗದವರ ಪರವಾದ ನಿಲವುಗಳಿವೆ.

ರಕ್ತ ಸಿಕ್ತ ಖಡ್ಗ ನಿಮ್ಮ ಒರೆಯಲ್ಲಿ
ಹಂತಕರು ಯಾರೆಂದು
ಮತ್ತೆ ಕೇಳುವಿರಿ

ಬಿತ್ತುವ ಬೀಜ ನಿಮ್ಮ ಉಗ್ರಾಣದಲ್ಲಿ
ಬೆಳೆಯಾಕ ಬರಲಿಲ್ಲವೆಂದು
ಮತ್ತೆ ಕೇಳುವಿರಿ (ಕೆಲವು ಸವಾಲು ಕವಿತೆಗಳು:ಜಂಬಣ್ಣ ಅಮರಚಿಂತ)

ಈ ಕವಿತೆ ಶೋಷಕರ ನಯವಂಚನೆಯನ್ನು ಬಯಲಿಗೆಳೆದು ಪ್ರಶ್ನಿಸುತ್ತದೆ. ದುಡಿಯುವ ಜನರನ್ನು ದುಡಿಸಿಕೊಂಡು ನಿಶ್ಯಕ್ತರನ್ನಾಗಿ ಮಾಡುವ, ಯಾವುದೇ ರೀತಿಯಿಂದ ಬಲಗೊಳ್ಳದಂತೆ ಮಾಡಿ ಬದುಕಿದ್ದರೂ ನಿರ್ಜೀವಿಗಳನ್ನಾಗಿ ಮಾಡುವ ಶೋಷಕರನ್ನು ಹಂತಕರೆಂದು ಕರೆದಿರುವುದು ಮಾರ್ಮಿಕವಾಗಿದೆ. ದಲಿತರು ಬೀಜಗಳಿದ್ದ ಹಾಗೆ. ಬೀಜ ಮೊಳೆಯಲು ಮಣ್ಣು, ನೀರು, ಗಾಳಿಬೇಕು. ಆದರೆ ಬೀಜವನ್ನು ಉಗ್ರಾಣದಲ್ಲಿಟ್ಟುಕೊಂಡರೆ ಅದು ಮೊಳೆಯುವುದಿರಲಿ ಹುಳಬಿದ್ದು ತನ್ನ ಸತ್ವ-ಶಕ್ತಿಯನ್ನೇ ಕಳೆದುಕೊಳ್ಳುತ್ತದೆ. ಉಳ್ಳವರು, ಆಳುವವರು ಮಾಡಿಕೊಂಡು ಬಂದ ಕೃತ್ಯವೇ ಇದು. ದಲಿತರ ಶಕ್ತಿಯನ್ನು ತಮ್ಮ ಉಗ್ರಾಣದಲ್ಲಿಡಿದಿಟ್ಟು ಬಂಧಿಸಿದ್ದಾರೆ. ಅದಕ್ಕೆ ಮೊಳೆಯಲು ಬೆಳೆಯಲು ಅವಕಾಶವನ್ನೇ ನೀಡದಿದ್ದರೆ ಅದು ನುಸಿ ಹಿಡಿದು ನಾಶವಾಗುತ್ತದೆ. ದಲಿತರ ಸ್ಥಿತಿ ಮಣ್ಣು ಕಾಣದ ಬೀಜದಂತಾಗಿದೆ ಎಂಬ ರೂಪಕವನ್ನು ಬಳಸಿರುವುದು ಇಡೀ ವ್ಯವಸ್ಥೆಯನ್ನು ತೆರೆದು ತೋರಿಸಿದಂತಾಗಿದೆ.

ಪುರೋಹಿತಶಾಹಿ ವಿರುದ್ಧ

ದೇವರು-ಧರ್ಮದ ಹೆಸರಿನಲ್ಲಿ ಗುಡಿ-ಮಠಗಳನ್ನು ನಿರ್ಮಿಸಿಕೊಂಡು, ಆಳುವ ವ್ಯವಸ್ಥೆಯ ಜತೆಗಿದ್ದು, ಸಮಾಜದಲ್ಲಿ ಉನ್ನತ ಸ್ಥಾನವನ್ನು ಹಿಡಿದುಕೊಂಡಿರುವ ಪುರೋಹಿತಶಾಹಿ ವ್ಯವಸ್ಥೆ ಜನ ಸಾಮಾನ್ಯರನ್ನು ಹಲವು ರೀತಿಯಲ್ಲಿ ಸುಲಿಯುತ್ತದೆ. ಆಳುವ ವ್ಯವಸ್ಥೆ ಮತ್ತು ಪುರೋಹಿತ ವ್ಯವಸ್ಥೆ ಯಾವಾಗಲೂ ಒಂದಾಗಿರುತ್ತವೆ, ಒಂದು ನಾಣ್ಯದ ಎರಡು ಮುಖಗಳಂತೆ. ಜನಸಾಮಾನ್ಯರನ್ನು ಈ ಎರಡು ವ್ಯವಸ್ಥೆಗಳು ವ್ಯವಸ್ಥಿತವಾಗಿಯೇ ತುಳಿಯುತ್ತವೆ. ಆಳುವ ವ್ಯವಸ್ಥೆ ಒಂದು ರೀತಿಯಿಂದ ಶೋಷಿಸಿದರೆ, ಪುರೋಹಿತಶಾಹಿ ಜನಸಾಮಾನ್ಯರನ್ನು ಮೂಢನಂಬಿಕೆ, ಪಾಪ-ಪುಣ್ಯಗಳ, ಪುನರ್ ಜನ್ಮಗಳ ಕಲ್ಪನೆಯಿಂದ ಕರ್ಮಕೂಪದಲ್ಲಿ ಸಿಲುಕಿಸಿ ಅಸಹಾಯಕರನ್ನಾಗಿ ಮಾಡಿ ಅಜ್ಞಾನದಲ್ಲಿ ದೂಡಿ, ಅದರಿಂದ ಬಿಡುಗಡೆ ಹೊಂದಲು ಅದೇ ವ್ಯವಸ್ಥೆಗೆ ಮೊರೆ ಹೋಗುವಂತೆ ಮಾಡುತ್ತದೆ. ಜನ ಸಾಮಾನ್ಯರು ತಮ್ಮ ಶಕ್ತಿಯನ್ನೆಲ್ಲ ಇಂಥದ್ದಕ್ಕೆ ಧಾರೆ ಎರೆಯುತ್ತಾರೆ. ಧರ್ಮಾಧಿಕಾರಿ, ಮಠಾಧೀಶ, ಜಗದ್ಗುರು ಎಂಬ ಹೆಸರಿನ ಸ್ವಾಮಿಗಳ ನಿಜಸ್ಥಿತಿಯನ್ನು ಈ ಕವಿತೆ ಹೇಳುತ್ತದೆ:

ಬೂದಿ ಭಸ್ಮವ ಕೊಟ್ಟು
ನಮ್ಮ ಜನತೆಯ ಸುಟ್ಟು
ಜಪ-ತಪವ ಮಾಡಿಸುತ
ಮಂತ್ರಗಳ ಪಠಿಸುತ
ಸಂಪ್ರದಾಯದ ಸ್ಮಶಾನದಿ
ಗೋರಿ ಮಾಡಿದಿರಿ ಬದುಕ (ಕೊನೆ ಎಚ್ಚರಿಕೆ:ಬಸವರಾಜ ಸಬರದ)

ಕಾವಿಯಲ್ಲಿ ಕಾವೇರಿದವರು
ಮಾತಿನಲ್ಲಿ ಮಹವ ತೋರಿದವರು
ಹೆಣ್ಣನುದ್ಧರಿಸಲಿಕ್ಕೆ ಬಂದ ಸಾಕ್ಷಾತ್
ಕಪಿಲಸಿದ್ಧ ಮಲ್ಲಿಕಾರ್ಜುನರು (ಸ್ವಾಮಿಗಳು ಬರುತ್ತಿದ್ದಾರೆ ಎಚ್ಚರಿಕೆ:ಅಲ್ಲಮಪ್ರಭು ಬೆಟ್ಟದೂರು)

ದೇವರ ಹೆಸರಿನಲ್ಲಿ ಬಿಡುವ ಗೂಳಿ ಕಂಡ ಕಂಡವರ ಹೊಲ ಹೊಕ್ಕು ಹಸಿರು ಮೇದರೂ ಅದು ದೇವರ ಗೂಳಿಯಾದ್ದರಿಂದ

ಅದನ್ನು ತಡೆಯುವುದು ಪಾಪವಾಗುತ್ತದೆ. ಅದು ಯಾರ ಭಯವಿಲ್ಲದೆ ನಿರ್ಭಯವಾಗಿ, ಸ್ವೇಚ್ಛೆಯಿಂದ, ಸೊಕ್ಕಿನಿಂದ ಮೆರೆಯುತ್ತಿರುತ್ತದೆ.

ಊರಿನೆಲ್ಲ ಆಕಳುಗಳಿಗೆ ಹಾರುವ ಗುತ್ತಿಗೆ ಹಿಡಿದಿದೆ
ಉಳಿದೆಲ್ಲ ಹೋರಿಗಳ ಗೊತ್ತಿಗೆ ಹಚ್ಚಿದೆ
....
ಧರ್ಮದ ಛತ್ರಿಯ ಕೆಳಗಡೆ ಕೂಳು
ಜೊತೆಗೆ ಸಿಗುವುದು ಹೆಣ್ಣಿನ ತೊಡೆತೋಳು
ಧರ್ಮದಿ ಸುಖವಿದೆ ನೀ ಕೇಳು (ದೇವರ ಗೂಳಿ:ಅಲ್ಲಮ ಪ್ರಭು ಬೆಟ್ಟದೂರು)

ಮಠಾಧೀಶರನ್ನು ದೇವರ ಗೂಳಿಗೆ ಹೋಲಿಸಿರುವುದು ಸರಿಯಾಗಿದೆ. ಈ ಮಠಾಧೀಶರು ತಮ್ಮನ್ನು ಅಲೌಕಿಕರೆಂದು ಕರೆದುಕೊಂಡು, ಜನಸಾಮಾನ್ಯರಂತೆ ಹುಟ್ಟು ಸಾವಿಗೆ ಮೀರಿದವರು ಎಂದು ಕರೆದುಕೊಳ್ಳುವ ಇವರನ್ನು

ನಾವು ಯೋನಿಜರಲ್ಲ
ಮಾನವರೂ ಅಲ್ಲ
ನಾವು ಲಿಂಗೋದ್ಭವರೆಂದೇ ಹೆಸರಾದವರು (ಲಿಂಗೋದ್ಭವರು:ಬಸವಪ್ರಭು ಪಾಟೀಲ್)

ಎಂದು ವ್ಯಂಗ್ಯ ಮಾಡಲಾಗಿದೆ. ಈ ಕವಿತೆಯಲ್ಲಿ ಈ ಇಂಥವರು ಅಡ್ಡಪಲ್ಲಕ್ಕಿಗಳಲ್ಲಿ ಕುಳಿತು, ತಮ್ಮಂತೆ ಮನುಷ್ಯರೆಂದು ಕಿಂಚಿತ್ ಅರಿವಿರದೆ ಇನ್ನೊಬ್ಬ ಮನುಷ್ಯನ ಹೆಗಲ ಮೇಲೆ ಕುಳಿತು ಮೆರೆಯುತ್ತಾರೆ. ಅರಿವಿದ್ದರೂ ಅದು ತಮ್ಮ ಹಕ್ಕು-ಅಧಿಕಾರವೆಂದು ಅಹಂಕಾರದಿಂದಲೇ ವರ್ತಿಸುತ್ತಾರೆ. ಇಂಥ ಪುರೋಹಿತಶಾಹಿಗಳನ್ನು ಎಚ್ಚರಿಸುವ, ಛೇಡಿಸುವ, ವ್ಯಂಗ್ಯಮಾಡುವ ಅನೇಕ ಕವನಗಳಿವೆ. **'ಅಡ್ಡಪಲ್ಲಕ್ಕಿ ಮೆರವಣಿಗೆ'** (ಕಾಶೀನಾಥ ಅಂಬಲಿಗೆ), **'ಪುರೋಹಿತಶಾಹಿಗಳ ಹಾಡು'** (ಈರಪ್ಪ ಎಂ.ಕಂಬಳಿ) **'ಅಯ್ಯೋ ಸ್ವಾಮಿಗಳೆ'** (ಮಹಾಂತೇಶ ಮಸ್ಕಿ), **'ನಮ್ಮವರು'** (ಭಗತ್‌ರಾಜ್ ನಿಜಾಮಕರ್), **'ಅಶ್ವಹೃದಯಿ ಮಹಾಂತ ಸುಪ್ರಭಾತ'** (ಎಸ್.ಜಿ.ಸ್ವಾಮಿ) ಈ ಎಲ್ಲ ಕವಿತೆಗಳಲ್ಲಿ ಪುರೋಹಿತಶಾಹಿ ಈ ಸಮಾಜದಲ್ಲಿ ಮಾಡುವ ಕೃತ್ಯಗಳನ್ನು ತೋರಿಸುತ್ತವೆ.

ಗುಡಿ-ಗುಂಡಾರ ಕಟ್ಟಿಕೊಂಡು
ಕಲ್ಲಿಗೆ ದೇವರ ಪಟ್ಟ ಎಳೆದೆಳೆದು
ಅಮಾಯಕರ ಕಣ್ಣಿಗೆ ಕರಿ ಬಟ್ಟೆ ಕಟ್ಟಿದವರಿವರು
ಧರ್ಮದ ಸದಾ ದಯಾ ಪರಿಪಾಲಕರೆಂದು
ಕರ್ಮ ಅರಿಯದ ಶ್ರೇಷ್ಠ ಕರ್ಮಯೋಗಿಗಳೆಂದು
ಹೆಣ್ಣು-ಹೊನ್ನು-ಮಣ್ಣು ಭೋಗಿಸುವ ನಿರ್ಮೋಹಿಗಳಿವರು
(ನಮ್ಮವರು:ಭಗತ್‌ರಾಜ್ ನಿಜಾಮಕರ್)

ತಾರೆ ಹೂಗಳ ಚಂದಿರನ ಬೆಳದಿಂಗಳು
ಕುಚ ಕುಂಬ ನಿತಂಬ ದಿಂಬುಗಳ
ಮಧುಮಂಚ ಸುಗಂಧಗಳ ಮೇಲೆ
ಪವಡಿಸಿದ ಅತಿ ಮಹಾರತಿ ರಾಜಗುರವೇ
ಏಳಯ್ಯಾ ಬೆಳಗಾಯಿತು

ಸುಪ್ರಭಾತವು ನಿನಗೆ ಅಶ್ವಹೃದಯಿ ಮಹಾಂತ

(ಅಶ್ವಹೃದಯಿ ಮಹಾಂತ ಸುಪ್ರಭಾತ:ಎಸ್.ಜಿ.ಸ್ವಾಮಿ)

ಈ ನೆಲದ ಉದ್ದಗಲ
ಆಡುತ್ತಿರುವ ತಿರುಪತಿ ಕತ್ತಿ,
ಒಂದಿಷ್ಟು ಉಳಿಯದ ಹಾಗೆ
ಸ್ವಚ್ಛ ಬೋಳಿಸಿದ ನೆತ್ತಿ **(ಈ ದೇಶದಲ್ಲಿ:ಶಿವಶರಣ ಜಾವಳಿ)**

ಈ ಕವಿತೆಗಳಲ್ಲಿ ಧರ್ಮ-ದೇವರ ಹೆಸರಿನಲ್ಲಿ ಮುಗ್ಧ ಜನರನ್ನು ವಂಚಿಸುವ ಪುರೋಹಿತಶಾಹಿಗಳ ಕೃತ್ಯವನ್ನು ವ್ಯಂಗ್ಯ ಮಾಡಲಾಗಿದೆ. ಪಾಪ-ಪುಣ್ಯಗಳ ಭಯವನ್ನು ಸೃಷ್ಟಿಸಿ, ಅದರಿಂದ ಮುಕ್ತರಾಗಲು ದುಡಿದ ಅನ್ನವನ್ನು ಉಣ್ಣದೆ ದೇವರಿಗೆ ಅರ್ಪಿಸಿ ನರಳುವ ಮುಗ್ಧ ಜನರಿಗೆ ಬಿಡುಗಡೆಯ ದಾರಿ ಇಲ್ಲವಾಗಿದೆ. ದೇವರು ಧರ್ಮದಿಂದ ಈ ದೇಶದ ಬಡವರಿಗೆ ಅಪಾಯವೇ ಹೊರತು ಯಾವ ಲಾಭವೂ ಇಲ್ಲ. ದೇವರು ಧರ್ಮ ಪುರೋಹಿತ ಶಾಹಿಗಳ ಬಂಡವಾಳವಾಗಿದೆ. ಈ ಕವಿಗಳು ವಚನಪರಂರೆಯ ಗಾಢ ಪ್ರಭಾವಕ್ಕೆ ಒಳಗಾದವರು ಹಾಗೂ ಈ ಶತಮಾನದ ಬ್ರಾಹ್ಮಣ ವಿರೋಧಿ ಚಳುವಳಿಗಳನ್ನು ಸಾಂಸ್ಕೃತಿಕ ಕಾರಣಕ್ಕೆ ಬೆಂಬಲಿಸುವವರೂ ಆದಕಾರಣ, ಪುರೋಹಿತಶಾಹಿ ವಿರೋಧಿ ನಿಲುವು ತಾಳಲು ಸರಾಗವಾಯಿತು ಅನಿಸುತ್ತದೆ.

ಕೆಳವರ್ಗದವರ ಜತೆಯಲ್ಲಿ

ನಾನು
ಸದಾ ಬೇಟೆಯ ಜೊತೆಗಿದ್ದೇನೆ
ಬೇಟೆಗಾರನ ಜೊತೆಯಲ್ಲ **(ನಾನು ಬೇಟೆಯ ಜೊತೆಗಿದ್ದೇನೆ:ಜಂಬಣ್ಣ ಅಮರಚಿಂತ)**

ಬಂಡಾಯ-ದಲಿತ ಕಾವ್ಯದ ಪ್ರಧಾನ ಧೋರಣೆಯನ್ನು ಈ ಮೂರು ಸಾಲುಗಳು ಹೇಳುತ್ತವೆ. ಕಾವ್ಯವನ್ನು 'ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರ'ಎಂದು ಗುರುತಿಸಲಾಗಿದೆ. ಇದರಿಂದ ಎಲ್ಲ ಬಗೆಯ ದಲಿತರ ನೋವಿಗೆ ಕಾವ್ಯ ಮಿಡಿಯಲು ಪ್ರಯತ್ನಿಸುತ್ತದೆ. ಈ ನೆಲದ ಮನುಷ್ಯನ ನೋವಿನ ಜತೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಈ ಕವಿ 'ವಿಶ್ವ ಹೃದಯದ ಗಾಯಗಳಲ್ಲಿ ' ಇದ್ದುಕೊಂಡೇ ಗಾಯ-ನೋವುಗಳಿಗೆ ಕಾರಣರಾದ ಬೇಟೆಗಾರರನ್ನು ಎದುರಿಸುವ ಎದೆಗಾರಿಕೆಯನ್ನು ತೋರಿಸಿದ್ದಾನೆ. ಚರಿತ್ರೆಯ ಉದ್ದಕ್ಕೂ ಬೇಟೆಗಾರರ ಬೇಟೆಗೆ ಬಲಿಯಾದ ಪ್ರತಿಜೀವಿಯ ನೋವಿನಲ್ಲಿದ್ದೇನೆ ಎನ್ನುವುದೇ 'ಜೀವಪರ' ಕಾಳಜಿಯಾಗಿದೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮುಂತಾದವರ ನಿಲವು ಇದೇ ಆಗಿದೆ. 'ಇವನಾರವ ಎಂದೆನಿಸದೆ ಇವ ನಮ್ಮವ ಎಂದೆನಿಸಯ್ಯ' ಎಂಬ ಮಾತಿನಲ್ಲಿ ಮನುಷ್ಯನ ಮೇಲಿನ ಅಪಾರ ಪ್ರೀತಿಯನ್ನು ಧ್ವನಿಸುತ್ತದೆ. ಈ ಧ್ವನಿಯಲ್ಲಿ ಆಪ್ತತೆಯಿದೆ. ಜಾತಿ, ಧರ್ಮಗಳ ನಡುವಿನ ಕಂದರವನ್ನು ಮುಚ್ಚುವ, ಮೇಲು-ಕೀಳು ಎಂಬುದನ್ನು ಅಳಿಸುವ, ಸಮಾನತೆಯನ್ನು ಬಿತ್ತುವ ಪ್ರೀತಿ ತುಂಬಿದೆ. ಇಂಥ ಬದುಕಿನ ಸಮಾಜದ ಸಾಕಾರವನ್ನು ಬಂಡಾಯ ದಲಿತ ಸಾಹಿತ್ಯ ಚಳುವಳಿ ಆಪೇಕ್ಷಿಸುತ್ತದೆ.

'ನನ್ನ ಜನ' ಎಂದು ಗುರುತಿಸುವ ದಲಿತರ ಗೋಳಿನ ಬವಣೆಗಳನ್ನು ಕುರಿತು ಹಾಡುತ್ತಲೇ ಅಂಥವರ ಬದುಕನ್ನು, ಆ ಬದುಕಿಗೆ ಕಾರಣರಾದ 'ಶೋಷಿತ'ರನ್ನು ಸರಿ ದಾರಿಗೆ ತರುವುದೇ ಈ ಕಾವ್ಯದ ಗುರಿ. ಶೋಷಕರನ್ನು ವಿರೋಧಿಸುವ, ಖಂಡಿಸುವ ಸಿಟ್ಟಿನಲ್ಲಿ ಸೇಡು ತೀರಿಸಿಕೊಳ್ಳುವ ಆವೇಶ ವ್ಯಕ್ತವಾಗಿದ್ದರೂ ಅಂತಿಮವಾಗಿ ಶೋಷಿತರನ್ನು ಮನುಷ್ಯರನ್ನಾಗಿ ಮಾಡುವ ಜವಾಬ್ದಾರಿಯನ್ನು ಈ ಕಾವ್ಯ ಹೊತ್ತಿದೆ. ದಲಿತರನ್ನು 'ನಮ್ಮವರು'ಎಂದಂತೆ ಅಂತಿಮವಾಗಿ ಶೋಷಕರಿಗೆ ಅವರ ತಪ್ಪಿನ ಅರಿವನ್ನು ಮೂಡಿಸಿ ಆ ಮೂಲಕ ಅವರನ್ನೂ 'ನಮ್ಮವರು' ಅನ್ನುವ ಮೂಲಕ ಮಾನವೀಯತೆಯನ್ನು ಬಂಡಾಯ-ದಲಿತ ಕಾವ್ಯ

ಉಳಿಸಿಕೊಂಡಿದೆ.

ನೊಂದುಕೊಂಡು ಬಂದವರು ನನ್ನವರು
ಬೀದಿಯಲ್ಲಿ ಬಿದ್ದವರು ನನ್ನವರು
ಕರ್ಮದ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ
ದನದಂತೆ ದುಡಿದವರು ನನ್ನವರು (ನನ್ನವರು:ಬಸವರಾಜ ಸಬರದ)

ಕಟ್ಟಿ ಕಡೆಯವರು
ಒಡೆಯಾ ನಾವು ಕಟ್ಟ ಕಡೆಯವರು
ಎತ್ತಿ ಕಟ್ಟಿಕಟ್ಟಿ ಎತ್ತರದಲ್ಲಿ
ನಿಮ್ಮನು ನಿಲ್ಲಿಸಿದವರು (ಕಟ್ಟಕಡೆಯವರು:ಪ್ರಹ್ಲಾದ್ ಚೆಟಗೇರಿ)

'ದುಡಿವ ಕರುಳಿನ ಕೂಗು' (ಬಿ.ಟಿ.ಲಲಿತಾನಾಯಕ), **'ಎನ್ನವರ ಎದೆಹಾಡು'** (ಪ್ರಭುದೇವ ಹಾದಿಮನಿ), **'ಸಮಾಧಿಯಾದವರು'** (ಸೂಗಯ್ಯ ಹಿರೇಮಠ) **'ನನ್ನವರು ಇವರು'** (ಮೇಟಿ ಮುನಿಯಪ್ಪ) **'ನನ್ನವರ ನೋವು'**, **'ನನ್ನವರು'**, **'ನನ್ನಜನ'** (ಪ್ರಭು ಖಾನಾಪುರೆ) ಈ ಕವಿತೆಗಳಲ್ಲಿ ದಲಿತರ ಪರವಾದ ಕಾಳಜಿ ಪ್ರೀತಿ ಮತ್ತು ಶೋಷಿತರ ವಿರುದ್ಧದ ದನಿ ಎತ್ತರದಲ್ಲಿ ಕೇಳಿಸುತ್ತದೆ.

ಕಟೆ ಕಟೆದು ನಿಮ್ಮನ್ನು
ಮನುಷ್ಯರನ್ನಾಗಿಸಿ
ಅಪ್ಪಿಕೊಳ್ಳುವಾಸೆ (ಜೀವಧ್ವನಿ ಮೊಳಗುವಾಸೆ:ಬಿ.ಟಿ.ಲಲಿತಾನಾಯಕ)

ಈ ಪಿಕಾಸಿ ನಿಮ್ಮ ಗೋರಿ ತೋಡಲು ಅಲ್ಲ
ಈ ಪೊರಕೆ ನಿಮಗೆ ಹಿಡಿದ ದೆವ್ವ ಬಿಡಿಸಲು ಅಲ್ಲ
ಮಂತ್ರಗಳಲ್ಲಿ ಮನುಷ್ಯನ ಕೊಳೆಯಿಸಿದ ನಿಮ್ಮ
ಹಿಂಸಾ-ಪರಂಪರೆಯನು ಸಮ ಮಾಡುತ್ತೇವೆ
ಕಿತ್ತು ಬುಡಸಹಿತ-
ನಿಮ್ಮ ಕಚಡಾ ಸಂಸ್ಕೃತಿಯನು ಸ್ವಚ್ಛಗೊಳಿಸುತ್ತೇವೆ
ಪೊರಕೆ ಹಿಡಿದು ಬಳೆದು
ನಿರ್ಮಿಸಿ ಸಮ ಸಮಾಜಕೆ ಹೊಸದಾರಿ (ಸ್ವಾಭಿಮಾನ ಗೀತೆ:ಜಂಬಣ್ಣ ಅಮರಚಿಂತ)

ಬಂಡಾಯ-ದಲಿತ ಕಾವ್ಯದಲ್ಲಿ ಕೇವಲ ಪ್ರತಿಭಟನೆ ಮಾತ್ರ ಇಲ್ಲ. ದಮನಕ್ಕೆ ಒಳಗಾದವರ ಪರವಾಗಿ ನಿಲ್ಲುವ ಅದೇ ಸಮಯದಲ್ಲಿ ಶೋಷಕರನ್ನು ಪರಿವರ್ತಿಸುವ ಗುಣವೂ ಇದೆ. ಈ ಗುಣ ಇರುವುದರಿಂದ ಈ ಕಾವ್ಯ ಆಶಾವಾದಿಯಾಗಿದೆ. ಅಂದರೆ ಸಮಾಜದಲ್ಲಿ ದಲಿತರು ನಿರಂತರವಾಗಿ ದಮನಕ್ಕೆ ಒಳಗಾಗುವ ಪರಿಸ್ಥಿತಿ ಇರುವುದಿಲ್ಲ. ಶೋಷಕರ ಮನ ಪರಿವರ್ತನೆಗೊಳ್ಳುತ್ತದೆ. ಆಗ ಸಮಾಜದಲ್ಲಿ ಹೊಸತನ ಮೂಡುತ್ತದೆ. ಮನುಷ್ಯ-ಮನುಷ್ಯನ ನಡುವೆ ಭೇದ ಕಮ್ಮಿಯಾಗಿ ಸಮಾನತೆ ಮೂಡುತ್ತದೆ ಎಂಬ ಆಶಾವಾದವನ್ನು ವ್ಯಕ್ತಪಡಿಸುವ ಕವಿತೆಗಳಿವೆ:

ಹಾಡು ಹಾಡಲೆ ಹಕ್ಕಿ
ಬೇಗ ಬೇಗ ಬೆಳಗಾಗಲೆಂದು
ಕೆಂಪು ಸೂರ್ಯ ಮೂಡಿಬರಲೆಂದು

ಹೊನ್ನಕಿರಣ ಮೈ ಸೋಕಲೆಂದು
ದುಡಿಯುವವರ ಗುಡಿಸಲತನಕ
ಕಿರಣಗಳು ಬೇಗ ತಲುಪಲೆಂದು **(ಹಾಡಲೇ ಹಕ್ಕಿ:ಕಾಶೀನಾಥ ಅಂಬಲಗೆ)**

ಶೋಷಣೆರಹಿತ ಸಮಾಜ ನಿರ್ಮಾಣವಾಗಲೆಂದು, ಸಾಮಾಜಿಕ ವ್ಯವಸ್ಥೆ ನ್ಯಾಯಪರವಾಗಿರಲೆಂದು ಈ ಕವಿತೆ ಆಶಿಸುತ್ತದೆ.

ದಾರಿಯಗುಂಟ ಬಿದ್ದ ನಿಶೆಯನಳಿಸಲು
ಹಕ್ಕಿ ಹಾಡನು ಮತ್ತೆ ಈ ಜಗಕೆ ಕೇಳಿಸಲು
ಮೂಡಲಕ ಕೆಂಪ ಮೂಡ್ಯಾವ **(ಮೂಡಲಕ ಕೆಂಪು ಮೂಡ್ಯಾವ:ಬಸವರಾಜ ಸಬರದ)**

'ಸಮತೆಯ ಬಳ್ಳಿ' (ಪ್ರಭುದೇವ ಹಾದಿಮನಿ), **'ಪಲ್ಲವಿ'**, **'ಹೊಸಹಾಡು'** (ವಿಜಯಶ್ರೀ ಸಬರದ) ಮುಂತಾದ ಅನೇಕ ಕವಿತೆಗಳಲ್ಲಿ ಮನುಷ್ಯನ ಬದುಕು, ಸಮಾಜ ನೆಮ್ಮದಿಯನ್ನು ಕಾಣುತ್ತದೆ ಎಂಬ ಹಂಬಲವಿದೆ.

ಸ್ತ್ರೀ ಸ್ವಾತಂತ್ರ್ಯ

ಇನ್ನೆಷ್ಟು ಮುದುಡಿ ಮಲಗೋಣ?
ಮಂಡಿ ನೋಯುತ್ತಿದೆ
ಕೀಲು ಬಿಗಿಯುತ್ತಿದೆ
ಹಾಯಾಗಿ ಕಾಲು ಚಾಚಿ
ಬಿಡೋಣ
ನೆಲವನ್ನೆ ಗಾದಿ ಮಾಡಿ
ಕೊಂಡವರುಂಟು
ಇಲ್ಲಿ ಬಹಳ! **(ಆಕೆಯ ಎರಡು ಮಾತು:ಬಿ.ಟಿ.ಲಲಿತಾನಾಯಕ)**

ಈ ಕವಿತೆಯಲ್ಲಿ ಮೊದಲ ಸಾಲಿನಲ್ಲಿರುವ ಪ್ರಶ್ನೆಯು ಸ್ತ್ರೀಯರ ಬಂಧನ ಮತ್ತು ಅವರ ಚರಿತ್ರೆಯನ್ನೇ ಹೇಳುತ್ತದೆ. ೧೨ನೆಯ ಶತಮಾನದಲ್ಲಿ ನಡೆದ ಶರಣರ ಆಂದೋಲನದ ಫಲವಾಗಿ ಎಂಬಂತೆ ಅನೇಕ ಸ್ತ್ರೀಯರು ಪುರುಷರ ಜೊತೆಯಲ್ಲಿ, ಪುರುಷರ ಸಮಾನವಾಗಿ ಯವುದೇ ಹಿಂಜರಿಕೆ ಕೀಳರಿಮೆ ಇಲ್ಲದೆ ಸಾಂಸ್ಕೃತಿಕ ರಂಗದಲ್ಲಿ ಭಾಗವಹಿಸುವಂತಾಯಿತು. ಇದರ ಹಿಂದೆ ಕನ್ನಡ ಸಾಂಸ್ಕೃತಿಕ ವಲಯದಲ್ಲಿ ಮಹಿಳೆಯರು ಬಹಿರಂಗವಾಗಿ ಕಾಣಿಸಿಕೊಂಡದ್ದು ಕಮ್ಮಿ. ೨೦ನೇ ಶತಮಾನದಲ್ಲಿ ಸ್ವಾತಂತ್ರ್ಯ ಸಿಗುವವರೆಗೂ ಸಾಂಸ್ಕೃತಿಕ ವಲಯದಲ್ಲಿ ಮಹಿಳೆಯರು ಕಾಣಿಸಿಕೊಂಡದ್ದೂ ಕೂಡ ಕಮ್ಮಿ. ನವೋದಯ, ನವ್ಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಮಹಿಳೆಯರು ಹಿನ್ನೆಲೆಗೆ ಉಳಿದಿದ್ದರು. ಈ ಶತಮಾನದ ಕೊನೆಯ ಕಾಲು ಶತಮಾನದಲ್ಲಿ ಗಣನೀಯ ಪ್ರಮಾಣದಲ್ಲಿ ಮಹಿಳೆಯರು ಎಲ್ಲ ರಂಗಗಳಲ್ಲೂ ಮುನ್ನೆಲೆಗೆ ಬಂದಿದ್ದಾರೆ. ಇದರಿಂದ ಈ ಹೊತ್ತಿನಲ್ಲಿ ಮಹಿಳೆಯರ ಸ್ಥಾನಮಾನಗಳು ಸುಧಾರಿಸಿವೆಯೇ ಹೊರತು 'ಸ್ವಾತಂತ್ರ್ಯ' ಲಭ್ಯವಾಗಿಲ್ಲ. ಭಾರತದಂತಹ ದೇಶದಲ್ಲಿ ಮಹಿಳೆಯರಿಗೆ ನಿಜವಾದ ಸ್ವಾತಂತ್ರ್ಯ ಲಭ್ಯವಾಗುವುದು ಸುಲಭವಲ್ಲ ಎನ್ನಿಸುತ್ತದೆ. ಆದರೆ ಈಗ ತಮತಮಗೆ ಇಷ್ಟವಾದ ರಂಗದಲ್ಲಿ ಬೆಳೆಯಲು ಕೆಲಮಟ್ಟಿಗೆ ಅವಕಾಶಗಳಿವೆ.

ಚರಿತ್ರೆಯಲ್ಲಿ ಕಾಣಿಸುವ ಮಹಿಳೆಯರನ್ನು ಹಿನ್ನೆಲೆಯಾಗಿಟ್ಟುಕೊಂಡು ಆಯಾ ಅವಧಿಯಲ್ಲಿ ಮಹಿಳೆಯರಿಗೆ 'ಸ್ವಾತಂತ್ರ್ಯ'ವಿತ್ತು ಎಂದು ಹೇಳಲಾಗುವುದಿಲ್ಲ. ಅಕ್ಕಮಹಾದೇವಿಯಂಥ ಒಬ್ಬಿಬ್ಬರಿಗೆ ಅದು ಸಾಧ್ಯವಾಗಬಹುದು. ಅಕ್ಕನ ಸ್ವಾತಂತ್ರ್ಯವಾದರೂ ಈ ಶತಮಾನದ ಅರ್ಥದ ಸ್ವಾತಂತ್ರ್ಯವಲ್ಲ. ೨೦ನೇ ಶತಮಾನದಲ್ಲಿ ಈ ದೇಶದ ಪ್ರಧಾನಿ ಮಹಿಳೆಯೇ

ಆಗಿದ್ದಳು ಎಂಬುದು ನಿಜ. ಅದರಿಂದ ಮಹಿಳೆಯರು ಉನ್ನತ ಸ್ಥಾನಮಾನಗಳನ್ನು ಹೊಂದುವ ಅವಕಾಶವನ್ನು, ಶಕ್ತಿಯನ್ನು ಪಡೆದಿದ್ದರು ಎಂದು ಗ್ರಹಿಸಿದರೆ ತಪ್ಪಾಗುತ್ತದೆ. ೨೧ನೇ ಶತಮಾನಕ್ಕೆ ಕಾಲಿಡಲಿರುವ 'ಆಧುನಿಕ ಭಾರತ'ದಲ್ಲೂ ಸ್ತ್ರೀಯರ ಸ್ಥಾನಮಾನಗಳು ಆರೋಗ್ಯಕರವಾಗಿಲ್ಲ. ಇನ್ನು ಚರಿತ್ರೆಗೆ ಹೋಗಿ ನೋಡುವುದು, ಹುಡುಕುವುದು ಕಷ್ಟವೇ. ಸ್ತ್ರೀಯರಿಗೆ 'ಸ್ವಾತಂತ್ರ್ಯ' ಸಿಗಬೇಕಾದರೆ ಆರ್ಥಿಕ ನೆಲೆಯಲ್ಲಿ ಮೂಲಭೂತ ಬದಲಾವಣೆಗಳಾಗಬೇಕು. ಪುರುಷ ಪ್ರಧಾನ ಸಮಾಜದ ನಿಲುವುಗಳು ಸಡಿಲಬೇಕು.

'ಮನುಸ್ಮೃತಿ'ಯ ಸೂತ್ರದಂತೆ ಸ್ತ್ರೀ ಇಂದಿಗೂ ಪರಾವಲಂಬಿಯಾಗಿದ್ದಾಳೆ. ಅಡಿಗೆ ಮನೆಗೆ ಮಾತ್ರ ಸೀಮಿತ ಎಂಬುದು ನಿಜವಾದರೂ ಅಲ್ಲಿಯೂ ಅವಳಿಗೆ ಸ್ವಾತಂತ್ರ್ಯವಿತ್ತೆ? ಅಲ್ಲಿಯೂ ಪುರುಷನ ನಿಯಂತ್ರಣ ಇದ್ದೇ ಇರುತ್ತಿತ್ತು. ಇದರಿಂದಾಗಿ ಮುದುಡಿಕೊಂಡಿದ್ದ ಸ್ತ್ರೀಯರಿಗೆ ಇಂದಿನ 'ಆಧುನಿಕ'ಯುಗದಲ್ಲಿಯಾದರೂ ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು 'ಹಾಯಾಗಿ ಕಾಲು ಚಾಚ'ಲು ಬಯಸಿದ್ದಾಳೆ. ಹೈದರಾಬಾದ್ ಕರ್ನಾಟಕ ಮಧ್ಯವರ್ಗಕ್ಕೆ ಸೇರಿದ ಕವಯಿತ್ರಿಯರು ಕರ್ನಾಟಕದ ಉಳಿದ ಕವಿಗಳಂತೆ ಸ್ವಾತಂತ್ರ್ಯದ ಅಪೇಕ್ಷೆಗಳನ್ನು ವ್ಯಕ್ತ ಮಾಡಿರುವರು.

ಅಂದು ಇತ್ತು
ಹಲವರ ತುತ್ತನುಂಡು
ತೃಪ್ತಿಗೊಳ್ಳುವ ಮನಸು
ಇಂದು ಬೆಳೆದು
ನನಗೆ ನಾನು ನಿರ್ಮಿಸಬೇಕು
ನನ್ನ ಲೋಕದ ಕನಸು **(ಚುಟುಕ:ಶೈಲಜಾ ಉಡುಚಣ)**

ಸ್ತ್ರೀಯರಿಗೆ ತಮ್ಮ ಆಸೆ ಆಕಾಂಕ್ಷೆಗಳಿಗೆ ಮನಸ್ಸನ್ನು ಒಡ್ಡಿಕೊಳ್ಳುವ ಹಂಬಲವಿರುತ್ತದೆ. ಆದರೆ ಅವಕಾಶವಿರುವುದಿಲ್ಲ. ಬಾಲ್ಯ, ಯೌವನ, ಮುಪ್ಪಿನಲ್ಲಿ ಒಬ್ಬೊಬ್ಬರ ಆಶ್ರಯದಲ್ಲಿ ಬೆಳೆದು ಬದುಕುವ ಅವಕಾಶವನ್ನು ಮಾತ್ರ ಪುರುಷ ಪ್ರಧಾನ ಸಮಾಜ ಅವಳಿಗೆ ಕಲ್ಪಿಸಿದೆ. ಇದರಿಂದ ಬಿಡುಗಡೆ ಹೊಂದಲು, ತನ್ನ ಕನಸಿನ ಲೋಕವನ್ನು ಬದುಕಲು ಹಂಬಿಸುತ್ತಲೇ ಬಂದಿದ್ದಾಳೆ.

ನೀನು ಕೇವಲ ಒಮ್ಮೆ ಅಡಿಗೆ ಮಾಡಿ ಹೆಸರಾದೆ
ಪುರಾಣದಲ್ಲಿ ಭೀಮಾ
ನಾವೋ ನಿತ್ಯವು ಅನ್ನಪೂರ್ಣೆಯರಾಗಿ
ಕಂದಿ ಬೆಂದು ಹಲವು ಅವತಾರ
ತೊಟ್ಟರೂ ಪಟ್ಟ ಬದಲಿಸಲಿಲ್ಲ
ಕಾರಣ-
(ಇವರ) ನಮ್ಮ ಕೈಗೆ ಗದೆ ಬರಲಿಲ್ಲ
ಕಾಲ ಕಾಲಕ್ಕೆ ಹುಟ್ಟಿದ
ದುಶ್ಯಾಸನರ ಎದೆ ಸೀಳುವದಾಗಲಿಲ್ಲ **(ಶೈಲಜಾ ಉಡಚಣ)**

ಇದು ನಿಜವಾದ ಸಂಗತಿ. ಸ್ತ್ರೀಯರ ಅಸಹಾಯಕತೆ ಈ ಕವಿತೆಯಲ್ಲಿ ವ್ಯಕ್ತವಾಗಿದೆ. ಆದರೂ ಮಹಿಳೆಗ 'ಸ್ವತಂತ್ರ 'ವಾಗಿ ಮತ್ತು ಸಬಲೆಯಾಗಿ ಬದುಕಲು ನಿರಂತರ ಹೋರಾಟ ನಡೆಸಿದ್ದಾಳೆ. ಪುರುಷನ ಅಧಿಕಾರವನ್ನು ಪ್ರಶ್ನಿಸುತ್ತ ಬಂದಿದ್ದಾಳೆ.

ಪಾದತೊಳೆದು ಕುಡಿಯಬೇಕನ್ನುವ
ತೀರ್ಥವನು ನಿಮ್ಮ ಮುಖಕ್ಕೆರಚಿ

ಬೆವರು ಸುರಿಸಿ ದುಡಿದು ಬದುಕುತ್ತೇನೆ (ಲಕ್ಷ್ಮಣರೇಖೆ ದಾಟಿದವರು:ವಿಜಯಶ್ರೀ ಸಬರದ)

ಇಂಥ ನಿಲುವು ಆರ್ಥಿಕವಾಗಿ ಗಟ್ಟಿಯಾದಾಗ ಮಾತ್ರ ತಾಳಲು ಸಾಧ್ಯ. ಪುರುಷನ ಅಧೀನದಲ್ಲಿ ಬದುಕುತ್ತ, ದಮನಕ್ಕೆ ಒಳಗಾಗುತ್ತ ಬಂದಿರುವ ಸ್ತ್ರೀಯನ್ನು ಪುರಾಣಗಳು ಮಾತ್ರ ವೈಭವೀಕರಿಸುತ್ತ ಬಂದಿವೆ. ಅತ್ಯುನ್ನತ ಸ್ಥಾನವನ್ನು ಸ್ತ್ರೀಗೆ ಕೊಟ್ಟಿವೆ. ಆದರೆ ಬದುಕಿನಲ್ಲಿ ಕನಿಷ್ಠ ಸ್ಥಾನವನ್ನು ಅನುಭವಿಸುವುದು ವಿಪರ್ಯಾಸದ ಸಂಗತಿಯಾಗಿದೆ. ಸ್ತ್ರೀಯನ್ನು ಗೌರವಿಸುವ ಸ್ಥಾನದಲ್ಲಿ ದೇವರು ನೆಲೆಗೊಂಡಿರುತ್ತಾನೆ ಎಂದು ಪುರಾಣಗಳು ಹೇಳುತ್ತವೆ. ಸಮಾಜದಲ್ಲಿ ಮಾತ್ರ ಯಾವ ಬಗೆಯ ಸ್ವಾತಂತ್ರ್ಯವನ್ನು ಕಾಣದೆ ಸ್ತ್ರೀಯು ನರಳುತ್ತಿದ್ದಾಳೆ. ಈ ವಿಪರ್ಯಾಸವನ್ನು ಈ ಕವಿತೆ ಹೇಳುತ್ತದೆ:

ಶತಮಾನಗಳಿಂದ ಬಂಧಿತಳಾಗಿ
ಕಡೆಗಣಿಸಿಕೊಂಡರೂ
ವಿದ್ಯೆಗೆ ಅಧಿದೇವತೆಯಾಗಿ
ಶಕ್ತಿಯ ಸಂಕೇತವಾಗಿ
ಸಂಪತ್ತಿನ ಒಡತಿಯಾದೆ
ಸಾಲದ್ದಕ್ಕೆ
ಸರ್ವರನು ಸಂತೈಸುವ
ಭೂದೇವಿ ಲೋಕಮಾತೆ
ಮನುಕುಲವ ಪೊರೆವ
ಪರಮ ಪಾವನ ಚರಿತೆ
ಮಾತೆ ಮಾತೆ ಜನ ಮನದ ಸುಪ್ರೀತೆ (ಲೋಕಮಾತೆ:ಸರಸ್ವತಿ ಚಿಮ್ಮಲಗಿ)

ಪುರಾಣ ಕಾಲದಲ್ಲಿ ಯಾರನ್ನು 'ಪಂಚ ಪತಿವ್ರತೆಯರು'ಎಂದು ಕರೆದು ಈ ಹೊತ್ತಿನವರೆಗೂ ಪೂಜ್ಯಸ್ಥಾನದಲ್ಲಿರಿಸಿ ಗೌರವಿಸಲಾಗುತ್ತಿದೆಯೋ ಅವರ ಚರಿತ್ರೆಯನ್ನು ಗಮನಿಸಿದರೆ ಬದುಕಿನಲ್ಲಿ ಅವರೆಲ್ಲರೂ ಪುರುಷನಿಂದ ಅನುಭವಿಸಿದ ನೋವು, ಅಪಮಾನಗಳೇ ಹೆಚ್ಚು. ಅವರಿಗೆ ಪವಿತ್ರದ, ಪಾವಿತ್ರ್ಯದ ಕೀರಿಟ ತೊಡಿಸಿರುವುದು ವಿಪರ್ಯಾಸವೇ. ಇದು ಪುರುಷನ ಕುತಂತ್ರ ಎಂಬುದನ್ನು ಈ ಕವಿತೆ ವ್ಯಕ್ತಪಡಿಸಿದೆ:

ನಿಮ್ಮ ಕಾಮಾಗ್ನಿ ಕುಂಡಕ್ಕೆ
ನಮ್ಮ ಶೀಲವನು ಬಲಿಕೊಟ್ಟು
ನಿಮ್ಮ ಮಾನಾಪಮಾನವನು
ಕಾಪಾಡಲು ನಿಮ್ಮಿಂದಲೇ
ಪತಿವ್ರತೆಯರ ಪಟ್ಟಕ್ಕೇರಿ
ಪ್ರಾತಃಕಾಲದ ಸ್ಮರಣೆಯಲಿ
ಇಂದಿಗೂ ಉಳಿದು ನರಳುತ್ತಿರುವವರು
ನಾವು ಪತಿವ್ರತೆಯರಲ್ಲ (ನಾವು ಪತಿವ್ರತೆಯರಲ್ಲ:ಎಚ್.ಎಸ್.ಮುಕ್ತಾಯಕ್ಕ)

'ನಾವು ಪತಿವ್ರತೆಯರಲ್ಲ'ಎಂದು ಹೇಳುವ ಮೂಲಕ, ಯಾವುದನ್ನು ಪುರುಷ 'ಪವಿತ್ರ'ಎಂದು ಹೇಳುತ್ತ ಸ್ತ್ರೀಯನ್ನು ಬಂಧಿಸಿ, ವಸ್ತುವನ್ನಾಗಿ ಮಾಡಿಕೊಂಡಿದ್ದನೋ ಅದನ್ನೇ 'ಅಪವಿತ್ರ' ಎಂದು ಹೇಳಿ ಪುರುಷನ ಕುತಂತ್ರವನ್ನು ಬಯಲು ಮಾಡಲಾಗಿದೆ. ಈ

ಭಾಗದ ಕವಿಯತ್ರಿಯರಾದ ಶೈಲಜಾ ಉಡುಚಣ, ಬಿ.ಟಿ.ಲಲಿತಾನಾಯಕ, ಸರಸ್ವತಿ ಚಿಮ್ಮಲಗಿ, ಎಚ್.ಎಸ್.ಮುಕ್ತಾಯಕ್ಕ, ವಿಜಯಶ್ರೀ ಸಬರದ, ಪ್ರೇಮಾಶಿರ್ಸಿ, ಲಕ್ಷ್ಮೀದೇವಿ ಶಾಸ್ತ್ರೀ ಮುಂತಾದವರು ಸ್ತ್ರೀ ವಾದಿ ಸಂವೇದನೆಯ ಕವಿತೆಗಳನ್ನು ಬರೆದಿದ್ದಾರೆ. ಪುರುಷನ ಹಿಡಿತದಿಂದ ಬಿಡುಗಡೆಯಾಗುವ, 'ಸ್ವಾತಂತ್ರ್ಯ'ದ ಕನಸು ಕಾಣುವ, ಸಮಾಜದಲ್ಲಿ ಆರೋಗ್ಯಕರ ಸ್ಥಾನಮಾನ ಪಡೆಯುವ ಸ್ತ್ರೀಯ ಹಂಬಲವನ್ನು ಎತ್ತಿ ಹಿಡಿದಿದ್ದಾರೆ. ಸ್ತ್ರೀಯರಾಗಿ ಇವರು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ವಿಶೇಷತೆ ಇದೆ.

ದಮನಕ್ಕೆ ಒಳಗಾದ ಮಹಿಳೆಯರನ್ನೇ ಕುರಿತು ಚೆನ್ನಣ್ಣ ವಾಲೀಕಾರ ಬಹಳಷ್ಟು ಬರೆದಿದ್ದಾರೆ. 'ಮಾದರ ಸಾಬವ್ವ', 'ತಳವಾರ ಮರಿಯಮ್ಮ', 'ಪಾರ್ವತಿ ಹುಸೇನಬಿ' ಈ ಮಹಿಳೆಯರೆಲ್ಲ ಸಮಾಜದಲ್ಲಿ ಮೇಲ್ವರ್ಗದವರ ಕ್ರೌರ್ಯಕ್ಕೆ ಸಿಕ್ಕು ದುರಂತವನ್ನು ಕಂಡವರು. ಜನಪದ ಕಾವ್ಯ ಪ್ರಕಾರಗಳಲ್ಲಿ ಈ ಮಹಿಳೆಯರ ಕಥೆ-ವ್ಯಥೆಯನ್ನು ಬಿಚ್ಚಿಡಲಾಗಿದೆ. 'ಎಲ್ಲಮ್ಮ', 'ಗೆಳತಿ ಇಜ್ಜಮ್ಮನ ತ್ರಿವಿದಿ', 'ಗೆಳತಿ ಕಮಲಳ ಹಾಡು', 'ಗೆಳತಿ ವೀರವ್ವನ ಹಾಡು' ಎಂಬ ಕವಿತೆಗಳು ತ್ರಿಪದಿಯಲ್ಲಿವೆ. ಸಮಾಜದಲ್ಲಿ ನೋವು ಅನುಭವಿಸಿದ ಈ ಮಹಿಳೆಯರ ಬವಣೆಗಳನ್ನು ಕುರಿತಿವೆ. 'ನೀಲಾಸಾನಿಗೆ', 'ಏಕಲವ್ಯನ ತಾಯಿ', 'ಕುಂತಿ', 'ದ್ರೌಪತಿ' ಇವರನ್ನು ಕುರಿತು ವಿವಿಧ ಜಾನಪದ ಕಾವ್ಯ ಪ್ರಕಾರಗಳಲ್ಲಿ ರಚಿಸಿದ್ದಾರೆ. ಶೋಷಕ ಮತ್ತು ಶೋಷಿತ ಎಂಬ ಎರಡು ವರ್ಗಗಳನ್ನು ಮಾಡಿ, ಶೋಷಕರಿಂದ ಶೋಷಿತರಾದ ಈ ಮಹಿಳೆಯರ ಅಪಮಾನ, ನೋವುಗಳ ಚಿತ್ರಣವು ಹಾಡುಗಳಲ್ಲಿ ಚೆನ್ನಣ್ಣ ವಾಲೀಕಾರ ಬರೆದಿದ್ದಾರೆ.

ಮಹಾಪುರುಷರ ನೆನಪುಗಳ ಮೂಲಕ

ಧರ್ಮಕೆ ಧರ್ಮ ಕಲಿಸಿದರು, ಶಾಂತಿಗೆ ಸಹನೆಯ
ಬೋಧಿಸಿದರು, ಬಿಸಿಲಿಗೆ ನೆರಳಾದರು
ಧ್ವನಿಯಿರದ ಕೊರಳಿಗೆ ಧ್ವನಿಯಾದರು
ಬಿದ್ದವರ ಎತ್ತಿದರು, ಮತ
ಮೌಢ್ಯದ ಮುಖದ ಮೇಲೆ ಉಗುಳಿದರು
ಜಾತಿಗೋಡೆಗಳ ಕೆಡವಿದರು ನೀತಿಯ ಕಂಬವ
ನಿಲಿಸಿದರು ಮಾತಿನಲಿ ಮತಿಯನು ತುಂಬಿದರು
ಮಾತಿಗೆ ಕ್ರಿಯೆಯನು ಹೇರಿದರು
ಗುರುವನು ಎದೆಯಲಿ ತೋರಿದರು
ಸಂಸಾರಕೆ ಅಂಜಿ ಮುಖ ಮುಗಿಲಿಗೆ ತಿರುವಿದವರ
ಕಣ್ಣುಗಳ ನೆಲಕ್ಕೆ ತಂದವರು (ಕಣ್ಣುಗಳ ನೆಲಕ್ಕೆ ತಂದವರು:ಅಲ್ಲಮಪ್ರಭು ಚಟ್ನದೂರು)

'ಕಣ್ಣುಗಳ ನೆಲಕ್ಕೆ ತಂದವರು' ಎಂಬ ಕವಿತೆಯ ಹೆಸರೇ ಅರ್ಥಪೂರ್ಣವಾಗಿದೆ. ಮನುಷ್ಯನ ದುಃಖಕ್ಕೆ ಇರುವ ಮೂಲ ಕಾರಣಗಳನ್ನು ಶೋಧಿಸಿ, ಅದರಿಂದ ಬಿಡುಗಡೆ ಹೊಂದುವ ದಾರಿಯನ್ನು ತೋರಿಸಿದ ಮಾನವತಾವಾದಿಗಳನ್ನು ಕುರಿತು ಈ ಕವಿತೆಯಿದೆ. ಮನುಷ್ಯನ ದುಃಖಕ್ಕೆ ಹಲವು ಕಾರಣಗಳಿವೆ. ಚರಿತ್ರೆಯ ಕಾಲಾವಧಿಯಲ್ಲಿ ಮನುಷ್ಯನ ದುಃಖಕ್ಕೆ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿ ಆದ ಸ್ಥಿತ್ಯಂತರಗಳು ಕಾರಣವಾಗುತ್ತ ಬಂದಿವೆ. ಆದರೂ ಸಾಮಾನ್ಯವಾಗಿ ಕೆಳವರ್ಗದವರನ್ನು ಮೇಲ್ವರ್ಗದವರು ಆಳುತ್ತ ಬಂದಿರುವುದು, ಸಾಂಸ್ಕೃತಿಕವಾಗಿ ಕೆಳವರ್ಗದವರನ್ನು ಹಿನ್ನೆಲೆಗೆ ಸರಿಸಿ, ಅವರ ದುಡಿಮೆಯಿಂದಲೇ ಬದುಕುತ್ತ ಬಂದ ಮೇಲ್ವರ್ಗದವರು ಶೋಷಿತರಾಗಿರುವುದು ಚರಿತ್ರೆಯುತ್ತಕ್ಕೂ ಕಾಣುತ್ತದೆ. ಕೆಳವರ್ಗದವರಿಗೆ ಸಮಾಜದಲ್ಲಿ ಯಾವ ಅಧಿಕಾರ,

ಸ್ಥಾನಮಾನಗಳೂ ಕನಿಷ್ಠವಾಗಿಯೂ ಸಿಗದಂತೆ ವ್ಯವಸ್ಥಿತವಾಗಿ ನೋಡಿಕೊಳ್ಳಲಾಗಿದೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮುಂತಾದ ಮಾನವತಾವಾದಿಗಳು ಇತಿಹಾಸದ ಉದ್ದಕ್ಕೂ ನೊಂದು ಬೆಂದವರ, ಅಪಮಾನಗೊಂಡವರ, ಕೀಳರಿಮೆಯಿಂದ ಬಳಲುವವರ, ಅಸಹಾಯಕರ ಪ್ರೀತಿಯಿಂದ ಅಪ್ಪಿಕೊಂಡು, ಅವರ ಕಣ್ಣೀರನ್ನು ಒರೆಸಿ, ಜೀವವಿರುವ 'ಮನುಷ್ಯ' ಎಂಬ ಅರಿವನ್ನು ಮೂಡಿಸಿ ಸ್ವಾಭಿಮಾನ, ಸೃಷ್ಟಿಸಿ ಅವರ ಕತ್ತಲ ಬದುಕಿಗೆ ಬೆಳಕನ್ನು ತುಂಬಲು ಪ್ರಯತ್ನಿಸಿದವರು. ಇಂಥವರ ಈ ಸ್ಥಿತಿಗೆ ಕಾರಣವಾದ ಜಾತಿ, ಧರ್ಮ, ಜನಾಂಗದವರನ್ನು ಮುಟ್ಟಿ ಪ್ರಶ್ನಿಸಿ ಸಂಘರ್ಷಕ್ಕೆ ಪ್ರಯತ್ನಿಸಿ ಸಾಮಾಜಿಕ ವ್ಯವಸ್ಥೆಯನ್ನು ಕದಡಿದರು. ಜಾತಿಯನ್ನು ಅಳಿಸಿ, ಧರ್ಮವನ್ನು ಮನುಷ್ಯನ ನೆಮ್ಮದಿಗೆ ಒಗ್ಗಿಸಿ, ತಾರತಮ್ಯದ ಬದುಕನ್ನು ನಿರಾಕರಿಸಿ ಸಮಾನತೆಯನ್ನು ಸಮಾಜದಲ್ಲಿ ಮೂಡಿಸಲು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಜೆ.ಪಿ.ಪೆರಿಯಾರ್ ಮುಂತಾದ ಧಾರ್ಮಿಕ, ರಾಜಕೀಯ ನಾಯಕರು ಸಮಾಜ ಪರಿವರ್ತನೆಗೆ ಶ್ರಮಿಸಿದ್ದಾರೆ. ಇಂಥ ಮಹಾನ್ ಚೇತನಗಳನ್ನು ಬಂಡಾಯ-ದಲಿತ ಲೇಖಕರು ತಮ್ಮ ಸಾಹಿತ್ಯ ಚಳುವಳಿಗೆ ಬುನಾದಿಯನ್ನಾಗಿ ಮಾಡಿಕೊಂಡಿದ್ದಾರೆ. ಮಾರ್ಕ್ಸ್, ಲೆನಿನ್, ನೆಲ್ಸನ್ ಮಂಡೇಲಾ ಮುಂತಾದವರ ಚಿಂತನೆಯನ್ನು ಚಳುವಳಿಗೆ ಹಿನ್ನೆಲೆಯನ್ನಾಗಿ ಸ್ವೀಕರಿಸಿದೆ. ಮನುಷ್ಯನ ಒಳಿತಿಗೆ ಶ್ರಮಿಸಿದ ಚೇತನವನ್ನು ತನ್ನ ಬೆಂಬಲಕ್ಕೆ ಶಕ್ತಿಯನ್ನಾಗಿ ಮಾಡಿಕೊಂಡಿರುವರು. ಇದರಿಂದಾಗಿಯೇ ಬಂಡಾಯ-ದಲಿತ ಬರಹಗಾರರು ಬಸವ, ಗಾಂಧಿ, ಅಂಬೇಡ್ಕರ್, ಜೆ.ಪಿ.ನೆಲ್ಸನ್ ಮಂಡೇಲಾ, ಮೊಲಾಯಿಸ್ ಮುಂತಾದವರನ್ನು ಕುರಿತು ಕವಿತೆಗಳನ್ನು ಬರೆದಿದ್ದಾರೆ.

ಗಾಂಧಿಜಿಯನ್ನು ಕುರಿತು ಕವಿತೆಯನ್ನು ಬರೆಯದ ಕವಿಯಿಲ್ಲ ಅನ್ನುವಷ್ಟರ ಮಟ್ಟಿಗೆ ಅವರ ಮೇಲೆ ಕವನಗಳಿವೆ. ಈ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಬಹುತೇಕ ಕವಿಗಳು ಗಾಂಧಿಯ ಮೇಲೆ ಬರೆದಿದ್ದಾರೆ. ಗಾಂಧಿಯನ್ನು ಕುರಿತು ಬರೆಯುವುದು ಎಂದರೆ ಇಂಡಿಯಾದ ರಾಜಕೀಯ, ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಬರೆದಂತೆ. ಗಾಂಧಿ ಗಳಿಸಿಕೊಟ್ಟ ಸ್ವಾತಂತ್ರ್ಯ ಈಗ ಯಾರ ಕೈಯಲ್ಲಿದೆ? ಸ್ವಾತಂತ್ರ್ಯ ನಂತರದಲ್ಲಿ ಭಾರತದ ಪರಿಸ್ಥಿತಿ ಏನಾಗಿದೆ?ಗಾಂಧೀ ತತ್ವಗಳ ಗತಿ ಏನಾಗಿದೆ? ಗಾಂಧಿ ಯಾರಿಗೆ ಬೇಕು? ಯಾಕೆ ಬೇಕು? ಎಲ್ಲಿಯವರೆಗೆ ಬೇಕು? ಬ್ರಿಟಿಷರ ಬಂಧನದಲ್ಲಿದ್ದ ಭಾರತವನ್ನು ಸ್ವತಂತ್ರಗೊಳಿಸಿ ಯಾರ ಕೈಯಿಗೆ ಕೊಟ್ಟ? ಪ್ರಸ್ತುತ ಭಾರತದಲ್ಲಿ ಗಾಂಧೀಜಿಯ ಸ್ಥಾನಮಾನಗಳೇನು? ಮುಂತಾದ ಪ್ರಶ್ನೆಗಳು ಹೈದ್ರಬಾದ್ ಕರ್ನಾಟಕದ ಬರಹಗಾರರನ್ನು ಕಾಡಿವೆ. ಬೆರಗು, ವ್ಯಂಗ್ಯ ಕಂಡರೂ ಅಂತಿಮವಾಗಿ ವಿಷಾದ ಎಲ್ಲ ಕವಿತೆಗಳಲ್ಲಿ ಮಡುಗಟ್ಟಿ ನಿಂತಿದೆ.

ಒಂದರ್ಥದಲ್ಲಿ ಗಾಂಧಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು ಎಂಬುದು ನಿಜ. ಅದಷ್ಟೇ ಅವರ ಕನಸಾಗಿರಲಿಲ್ಲ. ಸ್ವರಾಜ್ಯದ ಕನಸು ಕಂಡಿದ್ದರು. ಅಸ್ಪೃಶ್ಯರ ಉದ್ಧಾರದ ಕನಸು ಕಂಡಿದ್ದರು. ಸಮಾಜದಲ್ಲಿ ತತ್ವರಹಿತ ರಾಜಕೀಯ, ದುಡಿಮೆಯಿಲ್ಲದ ಸಂಪತ್ತು, ನೀತಿ ವಿಹೀನ ವಾಣಿಜ್ಯ, ಶೀಲ ಇಲ್ಲದ ಶಿಕ್ಷಣ, ಆತ್ಮಸಾಕ್ಷಿರಹಿತ ಭೋಗ, ಮಾನವತಾಶೂನ್ಯ ವಿಜ್ಞಾನ, ತ್ಯಾಗ ಇಲ್ಲದ ಪೂಜೆ ಇರಬಾರದೆಂದು ಹೇಳಿದ್ದರು. ಅವರ ಕನಸುಗಳಿಗೆ ಜೀವ ಬರಲಿಲ್ಲ. ಬದಲಾಗಿ ಯಾವುದನ್ನು 'ಸಾಮಾಜಿಕ ಪಾತಕಗಳು' ಎಂದು ತಿರಸ್ಕರಿಸಿದ್ದರೋ ಅವೆಲ್ಲವು ರಾರಾಜಿಸುತ್ತಿವೆ. ಅವಿಲ್ಲದೆ ಸಾಮಾಜಿಕ, ರಾಜಕೀಯ, ಬದುಕೇ ಇಲ್ಲ ಎಂಬುವಷ್ಟು ತುಂಬಿವೆ. ವ್ಯಂಗ್ಯವೆಂದರೆ ಈ ಪಾತಕಗಳು ಗಾಂಧೀಯ ಫೋಟೋದ ಸಾಕ್ಷಿಯಲ್ಲಿ ಹಗಲು ಬೆಳಕಿನಲ್ಲಿ ನಡೆಯುತ್ತವೆ.

ಸಬಕೋ ಸನ್ಮತಿ ದೇ ಭಗವಾನ್
ಕೊನೆಯವರೆಗೂ ನಡೆಯಬೇಕೇನೋ
ನಿನ್ನ ಈ ಪ್ರಾರ್ಥನೆ,
ವೀಳ್ಯ ಎತ್ತಿದ್ದೇವೆ, ನೋಡೋಣ
ನೀನುಂಟು ನಾವುಂಟು (**ನೀನುಂಟು ನಾವುಂಟು:ಶಿವಶರಣ ಜಾವಳಿ**)

ಈ ಕವಿತೆಯ ವ್ಯಂಗ್ಯ ಮಾರ್ಮಿಕವಾಗಿದೆ. ಆತ್ಮಸಾಕ್ಷಿ ಇರುವ ಮನುಷ್ಯನ ಮರ್ಮಕ್ಕೆ ತಗಲುವಂತಿದೆ. 'ಎಲ್ಲರಿಗೆ ಸದ್ಗತಿ ಕೊಡು'ಎಂಬ ಗಾಂಧಿಯ ಪ್ರಾರ್ಥನೆ ಮಾತ್ರ ಜೀವಂತವಾಗಿದೆ. ತಮ್ಮ ತಮ್ಮ ಸದ್ಗತಿಯನ್ನು ಮಾತ್ರ ಬಯಸುತ್ತ 'ಸಬಕೋ ಸನ್ಮತಿ ದೇ ಭಗವನ್ 'ಎಂಬ ಪ್ರಾರ್ಥನೆ ಮಾತ್ರ ಬಾಯಿಯಲ್ಲಿದೆ. ಇದು ಗಾಂಧಿಗೂ ಮತ್ತು ಜನರಿಗೂ ಇರುವ ಸಂಬಂಧದ ವಾಸ್ತವ ಚಿತ್ರ. ಈ ವಾಸ್ತವವನ್ನು ಗ್ರಹಿಸಿಯೇ,

ಗಾಂಧಿ:
ಹುಟ್ಟು ಕುರುಡರ
ಓಣಿಯಲ್ಲಿ
ಚಾಳೀಸು ಮಾರಿದವ (ಗಾಂಧಿ:ಜಂಬಣ್ಣ ಅಮರಚಿಂತ)

ಎಂಬ ಅರ್ಥವತ್ತಾದ ರೂಪಕ ಸೃಷ್ಟಿಯಾಗಿದೆ. ಹುಟ್ಟು ಕುರುಡರಿಗೆ ದೃಷ್ಟಿನೀಡುವ ಸಲುವಾಗಿ ಚಾಳೀಸಿನ ಅಗತ್ಯವಿಲ್ಲ. ಆದರೆ ಕುರುಡನ್ನು ಮರೆಮಾಚಲು, ದೃಷ್ಟಿಯಿಲ್ಲದಂತೆ ಕಾಣುವ ಕಣ್ಣುಗಳಿಗೆ ಬಾಹ್ಯ ಅಂದಕ್ಕಾಗಿ ಚಾಳೀಸಿನ ಅಗತ್ಯ ಬೀಳುತ್ತದೆ. ಒಟ್ಟಿನಲ್ಲಿ ಕುರುಡರಿಗೆ ಚಾಳೀಸುಬೇಕು. ಆದರೆ ಚಾಳೀಸಿನ ನಿಜವಾದ ಉಪಯೋಗಕ್ಕಲ್ಲ. ಗಾಂಧಿ ಕೂಡ ಚಾಳೀಸಿನಂತೆ ಈ ಅಂದರ ನಾಡಿನಲ್ಲಿ ಉಪಯೋಗವಾಗುತ್ತಿದ್ದಾನೆ. ಈ ಕವಿತೆ ಧ್ವನಿಸುವಂತೆ ಗಾಂಧಿ ಮತ್ತು ಗಾಂಧಿ ತತ್ವಗಳು ಬೇಕು. ಬದುಕಿನಲ್ಲಿ ಅಳವಡಿಸಿಕೊಳ್ಳಲು ಅಲ್ಲ. 'ಗಾದಿ ಏರುವವರಿಗೆ ಗಾದಿ ಏರುವವರೆಗೆ' ಗಾಂಧಿ ಬೇಕಾಗುತ್ತಾನೆ ಎಂದಿರುವುದು, ಇಂದಿನ ರಾಜಕೀಯ ಬದುಕಿನಲ್ಲಿ ಕಾಣುವ ಸತ್ಯ ಸಂಗತಿಯಾಗಿದೆ. ಪ್ರತಿಯೊಬ್ಬ ರಾಜಕೀಯ ವ್ಯಕ್ತಿ ಅಧಿಕಾರ ಸಿಗುವವರೆಗೆ ಗಾಂಧಿ ಭಕ್ತ. ಗಾಂಧಿ ತತ್ವಗಳ ಅನುಯಾಯಿ ಆಗಿರುತ್ತಾರೆ. ಗಾಂಧಿಯ ಅವತಾರದಂತೆ ವರ್ತಿಸುತ್ತಾರೆ.

ಗಾಂಧಿ ಬೇಡ
ಅಹಿಂಸೆಯ ಪುನರಾವತಾರಕ್ಕೆ
ಗಾದಿಗೇರುವುದೇ ಈಗ ಗಾಂಧಿವಾದ (ಗಾಂಧಿ:ಅಲ್ಲಮಪ್ರಭು ಬೆಟ್ಟದೂರು)

'ಗಾದಿಗೇರುವುದೇ' ಎಂದಿರುವ ವ್ಯಂಗ್ಯದ ಹಿಂದೆ ಈ ದೇಶದ ದುರಂತವಿದೆ. ಇದು ಕೇವಲ ಗಾಂಧಿವಾದಿಗಳಲ್ಲಿ ಮಾತ್ರ ಕಾಣಸುವುದಿಲ್ಲ. ಜೆ.ಪಿ., ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಮುಂತಾದವರ ಅನುಯಾಯಿಗಳಿಗೂ ಇದು ಅನ್ವಯಿಸುತ್ತದೆ. ಭಾರತದ ರಾಜಕಾರಣಿಗಳಲ್ಲಿ ನಿರ್ದಿಷ್ಟ ತತ್ವಕ್ಕಾಗಿ ಅಧಿಕಾರ ಹಿಡಿಯುವುದೇ ಮಾಯವಾಗಿದೆ. ಕೇವಲ ಅಧಿಕಾರವನ್ನು ಅನುಭವಿಸುವುದಕ್ಕಾಗಿ ಬಗೆಬಗೆಯ ವೇಷಗಳನ್ನು ತೊಟ್ಟು ಜನರ ಮುಂದೆ ಬರುತ್ತಾರೆ.

ನ್ಯಾಯ ನೀತಿ ತಳಕ್ಕೊತ್ತಿ
ಸತ್ಯತತ್ವ ಮೂಲಿಗೊತ್ತಿ
ಹುಚ್ಚೆದ್ದು ಕುಣಿಯೋ ರಾಕ್ಷಸರನ್ನು ನೋಡಾಕ
ಗಾಂಧಿ ನೀ ಖಂಡಿತಾ ಇರಬೇಕು (ಗಾಂಧಿ ನೀ ಇರಬೇಕಿತ್ತು:ಬಸವರಾಜ ಸಬರದ)

ನೀ ಕಟ್ಟಿದ ರಾಮರಾಜ್ಯದ ಕನಸಿನ ಕಳಸದ ಸುತ್ತಲೂ
ಕಾಗೆ ಹದ್ದುಗಿಡುಗ ಪಹರೆ ಹೊಡಿಯಾಕ ಹತ್ತಿ
ಭಾಳ ದಿವ್ಸಾತು (ಗಾಂಧಿ ಮತ್ತು.......:ಬಸವಲಿಂಗ ಸೊಪ್ಪಿಮಠ)

ಈ ಲೇಖಕರು ಗಾಂಧಿಯನ್ನು ಸಮಗ್ರ ನೈತಿಕತೆಯ ಪರಿಪೂರ್ಣ ರಾಜಕಾರಣದ ಪ್ರತಿಮೆಯಾಗಿ ಸ್ವೀಕರಿಸಿರುವರು. ಗಾಂಧಿ ಕುರಿತು

ಇನ್ನೊಂದು ಬಗೆಯ ಸತ್ಯವನ್ನು ಹೇಳುವ ಅಂಬೇಡ್ಕರ್ ವಾದ ನಕ್ಸಲ್ ವಾದಗಳ ಚಿಂತನಾಕ್ರಮಕ್ಕೆ ತೆರೆದುಕೊಂಡಿಲ್ಲದಿರುವುದು ಇದಕ್ಕೆ ಕಾರಣವಿರಬೇಕು.

ಬಸವಣ್ಣನ ಮೂರ್ತಿಗೆ ಸ್ವಲ್ಪ ಅಪಚಾರವಾದಂತೆ ಏನಾದರೂ ಆದರೆ ಸಾಕು ಹರತಾಳ, ಬಂದ್ ನಡೆಯುತ್ತದೆ. ಅಂಬೇಡ್ಕರ್ ಮೂರ್ತಿಗೆ ಅವಮಾನವಾದರೆ ದೇಶ ಉರಿದುಹೋಗುತ್ತದೆ. ಇಬ್ಬರಿಗೂ ಅಭಿಮಾನಿಗಳು ಇದ್ದಾರೆ. ಆದರೆ ಗಾಂಧಿಗೆ ಯಾವ ಜಾತಿಯ ಅಭಿಮಾನಿಗಳಿಲ್ಲ. ಹೀಗಾಗಿ ಗಾಂಧಿ ಮೂರ್ತಿಗೆ ಧಕ್ಕೆಯಾದರೂ ಸರಿ, ಅಪಮಾನವಾದರೂ ಸರಿ, ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಒಂದು ವೇಳೆ ಲೆಕ್ಕಕ್ಕೆ ತೆಗೆದುಕೊಂಡರೂ 'ಮಹಾತ್ಮ'ನೆಂದು ತಿಳಿದು ಶಾಂತವಾಗಿ ಸರಿಪಡಿಸುತ್ತಾರೆ. ಬಸವ, ಅಂಬೇಡ್ಕರ್ ಅವರ ಮೂರ್ತಿಗೆ ಅಪಚಾರವಾದರೆ ಉಗ್ರವಾಗಿಯೇ ಸರಿಪಡಿಸಬೇಕಾಗುತ್ತದೆ. ಯಾಕೆಂದರೆ ಅವರು ತಮ್ಮ ತಮ್ಮ ಜಾತಿ ಅಭಿಮಾನಿಗಳನ್ನು ಗಳಿಸಿಕೊಂಡಿದ್ದಾರೆ. ಗಾಂಧಿಯಾದರೆ ಈ ದೇಶ, ಈ ಜನ ನನ್ನದು ಅಂದದ್ದೇ ತಪ್ಪಾಗಿದೆ ಎಂದು **'ಗಾಂಧಿ ಮತ್ತು ವಾರಸುದಾರರು'** (ಕೆರಳ್ಳಿ ಲಕ್ಷ್ಮಾರೆಡ್ಡಿ) ಎಂಬ ಕವಿತೆಯಲ್ಲಿ ವ್ಯಂಗ್ಯವಿದೆ. ಒಳಗೆ ಜನರ ಅಜ್ಞಾನ ಕಂಡು ವಿಷಾದ ತುಂಬಿದೆ. ಬಸವ, ಅಂಬೇಡ್ಕರ್ ಇದಕ್ಕೆ ಕಾರಣವಲ್ಲ ಜನರ ವಿವೇಕದ ಸಮಸ್ಯೆ ಇದು.

ಗಾಂಧಿ ನೀ ಬಾಳ್ ತಪ್
ಮಾಡಿಬಿಟ್ಟಿ
ಇಡೀ ದೇಶ ನಂದ ಅಂದಿ
ನಾವೆಲ್ಲ ಒಂದ ಅಂದಿ
ಬುದ್ದ-ಬಸವ-ಅಂಬೇಡ್ಕರ್‌ರ್ಥಂಗ್
ಯಾರ ಮನುಷ್ಯಾನೂ ಅನಿಸಿಕೊಳ್ಳಲಿಲ್ಲ
ಅದಕ ಗಾಂಧಿ
ನಿನಗ ಯಾರ ಏನ್ ಮಾಡಿದ್ರು
ಬೀದಿಗಿಳಿಯೋರ್ ಒಬ್ರೂ ಇಲ್ಲ
ಯಾರೂ ಕೇಳೋರಿಲ್ಲ
ಯಾರೂ ಕೇಳೋರಿಲ್ಲ

'ಬಾಪೂಜಿ', **'ಅಂತರಂಗ ಬಹಿರಂಗ'** (ಗವಿಸಿದ್ದ ಎನ್.ಬಳ್ಳಾರಿ), **'ನಾವೆಲ್ಲ ನಿನ್ನ ಮಂದಿ'** (ಗುರುಬಸಯ್ಯ ಅಮ್ಮಾಪುರ), **'ಗಾಂಧಿ'** (ಸರಸ್ವತಿ ಚಿಮ್ಮಲಗಿ), **'ಬಾಪೂವಿನ ಗೋರಿಯ ಸುತ್ತ'** (ಈರಪ್ಪ ಎಂ.ಕಂಬಳಿ), **'ಗಾಂಧಿ'** (ಪ್ರಭು ಖಾನಾಪುರ), **'ನೆನಪು'** (ಭಗವಂತಪ್ಪ ಬುಳ್ಳಾ), **'ಗಾಂಧಿಗೊಂದು'** (ಮಹಾಂತೇಶ ಮಸ್ಕಿ), **'ಯುಗಪುರುಷ ಗಾಂಧಿ'** (ಎಂ.ಲಕ್ಷ್ಮಣ) ಮುಂತಾದ ಕವನಗಳು ಗಾಂಧಿಯನ್ನು ಕುರಿತಿವೆ. ಆದರೆ ಅವೆಲ್ಲವೂ ಭಾರತದ ಸ್ಥಿತಿಯನ್ನು ಎತ್ತಿ ತೋರಿಸುತ್ತವೆ. 'ಸುಖಿರಾಜ್ಯ'ದ ಕನಸು ಕಂಡು ಅದಕ್ಕಾಗಿ ಶ್ರಮಿಸಿ ಜೀವವನ್ನೇ ಬಲಿಕೊಟ್ಟ ನಿಜ. ಆದರೆ ಗಾಂಧಿಯ ಕನಸು ಒಡದು ಚೂರಾಗಿ ಹೋಗಿದೆ. ನೆಮ್ಮದಿ, ಸುಖ, ಸ್ವಾತಂತ್ರ್ಯ ಎಂಬುದು ಭಾರತದಲ್ಲಿ ಉಳಿದಿಲ್ಲ. ಉಳಿದಿದ್ದರೆ ಕೇವಲ ಅಲ್ಪಸಂಖ್ಯಾತರಾಗಿರುವ ರಾಜಕಾರಣಿಗಳಿವೆ, ಬಂಡವಾಳಶಾಹಿಗಳಿಗೆ, ಅಧಿಕಾರಸ್ಥರಿಗೆ ಮಾತ್ರ. ಜನಸಾಮಾನ್ಯರ ಬದುಕು ಅತಂತ್ರವಾಗಿ ಅಸ್ತವ್ಯಸ್ತವಾಗಿ ನೆಲೆಯಿಲ್ಲದಂತಾಗಿದೆ ಎಂಬ ವಿಷಾದವೇ ಈ ಕವಿತೆಗಳಲ್ಲಿ ತುಂಬಿದೆ.

ಈ ವಿಷಾದ ಗಾಂಧಿಯ ಬಗ್ಗೆ ಮಾತ್ರವಲ್ಲ. ಬಸವಣ್ಣನ ಬಗ್ಗೆ, ಅಂಬೇಡ್ಕರ್ ಬಗ್ಗೆ ಕೂಡ ಇದೆ. ದಲಿತರ ಸ್ವಾಭಿಮಾನದ

ಸಂಕೇತವಾಗಿ ಹುಟ್ಟಿ ಬಂದಿದ್ದ ಅಂಬೇಡ್ಕರರು, ದಲಿತರಾಗಿಯೇ ಹುಟ್ಟಿದ್ದರಿಂದ ಅವಮಾನ, ನೋವು ಸ್ವತಃ ಅನುಭವಿಸಿದವರಾದ್ದರಿಂದ ದಲಿತರ ನಾಡಿಮಿಡಿತ ಬಲ್ಲವರಾಗಿ, ಅವರಲ್ಲಿ ಸ್ವಾಭಿಮಾನವನ್ನು ಬಿತ್ತಿದರು. ಜೀವನದುದ್ದಕ್ಕು ದಲಿತರ ಏಳಿಗೆಗಾಗಿ ದುಡಿದರು. ಭಾರತೀಯರ ದುರಂತವೆಂದರೆ ಯಾವುದೇ ಮಹಾವ್ಯಕ್ತಿಯ ತತ್ವ ಚಿಂತನಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕುವ ಬದಲು ಅವರನ್ನು ದೇವರನ್ನಾಗಿ ಪೂಜಿಸಲು ಶುರು ಮಾಡುತ್ತಾರೆ. ಇದಕ್ಕೆ ನಿದರ್ಶನಗಳು ಚರಿತ್ರೆಯುದ್ದಕ್ಕು ಸಿಗುತ್ತವೆ.

ನೀ
ಏನಾರಾ ಆಗು
ದೇವರು ಮಾತ್ರ ಆಗಬ್ಯಾಡ **(ದೇವರು ಆಗಬೇಡ:ಕಾಶೀನಾಥ ಅಂಬಲಿಗೆ)**

ಮಹಾವ್ಯಕ್ತಿಯ ಚಿಂತನಗಳಿಗೆ ಗೌರವ ಸಿಗುವ ಬದಲು ಬರೀ ವ್ಯಕ್ತಿಗೆ ಗೌರ ಸಿಗುವುದರಿಂದ ಯಾರಿಗೂ ಪ್ರಯೋಜನವಿಲ್ಲ. ದೇವರ ಅಸ್ತಿತ್ವವನ್ನೇ ತಿರಸ್ಕರಿಸಿದ ವ್ಯಕ್ತಿಗಳನ್ನೇ ದೇವರನ್ನಾಗಿ ಮಾಡುವ ಗುಣ ಈ ದೇಶದಲ್ಲಿ ಬೆಳೆದುಬಿಟ್ಟಿದೆ. ಬುದ್ಧನನ್ನು ದೇವರನ್ನಾಗಿ ಪರಿವರ್ತಿಸಿದ್ದರ ಹಿಂದೆ ವೈದಿಕ ಧರ್ಮದ ಕುತಂತ್ರವಿದೆ ಎಂಬುದು ಎಲ್ಲರಿಗೆ ತಿಳಿದ ವಿಷಯವೇ. ಅದರಂತೆಯೇ ಮಹಾವ್ಯಕ್ತಿಗಳು ದೇವರ ಸ್ಥಾನಕ್ಕೆ ಏರಿಸುವುದರ ಹಿಂದೆ ಹಿತಾಸಕ್ತಿಗಳ ಕೈವಾಡಗಳಿರುತ್ತವೆ. ಅಸಹಾಯಕನಾದ ಕವಿ 'ದೇವರು ಮಾತ್ರ ಆಗಬ್ಯಾಡ' ಎಂದು ಮೊರೆ ಇಡುವುದರ ಹಿಂದೆ ಈ ನೋವು ಕಾಣಿಸುತ್ತದೆ.

'ಮೂಕನಾಯಕನಿಗೆ' (ಎಂ.ಲಕ್ಷ್ಮಣ), **'ಮರೆಯಲಾರದ ಅಂಬೇಡ್ಕರ್'** (ವಿಜಯಶ್ರೀ ಸಬರದ), **'ಅಂಬೇಡ್ಕರ್ ಮತ್ತು ಪ್ರಜಾಪ್ರಭುತ್ವ'** (ಸೂಗಯ್ಯ ಹಿರೇಮಠ), **'ಸಂವಿಧಾನ ಶಿಲ್ಪಿ'** (ಸಿದ್ಧರಾಮ ಹಿರೇಮಠ) ಮತ್ತು ಚೆನ್ನಣ್ಣ ವಾಲೀಕಾರರ ನಾಲ್ಕಾರು ಪದ್ಯಗಳು ಅಂಬೇಡ್ಕರ್ ಅವರನ್ನು ಕುರಿತಿವೆ. ಅಂಬೇಡ್ಕರರ ಬದುಕೇ ದಲಿತರಿಗೆ ದಾರಿ ದೀಪದಂತಿದೆ. ದಲಿತರ ಬಗೆಗಿನ ಅವರ ಪ್ರೀತಿ, ಅದಕ್ಕಾಗಿ ನಡೆಸಿದ ಹೋರಾಟ ದಲಿತರಲ್ಲಿ 'ನಾವು ಶೋಷಿತರು' ಎಂಬ ಪ್ರಜ್ಞೆ ಮೂಡಿಸಿದ್ದುದು ಅಪಾರ ಸಾಧನೆಯಾಗಿದೆ. ಆದರೆ ಅವರು ಇಂದು ಇಲ್ಲ. ಅವರ ಬದುಕಿನ ಚರಿತ್ರೆಯಿದೆ. ಹೋರಾಟದ ಮಾದರಿಗಳಿವೆ, ತತ್ವ ಚಿಂತನೆಗಳಿವೆ. ಆದರೂ ಅವರು ಕಣ್ಮರೆಯಾಗಿ ದಲಿತರನ್ನು ಪುನಃ ಕತ್ತಲೆಗೆ ನೂಕಿದಂತಾಗಿದೆ ಎಂಬ ವಿಷಾದ, ಕೊರಗು ಈ ಕವಿತೆಗಳಲ್ಲಿದೆ. ಈಗಿನ ರಾಜಕಾರಣಿಗಳಿಗೆ 'ದಲಿತೋದ್ಧಾರ'ಎಂಬುದು ಒಂದು ಹುಸಿ ಅಸ್ತ್ರ ಹಿಡಿದು ಗದ್ದಿಗೆ ಏರಲು ಸೋಪಾನವಾಗಿ ಮಾಡಿಕೊಂಡಿದ್ದಾರೆಂಬ ವ್ಯಥೆಯೂ ಇಲ್ಲಿದೆ.

ನಮಗೀಗ ತುಂಬ
ಲಾಭದಾಯಕ ಧಂದೆಗೆ
ಸರಕುಗಳಾಗುತ್ತಿವೆ **(ಬಸವ-ಅಂಬೇಡ್ಕರ್:ಕೆರಳ್ಳಿ ಲಕ್ಷ್ಮಾರೆಡ್ಡಿ)**

ಈ ಮಾತು ನಿಜವೆನಿಸಿದರೂ **'ಈ ನೆಲದ ನೀತಿ'** (ಬಿ.ಟಿ.ಲಲಿತಾನಾಯಕ) ಕವಿತೆಯಲ್ಲಿ ಆಶಾವಾದವಿದೆ. ಮನು ಬಿತ್ತಿ ಬೆಳೆದದ್ದನ್ನು ಅಂಬೇಡ್ಕರ್ ಕಡಿದು ಹಾಕಲು ಪ್ರಯತ್ನಿಸಿದರೂ ಕೊಡಲಿಗೆ ದಕ್ಕಲಿಲ್ಲ ಎಂಬ ಮಾತು ಸರಿಯೆ. ಜಾತಿ, ಧರ್ಮಗಳ ಬೇರುಗಳು ನೆಲದಲ್ಲಿ ಜೀವ ಹಿಡಿದು ಕುಳಿತಿರುತ್ತವೆ. ಅಗೆದು ತೆಗೆಯುವುದು ಸುಲಭವಲ್ಲ. ಅಂಬೇಡ್ಕರ್ ಅಂಥವರು ಚರಿತ್ರೆಯ ಉದ್ದಕ್ಕು ಅಗೆದು ತೆಗೆಯಲು ಪ್ರಯತ್ನಿಸಿದ್ದಾರೆ. ಸೋತಿದ್ದಾರೆ, ಗೆದ್ದಿದ್ದಾರೆ.

ಆದರೂ ಏನಂತೆ
ನೀ ಹೊತ್ತಿಸಿಹೋದ ಹಣತೆ
ಬೆಳಕು ಚೆಲ್ಲುತಿದೆ ಮೂಲೆ ಮೂಲೆಗೂ

ಮೂಕ ಹೃದಯದ ತುಂಬ
ಮಾತು ಮಮತೆ
ನಿನ್ನ ತೋರು ಬೆರಳೇ
ನಮ್ಮ ದಾರಿ ದೀವಿಗೆ ಬಾಬಾ **(ಈ ನೆಲದ ನೀತಿ:ಬಿ.ಟಿ.ಲಲಿತಾನಾಯಕ)**

ಇಂಥ ಆಶಾವಾದವನ್ನು ದಲಿತರು ಇಟ್ಟುಕೊಳ್ಳಲೇಬೇಕು ಎಂಬಂತಿದೆ. ಜೊತೆಗೆ ಅಂಬೇಡ್ಕರ್ ಎಂಬ ಒಬ್ಬ ಮನುಷ್ಯನಿದ್ದ ಬಗ್ಗೆ ಮಾಹಿತಿ ಇಲ್ಲದ ದಲಿತರು ಈ ನೆಲದಲ್ಲಿದ್ದಾರೆಂಬ ಎಚ್ಚರಿಕೆಯೂ ನಮ್ಮನ್ನು ಚಿಂತನೆಗೆ ಗುರಿ ಮಾಡುತ್ತದೆ. **'ಅಂಬೇಡ್ಕರ್ ಮಾಹಿತೆ ಅದ ನಿಮಗ?'** (ಬಿ.ಟಿ.ಲಲಿತಾನಾಯಕ) ಕವಿತೆಯಲ್ಲಿ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಎಂಬುವವರ ಹೆಸರನ್ನು ಮಾತ್ರ ಕೇಳಿದವರಾದರೂ ಇದ್ದಾರೆಂಬ ಆಶಾವಾದವನ್ನು ನುಚ್ಚು ನೂರುಮಾಡುವಂತೆ, ಹೆಸರನ್ನು ಕೇಳದ ಜನ ಈ ನೆಲದ ಮೇಲೆ ಇದ್ದಾರೆಂಬುದು ಭಯಾನಕವಾದ ಸಂಗತಿಯಾದರೂ ಅದು ವಾಸ್ತವ ಸಂಗತಿಯೇ.

ಬಂಡಾಯ-ದಲಿತ ಸಾಹಿತ್ಯ ಚಳುವಳಿಗೆ ನೆಲ್ಸನ್ ಮಂಡೇಲಾ, ಬೆಂಜಾಮಿನ್ ಮೊಲಾಯಿಸ್ ಮುಖ್ಯರಾಗಿ ಕಾಣುತ್ತಾರೆ. ಇವರ ಹೋರಾಟ ಸ್ಫೂರ್ತಿಯನ್ನು ನೀಡುತ್ತದೆ. ಗಾಂಧಿಯಂತೆ ಮಂಡೇಲಾ ತನ್ನ ಕಪ್ಪು ಬಂಧುಗಳ ಬಿಡುಗಡೆಗಾಗಿ ಹೋರಾಡಿದವನು. ಬಿಳಿಯರ ದಬ್ಬಾಳಿಕೆಗೆ ದಕ್ಷಿಣ ಆಫ್ರಿಕದ ಕಪ್ಪು ಜನರು ಅನುಭವಿಸಿದ ಹಿಂಸೆ-ನೋವು ಮೊಲಾಯಿಸ್‌ನ ಸಾವಿಗೆ ಇಲ್ಲಿನ ಕಾವ್ಯ ಮಿಡಿಯುತ್ತದೆ. ೨೭ ವರ್ಷಗಳ ಕಾಲ ಬಿಳಿಯರ ಸೆರೆಮನೆಯಲ್ಲಿದ್ದರೂ ಹೋರಾಟದ ಕಾವಿಗೆ ಮುಪ್ಪು ತಂದುಕೊಳ್ಳದೆ ತನ್ನ ಜನರನ್ನು ಬಿಡುಗಡೆ ಮಾಡಿದ ಮಂಡೇಲಾ ಮಹಾವ್ಯಕ್ತಿಯಾಗಿ ಕಂಡಿದ್ದಾನೆ. ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ಕ್ರೌರ್ಯಕ್ಕೆ ಕಪ್ಪುಜನ ನಡೆಸಿದ ಹೋರಾಟ, ಅಲ್ಲಿ ನಡೆದ ದಾರುಣ ಹತ್ಯೆಗಳು, ಅಮಾನವೀಯ ವರ್ತನೆಗಳೆಲ್ಲವೂ ಇಲ್ಲಿಯ ನೆಲದಲ್ಲಿ ನಡೆದಂತೆ ಆ ಸಾವು-ನೋವು ನಮ್ಮದೆಂಬಂತೆ ಬಂಡಾಯ-ದಲಿತ ಕಾವ್ಯ ಅನುಭವಿಸಿ ಮಿಡಿದಿದೆ. ಮೊಲಾಯಿಸನ ಸಾವು, ರೂಪಾಕನ್ವರಳ ಬಲಿ ನಮ್ಮ ಸಹೋದರ-ಸಹೋದರಿಯರದಾಗಿ ಪರಿಣಮಿಸಿದೆ. ಭೂಪಾಲದ ಅನಿಲ ದುರಂತ, ಕುದುರೆಮೋತಿ ಪ್ರಕರಣ, ಕಿಲಾರಿ ದುರಂತ, ಪಂಜಾಬ್, ಕಾಶ್ಮೀರಗಳಲ್ಲಿ ನಡೆಯುವ ಹತ್ಯೆ, ಚಂಡಮಾರುತಗಳಿಗೆ ಬಲಿಯಾಗುವ ಜನ, ಮಂಡಲ್ ವರದಿ, ಬಾಬರಿ ಮಸೀದಿ, ರಾಮಜ್ಯೋತಿ ಮೆರವಣಿಗೆ ಮುಂತಾದ ಪ್ರಕರಣಗಳಲ್ಲಿ ಅಮಾಯಕರ ಸಾವಿಗೆ ಈ ಕಾವ್ಯ ಸ್ಪಂದಿಸಿದೆ. ಸಾಧ್ಯವಾದ ಕಡೆ ನ್ಯಾಯಕ್ಕಾಗಿ ಹೋರಾಡಿದೆ. ಇದು ಬಂಡಾಯ-ದಲಿತ ಕಾವ್ಯದ ಮುಖ್ಯ ಗುಣವಾಗಿದೆ.

ನೆಲ್ಸನ್ ಮಂಡೇಲಾ ಕುರಿತ ಕವನಗಳು:

ಹೆಪ್ಪು ಗಟ್ಟಿದ ಹಿಮದ ರಾಶಿಗೆ
ಮೂಡಿ ಬಂದ ಸೂರ್ಯನೆ
ಪಾಶ್ಚಾತ್ಯರ ವರ್ಣ ನೀತಿಗೆ
ಬೇಡಿ ತೊಡಿಸಿದ ಧೀರನೆ **(ಸೂಗಯ್ಯ ಹಿರೇಮಠ)**

ಮುಳ್ಳು ಬೇಲಿಗೆ
ಹರಡಿದ ಮಲ್ಲಿಗೆ ಮಂಡೆಲಾ
ಘಮ-ಘಮಿಸುತ್ತಿರುವ
ಪರಿಮಳ ಮಂಡೆಲಾ
ಮೊನಚು ಹೃದಯಗಳ ಮೇಲೆ
ಹರಡುತ್ತಾನೆ ಹೂವ ರಾಶಿ

ಬಿಳಿಯ ಮುಳ್ಳುಗಳ ಮೇಲೆ
ಕಟ್ಟುತ್ತಾನೆ ಹಸಿರು ತೋರಣ (ವಿಜಯಶ್ರೀ ಸಬರದ)

ಆಳುವ ಪ್ರಭುಗಳಿಗೆ
ಯುಗ ಯುಗಕೂ ಎಚ್ಚರಿಕೆಯಾಗಿ
ಆತಂಕದ ಅನಲಾಗಿ
ಪುಕ್ಕರಿಗೆ ಅಚ್ಚರಿಯಾಗಿ
ಹೋರಾಟಗಾರರಿಗೆ ಮೆಚ್ಚಿಗೆಯಾಗಿ
ಆದರ್ಶವಾಗಿ, ಸವಾಲಾಗಿ
ಬೆಂಜಾಮಿನ್ ಬೆಳೆಯುತ್ತಿದ್ದಾನೆ (ಅಲ್ಲಮಪ್ರಭು ಬೆಟ್ಟದೂರು)

ನಿನ್ನ ಎದೆಯ ರಕ್ತ ಚಿಮ್ಮಿ
ಹರಿದು ಕಪ್ಪು ಭೂಮಿಯಲ್ಲಿ
ಮಣ್ಣು ಬೆರೆತು ಹೋಯಿತು
ಜಗದ ಕಣ್ಣು ತೆರೆಸಿತು (ಪ್ರಭುದೇವ ಹಾದಿಮನಿ)

ರೂಪಾಕನ್ವರ ಕುರಿತ ಕವನ:

ಸತ್ತ ಸಂಪ್ರದಾಯವನ್ನು
ಜೀವಂತ ಸುಟ್ಟುಕೊಂಡು
ಮರು ಹುಟ್ಟು ಹಾಕಿದಿ
ಗಂಡ ಸತ್ತ ಮಹಿಳೆಯರ
ಬಾಳು ಮೂರಾ ಬಟ್ಟೆ ಮಾಡಿ
ಚಿತೆಗೇರುವ ಚಿಂತೆಯನ್ನ
ಮನದಲ್ಲಿ
ಬೇರು ಬಿಟ್ಟೆ
ನಿದ್ದೆಯಲ್ಲೂ ಎದ್ದು
ಕೂಡುವ ಹಾಗೆ ಮಾಡಿ
ಹಾಲಾಹಲವೆಬ್ಬಿಸಿ ರೂಪಾ
ಎಲ್ಲವನ್ನೂ
ಕುರೂಪ
ಗೊಳಿಸಿದಿ (ಪುಹ್ಲಾದ ಬೆಟಗೇರಿ)

೨೦ನೆಯ ಶತಮಾನ ದಾಟುವ ಹಂತದಲ್ಲಿದ್ದಾಗ ಯಾವುದು ನಡೆಯಬಾರದೋ ಅದು ನಡೆದು ದೇಶವನ್ನು ಭಯದಲ್ಲಿ ಮುಳುಗಿಸಿತು. ಕಾವ್ಯ ರಚನೆಯಂಥ 'ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು ಕಸಿದು ದಕ್ಷಿಣ ಆಫ್ರಿಕಾದ ಕವಿ ಮೆಲಾಯಿಸನನ್ನು ಗಲ್ಲಿಗೇರಿಸಿದಾಗ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಕವಿಗಳು ನಿಟ್ಟುಸಿರುಬಿಟ್ಟರು. ಸತಿ ಹೋದ ರೂಪಾಕನ್ವರಳ ಸ್ಥಿತಿಯನ್ನು ಕಂಡು ಸ್ತ್ರೀಯರು ತಲ್ಲಣಗೊಂಡರು. ಈ ಸಾವುಗಳು ಆಧುನಿಕ ಜಗತ್ತುಗಳಿಗೆ ಎಸೆದ ಸವಾಲುಗಳಾಗಿ ಪರಿಣಮಿಸಿದವು. ಈ ಎರಡು ಸಾವಿಗೆ ಕಾರಣವಾದ

ಕ್ರೂರ ವ್ಯವಸ್ಥೆಗೆ ಇನ್ನು ಮುಪ್ಪು ಬಂದಿಲ್ಲ ಎಂಬುದು ಆತಂಕದ ಸಂಗತಿಯಾಗಿದೆ. ಮನುಷ್ಯನ ಕ್ರೌರ್ಯದ ನಿರಂತತೆಯನ್ನು ಸೂಚಿಸುತ್ತದೆ.

ಜನಪದ ಕಾವ್ಯ ರೂಪಗಳಲ್ಲಿ ಬಂಡಾಯ-ದಲಿತ ಕಾವ್ಯದ ಆಶಯಗಳು

ಈ ಶತಮಾನದಲ್ಲಿ ಮೊದಲು ಪ್ರಾರಂಭವಾದ ನವೋದಯ ಕಾವ್ಯ ಗೇಯತೆಯಿಂದ ಕೂಡಿತ್ತು. ಅದು ಹಾಡಲು ಬರುತ್ತಿತ್ತು. ಭಾವ ಪ್ರಧಾನ ಕಾವ್ಯವಾದ್ದರಿಂದ ಈ ಕಾವ್ಯ ಸುಗಮ ಸಂಗೀತಕ್ಕೆ ಸುಲಭವಾಗಿ ಅಳವಡುತ್ತಿತ್ತು. ಈ ಕಾಲದ ಅನೇಕ ಕವಿತೆಗಳು ಸಂಗೀತದಿಂದಾಗಿ ಉಳಿದುಕೊಂಡಿವೆ. ನಂತರದ ನವ್ಯಕಾವ್ಯವು ಇದನ್ನು ಕಳೆದುಕೊಂಡಿತು. ಗೇಯತೆ, ಸಂಗೀತದ ಸಂಬಂಧಗಳನ್ನು ಕಡಿದುಕೊಂಡು ಆಂತರಿಕ ಲಯದೊಂದಿಗೆ ಸಂಬಂಧವಿರಿಸಿಕೊಂಡು ಬೆಳೆಯಿತು. ಕಾವ್ಯ ಜನಸಾಮಾನ್ಯರಿಂದ ದೂರ ಸರಿದದ್ದು ಈ ಕಾವ್ಯದಿಂದ. ಬಂಡಾಯ ದಲಿತ ಕಾವ್ಯವು ಆಶಯದಲ್ಲಿ 'ಜನಪರ'ವಾಗಿದ್ದು ಜನಸಾಮಾನ್ಯರಿಗೆ ತಲುಪುವ ಗುರಿಯನ್ನು ಹೊಂದಿದೆ. ಆದರೆ ಅಕ್ಷರಸ್ಥರೇ ಕಡಿಮೆಯಿರುವ ಸಮಾಜದಲ್ಲಿ ಕವಿತೆಯನ್ನು ಓದುವ ವರ್ಗ ಕಡಿಮೆ. ಕವಿತೆಯ ರಚನೆ ಮತ್ತು ಅದರ ಓದು ಎರಡು ಕ್ರಿಯೆಗಳು ಬೌದ್ಧಿಕ ಚಟುವಟಿಕೆಗಳಾಗಿ ಪರಿಣಮಿಸಿವೆ. ಜನಸಾಮಾನ್ಯರ, ಕೆಳವರ್ಗದವರ, ಅಕ್ಷರವಂಚಿತರ ಬವಣೆಗಳನ್ನು, ಆಶೆ-ಆಕಾಂಕ್ಷೆಗಳನ್ನು ಕುರಿತು ಈ ಕಾವ್ಯ ಇರುವುದರಿಂದ ಇವರೆಲ್ಲರಿಗೆ ತಲುಪಿಸುವ ಜವಾಬ್ದಾರಿಯನ್ನು ಇಟ್ಟುಕೊಂಡಿದೆ. ಇದರಿಂದಾಗಿ ಜನಪದ ಕಾವ್ಯ ರೂಪಗಳನ್ನು ಈ ಭಾಗದ ಕವಿಗಳು ಬಳಸಿಕೊಂಡಿದ್ದಾರೆ. ದುಡಿಯುವ ಜನರಿಗೆ ಜನಪದ ಕಾವ್ಯ ರೂಪಗಳನ್ನು ದುಡಿಮೆಯ ಜತೆಜತೆಗೆ ಕೇಳುತ್ತ, ಹಾಡುತ್ತ ಬದುಕುತ್ತಿರುತ್ತಾರೆ. ಹೀಗಾಗಿ ಜನಪದ ಮಟ್ಟುಗಳು ಅವರಿಗೆ ರುಚಿಸುತ್ತವೆ. ಅನೇಕ ಕವಿಗಳು ತಮ್ಮ ಆಶಯಗಳನ್ನು ದುಡಿವ ಜನಗಳಿಗೆ ಪರಿಚಿತವಿರುವ ಜನಪದ ಕಾವ್ಯ ರೂಪಗಳಲ್ಲಿ ಅಳವಡಿಸಿ ಹಾಡಲು ಬರುವಂತೆ ರಚಿಸಲು ಪ್ರಯತ್ನಿಸಿದ್ದಾರೆ. ಬಂಡಾಯ-ದಲಿತ ಸಾಹಿತ್ಯ ಚಳುವಳಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ತಮ್ಮ ಆಶೆಯಗಳ ಕವಿತೆಗಳನ್ನು ಕಾಣುವ ಮೂಲಕ ಜನಸಾಮಾನ್ಯರಿಗೆ ಕೇಳಿಸಿ ಅವರಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಲಾಗಿದೆ.

ಚೆನ್ನಣ್ಣ ವಾಲೀಕಾರರಂತೂ ತಮ್ಮ ಬಹುತೇಕ ಕಾವ್ಯವನ್ನು ದ್ವಿಪದಿ, ತ್ರಿಪದಿ, ಚೌಪದಿ, ಲಾವಣಿ, ಬಯಲಾಟದ ಹಾಡುಗಳಲ್ಲಿ ಹೀಗೆ ಎಲ್ಲ ಜನಪದ ಕಾವ್ಯ ರೂಪಗಳಲ್ಲೇ ರಚಿಸಿದ್ದಾರೆ. ಅನೇಕ ಸಮಕಾಲೀನ ವ್ಯಕ್ತಿಗಳನ್ನು ಕುರಿತು (ದೇವರಾಜ ಅರಸ್, ದೇವಯ್ಯ ಹರವೆ, ನೆಲ್ಸನ್ ಮಂಡೇಲಾ, ಮೊಲಾಯಿಸ್, ಜಗಜೀವನರಾಮ್ ಮುಂತಾದವರು) ಜನಪದ ಕಾವ್ಯ ರೂಪಗಳ ಮಾದರಿಯಲ್ಲೇ ಬರೆದಿದ್ದಾರೆ. ಅಲ್ಲದೆ 'ಮಾದರ ಸಾಬವ್ವನ ಕೋಲಿನ ಪದ', 'ತಳವಾರ ಮರಿಯಮ್ಮನ ಚಪ್ಪಾಳೆ ಹಾಡು', 'ಪಾರ್ವತಿ ಹುಸೇನಬಿಯರ ಬುರ್ರಕಥಾ', 'ಕಾಡೂರ ಬೀಜನ ವೇಷಗಾರರ ಹಾಡು', 'ನಾಯ್ಕೋಡಿ ಬಸಂತನ ಬಂಡಾಯದ ಲಾವಣಿ', ಮುಂತಾದ ಖಂಡಕಾವ್ಯಗಳು ಅವುಗಳ ಹೆಸರೇ ಸೂಚಿಸುವಂತಹ ಮಾದರಿಯಲ್ಲಿವೆ. ಚೆನ್ನಣ್ಣ ವಾಲೀಕಾರರನ್ನು ಅನುಕರಿಸುತ್ತ ಬಸವರಾಜ ಸಬರದ ಮುಂತಾದವರು 'ರಕ್ತ ಹೀರುವವರ ಡೊಳ್ಳಿನ ಪದ', 'ಗುತ್ತೆವ್ವನ ಚೌಡಿಕಿ ಪದ', 'ಕಿತ್ತು ತಿನ್ನುವವರ ಗೀಗೀಪದ', 'ಒಂದು ಕೋಲಾಟದ ಪದ', 'ಒಂದು ಸುವ್ವಿ ಹಾಡು', 'ಒಂದು ಲಾವಣಿ ಪದ' ಮುತ್ತು 'ಸತ್ಯನಾರಾಯಣ ಪ್ರಸಂಗ' ಎಂಬ ಕವಿತೆಯನ್ನು ಷಟ್ಪದಿಯಲ್ಲಿ ರಚಿಸಿದ್ದಾರೆ.

'ಬೀರನ ಹಾಡು'(ಸೂಗಯ್ಯ ಹಿರೇಮಠ) ಡೊಳ್ಳಿನ ಪದವಾಗಿ, 'ಸರಸಂಬಾದೊಳಗೊಂದು ಕಪ್ಪುದಿನ'(ಶಂಕ್ರಯ್ಯ ಘಂಟಿ) ಗೀಗಿಪದವಾಗಿ, 'ಸುಪ್ರಭಾತವು ನಿನಗೆ ಮತದಾರ ಪ್ರಭುವೆ'(ಎಸ್.ಜಿ.ಸ್ವಾಮಿ) ಸುಪ್ರಭಾತವಾಗಿ, 'ಅಡ್ಡಪಲ್ಲಕ್ಕಿ ಹಾಡು'(ಕಾಶೀನಾಥ

ಅಂಬಲಿಗೆ) ಬುಲಾಯಿ ಹಾಡಾಗಿ, 'ಶುಭವಾಗತೈತಿ'(ಜಂಬಣ್ಣ ಅಮರಚಿಂತ) ಬುಡುಬುಡುಕೆ ಹಾಡಾಗಿ, 'ವಿಷನಾಗರ ದೇವಿಯ ಜಕಣಿಹಾಡು'(ಜಂಬಣ್ಣ ಅಮರಚಿಂತ) ಜಕಣಿ ಹಾಡಾಗಿ ಹೀಗೆ ಜನಪದ ಕಾವ್ಯ ಪ್ರಕಾರಗಳನ್ನು ಬಳಸಿ ಕವಿತೆಯನ್ನು ರಚಿಸಲು ಪ್ರಯತ್ನಿಸಿದ್ದಾರೆ. ಬಂಡಾಯ ಕಾವ್ಯದ ಆಶಯಗಳೇ ಆದ ಶ್ರೀಮಂತರ ದಬ್ಬಾಳಿಕೆ, ಕ್ರೌರ್ಯವನ್ನು ಎತ್ತಿತೋರಿಸುವ, ಬಡವರ ಅಸಹಾಯಕತೆಗೆ ಕಾರಣವಾಗುವ ಅಂಶಗಳನ್ನು ಈ ಹಾಡುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಯಾರಿಗಾಗಿ ಈ ಪ್ರಯೋಗಗಳನ್ನು ಮಾಡಿದ್ದಾರೆಯೋ ಅವರೆಲ್ಲ ಇನ್ನು ಮೌಖಿಕ ಪರಂಪರೆಗೆ ಸೇರಿದವರಾಗಿದ್ದಾರೆ. ಈ ಕವಿಗಳ ಹಾಡುಗಳು ಮೌಖಿಕ ಪರಂಪರೆಗೆ ಸೇರುವ ಸಾಧ್ಯತೆ ಇದೆಯೇ? ದುಡಿಯುವ ಜನ ಸಮುದಾಯಗಳನ್ನು ಈ ಹಾಡುಗಳು ಸೇರಿ ಹೋಗುವವೇ? ಇವು ಕೇವಲ ಪ್ರಯೋಗಗಳಿಗೆ ಮಾತ್ರ ಸೀಮಿತವಾಗಿ ನಿಲ್ಲುತ್ತವೆಯೇ? ಎಂಬ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ.

ಎಪ್ಪತ್ತರ ದಶಕದ ಉತ್ತರಾರ್ಧದಿಂದ ಪ್ರಾರಂಭವಾದ ಬಂಡಾಯ ದಲಿತ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿಯೇ ಬಹುಸಂಖ್ಯೆಯಲ್ಲಿ ಕವಿಗಳು ಈ ಭಾಗದಿಂದ ಮುನ್ನೆಲೆಗೆ ಬಂದರು. ಎಪ್ಪತ್ತರ ದಶಕದಲ್ಲಿ ಬರೆಯಲು ತೊಡಗಿದ್ದ ಅನೇಕರಿಗೆ ನವ್ಯದ ಪ್ರಭಾವದಿಂದ ಹಿಡಿಯಲೂ ಆಗದ ಬಿಡಲೂ ಆಗದ ಸಂದಿಗ್ಧ ಸ್ಥಿತಿಯಲ್ಲಿದ್ದಾಗ ಬಂಡಾಯ ಸಾಹಿತ್ಯ ಚಳುವಳಿ ಇವರೆಲ್ಲರಿಗೆ ಒಂದು ಜಿಗಿತಕ್ಕೆ ಪ್ರೇರಣೆ ನೀಡಿತು. ಶಿವಶರಣ ಜಾವಳಿ, ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಬಿ.ಟಿ.ಲಲಿತಾನಾಯಕ ಇವರೆಲ್ಲ ಬಂಡಾಯ ದಲಿತ ಸಾಹಿತ್ಯಕ್ಕೆ ಒಲಿದು, ಅದರಲ್ಲೇ ಹೆಚ್ಚು ತೊಡಗಿಸಿಕೊಂಡರು. ಇವರ ಜತೆಗಿದ್ದ ಪ್ರಭುರಾಜ ಅರಣಕಲ್, ಲಿಂಗಣ್ಣ ಸತ್ಯಂಪೇಟೆ, ಗುರುಬಸಯ್ಯ ಅಮ್ಮಾಪುರ, ಎಂ.ಲಕ್ಷ್ಮಣ ಮುಂತಾದವರು ಈ ಸಾಹಿತ್ಯ ಚಳುವಳಿಯ ಕಡೆಗೆ ವಾಲಿದರೂ ಹೆಚ್ಚು ಬರೆಯಲಿಲ್ಲ. ಇವರೆಲ್ಲರ ಬೆನ್ನ ಹಿಂದೆಯೇ ಇದ್ದ ಅಲ್ಲಮಪ್ರಭು ಬೆಟ್ಟದೂರು, ಬಸವರಾಜ ಸಬರದ, ಗವಿಸಿದ್ದ ಎನ್.ಬಳ್ಳಾರಿ, ವಿಜಯಶ್ರೀ ಸಬರದ, ಕಾಶೀನಾಥ ಅಂಬಲಿಗೆ, ಸರಸ್ವತಿ ಚಿಮ್ಮಲಿಗೆ, ಎಚ್.ಎಸ್.ಮುಕ್ತಾಯಕ್ಕ ಮುಂತಾದವರು ಈ ಕಾವ್ಯ ಮಾರ್ಗದಲ್ಲಿ ಮುಂದುವರಿದಿದ್ದಾರೆ.

ಚೆನ್ನಣ್ಣವಾಲೀಕಾರರು ಜನಪದ ಕವಿಗಳಂತೆ ಬರೆಯಲು ತೊಡಗಿಬಿಟ್ಟಿದ್ದಾರೆ. ಆದರೆ ಜನಪದವನ್ನು ಆಧುನಿಕ ಸಮವೇದನೆಗೆ ಪರಿವರ್ತಿಸದೆ ಅಂಥ ಪ್ರಯತ್ನವನ್ನು ಕಾಣಿಸದೆ ಕೇವಲ ಜನಪದ ಕವಿಗಳ ಸಂಪ್ರದಾಯದಲ್ಲಿ ನಿಂತುಬಿಟ್ಟಿದ್ದಾರೆ. ಇದೊಂದು ತುದಿಯಾದರೆ ಸಿದ್ದಯ್ಯ ಪುರಾಣಿಕರು ಇನ್ನೊಂದು ತುದಿಗೆ ತಲುಪಿ ಹೋಗಿದ್ದಾರೆ. ವಚನ ಪರಂಪರೆಯ ಸಮರ್ಥ ಮುಂದುವರಿಕೆಗೆ ಸಮಕಾಲೀನವಾದ ತಾತ್ವಿಕತೆಯನ್ನು ಭಿನ್ನ ಪ್ರಯತ್ನವನ್ನು ಮಾಡದೆ ವಚನ ಸಂಪ್ರದಾಯದಲ್ಲೇ ಮುಳುಗಿಬಿಟ್ಟರು. ಶಿವಶರಣ ಪಾಟೀಲ ಜಾವಳಿಯವರು ಪ್ರಾಮಾಣಿಕ ವ್ಯಕ್ತಿತ್ವ ಮತ್ತು ಕಾವ್ಯದ ಬದ್ಧತೆಗೆ ಮಹತ್ವ ನೀಡಿದರು. ಸಮಾಜದಲ್ಲಿ ಕಾಣಿಸುವ ಅಸಮಾನತೆ, ಅನ್ಯಾಯ, ವೈರುಧ್ಯಗಳಿಗೆ ನೊಂದು ಅವರ ಕಾವ್ಯ ಮಿಡಿದಿದೆ. ಅವರು ರೈತರ ಬಗ್ಗೆ, ತನ್ನೂರಿನ ವಿದ್ಯಮಾನಗಳ ಬಗ್ಗೆ, ಜನರ ಸಣ್ಣತನಗಳ ಬಗ್ಗೆ ಮನಸ್ಸಿಗೆ ನಾಟುವಂತೆ ಕವಿತೆಗಳನ್ನು ಬರೆದಿದ್ದಾರೆ. ಬಿಡಿಬಿಡಿಯಾದ ಅನುಭವದ ಚಿತ್ರಗಳನ್ನು ಕಾವ್ಯವಾಗಿಸಿದ್ದಾರೆ. 'ಹೋಟಲಿನಲ್ಲಿ', 'ಹಣೆಬಾರದ ಹಾಡು', 'ಹೊಲದವನ ಹಾಡು', 'ನಮ್ಮಹಳ್ಳಿಗೆ ಕಂದಿಲು ಬಂದದ್ದು' ಮುಂತಾದ ಕವಿತೆಗಳು ಸಾಮಾಜಿಕ ವಾಸ್ತವವನ್ನು ಹಿಡಿದಿವೆ. ತುರ್ತುಪರಿಸ್ಥಿತಿಯ ಕಾಲದಲ್ಲಿ ದೇಶ ಅನುಭವಿಸಿದ ಸ್ಥಿತಿಯನ್ನು ಅವರದೇ ಆದ ರೀತಿಯಲ್ಲಿ ಗ್ರಹಿಸಿ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಜಾವಳಿಯವರ ಕಾವ್ಯ ಒಂದೇ ಸ್ತರದಲ್ಲಿ ಸಾಗಿತೇ ಹೊರತು ಸಂಕೀರ್ಣವಾಗಲಿಲ್ಲ. ಕಾವ್ಯ ದಕ್ಕಿಸಿಕೊಳ್ಳುವ ಅನೇಕ ಸಾಧ್ಯತೆಗಳನ್ನು ಬಿಟ್ಟುಕೊಟ್ಟಿತು.

ಜಂಬಣ್ಣ ಅಮರಚಿಂತ ಅವರು ಬಂಡಾಯ ದಲಿತ ಕಾವ್ಯದಲ್ಲಿ ಸರಿಯಾಗಿ ತೊಡಗಿಸಿಕೊಂಡವರು. ಶೋಷಿತ ಮತ್ತು ಶೋಷಿತರ ನಡುವಿನ ಸಂಬಂಧವನ್ನು ಸರಿಯಾಗಿ ಗ್ರಹಿಸಿದ್ದು ಅವರ ಕಾವ್ಯದಲ್ಲಿ ಕಂಡುಬರುತ್ತದೆ. ತೆಲುಗು ದಿಗಂಬರ ಕಾವ್ಯವನ್ನು,

ತೆಲುಗಿನ ಗದ್ಯಪದ್ಯ ಮಿಶ್ರಿತ ಕಾವ್ಯವನ್ನು ಅರಿತು ತಮ್ಮ ಕಾವ್ಯಕ್ಕೆ ಪುಷ್ಟಿ ತಂದುಕೊಂಡಿದ್ದಾರೆ. ಕೊರವರ ಚರಿತ್ರೆಯನ್ನೇ ಬಿಚ್ಚಿಡುವ ಅವರ 'ಪೆಟ್ರೋಮ್ಯಾಕ್ಸ್ ಹೊತ್ತವರು' ಕವಿತೆ ದಲಿತ ಕಾವ್ಯಕ್ಕೆ ನೀಡಿದ ಕೊಡುಗೆಯಾಗಿದೆ. 'ಕೋಟೆ' ಕವಿತೆ ರಾಜಮಹಾರಾಜರ ವೈಭವಕ್ಕೆ ಕೆಳವರ್ಗದವರ ದುಡಿತದ ಶಕ್ತಿ ಹೇಗೆ ಬತ್ತಿ ಹೋಯಿತು ಎಂಬುದನ್ನು ಸಮರ್ಥವಾಗಿ ವ್ಯಕ್ತಪಡಿಸಿದೆ. ದುಡಿವ ಜನರ ನೋವಿಗೆ ಇವರ ಕಾವ್ಯ ಮಿಡಿದಿದೆ. ಅಲ್ಲಮಪ್ರಭು ಬೆಟ್ಟದೂರು ಅವರ ಕಾವ್ಯ ರಾಜಕೀಯ ವಿದ್ಯಮಾನಗಳಿಗೆ ಹೆಚ್ಚು ಪ್ರತಿಕ್ರಿಯಿಸಿದೆ. ಕಾವ್ಯರಚನೆ ಮತ್ತು ಹೋರಾಟ ಎರಡನ್ನೂ ಸಮವಾಗಿ ಸ್ವೀಕರಿಸಿದವರು. ಕುದುರೆಮೋತಿ ಪ್ರಕರಣದಲ್ಲಿ ಅವರು ಮುಂಚೂಣಿಯಲ್ಲಿದ್ದು ಹೋರಾಡಿದರು. ನೆಹರೂ, ವಾಜಪೇಯಿ, ನೀಲಂ ಸಂಜೀವರೆಡ್ಡಿ ಮುಂತಾದ ರಾಜಕೀಯ ವ್ಯಕ್ತಿಗಳ ರಾಜಕೀಯ ಚಟುವಟಿಕೆಗಳ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಜೆ.ಪಿ., ಬುದ್ಧ, ಬಸವ ಅವರಿಂದ ಪ್ರಭಾವಿತರಾದದ್ದನ್ನು ಅವರ ಕಾವ್ಯದಲ್ಲಿ ಕಾಣುತ್ತದೆ. ಅವರ ಅನೇಕ ಕವಿತೆಗಳು ವಿವಾದಕ್ಕೆ ಗುರಿಯಾಗಿವೆ. 'ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು' ಎಂಬ ಕವಿತೆ ಈ ಕವಿಯ ಧೋರಣೆಯನ್ನು ಪ್ರತಿನಿಧಿಸುತ್ತದೆ.

ಬಸವರಾಜ ಸಬರದ, ಗವಿಸಿದ್ದ ಎನ್.ಬಳ್ಳಾರಿ, ವಿಜಯಶ್ರೀ ಸಬರದ, ಮುಕ್ತಾಯಕ್ಕ, ಬಿ.ಟಿ.ಲಲಿತಾನಾಯಕ ಮುಂತಾದವರು ಬಂಡಾಯ ಕಾವ್ಯ ಸಂದರ್ಭದಲ್ಲಿ ಹೆಚ್ಚು ಬರೆಯುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಬರೆಯುವವರು ಅನೇಕರಿದ್ದಾರೆ. ಕನ್ನಡ ಕಾವ್ಯ ಸಂದರ್ಭದಲ್ಲಿಯೇ ಈ ಹೊತ್ತಿನ ಬಂಡಾಯ ಕಾವ್ಯ ಸೀಮಿತ ಆಶಯವನ್ನು ಹೊಂದಿದ್ದರಿಂದಲೋ ಏನೋ ಶೋಷಕ ಮತ್ತು ಶೋಷಿತ ಎರಡು ವರ್ಗ ಮಾಡಿಕೊಂಡು ಅವುಗಳ ನಡುವಿನ ಸಂಬಂಧವನ್ನು ಮಂಡಿಸುತ್ತಲೇ ನಡೆಯಿತು. ಹೀಗಾಗಿ ಕವಿಗಳ ವಿಶಿಷ್ಟತೆಗಳು ಒಡೆದು ಕಾಣುವ ಶಕ್ತಿಯನ್ನು ಪಡೆಯಲಿಲ್ಲ ಅನ್ನಿಸುತ್ತದೆ. ಒಬ್ಬರ ಅಭಿಪ್ರಾಯಗಳು ಇನ್ನೊಬ್ಬರಲ್ಲಿ ಬೆರೆತು ಒಂದೇ ರೀತಿಯ ದನಿಯಂತೆ ಕೇಳಿಸತೊಡಗಿವೆ. ವೈವಿಧ್ಯತೆ ಕಡಿಮೆ. ಒಡೆದು ಕಾಣುವ ಹೊಸ ಹೊಸ ಆಯಾಮಗಳು ಕಾವ್ಯಕ್ಕೆ ಸೇರಿಕೊಳ್ಳಲು ಸಾಧ್ಯವಾಗಿಲ್ಲ. ಈ ಮಾತು ಕಾವ್ಯಕ್ಕೆ ಅನ್ವಯವಾದಂತೆ ಕಥಾ ಪ್ರಕಾರಕ್ಕೆ ಆಗುವುದಿಲ್ಲ. ಸಣ್ಣ ಕಥೆಗಳು ಮಾತ್ರ ಈ ಹೊತ್ತಿನಲ್ಲಿ ಬಂಡಾಯದ ಆಶಯಗಳನ್ನು ಮೀರಿ ಹೊಸ ಹೊಸ ಅನುಭವಗಳಿಗೆ ಒಡ್ಡಿಕೊಂಡು ಮುನ್ನಡೆದಿವೆ.

ಈ ದಶಕದ ಪ್ರಾರಂಭದ ಹೊತ್ತಿನಲ್ಲಿಯೇ ಬಂಡಾಯ ಕಾವ್ಯ ಕೆಲವು ವಿಷಯಗಳಿಗೆ ಕುರುಡಾಗಿರುವುದನ್ನು ಅರಿತ ಚಂಪಾ ಅವರು, 'ನಾವು ಹೂವಿನ ಬಗ್ಗೆ ನಾವು ಹೆಣ್ಣಿನ ಬಗ್ಗೆ ನಾವು ತಾರೆಯ ಬಗ್ಗೆ ಹಾಡುವುದು ಬೇಡ ಅಂತ, ಗೆಳೆಯಾ ನಾವು ಹೇಳುವುದು ಬೇಡ' ಎಂದು ಬರೆದರು. ಬರೀ ಆಕ್ರೋಶವೇ ತುಂಬಿದ್ದ ಕಾವ್ಯಕ್ಕೆ ಹೊಸ ಚಲನೆ ಈ ಕವಿತೆಯೊಳಗಿನ ಹೊಸ ಮೀಮಾಂಸೆ ನೀಡಿತೆಂದು ಕಾಣುತ್ತದೆ. ಶೋಷಕರು ಚರಿತ್ರೆಯ ಉದ್ದಕ್ಕೂ ಕೆಳವರ್ಗದವರನ್ನು ದಮನಕ್ಕೆ ಗುರಿ ಮಾಡುತ್ತ ಬಂದಿದ್ದಾರೆಂದು ಗ್ರಹಿಸಿ, ಸೇಡಿಗೆ ಸೇಡು ಎಂಬಂತೆ ಈಗ ಶೋಷಿತರು ಆ ಕೆಲಸ ಮಾಡಬೇಕೆಂಬ ಧೋರಣೆಯ ಕವಿತೆಗಳು ರಚನೆಯಾದವು. ಆದರೆ ಅದು ನಿಜವಾದ 'ಸಮಾನತೆ'ಗೆ ವಿರುದ್ಧವಾಗಿದೆ ಎನ್ನಿಸಿತು. ಶೋಷಿತರನ್ನು ಮನುಷ್ಯರನ್ನಾಗಿ ಮಾಡುವತ್ತ ಕಾವ್ಯ ವಾಲಿತು. ಈ ವೈರುಧ್ಯಗಳ ಮಧ್ಯ ಬಂಡಾಯ-ದಲಿತ ಕಾವ್ಯ ಬೆಳೆದಿದೆ. ಸಾಮಾಜಿಕ ಸಂದರ್ಭದ ಅನೇಕ ಘಟನೆಗಳನ್ನು, ಸಂಗತಿಗಳನ್ನು ಗ್ರಹಿಸಿ ಪ್ರತಿಕ್ರಿಯಿಸಿ ಒಂದು ಬಗೆಯ ಎಚ್ಚರವನ್ನು ಈ ಕಾವ್ಯ ಮೂಡಿಸಿದೆ ಎಂಬುದು ನಿಜ.

ಅಧ್ಯಾಯ ಹತ್ತು: ಮುಕ್ತಾಯದ ಜತೆಗೆ

ಅಧ್ಯಾಯ ಹತ್ತು: ಮುಕ್ತಾಯದ ಜತೆಗೆ

ಹದಿನೆಂಟು-ಹತ್ತೊಂಬತ್ತನೆಯ ಶತಮಾನದಲ್ಲಿ ಈ ಪ್ರಾಂತ್ಯದಲ್ಲಿ ಕಾಣಿಸಿಕೊಂಡ ತತ್ವಪದಕಾರರು ತಮ್ಮ ಅನುಭಾವವನ್ನು ತತ್ವಪದಗಳ ಮೂಲಕ ಹಾಡುತ್ತ 'ಮೌಖಿಕ ಸಾಹಿತ್ಯ' ಪರಂಪರೆಗೆ ಅನನ್ಯವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಪ್ರಕ್ಷುಬ್ಧವಾದ ಕಾಲಾವಧಿಯಲ್ಲಿ ಈ ತತ್ವಪದಕಾರರು ಹುಟ್ಟಿ ಬೆಳೆದು, ಅನೇಕ ಬಗೆಯಲ್ಲಿ ಆತಂಕಕ್ಕೆ ಒಳಗಾಗುತ್ತಿದ್ದ ಜನ ಸಮುದಾಯಗಳಲ್ಲಿ ಬದುಕಿನ ಬಗ್ಗೆ ಪ್ರೀತಿಯನ್ನು ಮೂಡಿಸಿದರು. ಅದರಲ್ಲೂ ಕೆಲ ತತ್ವಪದಕಾರರು ಕೆಳವರ್ಗದ ಸಮುದಾಯಗಳ ಜತೆಯಲ್ಲಿ ಬೆರೆತು, ಮನುಷ್ಯನಿಗೆ ಬದುಕು ಬೇಸರವಾಗದಂತೆ ಸರಳವಾಗಿ ಬದುಕುವ ರೀತಿಯನ್ನು ತೋರಿಸುತ್ತ, ತಮ್ಮ ತಮ್ಮ ಪರಿಸರದಲ್ಲಿ ನೆಮ್ಮದಿಯನ್ನು ಸೃಜಿಸಲು ಪ್ರಯತ್ನಿಸಿದ್ದು ಸಮಾಜಕ್ಕೆ ಅವರು ನೀಡಿದ ಮಹತ್ವದ ಕಾಣಿಕೆಯಾಗಿದೆ. ಸಮಾಜ ಸುಧಾರಕರಾಗಿ ನಿಂತ ಈ ತತ್ವಪದಕಾರರು, ಸಮಾಜದ ಎಲ್ಲಾ ಬಗೆಯ ವಿದ್ಯಮಾನಗಳನ್ನು ಗ್ರಹಿಸುತ್ತಲೇ, ಅದೇ ವಿದ್ಯಮಾನಗಳನ್ನು ಮೂಲವಾಗಿಟ್ಟುಕೊಂಡು ಪ್ರತಿಕ್ರಿಯಿಸುತ್ತ ಅದಕ್ಕೆ ತಮ್ಮ ಅನುಭಾವದ ನೆಲೆಯನ್ನು ಒದಗಿಸಿದರು.

ಅನೇಕ ರಾಜಕೀಯ ಕಾರಣಗಳಿಂದ ಈ ಪ್ರಾಂತ್ಯದಲ್ಲಿ ಬಹುಭಾಷೆಗಳು ನೆಲೆಯೂರಿದವು. ಅನಿವಾರ್ಯವಾಗಿಯೂ, ಸಹಜವಾಗಿಯೂ ಬಹು ಭಾಷೆಗಳನ್ನು ಸಮುದಾಯಗಳು ತಮ್ಮದಾಗಿಸಿಕೊಂಡವು. ಕನ್ನಡ ಭಾಷೆಗೆ ರಾಜಕೀಯ ಬೆಂಬಲ ದೊರೆಯದೆ ಹಿನ್ನೆಲೆಗೆ ಸರಿದು, ಲಿಖಿತವಾಗಿ ಬಳಕೆಯಾಗಬೇಕಾದ ಅವಕಾಶವನ್ನು ಕಳೆದುಕೊಂಡಿತಷ್ಟೆ. ಆದರೆ ಮೌಖಿಕವಾಗಿ ಜನಸಾಮಾನ್ಯರ ಆಡುನುಡಿಯಾಗಿ ಜೀವ ಉಳಿಸಿಕೊಂಡಿದ್ದ ಕನ್ನಡ ಭಾಷೆಯನ್ನು ಈ ತತ್ವಪದಕಾರರು ತಮ್ಮ 'ಮೌಖಿಕ ಸಾಹಿತ್ಯ'ಕ್ಕೆ ಬಳಸಿಕೊಳ್ಳುವ ಮೂಲಕ ಕನ್ನಡಕ್ಕೆ ಜೀವಕೊಟ್ಟರು. ಮೌಖಿಕವಾಗಿಯಾದರೂ ಈ ಭಾಷೆ ಜೀವಂತಿಕೆಯಿಂದ ಬೆಳೆಯಲು ಕಾರಣರಾದರು. ಇದು ತತ್ವಪದಕಾರರ ಅನನ್ಯ ಕೊಡುಗೆಯೆಂದು ಕಾಣುತ್ತದೆ.

ಈ 'ಮೌಖಿಕ ಸಾಹಿತ್ಯ'ವನ್ನು ಸಮುದಾಯಗಳು ಭಜನೆಯಲ್ಲಿ ಹಾಡುವ ಮೂಲಕ ಒಂದು ಕಡೆ ಕನ್ನಡವನ್ನು ತತ್ವಪದ ಸಾಹಿತ್ಯದೊಂದಿಗೆ ಪ್ರಸಾರ ಮಾಡಿದವು. ಇನ್ನೊಂದು ಕಡೆ ಈ ತತ್ವಪದಗಳನ್ನು ಸಾಮೂಹಿಕವಾಗಿ ಹಾಡುತ್ತ ಲೌಕಿಕವನ್ನು ಮೀರಿದ ಪ್ರಯೋಜನಗಳಿಗೆ ಬಳಸಿಕೊಂಡಿವೆ.

ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತದಿಂದ ಆಧುನಿಕತೆ ಪ್ರವೇಶಿಸಿತಷ್ಟೆ. ಬ್ರಿಟಿಷರು ಯಾವ ಯಾವ ಪ್ರಾಂತ್ಯಗಳಲ್ಲಿ ವಸಾಹತುವನ್ನು ಸ್ಥಾಪಿಸಿದರೋ ಆಯಾ ಪ್ರಾಂತ್ಯಗಳಲ್ಲಿ ಪ್ರಜ್ಞಾವಂತ ಜನರು ಆಧುನಿಕತೆಯನ್ನು ತಮ್ಮ ಬದುಕಿನಲ್ಲಿ ಬಿಟ್ಟುಕೊಂಡರು. ಪಶ್ಚಿಮದ ಜ್ಞಾನದಿಂದ ಅನೇಕ ಬಗೆಯ ಚಿಂತನೆಗಳನ್ನು ತಮ್ಮದಾಗಿಸಿಕೊಳ್ಳತೊಡಗಿದರು. ಇದರಿಂದ ಅನೇಕ ಜ್ಞಾನ ಶಾಖೆಗಳು ಹೊಸ ಆಯಾಮ ಪಡೆದು ಬಲಗೊಂಡವು. ಇಂಥ ಪ್ರಾಂತ್ಯಗಳು ಬ್ರಿಟಿಷರ ವಸಾಹತು ಇಲ್ಲದ ಪ್ರಾಂತ್ಯಗಳಿಗೆ ಆದರ್ಶವಾಗಿ ಕಂಡವು ಮತ್ತು ಉತ್ಸಾಹದಿಂದ ಅನುಸರಿಸತೊಡಗಿದವು. ಭಾರತದಲ್ಲಿ ಪಶ್ಚಿಮ ಬಂಗಾಳ, ಮಹಾರಾಷ್ಟ್ರಗಳು ಮೊದಲು ಬ್ರಿಟಿಷರ ವಸಾಹತುಶಾಹಿ ಆಡಳಿತಕ್ಕೆ ಒಳಗಾದವು. ಆದ್ದರಿಂದಲೇ ಈ ರಾಜ್ಯಗಳು ಎಲ್ಲ ರಂಗಗಳಲ್ಲಿ ಮೊದಲು ಹೊಸತನವನ್ನು ಪಡೆದು ಆಧುನಿಕವಾಗಿ ಪ್ರಗತಿಯನ್ನು ಸಾಧಿಸಿದವು. ಈ ರಾಜ್ಯಗಳು ಇತರ ರಾಜ್ಯಗಳಿಗೆ ಮಾದರಿಯಾಗಿ ಪರಿಣಮಿಸಿದವು. ಸಾಹಿತ್ಯ-ಕಲೆ-ಸಿನೇಮಾ ಮುಂತಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹಾರಾಷ್ಟ್ರೀಯರು, ಬಂಗಾಳಿಯರು ಮುಂಚೂಣಿಯಲ್ಲಿ ಕಾಣಿಸಿಕೊಂಡರು.

ಹಾಗೆ ಕರ್ನಾಟಕದಲ್ಲಿ ಮೈಸೂರು, ಮದ್ರಾಸ್ ಪ್ರಾಂತ್ಯಗಳಲ್ಲಿ ಬ್ರಿಟಿಷರು ಮೊದಲು ತಮ್ಮ ವಸಾಹತನ್ನು ಸ್ಥಾಪಿಸಿದರು. ಇದರಿಂದ ಈ ಪ್ರಾಂತ್ಯಗಳು ಸಾಂಸ್ಕೃತಿಕವಾಗಿ ಹೊಸ ಆಯಾಮವನ್ನು ಪಡೆದುಕೊಂಡವು. ಕರ್ನಾಟಕದ ಇತರ ಪ್ರಾಂತ್ಯಗಳು

ಮೈಸೂರು ಪ್ರಾಂತ್ಯದಲ್ಲಿ ಆದ ಸಾಂಸ್ಕೃತಿಕ ಬದಲಾವಣೆಗಳನ್ನು ಅನುಸರಿಸತೊಡಗಿದವು. ಇಂಥ ಪ್ರಕ್ರಿಯೆ ಭಾರತದಾದ್ಯಾಂತ ಸಹಜವಾಗಿ ನಡೆಯಿತು. 'ಹೈದರಾಬಾದ್ ಕರ್ನಾಟಕ'ದಲ್ಲಿ ಬ್ರಿಟಿಷರ ನೇರ ಆಡಳಿತ ಇರಲಿಲ್ಲ. ನಿಜಾಮರ ಆಡಳಿತವಿತ್ತು. ನಿಜಾಮರ ಆಡಳಿತದ ನೀತಿ ಸ್ಥಳೀಯ ಭಾಷೆ-ಸಾಂಸ್ಕೃತಿಕವಾದ ಚಟುವಟಿಕೆಗಳಿಗೆ ಪೂರಕವಾಗಿರಲಿಲ್ಲ. ಆದರೆ ಮೈಸೂರಿನಲ್ಲಿಯೂ ಬ್ರಿಟಿಷರ ನೇರ ಆಡಳಿತ ಇರದಿದ್ದರೂ ಮೈಸೂರು ಅರಸರು ವಸಾಹತುಶಾಹಿ ಆಧುನಿಕತೆಗೆ ತಮ್ಮನ್ನು ತೆರೆದುಕೊಂಡರು. ಸ್ಥಳೀಯ ಸಂಸ್ಕೃತಿಯ ಬೆಳವಣಿಗೆಗೆ ಹೊಸ ಆಯಾಮ ಬರುವಂತೆ ಮಾಡಿದರು. ಇದರಿಂದ ಮೈಸೂರು ಪ್ರಾಂತ್ಯವು ಪಶ್ಚಿಮದ ಜ್ಞಾನವನ್ನು ಪಡೆದು ಆಧುನಿಕ ಕನ್ನಡ ಸಾಹಿತ್ಯವನ್ನು ಹುಟ್ಟು ಹಾಕುವ ಶಕ್ತಿಯನ್ನು ಪಡೆಯಿತು. ಈ ಮಾತು ಧಾರವಾಡ ಭಾಗಕ್ಕೂ ಅನ್ವಯಿಸುತ್ತದೆ.

ಹೈದರಾಬಾದ್ ಕರ್ನಾಟಕ ಪ್ರಾಂತ್ಯವು ಇದನ್ನು ಅನುಸರಿಸಿತು. ನವೋದಯ ಕಾವ್ಯಮಾರ್ಗವನ್ನು ಬಿ.ಎಂ.ಶ್ರೀ. ಅವರಿಂದ ಪ್ರೇರಣೆ ಪಡೆಯಿತು. ಪ್ರಗತಿಶೀಲ ಸಾಹಿತ್ಯ ಚಳುವಳಿಯ ನಾಯಕರಾದ ಅ.ನ.ಕೃ. ಅವರಿಂದ ಸ್ಫೂರ್ತಿಯನ್ನು ಪಡೆಯಿತು. ನಂತರ ನವ್ಯ, ಬಂಡಾಯ-ದಲಿತ ಸಾಹಿತ್ಯ ಚಳುವಳಿಯನ್ನು ಬೇರೆ ಬೇರೆ ಪ್ರಾಂತ್ಯದವರಿಂದ ಪ್ರೇರಣೆ ಪಡೆದು ಬೆಳೆಯಲು ಪ್ರಾರಂಭಿಸಿತು. ಇದು ಕೂಡ ಒಂದು ಕಾಲಾವಧಿಯ ಅಂತರದ ಮೇಲೆ ನಡೆದ ಪ್ರಕ್ರಿಯೆಯಾಗಿದೆ. ಇದರಿಂದ ಯಾವುದೇ ಬಗೆಯ ಬೆಳವಣಿಗೆಗಳು ಕೂಡ ತುಂಬಾ ತಡವಾಗಿಯೇ ನಡೆದವು. ಆದ್ದರಿಂದಲೇ ಈ ಪ್ರಾಂತ್ಯದ ಸ್ಥಳೀಯ ಚರಿತ್ರೆಯು ಸಾಹಿತ್ಯದಲ್ಲಿ ಮೂಡಬೇಕಾಗಿದ್ದ ಪ್ರಮಾಣದಲ್ಲಿ ಮೂಡಲಿಲ್ಲವೆಂದು ಕಾಣುತ್ತದೆ.

ಆದರೂ ಈ ಪ್ರಾಂತ್ಯದ ಫಿಕ್ಷನ್‌ಗಳಲ್ಲಿ ಗ್ರಾಮೀಣ ಸಮಾಜದ ಚರಿತ್ರೆಯಿದೆ. ಒಡೆದು ಕಾಣುವಂತೆ ಫ್ಯೂಡಲ್ ವ್ಯವಸ್ಥೆಯ ದರ್ಪ-ದೌರ್ಜನ್ಯಗಳು ಮತ್ತು ಈ ವ್ಯವಸ್ಥೆಗೆ ಬಲಿಯಾಗುವ ಬಡವರು, ದುರ್ಬಲರು ಮತ್ತು ಕೆಳವರ್ಗದ ದುಡಿವ ಜನರ ದಾರುಣ ಸ್ಥಿತಿಯ ಚಿತ್ರಣವಿದೆ. ಫ್ಯೂಡಲ್ ವ್ಯವಸ್ಥೆಗೆ ದುಡಿವ ವರ್ಗದಲ್ಲಿ ಗಂಡಸಿಗಿಂತ ಹೆಂಗಸೇ ಹೆಚ್ಚು ಬಲಿಯಾಗುತ್ತಾಳೆ. ಅಂತಿಮವಾಗಿ ಪ್ರತಿಭಟಿಸುವ ಎದೆಗಾರಿಕೆಯನ್ನು ಮಹಿಳೆಯೇ ತೋರಿಸುತ್ತಾಳೆ. ಇಡೀ ಗ್ರಾಮೀಣ ಬದುಕನ್ನು ಭೂಮಾಲಿಕರೇ ನಿಯಂತ್ರಿಸುವವರಾಗಿದ್ದಾರೆ. ಇವರಿಗೆ ಮಠ-ಮಾನ್ಯಗಳು ಬೆಂಬಲವಾಗಿರುವುದು ಕಾಣುತ್ತದೆ. ಸ್ವಲ್ಪಮಟ್ಟಿಗೆ ಭೂಮಾಲಿಕರು ಆತಂಕಕ್ಕೆ ಒಳಗಾದ ಪ್ರಸಂಗಗಳೆಂದರೆ ಒಂದು, 'ರಜಾಕಾರರ ದಾಳಿ' ಸಂದರ್ಭದಲ್ಲಿ. ಇನ್ನೊಂದು ಭೂ ಸುಧಾರಣಾ ಕಾಯ್ದೆ ಜಾರಿಯಾದ ಸಂದರ್ಭದಲ್ಲಿ. ಅಂತಿಮವಾಗಿ ಈ ಎರಡು ಸಂದರ್ಭಗಳಲ್ಲಿ ಈ ಭೂಮಾಲಿಕರು ತಮ್ಮನ್ನು ತಾವು ಸಂರಕ್ಷಿಸಿಕೊಂಡು ಬಿಟ್ಟರು. ಪೆಟ್ಟು ತಿಂದವರು ಅದೇ ದುಡಿವ ಜನರು. ರಜಾಕಾರರ ದಾಳಿಯ ಸಂದರ್ಭದಲ್ಲಿ, ಸಹಜವಾಗಿಯೇ ಆರ್ಥಿಕವಾಗಿ ಬಲಿಷ್ಠರಾಗಿದ್ದ ಭೂಮಾಲಿಕರ ಮನೆಗಳಿಗೆ ದಾಳಿ ನಡೆಸಿದರು. ಈ ಸಂದರ್ಭದಲ್ಲಿ ಪುನಃ ದುಡಿವ ವರ್ಗದ ಜನರೇ ತಮ್ಮ ಜೀವದ ಹಂಗು ತೊರೆದು ಭೂಮಾಲಿಕರ ರಕ್ಷಣೆಗೆ ನಿಂತು ನೋವು-ಸಾವು ಅನುಭವಿಸಿದರು. ಇನ್ನೊಂದು ಹಂತದಲ್ಲಿ ಭೂಮಾಲಿಕರು ರಜಾಕಾರರ ಜತೆಗೆ ಒಪ್ಪಂದ ಮಾಡಿಕೊಂಡು ಸುರಕ್ಷವಾಗಿ ಉಳಿದುಕೊಂಡರು. ಟೆನಂಟ್ ಕಾಯ್ದೆ ಜಾರಿಯಾದಾಗ 'ಉಳುವವನೆಂಬ' ರೈತರು ಭೂಮಾಲಿಕರಿಂದ ಭೂಮಿಯನ್ನು ಪಡೆಯುವ ಎದೆಗಾರಿಕೆಯಾಗಲಿ, ಯಾವುದೇ ರೀತಿಯ ಬಾಹ್ಯ ಬೆಂಬಲವಾಗಲಿ ಇಲ್ಲದೆ ಅಸಹಾಯಕವಾಗಿ ಹಿಂದೆ ಸರಿದರು. ಭೂಮಾಲಿಕರು ಅಧಿಕಾರ ವರ್ಗದವರನ್ನು ಒಲಿಸಿಕೊಂಡು ಯಾವ ನಷ್ಟಕ್ಕೂ ಒಳಗಾಗದೆ ಉಳಿದುಕೊಂಡರು.

ರಾಜಕೀಯ ಸವಲತ್ತುಗಳಿಂದ ಎಪ್ಪತ್ತರ ದಶಕದಲ್ಲಿ ಕೆಳವರ್ಗದವರು ಅಕ್ಷರಸ್ಥರಾಗ ತೊಡಗಿದರು. ಕೆಳ ಹಂತದಿಂದ ರಾಜಕೀಯ ಪ್ರವೇಶ ಪಡೆದರು. ಅಧಿಕಾರ ವಿಕೇಂದ್ರಿಕರಣ ಪ್ರಕ್ರಿಯೆಯಿಂದ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತ ಆಡಳಿತ ವ್ಯವಸ್ಥೆಯಲ್ಲಿ ಮೀಸಲಾಯಿತಿ ನೀತಿಯಿಂದ ರಾಜಕೀಯವಾದ ಅಧಿಕಾರದ ಸ್ಥಾನಮಾನಗಳನ್ನು ಪಡೆದು ಬಲಗೊಳ್ಳುತ್ತಿದಂತೆ

ಮೇಲ್ವರ್ಗದವರ ಅಸಹನೆ ಹೆಚ್ಚಾಗತೊಡಗಿತು. ಇದರಿಂದ ಕೆಳವರ್ಗದವರ ಮತ್ತು ಮೇಲ್ವರ್ಗದವರ ನಡುವೆ ಸಂಘರ್ಷಗಳು ಕಾಣಿಸಿಕೊಂಡವು. ಈ ವೈರ ನಿರಂತರವಾಗಿ ಮುಂದುವರಿದಂತೆ ಕಾಣುತ್ತದೆ. ಇಂಥ ಸಂದರ್ಭಗಳಲ್ಲಿಯೂ ರಾಜಕೀಯ ಬೆಂಬಲವಿದ್ದರೂ ಕೆಳವರ್ಗದವರು ಸಂಕಷ್ಟಗಳಿಗೆ ಗುರಿಯಾಗುತ್ತಿದ್ದಾರೆ. ಚಾರಿತ್ರಿಕ ಕಾರಣಗಳಿಂದ ಎರಡೂ ವರ್ಗಗಳ ನಡುವೆ ಒಂದು ಬಗೆಯ ತಿಳುವಳಿಕೆ ಮೂಡಬೇಕಾಗಿದೆ ಎಂದು ಅನ್ನಿಸುತ್ತದೆ.

'ಹೈದರಾಬಾದ್ ಕರ್ನಾಟಕ' ಪ್ರಾಂತ್ಯದ ಸಮುದಾಯಗಳು ರಾಜಕೀಯ ಸ್ಥಿತ್ಯಂತರಗಳಿಂದ ತಲ್ಲಣವನ್ನು ಅನುಭವಿಸಿವೆ. ಈ ಶತಮಾನದ ಮೊದಲ ಭಾಗದಲ್ಲಿ ಈ ಪ್ರಾಂತ್ಯದ ಮೂರು ಜಿಲ್ಲೆಗಳಲ್ಲಿ ಕಲ್ಬುರ್ಗಿ ಮಹಾರಾಷ್ಟ್ರಕ್ಕೆ, ಬೀದರ ಆಂಧ್ರಕ್ಕೆ ಸೇರುತ್ತವೆಂಬ ಹೊಯ್ದಾಟದ ಆತಂಕವನ್ನು ಅನುಭವಿಸಿವೆ. ಮೂರು ಜಿಲ್ಲೆಗಳಲ್ಲಿ ಒಟ್ಟಿಗೆ 'ಹೈದರಾಬಾದ್ ಸಂಸ್ಥಾನ'ಕ್ಕೆ ಸೇರಿದ್ದರಿಂದ ಸಂಸ್ಥಾನವೇ ಪ್ರತ್ಯೇಕವಾದ 'ಮುಸ್ಲಿಂ ರಾಜ್ಯ'ವಾಗಿ ನಿಲ್ಲುವ ಭಯವನ್ನು ಅನುಭವಿಸಿವೆ. ರಜಾಕಾರರ/ನಿಜಾಮರ ಜತೆಗೆ ಈ ಪ್ರಾಂತ್ಯದವರು ಯುದ್ಧವನ್ನೇ ಹೂಡಿದ್ದರಿಂದ, ಈ ಪ್ರಾಂತ್ಯದ ಜನಸಮುದಾಯಗಳು ಇಂಥ ಅನೇಕ ಬಗೆಯ ಆತಂಕ-ತಲ್ಲಣಗಳನ್ನು ಅನುಭವಿಸಿದ್ದರಿಂದ, ದೇಶ-ಪ್ರಾಂತ್ಯಗಳ ವಿಭಜನೆಯೆಂದರೆ ಹಾಗೂ ಯುದ್ಧಗಳೆಂದರೆ ವಿಚಿತ್ರವಾದ ಭಯ ಮತ್ತು ಧೈರ್ಯವನ್ನು ಹೊಂದಿವೆ. ಇಂಥ ವಾಸ್ತವ ಸ್ಥಿತಿಯನ್ನು ಈ ಪ್ರಾಂತ್ಯದ ಸ್ವಾತಂತ್ರ್ಯಪೂರ್ವದ ಕವಿಗಳು ತಮ್ಮ ಕಾವ್ಯದಲ್ಲಿ ತೀವ್ರತೆಯಿಂದ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯೋತ್ತರ ಕಾಲದ ನವ್ಯ ಮತ್ತು ಬಂಡಾಯ-ದಲಿತ ಸಾಹಿತ್ಯ ಚಳುವಳಿಗಳು ಈ ಪ್ರಾಂತ್ಯದ ಬರಹಗಾರರ ಮೇಲೆ ಪ್ರಭಾವ ಬೀರಿವೆ ಎಂಬುದು ನಿಜ. ಅದರಿಂದ ಪ್ರಯೋಜನವೂ ಆಗಿದೆ. ಮಾರಕವೂ ಆಗಿದೆ. ಈ ಪ್ರಾಂತ್ಯದಲ್ಲಿ ಬರಹಗಾರರಿಗೆ ಸ್ವಾತಂತ್ರ್ಯಪೂರ್ವ ಕಾಲದಲ್ಲಿದ್ದ ರಾಜಕೀಯದಿಂದ ಉಂಟಾದ ಅನೇಕ ಬಗೆಯ ಸಾಂಸ್ಕೃತಿಕ ಬಿಕ್ಕಟ್ಟುಗಳಿಂದ ಒಂದು ಬಗೆಯಲ್ಲಿ ಬಿಡುಗಡೆಯಾಗಿ ನಿಲ್ಲುವ ಹೊತ್ತಿನಲ್ಲಿ ನವ್ಯ ಸಾಹಿತ್ಯ ಪ್ರಭಾವ ಬೀರತೊಡಗಿತು. ಇದರಿಂದ ನಿಂತ ನೆಲದ ಚರಿತ್ರೆಯನ್ನು ಗ್ರಹಿಸಿಕೊಳ್ಳುವುದನ್ನು ಬದಿಗಿರಿಸಿ, ನವ್ಯ ಸಾಹಿತ್ಯದ 'ಲೋಕ'ವನ್ನು ಅರಿಯಲು ತೊಡಗಿದರು. ಅದು ಈ ಪ್ರಾಂತ್ಯದ ಬರಹಗಾರರಿಗೆ ಅಪರಿಚಿತ ಲೋಕವಾಗಿ, ಅಪರಿಚಿತ 'ಸಂವೇದನೆ'ಯಾಗಿ ಕಂಡರೂ ಅದರ ಬೆನ್ನು ಹತ್ತಿದ್ದರು. ಅದು ಬಿಸಿಲ್ಗುದುರೆಯಾಗಿ ಪರಿಣಮಿಸಿತು. ಆದರೆ ಈ ಕಾಲಾವಧಿಯಲ್ಲಿ ಅರಳಬೇಕಾಗಿದ್ದ ಪ್ರತಿಭೆಗಳನ್ನು ಈ ನವ್ಯ ಸಾಹಿತ್ಯ ಚಳುವಳಿ ದಿಕ್ಕು ತಪ್ಪಿಸಿತು.

ನಂತರ ಅದರ ಬೆನ್ನ ಹಿಂದೆಯೇ ಹುಟ್ಟಿಕೊಂಡ ಬಂಡಾಯ-ದಲಿತ ಸಾಹಿತ್ಯ ಚಳುವಳಿಯು ಈ ಪ್ರಾಂತ್ಯದ ಬರಹಗಾರರ ಮೇಲೆ ನೇರವಾಗಿ ಪ್ರಭಾವ ಬೀರಿತು. ಅನೇಕ ಬರಹಗಾರರನ್ನೂ, ಅದರಲ್ಲೂ ಕೆಳವರ್ಗಗಳಿಂದಲೇ ಹುಟ್ಟುವಂತೆ ಮಾಡಿತು. ಆದರೆ ಈ ಚಳುವಳಿಯ ಧೋರಣೆಯಿಂದಾಗಿ ಕೇವಲ 'ಪ್ರತಿಭಟನೆ', 'ಬಂಡಾಯ' ಆಶಯವುಳ್ಳ ಸಾಹಿತ್ಯ ಹುಟ್ಟಿಕೊಂಡಿತು ಮತ್ತು ಆದೇ ತಾನೇ ಬರೆಯಲು ಪ್ರಾರಂಭಿಸಿದ ಬರಹಗಾರರಿಗೆ ಸಾಹಿತ್ಯ ಅಧ್ಯಯನದ, ಅನುಭವದ ಕೊರತೆಯಿಂದ ಪಕ್ವವಾದ ಸಾಹಿತ್ಯ ಹುಟ್ಟಲು ಸಾಧ್ಯವಾಗಲಿಲ್ಲ. ಇದರಿಂದಾಗಿಯೇ ಎಪ್ಪತ್ತರ ದಶಕದ ನಂತರ ಈ ಪ್ರಾಂತ್ಯವು ಯಾವ ಬಗೆಯಲ್ಲಿ ತನ್ನನ್ನು ತೆರೆದುಕೊಳ್ಳತೊಡಗಿತು? ಅದರ ಹಿಂದಿನ ಒತ್ತಡಗಳೇನು? ಎಂಬ ಚರಿತ್ರೆಯನ್ನು ಗ್ರಹಿಸದೇ ಹೋದರು. ಈ ಪ್ರಾಂತ್ಯದ ಹಿಂದಿನ ಚರಿತ್ರೆಯನ್ನಂತೂ ಗ್ರಹಿಸುವ ಸಾಹಸಕ್ಕೆ ಹೋಗಲಿಲ್ಲವೆಂದು ಕಾಣುತ್ತದೆ. ನಿಜಾಮರ ಆಳ್ವಿಕೆಯಿಂದ ಬ್ರಿಟಿಷರ ವಸಾಹತುಶಾಹಿ ಅನುಭವಕ್ಕೆ ಈ ಪ್ರಾಂತ್ಯ ತೆರೆದುಕೊಳ್ಳಲಿಲ್ಲ ಎಂಬುದು ನಿಜ. ಆದರೆ ಸ್ವಾತಂತ್ರ್ಯೋತ್ತರದಲ್ಲಿ ನಿಧಾನವಾಗಿ ಕಾಲಿಟ್ಟು, ಈಗ ಭಾರತದಾದ್ಯಂತ ಆವರಿಸಿರುವ ನವವಸಾಹತುಶಾಹಿಗಳ ಅಧೀನಕ್ಕೆ ಒಳಗಾಗುತ್ತಿದೆ. ಈ ಸಂದರ್ಭದಲ್ಲಿ ಈ ಪ್ರಾಂತ್ಯದ ತಲ್ಲಣಗಳು ಯಾವ ಬಗೆಯವು? ಇದರಿಂದ ಸಮುದಾಯಗಳಲ್ಲಿ ಆಗುತ್ತಿರುವ ಬದಲಾವಣೆಯ ಸ್ವರೂಪ ಎಂಥದ್ದು ಎಂಬ ಬಗ್ಗೆ ಅಧ್ಯಯನಗಳು

ನಡೆದಿಲ್ಲ. ಅದರಲ್ಲೂ ಮಾನವಿಕ ಶಾಸ್ತ್ರಗಳಲ್ಲಿ ತೀವ್ರವಾಗಿ ಅಧ್ಯಯನಗಳು ನಡೆಯಬೇಕಾಗಿತ್ತು. 'ಕರ್ನಾಟಕದ ಮೂರನೆಯ ಜಗತ್ತು' ಎಂದು ಕರೆಸಿಕೊಳ್ಳುತ್ತಿರುವ 'ಹೈದರಾಬಾದ್ ಕರ್ನಾಟಕ' ಪ್ರಾಂತ್ಯದಲ್ಲಿ ಗುರುತಿಸುವಂಥ ಅರ್ಥಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ ಮತ್ತು ಇತರ ಕ್ಷೇತ್ರಗಳಲ್ಲಿ ತಜ್ಞರು ಬೆಳೆದಿದ್ದಾರೆಯೇ? ಸಾಹಿತ್ಯ-ಸಂಗೀತ-ಕಲೆ ಕ್ಷೇತ್ರಗಳಲ್ಲಿ ನಡೆದಷ್ಟು ಕೆಲಸಗಳು ಇತರ ಮಾನವಿಕ ಶಾಸ್ತ್ರಗಳಲ್ಲಿ ನಡೆದಿಲ್ಲವೆಂದೇ ಕಾಣುತ್ತದೆ.

ಸಾಹಿತ್ಯ ವಿಷಯಕ್ಕೆ ಬಂದರೆ ಈ ಪ್ರಾಂತ್ಯದ ಫಿಕ್ಷನ್‌ಗಳಲ್ಲಿ ಇನ್ನೂ ಫ್ಯೂಡಲ್ ವ್ಯವಸ್ಥೆ ಮತ್ತು ಅದಕ್ಕೆ ಬಲಿಯಾಗುತ್ತಿರುವ ದುಡಿಯುವ ವರ್ಗದ ಬಗ್ಗೆಯೇ ಚಿತ್ರಣವಿದೆ. ಸ್ವಾತಂತ್ರ್ಯಪೂರ್ವಕಾಲದ ಗ್ರಾಮೀಣ ಸಮಾಜದ ಬದುಕನ್ನೇ ಕಥನವಾಗಿಸಿ ಬರೆಯುತ್ತಿದ್ದಾರೆ. ಕುತೂಹಲದ ಸಂಗತಿಯೆಂದರೆ ಈ ಪ್ರಾಂತ್ಯದ ಬರಹಗಾರರು ಇದೇ ವಸ್ತುವನ್ನು ಕುರಿತು ಅಂದರೆ ಒಂದೆ ಕಥೆಯನ್ನು ಎಲ್ಲರೂ ಬರೆಯುತ್ತಿದ್ದಾರೆ. ಇದನ್ನು ಡಾ. ಎಚ್.ಎಸ್. ರಾಘವೇಂದ್ರರಾವ್ ಚೆನ್ನಾಗಿ ಗುರುತಿಸಿದ್ದಾರೆ.[೨೬] ಫ್ಯೂಡಲ್ ವ್ಯವಸ್ಥೆಯ ಸ್ಥಳದಲ್ಲಿ ಇನ್ನಾವುದೋ ಶಕ್ತಿ ಬಂದು ಕುಳಿತು ಸಮಾಜವನ್ನು ನಿಯಂತ್ರಿಸುತ್ತಿದೆ. ಇದರ ಬಗ್ಗೆ ಬರಹಗಾರರು ಗಮನಹರಿಸಿಲ್ಲ ಎನಿಸುತ್ತದೆ. ಫಿಕ್ಷನ್‌ಗಳಲ್ಲಿ ಗ್ರಾಮ ಸಮಾಜದ ಚಿತ್ರಣ ಬಿಟ್ಟರೆ ನಗರ ಬದುಕಿನ ಚಿತ್ರಣಗಳಿಲ್ಲ. 'ಆಧುನಿಕ ಸಂವೇದನೆ' ಎಂಬುದು ಕಾಣಿಸುವುದಿಲ್ಲ. ಆದರೆ ಈ ಪ್ರಾಂತ್ಯದಲ್ಲಿ ಆಧುನಿಕ ವಸ್ತುಗಳ ಉಪಭೋಗ, ನಾಗರಿಕ ಸೌಲಭ್ಯಗಳನ್ನು ಪಡೆಯುತ್ತಿರುವ ಸಮುದಾಯಗಳಿದ್ದೂ ಅವು 'ಆಧುನಿಕ'ವಾಗಿಲ್ಲ ಎನ್ನಿಸುತ್ತದೆ. 'ಕುಗ್ರಾಮ' ಎಂದು ಕರೆಯುವ ಹಳ್ಳಿಗಳಲ್ಲಿ ಇಂದು ಅಂತರಾಷ್ಟ್ರೀಯ ಸಂಪರ್ಕವನ್ನು ಕಲ್ಪಿಸುವ ಸೌಲಭ್ಯಗಳನ್ನು ಹೊಂದಿವೆ. ಅಂದರೆ ಸಮುದಾಯಗಳು ಆಧುನಿಕವಾಗದೆ, ಆಧುನಿಕವಾದ ಸೌಲಭ್ಯಗಳನ್ನು ಹೊಂದುತ್ತಿರುವ ಈ ಪ್ರಕ್ರಿಯೆಗಳ ಹಿಂದೆ ಯಾವ ಒತ್ತಡಗಳಿವೆ? ಈ ಒತ್ತಡವನ್ನು ಸಮುದಾಯಗಳು ಹೇಗೆ ನಿಭಾಯಿಸಿಕೊಳ್ಳುತ್ತಿವೆ? ಇದು ಭಾಷಿಕವಾದ, ಆರ್ಥಿಕವಾದ ಚಟುಟಿಕೆಗಳನ್ನು ಅವಲಂಭಿಸಿರುವುದರಿಂದ ಸಮಾಜದಲ್ಲಾಗುವ ಬದಲಾವಣೆಗಳ ಸ್ವರೂಪ ಯಾವ ಬಗೆಯದ್ದು? ಬರಹಗಾರರು ಈ ಪ್ರಕ್ರಿಯೆಯನ್ನು ಗ್ರಹಿಸುವತ್ತ ಹೆಜ್ಜೆ ಹಾಕುತ್ತಿದ್ದಾರೆಯೇ? ಎಂಬ ಪ್ರಶ್ನೆಗಳು ಈ ಪ್ರಾಂತ್ಯಕ್ಕೆ ಸಂಬಂಧಿಸಿ ಹುಟ್ಟಿಕೊಳ್ಳುತ್ತವೆ.

ಈ ಪ್ರಾಂತ್ಯದ ಇತಿಹಾಸದಲ್ಲಿ ನಡೆದ ರಾಜಕೀಯ ಸ್ಥಿತ್ಯಂತರಗಳಿಂದ ಉಂಟಾದ ಪರಿಣಾಮಗಳು ಬೇಕಾದಷ್ಟಿವೆ. ಐದಾರು ಶತಮಾನಗಳ ಕಾಲ 'ಹಿಂದೂ' ಮತ್ತು 'ಮುಸ್ಲಿಂ' ಸಮುದಾಯಗಳು ಕೂಡಿ ಬಾಳುತ್ತ ನಡೆದಿವೆ. ಎರಡು ಸಮುದಾಯಗಳ ನಡುವೆ ಏರ್ಪಟ್ಟ ಸಾಂಸ್ಕೃತಿಕ ನಂಟು ಬಿಡಿಸಲಾಗದ ಅನನ್ಯತೆಯನ್ನು ಪಡೆದಿದೆ. ಅಷ್ಟೇ ಅಲ್ಲ ಬಹುಭಾಷೆಗಳು, ಆ ಭಾಷೆಗಳ ಸಂಸ್ಕೃತಿಗಳೂ ಈ ನಂಟಿನಲ್ಲಿ ಪ್ರವೇಶ ಪಡೆದಿವೆ. ಬಹುಭಾಷೆಗಳ ಒತ್ತಡದಿಂದ ಕನ್ನಡ ಭಾಷೆ ಸೊರಗಿತಷ್ಟೆ. ಅದರ ಪರಿಣಾಮಗಳೂ ಬೇಕಾದಷ್ಟಿವೆ. ಕನ್ನಡ ಭಾಷೆ ಬರೀ ಆಡು ಮಾತಿನಲ್ಲಿ ಉಳಿದಿದ್ದರಿಂದಲೋ, ಲಿಪಿ ರಹಿತವಾಗಿ ಉಳಿಯುವ ಸಂದರ್ಭವೊಂದು ಕಾಣಿಸಿಕೊಂಡಿದ್ದರಿಂದಲೋ ಅಥವಾ ಈ ಸಂಕೀರ್ಣ ಕಾಲಾವಧಿಯಲ್ಲಿ ಸಹಜವಾಗಿಯೋ ಮೋಡಿ, ಅಮರಗನ್ನಡ ಲಿಪಿಗಳು ಬಳಕೆಗೆ ಬಂದಿದ್ದವಷ್ಟೆ. ಅವುಗಳು ಹುಟ್ಟುವಿಕೆಯ ಹಿಂದಿನ ರಾಜಕೀಯ, ಸಾಂಸ್ಕೃತಿಕ ರಾಜಕಾರಣದ ಸ್ವರೂಪ ಎಂಥದ್ದು? ದಖನಿ ಭಾಷೆಯೂ ಇಲ್ಲಿಯೇ ರೂಪ ತಳೆದಿದೆ. ಅನುಭಾವ ಪಂಥಗಳೂ ಈ ಪ್ರಾಂತ್ಯದಲ್ಲಿ ಕಾಣಿಸಿವೆ. ಇವೆಲ್ಲವುಗಳ ಹಿಂದಿನ ಚರಿತ್ರೆಯನ್ನು ಕುರಿತು ಗಂಭೀರ ಅಧ್ಯಯನಗಳು ನಡೆಯಬೇಕಾಗಿವೆ.

ಈ ಪ್ರಾಂತ್ಯದ ಚರಿತ್ರೆಯ ಹಲವು ಮುಖಗಳನ್ನು ಕುರಿತು ಸಂಸ್ಕೃತಿ ಚಿಂತನೆಯ ಹಿನ್ನೆಲೆಯಲ್ಲಿ ಶ್ರೀ ಕಪಟರಾಳ್ ಕೃಷ್ಣರಾವ್ ಅವರು ಮಹತ್ವದ ಸಂಶೋಧನೆ ಮಾಡಿದ್ದಾರೆ. ಅವರ ನಂತರ ಆ ಬಗೆಯ ವಿದ್ವತ್ಪೂರ್ಣ ಸಂಶೋಧನೆಗಳು ನಡೆಯಲಿಲ್ಲ. ಸಂಶೋಧನೆಗೆ ಬೇಕಾದ ಚರಿತ್ರೆಯನ್ನು ಈ ಪ್ರಾಂತ್ಯವೂ ತುಂಬಿಕೊಂಡಿದೆ. ಈ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಡಾ. ರಹಮತ್ ತರೀಕೆರೆ ಅವರ 'ಕರ್ನಾಟಕ ಸೂಫಿಗಳು' ಒಂದು ಮಹತ್ವದ ಅಧ್ಯಯನವಾಗಿದೆ.

ಅನುಬಂಧ ೧

ಕೊನೆ ಟಿಪ್ಪಣಿಗಳು

೧. ಆರ್.ಜಿ. ಜಾಗೀರದಾರ / ಲಿಂಗಸೂಗೂರು ವಿಠ್ಠಲರಾವ್: ಹೈದರಾಬಾದ್ ಕರ್ನಾಟಕ, ಪು-೫

೨. ಎಚ್.ಎಸ್. ರಾಘುವೇಂದ್ರರಾವ್: ನಿಲುವು, ಪು-೭೦

೩. ಗಿರಡ್ಡಿ ಗೋವಿಂದರಾಜ: ಸಾತತ್ಯ, ಪು-೨೬೯

೪. ತತ್ವಪದಕಾರರು ಸೇರಿ ನಡೆಸುತ್ತಿದ್ದ ವೇದಾಂತ ಚರ್ಚೆಗೆ 'ವಿಚಾರಕ್ಕೆ ಹಾಕುವುದು' ಎಂದು ಕರೆಯಲಾಗುತ್ತದೆ.

೫. ನೀರಲಕೇರಿ ಬಸವಲಿಂಗ ಶರಣ: ಜ್ಞಾನಗೀತ (ಜೀವನ ಚರಿತ್ರೆ ಭಾಗ), ಪುಟ-೪

೬. ವಿ.ಜಿ. ಪೂಜಾರ್: ರಾಮಪುರ ಬಕ್ಕಪ್ಪಯ್ಯನ ಸ್ವರ ವಚನ-ತ್ರಿಪದಿಗಳು, ಪ್ರಸ್ತಾವನೆ

೭. ದಸ್ತಗಿರಿ ಅಲ್ಲೀಭಾಯಿ: ಮುಸ್ಲಿಮರ ಹಬ್ಬ ಮತ್ತು ಉರುಸುಗಳು, ಪು-೨೪

೮. ಶಾಂತರಸ: ಎಡೆದೊರೆ ನಾಡಿನ ಅನುಭಾವಿ ಕವಿಗಳು, ಪು-೯೫, ೯೬

೯. ಮಲ್ಲಿಕಾರ್ಜುನ ಶಿ. ಲಠ್ಠೆ / ಕಾಶಿನಾಥರೆಡ್ಡಿ ಎಚ್.: ನಿಡವಂಚಿ ಭದ್ರೇಶ್ವರರ ಅನುಭಾವ ಪದಗಳು, ಮುನ್ನುಡಿ

೧೦. ಜಿ.ಎಸ್. ಶಿವರುದ್ರಪ್ಪ: ಸಮಗ್ರ ಗದ್ಯ-೩, ಪುಟ-೪

೧೧. ಆರ್.ಜಿ. ಜಾಗಿರದಾರ/ಲಿಂಗಸುಗೂರು ವಿಠ್ಠಲರಾವ್: ಹೈದರಾಬಾದ್ ಕರ್ನಾಟಕ, ಪುಟ-೫

೧೨. ಕಪಟರಾಳ ಕೃಷ್ಣರಾವ್: ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಪುಟ-೨೧೨

೧೩. ಭಾಲಚಂದ್ರ ಜಯಶೆಟ್ಟಿ: ಸಮ್ಮೇಳನಾಧ್ಯಕ್ಷರ ಭಾಷಣ, ಪುಟ-೯

೧೪. ಕಪಟರಾಳ ಕೃಷ್ಣರಾವ್: ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಪುಟ-೨೧೩

೧೫. ಕಪಟರಾಳ ಕೃಷ್ಣರಾವ್: ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಪುಟ-೨೧೭

೧೬. ಕಪಟರಾಳ ಕೃಷ್ಣರಾವ್: ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಪುಟ-೨೧೨

೧೭. ಬ.ಬೀ. ಪಂಪನಗೌಡ್ರು: ಜಯತೀರ್ಥ, ಪುಟ-೩೫

೧೮. ಭಾಲಚಂದ್ರ ಜಯಶೆಟ್ಟಿ: ಸಮ್ಮೇಳನಾಧ್ಯಕ್ಷರ ಭಾಷಣ, ಪುಟ-೨

೧೯. ಕಾಶೀನಾಥ ಅಂಬಲಿಗೆ: ಚೆಂಬೆಳಕು-ಅಧ್ಯಕ್ಷೀಯ ಭಾಷಣ, ಪುಟ-೧೩

೨೦. ಕಪಟರಾಳ ಕೃಷ್ಣರಾವ್: ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಪುಟ-೨೧೮

೨೧. ಪಂಚಾಕ್ಷರಿ ಹಿರೇಮಠ: ನೀ ರುದ್ರನಾಗು, ಮುನ್ನುಡಿ, (ಸದಾಶಿವ ಒಡೆಯರ್), ಪುಟ-೧

೨೨. ಕೆ.ಜಿ. ನಾಗರಾಜಪ್ಪ (ಸಂ.): ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು, (ಲೇಖನ: ಡಿ.ಆರ್. ನಾಗರಾಜ), ಪುಟ-೮೮

೨೩. ಅಮರೇಶ ನುಗಡೋಣಿ (ಸಂ): ಬಿಸಿಲ ಹನಿಗಳು, ಮುನ್ನುಡಿ

ಅನುಬಂಧ ೨

ಸೃಜನಶೀಲ ಕೃತಿಗಳು

ಅ. ತತ್ವಪದ ಸಾಹಿತ್ಯ

ಅಪ್ಪಾಸಾಬ ಬಿರಾದಾರ: ದ್ಯಾಗಾಯಿ ಗುಂಡಪ್ಪ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಆನಂದಮೂರ್ತಿ ಜಿ.ವಿ.(ಸಂ): ತತ್ವಪದಕಾರರು(೧೯೯೬), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕುಮಾರ ಟಿ.ಎಸ್.(ಸಂ): ಶ್ರೀ ಕರಿಗೂಳೇಶ್ವರ ತತ್ವಪದಗಳು(೧೯೯೨), ಶರಣ ಪ್ರಕಾಶನ, ಕಲಬುರ್ಗಿ

ಖೇಮಣ್ಣ: ಶ್ರೀ ಖೇಮಣ್ಣ ವಿರಚಿತ ಕೈವಲ್ಯ ಸಾರಾಮೃತವು(೧೯೯೨), ಗಂಗಶ್ರೀ ಪಬ್ಲಿಕೇಶನ್, ಮಾನ್ವಿ

ಗೀತಾ ನಾಗಭೂಷಣ: ಖೇಮಣ್ಣ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಗುರುಬಸವಯ್ಯ ಅಮ್ಮಾಪುರ : ನೀರಲಕೇರಿ ಬಸವಲಿಂಗ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಗುರುಲಿಂಗಾರ್ಯ ಕೆಂಭಾವಿ(ಸಂ): ನೀರಲಕೇರಿ ಬಸವಲಿಂಗ ಶರಣರ ಜ್ಞಾನಗೀತ(೧೯೫೪), ಕೋಟಿ ಗ್ರಾಮದ ಸಜ್ಜನಶೆಟ್ಟಿ, ಲಿಂಗಸೂಗೂರು

ಚನ್ನಬಸವಪ್ಪ ಬೆಟದೂರು : ಘನಮಠ ನಾಗಭೂಷಣ ಶಿವಯೋಗಿ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಜಗನ್ನಾಥಶಾಸ್ತ್ರಿ(ಸಂ): ಶ್ರೀ ಚಿದಾನಂದಾವಧೂತರ ಕೀರ್ತನೆಗಳು(೧೯೯೩), ಕೆ.ಜಗನ್ನಾಥ ಶಾಸ್ತ್ರಿ, ಶ್ರೀಕೃಪಾ, ಶಿವಮೊಗ್ಗ

ತಾಳಕೇರಿ ಬಸವರಾಜ: ಕಲ್ಯಾಣ ಗೀತಾ(೧೯೬೬), ವಿಜಯ ಬುಕ್ ಡಿಪೋ, ಗದಗ

ಪ್ರಭು ಖಾನಾಪುರೆ : ಮುಸ್ಲಿಂ ತತ್ವ ಪದಕಾರರು (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಪೂಜಾರ ವ್ಹಿ.ಜಿ.(ಸಂ): ರಾಮಪುರ ಬಕ್ಕಪ್ಪಯ್ಯನ ಸ್ವರವಚನ-ತ್ರಿವಿಧಿ(೧೯೯೬), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಬಿರಾದಾರ ಎಂ.ಜಿ.(ಸಂ): ಮೋಟ್ನಹಳ್ಳಿ ಹಸನಸಾಹೇಬರ ತತ್ವಪದಗಳು(೧೯೯೭), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಭಾಸ್ಕರ ಟಿ.ಎಂ. : ಮಹಾಗಾಂವ ಮೀರಸಾಬ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಭೂಸನೂರುಮಠ ಸಂ.ಶಿ.(ಸಂ): ಶ್ರೀ ಘನಮಠ ಶಿವಯೋಗಿ ವಿರಚಿತ ಭಕ್ತಿ ಸುಧಾಸಾರ(೧೯೭೬), ಶ್ರೀ ಮುರುಘಾಮಠ, ಧಾರವಾಡ

ಮಲ್ಲಿಕಾರ್ಜುನ ಶಿ.ಲಠ್ಠೆ/ಕಾಶೀನಾಥರೆಡ್ಡಿ ಎಚ್.(ಸಂ): ಶಿಲ್ಲಪ್ಪ ಕವಿಯ ಬದುಕು-ಬರಹ(೧೯೮೭), ಭೂತಾಳೆ ಪ್ರಕಾಶನ, ಚಿಟಗುಪ್ಪಾ, ಬೀದರ್ ಜಿಲ್ಲೆ

ಮಲ್ಲಿಕಾರ್ಜುನ ಶಿ.ಲಠ್ಠೆ/ಕಾಶೀನಾಥರೆಡ್ಡಿ ಎಚ್.(ಸಂ): ನಿಜಲಿಂಗ ಭದ್ರೇಶ್ವರ ಅನುಭಾವ ಪದಗಳು(೧೯೮೭), ಶ್ರೀ ಭದ್ರೇಶ್ವರ ಪ್ರಕಾಶನ, ಇಟಾಗ

ಮಲ್ಲಿಕಾರ್ಜುನ ಶಿ. ಲಠ್ಠೆ (ಸಂ): ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು(೧೯೮೨), ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ

ಮಹಾದೇವಪ್ಪ ಬಿ. : ಮೋಟ್ನಳ್ಳಿ ಹಸನ ಸಾಹೇಬ (೧೯೯೬), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮಹಾದೇವಿ ಆರ್. ಹಿರೇಮಠ : ಐನೆಲೆ ಕರಿಬಸವಾರ್ಯರ ಸ್ವರ ವಚನಗಳು (೧೯೯೭), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮೀನಾಕ್ಷಿ ಬಾಳಿ(ಸಂ): ಕಡಕೋಳ ಮಡಿವಾಳೇಶ್ವರ ಶಿಷ್ಯರ ತತ್ವಪದಗಳು(೧೯೯೭). ಶ್ರೀ ಚೆನ್ನಬಸವೇಶ್ವರ ಸಂಸ್ಥಾನ, ಹಾರಕೂಡ. ಜಿ.ಬೀದರ್

ಮೀನಾಕ್ಷಿ ಬಾಳಿ : ಖೈನೂರು ಕೃಷ್ಣಪ್ಪ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾಮಸ್ವಾಮಿ ನೂಲಿ : ಗೊಬ್ಬೂರು ಹಂಪಣ್ಣ, (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಲಿಂಗಾರೆಡ್ಡಿ ಶೇರಿ(ಸಂ): ನಿತ್ಯಾನಂದ ತತ್ವಪದಗಳು(೧೯೮೩). ಬಸವ ಪ್ರಕಾಶನ, ಜಾನಕ ಹಳ್ಳಿ, ಜಿ.ಕಲಬುರ್ಗಿ

ಲಠ್ಠೆ ಎಂ.ಎಸ್.(ಸಂ): ಸಿರಗಾಪುರ ಬಂಡೆಪ್ಪ ಕವಿಯ ಭಜನೆಯ ಪದಗಳು(೧೯೮೩). ಶ್ರೀ ಶರಣ ಪ್ರಕಾಶನ, ಕಲಬುರ್ಗಿ

ವಡಕಿ ತಾತಪ್ಪಯ್ಯ: ಅಮೃತ ಶಿಖಾಮಣಿ(೧೯೫೭), ಸಾಧನಾ ಪ್ರಿಂಟರಿ, ರಾಯಚೂರು

ವಿಜಯಶ್ರೀ ಸಬರದ : ಗುರುಶಿಷ್ಯರ ತತ್ವಪದಗಳು (೧೯೯೭), ಕರ್ನಾಟಕ ಜಾನಪ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ವಿಶಾಲಾಕ್ಷಾಂಬತಾಯಿ(ಸಂ): ಆದಿ ಅಮಾತಪ್ಪನ ಕೈವಲ್ಯ ನವನೀತ, ಶ್ರೀ ತೋಂಟದಾರ್ಯ ಬುಕ್ ಡಿಪೋ, ಗದಗ

ವಿಸಾಜಿ ಜಿ.ವಿ. : ಕೊಳ್ಳೂರ ಹುಸನಾಸಾಹೇಬ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಶಾಂತರಸ(ಸಂ): ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು(೧೯೮೩), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಶಿವರಾಮ ಮಹಾಂತಪೂರ : ಮುಕ್ತಿ ಮಂಜರಿ (೧೯೯೨), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸ್ವಾಜಿ ಎಸ್.ಜಿ. : ಕೂಡಲೂರು ಬಸಲಿಂಗಪ್ಪ (೧೯೯೬), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸೂಗಯ್ಯ ಹಿರೇಮಠ : ರಾಮಪುರ ಬಕ್ಕಪ್ಪ (೧೯೯೬), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಹಂಪಣ್ಣ ತಾತ ಗಬ್ಬೂರು: ಕೈವಲ್ಯ ಕೈದೀವಿಗೆ, ಶ್ರೀಷ.ಬ್ರ.ತಪಸ್ವಿಯೋಗಿ ರಾಜೇಂದ್ರ ಶಿವಾಚಾರ್ಯ ಹಿರೇಮಠ, ಹುಟಗಿ(ಸೋಲಾಪುರ)

ಹರಿಶ್ಚಂದ್ರ ದಿಗ್ಸಂಗಿಕರ್ : ಸಾವಳಗಿ ಮಹಮ್ಮದ ಸಾಬ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಹೇರೂರು ವಿರುಪನಗೌಡ: ಕೈವಲ್ಯ ತತ್ವಪದಗಳು, ಪಿ.ಸಿ.ಶಾಬಾದಿಮಠ ಬುಕ್ ಡಿಪೊ, ಗದಗ

ಆ. ಕಥಾ ಸಾಹಿತ್ಯ

ಅಮರೇಶ ನುಗಡೋಣಿ(ಸಂ) ಬಿಸಿಲ ಹನಿಗಳು (೧೯೯೫), ಜಿಲ್ಲಾ ಸಾಹಿತ್ಯ ಪರಿಷತ್, ರಾಯಚೂರು

ಕ್ಷಿತಿಜ ಬೀದರ್ : ಅನರ್ಥ (೧೯೯೨), ಫ್ರೆಂಡ್ಸ್ ಅಸೋಸಿಯೇಶನ್ ಪ್ರಕಾಶನ, ಬೆಂಗಳೂರು

ಕೋರಗಲ್ ವಿರೂಪಾಕ್ಷಪ್ಪ: ನ್ಯಾಯ (೧೯೯೦), ಸಂಕ್ರಮಣ ಪ್ರಕಾಶನ, ಧಾರವಾಡ

ಕೋರಗಲ್ ವಿರೂಪಾಕ್ಷಪ್ಪ: ಮಣ್ಣಿನ ಗುಣ (೧೯೯೨), ಪ್ರಗತಿಪರ ವೇದಿಕೆ, ಹಾವೇರಿ

ಗೀತಾ ನಾಗಭೂಷಣ: ಜ್ವಲಂತ (೧೯೮೯), ಅಷ್ಟಲಕ್ಷ್ಮಿ ಪ್ರಕಾಶನ, ಬೆಂಗಳೂರು

ಗೀತಾ ನಾಗಭೂಷಣ: ಅವ್ವ ಮತ್ತು ಇತರ ಕಥೆಗಳು (೧೯೯೩), ಪ್ರ:ಬಸವ ಪ್ರಕಾಶನ, ಗುಲಬರ್ಗಾ

ಗುರುನಾಥ ಅಕ್ಕಣ್ಣಾ: ಯಾರನ್ನೂ ಪ್ರೀತಿಸಬೇಡ (೧೯೯೦), ತರಂಗಿಣಿ ಪ್ರಕಾಶನ, ಗೋರ್ಟ, ಜಿ. ಬೀದರ

ಗುರುನಾಥ ಅಕ್ಕಣ್ಣ: ಇದು ಎಂಥ ಲೋಕವಯ್ಯ (೧೯೯೬), ತರಂಗಿಣಿ ಪ್ರಕಾಶನ,ಗೋರ್ಟ

ಚಿತ್ರಶೇಖರ ಕಂಠಿ(ಸಂ): ಕಥಾ ಸೌಂಗಂಧ (೧೯೮೫), ಗೆಳೆಯರ ಬಳಗ ಪ್ರಕಾಶನ, ಗುಲಬರ್ಗಾ

ಚಿತ್ರಶೇಖರ ಕಂಠಿ: ನೇಪತ್ಯ (೧೯೯೦), ಗೆಳೆಯರ ಬಳಗ ಪ್ರಕಾಶನ, ಯಾದಗಿರಿ

ಚಿತ್ರಶೇಖರ ಕಂಠಿ: ಕಾಡು ಪ್ರೀತಿ ಮತ್ತು ನಾನು (೧೯೯೫), ಗೆಳೆಯರ ಬಳಗ, ಗುಲಬರ್ಗಾ

ಚೆನ್ನಣ್ಣ ವಾಲೀಕಾರ: ಕಪ್ಪು ಕಥೆಗಳು (೧೯೭೮), ಹೈದರಾಬಾದ ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಯಚೂರು

ಚೆನ್ನಣ್ಣ ವಾಲೀಕಾರ: ಕುತ್ತದಲ್ಲಿ ಕುದ್ದವರ ಕಥೆಗಳು (೧೯೯೦), ಶಿವಪೂರ ಪ್ರಕಾಶನ, ಗುಲಬರ್ಗಾ

ಜಯತೀರ್ಥ ರಾಜಪುರೋಹಿತ: ಪಾರವ್ವನ ಪಂಚಾಯಿತಿ (೧೯೬೭), ನೃಪತುಂಗ ಪ್ರಕಾಶನ, ಗುಲಬರ್ಗಾ

ಜಯತೀರ್ಥ ರಾಜಪುರೋಹಿತ: ರೋಹಿಣಿ (೧೯೬೮), ಪ್ರಕಾಶ ಪ್ರಕಾಶನ, ರಾಯಚೂರು

ಜಯತೀರ್ಥ ರಾಜಪುರೋಹಿತ: ಮೌಲ್ಯಗಳು (೧೯೭೪), ಶ್ರೀ ಪ್ರಕಾಶನ, ರಾಜಾಜಿನಗರ, ಬೆಂಗಳೂರು

ಡೈರೆಕ್ಟರ್(ಸಂ): ಒರೆಗಲ್ಲು (೧೯೫೩), ಸುದ್ದಿ ಮತ್ತು ಸಾರ್ವಜನಿಕ ಸಂಬಂಧಗಳ ಖಾತೆಯ ಮುಖ್ಯಾಧಿಕಾರಿಗಳು, ಹೈದರಾಬಾದ್

ದೇವೇಂದ್ರ ಕುಮಾರ ಹಕಾರಿ: ಚಾಟಿ (೧೯೭೭), ವಿದ್ಯಾವಾಹಿನಿ ಪ್ರಕಾಶನ, ಗದಗ

ಪಂಚಾಕ್ಷರಿ ಹಿರೇಮಠ: ಎಸ್ನಾತೇಕ (೧೯೬೯), ತಾರಾಗ್ರಂಥ ಪ್ರಕಾಶನ, ಧಾರವಾಡ

ಭಾಲಚಂದ್ರ ಜಯಶೆಟ್ಟಿ: ಕೋಡಗಲ್ಲಿನ ಕೂಗು (೧೯೯೧), ಪ್ರಜ್ಞಾ ಪ್ರಕಾಶನ, ಗುಲಬರ್ಗಾ

ಭಾಲಚಂದ್ರ ಜಯಶೆಟ್ಟಿ: ಮಿರ್ಚಿಬಾಬ ಮತ್ತು ಇತರ ಕಥೆಗಳು (೧೯೯೩), ಬಸವ ಪ್ರಕಾಶನ, ಗುಲಬರ್ಗಾ

ಮಲ್ಲಿಕಾರ್ಜುನ ಹಿರೇಮಠ: ಅಮೀನಪುರದ ಸಂತೆ (೧೯೯೦), ಚೈತನ್ಯ ಪ್ರಕಾಶನ, ಹುನುಗುಂದ

ಮಹಾಂತೇಶ ಮಲ್ಲನಗೌಡರ: ಯುಟೋಪಿಯಾ (೧೯೮೬), ದೀಪ್ತಿ ಪ್ರಕಾಶನ, ನರೇಗಲ್ಲ, ಜಿಲ್ಲಾ: ರಾಯಚೂರು

ಮುತ್ತಾಳ ಎ.ಬಿ.: ಕಳಚಲಿದೆ ರತ್ನ (೧೯೫೧), ಎಂ.ಬಿ.ಅನ್ನದಾನಪ್ಪ, ಕೊಪ್ಪಳ

ರಾಜಶೇಖರ ನೀರಮಾನ್ವಿ: ಕರ್ಪೂರದ ಕಾಯದಲ್ಲಿ (೧೯೯೦), ಲೋಹಿಯಾ ಪ್ರಕಾಶನ, ಬಳ್ಳಾರಿ

ರಾಜಶೇಖರ ನೀರಮಾನ್ವಿ: ಹಂಗಿನರಮನೆಯ ಹೊರಗೆ (೧೯೯೦), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಲಕ್ಷ್ಮೀದೇವಿ ಶಾಸ್ತ್ರಿ: ಹೃದಯಕ್ಕೆ ಹತ್ತಿರಾದವರು (೧೯೯೬), ವಿಶ್ವ ಪ್ರಕಾಶನ, ರಾಯಚೂರು

ಲಠ್ಠೆ ಎಂ.ಎಸ್.: ಕಥಾಗಂಗಾ (೧೯೯೦), ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಲಲಿತಾ ದೇಮಶೆಟ್ಟಿ: ಮಾತಂಗಿ (೧೯೮೬), ಮಮತಾ ಪ್ರಕಾಶನ, ಕೊಪ್ಪಳ

ಲಲಿತಾನಾಯಕ್ ಬಿ.ಟಿ.: ಹಬ್ಬ ಮತ್ತು ಬಲಿ (೧೯೮೯), ಲಂಬಾಣಿ ಒಕ್ಕೂಟ ಪ್ರಕಾಶನ, ಶಾಸಕರ ಭವನ, ಬೆಂಗಳೂರು

ವಿಸಾಜಿ ಜಿ.ಬಿ.: ಅನಂತ ಸಂಗಮ (೧೯೬೯), ಗೆಳೆಯರ ಬಳಗ, ಕೋಹಿನೂರು, ಜಿ|| ಬೀದರ

ಶಾಂತರಸ: ಶಾಂತರಸರ ಸಮಗ್ರ ಕಥೆಗಳು (೧೯೯೭), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

ಶಿವಲೆಂಕ: ಅವಳೇ ಇವಳು (೧೯೬೩), ಸಂಗಡಿಗರ ಸಮಿತಿ, ರಾಯಚೂರು

ಶ್ರೀಕಾಂತ ಪಾಟೀಲ: ಬೆಂಕಿ ಮರೆಯ ತಂಪು (೧೯೯೭), ಶಶಿ ಪ್ರಕಾಶನ, ಬಟಗೇರಾ, ಜಿ.ಬೀದರ್

ಸಗರ ಕೃಷ್ಣಚಾರ್ಯ: ಆದರ್ಶ (೧೯೬೦), ಸಾರ್ವಜನಿಕ ಸಾಹಿತ್ಯ ಮಂದಿರ, ರಂಗಂಪೇಟ, ಜಿ|| ಗುಲಬರ್ಗಾ

ಸನದಿ ಬಿ.ಎ./ರಾಘವೇಂದ್ರ ಇಟಗಿ(ಸಂ): ಸನ್ಮಾನ (೧೯೬೮), ನೃಪತುಂಗ ಪ್ರಕಾಶನ, ಗುಲಬರ್ಗಾ

ಸರಿತಾ ಕುಸುಮಾಕರ ದೇಸಾಯಿ: ಕಾಶಿಯಲ್ಲಿ ಕಂಡದ್ದೇನು (೧೯೮೦), ಸಂಜೀವನಿ ಪ್ರಕಾಶನ, ಗುಲಬರ್ಗಾ

ಸಿದ್ಧರಾಮ ಹೊನ್ಕಲ್: ಕಥೆ ಕೇಳು ಗೆಳೆಯಾ (೧೯೯೧), ಜಾಗೃತ ಪ್ರಕಾಶನ, ಶಹಪುರ

ಸೂಗಯ್ಯ ಹಿರೇಮಠ: ಅಂತರ (೧೯೯೩), ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ, ಜಿ|| ಬೀದರ್

ಸೂಗಯ್ಯ ಹಿರೇಮಠ: ಹುಳಗಳು (೧೯೯೩), ಪ್ರಗತಿ ಪ್ರಕಾಶನ, ಗುಲಬರ್ಗಾ

೩. ಕಾದಂಬರಿ ಸಾಹಿತ್ಯ

ಗವೀಶ ಹಿರೇಮಠ: ಬದುಕು-ಚದುರಂಗದಾಟ(೧೯೭೬), ಎಸ್.ಬಿ.ಉಪಳಾಂವಕರ್ ಪ್ರಕಾಶನ, ಗುಲಬರ್ಗಾ

ಗೀತಾ ನಾಗಭೂಷಣ: ನೀಲಗಂಗಾ (೧೯೮೬), ಪತ್ರಿಕೆ ಪ್ರಕಾಶನ, ಬೆಂಗಳೂರು

ಗೀತಾ ನಾಗಭೂಷಣ: ಚಿಕ್ಕಿಯು ಹರೆಯದ ದಿನಗಳು(೧೯೮೩), ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

ಗೀತಾ ನಾಗಭೂಷಣ: ಆಸರೆಗಳು (೧೯೮೮), ದಿವ್ಯಚಂದ್ರ ಪ್ರಕಾಶನ, ಬೆಂಗಳೂರು

ಗೀತಾ ನಾಗಭೂಷಣ: ಧುಮ್ಮುಸು(೧೯೯೪), ಮಹಿಳಾ ಸಾಹಿತ್ಯಕಾ, ಪ್ರಕಾಶನ, ಹುಬ್ಬಳ್ಳಿ

ಗೀತಾ ನಾಗಭೂಷಣ: ಏರಿಳಿತಗಳು(೧೯೯೫), ಗಜಾನನ ಪ್ರಕಾಶನ, ಬೆಂಗಳೂರು

ಗೀತಾ ನಾಗಭೂಷಣ: ಹಸಿಮಾಂಸ ಮತ್ತು ಹದ್ದುಗಳು(೧೯೯೫), ಸುಭಾಷ್ ಪಬ್ಲಿಕೇಷನ್, ಬೆಂಗಳೂರು

ಗೀತಾ ನಾಗಭೂಷಣ: ಮಾಪೂರ ತಾಯಿಯ ಮಕ್ಕಳು(೧೯೯೫), ಸುಭಾಷ್ ಪಬ್ಲಿಕೇಷನ್, ಬೆಂಗಳೂರು

ಗೀತಾ ನಾಗಭೂಷಣ: ದಂಗೆ (೧೯೯೭), ನವಕರ್ನಾಟಕ ಪ್ರಕಾಶನ, ಬೆಂಗಳೂರು

ಚಂದ್ರಕಾಂತ ಕುಸನೂರು: ಚರ್ಚ್‌ಗೇಟ್ (೧೯೬೯), ಸತ್ಯಸ್ನೇಹ ಪ್ರಕಾಶನ, ರಾಯಚೂರು

ಚಂದ್ರಕಾಂತ ಕುಸನೂರು: ಯಾತನಾಶಿಬಿರ (೧೯೭೫), ಮನೋಹರ ಗ್ರಂಥಮಾಲಾ, ಧಾರವಾಡ

ಚಂದ್ರಕಾಂತ ಕುಸನೂರು: ಗೋಹರ ಜಾನ್ ಮಾಲತಿ ಮತ್ತು ನಾನು (೧೮೮೬), ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

ಚಿತ್ರಶೇಖರ ಕಂಠಿ: ದಡಸೇರದ ದೋಣಿ ಮತ್ತು ಪಯಣಿಗ (೧೯೯೩), ಗೆಳೆಯರ ಬಳಗ ಪ್ರಕಾಶನ, ಗುಲಬರ್ಗಾ

ಚೆನ್ನಣ್ಣ ವಾಲೀಕಾರ: ಬೆಳ್ಳ(೧೯೭೫), ಸುಮನಸಾ ವಿಚಾರ ವೇದಿಕೆ, ಚೊಕ್ಕಾಡಿ (ದ.ಕ)

ಚೆನ್ನಣ್ಣ ವಾಲೀಕಾರ: ಹುಲಿಗೆಮ್ಮ(೧೯೮೯), ಪ್ರಜ್ಞಾ ಪ್ರಕಾಶನ, ಗುಲಬರ್ಗಾ

ಚೆನ್ನಣ್ಣ ವಾಲೀಕಾರ: ಗ್ರಾಮಭಾರತ, ಬಾಪ್ಕೊ ಪ್ರಕಾಶನ, ಬೆಂಗಳೂರು

ಚೆನ್ನಣ್ಣ ವಾಲೀಕಾರ: ಕೋಟೆ ಬಾಗಿಲು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಚೆನ್ನಣ್ಣ ವಾಲೀಕಾರ: ಒಂದು ಹೆಣ್ಣಿನ ಒಳಜಗತ್ತು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಜಂಬಣ್ಣ ಅಮರಚಿಂತ: ಕುರುಮಯ್ಯ ಮತ್ತು ಅಂಕುಶದೊಡ್ಡಿ (೧೯೯೪), ಮಾರ್ಕ್ಸ್ ಲೆನಿನ್ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ

ಜಯತೀರ್ಥ ರಾಜಪುರೋಹಿತ: ಹಾಲುಜೇನು (೧೯೬೭), ಕನ್ನಡ ಸಾಹಿತ್ಯ ಸಂಘ, ಕಲಬುರ್ಗಿ

ಜಯತೀರ್ಥ ರಾಜಪುರೋಹಿತ: ಸುಳಿಗಾಳಿ (೧೯೮೩), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಜಯತೀರ್ಥ ರಾಜಪುರೋಹಿತ: ಜೊಹರಾ(೧೯೮೩), ಸುರಚಿ ಪ್ರಕಾಶನ, ಮೈಸೂರು

ದೇವೇಂದ್ರ ಕುಮಾರ ಹಕಾರಿ: ಕೂಗುತಿದೆ ಕಲ್ಲು (೧೯೬೧), ಧಾರವಾಡ

ಯಶೋದಮ್ಮ ಸಿದ್ ಭಟ್ಟ: ಮಂಗಳಾ (೧೯೯೫), ಕಾವ್ಯಶ್ರೀ ಪ್ರಕಾಶನ, ಬೀದರ್

ಲಲಿತಾ ದೇಮಶೆಟ್ಟಿ: ವೈದೇಹಿ(೧೯೯೧), ಮಮತಾ ಪ್ರಕಾಶನ, ಕೊಪ್ಪಳ

ಲಲಿತಾನಾಯಕ ಬಿ.ಟಿ.: ಗತಿ(೧೯೮೦), ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು

ಲಲಿತಾನಾಯಕ ಬಿ.ಟಿ.: ನೆಲೆ-ಬೆಲೆ(೧೯೮೧), ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು

ಶಾಂತರಸ: ಸಣ್ಣಗೌಡಸಾನಿ(೧೯೮೮), ನೃಪತುಂಗ ಅಧ್ಯಯನ ಸಂಸ್ಥೆ, ಸೇಡಂ

ಈ. ಕಾವ್ಯ ಸಾಹಿತ್ಯ

ಅಕ್ಬರ್ ಸಿ.ಕಾಲಿಮಿರ್ಚಿ: ಆಶಯ (೧೯೯೩), ಕನ್ನಡ ಮೈತ್ರಿ ಪ್ರಕಾಶನ, ಮಂಗಳೂರು

ಅದವಾನಿ ಅ.ಮ.ಸಿ.: ಪುಂಗ-ಮಲ್ಲನ-ವ್ಯಂಗ್ಯ ಪದಗಳು(೧೯೭೧), ಸ್ವಯಂಪ್ರಭಾ ಗ್ರಂಥಮಾಲೆ, ರಾಯಚೂರು

ಅನ್ನದಾನಪ್ಪ ಕರಮುಡಿ ಎನ್.: ಝೇಂಕಾರ (೧೯೯೧), ಕರ್ನಾಟಕ ಯುವಕ ಮಂಡಳಿ, ಕರಮುಡಿ

ಅಬ್ದುಲ್ ಕರೀಂ ಕನ್ನಾಕೋಳುರು: ಚಿಂತನಶೀಲ (೧೯೯೪), ಹನಿ ಪ್ರಕಾಶನ, ಗಂಗಾವತಿ

ಅಲ್ಲಮಪ್ರಭು ಬೆಟ್ಟದೂರು: ಇದು ನನ್ನ ಭಾರತ (೧೯೭೭), ಪ್ರ: ಸಂಕ್ರಮಣ ಪ್ರಕಾಶನ, ಧಾರವಾಡ

ಅಲ್ಲಮಪ್ರಭು ಬೆಟ್ಟದೂರು: ಕುದುರೆ ಮೋತಿ ಮತ್ತು ನೀಲಗಿರಿ (೧೯೮೯), ಸಂಕ್ರಮಣ ಪ್ರಕಾಶನ, ಧಾರವಾಡ

ಅಲ್ಲಾಭಕ್ಷ ಲಾಡಸಾಬ(ಸಂ): ಕನ್ನಡಿಗರ ಕವನಗಳು(೧೯೭೨), ರಾ.ತ.ಬ.ಕ.ಸಂಘ, ರಾಯಚೂರು

ಅಲ್ಲಾವುದ್ದೀನ್ ಯಮ್ಮಿ(ಸಂ): ಸಂದೇಶ (೧೯೯೩), ಪ್ರತಿಭಾ ಪ್ರಕಾಶನ, ಕುಕನೂರು

ಅಶೋಕಸ್ವಾಮಿ ಅ.ವಿ.: ಅಗ್ರರಂಗ (೧೯೮೫), ಯುವವೇದಿಕೆ, ಹೇರೂರು, ಜಿ|| ರಾಯಚೂರು

ಇಂದಿರೇಶ: ಅಮೃತ ಬಿಂದು (೧೯೫೯), ಸಗರ ಸಾಹಿತ್ಯ ನಿಲಯ-ಶಹಪೂರ

ಇಂದಿರೇಶ: ತೋರಣ (೧೯೮೭), ಸಗರ ಸಾಹಿತ್ಯ ನಿಲಯ-ಶಹಪೂರ

ಈರಣ್ಣ ಕರುನಾಡಕರ್(ಸಂ): ಕತ್ತಲ ಲೋಕದ ಕಾವ್ಯ (೧೯೮೮), ಪ್ರತಿಭಾ ಪ್ರಕಾಶನ, ರಾಯಚೂರು

ಈರಪ್ಪ ಎಂ.ಕಂಬಳಿ: ಅರೆಸತ್ತ ಬದುಕು (೧೯೯೨), ಚಾರ್ವಾಕ ಪ್ರಕಾಶನ, ಬೆಂಗಳೂರು

ಕವಿರಾಜ: ಕಾವ್ಯಶ್ರೀ (೧೯೯೪), ಶ್ರೀಮತಿ ಸರಸ್ವತಿ ದೇವಿ, ಮಂಗಳೂರು

ಕಾಶೀನಾಥ ಅಂಬಲಿಗೆ: ಹುಲ್ಲು ಮೇಲಿನ ಹನಿಗಳು (೧೯೮೬), ಪ್ರಗತಿ ಪ್ರಕಾಶನ, ಬಸವಕಲ್ಯಾಣ

ಕಾಶೀನಾಥ ಅಂಬಲಿಗೆ: ಕೌದಿ (೧೯೯೩), ಪ್ರಗತಿ ಪ್ರಕಾಶನ, ಕಲಬುರ್ಗಿ

ಕಾಶೀನಾಥ ಅಂಬಲಿಗೆ: ಮೂವತ್ತೈದು ಕವನಗಳು (೧೯೯೬), ಪ್ರಗತಿ ಪ್ರಕಾಶನ, ಬಸವಕಲ್ಯಾಣ

ಕಾಶೀನಾಥ ಅಂಬಲಿಗೆ: ಇನ್ನಷ್ಟು ಕವನಗಳು(೧೯೮೬), ಪ್ರಗತಿ ಪ್ರಕಾಶನ, ಬಸವಕಲ್ಯಾಣ

ಕಾಶೀನಾಥ ಹಂದ್ರಾಳ(ಸಂ): ಕಾವ್ಯಕುಸುಮ (೧೯೯೨), ಬಾಪೂ ವಿಚಾರ ವೇದಿಕೆ, ಹೊಲಗೇರಿ

ಕೃಷ್ಣ ಎ. ಸುರುಪುರ: ಎದೆಗಡಲ ಮುತ್ತುಗಳು (೧೯೯೨), ಮಹಾಕವಿ ಲಕ್ಷ್ಮೀಶ ವಾಚನ ಸಂಘ-ಸುರಪುರ

ಕೃಷ್ಣರಾವ್ ಜಿ. : ಕೇದಾರ (೧೯೬೮), ಸತ್ಯಸ್ನೇಹ ಪ್ರಕಾಶನ, ರಾಯಚೂರು

ಕೃಷ್ಣರಾವ ಜಿ.: ಕಾದ್ಹಂಚು ಮೇಲಿನ ನೀರು (೧೯೭೩), ಸತ್ಯ ಸ್ನೇಹ ಪ್ರಕಾಶನ, ರಾಯಚೂರು

ಕೆರಳ್ಳಿ ಲಕ್ಷ್ಮಾರೆಡ್ಡಿ: ಸಮುದ್ರಕ್ಕೆ ನೀರಡಿಕೆಯಾಗಿದೆ (೧೯೯೫), ಸುವರ್ಣಾ ಪ್ರಕಾಶನ, ಬೀದರ

ಗಂಗನಪಳ್ಳಿ ಎಂ.ಜಿ.: ಕಾವ್ಯಕುಂಜ (೧೯೯೩), ಸಿರಿಗನ್ನಡ ಪ್ರಕಾಶನ, ಬೀದರ

ಗಂಗಾನುಜ (ಪಿ.ವ್ಹಿ.ಕಟ್ಟಿ): ಸುಮನ (೧೯೮೯), ಆರ್ .ಎಸ್ .ಚೋಳಿ, ಸಂಪದ ಪ್ರಕಾಶನ, ಗುನ್ನಾಳ

ಗವಿಸಿದ್ಧ ಎನ್. ಬಳ್ಳಾರಿ: ಕತ್ತಲು ದೇಶದ ಪದಗಳು (೧೯೭೭), ಅಂತರಂಗಧ್ವನಿ ಪ್ರಕಾಶನ, ಕೊಪ್ಪಳ

ಗವಿಸಿದ್ಧ ಎನ್. ಬಳ್ಳಾರಿ: ಕಪ್ಪು ಸೂರ್ಯ (೧೯೯೪), ಅಂತರಂಗಧ್ವನಿ ಪ್ರಕಾಶನ, ಕೊಪ್ಪಳ

ಗುರುನಾಥ ರೆಡ್ಡಿ ಕೆರಳ್ಳಿ: ಖಾಲಿ ಕಣ್ಣಿನ ಹುಡುಗ (೧೯೯೦), ಏಕಾಕ್ಷರ ಪ್ರಕಾಶನ, ಸೇಡಂ, ಜಿ.ಗುಲಬರ್ಗಾ

ಗುರುಬಸವಯ್ಯ ಅಮ್ಮಾಪುರ: ಒಂದುಗೂಡು (೧೯೯೨), ಮಹಾಕವಿ ಲಕ್ಷ್ಮೀಶ ವಾಚನ ಸಂಘ, ಸುರಪುರ

ಗುರುಲಿಂಗಯ್ಯ ಹಿರೇಮಠ/ಶಾಂತದೇವಿ ಹಿರೇಮಠ: ನೀನೇ ನಾನು, ನಾನೇ ನೀನು (೧೯೯೭), ಆಲೋಚನ ಪ್ರಕಾಶನ, ಕೊಪ್ಪಳ

ಗುರುಸಿದ್ಧಪ್ಪ ಸೋಮಶೆಟ್ಟಿ: ಚೊಚ್ಚಲು (೧೯೯೧), ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಗೋನಾಳ ಜಿ. ಎಸ್.: ಬಿಂಬ (೧೯೯೫), ವಿಶಾಲ ಪ್ರಕಾಶನ, ಮಾದಿನೂರು

ಗೌಡರ ಜಿ.ಎಸ್.(ಸಂ): ಭಾರತೀಯರು ನಾವು ಭರತ ಮತ್ತು ಭೂಮಿಯ ಸುತರು (೧೯೯೧), ಆದಿಶಕ್ತಿ ಪ್ರಕಾಶನ, ಹಲಗೇರಿ

ಚಂದ್ರಕಾಂತ ಕುಸುನೂರು: ನಂದಿಕೋಲು(೧೯೬೭), ಸತ್ಯಸ್ನೇಹಿ ಪ್ರಕಾಶನ, ರಾಯಚೂರು

ಚೆನ್ನಣ್ಣ ವಾಲೀಕಾರ: ಮರದ ಮೇಲಿನ ಗಾಳಿ (೧೯೬೯), ವ್ಹಿ.ಎಸ್ .ಬಾವಿಕಟ್ಟಿ ಪ್ರಕಾಶನ, ಗುಲಬರ್ಗಾ

ಚೆನ್ನಣ್ಣ ವಾಲೀಕಾರ: ಕರಿತೆಲಿ ಮಾನವನ ಜೀಪದ (೧೯೭೨), ಆಗಂತುಕ ಪ್ರಕಾಶನ, ರಾಯಚೂರು

ಚೆನ್ನಣ್ಣ ವಾಲೀಕಾರ: ಬಂಡೆದ್ದ ದಲಿತರ ಬೀದಿ ಹಾಡುಗಳು (೧೯೮೨), ದರ್ಪಣ ಪ್ರಕಾಶನ, ದೇವಗಾಂವ

ಚೆನ್ನಣ್ಣ ವಾಲೀಕಾರ: ಆಯ್ದ ಕವನಗಳು(೧೯೯೦), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಚೆನ್ನಣ್ಣ ವಾಲೀಕಾರ: ಐದು ಜನಪದ ಸಮಾಜವಾದಿ ಕಾವ್ಯಗಳು (೧೯೯೦), ಇಳಾ ಪ್ರಕಾಶನ, ಬೆಂಗಳೂರು

ಚೆನ್ನಣ್ಣ ವಾಲೀಕಾರ: ವೈರಿಗಳ ಮಧ್ಯ ಎದ್ದ ಕಗ್ಗತ್ತಲೆಯ ಖಂಡದ ಕಾವ್ಯ (೧೯೯೩), ಅರಸಂಬೇಡಕರ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ

ಚೆನ್ನಣ್ಣ ವಾಲೀಕಾರ: ವಾಲೀಕಾರ ಚೆನ್ನಣ್ಣನ ಮೂನ್ನೂರು ಮೂರು ವಚನಗಳು (೧೯೯೩), ಬಸವ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ

ಚೆನ್ನಯ್ಯ ರಾ.ಮ.: ಚೆನ್ನುಡಿ (೧೯೮೬), ಶ್ರೀ ಆರ್ .ಎಂ.ಚೆನ್ನಯ್ಯನವರ ಶಿಷ್ಯ ಬಳಗ, ಕಾರಟಗಿ

ಜಂಬಣ್ಣ ಅಮರಚಿಂತ: ಅಮರಚಿಂತ ಕಾವ್ಯ (೧೯೯೩), ವಿಕಾಸ ವೇದಿಕೆ, ರಾಯಚೂರು

ತರುಣರ ತಂಡ (ಸಂ): ಮೊಗ್ಗಿನ ಮಾಲೆ (೧೯೩೭), ಕಂದಿ ಶ್ರೀನಿವಾಸರಾಯರು, ಹೈದರಾಬಾದ - ದಕ್ಷಿಣ

ತಾಯರಾಜ್ ಮರ್ಚಂಟ್ನಾಳ: ಸಾವು ಮತ್ತು ನಾನು(೧೯೯೪), ದಲಿತ ಇಂಡಿಯಾ ಪ್ರಕಾಶನ, ರಾಯಚೂರು

ತಿಪ್ಪಣ್ಣ ಹೂಗಾರ: ವಚನ-ಲಹರಿ(೧೯೯೨), ರವೀಂದ್ರ ಪ್ರಕಾಶನ, ರಾಯಚೂರು

ದುಂಡರಡ್ಡಿ ಬಿ.ಎಸ್.: ಆಲಮಟ್ಟಿ ಜಂಗಮರು(೧೯೯೪), ಮೀನಾಕ್ಷಿ ದುಂಡರಡ್ಡಿ, ಶಾಡಲಗೇರಿ

ದೇವೇಂದ್ರ ಕುಮಾರ ಹಕಾರಿ: ಆಚೆ ಈಚೆ (೧೯೯೭), ಕನ್ನಡ ಕೋಟೆ ಪ್ರಕಾಶನ, ಸೋಲಾಪುರ

ದೇವೇಂದ್ರ ಕುಮಾರ ಹಕಾರಿ: ಬಿಡುಗಡೆ (೧೯೭೮), ವಿದ್ಯಾವಾಹಿನಿ ಪ್ರಕಾಶನ, ಗದಗ

ದೇಶಾಂಗ ಹುಡಗಿ: ಬದುಕಿನ ಸುತ್ತ (೧೯೮೨), ಖಡ್ಗ ಪತ್ರಿಕೆ ಪ್ರಕಾಶನ, ಬೀದರ

ಧರೆಪ್ಪ ನಿಡೋಣಿ/ನಬಿಲಾಲ ಅಮ್ಮಾಪುರ/ಶ್ರೀಶೈಲ ಕಾಂಬಳ್: ಮುಪ್ಪುರಿ (೧೯೯೨), ಶಾಂತರಸ ಪ್ರಕಾಶನ, ಅಮ್ಮಾಪುರ

ಪಂಚಾಕ್ಷರಿ ಹಿರೇಮಠ: ನೀನು ರುದ್ರನಾಗು (೧೯೬೩), ತಾರಾ ಗ್ರಂಥ ಪ್ರಕಾಶನ, ಧಾರವಾಡ

ಪಂಚಾಕ್ಷರಿ ಹಿರೇಮಠ: ಗಾಳಿಗಂಧ(೧೯೮೪), ತಾರಾ ಗ್ರಂಥ ಪ್ರಕಾಶನ, ಧಾರವಾಡ

ಪಾಟೀಲ ಬಿ.ಸಿ.: ಮೊಗ್ಗುಗಳು (೧೯೯೫), ಹರ್ಷ ಪ್ರಕಾಶನ, ಕೊಪ್ಪಳ

ಪ್ರಭು ಖಾನಾಪುರೆ: ಆಸೆ (೧೯೯೦), ಸಮತಾ ಪ್ರಕಾಶನ, ಸರಸಂಬಾ, ಜಿ.ಗುಲಬರ್ಗಾ

ಪ್ರಭು ಖಾನಾಪುರೆ: ಅಸಮಾಧಾನ(೧೯೮೭), ಸಮತಾ ಪ್ರಕಾಶನ, ಸರಸಂಬಾ, ಜಿ.ಗುಲಬರ್ಗಾ

ಪ್ರಭುದೇವ ಹಾದಿಮನಿ: ಸಾವಿಗಾಗಿ ಬದುಕಿದವರು (೧೯೮೫), ಯುವಲೋಕ ಪ್ರಕಾಶನ, ಕಿನ್ನಾಳ, ತಾ.ಕೊಪ್ಪಳ

ಪ್ರಭುದೇವ ಹಾದಿಮನಿ: ಹೆಸರಿಲ್ಲದವರ ಹಾಡು (೧೯೮೯), ಯುವಲೋಕ ಪ್ರಕಾಶನ, ಹಿರೇಬಗನಾಳ

ಪ್ರಹ್ಲಾದ ಬೆಟಗೇರಿ: ಗುಲಾಬಿ (೧೯೯೦), ಅಂಕುರ ಪ್ರಕಾಶನ, ಬೆಂಗಳೂರು

ಪ್ರಹ್ಲಾದರಾವ್, ಕೆ.ಏಕಬೋಟೆ: ಬಣ್ಣದ ಚೆಕ್ಕು (೧೯೯೨), ಚೆರನೂತನ ಪ್ರಕಾಶನ, ಗೋಗಿ

ಪ್ರೇಮಾ ಸಿರ್ಸೆ: ನೂರೊಂದು ನೆನಪುಗಳು ಎದೆಯಾಳದಲ್ಲಿ (೧೯೮೬), ಆನಂದ ಪ್ರಕಾಶನ, ಬೀದರ್

ಪ್ರೇಮಾ ಸಿರ್ಸೆ: ಚುಕ್ಕಿಗಳು (೧೯೯೦), ಆನಂದ ಪ್ರಕಾಶನ, ಬೀದರ್

ಬರಗೂರು ರಾಮಚಂದ್ರಪ್ಪ(ಸಂ): ಬಂಡಾಯ ಕಾವ್ಯ (೧೯೯೦), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಬಸವರಾಜ್ ಎಮ್.ಹಳ್ಳಿ: ಉದಯರವಿ (೧೯೯೨), ಚೇತನ ಪ್ರಕಾಶನ, ಇಟಗಿ

ಬಸವಪ್ರಭು ಪಾಟೀಲ: ಮಾತಾಡಿ ಹೆಣಗಳೇ (೧೯೯೩), ಕವಿತಾ ಪ್ರಕಾಶನ, ಮಾನ್ವಿ, ಜಿ.ರಾಯಚೂರು

ಬಸವರಾಜ ಶೀಲವಂತರ(ಸಂ): ಬೇಡ ರಾಮರಾಜ್ಯ ಮನುಷ್ಯರಾಜ್ಯ ಸಾಕೆನಗೆ (೧೯೯೧), ಯುದ್ಧಭೂಮಿ ಪ್ರಕಾಶನ, ಭಾಗ್ಯನಗರ

ಬಸವರಾಜ ಸಬರದ: ಹೋರಾಟ (೧೯೭೬), ಯುಗಧ್ವನಿ ಪ್ರಕಾಶನ, ಧಾರವಾಡ

ಬಸವರಾಜ ಸಬರದ: ನನ್ನವರ ಹಾಡು (೧೯೮೦), ಪಲ್ಲವಿ ಪ್ರಕಾಶನ, ಬೀದರ

ಬಸವರಾಜ ಸಬರದ: ನೂರು ಹನಿಗಳು (೧೯೮೮), ಗ್ರಿನೋಬಲ್ಸ್ ಪ್ರಕಾಶನ, ಗುಲಬರ್ಗಾ

ಬಸವರಾಜ ಸಬರದ: ದನಿ ಎತ್ತಿ ಹಾಡೇನ (೧೯೯೦), ಸ್ವಯಂ ಜ್ಯೋತಿ ಪ್ರಕಾಶನ, ಗುಲಬರ್ಗಾ

ಬಸವರಾಜ ಸಬರದ: ಬೆಳದಿಂಗಳು ಬಿಸಿಲಾಯಿತು (೧೯೯೪), ವಿದ್ಯಾನಿಧಿ ಪ್ರಕಾಶನ, ಗದಗ

ಬಸವರಾಜ ಸಬರದ: ಮೂಡಲಕ ಕೆಂಪ ಮೂಡ್ಯಾವ (೧೯೯೪), ಪಲ್ಲವಿ ಪ್ರಕಾಶನ, ಬೀದರ

ಬಸವಲಿಂಗ ಸೊಪ್ಪಿಮಠ: ಬತ್ತದ ನೆನಪಿಗೆ ಬಾಡದ ಕಾವ್ಯ (೧೯೮೩), ಸೌಜನ್ಯ ಪ್ರಕಾಶನ, ಸಿಂದಗಿ

ಬಾದರಾಯಣ: ತಾಯಿ ತುಂಗೆ-ಭದ್ರ (ಚೌಪದಿ ಕಥನ ಕವನ) (೧೯೭೮), ವಿ.ಎಸ್. ಜಹಗೀರ್ ದಾರ್, ಕೂಡ್ಲಿಗಿ

ಬಾರಿಕೇರಿ ಕರಿಯಪ್ಪ: ಬದುಕು- ಬವಣೆ (೧೯೮೩), ಪಲ್ಲವಿ ಪ್ರಕಾಶನ ನಿಲಯ, ಹಿರಿಯೂರು

ಬೋರಾಳಕರ್ ಮ.ಮಾ.: ಕನ್ನಡಿಗನ ಹಾಡು (೧೯೯೨), ಪ್ರಕೃತಿ ಪ್ರಕಾಶನ, ಬೀದರ್

ಭಗತ್‌ರಾಜ ನಿಜಾಮಕರ್: ಇವನೊಬ್ಬ ಬೇರೆ ಹುಟ್ಟಿದ (೧೯೯೨), ಬರಹ ಪ್ರಕಾಶನ, ರಾಯಚೂರು

ಭಗವಂತಪ್ಪ ಬುಳ್ಳಾ: ವ್ಯವಸ್ಥೆ (೧೯೯೧), ಜ್ಯೋತಿಶ್ರೀ ಪ್ರಕಾಶನ, ಗುಲಬರ್ಗಾ

ಭರಮಪ್ಪ ಕಟ್ಟಿಮನಿ: ಅರಳುವ ನವಕುಸುಮಗಳು (೧೯೯೩), ಮಂಜುನಾಥ ಪ್ರಕಾಶನ, ಕೊಪ್ಪಳ

ಭರಮಪ್ಪ ಚಲಗೋಡು: ಕತ್ತಲು ಬೆಳಕು ಮತ್ತು ನಾನು (೧೯೮೯), ಶ್ರೀ ಶಕುಂತಲ ಪ್ರಕಾಶನ, ಕುಕನೂರು

ಮಲ್ಲಿಕಾರ್ಜುನ ಬಿ.ಪಿ.: ಸ್ಮಂತಿಕೆಯಿಲ್ಲದವರು (೧೯೯೧), ಜಯಮಲ್ಲಿಕಾರ್ಜುನ ಪ್ರಕಾಶನ, ಗುಲ್ಬರ್ಗಾ

ಮಲ್ಲಿಕಾರ್ಜುನ ಬಿ.ಪಿ.: ಕುದುರೆಗಳು ಕೇಳಿದವು ಗೀತೋಪದೇಶ, ಜಯಮಲ್ಲಿಕಾರ್ಜುನ ಪ್ರಕಾಶನ, ಗುಲಬರ್ಗಾ

ಮಲ್ಲಿಕಾರ್ಜುನ ಬನ್ನಿ: ಸತ್ಯಪ್ಪನ ಸಾವಿನ ಸುತ್ತ (೧೯೯೩), ಮಲ್ಲಿಕಾರ್ಜುನ ಬನ್ನಿ, ಗೂಳೇದುಗುಡ್ಡ

ಮಲ್ಲಿಕಾರ್ಜುನ ಹಿರೇಮಠ: ಅಕ್ವೇರಿಯಮ್ ಮೀನು (೧೯೭೪), ತಾರಾಗ್ರಂಥ ಪ್ರಕಾಶನ, ಧಾರವಾಡ

ಮಹಾಂತ ಪ್ರಿಯ: ಮಹಾಂತ ಚಿಂತನ (೧೯೭೮), ಚಿತ್ತರಗಿ ಶ್ರೀ ವಿಜಯ ಮಹಾಬಲೇಶ್ವರ, ಇಲಕಲ್

ಮಹಾಂತ ಪ್ರಿಯ: ಮಹಾಂತ ಜೋಳಿಗೆ (೧೯೮೧), ಚಿತ್ತರಗಿ ಶ್ರೀ ವಿಜಯ ಮಹಾಬಲೇಶ್ವರ, ಇಲಕಲ್

ಮಹಾಂತ ಪ್ರಿಯ: ಮಹಾಂತ ಚಿಂತನ (೧೯೮೩), ಚಿತ್ತರಗಿ ಶ್ರೀ ವಿಜಯ ಮಹಾಬಲೇಶ್ವರ, ಇಲಕಲ್

ಮಹಾಂತೇಶ ಮಲ್ಲನಗೌಡರ: ಪರಿವರ್ತನೆ (೧೯೮೯), ಅವಿನಾಶ ಪ್ರಕಾಶನ, ನರೇಗಲ್ಲ- ಮಲ್ಲಾಪುರ

ಮಹಾಂತೇಶ ಮಲ್ಲನಗೌಡರ: ಪರಾಗ (೧೯೯೩), ಮಾನಸ ಪ್ರಕಾಶನ, ನರೇಗಲ್ಲ

ಮಹಾಂತೇಶ ಮಸ್ಕಿ: ವೇದನೆಗಳೊಂದಿಗೆ (೧೯೯೬), ಚೇತನ ಪ್ರಕಾಶನ, ರಾಯಚೂರು

ಮಹಾದೇವಪ್ಪ (ಸಂ.): ಅಪರಿಮಿತ ಕತ್ತಲ್ಲಿನ ವಿಪರೀತದ ಬೆಳಕುಗಳು (೧೯೮೮), ಭಾರತಿ ಪ್ರಕಾಶನ, ಗುಲಬರ್ಗಾ

ಮಲ್ಲಣ್ಣ ರಾಟಿ: ನೆನಪಿನಾಳ (೧೯೯೫), ಪೂರ್ಣಿಮ ಪ್ರಕಾಶನ

ಮುಕ್ತಾಯಕ್ಕ ಎಚ್.ಎಸ್.: ನಾನು ಮತ್ತು ಅವನು (೧೯೮೩), ಪ್ರಶಾಂತ ಪ್ರಕಾಶನ, ರಾಯಚೂರು

ಮುಕ್ತಾಯಕ್ಕ ಎಚ್.ಎಸ್.: ನೀವು ಕಾಣಿರೆ ನೀವು ಕಾಣಿರೆ (೧೯೯೬), ಕನ್ನಡ ಸಂಘ, ಕ್ರೈಸ್ತ ಕಾಲೇಜ್, ಬೆಂಗಳೂರು

ಮುನಿಯಪ್ಪ ಎಚ್.: ಬಾಳಜೋಕಾಲಿ (೧೯೭೩), ಅನಂತ ಪ್ರಕಾಶನ, ಲಿಂಗಸುಗೂರು

ಮುನಿಯಪ್ಪ ಮೇಟಿ: ಉದ್ಘೋಷ (೧೯೮೦), ಮೇಟಿ ಪ್ರಕಾಶನ, ಬೇವಿನಹಾಳ, ಜಿ.ರಾಯಚೂರು

ಮೂರ್ತಿಗೌಡ ಆ.ವಿ.: ಅನುಕಂಪ (೧೯೯೧), ರೇಣುಕಾ ಪ್ರಕಾಶನ, ಹಲಗೇರಿ

ರಮೇಶ ಸೋನಕಾಂಬಳೆ: ಎಲ್ಲರೂ ನಮ್ಮವರೇ (೧೯೯೪), ಗ್ರಿನೋಬಲ್ಸ ಪ್ರಕಾಶನ, ಗುಲ್ಬರ್ಗಾ

ರವೀಂದ್ರ ಕರ್ಜಗಿ/ವಿಠ್ಠಲ ಕುಲಕರ್ಣಿ (ಸಂ.): ಸಮೂಹ (೧೯೭೭), ಆತ್ಮೀಯ ಪ್ರಕಾಶನ, ಕಲಬುರ್ಗಿ

ರಶ್ಮಿ ಟಿ.ಎಸ್.: ಅಂತರಾಳ (೧೯೯೬), ರಶ್ಮಿ ಪ್ರಕಾಶನ, ಬೀದರ್

ರಾಕಿ(ಸಂ): ಮೊದಲ ಮೆಟ್ಟಿಲು (೧೯೮೪), ಶ್ರೀ ಬತ್ತೇರೇಶ ಪ್ರಕಾಶನ, ಕಲಬುರಗಿ

ರಾಘವೇಂದ್ರ ಇಟಗಿ: ಬೆಳಕು ತುಂಬಿದ ಬಲ್ಬು (೧೯೬೮), ಪ್ರಕಾಶ ಪ್ರಕಾಶನ, ರಾಯಚೂರು

ರಾಜು ಕೆ.ಎಸ್.(ಸಂ): ನಂದು ಅನ್ನುದೇನು (೧೯೭೮), ಗುರುಪ್ರಸಾದ್ ಪ್ರಕಾಶನ, ಕಲಬುರಗಿ

ರೇವತಿ ಉಪ್ಪಿನ: ಮೂಡಣ ಕಿರಣ (೧೯೯೩), ಸ್ನೇಹ ಪ್ರಕಾಶನ, ಶಹಾಪೂರ

ಲಕ್ಷ್ಮಣ ಎಂ.: ಭಗ್ನಧ್ವನಿಗಳ ಅಗ್ನಿಲಯ (೧೯೮೬), ಮುಕ್ತಾ ಪ್ರಕಾಶನ, ಮುಕ್ತಾ ವಿಚಾವೇದಿಕೆ, ಗಂಗಾವತಿ

ಲಕ್ಷ್ಮಣ ಅಳವಂಡಿ: ಭಾವ-ಬೃಂದಾವನ (೧೯೭೨), ಕಾವ್ಯಶ್ರೀ ಪ್ರಕಾಶನ, ಅಳವಂಡಿ ಜಿ. ರಾಯಚೂರು.

ಲಲಿತಾನಾಯಕ್ ಬಿ.ಟಿ.: ಬಿದಿರು ಮೆಳೆ ಕಂಟಿಯಲಿ (೧೯೯೩), ಅಂಕಿತ ಪ್ರಕಾಶನ, ಬೆಂಗಳೂರು

ಲಿಂಗಾರೆಡ್ಡಿ ಶೇರಿ: ಕೆಂಪುಚಿತ್ತಾರ (೧೯೮೭), ಶ್ರೀ ಸಸಾ ಪ್ರಕಾಶನ, ಚಾಕನಳ್ಳಿ

ವಾಲಿ ವಿ.ಎಸ್.: ಆಷಾಢಭೂತಿಗಳು (೧೯೮೯), ಕುಮಾರ ಪ್ರಕಾಶನ, ಕರಮುಡಿ

ವಿಕ್ರಮ ವಿಸಾಜಿ: ನೀವೇಕೆ ಕತ್ತಲೆ ಕಡೆ ೯ (೧೯೯೪), ನೆಲದ ನುಡಿ ಪ್ರಕಾಶನ, ಭಾಲ್ಕಿ - ಜಿ. ಬೀದರ

ವಿಜಯಶ್ರೀ ಸಬರದ: ಜ್ವಲಂತ (೧೯೭೯), ಪಲ್ಲವಿ ಪ್ರಕಾಶನ, ಬೀದರ್

ವಿಜಯಶ್ರೀ ಸಬರದ: ಲಕ್ಷ್ಮಣರೇಖೆ ದಾಟಿದವರು (೧೯೯೧), ಪಲ್ಲವಿ ಪ್ರಕಾಶನ, ಬೀದರ್

ವಿಠಪ್ಪ ಗೋರಂಟ್ಲಿ: ಕಪ್ಪೊಡಲ ಕರೆ (೧೯೮೬), ಪ್ರತಿಭಾ ಪ್ರಕಾಶನ, ಕೊಪ್ಪಳ

ವೀರಶೆಟ್ಟಿ ಬಾವುಗೆ: ನೊಂದು ಬೆಂದವರು (೧೯೯೪), ಖಡ್ಗ ಪತ್ರಿಕೆ ಪ್ರಕಾಶನ, ಬೀದರ

ವಿಸಾಜಿ ಜಿ.ವಿ.: ಮುಂಜಾವು (೧೯೭೫), ಗೆಳೆಯರ ಬಳಗ, ಕೋಹಿನೂರು

ವಿವಿಧ ವಿದ್ಯಾರ್ಥಿಗಳು: ಪ್ರತಿಭೆ (೧೯೯೨), ಸಾಂಸ್ಕೃತಿಕ ಚಟುವಟಿಕೆಗಳ ವಿಭಾಗ, ಗಂಗಾವತಿ

ವೆಂಕಟೇಶ ಬಳವಡಿಗಿ: ಹೃದಯ ದೀಪಿಕೆ (೧೯೯೨), ಸೌರಭ ಸಾಹಿತ್ಯ ಪ್ರಕಾಶನ, ಕಲಬುರ್ಗಿ

ವೆಂಕನಗೌಡ ಪಾಟೀಲ: ನಾನಲ್ಲ ಬಡವ (೧೯೯೦), ಗಂಗು ಪ್ರಕಾಶನ, ಸಿಂಧನೂರು

ಶಂಕ್ರಯ್ಯ ಆರ್. ಘಂಟಿ: ಅಪರಬಟ್ಟ ಇವರ್‍ಯಾರು (೧೯೯೩), ಪ್ರಗತಿ ಪ್ರಕಾಶನ, ಗುಲಬರ್ಗಾ

ಶರಣಪ್ಪ ಗುಡಿದಿನ್ನಿ: ಹಂಬಲ (೧೯೮೩), ರಂಗನಾಥ ಪ್ರಕಾಶನ, ದೇವದುರ್ಗ

ಶಾಂತಕುಮಾರ ಪೂಜಾರ ಹಾರೋಗೇರಿ: ತಯಾರಿದ್ದೇನೆ (೧೯೯೨), ಶ್ರೀ ವಾಯ್.ಎನ್.ಗೌಡರ

ಶಾಂತರಸ(ಸಂ): ಮುಗುಳು ತೆರೆ (೧೯೫೭), ಸಂಗಡಿಗರ ಸಮಿತಿ, ರಾಯಚೂರು

ಶಾಂತರಸ(ಸಂ): ಚೆನ್ನಹಿಂದಿನ ಬೆಳಕು (೧೯೭೨), ಸತ್ಯಸ್ನೇಹ ಪ್ರಕಾಶನ, ರಾಯಚೂರು

ಶಾಂತರಸ: ಮಾನಸಗಳ್ಳಿ (೧೯೬೭), ಸತ್ಯಸ್ನೇಹ ಪ್ರಕಾಶನ, ರಾಯಚೂರು

ಶಾಂತರಸ: ಬಯಲು ಸೀಮೆಯ ಬಿಸಿಲು (೧೯೮೫), ಸತ್ಯಸ್ನೇಹ ಪ್ರಕಾಶನ, ರಾಯಚೂರು

ಶಾಮಾಚಾರ್ಯ ಜಿ.: ಕವಲು (೧೯೭೭), ಶಿವಶಕ್ತಿ ಪ್ರಕಾಶನ, ರಾಯಚೂರು

ಶಿರಗೇರಿ ಕೆ.ಎನ್.(ಸಂ): ಭಾವೈಕ್ಯ ಬಿಂಬ (೧೯೯೦), ಉದಯೋನ್ಮುಖ ಯುವ ಬರಹಗಾರರ ಬಳಗ, ಕಲಬುರಗಿ

ಶಿವಕುಮಾರ ಕಟ್ಟೆ: ನೆನಪು (೧೯೯೩), ಖಿಡ್ಕೆ ಪತ್ರಿಕೆ ಪ್ರಕಾಶನ, ಬೀದರ್

ಶಿವಶರಣ ಜಾವಳಿ: ಜಾವಳಿ ಸಮಗ್ರ ಕಾವ್ಯ (೧೯೯೮), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಶೈಲಜಾ ಉಡಚಣ: ಕಾದುನೋಡು (೧೯೭೬), ಚೇತನ ಪ್ರಕಾಶನ, ಗುಲಬರ್ಗಾ

ಶೈಲಜಾ ಉಡಚಣ: ಸ್ವಗತ (೧೯೮೧), ಚಂದ್ರನಾಥ ಪ್ರಕಾಶನ, ಧಾರವಾಡ

ಶೈಲಜಾ ಉಡಚಣ: ಕಪ್ಪು ನೆಲ ಸೊಕ್ಕಿದ ಸೂರ್ಯ (೧೯೮೮), ಚೇತನ ಪ್ರಕಾಶನ, ಗುಲಬರ್ಗಾ

ಶೈಲಜಾ ಉಡಚಣ: ಕೇಳು ಮಗ (೧೯೯೨), ಚೇತನ ಪ್ರಕಾಶನ, ಗುಲಬರ್ಗಾ

ಸತ್ಯಾನಂದ: ತ್ರಿಶೂಲ (೧೯೬೮), ಅನುಭವ ಮಂಟಪ, ರಾಯಚೂರು

ಸರ್ಪಭೂಷಣ ಹಿರೇಮಠ: ಎಳ್ಳುಬೆಲ್ಲದ ಗೆಳತಿ (೧೯೯೫), ಮಾತೃ ಗಂಗಾ ಪ್ರಕಾಶನ, ಹೊಸಪೇಟೆ

ಸರಸ್ವತಿ ಆರ್. ಕಳಸದ(ಸಂ): ಮಹಾಂತ ಮಂದಾರ, ಕಳಸದ ಪ್ರಕಾಶನ, ಇಲಕಲ್ಲ

ಸರಸ್ವತಿ ಚಿಮ್ಮಲಗಿ ಪೂಜಾರ: ನಾವು ನಿಮ್ಮವರೇ ಸ್ವಾಮಿ (೧೯೭೭), ಶಿವಗಂಗಾ ಪ್ರಕಾಶನ, ಗುಲಬರ್ಗಾ

ಸರಸ್ವತಿ ಚಿಮ್ಮಲಗಿ ಪೂಜಾರ: ಕೋಡಿಲ್ಲದ ಕೊಡುಗ (೧೯೯೦), ಶಿವಗಂಗಾ ಪ್ರಕಾಶನ, ಗುಲಬರ್ಗಾ

ಸರಸ್ವತಿ ಚಿಮ್ಮಲಗಿ ಪೂಜಾರ: ಎಡಬಿಡಂಗಿ ದೇವನ ವಚನಗಳು (೧೯೯೬), ಶಿವಗಂಗಾ ಪ್ರಕಾಶನ, ಗುಲಬರ್ಗಾ

ಸ್ವಾಮಿ ಎಸ್.ಜಿ.: ಕಿಚ್ಚಿಲ್ಲದ ಬೇಗೆ (೧೯೯೩), ಅನನ್ಯ ಪ್ರಕಾಶನ, ಧಾರವಾಡ

ಸಿದ್ಧಯ್ಯ ಪುರಾಣಿಕ: ಕರುಣಾ ಶ್ರಾವಣ (೧೯೫೫), ಸಹಜೀವನ ಪ್ರಕಾಶನ-ಕಾಚೀಗೂಡಾ, ಹೈದರಾಬಾದ - ದಕ್ಷಿಣ

ಸಿದ್ಧಯ್ಯ ಪುರಾಣಿಕ: ಕಲ್ಲೋಲ ಮಾಲೆ (೧೯೬೮), ತಾರಾಗ್ರಂಥ ಪ್ರಕಾಶನ, ಧಾರವಾಡ

ಸಿದ್ಧಯ್ಯ ಪುರಾಣಿಕ: ಮೊದಲು ಮಾನವನಾಗು (೧೯೬೯), ತಾರಾಗ್ರಂಥ ಪ್ರಕಾಶನ, ಧಾರವಾಡ

ಸಿದ್ಧಯ್ಯ ಪುರಾಣಿಕ: ವಚನೋದ್ಯಾನ (೧೯೭೭), ಶ್ರೀ ಗಿರಿ ಪ್ರಕಾಶನ, ಬೆಂಗಳೂರು

ಸಿದ್ಧಯ್ಯ ಪುರಾಣಿಕ: ಹಾಲ್ದೆನೆ (೧೯೯೦), ಅನುಪಮ ಪ್ರಕಾಶನ, ಅಥಣಿ

ಸಿದ್ಧಯ್ಯ ಪುರಾಣಿಕ: ಮರುಳಸಿದ್ಧನ ಕಂತೆ (೧೯೯೧), ಶ್ರೀ ಗಿರಿ ಪ್ರಕಾಶನ, ಬೆಂಗಳೂರು

ಸಿದ್ಧಯ್ಯ ಪುರಾಣಿಕ: ವಚನ ರಾಮ (೧೯೯೨), ಶ್ರೀ ಅನ್ನದಾನ ವಿಜಯ ವಿದ್ಯಾಪ್ರಸಾರ ಸಮಿತಿ-ನರೇಗಲ್ಲು

ಸಿದ್ಧರಾಮ ಉಪ್ಪಿನ/ರೇವತಿ ಸಿದ್ಧರಾಮ: ಎರಡು-ಆತ್ಮಬಂಧು (೧೯೭೫), ಬಸವ ಸಮಿತಿ, ಸಿಂಧಗಿ

ಸಿದ್ಧರಾಮ ಹಿರೇಮಠ: ಬಾನುಸುರಿದ ಮಾತು (೧೯೮೯), ಆಲೋಚನ ಪ್ರಕಾಶನ, ಕೊಪ್ಪಳ

ಸಿದ್ಧರಾಮ ಹಿರೇಮಠ: ನನ್ನೊಳಗಿನ ನಾನು (೧೯೯೬), ಸಂಕ್ರಮಣ ಪ್ರಕಾಶನ, ಧಾರವಾಡ

ಸಿದ್ಧರಾಮ ಹೊನ್ಕಲ್: ಅಂತರಂಗದ ಹನಿಗಳು (೧೯೯೦), ಜಾಗೃತಿ ಪ್ರಕಾಶನ, ಶಹಾಪುರ

ಸೂಗಯ್ಯ ಹಿರೇಮಠ: ಉಂಡು ಮಲಗಿದವರು (೧೯೮೪), ಧ್ವನಿಪ್ರಕಾಶನ-ಚಿಂಚೋಳಿ

ಸೂಗಯ್ಯ ಹಿರೇಮಠ: ನೀರು ನೆಲೆ (೧೯೯೨), ನಟರಾಜ ಪ್ರಕಾಶನ-ಸಿಂಗನಹಳ್ಳಿ, ಜಿ.ಗುಲಬರ್ಗಾ

ಸೋಲಾಪುರೆ ಬಿ.ಎನ್.: ಮನದಳಲು (೧೯೯೩), ಖಿಡ್ಕೆಪತ್ರಿಕೆ ಪ್ರಕಾಶನ, ಬೀದರ

ಹನುಮಂತಚಾರ್ಯ ಉಪಾಧ್ಯಾಯ: ಶುಭೋದಯ (೧೯೭೮), ಸಾಧನ ಪ್ರಕಾಶನ, ರಾಯಚೂರು

ಹೆಬ್ಬಾಳೆ ಜಗನ್ನಾಥ ಎಸ್.: ಕೆಂಪು ಮಣ್ಣಿನ ವಾಸನೆ (೧೯೯೦), ಅಕ್ಕಮಹಾದೇವಿ ಪ್ರಕಾಶನ, ಬೀದರ

ಅನುಬಂಧ ೩

ಆಕರ ಗ್ರಂಥಗಳು

ಅಶೋಕ ಟಿ.ಪಿ.: ವಾಸ್ತವತಾವಾದ (೧೯೮೯), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕಪಟರಾಳ್ ಕೃಷ್ಣರಾವ್: ಕರ್ನಾಟಕ ಸಂಸ್ಕೃತಿಯ ಸಂಶೋಧನೆ (೧೯೭೦), ಉಷಾ ಸಾಹಿತ್ಯ ಮಾಲೆ, ಮೈಸೂರು

ಕೃಷ್ಣಕುಮಾರ್ ಸಿ.ಪಿ.: ಸಾಹಿತ್ಯ ವಿಮರ್ಶೆ-೧೯೮೦ (೧೯೮೩), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಗಿರಿಡ್ಡಿ ಗೋವಿಂದರಾಜ: ಸಾತತ್ಯ (೧೯೮೦), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

ಚಂದ್ರಶೇಖರ ಎಸ್. (ಸಂ.): ಕರ್ನಾಟಕ ಚರಿತ್ರೆ (೧೯೯೮), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜವರಯ್ಯ ಮ.ನ.: ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಅಧ್ಯಯನ (೧೯೯೪), ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು

ಜಾಗಿರದಾರ ಆರ್.ಜಿ./ ವಿಠ್ಠಲರಾವ್ ಲಿಂಗಸುಗೂರು: ಹೈದರಾಬಾದ್ ಕರ್ನಾಟಕ (೧೯೪೧), ಪ್ರೇಮನಗರ, ಹೈದರಾಬಾದ

ದೇವೇಂದ್ರ ಕುಮಾರ್ ಹಕಾರಿ: ಸಮ್ಮೇಳನಾಧ್ಯಕ್ಷರ ಭಾಷಣ (೧೯೯೪), ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು

ಧ್ರುವನಾರಾಯಣ (ಸಂ): ಸ್ವಾತಂತ್ರ್ಯಾಂದೋಳನ ರಾಯಚೂರು ಜಿಲ್ಲೆ (೧೯೭೧), ಕರ್ನಾಟಕ ಸಂಘ, ರಾಯಚೂರು

ನರಹಳ್ಳಿ ಬಾಲಸುಬ್ರಹ್ಮಣ್ಯ: ನವ್ಯತೆ (೧೯೯೦), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ನಾಗಭೂಷಣ ಸ್ವಾಮಿ ಓ.ಎಲ್.: ವಿಮರ್ಶೆಯ ಪರಿಭಾಷೆ (೧೯೮೩), ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ

ಪಾಟೀಲ್ ಎಚ್.ಎಸ್. / ಅಲ್ಲಮಪ್ರಭು ಬೆಟ್ಟದೂರು: ತಿರುಳ್ಗನ್ನಡ (೧೯೯೩), ೬೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ

ಪುರುಷೋತ್ತಮ ಬಿಳಿಮಲೆ: ಬಂಡಾಯ-ದಲಿತ ಸಾಹಿತ್ಯ (೧೯೯೦), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಬಸವರಾಜ ಸಬರದ: ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು (೧೯೯೨), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಬಸವರಾಜ ಸಬರದ: ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು (೧೯೯೬), ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು

ಬಸವರಾಜ ಸಬರದ: ಗುಲ್ಬರ್ಗಾ ಜಿಲ್ಲೆಯ ಅನುಭಾವಿ ಕವಿಗಳು (೧೯೯೬), ಕನ್ನಡ ವಿಶ್ವವಿದ್ಯಾಲಯ,ಹಂಪಿ

ಬರಗೂರು ರಾಮಚಂದ್ರಪ್ಪ: ಬಂಡಾಯ ಸಾಹಿತ್ಯ ಮೀಮಾಂಸೆ (೧೯೯೧), ಅನ್ವೇಷಣೆ ಪ್ರಕಾಶನ, ಬೆಂಗಳೂರು

ಭಾಲಚಂದ್ರ ಜಯಶೆಟ್ಟಿ: ಸಮ್ಮೇಳನಾಧ್ಯಕ್ಷರ ಭಾಷಣ (೧೯೯೮), ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಭೀಮಸೇನರಾವ್ ಡಿ.ಕೆ.: ಸಾಹಿತ್ಯಾವಲೋಕನ (೧೯೭೦), ಉಷಾ ಸಾಹಿತ್ಯ ಮಾಲೆ, ಮೈಸೂರು

ಮಹಾಬಲೇಶ್ವರಪ್ಪ ಬಿ.ಸಿ.: ಹೈದರಾಬಾದ ಕರ್ನಾಟಕ ಸ್ವಾತಂತ್ರ್ಯ ಚಳುವಳಿ (೧೯೯೪), ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ

ಮುಕ್ತಾಯಕ್ಕ ಎಚ್.ಎಸ್.: ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ (೧೯೯೭), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮುಗಳಿ ರಂ.ಶ್ರೀ.: ಕನ್ನಡ ಸಾಹಿತ್ಯ ಚರಿತ್ರೆ (೧೯೯೩), ಗೀತಾ ಬುಕ್ ಹೌಸ್, ಬೆಂಗಳೂರು

ಯರವಿನ ತಲೆಮಠ ಸಿ.ಆರ್.: ಪಾಶ್ಚಾತ್ಯ ಸಾಹಿತ್ಯ ವಾದಗಳು (೧೯೮೨), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ರಹಮತ್ ತರೀಕೆರೆ: ಪ್ರತಿ ಸಂಸ್ಕೃತಿ (೧೯೯೩), ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು

ರಾಘವೇಂದ್ರರಾವ್ ಎಚ್.ಎಸ್.: ನಿಲುವು (೧೯೮೯), ಕನ್ನಡ ಸಂಘ, ಕ್ರೈಸ್ತ ಕಾಲೇಜ್, ಬೆಂಗಳೂರು

ರಾಘವೇಂದ್ರರಾವ್ ಎಚ್.ಎಸ್.: ಹಾಡೆ ಹಾದಿಯ ತೋರಿತು (೧೯೯೫), ಕನ್ನಡ ಸಂಘ, ಕ್ರೈಸ್ತ ಕಾಲೇಜ್, ಬೆಂಗಳೂರು

ರಾಜೇಂದ್ರ ಚೆನ್ನಿ: ಸಾಹಿತ್ಯ ವಿಮರ್ಶೆ-೧೯೮೮ (೧೯೮೯), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾನಡೆ ಆರ್.ಡಿ.: ಕನ್ನಡ ಸಂತರ ಪರಮಾರ್ಥ ಪಥ (ಅನು: ಎಂ.ಎಸ್. ದೇಶಪಾಂಡೆ) (೧೯೭೬), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ರಾಮಣ್ಣ ಹವಳೆ: ಸ್ವಾತಂತ್ರ್ಯ ಸೇನಾನಿ ಪುಂಡಲೀಕಪ್ಪ ಜ್ಞಾನಮೋಠೆ (೧೯೯೬), ಚೇತನ ಪ್ರಕಾಶನ, ರಾಯಚೂರು

ರಾಮಣ್ಣ ಹವಳೆ: ಸ್ವಾತಂತ್ರ್ಯ ಹೋರಾಟದಲ್ಲಿ ಗಜೇಂದ್ರಗಡ ಶಿಬಿರ (೧೯೯೬). ಚೇತನ ಪ್ರಕಾಶನ, ರಾಯಚೂರು

ರಾಮಾನುಜಂ ಪಿ.ಎಸ್.(ಸಂ.) ಕರ್ನಾಟಕದ ಪರಂಪರೆ (೧೯೯೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ವಾಲಿ ಜಿ.ಆರ್./ಖುದ್ಕೆ ಎಚ್.ಸಿ.: ಚೆಂಚೆಳಕು (೧೯೯೪), ೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಭಾಲ್ಕಿ

ವೀರಣ್ಣ ದಂಡೆ (ಸಂ.) ಕವಿಮಾರ್ಗ (೧೯೯೩) ಡಿಸೆಂಬರ್ -ಸಂಚಿಕೆ-೩-೪, ಗುಲಬರ್ಗಾ

ವೀರಣ್ಣ ದಂಡೆ (ಸಂ.) ಕವಿಮಾರ್ಗ (೧೯೯೪) ಮಾರ್ಚ್-ಸಂಚಿಕೆ-೧, ಗುಲಬರ್ಗಾ

ಶಾಂತರಸ, ಅಮರಾನಂದ ಬೆಟ್ಟದೂರು(ಸಂ): ಕಲ್ಯಾಣ ದೀಪ(೧೯೬೪), ಅನುಭವ ಮಂಟಪ, ರಾಯಚೂರು

ಶಾಂತರಸ(ಸಂ), ಎಡೆದೊರೆ ನಾಡಿನ ಅನುಭಾವಿ ಕವಿಗಳು(೧೯೭೩), ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ

ಶಾಂತರಸ: ಸಮ್ಮೇಳನಾಧ್ಯಕ್ಷರ ಭಾಷಣ (೧೯೯೨), ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು

ಶಾಶ್ವತಸ್ವಾಮಿ ಮುಕ್ಕುಂದಿಮಠ: ಹೊನ್ನಸಿರಿ (೧೯೯೪), ೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಸಿಂಧನೂರು

ಶಿವರುದ್ರಪ್ಪ ಜಿ.ಎಸ್. (ಸಂ.): ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (೧೯೮೨), ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ

ಶಿವರುದ್ರಪ್ಪ ಜಿ.ಎಸ್. (ಸಂ.), ಕನ್ನಡ ಸಾಹಿತ್ಯ ಸಂದರ್ಭ (೧೯೯೦), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಶಿವರುದ್ರಪ್ಪ ಜಿ.ಎಸ್. (ಸಂ.): ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ (೧೯೯೮), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸ್ವಾಮಿ ರಮಾನಂದ ತೀರ್ಥ: ಹೋರಾಟದ ನೆನಪುಗಳು (೧೯೭೨), (ಅನು:ಸೂರ್ಯನಾಥ ಕಾಮತ್), ಗೀತಾಬುಕ್ ಹೌಸ್, ಮೈಸೂರು